ಶ್ರೀಮದಮೃತಚಂದ್ರಾಚಾರ್ಯದೇವ ವಿರಚಿತ

# ಪುರುಷಾರ್ಥಸಿದ್ಧ್ಯುಪಾಯ

ಪಂ. ಟೋಡರಮಲ್ಲರ ಭಾಷಾ ಟೀಕೆಯೊಡನೆ


ಅನುವಾದಕರು :

**ಶ್ರೀ ಎಂ. ಬಿ. ಪಾಟೀಲ,**

'ಶುದ್ಧಾತ್ಮ ಸದನ'

ಶಹಾಪುರ - ಬೆಳಗಾವಿ.



ಪ್ರಕಾಶಕರು :

**ದಿಗಂಬರ ಜೈನ ಟ್ರಸ್ಟ - ಅಧ್ಯಾತ್ಮಪ್ರಕಾಶನ ಸಂಸ್ಥೆ,**

ಬೆಂಗಳೂರು.

ಮೊದಲನೆಯ ಆವೃತ್ತಿ : ೧೦೦೦ ಪ್ರತಿಗಳು
೫ ಮೇ ೧೯೯೬.
ಬೆಂಗಳೂರು ಶಿಬಿರದ ಸಂದರ್ಭ
ಎರಡನೆಯ ಆವೃತ್ತಿ ಃ ೧೦೦೦ ಪ್ರತಿಗಳು
೨ ಅಕ್ಟೋಬರ ೨೦೦೮
ಬೆಂಗಳೂರು ಶಿಬಿರದ ಸಂದರ್ಭ
ಮೂರನೆಯ ಆವೃತ್ತಿ ಃ ೫೦೦ ಪ್ರತಿಗಳು
೨೮ ಅಗಷ್ಟ - ೨೦೨೨, ಭಾದ್ರಪದ ಶುದ್ಧ ಪ್ರತಿಪದೆಯಂದು

ಬೆಲೆ : ಐವತ್ತು ರೂಪಾಯಿ ೫೦/-
(ಮೂಲ ಬೆಲೆ : ೧೪೩-೦೦ ರೂ.)

ದೊರಕುವ ಸ್ಥಳ :
೦ ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ್
141, ರಂಗಸ್ವಾಮಿ ಗುಡಿ ಬೀದಿ,
ಬೆಂಗಳೂರು - 560 053.

ಶ್ರುತ ಭಂಡಾರ,
36, ಶುದ್ಧಾತ್ಮ ಸದನ,
ಹುಳಬತ್ತಿ ಕಾಲೋನಿ, ಶಹಾಪುರ, ಬೆಳಗಾವಿ.
ದೂರವಾಣಿ ಃ 2466991

ಮುದ್ರಕರು :
ಇಮೇಜ ಪ್ರಿಂಟ್ಸ,
2393, ಕಚೇರಿ ಗಲ್ಲಿ, ಶಹಾಪೂರ, ಬೆಳಗಾವಿ.
ಫೋನ : 9341103880



ದೇವಾಧಿದೇವ ಶ್ರೀ ಋಷಭದೇವ ಜಿನಬಿಂಬ, ಬೆಂಗಳೂರು



ಪರಮಪೂಜ್ಯ ಗುರುದೇವ ಶ್ರೀ ಕಾನಜೀ ಸ್ವಾಮಿಗಳು

# ಪ್ರಕಾಶಕೀಯ

ಕಲಿಕಾಲ ಸರ್ವಜ್ಞರೆನಿಸಿದ ಭ. ಕುಂದಕುಂದಾಚಾರ್ಯದೇವ ವಿರಚಿತ 'ಪ್ರಾಭೃತತ್ರಯ' ವೆಂದು ಕರೆಯಿಸಿಕೊಳ್ಳುವ ಸಮಯಸಾರ, ಪ್ರವಚನಸಾರ, ಪಂಚಾಸ್ತಿಕಾಯ ಸಂಗ್ರಹದಂಥ ಉತ್ಕೃಷ್ಟ ಗ್ರಂಥಗಳ ಮೇಲೆ ಪ್ರಗಲ್ಭ ಟೀಕೆ ರಚಿಸಿದಂಥ ಅಧ್ಯಾತ್ಮ ಜಗತ್ತಿಗೇ ಹೆಮ್ಮೆಯ ಆಚಾರ್ಯರಾದ ಶ್ರೀ ಅಮೃತಚಂದ್ರದೇವರ ಸ್ವತಂತ್ರ ಕೃತಿರತ್ನವಾದ ಈ 'ಪುರುಷಾರ್ಥ ಸಿದ್ಧ್ಯುಪಾಯ' ಅಥವಾ 'ಜಿನ ಪ್ರವಚನರಹಸ್ಯಕೋಷ'ವೆಂಬ ಗ್ರಂಥವನ್ನು ಪಂಡಿತ ಟೋಡರಮಲ್ಲರ ಭಾಷೆ ಟೀಕೆಯೊಡನೆ ಈ ಮೊದಲು ಎರಡು ಬಾರಿ ಕನ್ನಡದಲ್ಲಿ ಪ್ರಕಾಶಿತಗೊಳಿಸಿದ್ದೆವು. ಈ ಕೃತಿಯಲ್ಲಿ ಶ್ರಾವಕಾಚಾರದ ಪ್ರತಿಪಾದನೆಯನ್ನು ಅಧ್ಯಾತ್ಮಿಕ ದೃಷ್ಟಿಕೋನದಿಂದ ಮಾಡಿರುವುದು ವೈಶಿಷ್ಟವಿದೆ. ಶ್ರಾವಕ ಧರ್ಮದ ಪ್ರಾರಂಭವೇ ಸಮ್ಯಗ್ದರ್ಶನ, ಸಮ್ಯಗ್ಜ್ಞಾನ ಮತ್ತು ಆಂಶಿಕ ಸಮ್ಯಕ್ಚಾರಿತ್ರದಿಂದ ಆರಂಭವಾಗುತ್ತದೆಯೆಂದು ಹೇಳಿ ಶ್ರಾವಕಧರ್ಮದ ಮಹತೋ ಮಹಿಮೆಯನ್ನು ಎತ್ತಿ ಹಿಡಿದಿದ್ದಾರೆ. ಅಲ್ಲದೆ ಪ್ರತ್ಯಕ್ಷ ಮೋಕ್ಷ ಸ್ವರೂಪವಿರುವಂಥ ಮುನಿಧರ್ಮದ ಪರಮ ಪವಿತ್ರತೆಯೆಂಥದಿರಬೇಕೆಂಬುದರ ಸಾಮಾನ್ಯ ಕಲ್ಪನೆಯು ಎಲ್ಲರಿಗೂ ಬರುವಂತೆ ತಿಳಿಸಿಕೊಟ್ಟಿದ್ದಾರೆ. ವಸ್ತುಧರ್ಮದ ಭೌಮ ಭೂಮತೆಯನ್ನು ಅಹಿಂಸಾ ಧರ್ಮದ ಅದ್ಭುತ ಸಾಮರ್ಥ್ಯವನ್ನು ಲೋಕದ ಜನರಿಗೆ ಪರಿಚಯ ಮಾಡಿಕೊಟ್ಟು ಎಲ್ಲರನ್ನು ಆ ಧರ್ಮ ಮಾರ್ಗದತ್ತ ಆಕರ್ಷಿಸಿದ್ದಾರೆ ! ಕೊನೆಗೆ ಸಕಲ ಚಾರಿತ್ರದ, ಮುನಿಧರ್ಮದ ಪ್ರಸ್ತಾಪನೆಯನ್ನೂ ಮಾಡಿದ್ದಾರೆ.

ಅತ್ಯಂತ ಅಪರೂಪವಾದ ಈ ಕೃತಿರತ್ನದ ಕನ್ನಡ ಅನುವಾದವನ್ನು ಜಿನವಾಣಿ ಮಾತೆಯ ಮೆಚ್ಚಿನ ಪುತ್ರರೆನಿಸಿದ ಶ್ರೀ ಎಂ. ಬಿ. ಪಾಟೀಲರು ಮೂಲ ಕೃತಿಯ ಭಾವಕ್ಕೆ ಎಳ್ಳಷ್ಟೂ ಬಾಧೆ ಬಾರದಂತೆ ತುಂಬ ಸಮರ್ಪಕವಾಗಿ ಮಾಡಿ ಕನ್ನಡಿಗರ ಮೇಲೆ ಮರೆಯಲಾಗದ ಉಪಕಾರ ಮಾಡಿದ್ದಾರೆ. ಕೇವಲ ಶಬ್ದಾನುವಾದ ಮಾಡದೆ ಅವರು ಭಾವದ ಅನುವಾದ ಮಾಡಿರುವುದರಿಂದ ಅವರ ಯಾವುದೇ ಅನುವಾದಿತ ಕೃತಿಯು ಪಾಠಕರಿಗೆ ಸುಲಭವಾಗಿ ಮೂಲ ಕನ್ನಡ ಭಾಷೆಯ ಕೃತಿಯಂತೆಯೇ ತಿಳಿದು ಬರುತ್ತದೆ. ಅಂತೆಯೆ ಅವರ ಅನುವಾದಿತ ಕೃತಿಯಿರಲಿ ಅಥವಾ ಅವರಿಂದ ಸ್ವರಚಿತ ಕೃತಿಯಿರಲಿ ಅವು ಪ್ರಕಟವಾಗುತ್ತಿದ್ದಂತೆ ಕೆಲವೇ ದಿವಸಗಳಲ್ಲಿ ಪ್ರತಿಗಳು ಮುಗಿದು ಹೋಗಿ ಬಿಡುತ್ತವೆ. ಈ ಪ್ರಸ್ತುತ ಕೃತಿಯ ಪ್ರತಿಗಳು ತೀರಿಹೋಗಿ ವರುಷಗಳೇ ಕಳೆದು ಹೋದರೂ ಹೊಸ ಹೊಸ ಕೃತಿಗಳ ಪ್ರಕಾಶನದ ಮಧ್ಯದಲ್ಲಿ ಎರಡನೆಯ ಆವೃತ್ತಿಯನ್ನು ಹೊರ ತರುವ ಕಾರ್ಯವು ವಿಲಂಬಿತವಾಗಿದೆ ಕಳೆದ ವರ್ಷ ಪ್ರತಿಗಳು ತೀರಿಹೋದ ಕೃತಿಗಳ ಸಂಖ್ಯೆಯು ಹದಿನೆಂಟು ಎಂದು ಕೇಳಿ ನಮಗೆಲ್ಲ ಅಚ್ಚರಿಯಾದಂತೆ ಶ್ರೀ ಪಾಟೀಲರಿಗೂ ಆಶ್ಚರ್ಯವೆನಿಸಿದುದು ನಿಜ ಆದರೆ ಜತೆಯಲ್ಲೆ ಕನ್ನಡಿಗರಲ್ಲಿ ಸ್ವಾಧ್ಯಾಯದ ಅಭಿರುಚಿಯು ಬೆಳೆಯುತ್ತಿರುವ ವಿಷಯದ ಕುರಿತು ಸಂತಸವಾಯಿತು ಮತ್ತು ಕ್ರಮದಿಂದ ಎಲ್ಲ ಕೃತಿಗಳ ಪುನಃಮುದ್ರಣವನ್ನು ಮಾಡಿಸುವ ಕಾರ್ಯಕ್ಕೆ ಸಹಕಾರ ನೀಡಲು ಸಮ್ಮತಿಸಿದರು. ಆದರೆ ದುರ್ವಿಧಿಯು ಅವರನ್ನು ನಮ್ಮಿಂದ ಅಗಲಿಸಿ ನಮ್ಮ ಉತ್ಸಾಹಕ್ಕೆ ಕುಂದು ತಂದಿತು ! ಆದಾಗ್ಯೂ ನಮ್ಮ ಒಂದು ಆಶಾಕಿರಣವು ಅವರ ಸಂಸ್ಕಾರದಿಂದಲೇ ಪೋಷಿತವಾದ ಧವಲಶ್ರೀ ಅವರ ಕಡೆಗೆ ಹರಿಯಿತು. ಮತ್ತು ಪ್ರಕಾಶನ ಕಾರ್ಯವು ಸ್ಥಗಿತಗೊಳ್ಳದೆ ನಡೆಯತೊಡಗಿತು.

ಈಗ ಮೂರನೆಯ ಆವೃತ್ತಿಯ ಪ್ರಕಾಶನವನ್ನು ಚಳ್ಳಕೆರೆ ಸ್ವಾಧ್ಯಾಯ ಬಳಗ ೨೦,೦೦೦, ಶ್ರೀಮತಿ ಶಾಂತಾ ನಾಗರತ್ನ ರಾಜು ೧೦,೦೦೦, ಗುಪ್ತದಾನ ೧೦,೦೦೦, ಜನ್ಮದಾತೆ ಸ್ವ. ದೇವಕ್ಕಾ ಪದ್ಮನ್ನವರ ಇವರ ಸ್ಮರಣಾರ್ಥ ಸೌ. ಶೀಲಾ ಧರ್ಮರಾಜ ಮುದಕನ್ನವರ ೧೦,೦೦೦, ಸೌ. ಪ್ರಮಿಳಾ ಅಪ್ಪಾಸಾಹೇಬ ಕಬ್ಬೂರ, ನಂದಗಡ ೫,೦೦೦, ಸಂತೋಷ ಮಹಾವೀರ ಘೋಂಗಡಿ, ಹುಬ್ಬಳ್ಳಿ ೫,೦೦೦ ಮತ್ತು ಓರ್ವ ಸರಳ ಜೀವಿಯಿಂದ ಗುಪ್ತದಾನ ೫,೦೦೦, ಹೀಗೆ ಪ್ರಾಪ್ತ ಧನ ಸಹಾಯದೊಂದಿಗೆ ಮಾಡಲಾಗಿದೆ. ಇವರೆಲ್ಲರೂ ಸಂಸ್ಥೆಯ ಮೂಲಕ ಅಭಿನಂದನೆಗೆ ಪಾತ್ರರಾಗಿದ್ದಾರೆ. ಅವರು ಇಂಥ ಜಿನವಾಣಿಯ ಆಶ್ರಯದಿಂದ ಪರ್ಯಾಯ ಬುದ್ಧಿಯನ್ನು ಬೇಗನೆ ತೊರೆಯುವಂತಾಗಲಿ ಮತ್ತು ಕೊನೆಯದಾಗಿ ಈ ಕೃತಿಯನ್ನು ಅಂದವಾಗಿ ಮುದ್ರಿಸಿಕೊಟ್ಟ ಇಮೇಜ ಪ್ರಿಂಟ್ಸ್‌ನ ಮಾಲೀಕರಾದ ಶ್ರೀ ಅಜಿತ ಪಾಟೀಲ ಅವರಿಗೂ ಹಾಗೂ ಅಲ್ಲಿನ ಕುಶಲ ಕರ್ಮಚಾರಿಗಳಿಗೆ ಅನೇಕಾನೇಕ ಧನ್ಯವಾದಗಳು.

**ಶ್ರೀ ಸಿ. ಬಿ. ಭಂಡಾರಿ**

**20-08-2022** ಅಧ್ಯಕ್ಷರು, ದಿಗಂಬರ ಜೈನ ಟ್ರಸ್ಟ, ಬೆಂಗಳೂರು.

# ಪ್ರಸ್ತಾವನೆ

ಜೈನ ದರ್ಶನದ ಮೂಲಭೂತ ಸಿದ್ಧಾಂತಗಳನ್ನು ಸುರಕ್ಷಿತವಾಗಿ ಇಡುವಲ್ಲಿ ಮತ್ತು ಸಂರಕ್ಷಿಸಿಕೊಂಡು ಬರುವಲ್ಲಿ ನಮ್ಮ ಸರ್ವಜ್ಞ ಪ್ರಭುಗಳ ಸರಿಸಮಾನವಾಗಿಯೇ ಕಾರ್ಯ ಮಾಡಿ 'ಕಲಿಕಾಲ ಸರ್ವಜ್ಞ'ರೆಂಬ ಉಪಾಧಿಗೆ ಪ್ರಾಪ್ತರಾದ ಭಗವಾನ ಕುಂದಕುಂದಾಚಾರ್ಯದೇವರ ನಂತರ ಅಧ್ಯಾತ್ಮಿಕ ಕ್ಷೇತ್ರದಲ್ಲಿ ಎರಡನೆಯ ಸ್ಥಾನದಲ್ಲಿ ಬರುವಂಥವರೆಂದರೆ ಆಚಾರ್ಯ ಅಮೃತಚಂದ್ರದೇವರಿದ್ದಾರೆ. ದೈವ ದುರ್ವಿಪಾಕದಿಂದ ಈ ಮಹಾನ ಸಂತರ ಜನ್ಮವಾಗದೇ ಹೋಗಿದ್ದರೆ ಭ. ಕುಂದಕುಂದಾಚಾರ್ಯದೇವರ ಸಮಯಸಾರ ಮೊದಲಾದ ಪರಮಾಗಮಗಳು ಇಷ್ಟೊಂದು ಪ್ರಸಿದ್ಧಿಗೆ ಬರುತ್ತಿದ್ದವೋ ಅಥವಾ ಇಲ್ಲವೋ ಎಂಬುದನ್ನು ಹೇಳುವುದು ತುಂಬ ಕಠಿಣತರವಾದ ಮಾತಾಗಿದೆ.

ಭ. ಕುಂದಕುಂದಾಚಾರ್ಯದೇವರು ಈ ನಿಕೃಷ್ಟವಾದ ಪಂಚಮಕಾಲದಲ್ಲಿ ಸರ್ವಜ್ಞ ಭಗವಂತರ ಸಮಾನವಾದ ಕಾರ್ಯ ಮಾಡಿ ಕಲಿಕಾಲ ಸರ್ವಜ್ಞರೆನಿಸಿಕೊಂಡರೆ ಆಚಾರ್ಯ ಅಮೃತಚಂದ್ರದೇವರು ಆ ಕುಂದಕುಂದದೇವರ ಸಮಯಸಾರ, ಪ್ರವಚನಸಾರ ಮತ್ತು ಪಂಚಾಸ್ತಿಕಾಯ ಸಂಗ್ರಹಗಳಂಥ ಉದ್ಗ್ರಂಥಗಳ ಮೇಲೆ ಅದ್ಭುತ ಟೀಕೆಗಳನ್ನು ರಚಿಸಿ ಎಂದರೆ ಅದೇನು ಭ. ಕುಂದಕುಂದಾಚಾರ್ಯದೇವರ ಹೃದಯದಲ್ಲಿ ಕುಳಿತುಕೊಂಡು ರಚಿಸಿದ್ದಾರೋ ಏನೋ ಎನ್ನುವಂತೆ ಅವರ ಗಂಭೀರವಾದ ಆಶಯಗಳನ್ನೆಲ್ಲ ತಮ್ಮ ಆತ್ಮಾನುಭೂತಿಯ ಅನುಭವ ಪ್ರತ್ಯಕ್ಷದಿಂದ ಯಥಾರ್ಥವಾಗಿ ಯಥಾವತ್ತಾಗಿ ವ್ಯಕ್ತಪಡಿಸಿ ಅವರ ಗಣಧರರ ಸಮಾನವಾಗಿಯೇ ಕಾರ್ಯ ಮಾಡಿದ್ದಾರೆ. ಆದುದರಿಂದ ಭ. ಕುಂದಕುಂದಾಚಾರ್ಯದೇವರನ್ನು ಕಲಿಕಾಲ ಸರ್ವಜ್ಞರೆಂದು ಹೇಳುವಂತೆ ಈ ಆಚಾರ್ಯ ಭಗವಂತರನ್ನು 'ಕಲಿಕಾಲ ಗಣಧರ'ರೆಂದು ಹೇಳುವಲ್ಲಿ ನಮಗೆ ಯಾವ ಸಂಕೋಚವೆನಿಸುವುದಿಲ್ಲ.

ಆಚಾರ್ಯ ಅಮೃತಚಂದ್ರದೇವರ ದೈವೀದತ್ತವಾದ ಪ್ರಗಲ್ಭ ಪ್ರತಿಭೆಯು ಆತ್ಮಾನುಭೂತಿಯ ಅಮೃತ ರಸದಲ್ಲಿ ಮಿಂದೆದ್ದು ಅದು ಕೋಲ್ಮಿಂಚಿನ ಪ್ರಭೆಯಂತೆ ಅದ್ಭುತ ರಮ್ಯವಾಗಿ ವಿಜೃಂಭಿಸಿದೆ. ಅದು ಸಮಯಸಾರ ಪರಮಾಗಮದ ಮೇಲೆ 'ಆತ್ಮಖ್ಯಾತಿ'ಯೆಂಬ ಟೀಕೆಯ ರಚನೆಮಾಡುವಾಗಂತೂ ಗಾಥೆ-ಗಾಥೆಗಳಲ್ಲಿ ಅಡಕವಾದ ಪ್ರತಿಯೊಂದುಶಬ್ದ-ಶಬ್ದಗಳ, ಅಕ್ಷರ-ಅಕ್ಷರಗಳ ಗರ್ಭದಲ್ಲಿ ತುಂಬಿ ನಿಂತುಕೊಂಡ ಭಾವಸುಧೆಯನ್ನು ತಮ್ಮ ಸಮಸ್ತ ಸಾಮರ್ಥ್ಯದಿಂದ ಒತ್ತಿ ಹಿಂಡಿ ರಹಸ್ಯವನ್ನು ಹೊರಗೆ ತೆಗೆಯುತ್ತ ಪದ್ಯದಿಂದ ಗದ್ಯಕ್ಕೆ ಗದ್ಯದಿಂದ ಪದ್ಯಕ್ಕೆ ಹಾರುತ್ತ ಮಧ್ಯದಲ್ಲಿ ಅಧ್ಯಾಯಗಳ ರೇಖೆಯನ್ನು ಎಳೆಯುತ್ತ ಸಾಗುವ ಭೀಮಗಮನದ ಬ್ರಹ್ಮ ಗಾಂಭೀರ್ಯವನ್ನು ಕಂಡು ಪಾಠಕರು ಮೈಮರೆಯುವಂತಿದೆ, ಮೂರ್ಛೆ ಹೋಗುವಂತಿದೆ. ಹೀಗೆಯೇ ಅವರು ತಮ್ಮ ಸ್ವರೂಪಾನಂದದ ಅಮಲಿನಲ್ಲಿ ಜೀಕುತ್ತ ಭುವಿಯಿಂದ ಆಗಸಕ್ಕೆ ಆಗಸದಿಂದ ಭುವಿಗೆ ಏರಿಳಿಯುತ್ತ ಪ್ರಚುರ ಸ್ವಸಂವೇದನ ಸ್ವರೂಪವಾದ ಸ್ವಸಂವೇದನದಿಂದ ತಮ್ಮಲ್ಲಿ ತಮ್ಮ ಆತ್ಮವೈಭವವನ್ನು ಪ್ರಕಟಪಡಿಸಿಕೊಳ್ಳುತ್ತ ಅದೇ ಆತ್ಮಾನುಭೂತಿಯ ಪರಿಪಾಕವನ್ನೇ ಟೀಕಾಗ್ರಂಥಗಳಲ್ಲಿ ಎರಕ ಹೊಯ್ಯುತ್ತ ಗಣಧರ ಯೋಗ್ಯವಾದ ಕಾರ್ಯವನ್ನು ಕೈಕೊಂಡು ಅತ್ಯಂತ ಸಮರ್ಪಕವಾಗಿ ನಿರ್ವಹಿಸಿದ್ದಾರೆ. ತಮ್ಮ ನಾಮದ ಸಾರ್ಥಕತೆಯಾಗುವಂತೆ ಜಗತ್ತಿನ ಭವ್ಯಕೋಟಿಗೆ ಪ್ರತ್ಯಕ್ಷ ಅಮೃತಪಾನವನ್ನೇ ಮಾಡಿಸಿದ್ದಾರೆ. !

ಯಾವ ಪ್ರಕಾರ ಸಮಯಸಾರ ಗ್ರಂಥದ ಮೂಲ ಕರ್ತೃಗಳು ಅಲೌಕಿಕ ಪುರುಷರಿದ್ದಾರೆ. ಅದೇ ಪ್ರಕಾರ ಟೀಕಾಕಾರರು ಕೂಡ ಮಹಾನ ಸಮರ್ಥಶಾಲಿಯಾದ ಪುರುಷರಿದ್ದಾರೆ. ಆತ್ಮಖ್ಯಾತಿಯಂಥ ಟೀಕೆಯು ಬೇರೆ ಯಾವ ಜೈನ ಗ್ರಂಥದ ಮೇಲೆ ಬರಲಿಲ್ಲ. ಬರುವ ಸಾಧ್ಯತೆಯೂ ಕಂಡು ಬರುವುದಿಲ್ಲ-ಆತ್ಮಖ್ಯಾತಿ ಟೀಕೆಯನ್ನು ಓದುವುದರಿಂದ ಅವರ ಅಧ್ಯಾತ್ಮಿಕ ರಸಿಕತೆ, ಪ್ರಖರ ವಿದ್ವತ್ತೆ, ವಸ್ತುಸ್ವರೂಪವನ್ನು ನ್ಯಾಯದಿಂದ ಸಿದ್ಧಮಾಡುವ

ಅಸಾಧಾರಣ ಶಕ್ತಿ ಮತ್ತು ಗಂಭೀರ ರಹಸ್ಯಗಳನ್ನು ಅತ್ಯಂತ ಸಂಕ್ಷೇಪದಲ್ಲಿ ತುಂಬಿ ಹೇಳುವ ಅದ್ಭುತ ಕಲೆ ಮೊದಲಾದವುಗಳೆಲ್ಲವು ವಿದ್ವಾಂಸರುಗಳನ್ನು ಆಶ್ಚರ್ಯಚಕಿತಗೊಳಿಸುತ್ತವೆ. ಆಚಾರ್ಯದೇವರ ಈ ದೈವೀ ಟೀಕೆಯು ನಿಜವಾಗಿ ಶ್ರುತಕೇವಲಿ ವಚನಗಳ ಸಮಾನವಾಗಿದೆ.

ಇದೇ ಪ್ರಕಾರ ಭ. ಕುಂದಕುಂದಾಚಾರ್ಯದೇವರ ಪಂಚ ಪರಮಾಗಮಗಳಲ್ಲಿ 'ಪ್ರಾಭೃತತ್ರಯ', 'ನಾಟಕತ್ರಯ', 'ರತ್ನತ್ರಯ' ವೆಂದು ಖ್ಯಾತಿವೆತ್ತ ಪಂಚಾಸ್ತಿಕಾಯ ಸಂಗ್ರಹ, ಪ್ರವಚನಸಾರ, ಸಮಯಸಾರಗಳ ಮೇಲೆ ಪರಮೋತ್ಕೃಷ್ಟವಾದ ಆತ್ಮಾರ್ಥಿಗಳಿಗೆ ಆತ್ಮ ಜೀವನವನ್ನು ಅರ್ಪಣ ಮಾಡುವಂಥ ಉತ್ತಮೋತ್ತಮವೆನಿಸಿದ ಟೀಕೆಗಳನ್ನು ರಚಿಸಿ ಭವ್ಯ ಜೀವರುಗಳ ಮೇಲೆ ಮಹಾನ ಉಪಕಾರ ಮಾಡಿದ್ದಾರೆ ಇದರ ಉಪಕೃತಿಯನ್ನು ಭವ್ಯಕೋಟಿಯು ಎಂದೂ ಮರೆಯುವಂತಿಲ್ಲ.

ಉಪರೋಕ್ತ ಸಂಸ್ಕೃತ ಟೀಕೆಗಳ ರಚನೆಯ ನಂತರ ಆಚಾರ್ಯ ಅಮೃತಚಂದ್ರದೇವರು 'ತತ್ತ್ವಾರ್ಥಸಾರ' 'ಲಘುತತ್ತ್ವ ಸ್ಫೋಟ' ಮತ್ತು 'ಪುರುಷಾರ್ಥ ಸಿದ್ಧ್ಯುಪಾಯ'ವೆಂಬ ಮೂರು ಮೌಲಿಕ ಸ್ವತಂತ್ರ ಕೃತಿಗಳ ರಚನೆಯನ್ನು ಮಾಡಿದ್ದಾರೆ. ಇಂಥ ಮಹಾನ ಪ್ರಜ್ಞಾವಂತ ಆಚಾರ್ಯದೇವರ ವಿಷಯದಲ್ಲಿ ಅವರ ಸಾಹಿತ್ಯ ರಚನೆಯ ಅತಿರಿಕ್ತವಾಗಿ ಬೇರೆ ಯಾವ ಸಾಮಗ್ರಿಗಳು ಇದುವರೆಗೆ ಉಪಲಬ್ಧವಿಲ್ಲ. ಇವರ ಮಿಕ್ಕ ಸಾಹಿತ್ಯ ರಚನೆಯ ಸಲುವಾಗಿ ಮತ್ತು ಅವರ ಜೀವನ ಪರಿಚಯದ ವಿಷಯವಾಗಿ ಇನ್ನೂ ಹೆಚ್ಚಿನ ಸಂಶೋಧನೆ ನಡೆಯುವುದು ಅತ್ಯಂತ ಆವಶ್ಯಕವಿದೆ.

ಪ್ರಸ್ತುತ ಗ್ರಂಥದ ಹೆಸರು 'ಪುರುಷಾರ್ಥ ಸಿದ್ಧ್ಯುಪಾಯ' ಅಥವಾ 'ಜಿನಪ್ರವಚನರಹಸ್ಯಕೋಷ'ವೆಂದು ಇದೆ. ಪುರುಷಾರ್ಥಸಿದ್ಧಿಯ ಉಪಾಯ ಎಂದರೆ ಆತ್ಮನ ಪ್ರಯೋಜನದ ಸಿದ್ಧಿಯ ಉಪಾಯವಿದೆ. ಮತ್ತು ಜಿನಪ್ರವಚನರಹಸ್ಯಕೋಷ ಎಂದರೆ ಜೈನ ಸಿದ್ಧಾಂತಗಳ ರಹಸ್ಯದ ಭಂಡಾರವೆಂದು ಅರ್ಥವಾಗುತ್ತದೆ. ಸಮಸ್ತ ದುಃಖರೂಪ ಸಂಸಾರದ ಮೂಲವೆಂದರೆ ಮಿಥ್ಯಾಶ್ರದ್ಧೆಯಿದೆ ಮತ್ತು ಸತ್ಯಸುಖರೂಪವಿರುವ ಧರ್ಮದ ಮೂಲವೆಂದರೆ ಸಮ್ಯಗ್ದರ್ಶನವಿದೆ. ಆ ಸಮ್ಯಗ್ದರ್ಶನ-ಜ್ಞಾನಪೂರ್ವಕವಾಗಿ ನಿಜಾತ್ಮ ಸ್ವರೂಪದಲ್ಲಿ ನಿಮಗ್ನವಾಗುವುದು ಅದು ಪುರುಷಾರ್ಥದ ಸಿದ್ಧಿಯ ಉಪಾಯವಿದೆ. ಎಂದರೆ ಸಮ್ಯಗ್ದರ್ಶನ, ಸಮ್ಯಗ್ಜ್ಞಾನ ಮತ್ತು ಸಮ್ಯಕ್ಚಾರಿತ್ರದ ಏಕತೆಯರೂಪವಾದ ಮೋಕ್ಷ ಮಾರ್ಗವೇ ನಿಜವಾಗಿ ಪುರುಷಾರ್ಥಸಿದ್ಧಿಯ ಉಪಾಯವಿದೆ.

ಆಚಾರ್ಯ ಭಗವಂತರು ಮುಖ್ಯರೂಪದಿಂದ ವೀತರಾಗ ಸರ್ವಜ್ಞಕಥಿತ ವಸ್ತುಸ್ವಭಾವ ದರ್ಶಕವಾದ ಜೈನಧರ್ಮದ ಮಹಾತ್ಮ್ಯ, ಅಹಿಂಸೆ ಮೊದಲಾದ ವ್ರತಗಳ ಸ್ವರೂಪ, ಮತ್ತು ಗೃಹಸ್ಥರಿಗೆ ಉಚಿತವಿರುವ ನೀತಿಮಯವಾದ ವ್ಯವಹಾರಧರ್ಮ ಎಂದರೆ ಸಮ್ಯಗ್ದರ್ಶನಪೂರ್ವಕ ಭೂಮಿಕೆಗೆ ಯೋಗ್ಯವಾದ ಚಾರಿತ್ರಮಯ ಜೈನತ್ವವೆಂದರೇನೆಂಬುದರ ವರ್ಣನೆಯನ್ನು ಈ ಗ್ರಂಥದಲ್ಲಿ ಅತ್ಯಂತ ಸರಳಶೈಲಿಯಿಂದ ಮಾಡಿದ್ದಾರೆ. ಮೊದಲು ಭೂಮಿಕೆಯ ರೂಪದಲ್ಲಿ ವಕ್ತಾನ ಲಕ್ಷಣ, ಎರಡೂ ನಯಗಳ ಉಪದೇಶ ಕೊಡುವ ಕ್ರಮ, ನಿಶ್ಚಯನಯದ ಶ್ರದ್ಧೆಯಿಲ್ಲದ ಶ್ರೋತೃವಿಗೆ ಉಪದೇಶ ಕೊಡುವುದರ ನಿಷ್ಫಲತೆ ಇವೇ ಮೊದಲಾದುವನ್ನು ಎಂಟು ಶ್ಲೋಕಗಳಲ್ಲಿ ಹೇಳಿದ್ದಾರೆ. ಅನಂತರ ಗ್ರಂಥದ ಪ್ರಾರಂಭದಲ್ಲಿ 'ಪುರುಷಃ ಚಿದಾತ್ಮಾ ಅಸ್ತಿ' ಎಂದು ಪುರುಷ ಶಬ್ದದ ವ್ಯಾಖ್ಯೆ ಮಾಡಿ, ಪುರುಷಾರ್ಥಸಿದ್ಧಿಯ ಉಪಾಯ ತಿಳಿಸಿಕೊಡುತ್ತ ವಿಪರೀತ ಶ್ರದ್ಧೆಯ ನಾಶಮಾಡಿ ನಿಜ ಸ್ವರೂಪವನ್ನು ತಿಳಿದುಕೊಂಡು ಆ ತನ್ನ ಸ್ವರೂಪದಿಂದ ಭ್ರಷ್ಟವಾಗದಿರುವುದೇ ಪುರುಷಾರ್ಥದ ಸಿದ್ಧಿಯಾಗುವ ಉಪಾಯವಿದೆ. ಇದನ್ನು ಬಿಟ್ಟು ಬೇರೆ ಯಾವ ಉಪಾಯವಿಲ್ಲವೆಂದು ಹೇಳಿದ್ದಾರೆ.

ಮುಂದೆ ಹಿಂಸೆ-ಅಹಿಂಸೆಯ ಲಕ್ಷಣದ ವರ್ಣನೆ ಮಾಡುತ್ತ ರಾಗಾದಿ ಭಾವಗಳ ಪ್ರಕಟತೆಯಾಗದಿರುವುದು ಅದು ಅಹಿಂಸೆಯಿದ್ದರೆ ರಾಗಾದಿಭಾವಗಳು ಉತ್ಪನ್ನವಾಗುವುದು ಅದು ಹಿಂಸೆಯಿದ್ದು

ಇದು ಜೈನ ಸಿದ್ಧಾಂತದ ಸಾರವಿದೆಯೆಂದು ತಿಳಿಸಿದ್ದಾರೆ ಮತ್ತು ಹಿಂಸೆ, ಕಳವು ಮೊದಲಾದ ಪಂಚ ಪಾಪಗಳೆಲ್ಲವೂ ಹಿಂಸಾ ಸ್ವರೂಪವಾಗಿಯೇ ಇವೆ, ಆತ್ಮನ ಶುದ್ಧೋಪಯೋಗರೂಪ ಪರಿಣಾಮಗಳ ಘಾತದ ಕಾರಣಗಳೇ ಇವೆ. ಆದುದರಿಂದ ಇವೆಲ್ಲವು ಹಿಂಸೆಯೇ ಇವೆ. ಹಿಂಸೆಯ ತ್ಯಾಗವಾದ ನಂತರವೇ ಧರ್ಮವಾಗುತ್ತದೆ; ಚಾರಿತ್ರವಾಗುತ್ತದೆ. ಆ ಚಾರಿತ್ರವು ಸಮಸ್ತ ಕಷಾಯಗಳಿಂದ ರಹಿತವಿರುತ್ತದೆ, ಆತ್ಮಸ್ವರೂಪವಿರುತ್ತದೆ ಹೀಗೆ ಸಕಲ ಕಷಾಯಗಳ ಅಭಾವವಾದ ನಂತರವೇ ಯಥಾಖ್ಯಾತ ಚಾರಿತ್ರವಾಗುತ್ತದೆ ಮತ್ತು ಅದು ಸದಾಕಾಲವಿರುತ್ತದೆ. ಇಂಥ ಯಥಾಖ್ಯಾತ ಚಾರಿತ್ರದ ಪ್ರಾಪ್ತಿಗಾಗಿ ಮೊದಲು ಏನು ಮಾಡಬೇಕೆಂಬುದನ್ನು ತಿಳಿಸಿಕೊಡುತ್ತ ಆಚಾರ್ಯ ಭಗವಂತರು ದೇಶಚಾರಿತ್ರಾಂತರ್ಗತವಾದ ಶ್ರಾವಕ ಧರ್ಮವನ್ನು ಮತ್ತು ಸಕಲ ಚಾರಿತ್ರಾಂತರ್ಗತವಾದ ಮುನಿಧರ್ಮವನ್ನು ವಿಸ್ತಾರ ಪೂರ್ವಕವಾಗಿ ಹೇಳಿದ್ದಾರೆ. ಮತ್ತು ಇವೆರಡು ಧರ್ಮಗಳ ಮಧ್ಯದಲ್ಲಿ ಸಲ್ಲೇಖನಾಧರ್ಮದ ವ್ಯಾಖ್ಯಾನ ಮಾಡುತ್ತ ಸಲ್ಲೇಖನಾವೊಂದೇ ತನ್ನ ಧರ್ಮವನ್ನು ತನ್ನ ಜತೆಯಲ್ಲಿ ತೆಗೆದುಕೊಂಡು ಹೋಗುವಲ್ಲಿ ಸಮರ್ಥವಿರುವುದರಿಂದ ಎಲ್ಲರೂ ಅದರ ಭಾವನೆಭಾವಿಸಬೇಕೆಂದು ಹೇಳಿದ್ದಾರೆ ಮತ್ತು ಹಿಂಸೆಯ ಮೂಲ ಕಾರಣವು ಕಷಾಯವಿದ್ದು ಅವು ಸಲ್ಲೇಖನಾದಲ್ಲಿ ಕ್ಷೀಣವಾಗುವುದರಿಂದ ಸಲ್ಲೇಖನಾ ಅಥವಾ ಸಮಾಧಿಮರಣವು ಕೂಡ ಅಹಿಂಸಾಮಯವೇ ಇದೆಯೆಂದು ಹೇಳಿ ಇಡೀ ಗ್ರಂಥದ ತುಂಬೆಲ್ಲ ಒಂದು ಅಹಿಂಸೆಯ ಮೇಲೆಯೇ ಹೆಚ್ಚು ಒತ್ತು ಕೊಟ್ಟು ಹೇಳಿದ್ದಾರೆ. ಈ ಪ್ರಕಾರ ಇನ್ನೂರಾ ಇಪ್ಪತ್ತಾರು ಶ್ಲೋಕಗಳಲ್ಲಿ ಗ್ರಂಥವನ್ನು ಮುಗಿಸಿದ್ದಾರೆ.

'ಅಹಿಂಸಾ ಪರಮೋಧರ್ಮ'ವೆಂದು ಸಾರುವ ಜೈನ ಧರ್ಮವು ಅಹಿಂಸಾಪ್ರಧಾನವಿದೆ. ನಿಶ್ಚಯ ಅಹಿಂಸೆಯಂತೂ ವೀತರಾಗ ಶ್ರದ್ಧೆ-ಜ್ಞಾನ-ಚಾರಿತ್ರವಿದ್ದು ಅದರ ಹಾಗೂ ವ್ಯವಹಾರ ಅಹಿಂಸೆಯ ಯಥಾರ್ಥ ಸ್ವರೂಪವು ಜಿನೇಂದ್ರ ಕಥಿತ ಶಾಸ್ತ್ರಗಳಲ್ಲಿ ಹೇಳಲಾಗಿದೆ.

ಹಿಂಸ್ಯ, ಹಿಂಸಕ, ಹಿಂಸೆ ಮತ್ತು ಹಿಂಸೆಯ ಫಲ ಈ ನಾಲ್ಕು ವಿಷಯಗಳ ಜ್ಞಾನವಿಲ್ಲದೆ ಮತ್ತು ಭೂತಾರ್ಥ ನಿಜಜ್ಞಾಯಕ ಸ್ವಭಾವದ ಆಶ್ರಯ ತೆಗೆದುಕೊಂಡಲ್ಲದೆ ಹಿಂಸೆಯ ಯಥಾರ್ಥ ತ್ಯಾಗವಾಗುವ ಸಾಧ್ಯತೆಯಿಲ್ಲ. ಆಚಾರ್ಯ ಅಮೃತಚಂದ್ರದೇವರು ಈ ಗ್ರಂಥದಲ್ಲಿ ಯಾವ ಅಪೂರ್ವ ಶೈಲಿಯಿಂದ ಅಹಿಂಸೆಯ ವರ್ಣನೆ ಮಾಡಿದ್ದಾರೆ ಅಂಥ ವರ್ಣನೆಯು ಬೇರೆಲ್ಲಿಯೂ ದೊರಕುವುದಿಲ್ಲ. ಅವರು ಹಿಂಸೆ ಮೊದಲಾದ ಪಂಚ ಪಾಪಗಳನ್ನು ಕೇವಲ ಹಿಂಸಾರೂಪವೆಂದೇ ಸಿದ್ಧ ಮಾಡಿರುವುದು ಒಂದು ವೈಶಿಷ್ಟ್ಯವಿದೆ. ವರ್ತಮಾನದಲ್ಲಿ ಮಾಂಸ ಭಕ್ಷಣೆ ಮತ್ತು ಅಭಕ್ಷಾದಿಗಳ ಮೂಲಕ ಹಿಂಸೆಯ ಪುಷ್ಟಿ ಮಾಡುತ್ತಿರುವುದು ದುಃಖದ ಸಂಗತಿಯಾಗಿದೆ. ಅದರ ತ್ಯಾಗ ಮಾಡಿದಲ್ಲದೆ ಜೀವನಿಗೆ ಶಾಂತಿ ಹಾಗೂ ಸುಖದ ಪ್ರಾಪ್ತಿಯಾಗುವುದು ಅಸಂಭವವವಿದೆಯೆಂಬುದನ್ನು ಎಲ್ಲರೂ ಈ ಗ್ರಂಥದ ಅಧ್ಯಯನದಿಂದ ತಿಳಿದುಕೊಳ್ಳಬಹುದಾಗಿದೆ, ಮತ್ತು ತಮ್ಮ ಜೀವನದಲ್ಲಿ ಅಹಿಂಸೆಯನ್ನು ತಂದುಕೊಳ್ಳಬಹುದಾಗಿದೆ.

ಈ ಪುರುಷಾರ್ಥಸಿದ್ಧ್ಯುಪಾಯದ ಮೇಲೆ ಮೂರು ಟೀಕೆಗಳು ಉಪಲಬ್ಧವಿದ್ದು ಅವುಗಳಲ್ಲಿ ಒಂದು ಅಜ್ಞಾತ ಕೃತ ಸಂಸ್ಕೃತ ಟೀಕೆಯಿದ್ದರೆ ಇನ್ನೊಂದು ಪಂ. ಟೋಡರಮಲ್ಲರದಿದೆ ಮತ್ತು ಮೂರನೆಯದು ಪಂ. ಭೂದರ ಮಿಶ್ರರದಿದೆ. ಇಲ್ಲಿ ನಾವು ಪಂ. ಟೋಡರಮಲ್ಲರ ಕೃತಿಯನ್ನೇ ಕನ್ನಡಿಸಿ ಕೊಡುತ್ತಿದ್ದೇವೆ. ಎಲ್ಲರು ಇದರ ಸದುಪಯೋಗ ಮಾಡಿಕೊಳ್ಳಬೇಕೆಂದು ಸವಿನಯಪೂರ್ವಕವಾಗಿ ಕೇಳಿಕೊಂಡು ಈ ಕೃತಿರತ್ನವನ್ನು ಪಾಠಕರ ಕೈಗೆ ಸಮರ್ಪಿಸುತ್ತೇವೆ.

ಶ್ರೀ. ಎಂ. ಬಿ. ಪಾಟೀಲ,

ಬೆಳಗಾವಿ ದಿ. ೧-೫-೧೯೯೬ 'ಶುದ್ಧಾತ್ಮಸದನ', ಬೆಳಗಾವಿ.

# ಅನುಕ್ರಮಣಿಕೆ


| ವಿಷಯ | ಪುಟ |
|---|---|
| ಪಂ. ಟೋಡರಮಲ್ಲರ ಮಂಗಲಾಚರಣೆ | 1 |
| ಆಚಾರ್ಯ ಅಮೃತಚಂದ್ರರ ಮಂಗಲಾಚರಣೆ | 2 |
| ಭೂಮಿಕೆ | 5 |
| ವಕ್ತಾನ ಲಕ್ಷಣ | 6 |
| ನಿಶ್ಚಯ-ವ್ಯವಹಾರದ ಸ್ವರೂಪ | 6 |
| ಶ್ರೋತಾರನ ಲಕ್ಷಣ | 11 |
| **ಗ್ರಂಥದ ಆರಂಭ** | |
| ಪುರುಷನ ಸ್ವರೂಪ | 13 |
| ಕರ್ತಾ-ಭೋಕ್ತಾ | 15 |
| ಪುರುಷಾರ್ಥದ ಪ್ರಯೋಜನದ ಸಿದ್ಧಿ | 16 |
| ಪುದ್ಗಲ ಮತ್ತು ಜೀವಗಳು ಸ್ವಯಂ ಪರಿಣಮನ ಮಾಡುತ್ತವೆ | 17 |
| ಸಂಸಾರದ ಮೂಲ ಕಾರಣ | 18 |
| ಪುರುಷಾರ್ಥ ಸಿದ್ಧಿಯ ಉಪಾಯ | 20 |
| ಮುನಿಯ ಅಲೌಕಿಕ ವೃತ್ತಿ | 21 |
| ಉಪದೇಶ ಕೊಡುವ ಕ್ರಮ | 22 |
| ಕ್ರಮಭಂಗ ಮಾಡುವವನು ದಂಡನೀಯನಿದ್ದಾನೆ | 22 |
| **ಶ್ರಾವಕಧರ್ಮ ವ್ಯಾಖ್ಯಾನ** | 23 |
| ಮೊದಲು ಸಮ್ಯಕ್ತ್ವದ ಅಂಗೀಕಾರ ಮಾಡುವುದು | 23 |
| ಸಮ್ಯಕ್ತ್ವದ ಲಕ್ಷಣ | 25 |
| ಸಪ್ತತತ್ತ್ವ | 26 |
| ಸಮ್ಯಕ್ತ್ವದ ಎಂಟು ಅಂಗಗಳು | 29 |
| **ಸಮ್ಯಗ್ಜ್ಞಾನ ಅಧಿಕಾರ** | 35 |
| ಪ್ರಮಾಣ-ನಯಗಳ ಸ್ವರೂಪ | 35 |
| ಮೊದಲು ಸಮ್ಯಕ್ತ್ವ ನಂತರ ಜ್ಞಾನವೇಕೆ ? | 38 |
| ಎರಡೂ ಜತೆಯಿದ್ದರೆ ಕಾರಣ-ಕಾರ್ಯವೇಕೆ ? | 38 |
| ಸಮ್ಯಗ್ಜ್ಞಾನದ ಲಕ್ಷಣ | 39 |
| ಸಮ್ಯಗ್ಜ್ಞಾನದ ಎಂಟು ಅಂಗಗಳು | 40 |
| **ಸಮ್ಯಕ್ಚಾರಿತ್ರದ ವ್ಯಾಖ್ಯಾನ** | 42 |
| ಸಮ್ಯಕ್ಚಾರಿತ್ರವನ್ನಾರು ಅಂಗೀಕಾರ ಮಾಡಬೇಕು ? | 42 |
| ಸಮ್ಯಗ್ಜ್ಞಾನದ ನಂತರ ಚಾರಿತ್ರ | 42 |
| ಚಾರಿತ್ರದ ಲಕ್ಷಣ | 43 |
| ಚಾರಿತ್ರದ ಭೇದ ಹಾಗೂ ಅಧಿಪತಿ | 44 |
| ಐದೂ ಪಾಪಗಳು ಹಿಂಸಾರೂಪವೇ ಇವೆ | 45 |
| **ಅಹಿಂಸಾವ್ರತ** | 46 |
| ಹಿಂಸೆ-ಅಹಿಂಸೆಯ ಲಕ್ಷಣ ಹಾಗೂ ಅವುಗಳ ಭೇದ | 46 |
| ಹಿಂಸೆ ಬಿಡುವುದಕ್ಕಾಗಿ ಮೊದಲು ಏನು ಮಾಡಬೇಕು ? | 57 |
| ಮದ್ಯ, ಮಾಂಸ, ಮಧುಗಳ ದೋಷ ಮತ್ತು ಅವುಗಳಿಂದ ಅತಿಶಯ ಹಿಂಸೆ | 57 |
| ಐದು ಉದುಂಬರ ಫಲಗಳ ದೋಷ, ಅವನ್ನು ತಿನ್ನುವವನಿಗೆ ವಿಶಿಷ್ಟ ರಾಗರೂಪದ ಹಿಂಸೆ | 61 |
| ಈ ಎಂಟು ಪದಾರ್ಥಗಳ ತ್ಯಾಗಿಯೇ ಜಿನ-ಧರ್ಮದ ಉಪದೇಶ ಕೇಳಲು ಪಾತ್ರನಿರುತ್ತಾನೆ. | 63 |
| ಹಿಂಸಾದಿಗಳ ತ್ಯಾಗ | 64 |
| ಸ್ವಚ್ಛಂದತೆಯ ನಿಷೇಧ | 65 |
| ಅಹಿಂಸಾ ಧರ್ಮದ ಸಾಧನ ಮಾಡುತ್ತಿರುವಂತೆ ಕುಯುಕ್ತಿಗಳಿಂದ ಸಾವಧಾನ ಮಾಡುತ್ತಾರೆ. | 65 |
| **ಸತ್ಯವ್ರತ** | |
| ಅದರ ಭೇದ | 73 |
| ಚೌರ್ಯ ಪಾಪದ ವರ್ಣನೆ | 78 |
| **ಅಚೌರ್ಯ ವ್ರತ** | 78 |
| ಕುಶೀಲದ ಸ್ವರೂಪ | 81 |
| ಮೈಥುನದಲ್ಲಿ ಪ್ರಕಟರೂಪದಿಂದ ಹಿಂಸೆ | 82 |
| ಪರಿಗ್ರಹ ಪಾಪದ ಸ್ವರೂಪ | 83 |
| ಅದರ ಭೇದ | 86 |

# ಅನುಕ್ರಮಣಿಕೆ


| ವಿಷಯ | ಪುಟ | ವಿಷಯ | ಪುಟ |
|---|---|---|---|
| ಹಿಂಸೆ-ಅಹಿಂಸೆ | 87 | ಹನ್ನೆರಡು ವ್ರತಗಳ ಅತಿಚಾರ | 135 |
| ಎರಡೂ ಪರಿಗ್ರಹಗಳಲ್ಲಿ ಹಿಂಸೆ | 87 | ಅತಿಚಾರ ತ್ಯಾಗದ ಫಲ | 144 |
| ಅಪರಿಗ್ರಹ ವ್ರತ | 91 | **ಸಕಲಚಾರಿತ್ರದ ವ್ಯಾಖ್ಯಾನ** | 145 |
| ಬಾಹ್ಯ ಪರಿಗ್ರಹ ತ್ಯಾಗ ಕ್ರಮ | 93 | ತಪದ ಎರಡು ಭೇದಗಳು | 145 |
| ರಾತ್ರಿ ಭೋಜನದಲ್ಲಿ ಭಾವಹಿಂಸೆ | 95 | ಬಾಹ್ಯ-ಅಭ್ಯಂತರ ತಪದ ಭೇದ | 146 |
| ರಾತ್ರಿ ಭೋಜನದಲ್ಲಿ ದ್ರವ್ಯಹಿಂಸೆ | 97 | ಮುನಿವ್ರತ ಧಾರಣ ಮಾಡುವ ಉಪದೇಶ | 149 |
| **ಸಪ್ತ ಶೀಲವ್ರತ** | 99 | ಆರು ಆವಶ್ಯಕಗಳು | 150 |
| 1-ದಿಗ್ವ್ರತ | 100 | ಮೂರು ಗುಪ್ತಿ | 151 |
| 2-ದೇಶವ್ರತ | 100 | ಐದು ಸಮಿತಿ | 151 |
| 3-ಅನರ್ಥದಂಡ ವ್ರತ | 101 | ದಶ ಧರ್ಮಗಳು | 152 |
| ಅದರ ಐದು ಭೇದ | 101-104 | ಹನ್ನೆರಡು ಭಾವನೆಗಳು | 154 |
| | | ಇಪ್ಪತ್ತೆರಡು ಪರೀಷಹಗಳು | 158 |
| ನಾಲ್ಕು ಶಿಕ್ಷಾವ್ರತ | 105 | ರತ್ನತ್ರಯದ ಸಲುವಾಗಿ ಪ್ರೇರಣೆ | 165 |
| ಪ್ರಥಮ ಸಾಮಾಯಿಕ ಶಿಕ್ಷಾವ್ರತ | 105 | ಅಪೂರ್ಣ ರತ್ನತ್ರಯದಿಂದ ಬಂಧವಾಗುವುದಿಲ್ಲ ಆದರೆ ರಾಗದಿಂದ ಬಂಧವಾಗುತ್ತದೆ. | 167 |
| ಸಾಮಯಿಕದ ವಿಧಿ | 106 | | |
| ದ್ವಿತೀಯ ಶಿಕ್ಷಾವ್ರತ-ಪ್ರೋಷಧೋಪವಾಸ | 107 | ಆಂಶಿಕ ರಾಗ | 168 |
| ಉಪವಾಸದ ದಿವಸ ರಾತ್ರಿಯ ಕರ್ತವ್ಯ | 108 | ಸಮ್ಯಕ್ ರತ್ನತ್ರಯದ ಫಲ | 168 |
| ಉಪವಾಸದಲ್ಲಿ ವಿಶೇಷವಾಗಿ ಅಹಿಂಸೆಯ ಪುಷ್ಟಿ | 112 | ಕರ್ಮಗಳ ಬಂಧ ಮತ್ತು ಅದರಲ್ಲಿ ಕಾರಣ | 170 |
| ತೃತೀಯ ಶಿಕ್ಷಾವ್ರತ-ಭೋಗೋಪಭೋಗ ಪರಿಮಾಣ | 114 | ರತ್ನತ್ರಯದಿಂದ ಬಂಧವಾಗುವುದಿಲ್ಲ | 172 |
| ಅದರ ಭೇದ | 117 | ತೀರ್ಥಂಕರ ನಾಮಕರ್ಮದ ಬಂಧವು ರತ್ನತ್ರಯದಿಂದ ಆಗುವುದಿಲ್ಲ | 173 |
| ಚತುರ್ಥ ಶಿಕ್ಷಾವ್ರತ-ವೈಯಾವೃತ್ಯ | 119 | | |
| ನವಧಾ ಭಕ್ತಿಯ ಹೆಸರು | 120 | ರತ್ನತ್ರಯ ಧರ್ಮವು ಮೋಕ್ಷದ ಕಾರಣವೇ ಇದೆ | 175 |
| ದಾತೃವಿನ ಸಪ್ತ ಗುಣಗಳು | 121 | ಪುಣ್ಯಾಸ್ರವವು ಶುಭೋಪಯೋಗದ ಅಪರಾಧವಿದೆ | 175 |
| ಎಂಥ ವಸ್ತುವಿನ ದಾನ ಕೊಡುವುದು | 122 | ನಿಶ್ಚಯ-ವ್ಯವಹಾರ ಮೋಕ್ಷಮಾರ್ಗ | 177 |
| ಪಾತ್ರಗಳ ಭೇದ | 123 | ಪರಮಾತ್ಮಾ | 178 |
| ದಾನ ಕೊಡುವುದರಿಂದ ಹಿಂಸೆಯತ್ಯಾಗ | 124 | ಜೈನ ನೀತಿ ನಯವಿವಕ್ಷೆ | 179 |
| **ಸಲ್ಲೇಖನಾಧರ್ಮ ವ್ಯಾಖ್ಯಾನ** | 127 | ಶಬ್ದಗಳಿಂದ ಶಾಸ್ತ್ರದ ರಚನೆಯಾಗಿದೆ ಅದರಲ್ಲಿ ನಮ್ಮದೇನೂ ಕರ್ತವ್ಯವಿಲ್ಲ. | 180 |
| ಸಮಾಧಿಮರಣದ ವಿಧಿ | 130 | | |
| ಸಲ್ಲೇಖನವು ಕೂಡ ಅಹಿಂಸೆಯಿದೆ | 134 | ಶ್ಲೋಕಗಳ ಅನುಕ್ರಮಣಿಕೆ | 182 |

॥ ಶ್ರೀ ಜಿನಾಯ ನಮಃ ॥

ಶ್ರೀಮದಮೃತಚಂದ್ರಾಚಾರ್ಯದೇವ ವಿರಚಿತ

# ಪುರುಷಾರ್ಥ ಸಿದ್ಧಿ-ಉಪಾಯ

ಆಚಾರ್ಯಕಲ್ಪ ಪಂ. ಟೋಡರಮಲ್ಲ ವಿರಚಿತ ಭಾಷಾ ವಚನಿಕೆಯ

## ಕನ್ನಡ ಅನುವಾದ

### ಮಂಗಲಾಚರಣೆ

ಪರಮ ಪುರುಷ-ನಿಜ ಅರ್ಥವನು, ಸಾಧಿಸಿ ಆಗಿಹರು ಗುಣವೃಂದ ।
ಆನಂದಾಮೃತ-ಚಂದ್ರನಿಗೆ, ವಿನಮಿತನಾಗುವೆನು ಸುಖ ಕಂದ ॥೧॥

ವಾಣಿ ವಿನಾ ವಚನವಿಲ್ಲ, ವಚನವಿಲ್ಲದೆ ನಯವಿಲ್ಲ ।
ನಯವಿಲ್ಲದೆ ವಾಣಿಯಿಲ್ಲ, ನಮಿಪೆ ವಾಣಿಗೆ ಅಕ್ಷರಿಲ್ಲ ॥೨॥

ಗುರು ಎದೆಯಲಿರಲಿ ನಿಜಪರ ತಾರಕ ನಾಶಿಪನು ಪಾಪ ।
ಸುರಗುರು ನುತಿಪನು ನಿಜ ಪರ, ಅಪಹರಿಪವಚನ ಕಲಾಪ ॥೩॥

ನಮಿಪೆನು ನಗ್ನ ಜೈನ ಜಿನ, ಜ್ಞಾನ ಧ್ಯಾನ ಧನ ಲೀನ ।
ಮದ ಮಾನ ವಿನ ದಾನಘನ, ತನು ಕ್ಷೀಣ ಕಷಾಯ ಹೀನ ॥೪॥

**ಭಾವಾರ್ಥ** :- ಯಾವ ಪರಮ ಪುರುಷರು ನಿಜಸುಖಸ್ವರೂಪವಿರುವ ಪ್ರಯೋಜನವನ್ನು ಸಾಧಿಸಿ ಶುದ್ಧಗುಣ ಸಮೂಹ ರೂಪರಾಗಿದ್ದಾರೆ. ಆ ಆನಂದಾಮೃತ ಚಂದ್ರರಿಗೆ (-ಶ್ರೀ ಜಿನೇಂದ್ರ ದೇವರಿಗೆ) ನಾನು ಎಂದರೆ ದ್ರವ್ಯದೃಷ್ಟಿಯಿಂದ ಸುಖ ಕಂದನಿರುವಂಥವನು ನಾನು ವಂದನೆ ಮಾಡುತ್ತೇನೆ. (೧) ವಾಣಿಯಿಲ್ಲದೆ ವಚನವಾಗುವ ಸಾಧ್ಯತೆಯಿಲ್ಲ ಮತ್ತು ವಚನಗಳಿಲ್ಲದೆ ನಯಗಳ ಕಥನವು ಸಂಭವವಿಲ್ಲ. ನಯಗಳ ಕಥನವಿಲ್ಲದೆ (-ವಸ್ತು ಸ್ವರೂಪದ ವರ್ಣನೆ ಮಾಡುವಂಥ) ಸ್ಯಾದ್ವಾದರೂಪ ವಾಣಿಯು ಸಂಭವಿಸುವ ಸಾಧ್ಯತೆಯಿಲ್ಲ ; ಆದರೆ ಓ ಪ್ರಭು ಜಿನೇಂದ್ರದೇವ!

ತಮ್ಮ ವಾಣಿಯು ಸ್ಯಾದ್ವಾದರೂಪವಾಗಿದ್ದರೂ ಕೂಡ ನಿರಕ್ಷರಿಯಿದೆ ನಾನು ಅದಕ್ಕೆ ನಮಸ್ಕಾರ ಮಾಡುತ್ತೇನೆ. (೨) ಸುರಗುರು (ಬೃಹಸ್ಪತಿಯು) ತನ್ನ ಹಾಗೂ ಇತರರ ಮನಸ್ಸನ್ನು ಹರಣ ಮಾಡುವಂತ ವಚನಗಳಿಂದ ತನ್ನ ಹಾಗೂ ಇತರರ ಕಲ್ಯಾಣ ಮಾಡುವಂಥ ಮತ್ತು ಪಾಪಗಳನ್ನು ನಾಶಪಡಿಸುವಂಥ ಯಾವ ಗುರುಗಳ ಸ್ತುತಿ ಮಾಡುತ್ತಾರೆ ಆ ಗುರುಗಳು ನನ್ನ ಹೃದಯದಲ್ಲಿ ವಾಸ ಮಾಡಲಿ. (೩) ನಾನು ಜಿನ ಮುದ್ರೆಯನ್ನು ಧಾರಣ ಮಾಡಿದ ನನ್ನ ದಿಗಂಬರ ಜೈನ ಮುನಿಗಳಿಗೆ ನಮಸ್ಕಾರ ಮಾಡುತ್ತೇನೆ. ಅವರು ಯಾವಾಗಲೂ ಜ್ಞಾನ-ಧ್ಯಾನರೂಪದ ಧನ-ಸ್ವರೂಪದಲ್ಲಿ ನಿಮಗ್ನರಿರುತ್ತಾರೆ, ಕಾಮ-ಮಾನ (ಅಹಂಕಾರ, ಕರ್ತೃತ್ವ, ಮಮತ್ವ)ದಿಂದ ರಹಿತರಿರುತ್ತಾರೆ. ಮೇಘ ಸಮಾನವಾಗಿ ಧರ್ಮೋಪದೇಶದ ವೃಷ್ಟಿ ಮಾಡುವಂಥವರಿದ್ದಾರೆ. ಪಾಪದಿಂದ ರಹಿತರಿದ್ದಾರೆ ಮತ್ತು ಕ್ಷೀಣಕಾಯರಿದ್ದಾರೆ ಎಂದರೆ ಕಷಾಯ ಹಾಗೂ ಕಾಯವು ಕ್ಷೀಣವಿದೆ ಮತ್ತು ಜ್ಞಾನಸ್ವರೂಪದಲ್ಲಿ ಅತ್ಯಂತ ಪುಷ್ಟರಿದ್ದಾರೆ. (೪)

ಕೆಲವರು ನಿಶ್ಚಯದಿ ಶುದ್ಧವೆಂದು ಮನ್ನಿಸಿ ಆತ್ಮನನು
ಸ್ವಚ್ಛಂದರಾಗಿಹರು ಅರಿಯದಲೆ ತನ್ನ ಶುದ್ಧತೆಯನು
ಕೆಲವರು ವ್ಯವಹಾರ ದಾನ ತಪ ಶೀಲ ಭಾವಗಳನು
ಆತ್ಮನ ಹಿತವೆಂದು ಮನ್ನಿಸಿ ತ್ಯಜಿಸರು ಮೂಢತೆಯನು
ಕೆಲವರು ವ್ಯವಹಾರನಯ ಮೇಣ್ನಿಶ್ಚಯದ ಮಾರ್ಗವನು
ಭಿನ್ನ ಭಿನ್ನ ತಿಳಿದುಕೊಂಡು ಮಾಳ್ಪರು ನಿಜ ಉದ್ಧತವನು
ತಿಳಿದಾಗ ವ್ಯವಹಾರ ನಿಶ್ಚಯದ ಭೇದವೆಲ್ಲವನು
ಕಾರಣವನು ಆಗುಪಚಾರ ಮನ್ನಿಪರು ಬುದ್ಧತೆಯನು ।।೫।।

ಶ್ರೀ ಗುರು ಪರಮದಯೆಯಿಂದ ಕೊಟ್ಟರು ಸತ್ಯ ಉಪದೇಶ ।
ಜ್ಞಾನಿ ತಿಳಿದು ಮನ್ನಿಸಿದರು, ಮೂಢ ಗ್ರಹಿಸಿದರು ಕ್ಲೇಶ ।।೬।।

ಈಗ ಗ್ರಂಥಕರ್ತೃಗಳಾದ ಶ್ರೀ ಅಮೃತಚಂದ್ರಾಚಾರ್ಯದೇವರು ಮಂಗಲಾಚರಣೆಯ ನಿಮಿತ್ತದಿಂದ ತಮ್ಮ ಇಷ್ಟದೇವರನ್ನು ಸ್ಮರಣೆ ಮಾಡಿ, ಈ ಜೀವದ ಪ್ರಯೋಜನವು ಸಿದ್ಧವಾಗುವಲ್ಲಿ ಕಾರಣಭೂತವಾದ ನಿಶ್ಚಯ ಮತ್ತು ವ್ಯವಹಾರ ಮೋಕ್ಷಮಾರ್ಗದ ಏಕತೆಯರೂಪದ ಉಪದೇಶವು ಯಾವುದರಲ್ಲಿ ಇದೆ. ಅಂಥ ಗ್ರಂಥದ ಆರಂಭ ಮಾಡುತ್ತಾರೆ.

ಸೂತ್ರಾವತಾರ -

(ಆರ್ಯಾವೃತ್ತ)

ತಜ್ಜಯತಿ ಪರಂ ಜ್ಯೋತಿಃ ಸಮಂ ಸಮಸ್ತೈರನಂತಪರ್ಯಾಯೈಃ ।
ದರ್ಪಣತಲ ಇವ ಸಕಲಾ ಪ್ರತಿಫಲತಿ ಪದಾರ್ಥಮಾಲಿಕಾ ಯತ್ರ ।।೧।।

**ಅನ್ವಯಾರ್ಥ :- [ಯತ್ರ]** ಯಾವುದರಲ್ಲಿ **[ದರ್ಪಣತಲ ಇವ]** ಕನ್ನಡಿಯ ಮಟ್ಟ ಭೂಮಿಯಂತೆ **[ಸಕಲಾ]** ಸಮಸ್ತ **[ಪದಾರ್ಥಮಾಲಿಕಾ]** ಪದಾರ್ಥಗಳ ಸಮೂಹವು **[ಸಮಸ್ತೈರನಂತಪರ್ಯಾಯೈಃಸಮಂ]**

ಅತೀತ, ಅನಾಗತ ಮತ್ತು ವರ್ತಮಾನಕಾಲದಸಮಸ್ತ ಅನಂತ ಪರ್ಯಾಯಗಳು ಸಹಿತ **[ಪ್ರತಿಫಲತಿ]** ಪ್ರತಿಬಿಂಬಿತವಾಗುತ್ತವೆ. **[ತತ್ ಪರಂ ಜ್ಯೋತಿಃ]** ಆ ಸರ್ವೋತ್ಕೃಷ್ಟ ಶುದ್ಧ ಚೇತನಾ ಸ್ವರೂಪವಾದ ಪ್ರಕಾಶವು **[ಜಯತಿ]**ಸದಾ ಜಯವಂತವಾಗಿ ವರ್ತಿಸಲಿ.

**ಟೀಕೆ ಃ- 'ತತ್ ಪರಂ ಜ್ಯೋತಿಃ ಜಯತಿ'** - ಆ ಪರಮ ಜ್ಯೋತಿಯು ಎಂದರೆ ಸರ್ವೋತ್ಕೃಷ್ಟ ಶುದ್ಧ ಚೇತನದ ಪ್ರಕಾಶವು ಜಯವಂತವಾಗಿ ವರ್ತಿಸುತ್ತದೆ. ಅದು ಹೇಗಿದೆಯೆಂದರೆ **'ಯತ್ರ ಸಕಲಾ ಪದಾರ್ಥಮಾಲಿಕಾ ಪ್ರತಿಫಲತಿ'** - ಆ ಶುದ್ಧ ಚೇತನಾ ಪ್ರಕಾಶದಲ್ಲಿ ಸಮಸ್ತ ಜೀವ ಮೊದಲಾದ ಪದಾರ್ಥಗಳ ಸಮೂಹವೇ ಪ್ರತಿಬಿಂಬಿತವಾಗುತ್ತದೆ. ಯಾವ ಪ್ರಕಾರವೆಂದರೆ **'ಸಮಸ್ತೈಃ ಅನಂತಪರ್ಯಾಯೈಃ ಸಮಂ'** ತಮ್ಮ ಸಮಸ್ತ ಅನಂತ ಪರ್ಯಾಯಗಳು ಸಹಿತ ಪ್ರತಿಬಿಂಬಿತವಾಗುತ್ತವೆ.

**ಭಾವಾರ್ಥ ಃ-** ಶುದ್ಧ ಚೇತನಾ ಪ್ರಕಾಶದಲ್ಲಿ ಎಷ್ಟು ಪದಾರ್ಥಗಳಿವೆ ಅವೆಲ್ಲವೂ ತಮ್ಮ ಆಕಾರ ಸಹಿತ ಪ್ರತಿಭಾಸಮಾನವಾಗುವಂಥದೇ ಒಂದು ಮಹಿಮೆಯಿದೆ. ಯಾವ ಪ್ರಕಾರವೆಂದರೆ 'ದರ್ಪಣತಲ ಇವ' ಯಾವ ಪ್ರಕಾರ ಕನ್ನಡಿಯ ಮೇಲಿನ ಭಾಗದಲ್ಲಿ ಘಟ-ಪಟ ಮೊದಲಾದವು ಪ್ರತಿಬಿಂಬಿತವಾಗುತ್ತವೆ ಹಾಗೆ. ಇಲ್ಲಿ ಕೊಟ್ಟಿರುವ ಕನ್ನಡಿಯ ದೃಷ್ಟಾಂತದಿಂದ ತಿಳಿದುಕೊಳ್ಳುವ ಪ್ರಯೋಜನವೇನೆಂದರೆ ನಾನು ಈ ಪದಾರ್ಥಗಳನ್ನು ಪ್ರತಿಬಿಂಬಿತ ಮಾಡುತ್ತೇನೆಂಬ ಇಚ್ಛೆಯು ಕನ್ನಡಿಗೆ ಇರುವುದಿಲ್ಲ. ಯಾವ ಪ್ರಕಾರ ಲೋಹದ ಸೂಜಿಯು ಲೋಹಚುಂಬಕದ ಹತ್ತಿರ ತಾನೇ ಬರುತ್ತದೆ ಹಾಗೆ ಕನ್ನಡಿಯು ತನ್ನ ಸ್ವರೂಪ ಬಿಟ್ಟುಕೊಟ್ಟು ಪದಾರ್ಥಗಳನ್ನು ಪ್ರತಿಬಿಂಬಿತ ಮಾಡುವ ಸಲುವಾಗಿ ಅವುಗಳ ಹತ್ತಿರ ಹೋಗುವುದಿಲ್ಲ ಮತ್ತು ಆ ಪದಾರ್ಥಗಳು ಕೂಡ ತಮ್ಮ ಸ್ವರೂಪವನ್ನು ಬಿಟ್ಟು ಕೊಟ್ಟು ಆ ಕನ್ನಡಿಯಲ್ಲಿ ಪ್ರವೇಶ ಮಾಡುವುದಿಲ್ಲ. ಹೇಗೆ ಯಾವನೋ ಓರ್ವ ಪುರುಷನು ನಮ್ಮ ಈ ಕಾರ್ಯವನ್ನು ನೀನು ಮಾಡಲೇಬೇಕೆಂದು ಬೇರೊಬ್ಬ ಪುರುಷನಿಗೆ ಹೇಳುತ್ತಾನೆ ಹಾಗೆ ಆ ಪದಾರ್ಥಗಳು ತಮ್ಮನ್ನು ಪ್ರತಿಬಿಂಬಿತ ಮಾಡಿಸುವ ಸಲುವಾಗಿ ಕನ್ನಡಿಗೆ ಪ್ರಾರ್ಥನೆಯನ್ನೂ ಮಾಡುವುದಿಲ್ಲ ಹೇಗೆ ಆ ಪದಾರ್ಥಗಳ ಆಕಾರವಿರುತ್ತದೆ ಹಾಗೆಯೇ ಆಕಾರರೂಪಗಳು ಆ ದರ್ಪಣದಲ್ಲಿ ಪ್ರತಿಬಿಂಬಿತವಾಗುವಂಥ ಸಹಜ ಸಂಬಂಧವಿರುತ್ತದೆ. ಪ್ರತಿಬಿಂಬಿತವಾದ ಮೇಲೆ ಕನ್ನಡಿಯು ಈ ಪದಾರ್ಥಗಳು ನನ್ನ ಸಲುವಾಗಿ ಒಳ್ಳೆಯವಿವೆ, ಉಪಕಾರಿಯಿವೆ, ರಾಗಮಾಡಲು ಯೋಗ್ಯವಿವೆ ಅಥವಾ ಇವು ಒಳ್ಳೆಯವಿಲ್ಲ ಮತ್ತು ದ್ವೇಷ ಮಾಡಲು ಯೋಗ್ಯವಿವೆಯೆಂದು ಮನ್ನಿಸುವುದಿಲ್ಲ; ಆದರೆ ಅದಂತೂ ಸಮಸ್ತ ಪದಾರ್ಥಗಳ ಕುರಿತು ಸಮಾನಭಾವದಿಂದ ಪ್ರವರ್ತನೆ ಮಾಡುತ್ತದೆ. ಯಾವ ಪ್ರಕಾರ ಕನ್ನಡಿಯಲ್ಲಿ ಅದೆಷ್ಟೋ ಘಟಪಟ ಮೊದಲಾದ ಪದಾರ್ಥಗಳು ಪ್ರತಿಬಿಂಬಿತವಾಗುತ್ತವೆ ಅದೇ ಪ್ರಕಾರ ಜ್ಞಾನರೂಪವಿರುವ ಕನ್ನಡಿಯಲ್ಲಿ ಸಮಸ್ತ ಜೀವ ಮೊದಲಾದ ಪದಾರ್ಥಗಳು ಪ್ರತಿಬಿಂಬಿತವಾಗುತ್ತವೆ. ಜ್ಞಾನದಲ್ಲಿ ಪ್ರತಿಬಿಂಬಿತವಾಗದಂಥ ಯಾವುದೇ ದ್ರವ್ಯ ಅಥವಾ ಪರ್ಯಾಯವೇ ಇಲ್ಲ. ಇಂಥ ಶುದ್ಧ ಚೈತನ್ಯ ಪರಮ ಜ್ಯೋತಿಯ ಸರ್ವೋತ್ಕೃಷ್ಟ ಮಹಿಮೆಯು ಸ್ತುತಿ ಮಾಡಲು ಯೋಗ್ಯವಿದೆ.

**ಪ್ರಶ್ನೆ ಃ-** ಇಲ್ಲಿ ಯಾವುದೇ ಪದಾರ್ಥದ ಹೆಸರು ಹೇಳದೆ ಕೇವಲ ಗುಣದ ಸ್ತವನ ಮಾಡಿರುವುದರ ಕಾರಣವೇನು ? ಮೊದಲು ಪದಾರ್ಥದ ಹೆಸರು ಹೇಳಬೇಕಾಗುವುದು ಅನಂತರ ಗುಣದ ವರ್ಣನೆ ಮಾಡಬೇಕಲ್ಲವೇ?

**ಉತ್ತರ ಃ-** ಇಲ್ಲಿ ಆಚಾರ್ಯರು ತಮ್ಮ ಪರೀಕ್ಷಾಪ್ರಧಾನತೆಯನ್ನು ಪ್ರಕಟಪಡಿಸಿದ್ದಾರೆ. ಭಕ್ತರಲ್ಲಿ ಆಜ್ಞಾಪ್ರಧಾನ ಮತ್ತು ಪರೀಕ್ಷಾಪ್ರಧಾನವೆಂದು ಎರಡು ಪ್ರಕಾರಗಳಿದ್ದು ಅವರಲ್ಲಿ ಯಾರು ಪರಂಪರೆಯ ಮಾರ್ಗದಿಂದ ನಡೆದುಕೊಂಡು ಬಂದ ಬೇಕಾದಂಥ ದೇವ-ಗುರುಗಳ ಉಪದೇಶವನ್ನು ಪ್ರಮಾಣವೆಂದು ಸ್ವೀಕರಿಸಿ ಅವರಲ್ಲಿ ವಿನಯಾದಿಗಳ ಕ್ರಿಯಾರೂಪದಿಂದ ಪ್ರವರ್ತಿಸುವವರನ್ನು ಆಜ್ಞಾಪ್ರಧಾನರೆಂದು ಹೇಳುತ್ತಾರೆ. ಮತ್ತು ಯಾರು ಮೊದಲು ತಮ್ಮ

ಸಮ್ಯಕ್ ಜ್ಞಾನದಿಂದ ಸ್ತುತಿ ಮಾಡಲು ಯೋಗ್ಯ ಗುಣಗಳ ನಿಶ್ಚಯ ಮಾಡುತ್ತಾರೆ ಅನಂತರ ಯಾರಲ್ಲಿ ಆ ಗುಣಗಳಿರುತ್ತವೆ ಅವರ ಕುರಿತು ವಿನಯಾದಿಗಳ ಕ್ರಿಯಾ ರೂಪದಿಂದ ಪ್ರವರ್ತನೆ ಮಾಡುತ್ತಾರೆ. ಅವರನ್ನು ಪರೀಕ್ಷಾಪ್ರಧಾನರೆಂದು ಹೇಳುತ್ತಾರೆ. ಏಕೆಂದರೆ ಯಾವುದೇ ಪದವಿ, ವೇಷ ಅಥವಾ ಸ್ಥಾನಗಳು ಪೂಜ್ಯವಿಲ್ಲ, ಆದರೆ ಗುಣವು ಪೂಜ್ಯವಿರುವುದರಿಂದ ಇಲ್ಲಿ ಶುದ್ಧ ಚೇತನಾಪ್ರಕಾಶರೂಪ ಗುಣವು ಸ್ತುತಿಮಾಡಲು ಯೋಗ್ಯವಿದೆಯೆಂದು ಆಚಾರ್ಯದೇವರು ನಿಶ್ಚಯ ಮಾಡಿದ್ದಾರೆ. ಯಾವುದರಲ್ಲಿ ಇಂಥ ಗುಣವಿದೆ ಅದು ಸ್ವಾಭಾವಿಕವಾಗಿಯೇ ಸ್ತುತಿ ಮಾಡಲು ಯೋಗ್ಯವಾಯಿತು. ಕಾರಣವೇನೆಂದರೆ ಯಾವುದು ಗುಣವಿದೆ ಅದು ದ್ರವ್ಯದ ಆಶ್ರಯದಿಂದ ಇದೆ, ದ್ರವ್ಯದಿಂದ ಭಿನ್ನವಿಲ್ಲವೆಂದು ವಿಚಾರಪೂರ್ವಕ ನಿಶ್ಚಯ ಮಾಡಿದರೆ ಇಂಥ ಗುಣವು ಪ್ರಕಟರೂಪದಿಂದ ಅರಹಂತ ಮತ್ತು ಸಿದ್ಧರಲ್ಲಿ ಇರುತ್ತದೆ. ಈ ಪ್ರಕಾರ ತಮ್ಮ ಇಷ್ಟದೇವರ ಸ್ತವನ ಮಾಡಲಾಯಿತು.

ಈಗ ಇಷ್ಟ ಆಗಮದ ಸ್ತವನ ಮಾಡುತ್ತಾರೆ -

**ಪರಮಾಗಮಸ್ಯ ಜೀವಂ* ನಿಷಿದ್ಧಜಾತ್ಯಂಧಸಿಂಧುರ ವಿಧಾನಮ್ ।**
**ಸಕಲನಯ ವಿಲಸಿತಾನಾಂ ವಿರೋಧಮಥನಂ ನಮಾಮ್ಯನೇಕಾಂತಮ್ ॥೨॥**

**ಅನ್ವಯಾರ್ಥ :- [ನಿಷಿದ್ಧಜಾತ್ಯಂಧ ಸಿಂಧುರವಿಧಾನಮ್]** ಹುಟ್ಟು ಕುರುಡರಿರುವಂಥ ಪುರುಷರ ಹಸ್ತಿ-ವಿಧಾನದ ನಿಷೇಧ ಮಾಡುವಂಥ, **(ಸಕಲನಯ ವಿಲಸಿತಾನಾಮ್]** ಸಮಸ್ತ ನಯಗಳಿಂದ ಪ್ರಕಾಶಿತವಾದ ವಸ್ತು ಸ್ವಭಾವದ **[ವಿರೋಧಮಥನಂ]** ವಿರೋಧವನ್ನು ದೂರ ಮಾಡುವಂಥ **[ಪರಮಾಗಮಸ್ಯ]** ಉತ್ಕೃಷ್ಟ ಜೈನ ಸಿದ್ಧಾಂತದ **[ಜೀವಂ]** ಜೀವಭೂತವಾದ **[ಅನೇಕಾಂತಮ್]** ಅನೇಕಾಂತವನ್ನು - ಒಂದು ಪಕ್ಷ ರಹಿತವಾದ ಸ್ಯಾದ್ವಾದವನ್ನು ನಾನು ಎಂದರೆ ಅಮೃತಚಂದ್ರಸೂರಿಯು ನಮಸ್ಕರಿಸುತ್ತೇನೆ.

**ಟೀಕೆ :- 'ಅಹಂ ಅನೇಕಾಂತಂ ನಮಾಮಿ'** - ಗ್ರಂಥಕರ್ತೃವಾದ ನಾನು ಅನೇಕಾಂತ ಎಂದರೆ ಒಂದು ಪಕ್ಷದಿಂದ ರಹಿತವಾದ ಸ್ಯಾದ್ವಾದವನ್ನು ನಮಸ್ಕರಿಸುತ್ತೇನೆ. ಜಿನಾಗಮಕ್ಕೆ ನಮಸ್ಕಾರ ಮಾಡಬೇಕಾಗಿತ್ತು ಆದರೆ ಇಲ್ಲಿ ಅದಕ್ಕೆ ಪ್ರತಿಯಾಗಿ ಸ್ಯಾದ್ವಾದಕ್ಕೆ ನಮಸ್ಕಾರ ಮಾಡಲಾಗಿದೆ. ಇದರ ಕಾರಣವೇನೆಂದು ಕೆಲವರಿಗೆ ಪ್ರಶ್ನೆ ಉತ್ಪನ್ನವಾಗಬಹುದು. ಅದರ ಪರಿಹಾರವಾಗಿ ಹೀಗೆ ಹೇಳುತ್ತಾರೆ - ನಾವು ಯಾವ ಸ್ಯಾದ್ವಾದಕ್ಕೆ ನಮಸ್ಕಾರ ಮಾಡಿದ್ದೇವೆ ಅದು **'ಪರಮಾಗಮಸ್ಯ ಜೀವಂ'** ಉತ್ಕೃಷ್ಟ ಜೈನ ಸಿದ್ಧಾಂತದ ಜೀವಭೂತವಿದೆ.

**ಭಾವಾರ್ಥ :-** ಯಾವ ಪ್ರಕಾರ ಜೀವ ಸಹಿತವಿರುವ ಶರೀರವು ಕಾರ್ಯಕಾರಿಯಿದೆ, ಜೀವ ರಹಿತವಾದ ಮೃತಕ ಶರೀರವು ಯಾವುದೇ ಕೆಲಸಕ್ಕೆ ಬರುವುದಿಲ್ಲ ; ಅದೇ ಪ್ರಕಾರ ಜೈನ ಸಿದ್ಧಾಂತವು ಕೂಡ ವಚನಾತ್ಮಕವಿದೆ, ವಚನವು ಕ್ರಮವರ್ತಿಯಿದೆ. ಅದು ಯಾವ ಕಥನ ಮಾಡುತ್ತದೆ ಅದನ್ನು ಒಂದು ನಯದ ಮುಖ್ಯತೆಯಿಂದ ಮಾಡುತ್ತದೆ, ಆದರೆ ಜೈನ ಸಿದ್ಧಾಂತವು ಎಲ್ಲೆಡೆಗೆ ಸ್ಯಾದ್ವಾದದಿಂದ ವ್ಯಾಪ್ತವಿದೆ. ಎಲ್ಲಿ ಒಂದು ನಯದ ಮುಖ್ಯತೆಯಿರುತ್ತದೆ ಅಲ್ಲಿ ಇನ್ನೊಂದು ನಯವು ಸಾಪೇಕ್ಷವಿರುತ್ತದೆ. ಅದರಿಂದಾಗಿ ಜೈನ ಸಿದ್ಧಾಂತವು ಈ ಜೀವನಿಗೆ ಕಾರ್ಯಕಾರಿಯಿದೆ; ಅನ್ಯ ಮತದ ಸಿದ್ಧಾಂತವು ಒಂದು ಪಕ್ಷದಿಂದ ದೂಷಿತವಿದೆ, ಅದು ಸ್ಯಾದ್ವಾದದಿಂದ ರಹಿತವಿರುವುದರಿಂದ ಕಾರ್ಯಕಾರಿಯಾಗಿಲ್ಲ. ಯಾರು ಜೈನ ಸಿದ್ಧಾಂತಗಳ ಉಪದೇಶವನ್ನು ಕೂಡ ತಮ್ಮ ಅಜ್ಞಾನದಿಂದ ಸ್ಯಾದ್ವಾದ ರಹಿತವಾಗಿ ಶ್ರದ್ಧೆ ಮಾಡುತ್ತಾರೆ ಅವರಿಗೆ ವಿಪರೀತವಾದ ಫಲವು ದೊರಕುತ್ತದೆ. ಆದುದರಿಂದ ಸ್ಯಾದ್ವಾದವು ಪರಮಾಗಮದ ಜೀವಭೂತವಿದೆ. ನಾನು ಅದಕ್ಕೆ ನಮಸ್ಕಾರ ಮಾಡುತ್ತೇನೆ.

---

* ಪಾಠಾಂತರ ಬೀಜಂ

ಮತ್ತೆ ಆ ಸ್ಯಾದ್ವಾದವು **'ನಿಷಿದ್ಧಜಾತ್ಯಂಧ ಸಿಂಧುರವಿಧಾನಮ್'** ಹುಟ್ಟು ಕುರುಡರಿರುವ ಪುರುಷರ ಹಸ್ತಿ-ವಿಧಾನವನ್ನು ದೂರ ಮಾಡಿ ಬಿಟ್ಟಿರುವಂಥದ್ದಿದೆ. ಯಾವ ಪ್ರಕಾರ ಅನೇಕ ಜನ್ಮಾಂಧ ಪುರುಷರು ಸೇರಿಕೊಂಡು, ಅವರು ಒಂದು ಆನೆಯ ಅನೇಕ ಅಂಗಗಳನ್ನು ತಮ್ಮ ಸ್ಪರ್ಶನೇಂದ್ರಿಯದಿಂದ ಬೇರೆ ಬೇರೆಯಾಗಿ ತಿಳಿಯುತ್ತಾರೆ. ಕಣ್ಣುಗಳಿಲ್ಲದೆ ಆನೆಯ ಪೂರ್ಣ ಸರ್ವಾಂಗವನ್ನು ತಿಳಿಯದಿರುವುದರಿಂದ ಆನೆಯ ಸ್ವರೂಪವನ್ನು ಅನೇಕ ಪ್ರಕಾರದಿಂದ ಹೇಳಿಕೊಂಡು (ಆನೆಯ ಒಂದು ಅಂಗವನ್ನೇ ಸರ್ವಾಂಗವೆಂದು ಮನ್ನಿಸಿಕೊಂಡು) ಪರಸ್ಪರರಲ್ಲಿ ವಾದ ಮಾಡತೊಡಗುವರು. ಆಗ ದೃಷ್ಟಿಯುಳ್ಳ ಓರ್ವ ಪುರುಷನು ಆನೆಯ ಯಥಾರ್ಥ ನಿರ್ಣಯ ಮಾಡಿ ಅವರ ಭಿನ್ನ ಭಿನ್ನ ಕಲ್ಪನೆಗಳನ್ನು ದೂರ ಮಾಡಿ ಬಿಡುತ್ತಾನೆ. ಅದೇ ಪ್ರಕಾರ ಅಜ್ಞಾನಿಯು ಒಂದು ವಸ್ತುವಿನ ಅನೇಕ ಅಂಗಗಳನ್ನು ತನ್ನ ಬುದ್ಧಿಯಿಂದ ಬೇರೆ ಬೇರೆ ಅನ್ಯ ಅನ್ಯ ರೀತಿಯಿಂದ ನಿಶ್ಚಯ ಮಾಡುತ್ತಾನೆ. ಸಮ್ಯಕ್ ಜ್ಞಾನವಿಲ್ಲದೆ ಸರ್ವಾಂಗ (ಸಂಪೂರ್ಣ) ವಸ್ತುವನ್ನು ತಿಳಿಯದಿರುವುದರಿಂದ ವಸ್ತುವನ್ನು ಏಕಾಂತರೂಪವಾಗಿ ಮನ್ನಿಸಿ ಪರಸ್ಪರ ವಾದ ಮಾಡುತ್ತಾನೆ. ಆಗ ಸ್ಯಾದ್ವಾದ ವಿದ್ಯೆಯ ಬಲದಿಂದ ಸಮ್ಯಕ್ಜ್ಞಾನಿಯು ಯಥಾರ್ಥರೂಪದಿಂದ ವಸ್ತುವಿನ ನಿರ್ಣಯ ಮಾಡಿ ಅವನ ಭಿನ್ನ ಭಿನ್ನ ಕಲ್ಪನೆಯನ್ನು ದೂರ ಮಾಡಿ ಬಿಡುತ್ತಾನೆ.

ಸಾಂಖ್ಯ ಮತದವರು ವಸ್ತುವನ್ನು ನಿತ್ಯವೆಂದೇ ಮನ್ನಿಸುತ್ತಾರೆ, ಬೌದ್ಧ ಮತದವರು ಕ್ಷಣಿಕವೆಂದೇ ಮನ್ನಿಸುತ್ತಾರೆ. ಆದರೆ ವಸ್ತುವು ಸರ್ವಥಾ ನಿತ್ಯವೇ ಆಗಿದ್ದರೆ ಅನೇಕ ಅವಸ್ಥೆಗಳ ರೂಪವಾದ ಬದಲಾವಣೆಯು ಹೇಗಾಗುವ ಸಾಧ್ಯತೆಯಿದೆ ? ಆ ವಸ್ತುವನ್ನು ಸರ್ವಥಾ ಕ್ಷಣಿಕವೆಂದೇ ಮನ್ನಿಸಿಕೊಂಡರೆ 'ಯಾವ ವಸ್ತುವನ್ನು ಮೊದಲು ನೋಡಿತ್ತು ಅದು ಇದೇ ಇದೆ'ಯೆಂಬ ಪ್ರತ್ಯಭಿಜ್ಞಾನವು ಹೇಗಾಗುವ ಸಾಧ್ಯತೆಯಿದೆ ? ಆದುದರಿಂದ ಕಥಂಚಿತ್‌ದ್ರವ್ಯದ ಅಪೇಕ್ಷೆಯಿಂದ ವಸ್ತುವು ನಿತ್ಯವಿದೆ ಮತ್ತು ಪರ್ಯಾಯದ ಅಪೇಕ್ಷೆಯಿಂದ ಕ್ಷಣಿಕವಿದೆಯೆಂದು ಸ್ಯಾದ್ವಾದಿಗಳು ಹೇಳುತ್ತಾರೆ. ಈ ಪ್ರಕಾರ ಯಾವಾಗ ಸ್ಯಾದ್ವಾದದಿಂದ ಸರ್ವಾಂಗ ವಸ್ತುವಿನ ನಿರ್ಣಯ ಮಾಡಲಾಗುತ್ತದೆ ಆಗ ಏಕಾಂತ ಶ್ರದ್ಧೆಯ ನಿಷೇಧವಾಗಿ ಹೋಗುತ್ತದೆ. ಪುನಃ ಆ ಸ್ಯಾದ್ವಾದವು **'ಸಕಲ ನಯ ವಿಲಸಿತಾನಾಂ ವಿರೋಧಮಥನಂ'** ಸಕಲ ನಯಗಳಿಂದ ಪ್ರಕಾಶಿತವಾದ ಯಾವ ವಸ್ತುವಿನ ಸ್ವಭಾವವಿದೆ ಅದರ ವಿರೋಧವನ್ನು ದೂರ ಮಾಡುತ್ತದೆ.

**ಭಾವಾರ್ಥ :-** ನಯ ವಿವಕ್ಷೆಯಿಂದ ವಸ್ತುವಿನಲ್ಲಿ ಅನೇಕ ಸ್ವಭಾವಗಳಿವೆ ಮತ್ತು ಅವುಗಳಲ್ಲಿ ಪರಸ್ಪರ ವಿರೋಧವಿದೆ. ಹೇಗೆಂದರೆ ಅಸ್ತಿ ಮತ್ತು ನಾಸ್ತಿಯಲ್ಲಿ ಪ್ರತಿಪಕ್ಷೀತನವಿದೆ, ಆದರೆ ಸ್ಯಾದ್ವಾದದಿಂದ ಸ್ಥಾಪನೆ ಮಾಡಿದರೆ ಎಲ್ಲ ವಿರೋಧವು ದೂರವಾಗಿ ಬಿಡುತ್ತದೆ. ಹೇಗೆಂದರೆ ಒಂದೇ ಪದಾರ್ಥವು ಕಥಂಚಿತ್ ಸ್ವಚತುಷ್ಟಯದ ಅಪೇಕ್ಷೆಯಿಂದ ಅಸ್ತಿರೂಪವಿದೆ, ಕಥಂಚಿತ್ ಪರಚತುಷ್ಟಯದ ಅಪೇಕ್ಷೆಯಿಂದ ನಾಸ್ತಿರೂಪವಿದೆ. ಕಥಂಚಿತ್ ಸಮುದಾಯದ ಅಪೇಕ್ಷೆಯಿಂದ ಏಕರೂಪವಿದೆ, ಕಥಂಚಿತ್ ಗುಣ ಪರ್ಯಾಯದ ಅಪೇಕ್ಷೆಯಿಂದ ಅನೇಕರೂಪವಿದೆ. ಕಥಂಚಿತ್ ಸಂಜ್ಞೆ, ಸಂಖ್ಯೆ, ಲಕ್ಷಣ ಮತ್ತು ಪ್ರಯೋಜನದ ಅಪೇಕ್ಷೆಯಿಂದ ಗುಣ-ಪರ್ಯಾಯ ಮೊದಲಾದವು ಅನೇಕ ರೂಪವಿವೆ - ಭೇದ ರೂಪವಿವೆ. ಕಥಂಚಿತ್ ಸತ್‌ದ ಅಪೇಕ್ಷೆಯಿಂದ ಅಭೇದ ರೂಪವಿದೆ. ಕಥಂಚಿತ್ ದ್ರವ್ಯ ಅಪೇಕ್ಷೆಯಿಂದ ನಿತ್ಯವಿದೆ, ಕಥಂಚಿತ್ ಪರ್ಯಾಯ ಅಪೇಕ್ಷೆಯಿಂದ ಅನಿತ್ಯವಿದೆ. ಈ ಪ್ರಕಾರ ಸ್ಯಾದ್ವಾದವು ಸಮಸ್ತ ವಿರೋಧವನ್ನು ದೂರ ಮಾಡುತ್ತದೆ. ಸ್ಯಾತ್ ಎಂದರೆ ಕಥಂಚಿತ್ ನಯ ಅಪೇಕ್ಷೆಯಿಂದ ವಾದ ಎಂದರೆ ವಸ್ತು ಸ್ವಭಾವದ ಕಥನ ಇದನ್ನು ಸ್ಯಾದ್ವಾದವೆಂದು ಹೇಳುತ್ತಾರೆ. ಇದಕ್ಕೇನೇ ನಮಸ್ಕಾರ ಮಾಡಲಾಗಿದೆ.

ಈಗ ಆಚಾರ್ಯರು ಗ್ರಂಥ ರಚನೆ ಮಾಡುವ ಪ್ರತಿಜ್ಞೆ ಮಾಡುತ್ತಾರೆ, -

**ಲೋಕತ್ರಯೈಕನೇತ್ರಂ ನಿರೂಪ್ಯ ಪರಮಾಗಮಂ ಪ್ರಯತ್ನೇನ ।**
**ಅಸ್ಮಾಭಿರುಪೋದ್ಧ್ರಿಯತೇ ವಿದುಷಾಂ ಪುರುಷಾರ್ಥಸಿದ್ಧ್ಯುಪಾಯೋಽಯಮ್ ॥೩॥**

**ಅನ್ವಯಾರ್ಥ :- [ಲೋಕತ್ರಯೈಕನೇತ್ರಂ]** ಮೂರು ಲೋಕ ಸಂಬಂಧಿಯಾದ ಪದಾರ್ಥಗಳನ್ನು ಪ್ರಕಾಶಿತ ಮಾಡುವಲ್ಲಿ ಅದ್ವಿತೀಯ ನೇತ್ರವಾದ **[ಪರಮಾಗಮಂ]** ಉತ್ಕೃಷ್ಟ ಜೈನಾಗಮವನ್ನು **[ಪ್ರಯತ್ನೇನ]** ಅನೇಕ ಪ್ರಕಾರದ ಉಪಾಯಗಳಿಂದ **(ನಿರೂಪ್ಯ)** ತಿಳಿದುಕೊಂಡು ಎಂದರೆ ಪರಂಪರಾಗತವಾದ ಜೈನ ಸಿದ್ಧಾಂತಗಳ ನಿರೂಪಣೆಯೊಡನೆ **[ಅಸ್ಮಾಭಿಃ]** ನಮ್ಮ ಮೂಲಕ **[ವಿದುಷಾಂ]** ವಿದ್ವಾಂಸರುಗಳ ಸಲುವಾಗಿ **[ಅಯಂ]** ಈ **[ಪುರುಷಾರ್ಥಸಿದ್ಧ್ಯುಪಾಯಃ]** ಪುರುಷಾರ್ಥಸಿದ್ಧಿಉಪಾಯವೆಂಬ ಹೆಸರಿನ ಗ್ರಂಥವನ್ನು **[ಉಪೋದ್ಧ್ರಿಯತೇ]** ಉದ್ಧಾರ ಮಾಡಲಾಗುತ್ತದೆ.

**ಟೀಕೆ :- 'ಅಸ್ಮಾಭಿಃ ವಿದುಷಾಂ ಅಯಂ ಪುರುಷಾರ್ಥಸಿದ್ಧ್ಯುಪಾಯಃ ಉಪೋದ್ಧ್ರಿಯತೇ'** ಗ್ರಂಥಕರ್ತೃವಾದ ನಾನು ಜ್ಞಾನೀ ಜೀವರುಗಳ ಸಲುವಾಗಿ ಈ ಪುರುಷಾರ್ಥಸಿದ್ಧಿ ಉಪಾಯವೆಂಬ ಹೆಸರಿನ ಗ್ರಂಥವನ್ನು ಅಥವಾ ಚೈತನ್ಯ ಪುರುಷನ ಪ್ರಯೋಜನ ಸಿದ್ಧ ಮಾಡುವ ಉಪಾಯವನ್ನು ಪ್ರಕಟ ಮಾಡುತ್ತೇನೆ, **'ಕಿಂ ಕೃತ್ವಾ'** ಏನು ಮಾಡಿ ಎಂದರೆ **'ಪ್ರಯತ್ನೇನ'** - ಅನೇಕ ಪ್ರಕಾರದಿಂದ ಉದ್ಯಮ ಮಾಡಿ ಸಾವಧಾನಪೂರ್ವಕವಾಗಿ **'ಪರಮಾಗಮಂ ನಿರೂಪ್ಯ'** ಪರಂಪರೆಯಿಂದ ಜೈನ ಸಿದ್ಧಾಂತದ ವಿಚಾರ ಮಾಡಿ ಬರೆಯುತ್ತೇನೆ.

**ಭಾವಾರ್ಥ :-** ಯಾವ ಪ್ರಕಾರ ಕೇವಲೀ, ಶ್ರುತಕೇವಲೀ ಮತ್ತು ಆಚಾರ್ಯರುಗಳ ಉಪದೇಶದ ಪರಂಪರೆಯಿದೆ ಅದರ ವಿಚಾರ ಮಾಡಿ ನಾನು ಉಪದೇಶಕೊಡುತ್ತೇನೆ. ನನ್ನ ಬುದ್ಧಿಯಿಂದ ಕಾಲ್ಪನಿಕ ರಚನೆಯನ್ನು ಮಾಡುವುದಿಲ್ಲ. ಆ ಪರಮಾಗಮವು **'ಲೋಕತ್ರಯೈಕನೇತ್ರಂ'** ಮೂರು ಲೋಕದಲ್ಲಿ ಮೂರು ಲೋಕ ಸಂಬಂಧಿಯಾದ ಪದಾರ್ಥಗಳನ್ನು ತೋರಿಸಿಕೊಡುವ ಸಲುವಾಗಿ ಅದ್ವಿತೀಯ ನೇತ್ರವಿದೆ.

ಈ ಗ್ರಂಥದ ಪ್ರಾರಂಭದಲ್ಲಿ ವಕ್ತಾ, ಶ್ರೋತಾ ಮತ್ತು ಗ್ರಂಥದ ವರ್ಣನೆ ಮಾಡಬೇಕಾಗುವುದೆಂಬುದು ಪರಂಪರೆಯಿದೆ. ಆದುದರಿಂದಲೇ ಮೊದಲು ವಕ್ತಾರನ ಲಕ್ಷಣವನ್ನು ಹೇಳುತ್ತಾರೆ, -

**ಮುಖ್ಯೋಪಚಾರ ವಿವರಣ ನಿರಸ್ತದುಸ್ತರವಿನೇಯ ದುರ್ಬೋಧಾಃ ।**
**ವ್ಯವಹಾರ-ನಿಶ್ಚಯಜ್ಞಾಃ ಪ್ರವರ್ತಯಂತೇ ಜಗತಿ ತೀರ್ಥಮ್ ॥೪॥**

**ಅನ್ವಯಾರ್ಥ :- [ಮುಖ್ಯೋಪಚಾರ ವಿವರಣ ನಿರಸ್ತ ದುಸ್ತರ ವಿನೇಯ ದುರ್ಬೋಧಾಃ]** ಮುಖ್ಯ ಮತ್ತು ಉಪಚಾರ ಕಥನದ ವಿವೇಚನೆಯಿಂದ ಪ್ರಕಟರೂಪವಾಗಿ ಶಿಷ್ಯರುಗಳ ದುರ್ನಿವಾರವಾದ ಅಜ್ಞಾನ ಭಾವವನ್ನು ಯಾರು ನಷ್ಟಮಾಡಿ ಬಿಟ್ಟಿದ್ದಾರೆ ಮತ್ತು **[ವ್ಯವಹಾರ-ನಿಶ್ಚಯಜ್ಞಾಃ]** ಆ ವ್ಯವಹಾರನಯ ಹಾಗೂ ನಿಶ್ಚಯನಯದ ಜ್ಞಾತಾ ಇರುವಂಥ ಆಚಾರ್ಯರು **[ಜಗತಿ]** ಜಗತ್ತಿನಲ್ಲಿ **[ತೀರ್ಥಂ]** ಧರ್ಮತೀರ್ಥದ **[ಪ್ರವರ್ತಯಂತೇ]** ಪ್ರವರ್ತನೆ ಮಾಡುತ್ತಾರೆ.

**ಟೀಕೆ :- 'ವ್ಯವಹಾರ ನಿಶ್ಚಯಜ್ಞಾಃ ಜಗತಿ ತೀರ್ಥಂ ಪ್ರವರ್ತಯಂತೇ'** ವ್ಯವಹಾರ ಮತ್ತು ನಿಶ್ಚಯವನ್ನು ತಿಳಿದುಕೊಂಡಿರುವಂಥ ಆಚಾರ್ಯರು ಈ ಲೋಕದಲ್ಲಿ ಧರ್ಮ ತೀರ್ಥದ ಪ್ರವರ್ತನೆ ಮಾಡಿಸುತ್ತಾರೆ. ಆ ಆಚಾರ್ಯರು **'ಮುಖ್ಯೋಪಚಾರ ವಿವರಣ ನಿರಸ್ತದುಸ್ತರ ವಿನೇಯ ದುರ್ಬೋಧಾಃ'** ಮುಖ್ಯ ಮತ್ತು ಉಪಚಾರ ಕಥನದಿಂದ ಶಿಷ್ಯರ ಅಪಾರವಾದ ಅಜ್ಞಾನ ಭಾವವನ್ನು ನಾಶಮಾಡುವಂಥವರಿದ್ದಾರೆ.

**ಭಾವಾರ್ಥ ಃ-** ಉಪದೇಶ ಕೊಡುವಂಥ ಆಚಾರ್ಯರುಗಳಲ್ಲಿ ಅನೇಕ ಗುಣಗಳು ಇರಬೇಕಾಗುವುದು. ಅದರಂತೆ ವ್ಯವಹಾರ ಮತ್ತು ನಿಶ್ಚಯದ ಜ್ಞಾನವು ಮುಖ್ಯರೂಪದಿಂದ ಇರಬೇಕಾಗುವುದು. ಏಕೆಂದರೆ ಜೀವರುಗಳಿಗೆ ಅನಾದಿಯಿಂದ ಅಜ್ಞಾನಭಾವವಿದೆ, ಅದು ಮುಖ್ಯ (ನಿಶ್ಚಯ) ಕಥನ ಮತ್ತು ಉಪಚಾರ (ವ್ಯವಹಾರ) ಕಥನದ ಜ್ಞಾನವಾಗುವುದರಿಂದ ದೂರವಾಗುತ್ತದೆ. ಅಲ್ಲಿ ಮುಖ್ಯ ಕಥನವಂತೂ ನಿಶ್ಚಯನಯದ ಆಧೀನವಿದೆ. ಅದನ್ನೇ ಹೇಳುತ್ತಾರೆ. **'ಸ್ವಾಶ್ರಿತೋ ನಿಶ್ಚಯಃ'** ಯಾವುದು ತನ್ನದೇ ಆಶ್ರಯದಿಂದ ಆಗುತ್ತದೆ. ಅದನ್ನು ನಿಶ್ಚಯವೆಂದು ಹೇಳುತ್ತಾರೆ. ಯಾವ ದ್ರವ್ಯದ ಅಸ್ತಿತ್ವದಲ್ಲಿ ಯಾವ ಭಾವವು ಕಂಡು ಬರುತ್ತದೆ ಆ ದ್ರವ್ಯದಲ್ಲಿ ಅವುಗಳ ಸ್ಥಾಪನೆಯನ್ನೇ ಮಾಡುವುದು, ಮತ್ತು ಪರಮಾಣು ಮಾತ್ರ ಕೂಡ ಅನ್ಯಕಲ್ಪನೆ ಮಾಡದಿರುವುದರ ಹೆಸರು ಸ್ವಾಶ್ರಿತವಿದೆ. ಅದರ ಯಾವ ಕಥನವಿದೆ ಅದನ್ನೇ ಮುಖ್ಯ ಕಥನವೆಂದು ಹೇಳುತ್ತಾರೆ. **ಇದನ್ನು ಎಂದರೆ ಮುಖ್ಯ-ನಿಶ್ಚಯವನ್ನು ತಿಳಿದುಕೊಳ್ಳುವುದರಿಂದ ಅನಾದಿ ಶರೀರ ಮೊದಲಾದ ಪರದ್ರವ್ಯಗಳಲ್ಲಿ ಏಕತ್ವ ಶ್ರದ್ಧೆಯ ರೂಪವಾದ ಅಜ್ಞಾನಭಾವದ ಅಭಾವವಾಗುತ್ತದೆ, ಭೇದವಿಜ್ಞಾನದ ಪ್ರಾಪ್ತಿಯಾಗುತ್ತದೆ, ಸಮಸ್ತ ಪರದ್ರವ್ಯಗಳಿಂದ ಭಿನ್ನವಾದ ತನ್ನ ಶುದ್ಧ ಚೈತನ್ಯ ಸ್ವರೂಪದ ಅನುಭವವಾಗುತ್ತದೆ. ಅಲ್ಲಿ ಪರಮಾನಂದ ದಶೆಯೊಳಗೆ ನಿಮಗ್ನವಾಗಿ ಕೇವಲದಶೆಯನ್ನು ಪಡೆಯುತ್ತದೆ. ಯಾವ ಅಜ್ಞಾನಿಗಳು ಇದನ್ನು ತಿಳಿದುಕೊಂಡಲ್ಲದೆ ಧರ್ಮದಲ್ಲಿ ಪ್ರವೃತ್ತಿ ಮಾಡುತ್ತಾರೆ ಅವರು ಶರೀರಾಶ್ರಿತವಾದ ಕ್ರಿಯಾಕಾಂಡವನ್ನು ಉಪಾದೇಯವೆಂದು ತಿಳಿದುಕೊಂಡು, ಸಂಸಾರದ ಕಾರಣವಾದ ಆ ಶುಭೋಪಯೋಗವನ್ನೇ ಮುಕ್ತಿಯ ಕಾರಣವೆಂದು ಮನ್ನಿಸಿ, ಸ್ವರೂಪದಿಂದ ಭ್ರಷ್ಟರಾಗುತ್ತ ಸಂಸಾರದಲ್ಲಿ ಪರಿಭ್ರಮಣ ಮಾಡುತ್ತಾರೆ. ಆದುದರಿಂದ ಮುಖ್ಯ (ನಿಶ್ಚಯ)ಕಥನದ ಜ್ಞಾನವು ಅವಶ್ಯವಾಗಿ ಇರಬೇಕಾಗುವುದು.** ಮತ್ತು ಅದು ನಿಶ್ಚಯನಯದ ಆಧೀನ ವಿರುವುದರಿಂದ ಉಪದೇಶ ಕೊಡುವಂಥವರು ನಿಶ್ಚಯನಯದ ಜ್ಞಾನಿಗಳಾಗಿರಬೇಕಾಗುವುದು. ಏಕೆಂದರೆ ತಾನೇ ತಿಳಿದುಕೊಂಡಿರದಿದ್ದರೆ ಶಿಷ್ಯರಿಗೆ ಹೇಗೆ ತಿಳಿಸಿಕೊಡುವ ಸಾಧ್ಯತೆಯಿದೆ ?

ಮತ್ತು **'ಪರಾಶ್ರಿತೋ ವ್ಯವಹಾರಃ' ಯಾವುದು ಪರದ್ರವ್ಯದ ಆಶ್ರಿತವಿದೆ ಅದನ್ನು ವ್ಯವಹಾರವೆಂದು ಹೇಳುತ್ತಾರೆ. ಕಿಂಚಿತ್ ಮಾತ್ರ ಕಾರಣ ಪಡೆದು ಅನ್ಯದ್ರವ್ಯದ ಭಾವವನ್ನು ಅನ್ಯ ದ್ರವ್ಯದಲ್ಲಿ ಸ್ಥಾಪನೆ ಮಾಡುವುದನ್ನು ಪರಾಶ್ರಿತವೆಂದು ಹೇಳುತ್ತಾರೆ.** ಅದರದೇ ಕಥನವನ್ನು ಉಪಚಾರ ಕಥನವೆಂದು ಹೇಳುತ್ತಾರೆ. ಇದನ್ನು ತಿಳಿದುಕೊಂಡು ಶರೀರ ಮೊದಲಾದವುಗಳ ಜತೆ ಸಂಬಂಧರೂಪದ ಸಂಸಾರ ದಶೆಯಿದೆ ಅದರ ಜ್ಞಾನ ಮಾಡಿಕೊಂಡು, ಸಂಸಾರದ ಕಾರಣವಾದ ಯಾವ ಆಸ್ರವ-ಬಂಧಗಳಿವೆ ಅವುಗಳ ಪರಿಚಯ ಮಾಡಿಕೊಂಡು, ಮುಕ್ತವಾಗುವ ಉಪಾಯವಾದ ಯಾವ ಸಂವರ-ನಿರ್ಜರೆಗಳಿವೆ ಅವುಗಳಲ್ಲಿ ಪ್ರವರ್ತನೆ ಮಾಡಬೇಕು. ಅಜ್ಞಾನಿಯು ಇದನ್ನು ತಿಳಿದುಕೊಳ್ಳದೆ ಶುದ್ಧೋಪಯೋಗಿಯಾಗುವ ಇಚ್ಛೆ ಮಾಡುತ್ತಾನೆ, ಅವನು ಮೊದಲೇ ವ್ಯವಹಾರ ಸಾಧನವನ್ನು ಬಿಟ್ಟುಕೊಟ್ಟು ಪಾಪಾಚರಣೆಯಲ್ಲಿ ಲೀನನಾಗಿ ನರಕ ಮೊದಲಾದವುಗಳ ದುಃಖ-ಸಂಕಟಗಳಲ್ಲಿ ಜಾರಿ ಬೀಳುತ್ತಾನೆ. ಆದುದರಿಂದ ಉಪಚಾರ ಕಥನದ ಜ್ಞಾನವು ಇರಬೇಕಾಗುವುದು. ಮತ್ತು ಅದು ವ್ಯವಹಾರನಯದ ಆಧೀನ ವಿರುವುದರಿಂದ ಉಪದೇಶ ಕೊಡುವಂಥವರಿಗೆ ವ್ಯವಹಾರದ ಜ್ಞಾನವು ಕೂಡ ಅವಶ್ಯವಾಗಿ ಇರಬೇಕಾಗುವುದು. ಈ ಪ್ರಕಾರ ಎರಡೂ ನಯಗಳ ಜ್ಞಾನವಿರುವಂಥ ಆಚಾರ್ಯರು ಧರ್ಮತೀರ್ಥದ ಪ್ರವರ್ತಕರಿರುತ್ತಾರೆ. ಅನ್ಯರು ಇಲ್ಲ.

ಆಚಾರ್ಯರು ಎರಡೂ ನಯಗಳ ಉಪದೇಶವನ್ನು ಯಾವ ಪ್ರಕಾರ ಕೊಡುತ್ತಾರೆಂಬುದನ್ನು ಈಗ ಹೇಳುತ್ತಾರೆ, -

**ನಿಶ್ಚಯಮಿಹ ಭೂತಾರ್ಥಂ ವ್ಯವಹಾರಂ ವರ್ಣಯಂತ್ಯಭೂತಾರ್ಥಮ್ ।**
**ಭೂತಾರ್ಥಬೋಧವಿಮುಖಃ ಪ್ರಾಯಃ ಸರ್ವೇಽಪಿ ಸಂಸಾರಃ ॥೫॥**

**ಅನ್ವಯಾರ್ಥ ಃ-** **[ಇಹ]** ಈ ಗ್ರಂಥದಲ್ಲಿ **[ನಿಶ್ಚಯಂ]** ನಿಶ್ಚಯನಯವನ್ನು **[ಭೂತಾರ್ಥಂ]** ಭೂತಾರ್ಥ ಮತ್ತು **[ವ್ಯವಹಾರಂ]** ವ್ಯವಹಾರನಯವನ್ನು **[ಅಭೂತಾರ್ಥಂ]** ಅಭೂತಾರ್ಥವೆಂದು **[ವರ್ಣಯಂತಿ]** ವರ್ಣನೆ ಮಾಡುತ್ತಾರೆ. **[ಪ್ರಾಯಃ]** ಪ್ರಾಯಶಃ **[ಭೂತಾರ್ಥಬೋಧವಿಮುಖಃ]** ಭೂತಾರ್ಥ ಎಂದರೆ ನಿಶ್ಚಯನಯದ ಜ್ಞಾನದಿಂದ ವಿರುದ್ಧವಾದ ಯಾವ ಅಭಿಪ್ರಾಯವಿದೆ ಅದು **[ಸರ್ವೇಽಪಿ]** ಎಲ್ಲವೂ **[ಸಂಸಾರಃ]** ಸಂಸಾರ ಸ್ವರೂಪವಿದೆ.

**ಟೀಕೆ ಃ- 'ಇಹ ನಿಶ್ಚಯಂ ಭೂತಾರ್ಥಂ ವ್ಯವಹಾರಂ ಅಭೂತಾರ್ಥಂ ವರ್ಣಯಂತಿ'** - ಆಚಾರ್ಯರು ಇವೆರಡೂ ನಯಗಳಲ್ಲಿ ನಿಶ್ಚಯನಯವನ್ನು ಭೂತಾರ್ಥವೆಂದು ಹೇಳಿದ್ದಾರೆ ಮತ್ತು ವ್ಯವಹಾರನಯವನ್ನು ಅಭೂತಾರ್ಥವೆಂದು ಹೇಳಿದ್ದಾರೆ.

**ಭಾವಾರ್ಥ ಃ-** ಭೂತಾರ್ಥವು ಸತ್ಯಾರ್ಥದ ಹೆಸರು ಇದೆ. ಭೂತ ಎಂದರೆ ಪದಾರ್ಥದಲ್ಲಿ ಕಂಡು ಬರುವಂಥದು, ಮತ್ತು ಅರ್ಥ ಎಂದರೆ 'ಭಾವ'ವಿದೆ. ಅವನ್ನು ಯಾವುದು ಪ್ರಕಾಶಿತ ಮಾಡುತ್ತದೆ ಮತ್ತು ಬೇರೆ ಯಾವುದೇ ಪ್ರಕಾರದ ಕಲ್ಪನೆ ಮಾಡುವುದಿಲ್ಲ ಅದನ್ನು ಭೂತಾರ್ಥವೆಂದು ಹೇಳುತ್ತಾರೆ. ಹೇಗೆಂದರೆ ಸತ್ಯವಾದಿಯು ಸತ್ಯವನ್ನೇ ಹೇಳುತ್ತಾನೆ, ಕಲ್ಪನೆ ಮಾಡಿ ಏನನ್ನೂ ಹೇಳುವುದಿಲ್ಲ. ಅದನ್ನೇ ಇಲ್ಲಿ ತಿಳಿಸಿಕೊಡಲಾಗುತ್ತದೆ. ಅನಾದಿ ಕಾಲದಿಂದ ಜೀವ ಮತ್ತು ಪುದ್ಗಲದ ಏಕ ಕ್ಷೇತ್ರಾವಗಾಹ ಸಂಬಂಧವಿದ್ದರೂ ಮತ್ತು ಎರಡೂ ಕೂಡಿಕೊಂಡಿರುವಂತೆ ಕಂಡು ಬರುತ್ತಿದ್ದರೂ ಕೂಡ ನಿಶ್ಚಯನಯವು ಆತ್ಮ ದ್ರವ್ಯವನ್ನು ಶರೀರ ಮೊದಲಾದ ಪರದ್ರವ್ಯಗಳಿಂದ ಭಿನ್ನವಾಗಿಯೇ ಪ್ರಕಾಶಿತ ಮಾಡುತ್ತದೆ. ಇದೇ ಭಿನ್ನತೆಯು ಮುಕ್ತಾವಸ್ಥೆಯಲ್ಲಿ ಪ್ರಕಟವಾಗುತ್ತದೆ. ಆದುದರಿಂದ ನಿಶ್ಚಯನಯವು ಸತ್ಯಾರ್ಥವಿದೆ.

ಮತ್ತು ಅಸತ್ಯಾರ್ಥದ ಹೆಸರು ಅಭೂತಾರ್ಥವಿದೆ. ಅಭೂತ ಎಂದರೆ ಪದಾರ್ಥದಲ್ಲಿ ಕಂಡು ಬಾರದಂಥದು. ಮತ್ತು ಅರ್ಥ ಎಂದರೆ ಭಾವವಿದೆ. ಅವನ್ನು ಯಾವುದು ಅನೇಕ ಪ್ರಕಾರದ ಕಲ್ಪನೆ ಮಾಡಿ ಪ್ರಕಾಶಿತ ಮಾಡುತ್ತದೆ ಅದನ್ನು ಅಭೂತಾರ್ಥವೆಂದು ಹೇಳುತ್ತಾರೆ. ಹೇಗೆಂದರೆ ಯಾವನೋ ಓರ್ವ ಅಸತ್ಯವಾದಿ ಪುರುಷನು ಸ್ವಲ್ಪ ಕೂಡ ಕಾರಣದ ನಿಮಿತ್ತ ಪಡೆದು - ದೋಷವನ್ನು ಕಂಡು ಅನೇಕ ಕಲ್ಪನೆ ಮಾಡಿ ಅಸದೃಶ್ಯವನ್ನು ಕೂಡ ಸಾದೃಶ ಮಾಡಿ ತೋರಿಸುತ್ತಾನೆ, ಅದನ್ನೇ ತಿಳಿಸಿ ಹೇಳುತ್ತಾನೆ. ಹೇಗೆಂದರೆ ಜೀವ ಮತ್ತು ಪುದ್ಗಲದ ಸತ್ತಾ ಭಿನ್ನವಿದ್ದರೂ, ಸ್ವಭಾವವು ಭಿನ್ನವಿದ್ದರೂ, ಪ್ರದೇಶ ಭಿನ್ನವಿದ್ದರೂ ಕೂಡ ಏಕ ಕ್ಷೇತ್ರಾವಗಾಹ ಸಂಬಂಧದ ದೋಷ (ತಪ್ಪು) ಪಡೆದು 'ಆತ್ಮದ್ರವ್ಯವನ್ನು ಶರೀರ ಮೊದಲಾದ ಪರದ್ರವ್ಯಗಳಿಂದ ಏಕತ್ವರೂಪವಾಗಿ ಹೇಳುತ್ತಾನೆ. ಮುಕ್ತ ದಶೆಯಲ್ಲಿ ಪ್ರಕಟ ಭಿನ್ನತೆಯಾಗುತ್ತದೆ. ಆಗ ವ್ಯವಹಾರನಯವು ತಾನೇ ಭಿನ್ನ ಭಿನ್ನವಾಗಿ ಪ್ರಕಾಶಿತ ಮಾಡುವುದಕ್ಕೆ ಸಿದ್ಧವಾಗುತ್ತದೆ. ಆದುದರಿಂದ ವ್ಯವಹಾರನಯವು ಅಸತ್ಯಾರ್ಥವಿದೆ. **'ಪ್ರಾಯಃ ಭೂತಾರ್ಥ ಬೋಧ ವಿಮುಖಃ ಸರ್ವೋಽಪಿ ಸಂಸಾರಃ'** ವಿಶೇಷವಾಗಿ ಯಾವ ಸತ್ಯಾರ್ಥವಿದೆ - ನಿಶ್ಚಯನಯವಿದೆ ಅದರ ಪರಿಜ್ಞಾನದಿಂದ ವಿಪರೀತವಾದ ಯಾವ ಪರಿಣಾಮವಿದೆ - ಅಭಿಪ್ರಾಯವಿದೆ ಅದು ಸಮಸ್ತ ಸಂಸಾರದ ಸ್ವರೂಪವೇ ಇದೆ.

**ಭಾವಾರ್ಥ ಃ-** ಈ ಆತ್ಮನ ಪರಿಣಾಮವು ನಿಶ್ಚಯನಯದ ಶ್ರದ್ಧೆಯಿಂದ ವಿಮುಖವಾಗಿ ಶರೀರ ಮೊದಲಾದ ಪರದ್ರವ್ಯಗಳ ಜತೆಯಲ್ಲಿ ಏಕತೆಯ ಶ್ರದ್ಧಾರೂಪವಾಗಿ ಪ್ರವರ್ತನ ಮಾಡುವುದರ ಹೆಸರೇ ಸಂಸಾರವಿದೆ.

ಇದರಿಂದ ಬೇರೆಯಾಗಿ ಸಂಸಾರ ನಾಮದ ಯಾವುದೇ ಪದಾರ್ಥವಿಲ್ಲ. ಆದುದರಿಂದ ಯಾವ ಜೀವರುಗಳು ಸಂಸಾರದಿಂದ ಮುಕ್ತರಾಗಲು ಬಯಸುತ್ತಾರೆ ಅವರು ಶುದ್ಧನಯದ* ಸನ್ಮುಖರಾಗಿ ಇರುವುದು ಯೋಗ್ಯವಿದೆ. ಇದನ್ನೇ ಉದಾಹರಣೆಯನ್ನಿತ್ತು ತಿಳಿಸಿಕೊಡುತ್ತಾರೆ.

ಯಾವ ಪ್ರಕಾರ ಬಹಳಷ್ಟು ಜನರು ಕೆಸರಿನ ಸಂಯೋಗದಿಂದ ತನ್ನ ನಿರ್ಮಲತೆಯು ಆಚ್ಛಾದಿತವಾಗಿ ಹೋಗಿರುವಂಥ ಹೊಲಸು ನೀರನ್ನೇ ಕುಡಿಯುತ್ತಾರೆ. ಮತ್ತು ಯಾವನೋ ಓರ್ವನು ಆ ಹೊಲಸು ನೀರಿನಲ್ಲಿ ತನ್ನ ಕೈಯಿಂದ ಕತಕ ಫಲವನ್ನು (ನಿರ್ಮಲಿಯನ್ನು) ಹಾಕಿ ಕೊಳೆ ಮತ್ತು ನೀರನ್ನು ಬೇರೆ ಬೇರೆಯಾಗಿ ಮಾಡುತ್ತಾನೆ. ಆಗ ತನ್ನ ಪುರುಷಾಕಾರವು ಪ್ರತಿಭಾಸವಾಗುವಂತೆ ಅಲ್ಲಿ ನಿರ್ಮಲ ಜಲದ ಸ್ವಭಾವವು ಪ್ರಕಟವಾಗುತ್ತದೆ, ಅದೇ ನಿರ್ಮಲ ಜಲದ ಆಸ್ವಾದನೆಯನ್ನು ಅವನು ಮಾಡುತ್ತಾನೆ. ಅದೇ ಪ್ರಕಾರ ಬಹಳಷ್ಟು ಅಜ್ಞಾನೀ ಜೀವರುಗಳು ಕರ್ಮದ ಸಂಯೋಗದಿಂದ ತಮ್ಮ ಜ್ಞಾನ ಸ್ವಭಾವವು ಮರೆಯಾಗಿ ಹೋಗಿರುವಂಥ ಅಶುದ್ಧ ಆತ್ಮನ ಅನುಭವ ಮಾಡುತ್ತಾರೆ. ಮತ್ತು ಕೆಲವು ಜ್ಞಾನೀ ಜೀವರುಗಳು ತಮ್ಮ ಬುದ್ಧಿಯಿಂದ ಶುದ್ಧ ನಿಶ್ಚಯನಯದ ಸ್ವಭಾವವನ್ನು ತಿಳಿದುಕೊಂಡು ಕರ್ಮ ಮತ್ತು ಆತ್ಮನನ್ನು ಭಿನ್ನ ಭಿನ್ನ ಮಾಡುತ್ತಾರೆ. ಆಗ ಅದರಲ್ಲಿ ತಮ್ಮ ಚೈತನ್ಯ ಪುರುಷನ ಆಕಾರವು ಪ್ರತಿಭಾಸಿತವಾಗಿ ಹೋಗುವಂತೆ ತಮ್ಮ ನಿರ್ಮಲ ಆತ್ಮನ ಸ್ವಭಾವವು ಪ್ರಕಟವಾಗುತ್ತದೆ. ಈ ಪ್ರಕಾರ ಅವರು ನಿರ್ಮಲ ಆತ್ಮನ ಸ್ವಾನುಭವರೂಪ ಆಸ್ವಾದನೆ ಮಾಡುತ್ತಾರೆ. ಆದುದರಿಂದ ಶುದ್ಧನಯವು ಕೃತಕ ಫಲದ ಸಮಾನವಿದೆ. ಅದರ ಶ್ರದ್ಧೆಯಿಂದಲೇ ಸರ್ವಸಿದ್ಧಿಯಾಗುತ್ತದೆ.

ಒಂದು ವೇಳೆ ಒಂದು ನಿಶ್ಚಯನಯದ ಶ್ರದ್ಧೆಯಿಂದಲೇ ಸರ್ವಸಿದ್ಧಿಯಾಗುತ್ತಿದ್ದರೆ ಆಚಾರ್ಯದೇವರು ವ್ಯವಹಾರನಯದ ಉಪದೇಶವನ್ನೇಕೆ ಮಾಡುತ್ತಾರೆಂಬ ಪ್ರಶ್ನೆಯ ಉತ್ತರ ರೂಪವಾದ ಅರ್ಥವನ್ನು ಈ ಗಾಥೆಯಲ್ಲಿ ಹೇಳಲಾಗಿದೆ.

ಈಗ ಯಾವ ಶ್ರೋತೃಗಳು ಗಾಥೆಯಲ್ಲಿ ಹೇಳಿದ ಅರ್ಥದ ಉಪದೇಶವನ್ನು ಅಂಗೀಕಾರ ಮಾಡಲು ಯೋಗ್ಯರಿಲ್ಲ ಅವರ ಕಥನ ಮಾಡುತ್ತಾರೆ, -

**ಅಬುಧಸ್ಯ ಬೋಧನಾರ್ಥಂ ಮುನೀಶ್ವರಾಃ ದೇಶಯಂತ್ಯಭೂತಾರ್ಥಮ್ ।**
**ವ್ಯವಹಾರಮೇವ ಕೇವಲಮವೈತಿ ಯಸ್ತಸ್ಯ ದೇಶನಾ ನಾಸ್ತಿ ॥೬॥**

**ಅನ್ವಯಾರ್ಥ :-** **[ಮುನೀಶ್ವರಾಃ]** ಗ್ರಂಥ ಕರ್ತೃಗಳಾದ ಆಚಾರ್ಯರು **[ಅಬುಧಸ್ಯ]** ಅಜ್ಞಾನೀ ಜೀವರುಗಳಿಗೆ **[ಬೋಧನಾರ್ಥಂ]** ಜ್ಞಾನವನ್ನುತ್ಪನ್ನ ಮಾಡುವ ಸಲುವಾಗಿ **[ಅಭೂತಾರ್ಥಂ]** ವ್ಯವಹಾರನಯದ **[ದೇಶಯಂತಿ]** ಉಪದೇಶ ಮಾಡುತ್ತಾರೆ. ಮತ್ತು **[ಯಃ]** ಯಾವ ಜೀವರುಗಳು **[ಕೇವಲಂ]** ಕೇವಲ **[ವ್ಯವಹಾರಮ್ ಏವ]** ವ್ಯವಹಾರನಯವನ್ನೇ **[ಅವೈತಿ]** ತಿಳಿಯುತ್ತಾರೆ. **[ತಸ್ಯ]** ಅವರಿಗೆ ಎಂದರೆ ಆ ಮಿಥ್ಯಾದೃಷ್ಟಿ ಜೀವರುಗಳ ಸಲುವಾಗಿ **[ದೇಶನಾ ನಾಸ್ತಿ]** ಉಪದೇಶವಿಲ್ಲ.

**ಟೀಕೆ :- 'ಮುನೀಶ್ವರಾಃ ಅಬುಧಸ್ಯ ಬೋಧನಾರ್ಥಂ ಅಭೂತಾರ್ಥಂ ದೇಶಯಂತಿ'** ಮುನೀಶ್ವರರು ಎಂದರೆ ಆಚಾರ್ಯರು ಅಜ್ಞಾನೀ ಜೀವರುಗಳಿಗೆ ಜ್ಞಾನವನ್ನುತ್ಪನ್ನ ಮಾಡುವ ಸಲುವಾಗಿ ಅಭೂತಾರ್ಥವಾದಂಥ ಆ ವ್ಯವಹಾರನಯದ ಉಪದೇಶ ಮಾಡುತ್ತಾರೆ.

---

* ತ್ರೈಕಾಲಿಕ ಪೂರ್ಣರೂಪನಾದ ತನ್ನ ನಿಶ್ಚಯ ಪರಮಾತ್ಮನು ಶುದ್ಧನಯದ ವಿಷಯನಿದ್ದಾನೆ.

**ಭಾವಾರ್ಥ :-** ಅನಾದಿ ಅಜ್ಞಾನೀ ಜೀವನು ವ್ಯವಹಾರನಯದ ಉಪದೇಶವಿಲ್ಲದೆ ತಿಳಿದುಕೊಳ್ಳುವ ಸಾಧ್ಯತೆಯಿಲ್ಲದಿರುವುದರಿಂದ ಆಚಾರ್ಯ ಭಗವಂತರು ವ್ಯವಹಾರನಯದ ಮೂಲಕ ಅವನಿಗೆ ತಿಳಿಸಿಕೊಡುತ್ತಾರೆ. ಅದನ್ನೇ ಇಲ್ಲಿ ಹೇಳುತ್ತಿದ್ದಾರೆ. ಯಾವ ಪ್ರಕಾರ ಓರ್ವ ಮ್ಲೇಚ್ಛನಿಗೆ ಒಬ್ಬ ಬ್ರಾಹ್ಮಣನು 'ಸ್ವಸ್ತಿ' ಶಬ್ದವನ್ನು ಹೇಳಿ ಆಶೀರ್ವಾದ ಮಾಡಿದರೆ ಅವನಿಗೆ ಸ್ವಲ್ಪವು ಕೂಡ ಅರ್ಥದ ಬೋಧವಾಗುವುದಿಲ್ಲ ಮತ್ತು ಅವನು ಬ್ರಾಹ್ಮಣನ ಕಡೆಗೆ ದೃಷ್ಟಿಸಿ ನೋಡುತ್ತ ನಿಲ್ಲುವನು. ಆಗ ಒಬ್ಬ ದ್ವಿಭಾಷಿಯು ಬಂದು ಈ ಬ್ರಾಹ್ಮಣನು 'ನಿನ್ನ ಕಲ್ಯಾಣವಾಗಲೆಂ'ದು ಹೇಳುತ್ತಿದ್ದಾನೆಂದು ಆ ಮ್ಲೇಚ್ಛನಿಗೆ ಮ್ಲೇಚ್ಛ ಭಾಷೆಯಲ್ಲಿ ತಿಳಿಸುತ್ತಾನೆ. ಅದರಿಂದ ಆನಂದಿತನಾದ ಮ್ಲೇಚ್ಛನು ಆಶೀರ್ವಾದ ಸ್ವೀಕಾರ ಮಾಡುವನು. ಸರಿ ಇದೇ ಪ್ರಕಾರ ಆಚಾರ್ಯರು ಅಜ್ಞಾನೀ ಜೀವನಿಗೆ 'ಆತ್ಮಾ' ಶಬ್ದ ಹೇಳಿ ಉಪದೇಶ ಮಾಡುವರು. ಆಗ ಅವನು ಏನನ್ನೂ ತಿಳಿದುಕೊಳ್ಳಲಿಲ್ಲ ಮತ್ತು ಆಚಾರ್ಯರ ಕಡೆಗೆ ನೋಡುತ್ತ ನಿಂತುಕೊಳ್ಳುವನು. ಆಗ ನಿಶ್ಚಯ ಮತ್ತು ವ್ಯವಹಾರನಯವನ್ನು ತಿಳಿದುಕೊಂಡಂಥ ಆಚಾರ್ಯರು ವ್ಯವಹಾರನಯದ ಮೂಲಕ ಭೇದವನ್ನುತ್ಪನ್ನ ಮಾಡಿ ಎಂದರೆ ಗುಣ-ಗುಣೀ ಮೊದಲಾದ ವಿವಕ್ಷೆ-ಭೇದದ ಮೂಲಕ ಅವನಿಗೆ ಹೇಳುತ್ತಾರೆ - ಈ ನೋಡುವಂಥ, ತಿಳಿದುಕೊಳ್ಳುವಂಥ ಮತ್ತು ಆಚರಣೆ ಮಾಡುವಂಥ ಯಾವ ಪದಾರ್ಥವಿದೆ ಅದುವೇ ಆತ್ಮವಿದೆಯೆಂದು ತಿಳಿಸುತ್ತಾರೆ. ಆಗ ಅವನು ಸ್ವಾಭಾವಿಕವಾಗಿ ಪರಮಾನಂದ ದಶೆಗೆ ಪ್ರಾಪ್ತನಾಗಿ ಆತ್ಮನನ್ನು ನಿಜಸ್ವರೂಪದಿಂದ ಅಂಗೀಕಾರ ಮಾಡುತ್ತಾನೆ. ಈ ಪ್ರಕಾರ ಇದು ಸದ್ಭೂತವ್ಯವಹಾರನಯದ ಉದಾಹರಣೆಯನ್ನು ಕೊಡಲಾಯಿತು.

ಈಗ ಅಸದ್ಭೂತ ವ್ಯವಹಾರನಯದ ಉದಾಹರಣೆ ಕೊಡುತ್ತಾರೆ. ಯಾವ ಪ್ರಕಾರ ತುಪ್ಪದಿಂದ ತುಂಬಿಹೋದ ಮಣ್ಣಿನ ಕೊಡವನ್ನು ವ್ಯವಹಾರದಿಂದ ತುಪ್ಪದ ಕೊಡವೆಂದು ಹೇಳುತ್ತಾರೆ. ಇಲ್ಲಿ ಓರ್ವ ಪುರುಷನು ಜನ್ಮದಿಂದಲೇ ಅದನ್ನು ತುಪ್ಪದ ಕೊಡವೆಂದು ತಿಳಿಯುತ್ತಾನೆ. ಆಗ ಬೇರೊಬ್ಬ ಪುರುಷನು ಇದು ತುಪ್ಪದ ಕೊಡವೆಂದು ಹೇಳಿ ಅವನಿಗೆ ತಿಳಿಸಿಕೊಡುತ್ತಾನೆ. ಆಗಲೇ ಅವನು ತಿಳಿದುಕೊಳ್ಳುತ್ತಾನೆ ಮತ್ತು ಅದನ್ನು ಮಣ್ಣಿನ ಕೊಡವೆಂದು ಹೇಳಿ ಸಂಬೋಧನೆ ಮಾಡಹೋದರೆ ಅವನು ಬೇರೆ ಯಾವುದೇ ಒಂದು ಹೊಸ ಕೊಡವನ್ನು ತಿಳಿದುಕೊಳ್ಳುತ್ತಾನೆ, ಆದರೆ ತುಪ್ಪದ ಕೊಡವನ್ನು ತಿಳಿದುಕೊಳ್ಳುವುದಿಲ್ಲ. ನಿಶ್ಚಯದಿಂದ ವಿಚಾರ ಮಾಡಹೋದರೆ ಕೊಡವಂತೂ ಮಣ್ಣಿನದೇ ಇದೆ, ಆದರೆ ಅದನ್ನು ತಿಳಿದುಕೊಳ್ಳುವ ಸಲುವಾಗಿ 'ತುಪ್ಪದ ಕೊಡ'ವೆಂದು ಹೇಳಿಯೇ ಸಂಬೋಧನೆ ಮಾಡಬೇಕಾಗುತ್ತದೆ. ಅದೇ ಪ್ರಕಾರ ಈ ಚೈತನ್ಯ ಸ್ವರೂಪನಾದ ಆತ್ಮನು ಕರ್ಮಜನ್ಯ ಪರ್ಯಾಯದಿಂದ ಸಂಯುಕ್ತನಿದ್ದಾನೆ. ಅವನನ್ನು ವ್ಯವಹಾರದಿಂದ ದೇವ, ಮನುಷ್ಯ ಮೊದಲಾದ ಹೆಸರುಗಳಿಂದ ಹೇಳುತ್ತಾರೆ. ಅನಾದಿಯಿಂದ ಅಜ್ಞಾನೀ ಜೀವನು ಆ ಆತ್ಮನನ್ನು ದೇವ, ಮನುಷ್ಯ ಮೊದಲಾದ ಸ್ವರೂಪವಾಗಿಯೇ ತಿಳಿಯುತ್ತಾನೆ. ಯಾರಾದರೂ ಅವನನ್ನು ದೇವ, ಮನುಷ್ಯ ಮೊದಲಾದ ಹೆಸರುಗಳಿಂದ ಸಂಬೋಧನೆ ಮಾಡಿ ತಿಳಿಸಿದಾಗಲೇ ತಿಳಿದುಕೊಳ್ಳುತ್ತಾನೆ. ಮತ್ತು ಒಂದು ವೇಳೆ ಆತ್ಮನ ಹೆಸರನ್ನು ಚೈತನ್ಯಸ್ವರೂಪವೆಂದು ಹೇಳಿದರೆ ಬೇರೆ ಯಾವನೋ ಓರ್ವ ಪರಮಬ್ರಹ್ಮ ಪರಮೇಶ್ವರನನ್ನು ತಿಳಿದುಕೊಂಡು ಬಿಡುತ್ತಾನೆ. ನಿಶ್ಚಯದಿಂದ ವಿಚಾರ ಮಾಡಿದರೆ ಆತ್ಮನು ಚೈತನ್ಯಸ್ವರೂಪನೇ ಇದ್ದಾನೆ, ಆದರೆ ಅಜ್ಞಾನಿಗಳಿಗೆ ತಿಳಿಸಿಕೊಡುವ ಸಲುವಾಗಿ ಆಚಾರ್ಯದೇವರು ಗತಿ ಜಾತಿ ಮೊದಲಾದವುಗಳ ಭೇದದ ಮೂಲಕ ಜೀವದ ನಿರೂಪಣೆ ಮಾಡುತ್ತಾರೆ. ಈ ಪ್ರಕಾರ ಅಜ್ಞಾನೀ ಜೀವರುಗಳಿಗೆ ಜ್ಞಾನವನ್ನುತ್ಪನ್ನ ಮಾಡಿಸುವ ಸಲುವಾಗಿ ಆಚಾರ್ಯ ಭಗವಂತರು ವ್ಯವಹಾರದ ಉಪದೇಶ ಮಾಡುತ್ತಾರೆ. **'ಕೇವಲ ವ್ಯವಹಾರಂ ಏವ ಅವೈತಿ ತಸ್ಯ ದೇಶನಾ ನಾಸ್ತಿ'** - ಯಾರು ಕೇವಲ ವ್ಯವಹಾರದ ಶ್ರದ್ಧೆಯನ್ನೇ ಮಾಡುತ್ತಾರೆ ಅವರ ಸಲುವಾಗಿ ಉಪದೇಶವಿಲ್ಲ.

**ಭಾವಾರ್ಥ :-** ನಿಶ್ಚಯನಯದ ಶ್ರದ್ಧೆಯಿಲ್ಲದೆ ಕೇವಲ ವ್ಯವಹಾರ ಮಾರ್ಗದಲ್ಲಿಯೇ ಪ್ರವರ್ತನೆ ಮಾಡುವಂಥ ಮಿಥ್ಯಾದೃಷ್ಟಿಗಳ ಸಲುವಾಗಿ ಉಪದೇಶ ಕೊಡುವುದು ನಿಷ್ಫಲವಿದೆ.

ಈಗ ಕೇವಲ ವ್ಯವಹಾರನಯದ ಶ್ರದ್ಧೆಯಾಗುವುದರ ಕಾರಣ ತಿಳಿಸಿಕೊಡುತ್ತಾರೆ.

**ಮಾಣವಕ ಏವ ಸಿಂಹೋ ಯಥಾ ಭವತ್ಯನವಗೀತ ಸಿಂಹಸ್ಯ ।**
**ವ್ಯವಹಾರ ಏವ ಹಿ ತಥಾ ನಿಶ್ಚಯತಾಂ ಯಾತ್ಯನಿಶ್ಚಯಜ್ಞಸ್ಯ ॥೭॥**

**ಅನ್ವಯಾರ್ಥ :-** **[ಯಥಾ]** ಯಾವ ಪ್ರಕಾರ **[ಅನವಗೀತ ಸಿಂಹಸ್ಯ]** ಸಿಂಹವನ್ನು ಸರ್ವಥಾ ತಿಳಿದುಕೊಂಡಿರದಂಥ ಪುರುಷನ ಸಲುವಾಗಿ **[ಹಿ]** ನಿಶ್ಚಯದಿಂದ **[ಮಾಣವಕಃ ಏವ)** ಮಾರ್ಜಾಲವೇ **[ಸಿಂಹಃ ಭವತಿ]** ಸಿಂಹರೂಪವಾಗುತ್ತದೆ. **[ತಥಾ]** ಅದೇ ಪ್ರಕಾರ **[ಅನಿಶ್ಚಯಜ್ಞಶ್ಚ]** ನಿಶ್ಚಯನಯದ ಸ್ವರೂಪದಿಂದ ಅಪರಿಚಿತನಿರುವಂಥ ಪುರುಷನ ಸಲುವಾಗಿ **[ವ್ಯವಹಾರಃ ಏವ]** ವ್ಯವಹಾರವೇ **[ನಿಶ್ಚಯತಾಂ]** ನಿಶ್ಚಯತನಕ್ಕೆ **[ಯಾತಿ]** ಪ್ರಾಪ್ತವಾಗುತ್ತದೆ.

**ಟೀಕೆ :- 'ಯಥಾ ಹಿ ಅನವಗೀತಸಿಂಹಸ್ಯ ಮಾಣವಕ ಏವ ಸಿಂಹೋ ಭವತಿ'** - ಯಾವ ಪ್ರಕಾರ ನಿಶ್ಚಯದಿಂದ (ನಿಜವಾಗಿ)ಸಿಂಹವನ್ನು ನೋಡಿರದಂಥವನ ಸಲುವಾಗಿ ಮಾರ್ಜಾಲವೇ ಸಿಂಹರೂಪವಾಗುತ್ತದೆ. ಮತ್ತು **'ಅನಿಶ್ಚಯಜ್ಞಸ್ಯ ವ್ಯವಹಾರಃ ಏವ ನಿಶ್ಚಯತಾಂ ಯಾತಿ'** - ಅದೇ ಪ್ರಕಾರ ನಿಶ್ಚಯದ ಸ್ವರೂಪವನ್ನು ತಿಳಿದುಕೊಂಡಿರದಂಥವನಿಗೆ ವ್ಯವಹಾರವೇ ನಿಶ್ಚಯರೂಪವಾಗಿ ಹೋಗುತ್ತದೆ ಎಂದರೆ ಅವನು ವ್ಯವಹಾರವನ್ನೇ ನಿಶ್ಚಯವೆಂದು ಮನ್ನಿಸಿಬಿಡುತ್ತಾನೆ.

**ಭಾವಾರ್ಥ :-** ಯಾವ ಪ್ರಕಾರ ಸಿಂಹವನ್ನು ತಿಳಿದುಕೊಂಡಿರದಂಥ ಬಾಲಕನು ಮಾರ್ಜಾಲವನ್ನು ಸಿಂಹವೆಂದು ಮನ್ನಿಸಿಕೊಳ್ಳುತ್ತಾನೆ, ಅದೇ ಪ್ರಕಾರ ಅಜ್ಞಾನೀ ಜೀವನು ನಿಶ್ಚಯದ ಸ್ವರೂಪವನ್ನು ತಿಳಿದುಕೊಳ್ಳಲಾರದೆ ವ್ಯವಹಾರವನ್ನೇ ನಿಶ್ಚಯವೆಂದು ಮನ್ನಿಸಿಕೊಳ್ಳುತ್ತಾನೆ. ಅದರ ಸ್ಪಷ್ಟೀಕರಣ ಮಾಡುತ್ತಾರೆ. ಯಾವ ಜೀವನು ತನ್ನ ಶುದ್ಧ ಚೈತನ್ಯಸ್ವರೂಪನಾದ ಆತ್ಮನ ಶ್ರದ್ಧೆ, ಜ್ಞಾನ, ಆಚರಣ ರೂಪದ ಮೋಕ್ಷ ಮಾರ್ಗವನ್ನು ತಿಳಿದುಕೊಳ್ಳುವುದಿಲ್ಲ, ಆ ಆ ಜೀವನು ವ್ಯವಹಾರದರ್ಶನ, ಜ್ಞಾನ, ಚಾರಿತ್ರದ ಸಾಧನೆ ಮಾಡಿ ತನ್ನನ್ನು ಮೋಕ್ಷದ ಅಧಿಕಾರಿಯೆಂದು ಮನ್ನಿಸಿಕೊಳ್ಳುತ್ತಾನೆ. ಅರಹಂತದೇವ, ನಿರ್ಗ್ರಂಥ ಗುರು, ದಯಾಧರ್ಮದ ಶ್ರದ್ಧೆ ಮಾಡಿ ತನ್ನನ್ನು ತಾನು ಸಮ್ಯಕ್‌ದೃಷ್ಟಿಯೆಂದು ಮನ್ನಿಸಿಕೊಳ್ಳುತ್ತಾನೆ, ಮತ್ತು ಕಿಂಚಿತ್ ಮಾತ್ರ ಜಿನವಾಣಿಯನ್ನು ತಿಳಿದುಕೊಂಡು ತನ್ನನ್ನು ಜ್ಞಾನಿಯೆಂದು ಮನ್ನಿಸಿಕೊಳ್ಳುತ್ತಾನೆ, ಮಹಾವ್ರತ ಮೊದಲಾದ ಕ್ರಿಯೆಗಳ ಸಾಧನೆ ಮಾಡಿ ತನ್ನನ್ನು ಚಾರಿತ್ರವಂತನೆಂದು ಮನ್ನಿಸಿಕೊಳ್ಳುತ್ತಾನೆ, ಈ ಪ್ರಕಾರ ಅವನು ಶುಭೋಪಯೋಗದಲ್ಲಿ ಸಂತುಷ್ಟನಾಗಿ, ಶುದ್ಧೋಪಯೋಗರೂಪವಾದ ಮೋಕ್ಷ ಮಾರ್ಗದಲ್ಲಿ ಪ್ರಮಾದಿಯಾಗಿರುವುದರಿಂದ ಕೇವಲ ವ್ಯವಹಾರನಯದ ಅವಲಂಬನೆ ಹೊಂದಿದ್ದಾನೆ, ಆದುದರಿಂದ ಅವನಿಗೆ ಉಪದೇಶ ಕೊಡುವುದು ನಿಷ್ಫಲವಿದೆ.

ಇಂಥ ಶ್ರೋತೃವು ಕೂಡ ಉಪದೇಶಕ್ಕೆ ಯೋಗ್ಯವಿಲ್ಲದಿದ್ದರೆ ಮತ್ತೆ ಎಂಥ ಗುಣ ಸಂಯುಕ್ತರಾಗಿರ ಬೇಕಾಗುವುದೆಂಬ ಪ್ರಶ್ನೆಯು ಉತ್ಪನ್ನವಾಗುತ್ತದೆ ಅದರ ಉತ್ತರ ಸ್ವರೂಪವಾಗಿ ಈಗ ಶ್ಲೋಕ ಹೇಳುತ್ತಾರೆ, -

**ವ್ಯವಹಾರನಿಶ್ಚಯೌ ಯಃ ಪ್ರಬುಧ್ಯತತ್ತ್ವೇನ ಭವತಿ ಮಧ್ಯಸ್ಥಃ ।**
**ಪ್ರಾಪ್ನೋತಿ ದೇಶನಾಯಾಃ ಸ ಏವ ಫಲಮವಿಕಲಂ ಶಿಷ್ಯಃ ॥೮॥**

**ಅನ್ವಯಾರ್ಥ :-** **[ಯಃ]** ಯಾವ ಜೀವನು **[ವ್ಯವಹಾರ ನಿಶ್ಚಯೌ]** ವ್ಯವಹಾರನಯವನ್ನು ಮತ್ತು

ನಿಶ್ಚಯನಯವನ್ನು **[ತತ್ತ್ವೇನ)** ವಸ್ತು ಸ್ವರೂಪದಿಂದ **[ಪ್ರಬುಧ್ಯ]** ಯಥಾರ್ಥರೂಪದಿಂದ ತಿಳಿದುಕೊಂಡು **[ಮಾಧ್ಯಸ್ಥಃ ಭವತಿ]** ಮಾಧ್ಯಸ್ಥನಾಗುತ್ತಾನೆ ಎಂದರೆ ನಿಶ್ಚಯನಯ ಮತ್ತು ವ್ಯವಹಾರನಯದ ಪಕ್ಷಪಾತದಿಂದ ರಹಿತನಾಗುತ್ತಾನೆ. **[ಸಃ ಏವ]** ಅವನೇ **[ಶಿಷ್ಯಃ]** ಶಿಷ್ಯನು **[ದೇಶನಾಯಾಃ]** ಉಪದೇಶದ **[ಅವಿಕಲಂ]** ಸಂಪೂರ್ಣವಾದ **[ಫಲಂ]** ಫಲವನ್ನು **[ಪ್ರಾಪ್ನೋತಿ]** ಪ್ರಾಪ್ತಮಾಡಿಕೊಳ್ಳುತ್ತಾನೆ.

**ಟೀಕೆ :- 'ಯಃ ವ್ಯವಹಾರನಿಶ್ಚಯೌ ತತ್ತ್ವೇನ ಪ್ರಬುಧ್ಯ ಮಧ್ಯಸ್ಥಃ ಭವತಿ'** - ಯಾವ ಜೀವನು ವ್ಯವಹಾರನಯ ಮತ್ತು ನಿಶ್ಚಯನಯದ ಸ್ವರೂಪವನ್ನು ಯಥಾರ್ಥರೂಪದಿಂದ ತಿಳಿದುಕೊಂಡು ಪಕ್ಷಪಾತದಿಂದ ರಹಿತನಾಗುತ್ತಾನೆ. **'ಸ ಏವ ಶಿಷ್ಯಃ ದೇಶನಾಯಾಃ ಅವಿಕಲಂ ಫಲಂ ಪ್ರಾಪ್ನೋತಿ'**- ಅದೇ ಶಿಷ್ಯನು ಉಪದೇಶದ ಸಂಪೂರ್ಣ ಫಲವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ.

**ಭಾವಾರ್ಥ :-** ಶ್ರೋತೃಗಳಲ್ಲಿ ಅನೇಕ ಗುಣಗಳು ಇರಬೇಕಾಗುವುದು ; ಆದರೆ ವ್ಯವಹಾರ ಮತ್ತು ನಿಶ್ಚಯವನ್ನು ತಿಳಿದುಕೊಂಡು ಒಂದು ಪಕ್ಷದ ದುರಾಗ್ರಹರೂಪವಾಗದಿರುವ ಗುಣವು ಮುಖ್ಯರೂಪದಿಂದ ಇರಬೇಕಾಗುವುದು. ಹಾಗೆ ಹೇಳಿಯೂ ಇದ್ದಾರೆ.

ಜಇ ಜಿಣಮಯಂ ಪವಜ್ಜಹ ತಾ ಮಾ ವವಹಾರ ಣಿಚ್ಛಏ ಮುಅಹ ।
ಏಕೇಣ ವಿಣಾ ಛಿಜ್ಜಇ ತಿತ್ಥಂ ಅಣ್ಣೇಣ ಪುಣ ತಚ್ಚಂ ॥

- ಪಂ. ಪ್ರವರ ಆಶಾಧರ ಕೃತ ಅನಗಾರ ಧರ್ಮಾಮೃತ ಪು. ೧೮

**ಅರ್ಥ :-** ಒಂದು ವೇಳೆ ನೀನು ಜಿನಮತದಲ್ಲಿ ಪ್ರವರ್ತನೆ ಮಾಡುತ್ತಿದ್ದರೆ ವ್ಯವಹಾರ ಮತ್ತು ನಿಶ್ಚಯವನ್ನು ಬಿಟ್ಟುಕೊಡಬೇಡ. ನೀನು ನಿಶ್ಚಯದ ಪಕ್ಷಪಾತಿಯಾಗಿ ವ್ಯವಹಾರವನ್ನು ಬಿಟ್ಟುಕೊಟ್ಟರೆ ರತ್ನತ್ರಯ ಸ್ವರೂಪವಾದ ಧರ್ಮತೀರ್ಥದ ಅಭಾವವಾಗುವುದು. ಮತ್ತು ಒಂದು ವೇಳೆ ವ್ಯವಹಾರದ ಪಕ್ಷಪಾತಿಯಾಗಿ ನಿಶ್ಚಯವನ್ನು ಬಿಟ್ಟುಕೊಟ್ಟರೆ ಶುದ್ಧ ತತ್ತ್ವಸ್ವರೂಪದ ಅನುಭವವಾಗುವುದಿಲ್ಲ. ಆದುದರಿಂದ ಮೊದಲು ವ್ಯವಹಾರ-ನಿಶ್ಚಯ ಇವೆರಡನ್ನು ಒಳ್ಳೆಯ ರೀತಿಯಿಂದ ತಿಳಿದುಕೊಂಡು ಅನಂತರ ಯಥಾಯೋಗ್ಯವಾಗಿ ಅವುಗಳ ಅಂಗೀಕಾರ ಮಾಡಬೇಕು. ಪಕ್ಷಪಾತ ಮಾಡಬಾರದು. ಇದೇ ಉತ್ತಮ ಶ್ರೋತೃವಿನ ಲಕ್ಷಣವಿದೆ.

**ಪ್ರಶ್ನೆ :-** ಯಾವ ನಿಶ್ಚಯ-ವ್ಯವಹಾರವನ್ನು ತಿಳಿದುಕೊಳ್ಳುವ ರೂಪದ ಗುಣಗಳನ್ನು ವಕ್ತಾರನಿಗೆ ಹೇಳಲಾಗಿದೆ. ಅವನ್ನೇ ಶ್ರೋತಾರನಿಗೂ ಹೇಳಿಬಿಟ್ಟರೆ ಇದರಲ್ಲಿ ವಿಶೇಷತೆಯೇನಾಯಿತು ?

**ಉತ್ತರ :-** ಯಾವ ಗುಣಗಳು ಅಧಿಕತೆಯ ರೂಪದಿಂದ ವಕ್ತಾನಲ್ಲಿ ಇರಬೇಕು ಅವೇ ಗುಣಗಳು ಹೀನತೆಯ ರೂಪದಿಂದ ಎಂದರೆ ಕಡಿಮೆ ಅಂಶದಲ್ಲಿ ಶ್ರೋತಾರನಲ್ಲಿಯೂ ಇರಬೇಕಾಗುವುದು. ಈ ಪ್ರಕಾರ ವಕ್ತಾ ಮತ್ತು ಶ್ರೋತಾರನ ವರ್ಣನೆ ಮಾಡಲಾಯಿತು.

ಭೂಮಿಕೆಯು ಸಮಾಪ್ತವಾಯಿತು.

# ಗ್ರಂಥದ ಆರಂಭ

ಈಗ ಗ್ರಂಥದ ವರ್ಣನೆ ಮಾಡುತ್ತಾರೆ. ಈ ಗ್ರಂಥದಲ್ಲಿ ಪುರುಷನ ಅರ್ಥದ ಸಿದ್ಧಿಯ ಉಪಾಯ ತಿಳಿಸುವುದಿದೆ. ಆದುದರಿಂದ ಮೊದಲು ಪುರುಷನ ಸ್ವರೂಪವನ್ನೇ ಹೇಳುತ್ತಾರೆ, -

**ಅಸ್ತಿ ಪುರುಷಶ್ಚಿದಾತ್ಮಾ ವಿವರ್ಜಿತಃ ಸ್ಪರ್ಶಗಂಧರಸವರ್ಣೈಃ ।**
**ಗುಣಪರ್ಯಾಯಸಮವೇತಃ ಸಮಾಹಿತಃ ಸಮುದಯವ್ಯಯಧ್ರೌವ್ಯೈಃ ॥೯॥**

**ಅನ್ವಯಾರ್ಥ ಃ- [ಪುರುಷಃ]** ಪುರುಷ ಎಂದರೆ ಆತ್ಮನು **[ಚಿದಾತ್ಮಾ ಅಸ್ತಿ]** ಚೇತನಾಸ್ವರೂಪನಿದ್ದಾನೆ. **[ಸ್ಪರ್ಶಗಂಧರಸವರ್ಣೈಃ]** ಸ್ಪರ್ಶ, ಗಂಧ, ರಸ ಮತ್ತು ವರ್ಣದಿಂದ **[ವಿವರ್ಜಿತಃ]** ರಹಿತನಿದ್ದಾನೆ, **[ಗುಣಪರ್ಯಾಯ ಸಮವೇತಃ]** ಗುಣ ಮತ್ತು ಪರ್ಯಾಯದಿಂದ ಸಹಿತನಿದ್ದಾನೆ ಹಾಗೂ **[ಸಮುದಯ ವ್ಯಯಧ್ರೌವ್ಯೈಃ]** ಉತ್ಪಾದ, ವ್ಯಯ ಮತ್ತು ಧ್ರೌವ್ಯದಿಂದ **[ಸಮಾಹಿತಃ]** ಸಂಯುಕ್ತನಿದ್ದಾನೆ.

**ಟೀಕೆ ಃ- 'ಪುರುಷಃ ಚಿದಾತ್ಮಾ ಅಸ್ತಿ'** - ಪುರುಷನು ಅವನು ಚೈತನ್ಯಸ್ವರೂಪನಿದ್ದಾನೆ.

**ಭಾವಾರ್ಥ ಃ-** (ಪುರು) ಉತ್ತಮ ಚೇತನಾಗುಣದಲ್ಲಿ (ಸೇತೆ) ಪ್ರಭುವಾಗಿ ಪ್ರವರ್ತನೆ ಮಾಡುವವನನ್ನು ಪುರುಷನೆಂದು ಹೇಳುತ್ತಾರೆ. ಜ್ಞಾನ, ದರ್ಶನ ಚೇತನಾದ ಪ್ರಭುವನ್ನು ಪುರುಷನೆಂದು ಹೇಳುತ್ತಾರೆ. ಇದೇ ಚೇತನಾವು ಅವ್ಯಾಪ್ತಿ, ಅತಿವ್ಯಾಪ್ತಿ ಮತ್ತು ಅಸಂಭವವೆಂದು ಈ ಮೂರು ದೋಷಗಳಿಂದ ರಹಿತವಾಗಿರುವುದು ಅದು ಈ ಆತ್ಮನ ಅಸಾಧಾರಣ ಲಕ್ಷಣವಿದೆ. ಯಾವುದನ್ನು ಯಾವುದರ ಲಕ್ಷಣವೆಂದು ಹೇಳಲಾಗಿರುವುದು ಅದು ಅದರ ಯಾವುದೇ ಒಂದು ಲಕ್ಷ್ಯದಲ್ಲಿ ಇರುವುದು ಮತ್ತು ಯಾವುದೇ ಒಂದು ಲಕ್ಷ್ಯದಲ್ಲಿ ಇಲ್ಲದಿರುವುದನ್ನು ಅವ್ಯಾಪ್ತಿ ದೋಷವೆಂದು ಹೇಳುತ್ತಾರೆ. ಆದರೆ ಯಾವುದೇ ಆತ್ಮನು ಚೇತನಾ ರಹಿತನಿರುವುದಿಲ್ಲ. ಒಂದು ವೇಳೆ ಆತ್ಮನ ಲಕ್ಷಣವನ್ನು ರಾಗಾದಿಗಳೆಂದು ಹೇಳಿದರೆ ಅವ್ಯಾಪ್ತಿ ದೋಷವು ತಗಲುತ್ತದೆ. ಏಕೆಂದರೆ ರಾಗ ಮೊದಲಾದವು ಸಂಸಾರೀ ಜೀವರುಗಳಲ್ಲಿ ಇವೆ; ಆದರೆ ಸಿದ್ಧ ಜೀವರುಗಳಲ್ಲಿ ಇಲ್ಲ. ಯಾವ ಲಕ್ಷಣವು ಲಕ್ಷ್ಯದಲ್ಲಿ ಕೂಡ ಇದೆ ಮತ್ತು ಅಲಕ್ಷದಲ್ಲಿ ಕೂಡ ಇದೆಅದನ್ನು ಅತಿವ್ಯಾಪ್ತಿ ದೋಷವೆಂದೂ ಹೇಳುತ್ತಾರೆ. ಆದರೆ ಚೇತನಾವು ಒಂದು ಜೀವ ಪದಾರ್ಥದ ಹೊರತಾಗಿ ಬೇರೆ ಯಾವುದೇ ಪದಾರ್ಥದಲ್ಲಿ ಕಂಡು ಬರುವುದಿಲ್ಲ. ಒಂದು ವೇಳೆ ಆತ್ಮನ ಲಕ್ಷಣವನ್ನು ಅಮೂರ್ತತ್ವವೆಂದು ಹೇಳಿದರೆ ಅತಿವ್ಯಾಪ್ತಿ ದೋಷವು ತಗಲುತ್ತದೆ. ಕಾರಣವೇನೆಂದರೆ ಯಾವ ಪ್ರಕಾರ ಆತ್ಮನು ಅಮೂರ್ತಿಕನಿದ್ದಾನೆ ಅದೇ ಪ್ರಕಾರ ಧರ್ಮ, ಅಧರ್ಮ, ಆಕಾಶ ಮತ್ತು ಕಾಲವೂ ಅಮೂರ್ತಿಕವಿವೆ. ಮತ್ತು ಯಾವುದು ಪ್ರಮಾಣದಲ್ಲಿ ಬರುವುದಿಲ್ಲ ಅದನ್ನು ಅಸಂಭವವೆಂದು ಹೇಳುತ್ತಾರೆ. ಚೇತನಾವು ಜೀವ ಪದಾರ್ಥದಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷ ಪ್ರಮಾಣದಿಂದ ತಿಳಿದು ಬರುತ್ತದೆ. ಒಂದು ವೇಳೆ ಆತ್ಮನ ಲಕ್ಷಣವನ್ನು ಜಡತನವೆಂದು ಹೇಳಿದರೆ ಅಸಂಭವ ದೋಷವು ತಗಲುತ್ತದೆ, ಕಾರಣವೇನೆಂದರೆ ಇದು ಪ್ರತ್ಯಕ್ಷ ಪ್ರಮಾಣದಿಂದ ಬಾಧಿತವಿದೆ, ಈ ಪ್ರಕಾರ ಮೂರೂ ದೋಷಗಳಿಂದ ರಹಿತನಾದ ಆತ್ಮನ ಚೇತನಾ ಲಕ್ಷಣವು ಎರಡು ಪ್ರಕಾರದ್ದಿದೆ. ಅದರಲ್ಲಿ ಒಂದು ಜ್ಞಾನ ಚೇತನಾ ಇದ್ದರೆ ಇನ್ನೊಂದು ದರ್ಶನ ಚೇತನಾ ಇದೆ. ಯಾವುದು ಪದಾರ್ಥಗಳನ್ನು ಸಾಕಾರರೂಪ ವಿಶೇಷತೆಯಿಂದ ತಿಳಿಯುತ್ತದೆ ಅದನ್ನು ಜ್ಞಾನ ಚೇತನಾವೆಂದು ಹೇಳುತ್ತಾರೆ.

ಯಾವುದು ಪದಾರ್ಥಗಳನ್ನು ನಿರಾಕಾರರೂಪ ಸಾಮಾನ್ಯತೆಯಿಂದ ನೋಡುತ್ತದೆ ಅದನ್ನು ದರ್ಶನಚೇತನಾ ವೆಂದು ಹೇಳುತ್ತಾರೆ. ಇದೇ ಚೇತನಾವು ಪರಿಣಾಮಗಳ ಅಪೇಕ್ಷೆಯಿಂದ ಮೂರು ಪ್ರಕಾರದ್ದಿದೆ. ಯಾವಾಗ ಈ ಚೇತನಾವು ಶುದ್ಧ ಜ್ಞಾನಸ್ವಭಾವರೂಪದಿಂದ ಪರಿಣಮನ ಮಾಡುತ್ತದೆ. ಆಗ ಜ್ಞಾನಚೇತನಾ ಇದೆ, ಯಾವಾಗ

ರಾಗಾದಿಗಳ ಕಾರ್ಯರೂಪದಿಂದ ಪರಿಣಮನ ಮಾಡುತ್ತದೆ ಆಗ ಕರ್ಮಚೇತನಾ ಇದೆ ಮತ್ತು ಯಾವಾಗ ಹರ್ಷ-ಶೋಕ ಮೊದಲಾದ ಅನುಭವರೂಪ ಕರ್ಮದ ಫಲ ರೂಪವಾಗಿ ಪರಿಣಮನ ಮಾಡುತ್ತದೆ ಆಗ ಅದನ್ನು ಕರ್ಮಫಲಚೇತನಾವೆಂದು ಹೇಳಲಾಗುತ್ತದೆ. ಈ ಪ್ರಕಾರ ಚೇತನಾವು ಅನೇಕ ಸೋಗುಗಳನ್ನು ಮಾಡುತ್ತದೆ. ಆದಾಗ್ಯೂ ಚೇತನಾದ ಅಭಾವವೆಂದೂ ಆಗುವುದಿಲ್ಲ. ಈ ಪ್ರಕಾರ ಚೇತನಾ ಲಕ್ಷಣದಿಂದ ವಿರಾಜಮಾನವಾದ ಜೀವ ನಾಮದ ಪದಾರ್ಥವನ್ನು ಪುರುಷವೆಂದು ಹೇಳುತ್ತಾರೆ. ಮತ್ತೆ ಆ ಪುರುಷನು **'ಸ್ಪರ್ಶರಸಗಂಧವರ್ಣೈಃ ವಿವರ್ಜಿತಃ'** - ಸ್ಪರ್ಶ, ರಸ, ಗಂಧ ಮತ್ತು ವರ್ಣದಿಂದ ರಹಿತನಿದ್ದಾನೆ ಎಂಟು ಪ್ರಕಾರದ ಸ್ಪರ್ಶ, ಎರಡು ಪ್ರಕಾರದ ಗಂಧ, ಐದು ಪ್ರಕಾರದ ರಸ ಮತ್ತು ಐದು ಪ್ರಕಾರದ ವರ್ಣವೆಂದು ಯಾವವು ಪುದ್ಗಲಗಳ ಲಕ್ಷಣಗಳಿವೆ ಅವುಗಳಿಂದ ರಹಿತನಾಗಿ ಅಮೂರ್ತಿಕನಿದ್ದಾನೆ. ಈ ವಿಶೇಷಣದಿಂದ ಪುದ್ಗಲ ದ್ರವ್ಯದಿಂದ ಭಿನ್ನತೆಯನ್ನು ಪ್ರಕಟಮಾಡಿದೆ. ಏಕೆಂದರೆ ಈ ಆತ್ಮನು ಅನಾದಿ ಕಾಲದಿಂದ ಸಂಬಂಧರೂಪವಾಗಿರುವ ಯಾವ ಪುದ್ಗಲದ್ರವ್ಯವಿದೆ, ಅದರಲ್ಲಿ ಅಹಂಕಾರರೂಪವಾಗಿ, ಮಮಕಾರರೂಪವಾಗಿ ಪ್ರವರ್ತನೆ ಮಾಡುತ್ತಾನೆ. ಆ ತನ್ನ ಚೈತನ್ಯ ಪುರುಷನನ್ನು ಅಮೂರ್ತಿಕನೆಂದು ತಿಳಿದುಕೊಂಡರೆ ದ್ರವ್ಯಕರ್ಮ, ನೋಕರ್ಮ, ಧನ-ಧಾನ್ಯ ಮೊದಲಾದ ಪುದ್ಗಲ ದ್ರವ್ಯಗಳಲ್ಲಿ ಅಹಂಕಾರ-ಮಮಕಾರ ಮಾಡುವುದಿಲ್ಲ.

ಪುನಃ ಆ ಪುರುಷನು **'ಗುಣಪರ್ಯಯಸಮವೇತಃ'**- ಗುಣ-ಪರ್ಯಾಯಗಳಿಂದ ವಿರಾಜಮಾನನಿದ್ದಾನೆ ಎಂದರೆ ದ್ರವ್ಯವು ಅದು ಗುಣ-ಪರ್ಯಾಯಮಯವಿರುವುದರಿಂದ ಆತ್ಮನು ಕೂಡ ಗುಣ-ಪರ್ಯಾಯಗಳಿಂದ ಸಹಿತನಾಗಿ ವಿರಾಜಮಾನನಿದ್ದಾನೆ. ಅಲ್ಲಿ ಗುಣದ ಲಕ್ಷಣವು ಸಹಭೂತವಿದೆ. ಸಹ ಎಂದರೆ ದ್ರವ್ಯದ ಜತೆಯಲ್ಲಿ, ಭೂ ಎಂದರೆ ಸತ್ತಾ ಇದೆ. ದ್ರವ್ಯದಲ್ಲಿ ಯಾವುದು ಸದಾಕಾಲ ಕಂಡು ಬರುತ್ತದೆ ಅದನ್ನು ಗುಣವೆಂದು ಹೇಳುತ್ತಾರೆ. ಆತ್ಮನಲ್ಲಿ ಎರಡು ಪ್ರಕಾರದ ಗುಣಗಳಿವೆ. ಜ್ಞಾನ-ದರ್ಶನ ಮೊದಲಾದ ಅಸಾಧಾರಣ ಗುಣಗಳಿವೆ ಅವು ಅನ್ಯ ದ್ರವ್ಯಗಳಲ್ಲಿ ಕಂಡು ಬರುವುದಿಲ್ಲ. ಪರ್ಯಾಯದ ಲಕ್ಷಣವು ಕ್ರಮವರ್ತಿಯಿದೆ. ಯಾವುದು ದ್ರವ್ಯದಲ್ಲಿ ಅನುಕ್ರಮದಿಂದ ಉತ್ಪನ್ನವಾಗುವುದು, ಕದಾಚಿತ್-ಕೆಲವೊಂದು ಬಾರಿ ಆಗುವುದನ್ನು ಪರ್ಯಾಯವೆಂದು ಹೇಳುತ್ತಾರೆ. ಆತ್ಮನಲ್ಲಿ ಎರಡು ಪ್ರಕಾರದ ಪರ್ಯಾಯಗಳಿವೆ. ಯಾವುದು ನರ-ನಾರಕ ಮೊದಲಾದ ಆಕಾರರೂಪ ಅಥವಾ ಸಿದ್ಧರ ಆಕಾರರೂಪ ಪರ್ಯಾಯವಿದೆ ಅದನ್ನು ವ್ಯಂಜನ ಪರ್ಯಾಯವೆಂದು ಹೇಳುತ್ತಾರೆ. ಜ್ಞಾನ ಮೊದಲಾದ ಗುಣಗಳದ್ದೂ ಕೂಡ ಸ್ವಭಾವ ಅಥವಾ ವಿಭಾವರೂಪವಾದ ಪರಿಣಮನವಿದ್ದು ಅದು ಆರು ಪ್ರಕಾರದಿಂದ ಹಾನಿ-ವೃದ್ಧಿರೂಪವಿದೆ ಅದನ್ನು ಅರ್ಥಪರ್ಯಾಯವೆಂದು ಹೇಳುತ್ತಾರೆ. ಈ ಗುಣ-ಪರ್ಯಾಯಗಳಿಂದ ಆತ್ಮನ ತಾದಾತ್ಮಕ ಏಕತೆಯಿದೆ. ಈ ವಿಶೇಷಣದಿಂದ ಆತ್ಮನ ವಿಶೇಷ್ಯವು ತಿಳಿದು ಬರುವ ಸಾಧ್ಯತೆಯಿದೆ.

ಮತ್ತೆ ಆ ಪುರುಷನು **'ಸಮುದಯವ್ಯಯಧ್ರೌವ್ಯೈಃ ಸಮಾಹಿತಃ'** - ಉತ್ಪಾದ, ವ್ಯಯ, ಧ್ರೌವ್ಯದಿಂದ ಸಂಯುಕ್ತನಿದ್ದಾನೆ. ನವೀನ ಅರ್ಥಪರ್ಯಾಯ ಮತ್ತು ವ್ಯಂಜನಪರ್ಯಾಯದ ಉತ್ಪತ್ತಿಯಾಗುವುದು ಅದು ಉತ್ಪಾದವಿದೆ, ಪೂರ್ವ ಪರ್ಯಾಯದ ನಾಶವಾಗುವುದು ಅದು ವ್ಯಯವಿದೆ ಮತ್ತು ಗುಣ ಅಪೇಕ್ಷೆಯಿಂದ ಅಥವಾ ದ್ರವ್ಯ ಅಪೇಕ್ಷೆಯಿಂದ ಶಾಶ್ವತವಿರುವುದು ಅದು ಧ್ರೌವ್ಯವಿದೆ. ಯಾವ ಪ್ರಕಾರ ಚಿನ್ನವು ಕುಂಡಲದ ಪರ್ಯಾಯದಿಂದ ಉತ್ಪನ್ನವಾಗುತ್ತದೆ, ಕಂಕಣದ ಪರ್ಯಾಯದಿಂದ ನಷ್ಟವಾಗುತ್ತದೆ ಮತ್ತು ಹಳದಿ ಮೊದಲಾದ ಅಪೇಕ್ಷೆಯಿಂದ ಅಥವಾ ಚಿನ್ನತ್ವದ ಅಪೇಕ್ಷೆಯಿಂದ ಎಲ್ಲ ಅವಸ್ಥೆಗಳಲ್ಲಿ ಶಾಶ್ವತವಿದೆ. ಈ ವಿಶೇಷಣದಿಂದ ಆತ್ಮನ ಅಸ್ತಿತ್ವವನ್ನು ಪ್ರಕಟ ಮಾಡಿದೆ.

ಇಂಥ ಚೈತನ್ಯ ಪುರುಷನಿಗೆ ಅಶುದ್ಧತೆಯು ಯಾವ ಪ್ರಕಾರದಿಂದ ಬಂದಿದೆ ಅದರ ಕಾರಣದಿಂದ ಇವನಿಗೆ ತನ್ನ ಅರ್ಥದ ಸಿದ್ಧಿ ಮಾಡಬೇಕಾಗಿದೆಯೆಂಬ ಪ್ರಶ್ನೆಯ ಉತ್ತರರೂಪವಾಗಿ ಈಗ ಶ್ಲೋಕ ಹೇಳುತ್ತಾರೆ, -

**ಪರಿಣಮಮಾನೋ ನಿತ್ಯಂ ಜ್ಞಾನವಿವರ್ತ್ತೈರನಾದಿಸಂತತ್ಯಾ ।**
**ಪರಿಣಾಮಾನಾಂ ಸ್ವೇಷಾಂ ಸ ಭವತಿ ಕರ್ತಾ ಚ ಭೋಕ್ತಾ ಚ ॥೧೦॥**

**ಅನ್ವಯಾರ್ಥ :-** **[ಸಃ]** ಆ ಚೈತನ್ಯ ಆತ್ಮನು **[ಅನಾದಿಸಂತತ್ಯಾ]** ಅನಾದಿಯ ಪರಿಪಾಟಿಯಿಂದ **[ನಿತ್ಯಂ]** ನಿರಂತರ **[ಜ್ಞಾನವಿವರ್ತ್ತೈಃ]** ಜ್ಞಾನಾದಿ ಗುಣಗಳ ವಿಕಾರರೂಪವಾದ ರಾಗ ಮೊದಲಾದ ಪರಿಣಾಮಗಳಿಂದ **[ಪರಿಣಮಮಾನೇ)** ಪರಿಣಮನ ಮಾಡುತ್ತ **[ಸ್ವೇಷಾಂ]** ತನ್ನ **[ಪರಿಣಾಮಾನಾಂ]** ರಾಗ ಮೊದಲಾದ ಪರಿಣಾಮಗಳ **[ಕರ್ತಾ ಚ ಭೋಕ್ತಾ ಚ]** ಕರ್ತೃ ಮತ್ತು ಭೋಕ್ತೃ ಕೂಡ **[ಭವತಿ]** ಆಗುತ್ತಾನೆ.

**ಟೀಕೆ :- 'ಅನಾದಿ ಸಂತತ್ಯಾ ನಿತ್ಯಂ ಜ್ಞಾನವಿವರ್ತ್ತೈಃ ಪರಿಣಮಮಾನಃ ಸ್ವೇಷಾಂ ಪರಿಣಾಮಾನಾಂ ಕರ್ತ್ತಾ ಚ ಭೋಕ್ತಾ ಚ ಭವತಿ'** - ಆ ಚೈತನ್ಯ ಪುರುಷನು ಅನಾದಿ ಪರಿಪಾಟಿಯಿಂದ ಯಾವಾಗಲೂ ಜ್ಞಾನ-ಚಾರಿತ್ರದಿಂದ ರಹಿತನಾಗಿ ಆ ರಾಗ ಮೊದಲಾದ ಪರಿಣಾಮದಿಂದ ಪರಿಣಮನ ಮಾಡುತ್ತ ಆ ತನ್ನ ರಾಗ ಮೊದಲಾದ ಪರಿಣಾಮಗಳ ಕರ್ತೃ ಹಾಗೂ ಭೋಕ್ತೃ ಕೂಡ ಇದ್ದಾನೆ.

**ಭಾವಾರ್ಥ :-** ಈ ಆತ್ಮನಿಗೆ ಅಶುದ್ಧತೆಯು ನವೀನವಾಗಿ ಉತ್ಪನ್ನವಾಗಿಲ್ಲ. ಅನಾದಿಕಾಲದಿಂದ ಸಂತಾನರೂಪವಾಗಿ ದ್ರವ್ಯಕರ್ಮದಿಂದ ರಾಗಾದಿಗಳು ಆಗುತ್ತವೆ. ಪುನಃ ಅವೇ ರಾಗಾದಿಗಳಿಂದ ದ್ರವ್ಯ ಕರ್ಮದ ಬಂಧವಾಗುತ್ತದೆ. ಕನಕಕಾಳಿಕೆಯಂತೆ ಅನಾದಿಯಿಂದ ಸಂಬಂಧವಿದೆ. ಆ ಸಂಬಂಧದ ಕಾರಣವಾಗಿ ಈ ಜೀವನಿಗೆ ತನ್ನ ಜ್ಞಾನಸ್ವಭಾವದ ಬೋಧವಿಲ್ಲದಿರುವುದರಿಂದ ಉದಯಾಗತವಾದ ಕರ್ಮಪರ್ಯಾಯದಲ್ಲಿ ಇಷ್ಟ-ಅನಿಷ್ಟ ಭಾವದಿಂದರಾಗ, ದ್ವೇಷ, ಮೋಹರೂಪವಾಗಿ ಪರಿಣಮನ ಮಾಡುತ್ತಲಿದ್ದಾನೆ. ಈ ಪರಿಣಾಮಗಳಾಗುವಲ್ಲಿ ದ್ರವ್ಯಕರ್ಮಗಳು ಕಾರಣವಾಗಿದ್ದರೂ ಕೂಡ ಈ ಪರಿಣಾಮಗಳು ಚೇತನಾಮಯವಾಗಿರುವುದರಿಂದ ಈ ಪರಿಣಾಮಗಳ ಕರ್ತೃವು ವ್ಯಾಪ್ಯ-ವ್ಯಾಪಕಭಾವದಿಂದ ಆತ್ಮನೇ ಇದ್ದಾನೆ. ಭಾವ್ಯ-ಭಾವಕಭಾವದಿಂದ ಆತ್ಮನೇ ಭೋಕ್ತೃ ಇದ್ದಾನೆ. ಈಗ ವ್ಯಾಪ್ಯ-ವ್ಯಾಪಕಭಾವದ ಸ್ವರೂಪ ಹೇಳುತ್ತಾರೆ. ಯಾವುದು ನಿಯಮದಿಂದ ಸಹಚರವಿದೆ ಅದನ್ನು ವ್ಯಾಪ್ತಿಯೆಂದು ಹೇಳುತ್ತಾರೆ. ಯಾವ ಪ್ರಕಾರ ಧೂಮ್ರ ಮತ್ತು ಅಗ್ನಿಯಲ್ಲಿ ಸಹಚರ್ಯವಿದೆ ಎಂದರೆ ಎಲ್ಲಿ ಧೂಮ್ರವಿರುತ್ತದೆ ಅಲ್ಲಿ ಅಗ್ನಿಯು ಇದ್ದೇ ಇರುತ್ತದೆ ಅಗ್ನಿಯಿಲ್ಲದೆ ಧೂಮ್ರವಿರುವುದಿಲ್ಲ. ಅದೇ ಪ್ರಕಾರ ರಾಗ ಮೊದಲಾದ ಭಾವಗಳಲ್ಲಿ ಮತ್ತು ಆತ್ಮನಲ್ಲಿ ಸಹಚರತನವಿದೆ. ಎಲ್ಲಿ ರಾಗಾದಿ ಭಾವಗಳು ಇರುತ್ತವೆ ಅಲ್ಲಿ ಆತ್ಮನು ಇದ್ದೇ ಇರುತ್ತಾನೆ ಆತ್ಮನಿಲ್ಲದೆ ರಾಗಾದಿಗಳು ಇರುವುದಿಲ್ಲ. ಈ ವ್ಯಾಪ್ತಿ ಕ್ರಿಯೆಯಲ್ಲಿ ಯಾವ ಕರ್ಮವಿದೆ, ಅದನ್ನು ವ್ಯಾಪ್ಯವೆಂದು ಹೇಳುತ್ತಾರೆ ಮತ್ತು ಆತ್ಮನು ಕರ್ತೃ ಇದ್ದಾನೆ, ಅವನನ್ನು ವ್ಯಾಪಕನೆಂದು ಹೇಳುತ್ತಾರೆ. ಈ ಪ್ರಕಾರ ಎಲ್ಲಿ ವ್ಯಾಪ್ಯ-ವ್ಯಾಪಕ ಸಂಬಂಧವಿದೆ ಅಲ್ಲಿಯೇ ಕರ್ತಾ-ಕರ್ಮ ಸಂಬಂಧವು ಸಂಭವಿಸುತ್ತದೆ, ಇತರ ಸ್ಥಾನದಲ್ಲಿ ಸಂಭವಿಸುವುದಿಲ್ಲ. ಇದೇ ಪ್ರಕಾರ ಯಾವ ಯಾವ ಭಾವಗಳು ಅನುಭವ ಮಾಡಲು ಯೋಗ್ಯವಿವೆ, ಅದನ್ನು ಭಾವ್ಯವೆಂದು ಮತ್ತು ಅನುಭವ ಮಾಡುವಂಥ ಪರ್ಯಾಯವನ್ನು ಭಾವಕವೆಂದು ಹೇಳುತ್ತಾರೆ. ಇಂಥ ಭಾವ್ಯ-ಭಾವಕ ಸಂಬಂಧವು ಎಲ್ಲಿ ಇರುವುದು ಅಲ್ಲಿಯೇ ಭೋಕ್ತಾ-ಭೋಗ್ಯ ಸಂಬಂಧವು ಸಂಭವಿಸುತ್ತದೆ, ಇತರ ಸ್ಥಾನದಲ್ಲಿ ಸಂಭವಿಸುವುದಿಲ್ಲ.

ಈ ಪ್ರಕಾರ ಈ ಅಶುದ್ಧ ಆತ್ಮನ ಅರ್ಥ-ಸಿದ್ಧಿಯು ಯಾವಾಗ ಆಗುತ್ತದೆ ಮತ್ತು ಯಾವುದನ್ನು ಅರ್ಥ-ಸಿದ್ಧಿಯೆಂದು ಹೇಳುತ್ತಾರೆ ಅದನ್ನು ಈಗ ತಿಳಿಸಿಕೊಡುತ್ತಾರೆ.-

**ಸರ್ವವಿವರ್ತೋತ್ತೀರ್ಣಂ ಯದಾ ಸ ಚೈತನ್ಯಮಚಲಮಾಪ್ನೋತಿ ।**
**ಭವತಿ ತದಾ ಕೃತಕೃತ್ಯಃ ಸಮ್ಯಕ್ಪುರುಷಾರ್ಥಸಿದ್ಧಿಮಾಪನ್ನ ।।೧೧।।**

**ಅನ್ವಯಾರ್ಥ :- [ಯದಾ]** ಯಾವಾಗ **[ಸಃ]** ಉಪರ್ಯುಕ್ತ ಅಶುದ್ಧ ಆತ್ಮನು **[ಸರ್ವವಿವರ್ತೋತ್ತೀರ್ಣಂ)** ಸಮಸ್ತ ವಿಭಾವಗಳಿಂದ ದೂರನಾಗಿ **[ಅಚಲಂ]** ತನ್ನ ನಿಷ್ಕಂಪವಾದ **[ಚೈತನ್ಯಂ]** ಚೈತನ್ಯ ಸ್ವರೂಪವನ್ನು **[ಪ್ರಾಪ್ನೋತಿ]** ಪ್ರಾಪ್ತ ಮಾಡಿಕೊಳ್ಳುತ್ತಾನೆ. **[ತದಾ]** ಆಗ ಈ ಆತ್ಮನು ಆ **[ಸಮ್ಯಕ್ಪುರುಷಾರ್ಥಸಿದ್ಧಿಮ್]** ಸಮ್ಯಕ್ ಪ್ರಕಾರದಿಂದ ಪುರುಷಾರ್ಥದ ಪ್ರಯೋಜನದ ಸಿದ್ಧಿಯನ್ನು **[ಆಪನ್ನಃ]** ಪ್ರಾಪ್ತ ಮಾಡಿಕೊಳ್ಳುತ್ತ **[ಕೃತ ಕೃತ್ಯಃ ಭವತಿ]** ಕೃತಕೃತ್ಯನಾಗುತ್ತಾನೆ.

**ಟೀಕೆ : 'ಸ ಯದಾ ಸರ್ವವಿವರ್ತೋತ್ತೀರ್ಣಂ ಚೈತನ್ಯಮಚಲಮಾಪ್ನೋತಿ ತದಾ ಕೃತಕೃತ್ಯಃ ಭವತಿ'** - ರಾಗ ಮೊದಲಾದ ಭಾವಗಳಿಂದ ಲಿಪ್ತನಾದ ಅದೇ ಆತ್ಮನು ಯಾವಾಗ ಸಮಸ್ತ ವಿಭಾವಗಳಿಂದ ದಾಟಿದವನಾಗಿ ತನ್ನ ಚೈತನ್ಯಸ್ವರೂಪನಾದ ಆತ್ಮನನ್ನು ನಿಃಶಂಕತೆಯಿಂದ ಪ್ರಾಪ್ತಮಾಡಿಕೊಳ್ಳುತ್ತಾನೆ, ಆಗ ಅದೇ ಆತ್ಮನು ಕೃತಕೃತ್ಯನಾಗುತ್ತಾನೆ. ಆ ಆತ್ಮನು **'ಸಮ್ಯಕ್ಪುರುಷಾರ್ಥಸಿದ್ಧಿಮಾಪನ್ನ'** - ಸಮ್ಯಕ್ ಪ್ರಕಾರದಿಂದ ಪುರುಷಾರ್ಥದ ಸಿದ್ಧಿಗೆ ಪ್ರಾಪ್ತನಾಗಿದ್ದಾನೆ.

**ಭಾವಾರ್ಥ :-** ಯಾವಾಗ ಈ ಆತ್ಮನು ಸ್ವ-ಪರ ಭೇದವಿಜ್ಞಾನದಿಂದ ಶರೀರ ಮೊದಲಾದ ಪರದ್ರವ್ಯಗಳನ್ನು ಭಿನ್ನವಾಗಿ ತಿಳಿಯುತ್ತಾನೆ ಆಗ 'ಇದು ಒಳ್ಳೆಯದು ಇಷ್ಟವಿದೆ, ಇದು ಕೆಡಕು ಅನಿಷ್ಟವಿದೆ'ಯೆಂಬ ಬುದ್ಧಿಯ ತ್ಯಾಗ ಮಾಡಿಬಿಡುತ್ತಾನೆ. ಯಾವುದು ಸ್ವಲ್ಪಾದರೂ ಒಳಿತು-ಕೆಡಕು ಆಗುತ್ತದೆ, ಅದೆಲ್ಲವೂ ತನ್ನ ಪರಿಣಾಮಗಳಿಂದಲೇ ಆಗುತ್ತದೆ, ಪರದ್ರವ್ಯವು ಮಾಡುವುದರಿಂದ ಒಳಿತು-ಕೆಡಕು ಆಗುವುದಿಲ್ಲ. ಆದುದರಿಂದ ಸಮಸ್ತ ಪರದ್ರವ್ಯಗಳಲ್ಲಿ ರಾಗ-ದ್ವೇಷ ಭಾವಗಳ ತ್ಯಾಗ ಮಾಡಿ ಬಿಡುತ್ತಾನೆ. ಅಶಕ್ತತೆಯಿಂದ (ಪುರುಷಾರ್ಥದ ನಿರ್ಬಲತೆಯಿಂದ) ಯಾವ ರಾಗಾದಿಗಳು ಉತ್ಪನ್ನವಾಗುತ್ತವೆ ಅವುಗಳ ನಾಶದ ಸಲುವಾಗಿ ಅನುಭವ-ಅಭ್ಯಾಸದಲ್ಲಿ ಉದ್ಯಮಶೀಲನಾಗಿರುತ್ತಾನೆ. ಹೀಗೆ ಮಾಡುತ್ತ ಮಾಡುತ್ತ ಯಾವಾಗ ಸಮಸ್ತ ವಿಭಾವಗಳು ನಾಶವಾಗಿ ಹೋಗುತ್ತವೆ ಮತ್ತು ಅಕ್ಷುಬ್ಧವಾದ ಸಮುದ್ರದಂತೆ ಶುದ್ಧಾತ್ಮಸ್ವರೂಪದಲ್ಲಿ ಲವಣದ ಹಾಗೆ ಪರಿಣಾಮವು ಲೀನವಾಗಿ ಹೋಗುತ್ತದೆ, ಧ್ಯಾತಾ-ಧ್ಯೇಯದ ವಿಕಲ್ಪವು ಕೂಡ ಉಳಿಯುವುದಿಲ್ಲ. ನಾನು ಶುದ್ಧಾತ್ಮಸ್ವರೂಪದ ಧ್ಯಾನಮಾಡುತ್ತಿದ್ದೇನೆಂಬುದನ್ನೂ ತಿಳಿಯುವುದಿಲ್ಲ, ತಾನೇ ತಾದಾತ್ಮ್ಯವೃತ್ತಿಯಿಂದ ಶುದ್ಧಾತ್ಮಸ್ವರೂಪನಾಗಿ ನಿಷ್ಕಂಪ ಪರಿಣಮನ ಮಾಡುತ್ತಾನೆ, ಆ ಸಮಯದಲ್ಲಿ ಈ ಆತ್ಮನು ಯಾವುದನ್ನು ಮಾಡಬೇಕಾಗಿತ್ತು ಅದನ್ನು ಮಾಡಿಕೊಂಡಿದ್ದಾನೆ. ಈಗ ಏನನ್ನು ಮಾಡುವುದೂ ಬಾಕಿ ಉಳಿದಿಲ್ಲ, ಆದುದರಿಂದ ಇವನನ್ನು ಕೃತಕೃತ್ಯನೆಂದು ಹೇಳುತ್ತಾರೆ. ಇದೇ ಅವಸ್ಥೆಯನ್ನು ಪುರುಷಾರ್ಥದ ಸಿದ್ಧಿಯೆಂದು ಹೇಳುತ್ತಾರೆ. ಪುರುಷನ ಆ ಅರ್ಥ ಎಂದರೆ ಪ್ರಯೋಜನರೂಪ ಕಾರ್ಯದ ಸಿದ್ಧಿಯಾಗುವುದಿತ್ತು ಅದು ಆಗಿ ಹೋಗಿದೆ; ಈ ಅವಸ್ಥೆಗೆ ಯಾವನು ಪ್ರಾಪ್ತನಾಗಿದ್ದಾನೆ ಆ ಆತ್ಮನನ್ನು ಕೃತಕೃತ್ಯನೆಂದು ಹೇಳುತ್ತಾರೆ.

ಈಗ ಪುರುಷಾರ್ಥಸಿದ್ಧಿಯ ಉಪಾಯ ಹೇಳಲಪೇಕ್ಷಿಸುತ್ತಾರೆ, ಅಲ್ಲಿ ಮೊದಲೇ ಪರದ್ರವ್ಯದ ಸಂಬಂಧದ ಕಾರಣ ಹೇಳುತ್ತಾರೆ. ಅವನ್ನು ತಿಳಿದ ನಂತರ ಯಾವ ಉಪಾಯ ಮಾಡಲಾಗುತ್ತದೆಯೆಂಬುದನ್ನು ಹೇಳುತ್ತಾರೆ,-

**ಜೀವಕೃತಂ ಪರಿಣಾಮಂ ನಿಮಿತ್ತಮಾತ್ರಂ ಪ್ರಪದ್ಯ ಪುನರನ್ಯೇ ।**
**ಸ್ವಯಮೇವ ಪರಿಣಮಂತೇಽತ್ರ ಪುದ್ಗಲಾಃ ಕರ್ಮಭಾವೇನ ।।೧೨।।**

**ಅನ್ವಯಾರ್ಥ :- [ಜೀವಕೃತಂ]** ಜೀವನು ಮಾಡಿರುವ **[ಪರಿಣಾಮಂ]** ರಾಗ ಮೊದಲಾದ ಪರಿಣಾಮಗಳ **[ನಿಮಿತ್ತಮಾತ್ರಂ]** ನಿಮಿತ್ತ ಮಾತ್ರವನ್ನು **[ಪ್ರಪದ್ಯ]** ಪಡೆದು **[ಪುನಃ]** ಮತ್ತೆ **[ಅನ್ಯೇಪುದ್ಗಲಾಃ]** ಜೀವದಿಂದ ಭಿನ್ನವಾದ ಅನ್ಯ ಪುದ್ಗಲ ಸ್ಕಂಧಗಳು **[ಅತ್ರ]** ಆತ್ಮನಲ್ಲಿ **[ಸ್ವಯಮೇವ]** ತಮ್ಮಿಂದ ತಾವೇ **[ಕರ್ಮಭಾವೇನ]** ಜ್ಞಾನಾವರಣ ಮೊದಲಾದ ಕರ್ಮರೂಪವಾಗಿ **[ಪರಿಣಮಂತೇ]** ಪರಿಣಮನ ಮಾಡಿಬಿಡುತ್ತವೆ.

**ಟೀಕೆ :- 'ಜೀವಕೃತಂ ಪರಿಣಾಮಂ ನಿಮಿತ್ತಮಾತ್ರಂ ಪ್ರಪದ್ಯ ಪುನಃ ಅನ್ಯೇ ಪುದ್ಗಲಾಃ ಸ್ವಯಮೇವ ಕರ್ಮಭಾವೇನ ಪರಿಣಮಂತೇ ।'** ಜೀವನು ಮಾಡಿರುವ ರಾಗ ಮೊದಲಾದ ಪರಿಣಾಮಗಳ ನಿಮಿತ್ತ ಮಾತ್ರವನ್ನು ಪಡೆದು ನವೀನ ಅನ್ಯ ಪುದ್ಗಲ ಸ್ಕಂಧಗಳು ತಾವಾಗಿಯೇ ಜ್ಞಾನಾವರಣ ಮೊದಲಾದ ಕರ್ಮಗಳ ರೂಪವಾಗಿ ಪರಿಣಮನ ಮಾಡುತ್ತವೆ.

**ಭಾವಾರ್ಥ :-** ಜೀವನು ಯಾವಾಗ ರಾಗ-ದ್ವೇಷ-ಮೋಹ ಭಾವರೂಪವಾಗಿ ಪರಿಣಮನ ಮಾಡುತ್ತಾನೆ. ಆಗ ಆ ಭಾವಗಳ ನಿಮಿತ್ತ ಪಡೆದು ಪುದ್ಗಲ ದ್ರವ್ಯವು ತಾನೇ ಕರ್ಮ ರೂಪವಾದ ಅವಸ್ಥೆಯನ್ನು ಧಾರಣ ಮಾಡುತ್ತದೆ. ವಿಶೇಷವೇನೆಂದರೆ ಯಾವಾಗ ಆತ್ಮನು ದೇವ-ಗುರು-ಧರ್ಮ ಮೊದಲಾದ ಪ್ರಶಸ್ತ ರಾಗರೂಪವಾಗಿ ಪರಿಣಮನ ಮಾಡುತ್ತಾನೆ. ಆಗ ಶುಭಕರ್ಮದ ಬಂಧವಾಗುತ್ತದೆ. (ಮತ್ತು ಇದರ ವಿರುದ್ಧ ಅಪ್ರಶಸ್ತ ರಾಗ-ದ್ವೇಷ-ಮೋಹರೂಪವಾಗಿ ಪರಿಣಮನ ಮಾಡುತ್ತಾನೆ. ಆಗ ಅಶುಭಕರ್ಮದ ಬಂಧವಾಗುತ್ತದೆ.)

**ಪ್ರಶ್ನೆ :-** ಜೀವದ ಭಾವಗಳು ಅತ್ಯಂತ ಸೂಕ್ಷ್ಮರೂಪವಿದ್ದು ಅವುಗಳ ಜ್ಞಾನವು ಜಡಕರ್ಮಗಳಿಗೆ ಹೇಗಾಗುತ್ತದೆ? ಮತ್ತು ಜ್ಞಾನವಾದಲ್ಲದೆ ಪುಣ್ಯ-ಪಾಪರೂಪವಾಗಿ ಹೇಗೆ ಪರಿಣಮನ ಮಾಡಿ ಬಿಡುತ್ತವೆ ?

**ಉತ್ತರ :-** ಯಾವ ಪ್ರಕಾರ ಮಂತ್ರಸಾಧಕ ಪುರುಷನು ಕುಳಿತುಕೊಂಡೇ ಗುಪ್ತರೂಪದಿಂದ ಮಂತ್ರ ಜಪಿಸುತ್ತಾನೆ ಮತ್ತು ಅವನು ಏನನ್ನು ಮಾಡದೆಯೇ ಆ ಮಂತ್ರದ ನಿಮಿತ್ತದಿಂದ ಯಾವನೋ ಓರ್ವನಿಗೆ ಪೀಡೆಯು ಉತ್ಪನ್ನವಾಗುತ್ತದೆ, ಯಾವನೋ ಓರ್ವನಿಗೆ ಮರಣವಾಗುತ್ತದೆ, ಯಾವನೋ ಓರ್ವನಿಗೆ ಒಳ್ಳೆಯದಾಗುತ್ತದೆ, ಯಾವನೋ ಓರ್ವನು ವಿಡಂಬನ ರೂಪವಾಗಿ ಪರಿಣಮನ ಮಾಡುತ್ತಾನೆ. ಇಂಥ ಶಕ್ತಿಯು ಆ ಮಂತ್ರದಲ್ಲಿ ಇದೆ. ಇದರ ನಿಮಿತ್ತ ಪಡೆದು ಚೇತನ-ಅಚೇತನ ಪದಾರ್ಥಗಳು ತಾವಾಗಿಯೇ ಅನೇಕ ಅವಸ್ಥೆಗಳನ್ನು ಧಾರಣ ಮಾಡುತ್ತವೆ. ಅದೇ ಪ್ರಕಾರ ಅಜ್ಞಾನೀ ಜೀವನು ತನ್ನ ಅಂತರಂಗದಲ್ಲಿ ವಿಭಾವ ಭಾವರೂಪವಾಗಿ ಪರಿಣಮನ ಮಾಡುತ್ತಾನೆ. ಆ ಭಾವಗಳ ನಿಮಿತ್ತ ಪಡೆದು ಇವನು ಏನನ್ನೂ ಮಾಡದೆಯೇ ಕೆಲವು ಪುದ್ಗಲಗಳು ಪುಣ್ಯ ಪ್ರಕೃತಿರೂಪವಾಗಿ ಪರಿಣಮನ ಮಾಡುತ್ತವೆ ಮತ್ತು ಕೆಲವು ಪಾಪ ಪ್ರಕೃತಿರೂಪವಾಗಿ ಪರಿಣಮನ ಮಾಡುತ್ತವೆ. ಇವನ ಭಾವಗಳಲ್ಲಿ ಅಂಥ ಶಕ್ತಿಯಿದೆ. ಅದರ ನಿಮಿತ್ತ ಪಡೆದು ಪುದ್ಗಲಗಳು ತಾವಾಗಿಯೇ ಅನೇಕ ಅವಸ್ಥೆಗಳನ್ನು ಧಾರಣ ಮಾಡುತ್ತವೆ. ಹೀಗೆಯೇ ನಿಮಿತ್ತ-ನೈಮಿತ್ತಿಕ ಸಂಬಂಧವಿದೆ.

ಈ ಜೀವನಿಗೆ ಯಾವ ವಿಭಾವ ಭಾವಗಳಾಗುತ್ತವೆ, ಅವು ತಾವಾಗಿಯೇ ಆಗುತ್ತವೆಯೋ ಅಥವಾ ಅವಕ್ಕೂ ಯಾವುದಾದರೂ ನಿಮಿತ್ತಕಾರಣವಿದೆಯೋ ?- ಎಂಬ ಪ್ರಶ್ನೆಯ ಉತ್ತರ ರೂಪವಾಗಿ ಈಗ ಶ್ಲೋಕ ಹೇಳುತ್ತಾರೆ,-

> ಪರಿಣಮಮಾನಸ್ಯ ಚಿತಾಚಿದಾತ್ಮಕೈಃ ಸ್ವಯಮಪಿ ಸ್ವಕೈರ್ಭಾವೈಃ ।
> ಭವತಿ ಹಿ ನಿಮಿತ್ತಮಾತ್ರ ಪೌದ್ಗಲಿಕಂ ಕರ್ಮ ತಸ್ಯಾಪಿ ॥೧೩॥

**ಅನ್ವಯಾರ್ಥ :- (ಹಿ)** ನಿಶ್ಚಯದಿಂದ **(ಸ್ವಕೈಃ)** ತಮ್ಮ **(ಚಿದಾತ್ಮಕೈಃ)** ಚೇತನಾಸ್ವರೂಪವಾದ **(ಭಾವೈಃ)** ರಾಗ ಮೊದಲಾದ ಪರಿಣಾಮಗಳಿಂದ **(ಸ್ವಯಮಪಿ)** ತಾನಾಗಿಯೇ **(ಪರಿಣಮಮಾನಸ್ಯ)** ಪರಿಣಮನ ಮಾಡುತ್ತ

**(ತಸ್ಯ ಚಿತಃ ಅಪಿ)** ಪೂರ್ವೋಕ್ತ ಆತ್ಮನಿಗೆ ಕೂಡ **(ಪೌದ್ಗಲಿಕಂ ಕರ್ಮ)** ಪುದ್ಗಲ ಸಂಬಂಧದ ಜ್ಞಾನಾವರಣ ಮೊದಲಾದ ದ್ರವ್ಯಕರ್ಮಗಳು **(ನಿಮಿತ್ತಮಾತ್ರಂ ಭವತಿ)** ನಿಮಿತ್ತ ಮಾತ್ರವಾಗುತ್ತವೆ.

**ಟೀಕೆ :- 'ಹೀ ಚಿದಾತ್ಮಕೈಃ ಸ್ವಕೈರ್ಭಾವೈಃ ಪರಿಣಮಮಾನಸ್ಯ ತಸ್ಯ ಚಿತಃ ಅಪಿ ಪೌದ್ಗಲಿಕಂ ಕರ್ಮ ನಿಮಿತ್ತ- ಮಾತ್ರಂ ಭವತಿ'** - ನಿಶ್ಚಯದಿಂದ ಚೈತನ್ಯಸ್ವರೂಪ ತನ್ನ ರಾಗ ಮೊದಲಾದ ಪರಿಣಾಮರೂಪದಿಂದ ಪರಿಣಮಿಸಿದ ಆ ಪೂರ್ವೋಕ್ತ ಆತ್ಮನಿಗೆ ಕೂಡ ಪೌದ್ಗಲಿಕ ಜ್ಞಾನಾವರಣಾದಿ ಕರ್ಮಗಳು ನಿಮಿತ್ತಮಾತ್ರವಾಗುತ್ತವೆ.

**ಭಾವಾರ್ಥ :-** ಈ ಜೀವನಿಗೆ ರಾಗ ಮೊದಲಾದ ವಿಭಾವ ಭಾವಗಳು ತಮ್ಮಿಂದ ತಾವೇ (ಸ್ವದ್ರವ್ಯದ ಅವಲಂಬನೆಯಿಂದ) ಆಗುವುದಿಲ್ಲ. ಒಂದು ವೇಳೆ ತಮ್ಮಿಂದಲೇ ಆಗುತ್ತಿದ್ದರೆ ಅವು ಕೂಡ ಜ್ಞಾನ-ದರ್ಶನದ ಹಾಗೆ ಸ್ವಭಾವಭಾವವಾಗಿ ಬಿಡುವವು, ಮತ್ತು ಸ್ವಭಾವಭಾವವಾದ ಮೇಲೆ ಅವುಗಳ ನಾಶ ಕೂಡ ಎಂದೂ ಆಗುವ ಸಾಧ್ಯತೆಯಿಲ್ಲ. ಆದುದರಿಂದ ಇವು ಔಪಾಧಿಕ ಭಾವಗಳಿದ್ದು ಅನ್ಯ ನಿಮಿತ್ತದಿಂದ ಆಗುತ್ತವೆ. ಮತ್ತು ಆ ನಿಮಿತ್ತಗಳು ಜ್ಞಾನಾವರಣಾದಿ ದ್ರವ್ಯಕರ್ಮಗಳೆಂದು ತಿಳಿಯುವುದು. ಯಾವ ಯಾವ ಪ್ರಕಾರದಿಂದ ದ್ರವ್ಯಕರ್ಮಗಳು ಉದಯಾವಸ್ಥೆಗೆ ಪ್ರಾಪ್ತವಾಗುತ್ತವೆ ಅದೇ ಅದೇ ಪ್ರಕಾರದಿಂದ ಆತ್ಮನು ವಿಭಾವಭಾವರೂಪವಾಗಿ ಪರಿಣಮನ ಮಾಡುತ್ತಾನೆ.

**ಪ್ರಶ್ನೆ :-** ಚೈತನ್ಯವನ್ನು ವಿಭಾವಭಾವರೂಪವಾಗಿ ಪರಿಣಮನ ಮಾಡಿಸಿಬಿಡುವಂಥ ಶಕ್ತಿಯು ಪುದ್ಗಲದಲ್ಲಿ ಯಾವುದಿದೆ ?

**ಉತ್ತರ :-** ಯಾವ ಪ್ರಕಾರ ಯಾವನೋ ಓರ್ವ ಮನುಷ್ಯನ ತಲೆಯ ಮೇಲೆ ಮಂತ್ರಿಸಿದ ಧೂಳನ್ನು ಹಾಕಿಬಿಟ್ಟರೆ ಆ ಧೂಳದ ನಿಮಿತ್ತದಿಂದ ಆ ಪುರುಷನು ತನ್ನನ್ನು ತಾನು ಮರೆತು ನಾನಾ ಪ್ರಕಾರದ ವಿಪರೀತವಾದ ಚೇಷ್ಟೆಗಳನ್ನು ಮಾಡುತ್ತಾನೆ. ಆ ಬುದ್ಧಿವಂತ ಪುರುಷನನ್ನು ವಿಪರೀತವಾಗಿ ಪರಿಣಮನ★ ಮಾಡಿಸಿ ಬಿಡುವಂಥ ಶಕ್ತಿಯು ಮಂತ್ರದ ನಿಮಿತ್ತದಿಂದ ಆ ಧೂಳದಲ್ಲಿ ಬಂದು ಬಿಡುತ್ತದೆ. ಅದೇ ಪ್ರಕಾರ ಈ ಆತ್ಮನ ಪ್ರದೇಶಗಳಲ್ಲಿರಾಗಾದಿಗಳ ನಿಮಿತ್ತದಿಂದ ಕಟ್ಟಲ್ಪಟ್ಟ ಪುದ್ಗಲಗಳ ನಿಮಿತ್ತದಿಂದ ಈ ಆತ್ಮನು ತನ್ನನ್ನು ತಾನು ಮರೆತು ನಾನಾ ಪ್ರಕಾರದ ವಿಪರೀತ ಭಾವರೂಪವಾಗಿ ಪರಿಣಮನ ಮಾಡುತ್ತಾನೆ. ಆ ಚೈತನ್ಯ ಪುರುಷನನ್ನು ವಿಪರೀತವಾಗಿ ಪರಿಣಮನ ಮಾಡಿಸಿ ಬಿಡುವಂಥ ಶಕ್ತಿಯು ಇವನ ವಿಭಾವ ಭಾವಗಳ ನಿಮಿತ್ತದಿಂದ ಪುದ್ಗಲದಲ್ಲಿ ಬಂದು ಬಿಡುತ್ತದೆ. ಈ ಪ್ರಕಾರ ಭಾವಕರ್ಮದಿಂದ ದ್ರವ್ಯಕರ್ಮ ಮತ್ತು ದ್ರವ್ಯಕರ್ಮದಿಂದ ಭಾವಕರ್ಮವಾಗುತ್ತದೆ. ಇದನ್ನೇ ಸಂಸಾರವೆಂದು ಹೇಳುತ್ತಾರೆ.

ಯಾವುದರ ನಾಶವಾದ ಮೇಲೆ ಪುರುಷಾರ್ಥಸಿದ್ಧಿಯ ಉಪಾಯವು ಸಂಭವಿಸುತ್ತದೆ, ಅಂಥ ಸಂಸಾರದ ಮೂಲ ಕಾರಣವನ್ನು ಈಗ ತಿಳಿಸಿಕೊಡುತ್ತಾರೆ, -

ಏವಮಯಂ ಕರ್ಮಕೃತೈರ್ಭಾವೈರಸಮಾಹಿತೋಽಪಿ ಯುಕ್ತ ಇವ ।
ಪ್ರತಿಭಾತಿಬಾಲಿಶಾನಾಂ ಪ್ರತಿಭಾಸಃ ಸ ಖಲು ಭವಬೀಜಮ್ ॥೧೪॥

---

★ ಪ್ರತಿಯೊಂದು ದ್ರವ್ಯವು ಸ್ವದ್ರವ್ಯ-ಕ್ಷೇತ್ರ-ಕಾಲ ಮತ್ತು ಭಾವದಿಂದ ಇದೆ ಅದರಲ್ಲಿ ಯಾವಾಗಲೂ ಪರದ್ರವ್ಯಾದಿಗಳ ಅಭಾವವೇ ಇರುವುದರಿಂದ ಯಾವುದನ್ನು ಯಾವುದೂ ಪರಿಣಮನ ಮಾಡಿಸುವ ಸಾಧ್ಯತೆಯಿಲ್ಲ, ಆದಾಗ್ಯೂ ಜೀವನು ಆ ಪ್ರಕಾರದಿಂದ ಪರಿಣಮನ ಮಾಡುವ ಯೋಗ್ಯತೆಯ ಕಾಲದಲ್ಲಿ - ಬಾಹ್ಯದೊಳಗೆ ಯಾವ ಸಾಮಗ್ರಿಗಳನ್ನು ನಿಮಿತ್ತ ಮಾಡುವುದರಲ್ಲಿ ಬರುತ್ತದೆ ಅದರ ಜ್ಞಾನ ಮಾಡಿಸಿಕೊಡುವ ಸಲುವಾಗಿ ಅಸದ್ಭೂತ ವ್ಯವಹಾರ ನಯದಿಂದ ನಿಮಿತ್ತವನ್ನು ಕರ್ತೃವೆಂದು ಹೇಳಲಾಗುತ್ತದೆ. ವ್ಯವಹಾರ ಕಥನದ ರೀತಿಯು ಹೀಗೆಯೇ ಇದೆಯೆಂದು ತಿಳಿದುಕೊಳ್ಳಬೇಕಾಗುವುದು.

**ಅನ್ವಯಾರ್ಥ :-** **[ಏವಂ]** ಈ ಪ್ರಕಾರ **[ಅಯಂ]** ಈ ಆತ್ಮನು **[ಕರ್ಮಕೃತೈಃ]** ಕರ್ಮಕೃತವಾದ **[ಭಾವೈಃ]** ರಾಗ ಮೊದಲಾದ ಅಥವಾ ಶರೀರ ಮೊದಲಾದ ಭಾವಗಳಿಂದ **[ಅಸಮಾಹಿತೋಽಪಿ]** ಸಂಯುಕ್ತವಾಗಿರದಿದ್ದರೂ ಕೂಡ **[ಬಾಲಿಶಾನಾಂ]** ಅಜ್ಞಾನೀ ಜೀವರುಗಳಿಗೆ **[ಯುಕ್ತಃ ಇವ]** ಸಂಯುಕ್ತವಾದಂತೆ **[ಪ್ರತಿಭಾತಿ]** ಪ್ರತಿಭಾಸಿತವಾಗುತ್ತದೆ. ಮತ್ತು **[ಸಃ ಪ್ರತಿಭಾಸಃ]** ಆ ಪ್ರತಿಭಾಸವೇ **[ಖಲು]** ನಿಶ್ಚಯದಿಂದ **[ಭವಬೀಜಂ]** ಸಂಸಾರದ ಬೀಜರೂಪವಿದೆ.

**ಟೀಕೆ :- 'ಸ ಏವಂ ಅಯಂ ಕರ್ಮಕೃತೈರ್ಭಾವೈಃ ಅಸಮಾಹಿತಃ ಅಪಿ ಬಾಲಿಶಾನಾಂ ಯುಕ್ತಃ ಇವಪ್ರತಿಭಾತಿ'** - ಈ ಪ್ರಕಾರ ಈ ಆತ್ಮನು ಕರ್ಮದ ಮೂಲಕ ಮಾಡಲಾಗುವ ನಾನಾ ಪ್ರಕಾರದ ಭಾವಗಳಿಂದ ಸಂಯುಕ್ತನಿಲ್ಲದಿದ್ದರೂ ಕೂಡ ಅಜ್ಞಾನೀ ಜೀವರುಗಳಿಗೆ ತಮ್ಮ ಅಜ್ಞಾನದಿಂದ ಆತ್ಮನು ಕರ್ಮಜನ್ಯ ಭಾವಗಳಿಂದ ಸಂಯುಕ್ತನಿರುವಂತೆ ಪ್ರತಿಭಾಸವಾಗುತ್ತದೆ.

**ಭಾವಾರ್ಥ :-** ಪುದ್ಗಲ ಕರ್ಮದ ಕಾರಣಭೂತವಾಗಿ ರಾಗಾದಿ ಭಾವಗಳಿವೆ ಮತ್ತು ರಾಗಾದಿ ಭಾವಗಳ ಕಾರಣವಾಗಿ ಪುದ್ಗಲ ಕರ್ಮವಿದೆಯೆಂದು ಮೊದಲು ಹೇಳಲಾಗಿದೆ. ಆದುದರಿಂದ ಈ ಆತ್ಮನು ನಿಜಸ್ವಭಾವ ಭಾವದ ಅಪೇಕ್ಷೆಯಿಂದ ನಾನಾ ಪ್ರಕಾರದ ಭಾವಗಳಿಂದ ಭಿನ್ನವಾಗಿಯೇ ಚೈತನ್ಯಮಾತ್ರ ವಸ್ತುವಿದ್ದಾನೆ.

ಯಾವ ಪ್ರಕಾರ ಕೆಂಪು ಪುಷ್ಪದ ನಿಮಿತ್ತದಿಂದ ಸ್ಫಟಿಕವು ಕೆಂಪು ವರ್ಣರೂಪದಿಂದ ಪರಿಣಮನ ಮಾಡುತ್ತದೆ. ಆದರೆ ಆ ಕೆಂಪು ವರ್ಣವು ಸ್ಫಟಿಕದ ನಿಜಭಾವವಿಲ್ಲ. ಸ್ಫಟಿಕವಂತೂ ಸ್ವಚ್ಛತೆಯ ರೂಪದ ತನ್ನ ಶ್ವೇತವರ್ಣದಿಂದಲೇ ವಿರಾಜಮಾನವಿದೆ. ಆ ಕೆಂಪು ವರ್ಣವಂತೂ ಸ್ವರೂಪದಲ್ಲಿ ಪ್ರವೇಶ ಮಾಡದೆಯೇ ಮೇಲೆ ಮೇಲೆ ಕೇವಲ ಹೊಳಪು ಮಾತ್ರವೇ ಗೋಚರವಾಗುತ್ತದೆ. ಅಲ್ಲಿ ರತ್ನ ಪರೀಕ್ಷಕನಾದ ಚಿನಿವಾರನಂತೂ ಹೀಗೆಯೇ ತಿಳಿಯುತ್ತಾನೆ. ಆದರೆ ಅಪರೀಕ್ಷಕನಾದ ಪುರುಷನಿಗೆ ಸತ್ಯ ರೂಪವು (ವಾಸ್ತವದಲ್ಲಿ) ಆ ಸ್ಫಟಿಕಮಣಿಯೇ ರಕ್ತ ಮಣಿಯಂತೆ ಕೆಂಪು ವರ್ಣದ ಸ್ವರೂಪವಾಗಿಯೇ ಪ್ರತಿಭಾಸವಾಗುತ್ತದೆ. ಅದೇ ಪ್ರಕಾರ ಕರ್ಮದ ನಿಮಿತ್ತದಿಂದ ಆತ್ಮನು ರಾಗಾದಿಗಳ ರೂಪದಿಂದ ಪರಿಣಮನ ಮಾಡುತ್ತಾನೆ. ಆ ರಾಗಾದಿಗಳು ಆತ್ಮನ ನಿಜಭಾವಗಳಲ್ಲ. ಆತ್ಮನಂತೂ ತನ್ನ ಸ್ವಚ್ಛತೆಯ ರೂಪದ ಚೈತನ್ಯ ಗುಣದಲ್ಲಿ ವಿರಾಜಮಾನನಿದ್ದಾನೆ. ಆ ರಾಗಾದಿಗಳಂತೂ ಸ್ವರೂಪದಲ್ಲಿ ಪ್ರವೇಶ ಮಾಡದೆಯೇ ಮೇಲೆ ಮೇಲೆಯೇ ಹೊಳಪು ಮಾತ್ರ ಕಂಡು ಬರುತ್ತದೆ. ಅಲ್ಲಿ ಸ್ವರೂಪದ ಪರೀಕ್ಷಕನಾದ ಜ್ಞಾನಿಯಂತೂ ಹೀಗೆಯೇ ತಿಳಿಯುತ್ತಾನೆ. ಆದರೆ ಅಪರೀಕ್ಷಕರಾದ ಪುರುಷರಿಗೆ ಸತ್ಯ ರೂಪವು ಎಂದರೆ ವಾಸ್ತವದಲ್ಲಿ ಆ ಆತ್ಮನು ಪುದ್ಗಲಕರ್ಮದಂತೆ ರಾಗಾದಿ ಸ್ವರೂಪವಾಗಿಯೇ ಪ್ರತಿಭಾಸವಾಗುತ್ತಾನೆ.

**ಪ್ರಶ್ನೆ :-** ರಾಗಾದಿಭಾವಗಳನ್ನು ಜೀವಕೃತವೆಂದು ತಾವೇ ಹೇಳಿದ್ದೀರಿ. ಆದರೆ ಇಲ್ಲಿ ಅವನ್ನು ಕರ್ಮಕೃತವೆಂದು ಹೇಗೆ ಹೇಳುತ್ತಿರುವಿರಿ ?

**ಉತ್ತರ :-** ರಾಗಾದಿ ಭಾವಗಳು ಚೇತನಾ ರೂಪವಿರುವುದರಿಂದ ಅವುಗಳ ಕರ್ತೃವು ಜೀವವೇ ಇದೆ, ಆದರೆ ಇಲ್ಲಿ ಶ್ರದ್ಧೆ ಮಾಡಿಸುವ ಸಲುವಾಗಿ ಮೂಲಭೂತ ಜೀವದ ಶುದ್ಧಸ್ವಭಾವದ ಅಪೇಕ್ಷೆಯಿಂದ ರಾಗಾದಿ ಭಾವಗಳು ಕರ್ಮದ ನಿಮಿತ್ತದಿಂದ ಆಗುತ್ತಿರುವುದರಿಂದ ಅವನ್ನು ಕರ್ಮಕೃತವೆಂದು ಹೇಳಿದೆ.

ಯಾವ ಪ್ರಕಾರ ಯಾವನೋ ಓರ್ವ ಮನುಷ್ಯನನ್ನು ಭೂತವು (ವ್ಯಂತರವು) ಹಿಡಿದುಕೊಂಡಿದ್ದರೆ ಆ ಮನುಷ್ಯನು ಆ ಭೂತದ ನಿಮಿತ್ತದಿಂದ ನಾನಾ ಪ್ರಕಾರದ ವಿಪರೀತ ಚೇಷ್ಟೆಗಳನ್ನು ಮಾಡುತ್ತಾನೆ. ಆ ಚೇಷ್ಟೆಗಳ ಕರ್ತೃವಂತೂ ಆ ಮನುಷ್ಯನೇ ಇದ್ದಾನೆ, ಆದರೆ ಆ ಚೇಷ್ಟೆಗಳು ಮನುಷ್ಯನ ನಿಜಭಾವಗಳಿಲ್ಲದಿರುವುದರಿಂದ ಅವನ್ನು

ಭೂತಕೃತವೆಂದು ಹೇಳುತ್ತಾರೆ. ಅದೇ ಪ್ರಕಾರ ಈ ಜೀವನು ನಿಮಿತ್ತದಿಂದ ನಾನಾ ಪ್ರಕಾರ ವಿಪರೀತ ಭಾವಗಳ ರೂಪವಾಗಿ ಪರಿಣಮನ ಮಾಡುತ್ತಾನೆ. ಆ ಭಾವಗಳ ಕರ್ತೃವಂತೂ ಜೀವವೇ ಇದೆ. ಆದರೆ ಅವು ಜೀವದ ನಿಜಭಾವಗಳಿಲ್ಲದಿರುವುದರಿಂದ ಆ ಭಾವಗಳನ್ನು ಕರ್ಮಕೃತವೆಂದು ಹೇಳುತ್ತಾರೆ. ಅಥವಾ ಕರ್ಮಕೃತವಾದ ಆ ನಾನಾ ಪ್ರಕಾರದ ಪರ್ಯಾಯಗಳು, ವರ್ಣ, ಗಂಧ, ರಸ, ಸ್ಪರ್ಶ, ಕರ್ಮ, ನೋಕರ್ಮ, ದೇವ-ನಾರಕ-ಮನುಷ್ಯ- ತಿರ್ಯಂಚ ಶರೀರ, ಸಂಹನನ, ಸಂಸ್ಥಾನ ಮೊದಲಾದ ಭೇದಗಳು, ಅಥವಾ ಪುತ್ರ, ಮಿತ್ರ, ಮನೆ, ಧನ, ಧಾನ್ಯ ಮೊದಲಾದ ಭೇದಗಳು-ಇವೆಲ್ಲವುಗಳಿಂದ ಶುದ್ಧಾತ್ಮನು ಪ್ರತ್ಯಕ್ಷವಾಗಿ ಭಿನ್ನನೇ ಇದ್ದಾನೆ. ಯಾವ ಪ್ರಕಾರ ಓರ್ವ ಪುರುಷನು ಅಜ್ಞಾನೀ ಗುರುಗಳು ಹೇಳುವುದರಿಂದ ಏಕಾಂತವಾದ ಕುಟೀರದಲ್ಲಿ ಕುಳಿತುಕೊಂಡು ಕೋಣದ ಧ್ಯಾನ ಮಾಡತೊಡಗುವನು. ಅವನು ತನ್ನನ್ನು ಕೋಣದ ಸಮಾನವಾಗಿ ವಿಶಾಲಕಾಯವುಳ್ಳವನೆಂದು ಚಿಂತನೆ ಮಾಡತೊಡಗುವನು ಮತ್ತು ಆಕಾಶದಷ್ಟು ಎತ್ತರವಾದ ಕೊಂಬುಳ್ಳವನೆಂದು ತನ್ನನ್ನು ಮನ್ನಿಸಿಕೊಂಡು ನಾನು ಈ ಕುಟೀರದೊಳಗಿಂದ ಹೊರಗೆ ಹೇಗೆ ಹೋಗುವುದೆಂದು ಯೋಚಿಸಲಾರಂಭಿಸುವನು. ಒಂದು ವೇಳೆ ಅವನು ತನ್ನನ್ನು ಕೋಣನೆಂದು ಮನ್ನಿಸದಿದ್ದರೆ ಮನುಷ್ಯ ಸ್ವರೂಪವನಂತೂ ಸ್ವಯಂ ಇದ್ದೇ ಇದ್ದಾನೆ. ಅದೇ ಪ್ರಕಾರ ಈ ಜೀವನು ಮೋಹದ ನಿಮಿತ್ತದಿಂದ ತನ್ನನ್ನು ವರ್ಣಾದಿಗಳ ಸ್ವರೂಪನೆಂದು ಮನ್ನಿಸಿಕೊಂಡು ದೇವ ಮೊದಲಾದ ಪರ್ಯಾಯಗಳಲ್ಲಿ ತನ್ನತನವನ್ನು ಮನ್ನಿಸುತ್ತಾನೆ. ಒಂದು ವೇಳೆ ಹಾಗೆ ಮನ್ನಿಸದಿದ್ದರೆ ತಾನು ಅಮೂರ್ತಿಕ ಶುದ್ಧಾತ್ಮನಂತೂ ಇದ್ದೇ ಇದ್ದಾನೆ.

ಈ ಪ್ರಕಾರ ಈ ಆತ್ಮನು ಕರ್ಮಜನಿತವಾದ ರಾಗಾದಿಭಾವಗಳಿಂದ ಅಥವಾ ವರ್ಣಾದಿಗಳ ಭಾವಗಳಿಂದ ಯಾವಾಗಲೂ ಭಿನ್ನನಿದ್ದಾನೆ. '**ವರ್ಣಾದ್ಯಾ ವಾ ರಾಗ ಮೋಹಾದಯೋ ವಾ । ಭಿನ್ನಾ ಭಾವಾಃ ಸರ್ವ ಏವಾಸ್ಯ ಪುಂಸಃ**' *ಎಂದು ಹೇಳಿದ್ದರೂ ಕೂಡ ಅಜ್ಞಾನೀ ಜೀವರುಗಳಿಗೆ ಆತ್ಮನು ಕರ್ಮಜನಿತ ಭಾವಗಳಿಂದ ಸಂಯುಕ್ತನಿರುವಂತೆ ಪ್ರತಿಭಾಸವಾಗುತ್ತಾನೆ. '**ಖಲು ಸಃಪ್ರತಿಭಾಸಃ ಭವಬೀಜಮ್!**' ನಿಶ್ಚಯದಿಂದ ಈ ಪ್ರತಿಭಾಸವೇ ಸಂಸಾರದ ಬೀಜಭೂತವಿದೆ.

**ಭಾವಾರ್ಥ :-** ಯಾವ ಪ್ರಕಾರ ಸಮಸ್ತ ವೃಕ್ಷಗಳಿಗೆ ಮೂಲಭೂತವು ಬೀಜವಿದೆ. ಅದೇ ಪ್ರಕಾರ ಅನಂತ ಸಂಸಾರದ ಮೂಲಕಾರಣವು ಕರ್ಮಜನಿತ ಭಾವಗಳನ್ನು ತನ್ನವುಗಳೆಂದು ಮನ್ನಿಸುವುದಿದೆ. ಈ ಪ್ರಕಾರ ಅಶುದ್ಧತೆಯ ಕಾರಣವನ್ನು ತಿಳಿಸಿಕೊಡಲಾಗಿದೆ.

ಈಗ ಪುರುಷಾರ್ಥಸಿದ್ಧಿಯ ಉಪಾಯ ತಿಳಿಸಿಕೊಡುತ್ತಾರೆ, -

ವಿಪರೀತಾಭಿನಿವೇಶಂ ನಿರಸ್ಯ ಸಮ್ಯಗ್ವ್ಯವಸ್ಯ ನಿಜತತ್ತ್ವಮ್ ।
ಯತ್ತಸ್ಮಾದವಿಚಲನಂ ಸ ಏವ ಪುರುಷಾರ್ಥಸಿದ್ಧ್ಯುಪಾಯೋಽಯಮ್ ॥೧೫॥

**ಅನ್ವಯಾರ್ಥ :-** **[ವಿಪರೀತಾಭಿನಿವೇಶಂ]** ವಿಪರೀತವಾದ ಶ್ರದ್ಧೆಯ **[ನಿರಸ್ಯ]** ನಾಶಮಾಡಿ **[ನಿಜತತ್ತ್ವಮ್]** ನಿಜಸ್ವರೂಪವನ್ನು **[ಸಮ್ಯಕ್]** ಯಥಾರ್ಥರೂಪದಿಂದ **[ವ್ಯವಸ್ಯ]** ತಿಳಿದುಕೊಂಡು **[ಯತ್‌ತಸ್ಮಾತ್]** ಆ ತನ್ನ ಸ್ವರೂಪದೊಳಗಿಂದ **[ಅವಿಚಲನಂ]** ಭ್ರಷ್ಟವಾಗದಿರುವುದು **[ಸ ಏವ]** ಅದುವೇ **[ಅಯಂ]** ಈ **[ಪುರುಷಾರ್ಥಸಿದ್ಧ್ಯುಪಾಯಃ]** ಪುರುಷಾರ್ಥಸಿದ್ಧಿಯ ಉಪಾಯವಿದೆ.

**ಟೀಕೆ :- 'ಯತ್ ವಿಪರೀತಾಭಿನಿವೇಶಂ ನಿರಸ್ಯ ಸಮ್ಯಕ್ ನಿಜತತ್ತ್ವಂ ವ್ಯವಸ್ಯ ತತ್ ತಸ್ಮಾತ್ ಅವಿಚಲನಂ ಸ ಏವ ಅಯಂ ಪುರುಷಾರ್ಥಸಿದ್ಧ್ಯುಪಾಯಃ'** ಆ ವಿಪರೀತ ಶ್ರದ್ಧೆಯ ನಾಶ ಮಾಡಿ

* ಈ ಪುರುಷನು (ಆತ್ಮನು) ಶುದ್ಧನಯದಿಂದಂತೂ ವರ್ಣ, ರಾಗ ಅಥವಾ ಮೋಹ ಮೊದಲಾದ ಎಲ್ಲ ಭಾವಗಳಿಂದ ಭಿನ್ನನಿದ್ದಾನೆ.

ಯಥಾರ್ಥರೂಪದಿಂದ ನಿಜ ಸ್ವರೂಪವನ್ನು ತಿಳಿದುಕೊಂಡು, ಆ ತನ್ನ ಸ್ವರೂಪದಿಂದ ಭ್ರಷ್ಟವಾಗದಿರುವುದೇ ಪುರುಷಾರ್ಥಸಿದ್ಧಿಯಾಗುವ ಉಪಾಯವಿದೆ.

**ಭಾವಾರ್ಥ ಃ-** ಸಂಸಾರದ ಬೀಜಭೂತವಾದ ಕರ್ಮಜನಿತ ಪರ್ಯಾಯವನ್ನು ಆತ್ಮರೂಪದಿಂದ ತನ್ನ ರೂಪವಾಗಿ ತಿಳಿಯುವುದರ ಹೆಸರೇ ವಿಪರೀತ ಶ್ರದ್ಧೆಯಿದೆಯೆಂದು ಮೊದಲು ಹೇಳಲಾಗಿದೆ ಮತ್ತು ಮೂಲಸಹಿತವಾಗಿ ಅದರ ವಿನಾಶ ಮಾಡುವುದೇ ಸಮ್ಯಗ್ದರ್ಶನವಿದೆ. ಕರ್ಮಜನಿತ ಪರ್ಯಾಯದಿಂದ ಭಿನ್ನವಾದ ಶುದ್ಧ ಚೈತನ್ಯಸ್ವರೂಪವನ್ನು ಯಥಾರ್ಥವಾಗಿ ತಿಳಿದುಕೊಳ್ಳುವುದು ಸಮ್ಯಕ್ ಜ್ಞಾನವಿದೆ, ಮತ್ತು ಕರ್ಮಜನಿತ ಪರ್ಯಾಯದಿಂದ ಉದಾಸೀನವಾಗಿ ಸ್ವರೂಪದಲ್ಲಿ ನಿಶ್ಚಲ ಸ್ಥಿರವಿರುವುದು ಅದು ಸಮ್ಯಕ್ಚಾರಿತ್ರವಿದೆ. ಈ ಮೂರು ಭಾವಗಳ ಸಮುದಾಯವೇ ಆ ಜೀವದ ಕಾರ್ಯಸಿದ್ಧವಾಗುವ ಉಪಾಯವಿದೆ. ಬೇರೆ ಯಾವ ಉಪಾಯವು ಸರ್ವಥಾ ಇಲ್ಲವೇ ಇಲ್ಲ.

ಯಾರು ಈ ಉಪಾಯದಲ್ಲಿ ತೊಡಗುತ್ತಾರೆ ಅವರ ವರ್ಣನೆಯನ್ನು ಈಗ ಮಾಡುತ್ತಾರೆ,-

**ಅನುಸರತಾಂ ಪದಮೇತತ್ ಕರಂಬಿತಾಚಾರನಿತ್ಯನಿರಭಿಮುಖಾ ।**
**ಏಕಾಂತವಿರತಿರೂಪಾ ಭವತಿ ಮುನೀನಾಮಲೌಕಿಕೀ ವೃತ್ತಿಃ ॥೧೬॥**

**ಅನ್ವಯಾರ್ಥ ಃ- [ಏತತ್ ಪದಮ್ ಅನುಸರತಾಂ]** ಈ ರತ್ನತ್ರಯರೂಪ ಪದವಿಯ ಅನುಸರಣೆ ಮಾಡುವಂಥ ಎಂದರೆ ಈ ಪದವಿಗೆ ಪ್ರಾಪ್ತರಾದಂಥ **[ಮುನೀನಾಂ]** ಮುನಿವರರುಗಳ **[ವೃತ್ತಿಃ]** ವೃತ್ತಿಯು **[ಕರಂಬಿತಾಚಾರನಿತ್ಯನಿರಭಿಮುಖಾ]** ಪಾಪಕ್ರಿಯೆ ಮಿಶ್ರಿತವಾದ ಆಚಾರಗಳಿಂದ ಸರ್ವಥಾ ಪರಾಙ್ಮುಖ ಹಾಗೂ **[ಏಕಾಂತವಿರತಿರೂಪಾ]** ಪರದ್ರವ್ಯಗಳಿಂದ ಸರ್ವಥಾ ಉದಾಸೀನರೂಪ ಮತ್ತು **[ಅಲೌಕಿಕೀ ಭವತಿ]** ಲೋಕದಿಂದ ವಿಲಕ್ಷಣ ಪ್ರಕಾರದ್ದಿರುತ್ತದೆ.

**ಟೀಕೆ ಃ- 'ಏತತ್ಪದಂ ಅನುಸರತಾಂ ಮುನೀನಾಂ ವೃತ್ತಿಃ ಅಲೌಕಿಕೀ ಭವತಿ'** ಃ ಈ ರತ್ನತ್ರಯ ರೂಪದ ಪದವಿಗೆ ಪ್ರಾಪ್ತರಾದ ಮಹಾಮುನಿಗಳರೀತಿಯು ಲೌಕಿಕ ರೀತಿಯಿಂದ ಭಿನ್ನವಾಗಿರುತ್ತದೆಯೆಂಬುದನ್ನೇ ಹೇಳುತ್ತಾರೆ. ಜಗತ್ತು ಪಾಪ ಕ್ರಿಯೆಗಳಲ್ಲಿ ಆಸಕ್ತವಾಗಿ ಪ್ರವರ್ತನೆ ಮಾಡುತ್ತದೆ, ಮುನಿಗಳು ಪಾಪಕ್ರಿಯೆಗಳ ಚಿಂತನೆಯನ್ನು ಕೂಡ ಮಾಡುವುದಿಲ್ಲ. ಜಗತ್ತು ಅನೇಕ ಪ್ರಕಾರದಿಂದ ಶರೀರದ ಸಂರಕ್ಷಣೆ ಮತ್ತು ಪೋಷಣೆ ಮಾಡುತ್ತದೆ, ಆದರೆ ಮುನಿರಾಜರು ಅನೇಕ ಪ್ರಕಾರದಿಂದ ಶರೀರಕ್ಕೆ ಪರೀಷಹಗಳನ್ನುತ್ಪನ್ನ ಮಾಡಿ ಅವನ್ನು ಸಹನೆ ಮಾಡುತ್ತಾರೆ. ಮತ್ತು ಜಗತ್ತಿಗೆ ಇಂದ್ರಿಯ ವಿಷಯಗಳು ಅತ್ಯಂತ ಪ್ರಿಯವೆನಿಸಿದರೆ ಮುನಿರಾಜರು ವಿಷಯಗಳನ್ನು ಹಾಲಾಹಲ ವಿಷದ ಸಮಾನವಾಗಿ ತಿಳಿಯುತ್ತಾರೆ.

ಜಗತ್ತಿಗೆ ತಮ್ಮ ಹತ್ತಿರ ಜನ-ಸಮುದಾಯವು ರುಚಿಕರವೆನಿಸಿದರೆ ಮುನಿರಾಜರು ಇತರರ ಸಂಯೋಗವಾದ ಮೇಲೆ ಖೇದ ಮನ್ನಿಸುತ್ತಾರೆ. ಜನರಿಗೆ ನಗರವಾಸವು ಸೊಗಸೆನಿಸುತ್ತದೆ, ಆದರೆ ಮುನಿಗಳಿಗೆ ನಿರ್ಜನಸ್ಥಾನವೇ ಪ್ರಿಯವೆನಿಸುತ್ತದೆ. ಎಲ್ಲಿಯವರೆಗೆಂದು ಹೇಳುವುದು, ಮಹಾಮುನಿಗಳ ರೀತಿಯು ಲೌಕಿಕ ರೀತಿಯಿಂದ ತೀರ ವಿರುದ್ಧವಾಗಿರುತ್ತದೆ. ಆ ಮಹಾಮುನಿಗಳ ಪ್ರವೃತ್ತಿಯು **'ಕರಂಬಿತಾಚಾರ ನಿತ್ಯ ನಿರಭಿಮುಖಾ'** ಪಾಪಕ್ರಿಯೆ ಸಹಿತವಾದ ಆಚಾರದಿಂದ ಪರಾಙ್ಮುಖವಿದೆ. ಯಾವ ಪ್ರಕಾರ ಶ್ರಾವಕರ ಆಚಾರವು ಪಾಪಕ್ರಿಯೆಯಿಂದ ಮಿಶ್ರಿತವಿದೆ ಹಾಗೆ ಮುನಿರಾಜರುಗಳ ಆಚಾರದಲ್ಲಿ ಪಾಪದ ಮಿಶ್ರಣವಿರುವುದಿಲ್ಲ. ಅಥವಾ **'ಕರಂಬಿತ'** ಎಂದರೆ ಕರ್ಮಜನ್ಯ ಭಾವಮಿಶ್ರಣವಾದ ಆಚರಣದಿಂದ ಪರಾಙ್ಮುಖರಿರುತ್ತಾರೆ, ಅವರು ಕೇವಲ ನಿಜಸ್ವರೂಪದ ಅನುಭವ ಮಾಡುತ್ತಿರುವುದರಿಂದ **'ಏಕಾಂತವಿರತಿರೂಪಾ'** ಎಂದರೆ ಸರ್ವಥಾ ಪಾಪಕ್ರಿಯೆಗಳ ತ್ಯಾಗಿಯಿರುತ್ತಾರೆ ಅಥವಾ

ಒಂದು ನಿಜ ಸ್ವಭಾವದ ಅನುಭವದಿಂದ ಸರ್ವಥಾ ಪರದ್ರವ್ಯಗಳಿಂದ ಉದಾಸೀನ ಸ್ವರೂಪರಿರುತ್ತಾರೆ. ರತ್ನತ್ರಯದ ಧಾರಕರಾದ ಮಹಾಮುನಿಗಳ ಪ್ರವೃತ್ತಿಯು ಹೀಗೆಯೇ ಇರುತ್ತದೆ.

ಈಗ ಉಪದೇಶ ಕೊಡುವ ಕ್ರಮವನ್ನು ತಿಳಿಸುತ್ತಾರೆ, -

**ಬಹುಶಃ ಸಮಸ್ತವಿರತಿಂ ಪ್ರದರ್ಶಿತಾಂ ಯೋ ನ ಜಾತು ಗೃಹ್ಣಾತಿ ।**
**ತಸ್ಯೈಕ ದೇಶವಿರತಿಃ ಕಥನೀಯಾನೇನ ಬೀಜೇನ ॥೧೭॥**

**ಅನ್ವಯಾರ್ಥ :-** **[ಯಃ]** ಯಾವ ಜೀವನು **[ಬಹುಶಃ]** ಮತ್ತೆ ಮತ್ತೆ **[ಪ್ರದರ್ಶಿತಾಂ]** ತಿಳಿಸಿ ಹೇಳಿದ ಮೇಲೆ ಕೂಡ **[ಸಮಸ್ತ ವಿರತಿಂ]** ಸಕಲಪಾಪ ರಹಿತವಾದ ಮುನಿವೃತ್ತಿಯನ್ನು **[ಜಾತು]** ಪ್ರಾಯಶಃ **[ನ ಗೃಹ್ಣಾತಿ]** ಗ್ರಹಣ ಮಾಡದಿದ್ದರೆ **[ತಸ್ಯ]** ಅವನಿಗೆ **[ಏಕದೇಶವಿರತಿಃ]** ಏಕದೇಶ ಪಾಪಕ್ರಿಯೆಯಿಂದ ರಹಿತವಾದ ಗೃಹಸ್ಥಾಚಾರವನ್ನು **[ಅನೇನ ಬೀಜೇನ]** ಈ ಉದ್ದೇಶದಿಂದ **[ಕಥನಿಯಾ]** ಕಥನ ಮಾಡಬೇಕು ಎಂದರೆ ತಿಳಿಸಿಕೊಡಬೇಕು.

**ಟೀಕೆ :-** **'ಯಃ ಬಹುಶಃ ಪ್ರದರ್ಶಿತಾಂ ಸಮಸ್ತ ವಿರತಿಂ ನ ಜಾತು ಗೃಹ್ಣಾತಿ ತಸ್ಯ-ಏಕದೇಶವಿರತಿಃ ಅನೇನ ಬೀಜೇನ ಕಥನೀಯಾ।'** - ಯಾವ ಜೀವನು ಅನೇಕ ಬಾರಿ ಉಪದೇಶ ಕೊಟ್ಟರೂ ಕೂಡ ಸಕಲ ಪಾಪದಿಂದ ರಹಿತವಾದ ಮಹಾವ್ರತದ ಕ್ರಿಯೆಯನ್ನು ಅವನು ಒಂದು ವೇಳೆ ಗ್ರಹಣ ಮಾಡದಿದ್ದರೆ ಆ ಜೀವನಿಗೆ ಏಕದೇಶ ಪಾಪರಹಿತವಾದ ಶ್ರಾವಕ ಕ್ರಿಯೆಯನ್ನು ಈ ಪ್ರಕಾರ ತಿಳಿಸಬೇಕು.

**ಭಾವಾರ್ಥ :-** ಯಾವ ಜೀವನು ಉಪದೇಶ ಶ್ರವಣ ಮಾಡುವುದರಲ್ಲಿ ರುಚಿವಂತನಿದ್ದಾನೆ ಅವನಿಗೆ ಮೊದಲೇ ಪುನಃ ಪುನಃ ಮುನಿಧರ್ಮದ ಉಪದೇಶ ಕೊಡಬೇಕಾಗುವುದು ಮತ್ತು ಒಂದು ವೇಳೆ ಆ ಜೀವನು ಮುನಿಪದದ ಅಂಗೀಕಾರ ಮಾಡದಿದ್ದರೆ ಅನಂತರ ಅವನಿಗೆ ಶ್ರಾವಕಧರ್ಮದ ಉಪದೇಶ ಕೊಡುವುದು ಯೋಗ್ಯವಿದೆ.

ಶ್ರಾವಕಧರ್ಮದ ಉಪದೇಶದ ರೀತಿಯನ್ನು ಮುಂದೆ ಹೇಳಲಾಗುವುದು. ಅದೇ ರೀತಿಯಿಂದ ಉಪದೇಶ ಕೊಡಬೇಕಾಗುವುದು. ಯಾರು ಈ ಅನುಕ್ರಮದ ಉಲ್ಲಂಘನೆ ಮಾಡಿ ಉಪದೇಶ ಕೊಡುತ್ತಾರೆ ಆ ಉಪದೇಶ ಕೊಡುವಂಥವರ ನಿಂದೆಯನ್ನು ಈಗ ಮಾಡುತ್ತಾರೆ, -

**ಯೋ ಯತಿಧರ್ಮಮಕಥಯನ್ನುಪದಿಶತಿ ಗೃಹಸ್ಥಧರ್ಮಮಲ್ಪಮತಿಃ ।**
**ತಸ್ಯ ಭಗವತ್ಪ್ರವಚನೇ ಪ್ರದರ್ಶಿತಂ ನಿಗ್ರಹಸ್ಥಾನಮ್ ॥೧೮॥**

**ಅನ್ವಯಾರ್ಥ :-** **[ಯಃ]** ಯಾವ **[ಅಲ್ಪಮತಿಃ]** ತುಚ್ಛಬುದ್ಧಿಯುಳ್ಳ ಉಪದೇಶಕನು **[ಯತಿಧರ್ಮಂ]** ಮುನಿಧರ್ಮದ **[ಅಕಥಯನ್]** ಕಥನ ಮಾಡದೆ **[ಗೃಹಸ್ಥಧರ್ಮಂ]** ಶ್ರಾವಕ ಧರ್ಮದ **[ಉಪದಿಶತಿ]** ಉಪದೇಶ ಕೊಡುತ್ತಾನೆ **[ತಸ್ಯ]** ಆ ಉಪದೇಶಕನಿಗೆ **[ಭಗವತ್ಪ್ರವಚನೇ]** ಭಗವಂತರ ಸಿದ್ಧಾಂತದಲ್ಲಿ **[ನಿಗ್ರಹಸ್ಥಾನಂ]** ದಂಡನೆ ಕೊಡುವ ಸ್ಥಾನವನ್ನು **[ಪ್ರದರ್ಶಿತಂ]** ತಿಳಿಸಿದ್ದಾರೆ.

**ಟೀಕೆ :-** **'ಯಃ ಅಲ್ಪಮತಿಃ ಯತಿ ಧರ್ಮಂ ಅಕಥಯನ್ ಗೃಹಸ್ಥಧರ್ಮಂ ಉಪದಿಷತಿ ತಸ್ಯ ಭಗವತ್ಪ್ರವಚನೇ ನಿಗ್ರಹಸ್ಥಾನಂ ಪ್ರದರ್ಶಿತಂ।'** - ಯಾವ ತುಚ್ಛಬುದ್ಧಿಯುಳ್ಳ ಉಪದೇಶಕನು ಮುನಿಧರ್ಮದ ಉಪದೇಶಕೊಡದೆ ಗೃಹಸ್ಥಧರ್ಮದ ಉಪದೇಶ ಕೊಡುತ್ತಾನೆ. ಅವನಿಗೆ ಭಗವಂತರ ಸಿದ್ಧಾಂತದಲ್ಲಿ ದಂಡದ ಸ್ಥಾನ ತಿಳಿಸಿದ್ದಾರೆ.

**ಭಾವಾರ್ಥ ः-** ಯಾವ ಉಪದೇಶಕನು ಮೊದಲು ಯತೀಶ್ವರರ ಧರ್ಮದ ಉಪದೇಶ ಮಾಡುವುದಿಲ್ಲ, ಆದರೆ ಮೊದಲೇ ಶ್ರಾವಕಧರ್ಮದ ವ್ಯಾಖ್ಯಾನ ಮಾಡಿದರೆ ಆ ಉಪದೇಶಕನು ಜಿನಮತದಲ್ಲಿ ಪ್ರಾಯಶ್ಚಿತ್ತರೂಪ ದಂಡನೆಗೆ ಪಾತ್ರನೆಂದು ಹೇಳಲಾಗಿದೆ.

ಈಗ ಅವನಿಗೆ ದಂಡ ಕೊಡುವುದರ ಕಾರಣ ಹೇಳುತ್ತಾರೆ,

ಅಕ್ರಮಕಥನೇನ ಯತಃ ಪ್ರೋತ್ಸಹಮಾನೋಽತಿದೂರಮಪಿ ಶಿಷ್ಯಃ ।
ಅಪದೇಽಪಿ ಸಂಪ್ರತೃಪ್ತಃ ಪತಾರಿತೋ ಭವತಿ ತೇನ ದುರ್ಮತಿನಾ ॥೧೯॥

**ಅನ್ವಯಾರ್ಥ ः-** **[ಯತಃ)** ಯಾವ ಕಾರಣದಿಂದ **[ತೇನ ದುರ್ಮತಿನಾ]** ಆ ದುರ್ಬುದ್ಧಿಯು **[ಅಕ್ರಮ ಕಥನೇನ]** ಕ್ರಮಭಂಗ ಕಥನರೂಪವಾದ ಉಪದೇಶ ಮಾಡುವುದರಿಂದ **[ಅತಿದೂರಂ]** ಅತ್ಯಂತ ದೂರ ಎಂದರೆ ಅತ್ಯಧಿಕ **[ಪ್ರೋತ್ಸಹಮಾನೋಽಪಿ]** ಉತ್ಸಾಹವುಳ್ಳವನಿದ್ದರೂ ಕೂಡ **[ಶಿಷ್ಯಃ]** ಶಿಷ್ಯನು **[ಅಪದೇ ಅಪಿ]** ತುಚ್ಛ ಸ್ಥಾನದಲ್ಲಿಯೇ **[ಸಂಪ್ರತೃಪ್ತಃ]** ಸಂತುಷ್ಟನಾಗಿ **[ಪ್ರಚಾರಿತಃ ಭವತಿ]** ಮೋಸ ಹೋಗುತ್ತಾನೆ.

**ಟೀಕೆ ः-** **'ಯತಃ ತೇನ ದುರ್ಮತಿನಾ ಅಕ್ರಮಕಥನೇನ ಶಿಷ್ಯಃ ಪ್ರತಾರಿತೋ ಭವತಿ।'** ಯಾವ ಕಾರಣದಿಂದ ಆ ಮಂದ ಬುದ್ಧಿಯುಳ್ಳ ಉಪದೇಶಕನ ಮೂಲಕ ಅನುಕ್ರಮವನ್ನು ಬಿಟ್ಟು ಕೊಟ್ಟು ಕಥನ ಮಾಡುವುದರಿಂದ ಆಲಿಸುವಂಥ ಶಿಷ್ಯನು ಮೋಸ ಹೋಗುತ್ತಾನೆ. ಮೊದಲೇ ಶ್ರಾವಕಧರ್ಮದ ಉಪದೇಶವನ್ನು ಆಲಿಸಿ ಶಿಷ್ಯನು ಮೋಸವೇಕೆ ಹೋಗುತ್ತಾನೆಂಬುದರ ಕಾರಣ ಹೇಳುತ್ತಾರೆ. ಆ ಶಿಷ್ಯನು **'ಅತಿದೂರಂ ಪ್ರೋತ್ಸಹ ಮಾನೋ ಅಪಿ ಅಪದೇಽಪಿ ಸಂಪ್ರತೃಪ್ತಃ.'** ಅತ್ಯಂತ ದೂರದವರೆಗೆ ಹೋಗುವ ಸಲುವಾಗಿ ಉತ್ಸಾಹಿತನಾಗಿದ್ದರೂ ಕೂಡ ಅಪದ ಎಂದರೆ ಆ ತುಚ್ಛವಾದ ಸ್ಥಾನದಲ್ಲಿಯೇ ಸಂತುಷ್ಟನಾದನು. ಆ ಶಿಷ್ಯನ ಅಂತರಂಗದಲ್ಲಿ ಅದೆಷ್ಟು ಉತ್ಸಾಹವು ಉತ್ಪನ್ನವಾಗಿತ್ತೆಂದರೆ ಅವನು ಮೊದಲೇ ಮುನಿಧರ್ಮವನ್ನು ಆಲಿಸುತ್ತಿದ್ದರೆ ನಿಶ್ಚಿತವಾಗಿ ಮುನಿಪದದ ಅಂಗೀಕಾರ ಮಾಡುತ್ತಿದ್ದನು. ಆದರೆ ಉಪದೇಶ ಕೊಡುವಂಥವನು ಅವನಿಗೆ ಪ್ರಥಮದಲ್ಲಿಯೇ ಶ್ರಾವಕಧರ್ಮದ ಉಪದೇಶಕೊಟ್ಟಿರುವುದರಿಂದ ಅವನು ಅದನ್ನೇ ಅಂಗೀಕಾರ ಮಾಡಿ ಬಿಡುವನು. ಅದರ ಫಲಸ್ವರೂಪವಾಗಿ ಅವನು ಮುನಿಧರ್ಮದಿಂದ ವಂಚಿತನಾಗಿಯೇ ಉಳಿದು ಬಿಡುವನು. ಇಂಥ ವಿಧಾನದ ಸಲುವಾಗಿ ಆ ಉಪದೇಶಕೊಡುವಂಥವನಿಗೆ ದಂಡನೆ ನೀಡುವುದು ಯೋಗ್ಯವಿದೆ.

# ಶ್ರಾವಕಧರ್ಮದ ವ್ಯಾಖ್ಯಾನ

ಮುನಿಧರ್ಮದ ಭಾರವನ್ನು ಹೊರುವುದರಲ್ಲಿ ಅಸಮರ್ಥರಿರುವಂಥವರ ಸಲುವಾಗಿ ಆಚಾರ್ಯರು ಈಗ ಶ್ರಾವಕಧರ್ಮದ ವ್ಯಾಖ್ಯಾನ ಮಾಡುತ್ತಾರೆ. ಧರ್ಮಸಾಧನೆಯಲ್ಲಿ ಶ್ರಾವಕನು ಮೊದಲು ಏನು ಮಾಡಬೇಕಾಗುವುದೆಂಬುದರ ವ್ಯಾಖ್ಯಾನವನ್ನು ಇಲ್ಲಿ ಮಾಡಲಾಗುತ್ತಿದೆ.

ಏವಂ ಸಮ್ಯಗ್ದರ್ಶನಬೋಧಚರಿತ್ರತ್ರಯಾತ್ಮಕೋ ನಿತ್ಯಮ್ ।
ತಸ್ಯಾಪಿ ಮೋಕ್ಷಮಾರ್ಗೋ ಭವತಿ ನಿಷೇವ್ಯೋ ಯಥಾಶಕ್ತಿ ॥೨೦॥

**ಅನ್ವಯಾರ್ಥ :-** [**ಏವಂ**] ಈ ಪ್ರಕಾರ [**ತಸ್ಯಾಪಿ**] ಆ ಗೃಹಸ್ಥನಿಗೆ ಕೂಡ [**ಯಥಾಶಕ್ತಿ**] ತನ್ನ ಶಕ್ತಿಯ ಅನುಸಾರವಾಗಿ [**ಸಮ್ಯಗ್ದರ್ಶನಬೋಧಚರಿತ್ರತ್ರಯಾತ್ಮಕಃ**] ಸಮ್ಯಗ್ದರ್ಶನ, ಸಮ್ಯಗ್ಜ್ಞಾನ, ಸಮ್ಯಕ್ಚಾರಿತ್ರ ಈ ಮೂರು ಭೇದರೂಪವಾದ [**ಮೋಕ್ಷಮಾರ್ಗಃ**] ಮುಕ್ತಿಯ ಮಾರ್ಗವನ್ನು [**ನಿತ್ಯಂ**] ಯಾವಾಗಲೂ [**ನಿಷೇವ್ಯಃ**] ಸೇವನೆ ಮಾಡುವುದು ಯೋಗ್ಯ [**ಭವತಿ**] ಇದೆ.

**ಟೀಕೆ :- 'ತಸ್ಯ ಅಪಿ ಯಥಾಶಕ್ತಿ ಏವಂ ಮೋಕ್ಷಮಾರ್ಗಃ ನಿಷೇವ್ಯಃ ಭವತಿ'**- ಆ ಗೃಹಸ್ಥನಿಗೆ ಕೂಡ ತನ್ನ ಶಕ್ತಿಗೆ ಅನುಸರಿಸಿ, ಈಗ ವರ್ಣನೆ ಮಾಡಲಾಗುತ್ತಿರುವಂಥ ಮೋಕ್ಷಮಾರ್ಗದ ಸೇವನೆ ಮಾಡುವುದು ಯೋಗ್ಯವಿದೆ.

**ಭಾವಾರ್ಥ :-** ಮುನಿಗಳಿಗಂತೂ ಮೋಕ್ಷಮಾರ್ಗದ ಸೇವನೆಯು ಸಂಪೂರ್ಣ ರೂಪದಿಂದ ಆಗುತ್ತದೆ. ಮತ್ತು ಗೃಹಸ್ಥರಿಗೆ ಕೂಡ ತಮ್ಮ ಶಕ್ತಿಗೆ ಅನುಸರಿಸಿ ಮೋಕ್ಷಮಾರ್ಗದ ಸೇವನೆಯನ್ನು ಅಲ್ಪಸ್ವಲ್ಪ ಮಾಡಬೇಕಾಗುವುದು. ಏಕೆಂದರೆ ಇದನ್ನು ಹೊರತುಪಡಿಸಿ ಧರ್ಮದ ಬೇರಾವ ಅಂಗದ ಸೇವನೆ ಮಾಡುವುದರಿಂದ ತಮ್ಮ ಕಲ್ಯಾಣವಾಗುವ ಸಾಧ್ಯತೆಯಿಲ್ಲ. ಆ ಮೋಕ್ಷಮಾರ್ಗವು 'ಸಮ್ಯಗ್ದರ್ಶನ, ಸಮ್ಯಗ್ಜ್ಞಾನ, ಸಮ್ಯಕ್ಚಾರಿತ್ರತ್ರಯವು ಅದರ ಸ್ವರೂಪವಿದೆ. ಬೇರೆ ಬೇರೆಯಾಗಿ ಮೂರು ಮೋಕ್ಷಮಾರ್ಗಗಳಿಲ್ಲ, ಆದರೆ ಮೂರು ಸೇರಿ ಒಂದು ಮೋಕ್ಷಮಾರ್ಗವಿದೆ.

ಈ ಮೂರರಲ್ಲಿ ಮೊದಲು ಯಾವುದರ ಅಂಗೀಕಾರ ಮಾಡಬೇಕೆಂಬುದನ್ನು ಈಗ ಹೇಳುತ್ತಾರೆ, -

ತತ್ರಾದೌ ಸಮ್ಯಕ್ತ್ವಂ ಸಮುಪಾಶ್ರಯಣೀಯಮಖಿಲಯತ್ನೇನ ।
ತಸ್ಮಿನ್ ಸತ್ಯೇವ ಯತೋ ಭವತಿ ಜ್ಞಾನಂ ಚಾರಿತ್ರಂ ಚ ॥೨೧॥

**ಅನ್ವಯಾರ್ಥ :-** [**ತತ್ರಾದೌ**] ಈ ಮೂರರಲ್ಲಿ ಮೊದಲು [**ಅಖಿಲಯತ್ನೇನ**] ಎಲ್ಲ ಪ್ರಕಾರದ ಸಾವಧಾನತೆಯೊಡನೆ ಯತ್ನಪೂರ್ವಕವಾಗಿ [**ಸಮ್ಯಕ್ತ್ವಂ**] ಸಮ್ಯಗ್ದರ್ಶನವನ್ನು [**ಸಮುಪಾಶ್ರಯಣೀಯಂ**] ಒಳ್ಳೆಯ ರೀತಿಯಿಂದ ಅಂಗೀಕಾರ ಮಾಡಬೇಕಾಗುವುದು. [**ಯತಃ**] ಏಕೆಂದರೆ [**ತಸ್ಮಿನ್ ಸತಿ ಏವ**] ಅದು ಇದ್ದನಂತರವೇ [**ಜ್ಞಾನಂ**] ಸಮ್ಯಗ್ಜ್ಞಾನ [**ಚ**] ಮತ್ತು [**ಚಾರಿತ್ರಂ**] ಸಮ್ಯಕ್ಚಾರಿತ್ರವು [**ಭವತಿ**] ಆಗುತ್ತದೆ.

**ಟೀಕೆ :- 'ತತ್ರ ಆದೌ ಅಖಿಲಯತ್ನೇನ ಸಮ್ಯಕ್ತ್ವಂ ಸಮುಪಾಶ್ರಯಣೀಯಮ್।'** - ಈ ಮೂರರಲ್ಲಿ ಮೊದಲು ಸಮಸ್ತ ಉಪಾಯಗಳಿಂದ ಯಾವ ಪ್ರಕಾರದಿಂದ ಸಂಭವಿಸುವ ಸಾಧ್ಯತೆಯಿದೆಯೋ ಹಾಗೆ ಸಮ್ಯಗ್ದರ್ಶನವನ್ನು ಅಂಗೀಕಾರ ಮಾಡಬೇಕಾಗುವುದು. ಇದರ ಪ್ರಾಪ್ತಿಯಾದ ಮೇಲೆ ಅವಶ್ಯವಾಗಿ ಮೋಕ್ಷ ಪದದ ಪ್ರಾಪ್ತಿಯಾಗುತ್ತದೆ. ಮತ್ತು ಇದರ ಹೊರತಾಗಿ ಮೋಕ್ಷವು ಸರ್ವಥಾ ಆಗುವುದಿಲ್ಲ. ಇದು ಸ್ವರೂಪದ ಪ್ರಾಪ್ತಿಯ ಅದ್ವಿತೀಯ ಕಾರಣವಿದೆ. ಅದಕ್ಕಾಗಿಯೇ ಇದರ ಅಂಗೀಕಾರ ಮಾಡುವುದರಲ್ಲಿ ಸ್ವಲ್ಪ ಮಾತ್ರವೂ ಪ್ರಮಾದ ಮಾಡುವುದು ಯೋಗ್ಯವಿಲ್ಲ. ಮರಣದ ಸ್ವೀಕಾರ ಮಾಡಿಯಾದರೂ ಆಗಲಿ ಇದನ್ನು ಪ್ರಾಪ್ತ ಮಾಡಿಕೊಳ್ಳುವ ಪುರುಷಾರ್ಥವನ್ನು ಅವಶ್ಯವಾಗಿ ಮಾಡಬೇಕು.

ಹೆಚ್ಚಿಗೇನು ಹೇಳುವುದು, ಈ ಜೀವನಿಗೆ ಒಳ್ಳೆಯದಾಗುವ ಉಪಾಯವೆಂದರೆ ಒಂದು ಸಮ್ಯಗ್ದರ್ಶನವನ್ನು ಹೊರತುಪಡಿಸಿ ಬೇರೆ ಯಾವುದೂ ಇಲ್ಲ. ಆದುದರಿಂದ ಅದನ್ನು ಅವಶ್ಯವಾಗಿ ಅಂಗೀಕಾರ ಮಾಡಬೇಕು. ಇದನ್ನೇ ಮೊದಲು ಏಕೆ ಅಂಗೀಕಾರ ಮಾಡಬೇಕೆಂಬುದರ ಕಾರಣವನ್ನು ತಿಳಿಸಿಕೊಡುತ್ತಾರೆ. **'ಯತಃ ತಸ್ಮಿನ್ ಸತಿ ಏವ ಜ್ಞಾನಂ ಚ ಚಾರಿತ್ರಂ ಚ ಭವತಿ'** - ಈ ಸಮ್ಯಗ್ದರ್ಶನವಾದ ನಂತರವೇ ಸಮ್ಯಗ್ಜ್ಞಾನ ಮತ್ತು ಸಮ್ಯಕ್ಚಾರಿತ್ರವಾಗುತ್ತದೆ.

**ಭಾವಾರ್ಥ :-** ಸಮ್ಯಕ್ತ್ವವಿಲ್ಲದೆ ಹನ್ನೊಂದು ಅಂಗಗಳವರೆಗೆ ಪಠಣೆ ಮಾಡಿದರೂ ಕೂಡ ಅವನು ಅಜ್ಞಾನಿಯೆಂದೇ ಕರೆಸಿಕೊಳ್ಳುತ್ತಾನೆ. ಪುನಃ ಮಹಾವ್ರತಗಳ ಸಾಧನೆ ಮಾಡಿ ಅಂತಿಮ ಗ್ರೈವೇಯಕದವರೆಗಿನ ಬಂಧಯೋಗ್ಯವಾದ ವಿಶುದ್ಧ ಪರಿಣಾಮ ಮಾಡಿದರೂ ಕೂಡ ಅವನು ಅಸಂಯಮಿಯೆಂದೇ ಕರೆಸಿಕೊಳ್ಳುತ್ತಾನೆ. ಮತ್ತು ಸಮ್ಯಕ್ತ್ವ ಸಹಿತವಾಗಿ ಎಷ್ಟೇ ಜ್ಞಾನವಿರಲಿ ಅದೆಲ್ಲದರ ಹೆಸರು ಸಮ್ಯಗ್ಜ್ಞಾನವಿದೆ ಅದರಂತೆ ಸ್ವಲ್ಪವಾದರೂ ತ್ಯಾಗರೂಪವಾದ ಪ್ರವರ್ತನೆ ಮಾಡಿದರೆ ಅದನ್ನು ಸಮ್ಯಕ್ಚಾರಿತ್ರವೆಂದು ಹೇಳಲಾಗುತ್ತದೆ. ಯಾವ ಪ್ರಕಾರ ಅಂಕಸಹಿತವಾದ ಸೊನ್ನೆಯಿದ್ದರೆ ಅದು ಗಣನೆಯಲ್ಲಿ ಬರುತ್ತದೆ, ಆದರೆ ಅಂಕರಹಿತವಾದ ಸೊನ್ನೆಯಂತೂ ಸೊನ್ನೆಯೇ ಇದೆ. ಅದೇ ಪ್ರಕಾರ ಸಮ್ಯಕ್ತ್ವದಿಂದ ರಹಿತವಾದ ಜ್ಞಾನ ಹಾಗೂ ಚಾರಿತ್ರಗಳು ವ್ಯರ್ಥವೇ ಇವೆ. ಆದುದರಿಂದ ಮೊದಲು ಸಮ್ಯಕ್ತ್ವದ ಅಂಗೀಕಾರ ಮಾಡಿ ಅನಂತರ ಉಳಿದ ಸಾಧನೆ ಮಾಡಬೇಕಾಗುವುದು.

ಈ ಪ್ರಕಾರ ಆ ಸಮ್ಯಕ್ತ್ವದ ಲಕ್ಷಣ ತಿಳಿದುಕೊಂಡರೆ ಅದನ್ನು ಅಂಗೀಕಾರ ಮಾಡುವರು. ಆದುದರಿಂದ ಪ್ರಥಮದಲ್ಲಿಯೇ ಆ ಸಮ್ಯಕ್ತ್ವದ ಲಕ್ಷಣ ಹೇಳುತ್ತಾರೆ, -

**ಜೀವಾಜೀವಾದೀನಾಂ ತತ್ತ್ವಾರ್ಥಾನಾಂ ಸದೈವ ಕರ್ತವ್ಯಮ್ ।**<br>
**ಶ್ರದ್ಧಾನಂ ವಿಪರೀತಾಭಿನಿವೇಶ ವಿವಿಕ್ತಮಾತ್ಮ ರೂಪಂ ತತ್ ॥೨೨॥**

ಅನ್ವಯಾರ್ಥ :- **[ಜೀವಾಜೀವಾದೀನಾಂ]** ಜೀವ ಅಜೀವ ಮೊದಲಾದ **[ತತ್ತ್ವಾರ್ಥಾನಾಂ]** ತತ್ತ್ವಾರ್ಥಗಳ **[ವಿಪರೀತಾಭಿನಿವೇಶವಿವಿಕ್ತಂ]** ವಿಪರೀತ ಅಭಿನಿವೇಶವಿಲ್ಲದ (ಆಗ್ರಹವಿಲ್ಲದ) ಎಂದರೆ ಅನ್ಯವನ್ನು ಅನ್ಯರೂಪವಾಗಿ ತಿಳಿದುಕೊಳ್ಳುವ ರೂಪದ ಯಾವ ಮಿಥ್ಯಾಜ್ಞಾನವಿದೆ ಅದರಿಂದ ರಹಿತವಾದ **[ಶ್ರದ್ಧಾನಂ]** ಶ್ರದ್ಧೆಯನ್ನು ಎಂದರೆ ದೃಢ ವಿಶ್ವಾಸವನ್ನು **[ಸದೈವ]** ನಿರಂತರವಾಗಿ **[ಕರ್ತವ್ಯಂ]** ಮಾಡಬೇಕಾಗುವುದು. ಏಕೆಂದರೆ **[ತತ್]** ಆ ಶ್ರದ್ಧೆಯೇ **[ಆತ್ಮರೂಪಂ]** ಆತ್ಮನ ಸ್ವರೂಪವಿದೆ.

**ಟೀಕೆ :- 'ಜೀವಾಜೀವಾದೀನಾಂ ತತ್ತ್ವಾರ್ಥಾನಾಂ ಶ್ರದ್ಧಾನಂ ಸದೈವ ಕರ್ತವ್ಯಂ'** - ಜೀವ - ಅಜೀವ ಮೊದಲಾದ ತತ್ತ್ವಾರ್ಥ - ತತ್ತ್ವ ಎಂದರೆ ಯಾವುದು ಯಾವುದರ ನಿಜಭಾವವಿದೆ ಹಾಗೆಯೇ ಇರುವುದು ಅದು ತತ್ತ್ವವಿದೆ. ಮತ್ತು ಆ ತತ್ತ್ವದಿಂದ ಸಂಯುಕ್ತವಾದ ಯಾವ ಅರ್ಥವಿದೆ ಎಂದರೆ ಪದಾರ್ಥವಿದೆ ಅದೇ ತತ್ತ್ವಾರ್ಥವಿದೆ - ಅದರ ಶ್ರದ್ಧೆ ಎಂದರೆ ಹೀಗೆಯೇ ಇದೆ ಅನ್ಯ ಪ್ರಕಾರದಿಂದ ಇಲ್ಲವೆಂಬ ಪ್ರತೀತ ಭಾವವೇ ಸದಾ ಕರ್ತವ್ಯವಿದೆ. ಎಂಥ ಶ್ರದ್ಧೆ ಮಾಡುವುದು ಯೋಗ್ಯವಿದೆಯೆಂದರೆ **'ವಿಪರೀತಾಭಿನಿವೇಶವಿವಿಕ್ತಂ'** - ಎಂದರೆ ಅನ್ಯವನ್ನು ಅನ್ಯರೂಪವಾಗಿ ಮನ್ನಿಸುವ ರೂಪದ ಮಿಥ್ಯಾತ್ವದಿಂದ ರಹಿತವಾದ ಶ್ರದ್ಧೆಯನ್ನು ಮಾಡುವುದು **'ತತ್ ಆತ್ಮರೂಪಂ ಅಸ್ತಿ'** - ಅದೇ ಶ್ರದ್ಧೆಯು ಆತ್ಮನ ಸ್ವರೂಪವಿದೆ. ಯಾವ ಶ್ರದ್ಧೆಯು ಕ್ಷಾಯಿಕ ಸಮ್ಯಕ್‌ದೃಷ್ಟಿಗೆ ಉತ್ಪನ್ನವಾಗುತ್ತದೆ. ಅದೇ ಸಿದ್ಧಾವಸ್ಥೆಯವರೆಗೆ ಇರುತ್ತದೆ. ಆದುದರಿಂದ ಅದು ಉಪಾಧಿಭಾವವಲ್ಲ, ಆದರೆ ಆತ್ಮನ ನಿಜ ಭಾವವಿದೆ.

**ಭಾವಾರ್ಥ :-** ತತ್ತ್ವಾರ್ಥಶ್ರದ್ಧೆಯು ಸಮ್ಯಗ್ದರ್ಶನದ ಲಕ್ಷಣವಿದೆ. ಆ ತತ್ತ್ವಾರ್ಥ ಶ್ರದ್ಧೆಯು ಎರಡು ಪ್ರಕಾರದ್ದಿದೆ. ಅದರಲ್ಲಿ ಒಂದು ಸಾಮಾನ್ಯ ರೂಪವಿದ್ದರೆ ಇನ್ನೊಂದು ವಿಶೇಷ ರೂಪವಿದೆ. ಯಾವುದು ಪರಭಾವಗಳಿಂದ ಭಿನ್ನವಾದ

ತನ್ನ ಚೈತನ್ಯಸ್ವರೂಪವನ್ನು ತನ್ನ ರೂಪದಿಂದ ಶ್ರದ್ಧೆ ಮಾಡುವುದು ಅದನ್ನು ಸಾಮಾನ್ಯ ತತ್ತ್ವಾರ್ಥಶ್ರದ್ಧೆಯೆಂದು ಹೇಳುತ್ತಾರೆ. ಈ ಶ್ರದ್ಧೆಯಂತೂ ನಾರಕೀ, ತಿರ್ಯಂಚ ಮೊದಲಾದ ಸಮಸ್ತ ಸಮ್ಯಕ್‌ದೃಷ್ಟಿ ಜೀವರುಗಳಿಗೆ ಇರುತ್ತದೆ. ಮತ್ತು ಜೀವ-ಅಜೀವ ಮೊದಲಾದ ಸಪ್ತ ತತ್ತ್ವಗಳ ವಿಶೇಷಣ ತಿಳಿದುಕೊಂಡು ಎಂದರೆ ಅವುಗಳ ಭೇದಗಳನ್ನು ತಿಳಿದುಕೊಂಡು ಶ್ರದ್ಧೆ ಮಾಡುವುದು ಅದನ್ನು ವಿಶೇಷ ತತ್ತ್ವಾರ್ಥಶ್ರದ್ಧೆಯೆಂದು ಹೇಳುತ್ತಾರೆ. ಈ ಶ್ರದ್ಧೆಯು ಮನುಷ್ಯ-ದೇವ ಮೊದಲಾದ ವಿಶೇಷ ಬುದ್ಧಿವಂತ ಜೀವರುಗಳಿಗೆ ಇರುತ್ತದೆ. ಆದರೆ ರಾಜಮಾರ್ಗದ (ಮುಖ್ಯಮಾರ್ಗದ) ಅಪೇಕ್ಷೆಯಿಂದ ಸಪ್ತ ತತ್ತ್ವಗಳನ್ನು ತಿಳಿದುಕೊಳ್ಳುವುದೇ ಸಮ್ಯಕ್ತ್ವದ-ಸಮ್ಯಕ್‌ಶ್ರದ್ಧೆಯ ಕಾರಣವಿದೆ. ಏಕೆಂದರೆ ಒಂದು ವೇಳೆ ತತ್ತ್ವಗಳನ್ನು ತಿಳಿದುಕೊಳ್ಳದಿದ್ದರೆ ಯಾವುದರ ಶ್ರದ್ಧೆ ಮಾಡುವುದು ? ಆದುದರಿಂದ ಏಳು ತತ್ತ್ವಗಳ ವರ್ಣನೆಯನ್ನು ಇಲ್ಲಿ ಸಂಕ್ಷೇಪದೊಳಗೆ ಮಾಡುತ್ತಾರೆ.

೧) **ಜೀವತತ್ತ್ವ** ಃ- ಜೀವತತ್ತ್ವವು ಚೇತನಾ ಲಕ್ಷಣದಿಂದ ವಿರಾಜಮಾನವಿದೆ. ಅದು ಶುದ್ಧ, ಅಶುದ್ಧ ಮತ್ತು ಮಿಶ್ರದ ಭೇದದಿಂದ ಮೂರು ಪ್ರಕಾರವಾಗಿದೆ.

೧) **ಶುದ್ಧ ಜೀವತತ್ತ್ವ** ಃ- ಯಾವ ಜೀವರುಗಳ ಸಮಸ್ತ ಗುಣ-ಪರ್ಯಾಯಗಳು ತಮ್ಮ ನಿಜಭಾವರೂಪದಿಂದ ಪರಿಣಮನ ಮಾಡುತ್ತವೆ ಎಂದರೆ ಯಾವ ಕೇವಲಜ್ಞಾನಾದಿಗುಣಗಳು ಶುದ್ಧ ಪರಿಣತಿಯಿಂದ - ಪರ್ಯಾಯ ದಿಂದ ವಿರಾಜಮಾನವಿವೆ ಅವರನ್ನು ಶುದ್ಧ ಜೀವರೆಂದು ಹೇಳುತ್ತಾರೆ.

೨) **ಅಶುದ್ಧ ಜೀವತತ್ತ್ವ** ಃ- ಯಾವ ಜೀವರುಗಳ ಸರ್ವ ಗುಣ-ಪರ್ಯಾಯಗಳು ವಿಕಾರ ಭಾವಕ್ಕೆ ಪ್ರಾಪ್ತವಾಗುತ್ತಲಿವೆ, ಜ್ಞಾನಾದಿ ಗುಣಗಳು ಆವರಣದಿಂದ ಆಚ್ಛಾದಿತವಾಗುತ್ತಲಿವೆ. ಅವುಗಳೊಳಗಿಂದ ಯಾವವು ಅಲ್ಪಸ್ವಲ್ಪ ಪ್ರಕಟರೂಪವಿವೆ ಅವು ವಿಪರೀತ ಪರಿಣಮನ ಮಾಡುತ್ತಲಿವೆ ಮತ್ತು ಯಾರ ಪರಿಣತಿಯು ರಾಗಾದಿಗಳ ರೂಪವಾಗಿ ಪರಿಣಮನ ಮಾಡುತ್ತಲಿದೆ ಆ ಮಿಥ್ಯಾದೃಷ್ಟಿ ಜೀವರುಗಳನ್ನು ಅಶುದ್ಧ ಜೀವರೆಂದು ಹೇಳುತ್ತಾರೆ.

೩) **ಮಿಶ್ರಜೀವ** ಃ- ಯಾವ ಜೀವರುಗಳ ಸಮ್ಯಕ್ತ್ವ ಮೊದಲಾದ ಗುಣಗಳ ಶಕ್ತಿಯು ಕೆಲವಂಶ ಶುದ್ಧವಾಗಿ ಹೋಗಿದೆ ಅಥವಾ ಅವುಗಳಲ್ಲಿ ಕೂಡ ಒಂದಿಷ್ಟು ಮಲಿನತೆಯು ಬಾಕಿ ಉಳಿದುಕೊಂಡಿದೆ - ಎಂದರೆ ಕೆಲವೊಂದು ಜ್ಞಾನಾದಿ ಗುಣಗಳಶಕ್ತಿಯು ಒಂದಿಷ್ಟು ಶುದ್ಧವಾಗಿ ಹೋಗಿದೆ ಮತ್ತು ಉಳಿದುದೆಲ್ಲವು ಅಶುದ್ಧವಾಗಿ ಉಳಿದುಕೊಂಡಿದೆ, ಕೆಲವು ಗುಣಗಳು ಅಶುದ್ಧವಾಗಿಯೇ ಆಗುತ್ತಲಿವೆ, ಹೀಗಂತೂ ಗುಣಗಳ ದಶೆಯಾಗಿದೆ ಮತ್ತು ಯಾರ ಪರಿಣತಿಯು ಶುದ್ಧಾಶುದ್ಧರೂಪವಾಗಿ ಪರಿಣಮನ ಮಾಡುತ್ತಲಿದೆ ಆ ಜೀವರುಗಳನ್ನು ಶುದ್ಧಾಶುದ್ಧರೂಪದ ಮಿಶ್ರರೆಂದು ಹೇಳುತ್ತಾರೆ. ಈ ಪ್ರಕಾರ ಜೀವತತ್ತ್ವವು ಮೂರು ಪ್ರಕಾರದ್ದಿದೆ.

೨) **ಅಜೀವತತ್ತ್ವ** ಃ- ಚೇತನಾ ಗುಣದಿಂದ ರಹಿತವಿರುವಂಥ ಪುದ್ಗಲ, ಧರ್ಮ, ಅಧರ್ಮ, ಆಕಾಶ ಮತ್ತುಕಾಲ (ಕಾಲಾಣುರೂಪ) ವೆಂದು ಐದು ಪ್ರಕಾರದ್ದಿವೆ. ಅವುಗಳಲ್ಲಿ ೧) ಪುದ್ಗಲ ದ್ರವ್ಯವು ಸ್ಪರ್ಶ, ರಸ, ಗಂಧ, ವರ್ಣ ಸಂಯುಕ್ತವಿದ್ದು, ಅದು ಅಣು ಹಾಗೂ ಸ್ಕಂಧದ ಭೇದದಿಂದ ಎರಡು ಪ್ರಕಾರವಾಗಿದೆ. ಅವುಗಳಲ್ಲಿ ಯಾವುದು ಏಕಾಕಿ-ಅವಿಭಾಗಿಯಾದ ಪರಮಾಣುವಿದೆ ಅದನ್ನು ಅಣುವೆಂದು ಹೇಳುತ್ತಾರೆ. ಅನೇಕ ಅಣುಗಳು ಕೂಡಿಕೊಂಡು ಸ್ಕಂಧರೂಪವಾದ ಮೇಲೆ ಅದನ್ನು ಸ್ಕಂಧವೆಂದು ಹೇಳುತ್ತಾರೆ. ಅಥವಾ ಪುದ್ಗಲ ದ್ರವ್ಯದಲ್ಲಿ ಆರು ಭೇದಗಳಿವೆ.

೧) **ಸ್ಥೂಲಸ್ಥೂಲ** - ಕಾಷ್ಠ-ಪಾಷಾಣ ಮೊದಲಾದವು ಭೇದ-ಭೇದ ಮಾಡಿದ ಮೇಲೆ ಪುನಃ ಒಂದಾಗುವುದಿಲ್ಲ, ಅವನ್ನು ಸ್ಥೂಲ ಸ್ಥೂಲ ಪುದ್ಗಲವೆಂದು ಹೇಳುತ್ತಾರೆ, **೨) ಸ್ಥೂಲ** - ಹಾಲು, ನೀರು, ಎಣ್ಣೆ ಮೊದಲಾದ ದ್ರವ ಪದಾರ್ಥಗಳ ಹಾಗೆ ಭಿನ್ನ-ಭಿನ್ನ ಮಾಡಿದ ಮೇಲೆ ಪುನಃ ಕೂಡಲೆ ಒಂದಾಗುವಂಥವುಗಳನ್ನು ಸ್ಥೂಲವೆಂದು ಹೇಳುತ್ತಾರೆ. **೩) ಸ್ಥೂಲಸೂಕ್ಷ್ಮ** - ಬಿಸಿಲು, ಬೆಳುದಿಂಗಳು, ಅಂಧಕಾರ ಮೊದಲಾದವು ಕಣ್ಣುಗಳಿಗೆ ಕಂಡುಬಂದರೂ ಕೂಡ ಹಿಡಿದುಕೊಳ್ಳಲು ಬರುವುದಿಲ್ಲ, ಅವನ್ನು ಸ್ಥೂಲಸೂಕ್ಷ್ಮವೆಂದು ಹೇಳುತ್ತಾರೆ. **೪) ಸೂಕ್ಷ್ಮ ಸ್ಥೂಲ** - ಶಬ್ದ, ಗಂಧ ಮೊದಲಾದವು ಕಣ್ಣುಗಳಿಗೆ ಕಂಡು ಬರುವುದಿಲ್ಲ, ಆದರೆ ಅನ್ಯ ಇಂದ್ರಿಯಗಳಿಂದ ಜ್ಞಾನದಲ್ಲಿ ಬರುತ್ತವೆ ಅವನ್ನು

ಸೂಕ್ಷ್ಮಸ್ಥೂಲವೆಂದು ಹೇಳುತ್ತಾರೆ. ೫) **ಸೂಕ್ಷ್ಮ** - ಕಾರ್ಮಣ ಸ್ಕಂಧ ಮೊದಲಾದ ಬಹಳಷ್ಟು ಪರಮಾಣುಗಳ ಸ್ಕಂಧಗಳಿವೆ, ಆದರೆ ಇಂದ್ರಿಯಗಮ್ಯವಿಲ್ಲ ಅವನ್ನು ಸೂಕ್ಷ್ಮವೆಂದು ಹೇಳುತ್ತಾರೆ. ೬) **ಸೂಕ್ಷ್ಮ ಸೂಕ್ಷ್ಮ** - ಅತ್ಯಂತ ಸೂಕ್ಷ್ಮ ಸ್ಕಂಧಗಳನ್ನು ಅಥವಾ ಪರಮಾಣುಗಳನ್ನು ಸೂಕ್ಷ್ಮ ಸೂಕ್ಷ್ಮವೆಂದು ಹೇಳುತ್ತಾರೆ. ಈ ಪ್ರಕಾರ ಈ ಲೋಕದಲ್ಲಿ ಪ್ರಚುರ ಪ್ರಸಾರವು ಈ ಪುದ್ಗಲದ್ರವ್ಯದ್ದೇ ಇದೆ.

೨) **ಧರ್ಮದ್ರವ್ಯ** - ಜೀವ ಮತ್ತು ಪುದ್ಗಲಗಳಿಗೆ ಗಮನ ಮಾಡುವಲ್ಲಿ ಸಹಕಾರೀ ಗುಣ ಸಂಯುಕ್ತ ಲೋಕಪ್ರಮಾಣವಾದ ಒಂದು ದ್ರವ್ಯವಿದೆ.

೩) **ಅಧರ್ಮದ್ರವ್ಯ** - ಜೀವ ಮತ್ತು ಪುದ್ಗಲಗಳಿಗೆ ಗತಿ ಪೂರ್ವಕವಾಗಿ ಸ್ಥಿತಿ ಮಾಡುವಲ್ಲಿ ಸಹಕಾರೀ ಗುಣಸಂಯುಕ್ತ ಲೋಕಪ್ರಮಾಣವಾದ ಒಂದು ದ್ರವ್ಯವಿದೆ.

೪) **ಆಕಾಶದ್ರವ್ಯ** : ಸಮಸ್ತ ದ್ರವ್ಯಗಳಿಗೆ ಅವಗಾಹನಹೇತುತ್ವಲಕ್ಷಣಸಂಯುಕ್ತ ಲೋಕಾಲೋಕ ಪ್ರಮಾಣವಾದ ಒಂದು ದ್ರವ್ಯವಿದೆ. ಯಾವುದರಲ್ಲಿ ಸಮಸ್ತ ದ್ರವ್ಯಗಳು ಕಂಡು ಬರುತ್ತವೆ. ಅದನ್ನು ಲೋಕ ಮತ್ತು ಎಲ್ಲಿ ಕೇವಲ ಒಂದು ಆಕಾಶವೇ ಇದೆ ಅದನ್ನು ಅಲೋಕವೆಂದು ಹೇಳುತ್ತಾರೆ. ಅವೆರಡರ ಸತ್ತಾ ಭಿನ್ನವಿಲ್ಲದಿರುವುದರಿಂದ ಒಂದೇ ದ್ರವ್ಯವಿದೆ.

೫) **ಕಾಲದ್ರವ್ಯ** - ಸಮಸ್ತ ದ್ರವ್ಯಗಳಿಗೆ ವರ್ತನಾಹೇತುತ್ವಲಕ್ಷಣಸಂಯುಕ್ತ ಲೋಕದ ಒಂದೊಂದು ಪ್ರದೇಶದ ಮೇಲೆ ಸ್ಥಿರ ಒಂದೊಂದು ಪ್ರದೇಶ ಮಾತ್ರ ಅಸಂಖ್ಯಾತ ದ್ರವ್ಯಗಳಿವೆ. ಅವುಗಳ ಪರಿಣಾಮದ ನಿಮಿತ್ತದಿಂದಸಮಯ, ಆವಲಿ ಮೊದಲಾದ ವ್ಯವಹಾರ ಕಾಲವಿದೆ. ಈ ಪ್ರಕಾರ ಜೀವದ್ರವ್ಯ ಸಹಿತವಾಗಿ ಆರು ದ್ರವ್ಯಗಳಿವೆಯೆಂದು ತಿಳಿಯುವುದು. ಕಾಲಕ್ಕೆ ಬಹುಪ್ರದೇಶಗಳಿಲ್ಲದಿರುವುದರಿಂದ ಕಾಲವನ್ನು ಹೊರತು ಪಡಿಸಿ ಉಳಿದ ಐದು ದ್ರವ್ಯಗಳನ್ನು ಪಂಚಾಸ್ತಿಕಾಯವೆಂದು ಹೇಳುತ್ತಾರೆ. ಇದರಲ್ಲಿ ಜೀವತತ್ತ್ವ ಮತ್ತು ಪುದ್ಗಲ ಎಂದರೆ ಅಜೀವತತ್ತ್ವದ ಪರಸ್ಪರ ಸಂಬಂಧದಿಂದ ಉಳಿದ ಐದು ತತ್ತ್ವಗಳಾಗುತ್ತವೆ.

೩. **ಆಸ್ರವತತ್ತ್ವ** : ಜೀವದ ರಾಗ ಮೊದಲಾದ ಪರಿಣಾಮಗಳಿಂದ ಯೋಗದ ಮೂಲಕ ಬರುವಂಥ ಪುದ್ಗಲದ ಆಗಮನವನ್ನು ಆಸ್ರವತತ್ತ್ವವೆಂದು ಹೇಳುತ್ತಾರೆ.

೪) **ಬಂಧತತ್ತ್ವ** :- ಜೀವದ ಅಶುದ್ಧತೆಯ ನಿಮಿತ್ತದಿಂದ ಬಂದಿರುವ ಪುದ್ಗಲಗಳ ಜ್ಞಾನಾವರಣಾದಿಗಳ ರೂಪದ ತಮ್ಮ ಸ್ಥಿತಿ ಮತ್ತು ರಸ ಸಂಯುಕ್ತವಾಗಿ ಆತ್ಮ ಪ್ರದೇಶಗಳ ಜತೆಯಲ್ಲಿ ಸಂಬಂಧರೂಪವಾಗುವುದನ್ನು ಬಂಧತತ್ತ್ವವೆಂದು ಹೇಳುತ್ತಾರೆ.

೫) **ಸಂವರತತ್ತ್ವ** : ಜೀವದ ರಾಗ ಮೊದಲಾದ ಪರಿಣಾಮಗಳ ಅಭಾವದಿಂದ ಪುದ್ಗಲದ್ರವ್ಯಗಳು ಬಾರದಿರುವುದನ್ನು ಸಂವರತತ್ತ್ವವೆಂದು ಹೇಳುತ್ತಾರೆ.

೬) **ನಿರ್ಜರಾತತ್ತ್ವ** : ಜೀವದ ಶುದ್ಧೋಪಯೋಗದ ಬಲದಿಂದಪೂರ್ವದಲ್ಲಿಕಟ್ಟಿದ ಕರ್ಮಗಳ ಏಕದೇಶ ನಾಶವಾಗುವುದನ್ನು ಸಂವರಪೂರ್ವಕ ನಿರ್ಜರೆಯೆಂದು ಹೇಳುತ್ತಾರೆ. ಕರ್ಮದ ಫಲವನ್ನು ಭೋಗಿಸಿದ ಮೇಲೆ ಯಾವವುಗಳ ನಿರ್ಜರೆ ಮಾಡಲಾಗುತ್ತದೆ, ಆ ನಿರ್ಜರೆಯು ಮೋಕ್ಷದ ಸಲುವಾಗಿ ಕಾರಣಭೂತವಿಲ್ಲ.

೭) **ಮೋಕ್ಷತತ್ತ್ವ** : ಸರ್ವಥಾ ಕರ್ಮದ ನಾಶವಾದ ಮೇಲೆ ಜೀವದ ನಿಜಭಾವವು ಪ್ರಕಟವಾಗುವುದನ್ನು ಮೋಕ್ಷತತ್ತ್ವವೆಂದು ಹೇಳುತ್ತಾರೆ. ಈ ಏಳು ತತ್ತ್ವಾರ್ಥಗಳನ್ನು ತಿಳಿಯಬೇಕು. ಪುಣ್ಯ-ಪಾಪಗಳು ತತ್ತ್ವಗಳಿದ್ದು ಅವು ಆಸ್ರವತತ್ತ್ವದ ಭೇದಗಳಿರುವುದರಿಂದ ಬೇರೆಯಾಗಿ ಹೇಳಲಾಗಿಲ್ಲ. ಈ ಪ್ರಕಾರ ಈ ತತ್ತ್ವಾರ್ಥದ ಶ್ರದ್ಧೆಯನ್ನೇ ಸಮ್ಯಗ್ದರ್ಶನದ ಲಕ್ಷಣವೆಂದು ಹೇಳಿದೆ.

**ಪ್ರಶ್ನೆ** :- ಈ ಲಕ್ಷಣದಲ್ಲಿ ಅವ್ಯಾಪ್ತಿದೋಷವು ಬರುತ್ತದೆ. ಹೇಗೆಂದರೆ ಯಾವ ಸಮಯ ಸಮ್ಯಕ್‌ದೃಷ್ಟಿಯು

ವಿಷಯ-ಕಷಾಯದ ತೀವ್ರತೆಯ ರೂಪವಾದ ಪರಿಣಮನ ಮಾಡುತ್ತಾನೆ. ಆಗ ಇಂಥ ಶ್ರದ್ಧೆಯು ಹೇಗೆ ಉಳಿಯುವ ಸಾಧ್ಯತೆಯಿದೆ ? ಯಾವುದು ಲಕ್ಷ್ಯದಲ್ಲಿ ಸದಾಕಾಲ ಸರ್ವಥಾ ಕಂಡು ಬರುತ್ತದೆ ಅದು ಲಕ್ಷಣವಿದೆ.

**ಉತ್ತರ :-** ಜೀವದಲ್ಲಿ ಒಂದು ಶ್ರದ್ಧೆಯ ರೂಪ, ಇನ್ನೊಂದು ಪರಿಣಮನ ರೂಪವೆಂದು ಎರಡು ಭಾವಗಳಿವೆ. ಶ್ರದ್ಧೆಯ ರೂಪವಂತೂ ಸಮ್ಯಕ್ತ್ವದ ಲಕ್ಷಣವಿದೆ ಮತ್ತು ಪರಿಣಾಮರೂಪವು ಅದು ಚಾರಿತ್ರದ ಲಕ್ಷಣವಿದೆ. ಸಮ್ಯಕ್‌ದೃಷ್ಟಿಯು ವಿಷಯ-ಕಷಾಯದ ಪರಿಣಮನರೂಪನಾಗಿದ್ದರೂ ಶ್ರದ್ಧೆಯಲ್ಲಿ ಪ್ರತೀತಿಯು ಯಥಾವತ್ ಇರುತ್ತದೆ. ಯಾವ ಪ್ರಕಾರ ನೌಕರನು ಸಾಹುಕಾರನ ಸೇವಕನಿದ್ದಾನೆ ಅವನ ಅಂತರಂಗದಲ್ಲಿ ಇದೆಲ್ಲವೂ ಆ ಸಾಹುಕಾರನ ಕಾರ್ಯವಿದೆ, ನನ್ನ ಮನೆಯಂತೂ ಬೇರೆಯೇ ಇದೆಯೆಂಬ ಪ್ರತೀತಿಯಿರುತ್ತದೆ. ಪರಿಣಾಮಗಳಿಂದಂತೂ ಶ್ರೀಮಂತನ ಕಾರ್ಯದಲ್ಲಿ ಪ್ರವರ್ತನೆ ಮಾಡುತ್ತಾನೆ ಮತ್ತು ಆ ಸಾಹುಕಾರನ ಕಾರ್ಯವನ್ನು 'ನನ್ನದು-ನನ್ನದೆಂ'ದೂ ಹೇಳುತ್ತಾನೆ, ಲಾಭ-ಹಾನಿಯಾದ ಮೇಲೆ ಹರ್ಷ-ವಿಷಾದವನ್ನೂ ಮಾಡುತ್ತಾನೆ. ಮತ್ತು ಆ ಪ್ರತೀತಿಯನ್ನು ಪುನಃ ಪುನಃ ಸಂರಕ್ಷಿಸುವುದೂ ಇಲ್ಲ. ಆದರೆ ಯಾವ ಸಮಯದಲ್ಲಿ ಆ ಸಾಹುಕಾರನ ಮತ್ತು ತನ್ನ ಲೆಕ್ಕ ಮಾಡುತ್ತಾನೆ, ಆಗ ಅಂತರಂಗದಲ್ಲಿರುವ ಪ್ರತೀತಿಯಂತೆಯೇ ಪ್ರಕಟಮಾಡುತ್ತಾನೆ. ಸಾಹುಕಾರನ ಕಾರ್ಯದಲ್ಲಿ ಪ್ರವರ್ತನೆ ಮಾಡುವ ಸಮಯದಲ್ಲಿ ಆ ಪ್ರತೀತಿಯು ಶಕ್ತಿರೂಪದಿಂದ ಇರುತ್ತದೆ. ಒಂದು ವೇಳೆ ಅವನು ಸಾಹುಕಾರನ ಹಣವನ್ನು ಕಳವು ಮಾಡಿ ಅದನ್ನು ತನ್ನದೆಂದು ತಿಳಿದುಕೊಂಡರೆ ಅವನನ್ನು ಅಪರಾಧಿಯೆಂದು ಹೇಳುತ್ತಾರೆ. ಆದರೆ ಆ ಸೇವಕನು ಸಾಹುಕಾರನ ನೌಕರಿಯನ್ನು ಪರಾಧೀನ ದುಃಖದಾಯಕವೆಂದು ಮನ್ನಿಸುತ್ತಾನೆ ಮತ್ತು ಅವನು ತನಗೆ ಧನದ ಬಲವಿಲ್ಲದ ಕಾರಣ ಆಜೀವಿಕೆಯ ವಶವರ್ತಿಯಾಗಿ ಅವನ ಕಾರ್ಯದಲ್ಲಿ ಪ್ರವರ್ತನೆ ಮಾಡುತ್ತಾನೆ, ಅದೇ ಪ್ರಕಾರ ಜ್ಞಾನಿಗಳು ಕರ್ಮದ ಉದಯವನ್ನು ಭೋಗಿಸುತ್ತಾರೆ.

ಜ್ಞಾನಿಯ ಅಂತರಂಗದಲ್ಲಿ ಎಂಥ ಪ್ರತೀತಿಯಿರುತ್ತದೆಯೆಂದರೆ ಇದೆಲ್ಲವು ತೋರಿಕೆ ಮಾತ್ರ ಸೋಗು ಇದೆ. ನನ್ನ ಸ್ವರೂಪವಂತೂ ಇವೆಲ್ಲವುಗಳಿಂದ ಭಿನ್ನವೇ ಇದೆ, ಪರಿಣಾಮಗಳ ಮೂಲಕ ಔದಯಿಕ ಭಾವಗಳಲ್ಲಿ ಪರಿಣಮನ ಮಾಡುತ್ತಾನೆ ಮತ್ತು ಉದಯದ ಸಂಬಂಧದ ಕಾರಣದಿಂದ 'ನನ್ನದು - ನನ್ನದೆಂ'ದು ಕೂಡ ಹೇಳುತ್ತಾನೆ. ಇಷ್ಟ-ಅನಿಷ್ಟದಲ್ಲಿ ಹರ್ಷ-ವಿಷಾದವನ್ನೂ ಮಾಡುತ್ತಾನೆ ಮತ್ತು ತನ್ನ ಪ್ರತೀತಿಯನ್ನು ಮತ್ತೆ ಮತ್ತೆ ಸಂರಕ್ಷಿಸುವುದೂ ಇಲ್ಲ. ಆದರೆ **ಯಾವ ಸಮಯದಲ್ಲಿ ಆ ಕರ್ಮ ಮತ್ತು ತನ್ನ ಸ್ವರೂಪದ ವಿಚಾರ ಮಾಡುತ್ತಾನೆ. ಆಗ ಅಂತರಂಗದಲ್ಲಿ ಎಂಥ ಪ್ರತೀತಿ ಇರುತ್ತದೆ ಅಂಥದೇ ಪ್ರಕಟ ಮಾಡುತ್ತಾನೆ.** ಪುನಃ ಆ ಕರ್ಮದ ಉದಯದಲ್ಲಿ ಆ ಪ್ರತೀತಿಯು ಶಕ್ತಿರೂಪವಾಗಿ ಇರುತ್ತದೆ. ಒಂದು ವೇಳೆ ಎಂದಾದರೂ ಆ ಕರ್ಮದ ಉದಯವನ್ನು **ಶ್ರದ್ಧೆಯಲ್ಲಿ ತನ್ನದೆಂದು ತಿಳಿದುಕೊಂಡರೆ ಅವನನ್ನು ಮಿಥ್ಯಾತ್ವಿಯೆಂದು ಹೇಳುತ್ತಾರೆ.**

ಮತ್ತೆ ಆ ಜ್ಞಾನಿಯು ಕರ್ಮದ ಉದಯವನ್ನು ಪರಾಧೀನ ದುಃಖವೆಂದು ತಿಳಿಯುತ್ತಾನೆ. ಆದರೆ ತನ್ನ ಶುದ್ಧೋಪಯೋಗದ ಬಲವಿಲ್ಲದೆ ಪೂರ್ವಬದ್ಧ ಕರ್ಮದ ವಶವರ್ತಿಯಾಗಿ ಕರ್ಮದ ಔದಯಿಕ ಭಾವಗಳಲ್ಲಿ ಪ್ರವರ್ತನೆ ಮಾಡುತ್ತಾನೆ. ಈ ಪ್ರಕಾರ ಸಮ್ಯಕ್‌ದೃಷ್ಟಿಯ ತತ್ತ್ವಾರ್ಥ ಶ್ರದ್ಧೆಯು **ಸಮ್ಯಗ್ದರ್ಶನ ಪರಿಣಮನರೂಪವಂತೂ ನಿರ್ಬಾಧರೂಪದಿಂದ ನಿರಂತರವೇ ಇದೆ, ಆದರೆ ಜ್ಞಾನೋಪಯೋಗದ ಅಪೇಕ್ಷೆಯಿಂದ ನೋಡ ಹೋದರೆ ಸಾಮಾನ್ಯರೂಪ ಅಥವಾ ವಿಶೇಷರೂಪವು ಶಕ್ತಿಯ ಅವಸ್ಥೆಯಲ್ಲಿ ಅಥವಾ ವ್ಯಕ್ತ ಅವಸ್ಥೆಯಲ್ಲಿ (ಸಮ್ಯಕ್‌ರೂಪದ ಪರಿಣಮನವಂತೂ) ಯಾವಾಗಲೂ ಇದ್ದೇ ಇರುತ್ತದೆ.**

**ಪ್ರಶ್ನೆ :-** ಈ ಲಕ್ಷಣದಲ್ಲಿ ಅವ್ಯಾಪ್ತಿಯ ದೋಷವು ಇಲ್ಲದಿದ್ದರು ಕೂಡ ಅತಿವ್ಯಪ್ತಿಯ ದೋಷವಂತೂ ತಗಲುತ್ತದೆ. ಏಕೆಂದರೆ ದ್ರವ್ಯಲಿಂಗೀ ಮುನಿಯು ಜಿನಪ್ರಣೀತವಾದ ಸಪ್ತ ತತ್ತ್ವಗಳನ್ನೇ ಮನ್ನಿಸುತ್ತಾನೆ. ಅನ್ಯಮತದ ಕಾಲ್ಪನಿಕ ತತ್ತ್ವಗಳನ್ನು ಮನ್ನಿಸುವುದಿಲ್ಲ. ಲಕ್ಷಣವಂತೂ ಲಕ್ಷ್ಯದ ಹೊರತಾಗಿ ಅನ್ಯ ಸ್ಥಾನಗಳಲ್ಲಿ ಕಂಡು ಬರಬಾರದಂಥದು ಇರಬೇಕಾಗುವುದು.

**ಉತ್ತರ :-** ದ್ರವ್ಯಲಿಂಗೀ ಮುನಿಯು ಜಿನಪ್ರಣೀತತತ್ತ್ವಗಳನ್ನೇ ಮನ್ನಿಸುತ್ತಾನೆ, ಆದರೆ **ವಿಪರೀತಾಭಿನಿವೇಶದಿಂದ ಸಂಯುಕ್ತವಾಗಿ ಮನ್ನಿಸುತ್ತಾನೆ. ಶರೀರಾಶ್ರಿತವಾದ ಕ್ರಿಯಾಕಾಂಡವನ್ನು ತನ್ನದೆಂದು ತಿಳಿಯುತ್ತಾನೆ.** ಇದರಿಂದ

ಅಜೀವತತ್ತ್ವದಲ್ಲಿ ಜೀವತತ್ತ್ವದ ಶ್ರದ್ಧೆ ಮಾಡುತ್ತಾನೆ. ಮತ್ತು **ಆಸ್ರವ ಬಂಧರೂಪವಾದ ಯಾವ ಶೀಲ**★೧ **ಸಂಯಮಾದಿಗಳ ರೂಪದ ಪರಿಣಾಮಗಳಿವೆ ಅವನ್ನು ಸಂವರ- ನಿರ್ಜರಾರೂಪವಾಗಿ ಮನ್ನಿಸಿ ಮೋಕ್ಷದ ಕಾರಣವೆಂದು ಮನ್ನಿಸುತ್ತಾನೆ.** ದ್ರವ್ಯಲಿಂಗಿಯು ಪಾಪದಿಂದಂತೂ ವಿರಕ್ತನಾಗಿದ್ದಾನೆ, ಆದರೆ ಪುಣ್ಯದಲ್ಲಿ ಉಪಾದೇಯ ಬುದ್ಧಿಯಿಂದ ಪರಿಣಮನ ಮಾಡುತ್ತಿರುವುದರಿಂದ ಅವನಿಗೆ ತತ್ತ್ವಾರ್ಥಶ್ರದ್ಧೆಯು ಇರುವುದಿಲ್ಲ. ಈ ಪ್ರಕಾರ ವಿಪರೀತ ಅಭಿಪ್ರಾಯದಿಂದರಹಿತವಾದ ತತ್ತ್ವಾರ್ಥಶ್ರದ್ಧೆಯರೂಪದ ಸಮ್ಯಗ್ದರ್ಶನವನ್ನು ಅಂಗೀಕಾರ ಮಾಡಬೇಕಾಗುವುದು.

ಈಗ ಸಮ್ಯಕ್ತ್ವದ ಎಂಟು ಅಂಗಗಳ ವರ್ಣನೆ ಮಾಡುತ್ತಾರೆ, -

## ೧. ನಿಃಶಂಕಿತ ಅಂಗ

**ಸಕಲಮನೇಕಾಂತಾತ್ಮಕಮಿದಮುಕ್ತಂ ವಸ್ತುಜಾತಮಖಿಲಜ್ಞೈಃ।**
**ಕಿಮು ಸತ್ಯಮಸತ್ಯಂ ವಾ ನ ಜಾತು ಶಂಕೇತಿ ಕರ್ತವ್ಯಾ ॥೨೩॥**

**ಅನ್ವಯಾರ್ಥ :-** **[ಅಖಿಲಜ್ಞೈಃ]** ಸರ್ವಜ್ಞದೇವರ ಮೂಲಕ **[ಉಕ್ತಂ]** ಹೇಳಲಾದ **[ಇದಂ ಸಕಲಂ]** ಈ ಸಮಸ್ತ **[ವಸ್ತುಜಾತಂ]** ವಸ್ತು ಸಮೂಹವು **[ಅನೇಕಾಂತಾತ್ಮಕಂ]** ಅನೇಕಾಂತ ಸ್ವಭಾವರೂಪವಿದೆ ಅದು **[ಕಿಮು ಸತ್ಯಂ]** ಸತ್ಯವಿದೆಯೋ **[ವಾ ಅಸತ್ಯಂ]** ಅಥವಾ ಅಸತ್ಯವಿದೆಯೋ **[ಇತಿ]** - ಎಂಬ **[ಶಂಕಾ]** ಶಂಕೆಯನ್ನು **[ಜಾತು]** ಎಂದೂ **[ನ ಕರ್ತವ್ಯಾ]** ಮಾಡಬಾರದು.

**ಟೀಕೆ :- 'ಅಖಿಲಜ್ಞೈಃ ಸಕಲಂ ಇದಂ ವಸ್ತುಜಾತಂ ಅನೇಕಾಂತಾತ್ಮಕಂ ಉಕ್ತಂ ಕಿಮು ಸತ್ಯಂ ವಾ ಅಸತ್ಯಂ ವಾ । ಜಾತು ಇತಿ ಶಂಕಾ ನ ಕರ್ತವ್ಯಾ'** - ಸರ್ವಜ್ಞದೇವರು ಈ ಸಮಸ್ತ ಜೀವ ಮೊದಲಾದ ಪದಾರ್ಥಗಳ ಸಮೂಹವನ್ನು ಅನೇಕಾಂತಾತ್ಮಕ ಎಂದರೆ ಅನೇಕ ಸ್ವಭಾವಸಹಿತವೆಂದು ಹೇಳಿದ್ದಾರೆ. ಅದೇನು ಸತ್ಯವಿದೆಯೋ ಅಥವಾ ಅಸತ್ಯವಿದೆಯೋ ಎಂಬ ಶಂಕೆಯನ್ನು ಎಂದೂ ಮಾಡಕೂಡದು.

**ಭಾವಾರ್ಥ :-** ಸಂಶಯದ ಹೆಸರು ಶಂಕೆಯಿದೆ. ಜಿನ ಪ್ರಣೀತವಾದ ಪದಾರ್ಥಗಳಲ್ಲಿ ಸಂದೇಹ ಮಾಡದಿರುವುದನ್ನು ನಿಃಶಂಕಿತ★೨ ನಾಮದ ಅಂಗವೆಂದು ಹೇಳುತ್ತಾರೆ : (ಏಕೆಂದರೆ ಜಿನೇಂದ್ರ ಭಗವಂತರು ಅನ್ಯಥಾ ವಾದಿಗಳಿರುವುದಿಲ್ಲ.)

## ೨. ನಿಃಕಾಂಕ್ಷಿತ★೩ ಅಂಗ

**ಇಹ ಜನ್ಮನಿ ವಿಭವಾದೀನ್ಯಮುತ್ರ ಚಕ್ರಿತ್ವಕೇಶವತ್ವಾದೀನ್।**
**ಏಕಾಂತವಾದದೂಷಿತ ಪರಸಮಯಾನಪಿ ಚ ನಾಕಾಂಕ್ಷೇತ್ ॥೨೪॥**

**ಅನ್ವಯಾರ್ಥ :-** **[ಇಹ ಜನ್ಮನಿ]** ಈ ಲೋಕದಲ್ಲಿ **[ವಿಭವಾದೀನಿ]** ಐಶ್ವರ್ಯ, ಸಂಪತ್ತು ಮೊದಲಾದು

---

★೧ ಶೀಲ ಎಂದರೆ ಶುಭಭಾವರೂಪದ ವ್ಯವಹಾರ ಬ್ರಹ್ಮಚರ್ಯ.

★೨ ತತ್ತ್ವವು ಇದೇ ಇದೆ ಹೀಗೆಯೇ ಇದೆ ಬೇರೆಯಿಲ್ಲ ಅಥವಾ ಬೇರೆ ರೀತಿಯಿಂದ ಇಲ್ಲ. ಇಂಥ ನಿಷ್ಕಂಪಕತ್ತಿಯ ತೀಕ್ಷ್ಣಧಾರೆಯ ಸಮಾನವಾಗಿರುವ ಸನ್ಮಾರ್ಗದಲ್ಲಿ ಸಂಶಯ ರಹಿತವಾದ ರುಚಿ-ವಿಶ್ವಾಸವನ್ನು ನಿಃಶಂಕಿತ ಅಂಗವೆಂದು ಹೇಳುತ್ತಾರೆ. - ಸ್ವಾಮಿ ಸಮಂತಭದ್ರಾಚಾರ್ಯವಿರಚಿತ ರತ್ನಕರಂಡ ಶ್ರಾವಕಾಚಾರ ಗಾಥೆ - ೧೧.

★೩ ನಿಃಕಾಂಕ್ಷೆ (ವಿಷಯಗಳ ಮತ್ತು ವಿಷಯದ ಸಾಧನೆಗಳ ಅಭಿಲಾಷೆಯನ್ನು -ಆಸೆಯನ್ನು ಕಾಂಕ್ಷೆಯೆಂದು ಹೇಳುತ್ತಾರೆ) ಎಂದರೆ ಕರ್ಮದವಶವಾಗಿ ಕೊನೆಯುಳ್ಳ ಉದಯದಲ್ಲಿ ದುಃಖಮಿಶ್ರಿತ ಮತ್ತು ಪಾಪದ ಬೀಜರೂಪವಾದ ಸುಖದಲ್ಲಿ ಅನಿತ್ಯತೆಯ ಶ್ರದ್ಧೆಯಾಗುವುದು ಅದು ನಿಃಕಾಂಕ್ಷಿತ ಅಂಗವಿದೆ. ರತ್ನಕರಂಡ ಶ್ರಾವಕಾಚಾರ ಗಾಥೆ - ೧೨.

ವನ್ನು **[ಅಮುತ್ರ]** ಪರಲೋಕದಲ್ಲಿ **[ಚಕ್ರಿತ್ವಕೇಶವಾದೀನ್]** ಚಕ್ರವರ್ತಿ, ನಾರಾಯಣ ಮೊದಲಾದ ಪದಗಳನ್ನು **[ಚ]** ಮತ್ತು **[ಏಕಾಂತವಾದದೂಷಿತ ಪರಸಮಯಾನ್]** ಏಕಾಂತವಾದದಿಂದ ದೂಷಿತವಿರುವ ಅನ್ಯ ಧರ್ಮಗಳನ್ನು **[ಅಪಿ]** ಕೂಡ **[ನ ಆಕಾಂಕ್ಷೇತ್]** ಇಚ್ಛಿಸುವುದಿಲ್ಲ.

**ಟೀಕೆ :- 'ಇಹ ಜನ್ಮನಿ ವಿಭವಾದೀನಿ ನ ಆಕಾಂಕ್ಷೇತ್'**-ಸಮ್ಯಕ್‌ದೃಷ್ಟಿಯು ಈ ಲೋಕದಲ್ಲಂತೂ ಸಂಪತ್ತು ಇತ್ಯಾದಿಗಳನ್ನು ಹಾಗೂ ಪುತ್ರಾದಿಕರನ್ನು ಇಚ್ಛಿಸುವುದಿಲ್ಲ. **'ಚ ಅಮುತ್ರ ಚಕ್ರಿತ್ವ ಕೇಶವತ್ವಾದೀನ್ ನ ಆಕಾಂಕ್ಷೇತ್'** - ಮತ್ತು ಪರಲೋಕದಲ್ಲಿ ಚಕ್ರವರ್ತಿ ಪದ, ನಾರಾಯಣ ಪದ ಮತ್ತು ಆದಿ ಶಬ್ದದಿಂದ ಇಂದ್ರ ಮೊದಲಾದ ಪದಗಳನ್ನೂ ಬಯಸುವುದಿಲ್ಲ. **'ಏಕಾಂತವಾದದೂಷಿತ ಪರಸಮಯಾನ್ ಅಪಿ ನ ಆಕಾಂಕ್ಷೇತ್'** ವಸ್ತುವಿನ ಏಕಾಂತ ಸ್ವರೂಪವನ್ನು ಕಥನ ಮಾಡುವುದರ ಕಾರಣವಾಗಿ ದೂಷಿತವಿರುವಂಥ ಅನ್ಯ ಮತಗಳನ್ನು ಕೂಡ ಅಪೇಕ್ಷಿಸುವುದಿಲ್ಲ.

**ಭಾವಾರ್ಥ :-** ಇಚ್ಛಾ ರಹಿತವಾಗಿರುವುದರ ಹೆಸರು ನಿಃಕಾಂಕ್ಷಿತವಿದೆ. ಏಕೆಂದರೆ ಈ ಲೋಕದ ಸಂಬಂಧವಾಗಿರುವ ಮತ್ತು ಪರಲೋಕದ ಸಂಬಂಧವಾಗಿರುವ ಪುಣ್ಯದ ಫಲವನ್ನು ಅಪೇಕ್ಷಿಸದಿರುವುದರಿಂದ ಸಮ್ಯಕ್‌ದೃಷ್ಟಿಯು ಪುಣ್ಯದ ಫಲರೂಪವಾದ ಇಂದ್ರಿಯ ವಿಷಯಗಳು ಆಕುಲತೆಯ ನಿಮಿತ್ತವಾಗಿರುವುದರಿಂದ ಅವನ್ನು ದುಃಖರೂಪವೆಂದೇ ಮನ್ನಿಸುತ್ತಾನೆ. ಮತ್ತು ಅನ್ಯಮತಿಗಳು ನಾನಾ ಪ್ರಕಾರದ ಏಕಾಂತರೂಪವಾದ ಕಲ್ಪನೆ ಮಾಡುತ್ತಾರೆ. ಅವನ್ನು ಒಳ್ಳೆಯವೆಂದು ತಿಳಿದುಕೊಂಡು ಅವುಗಳ ಇಚ್ಛೆ ಮಾಡುವುದಿಲ್ಲ.

## ೩. ನಿರ್ವಿಚಿಕಿತ್ಸಾ*೧ ಅಂಗ

**ಕ್ಷುತ್ತೃಷ್ಣಾಶೀತೋಷ್ಣಪ್ರಭೃತಿಷು ನಾನಾವಿಧೇಷು ಭಾವೇಷು ।**
**ದ್ರವ್ಯೇಷು ಪುರೀಷಾದಿಷು ವಿಚಿಕಿತ್ಸಾ ನೈವ ಕರಣೀಯಾ ॥೨೫॥**

**ಅನ್ವಯಾರ್ಥ :- [ಕ್ಷುತ್ತೃಷ್ಣಾ ಶೀತೋಷ್ಣಪ್ರಭೃತಿಷು]** ಹಸಿವೆ, ಬಾಯಾರಿಕೆ, ಶೀತ, ಉಷ್ಣ ಇತ್ಯಾದಿ **[ನಾನಾವಿಧೇಷು]** ನಾನಾ ಪ್ರಕಾರದ **[ಭಾವೇಷು]** ಭಾವಗಳಲ್ಲಿ ಮತ್ತು **[ಪುರೀಷಾದಿಷು]** ವಿಷ್ಟಾ ಮೊದಲಾದ **[ದ್ರವ್ಯೇಷು]** ಪದಾರ್ಥಗಳಲ್ಲಿ **[ವಿಚಿಕಿತ್ಸಾ]** ಗ್ಲಾನಿಯನ್ನು **[ನೈವ ಕರಣೀಯಾ]** ಮಾಡಬಾರದು.

**ಟೀಕೆ :- 'ಕ್ಷುತ್ತೃಷ್ಣಾಶೀತೋಷ್ಣಪ್ರಭೃತಿಷು ನಾನಾ ವಿಧೇಷು ಭಾವೇಷು ದ್ರವ್ಯೇಷು ಪುರೀಷಾದಿಷು ವಿಚಿಕಿತ್ಸಾ ನೈವ ಕರಣೀಯಾ'** - ಹಸಿವೆ, ಬಾಯಾರಿಕೆ, ಶೀತ, ಉಷ್ಣ ಇತ್ಯಾದಿ ನಾನಾ ಪ್ರಕಾರದ ದುಃಖದಾಯಕವಾದ ಪರ್ಯಾಯಗಳಲ್ಲಿ ಹಾಗೂ ಅಪವಿತ್ರವಾದ ವಿಷ್ಟಾ ಮೊದಲಾದ ಪದಾರ್ಥಗಳಲ್ಲಿ ಗ್ಲಾನಿಯನ್ನು ಮಾಡಬಾರದು.

**ಭಾವಾರ್ಥ :-** ಅಸುಂದರತೆಯ ಅಥವಾ ಗ್ಲಾನಿಯ ಹೆಸರು ವಿಚಿತ್ಸೆಯಿದೆ. ಅವುಗಳಿಂದ ರಹಿತವಾಗಿರುವುದನ್ನು ನಿರ್ವಿಚಿಕಿತ್ಸೆಯೆಂದು ಹೇಳುತ್ತಾರೆ. ಪಾಪದ ಉದಯದಿಂದ ದುಃಖದಾಯಕವಿರುವ ಭಾವಗಳ ಸಂಯೋಗವಾದಾಗ ಉದ್ವೇಗರೂಪವಾಗಬಾರದು, ಏಕೆಂದರೆ ಉದಯಾಧೀನವಿರುವ ಕಾರ್ಯವು ತಮ್ಮ ಆಧೀನವಾಗಿಲ್ಲ. ಈ ದುಃಖದಿಂದ

---

*೧ ನಿರ್ವಿಚಿಕಿತ್ಸಾ ಅಂಗ - ರತ್ನತ್ರಯ ಎಂದರೆ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರದಿಂದ ಪವಿತ್ರ ಆದರೆ ಸ್ವಾಭಾವಿಕವಾಗಿ ಅಪವಿತ್ರವಿರುವ ಶರೀರದಲ್ಲಿ (ಮುನಿ-ಧರ್ಮಾತ್ಮರ ಮಲಿನ ಶರೀರದಲ್ಲಿ) ಗ್ಲಾನಿ ಮಾಡದೆ ಅವರ ಗುಣಗಳಲ್ಲಿ ಪ್ರೀತಿ ಮಾಡುವುದನ್ನು ನಿರ್ಜುಗುಪ್ಸೆ ಅಂಗವೆಂದು ಹೇಳಲಾಗುತ್ತದೆ. - ರತ್ನಕರಂಡಕ ಶ್ರಾವಕಾಚಾರ ಗಾಥೆ-೧೩.

ಅಮೂರ್ತಿಕ ಆತ್ಮನ ಘಾತವೂ ಆಗುವುದಿಲ್ಲ. ಮತ್ತು ವಿಷ್ಟಾ ಮೊದಲಾದ ನಿಂದ್ಯ ವಸ್ತುಗಳಲ್ಲಿ ಗ್ಲಾನಿರೂಪವಾಗಬಾರದು. ಏಕೆಂದರೆ ವಸ್ತುವಿನ ಸ್ವಭಾವವೇ ಹೀಗೆ ಇದೆ. ಅದರಲ್ಲಿ ಆತ್ಮನದು ಏನಿದೆ ? ಅಥವಾ ಯಾವ ಶರೀರದಲ್ಲಿ ಆತ್ಮನು ವಾಸಮಾಡುತ್ತಾನೆ ಅದರಲ್ಲಂತೂ ಸಮಸ್ತ ವಸ್ತುಗಳು ಅತ್ಯಂತ ನಿಂದ್ಯವಾಗಿಯೇ ಇವೆ.

## ೪. ಅಮೂಢದೃಷ್ಟಿ[೧] ಅಂಗ

**ಲೋಕೇ ಶಾಸ್ತ್ರಾಭಾಸೇ ಸಮಯಾಭಾಸೇ[೨] ಚ ದೇವತಾಭಾಸೇ ।**
**ನಿತ್ಯಮಪಿ ತತ್ತ್ವರುಚಿನಾ ಕರ್ತವ್ಯಮಮೂಢದೃಷ್ಟಿತ್ವಮ್ ॥೨೬॥**

**ಅನ್ವಯಾರ್ಥ :-** **[ಲೋಕೇ]** ಲೋಕದೊಳಗೆ **[ಶಾಸ್ತ್ರಾಭಾಸೇ]** ಶಾಸ್ತ್ರಾಭಾಸದಲ್ಲಿ **[ಸಮಯಾಭಾಸೇ]** ಧರ್ಮಾಭಾಸದಲ್ಲಿ **[ಚ]** ಮತ್ತು **[ದೇವತಾಭಾಸೇ]** ದೇವಾಭಾಸದಲ್ಲಿ **[ತತ್ತ್ವರುಚಿನಾ]** ತತ್ತ್ವಗಳಲ್ಲಿ ಅಭಿರುಚಿಯುಳ್ಳ ಸಮ್ಯಕ್‌ದೃಷ್ಟಿ ಪುರುಷನು **[ನಿತ್ಯಮಪಿ]** ಯವಾಗಲೂ **[ಅಮೂಢದೃಷ್ಟಿತ್ವಮ್]** ಮೂಢತೆಯಿಂದ ರಹಿತವಾದ ಶ್ರದ್ಧೆಯನ್ನು **[ಕರ್ತವ್ಯಮ್]** ಮಾಡಬೇಕಾಗುವುದು.

**ಟೀಕೆ :- 'ತತ್ತ್ವರುಚಿನಾ ನಿತ್ಯಂ ಅಪಿ ಅಮೂಢದೃಷ್ಟಿತ್ತ್ವಂ ಕರ್ತವ್ಯಮ್'** - ತತ್ತ್ವಶ್ರದ್ಧೆಯುಳ್ಳ ಪುರುಷನು ಯಾವಾಗಲೂ ಅಮೂಢದೃಷ್ಟಿಯುಳ್ಳವನಾಗಬೇಕು. ಯಥಾರ್ಥ ಜ್ಞಾನರಹಿತವಾಗಿರುವುದರ ಹೆಸರು ಮೂಢ ದೃಷ್ಟಿಯಿದೆ. ಆ ರೂಪ ಶ್ರದ್ಧೆಯುಳ್ಳವನಾಗುವುದು ಯೋಗ್ಯವಿಲ್ಲ. ಎಲ್ಲೆಲ್ಲಿ ಯೋಗ್ಯವಿಲ್ಲವೆಂಬುದನ್ನು ಹೇಳುತ್ತಾರೆ.

**ಲೋಕೇ** - ಲೋಕದಲ್ಲಿ ಬಹಳಷ್ಟು ಜೀವರುಗಳು ವಿಪರೀತ ಭಾವದಿಂದ ಪ್ರವರ್ತನೆ ಮಾಡುತ್ತಿದ್ದರು ಕೂಡ ತಾನು ಅವರ ಹಾಗೆ ಅನುಕರಣ ಮಾಡಿ ಪ್ರವರ್ತನೆ ಮಾಡಬಾರದು.

**ಶಾಸ್ತ್ರಾಭಾಸೇ** - ಶಾಸ್ತ್ರದಂತೆ ಪ್ರತಿಭಾಸಿತವಾಗುವಂಥ ಅನ್ಯವಾದಿಗಳ ಮೂಲಕ ರಚಿಸಲಾದ ಗ್ರಂಥಗಳಲ್ಲಿ ಅಭಿರುಚಿಪೂರ್ವಕವಾಗಿ ಪ್ರವರ್ತನೆ ಮಾಡಬಾರದು.

**ಸಮಯಾಭಾಸೇ** - ಸತ್ಯಮತದ ಹಾಗಯೇ ಪ್ರತಿಭಾಸಿತವಾಗುವ ಅನ್ಯಮತದಲ್ಲಿ ಯಾವುದಾದರೊಂದು ಕ್ರಿಯೆಯು ಒಳ್ಳೆಯದಿರುವಂತೆ ತಿಳಿದು ಬಂದರೂ ಕೂಡ ಅದನ್ನು ಒಳ್ಳೆಯದೆಂದು ತಿಳಿದುಕೊಂಡು ಪ್ರವರ್ತನೆ ಮಾಡಬಾರದು. ಅಥವಾ ಸಮಯ ಎಂದರೆ ಪದಾರ್ಥಗಳು ಸದೃಶವಾಗಿ ಪ್ರತಿಭಾಸವಾಗುವಂಥ ಅನ್ಯವಾದಿಗಳ ಮೂಲಕ ಹೇಳಲಾದ ಕಾಲ್ಪನಿಕ ತತ್ತ್ವಗಳು ಯುಕ್ತಿಯುಕ್ತದಂತೆ ಭಾಸವಾದರು ಕೂಡ ಅದರಲ್ಲಿ ಸತ್ಯಬುದ್ಧಿಯನ್ನು ಮಾಡಬಾರದು.

**ದೇವತಾಭಾಸೇ** - ಒಂದು ವೇಳೆ ದೇವರಂತೆ ಪ್ರತಿಭಾಸಿತವಾದರೂ ಕೂಡ ಅರಹಂತ ದೇವರನ್ನು ಹೊರತುಪಡಿಸಿ ಅನ್ಯ ದೇವರಲ್ಲಿ ಯಾವುದಾದರೂ ಒಂದಿಷ್ಟು ಚಮತ್ಕಾರಾದಿಗಳನ್ನು ನೋಡಿ ವಿನಯ ರೂಪವಾಗಿ ಪ್ರವರ್ತನೆ ಮಾಡಬಾರದು. 'ಚ' ಕಾರದಿಂದ ಇತರರು ಕೂಡ ಗುರುಗಳಂತೆ ಪ್ರತಿಭಾಸಿತವಾಗುವಂಥ ವಿಷಯ-ಕಷಾಯಗಳಿಂದ

---

೧. **ಅಮೂಢತ್ವ** - ದುಃಖದಾಯಕವಾದ ಅಸತ್ಯ ಮಾರ್ಗ ಅಥವಾ ಕುತ್ಸಿತ ಧರ್ಮಗಳಲ್ಲಿ ಮತ್ತು ಕುಮಾರ್ಗಗಳಲ್ಲಿ ಇರುವಂಥ ಪುರುಷರಲ್ಲಿ (ಬೇಕಾದರೆ ಅವರು ಲೌಕಿಕದಲ್ಲಿ ಪ್ರಖ್ಯಾತರಾಗಿದ್ದರೂ) ಅವರಲ್ಲಿ ಮನಸ್ಸಿನಿಂದ ಕೂಡ ಪ್ರಾಮಾಣಿಕತೆಯನ್ನು ಮನ್ನಿಸದಿರುವುದು - ಕಾಯದಿಂದ ಪ್ರಶಂಸೆ ಮಾಡದಿರುವುದನ್ನು ಮತ್ತು ವಚನದಿಂದ ಸ್ತುತಿಮಾಡದಿರುವುದನ್ನು ಅಮೂಢ ದೃಷ್ಟಿಯೆಂದು ಹೇಳುತ್ತಾರೆ.

- ರತ್ನಕರಂಡ ಶ್ರಾವಕಾಚಾರ ಗಾಥೆ - ೧೪.

೨. **ಸಮಯಾಭಾಸ** - ಯಥಾರ್ಥದಲ್ಲಿ ಯಾವ ಪದಾರ್ಥವು ತತ್ತ್ವಾರ್ಥವಿಲ್ಲ, ಆದರೆ ಭ್ರಾಂತ ಬುದ್ಧಿಯಿಂದ ಹಾಗೆ ತತ್ತ್ವಾರ್ಥರೂಪವಾಗಿ ಕಂಡು ಬರತೊಡಗಿದರೆ ಎಂದರೆ ಮಿಥ್ಯಾದೃಷ್ಟಿಗಳು ರಚಿಸಿದ ಶಾಸ್ತ್ರಗಳು ಯಥಾರ್ಥದಲ್ಲಂತೂ ಶಾಸ್ತ್ರಗಳಿಲ್ಲ, ಆದರೆ ಭ್ರಾಂತಿಯಿಂದ ಶಾಸ್ತ್ರಗಳಂತೆ ಭಾಸವಾದರೆ ಅದು ಶಾಸ್ತ್ರಾಭಾಸವಿದೆ. ಸಮಯಭಾಸವಿದೆ.

ಯುಕ್ತ ವ್ಯಭಿಚಾರೀ ವೇಷಧಾರಿಗಳ ಕುರಿತು ವಿನಯರೂಪವಾಗಿ ಪ್ರವರ್ತನೆ ಮಾಡಬಾರದು. ಈ ಪ್ರಕಾರ ಯಥಾರ್ಥ ಜ್ಞಾನದಿಂದ ಭ್ರಷ್ಟಮಾಡಿ ಬಿಡುವಂಥ ಕಾರಣಗಳಿಂದ ಪೂರ್ಣರೂಪವಾಗಿ ಸಾವಧಾನರಾಗಿರಬೇಕಾಗುವುದು.

## ೫. ಉಪಗೂಹನ★೧ ಅಂಗ

**ಧರ್ಮೋಽಭಿವರ್ದ್ಧನೀಯಃ ಸದಾತ್ಮನೋ ಮಾರ್ದವಾದಿಭಾವನಯಾ ।**
**ಪರದೋಷನಿಗೂಹನಮಪಿ ವಿಧೇಯಮುಪಬೃಂಹಣಗುಣಾರ್ಥಮ್ ॥೨೭॥**

**ಅನ್ವಯಾರ್ಥ ಃ- [ಉಪಬೃಂಹಣಗುಣಾರ್ಥಂ]** ಉಪಬೃಂಹಣವೆಂಬ ಹೆಸರಿನ ಗುಣದ ಸಲುವಾಗಿ **(ಮಾರ್ದವಾದಿಭಾವನಯಾ]** ಮಾರ್ದವ, ಕ್ಷಮೆ, ಸಂತೋಷ ಮೊದಲಾದ ಭಾವನೆಗಳಿಂದ **[ಸದಾ]** ನಿರಂತರವಾಗಿ **[ಆತ್ಮನೋ ಧರ್ಮಃ]** ತನ್ನ ಆತ್ಮನ ಧರ್ಮದ ಎಂದರೆ ಶುದ್ಧ ಸ್ವಭಾವದ **[ಅಭಿವರ್ದ್ಧನೀಯಃ]** ವೃದ್ಧಿಮಾಡಿಕೊಳ್ಳಬೇಕಾಗುವುದು ಮತ್ತು **[ಪರದೋಷನಿಗೂಹನಮಪಿ ವಿಧೇಯಮ್]** ಇತರರ ದೋಷಗಳನ್ನು ಕೂಡ ಗುಪ್ತವಾಗಿ ಇಡಬೇಕಾಗುವುದು. (ಇದು ಕೂಡ ಕರ್ತವ್ಯವಿದೆ).

**ಟೀಕೆ ಃ- 'ಉಪಬೃಂಹಣಂ ಗುಣಾರ್ಥಂ ಮಾರ್ದವಾದಿ ಭಾವನಯಾ ಸದಾಆತ್ಮನಃ ಧರ್ಮಃ ಅಭಿವರ್ಧನೀಯಃ !'** ಉಪಬೃಂಹಣನಾಮದ ಗುಣದ ಸಲುವಾಗಿ ಮಾರ್ದವ ಎಂದರೆ ಕೋಮಲ ಪರಿಣಾಮ ಮತ್ತು ಆದಿ ಶಬ್ದದಿಂದ ಕ್ಷಮೆ, ಸಂತೋಷ ಮೊದಲಾದ ಭಾವನೆಯಿಂದ ಯಾವಾಗಲೂ ತಮ್ಮ ಆತ್ಮನ ನಿಜ ಸ್ವಭಾವವನ್ನು ಪ್ರಕಟರೂಪದಿಂದ ವೃದ್ಧಿಸಿಕೊಳ್ಳಬೇಕು. **'ಪರದೋಷನಿಗೂಹನಮಪಿ ವಿಧೇಯಮ್'** ಅನ್ಯ ಜೀವರುಗಳಲ್ಲಿ ಯಾವುದಾದರೂ ನಿಂದಾಯೋಗ್ಯವಾದ ದೋಷವಿದ್ದರೆ ಅದನ್ನು ಪ್ರಕಟ ಮಾಡದೆ ಗುಪ್ತವಾಗಿ ಇಡುವುದೇ ಉಚಿತವಿದೆ.

**ಭಾವಾರ್ಥ ಃ-** ಉಪಬೃಂಹಣದ ಅರ್ಥವು ವೃದ್ಧಿಸುವುದಿರುವುದರಿಂದ ತಮ್ಮ ಆತ್ಮನ ಧರ್ಮವನ್ನು ಹೆಚ್ಚಿಸಬೇಕು. ಮತ್ತು ಈ ಅಂಗದ ಅಪರನಾಮವು ಉಪಗೂಹನವೆಂದೂ ಇದೆ. ಈ ಅಪೇಕ್ಷೆಯಿಂದ ಇತರರ ದೋಷಗಳನ್ನು ಬಚ್ಚಿಡುವುದು ಯೋಗ್ಯವಿದೆ. ಏಕೆಂದರೆ ಅದನ್ನು ಪ್ರಕಟಮಾಡುವುದರಿಂದ ಅವರಿಗೆ ದುಃಖವು ಉತ್ಪನ್ನವಾಗುತ್ತದೆ.

## ೬. ಸ್ಥಿತಿಕರಣ★೨ ಅಂಗ

**ಕಾಮಕ್ರೋಧ ಮದಾದಿಷು ಚಲಯಿತುಮುದಿತೇಷು ವರ್ತ್ಮನೋ ನ್ಯಾಯಾತ್ ।**
**ಶ್ರುತಮಾತ್ಮ ನಃ ಪರಸ್ಯ ಚ ಯುಕ್ತ್ಯಾ ಸ್ಥಿತಿಕರಣಮಪಿ ಕಾರ್ಯಮ್ ॥೨೮॥**

**ಅನ್ವಯಾರ್ಥ ಃ- [ಕಾಮಕ್ರೋಧಮದಾದಿಷು]** ಕಾಮ, ಕ್ರೋಧ, ಮದ, ಲೋಭ ಮೊದಲಾದ ವಿಕಾರವು **[ನ್ಯಾಯಾತ್ ವರ್ತ್ಮನಃ]** ನ್ಯಾಯ ಮಾರ್ಗದಿಂದ ಎಂದರೆ ಧರ್ಮಮಾರ್ಗದಿಂದ **[ಚಲಯಿತುವ್]** ವಿಚಲಿತ

---

★೧ ಉಪಗೂಹನತ್ವ - ಮೋಕ್ಷ ಮಾರ್ಗವಂತೂ ಸ್ವಯಂ ಶುದ್ಧವೇ ಇದೆ. ಅಶಕ್ತ ಹಾಗೂ ಅಜ್ಞಾನೀ ಜೀವರುಗಳ ಆಶ್ರಯದಿಂದ ಉತ್ಪನ್ನವಾಗುವ ಅದರ ನಿಂದೆಯನ್ನು ದೂರ ಮಾಡುವುದನ್ನು ಉಪಗೂಹನವೆಂದು ಹೇಳುತ್ತಾರೆ. ಇನ್ನು ಸ್ವಸನ್ಮುಖತೆಯ ಬಲದಿಂದ ಶುದ್ಧಿಯ ವೃದ್ಧಿ ಮಾಡುವುದನ್ನು ಉಪಬೃಂಹಣ ಅಂಗವೆಂದು ಹೇಳುತ್ತಾರೆ. - ರತ್ನಕರಂಡ ಶ್ರಾವಕಾಚಾರ ಗಾಥೆ - ೧೫.

★೧ **ಸ್ಥಿತಿಕರಣತ್ವ ಃ** ಸಮ್ಯಗ್ದರ್ಶನ ಮತ್ತು ಸಮ್ಯಕ್ಚಾರಿತ್ರದಿಂದ ಚಂಚಲವಾದ ಮೇಲೆ ಧರ್ಮವತ್ಸಲ ವಿದ್ವಾಂಸರುಗಳ ಮೂಲಕ ಜೀವರುಗಳನ್ನು ಸ್ಥಿರೀಭೂತ ಮಾಡುವುದಕ್ಕೆ ಸ್ಥಿತಿಕರಣ ಅಂಗವೆಂದು ಹೇಳುತ್ತಾರೆ. - ರತ್ನಕರಂಡ ಶ್ರಾವಕಾಚಾರ ಗಾಥೆ - ೧೬.

ಮಾಡಿಸುವ ಸಲುವಾಗಿ **[ಉದಿಶೇಷು)** ಪ್ರಕಟವಾಗಿದ್ದರೆ ಆಗ **[ಶ್ರುತಂ]** ಶಾಸ್ತ್ರದ ಅನುಸಾರ **[ಆತ್ಮನಃ ಪರಸ್ಯ ಚ]** ತನ್ನ ಮತ್ತು ಇತರರ **[ಸ್ಥಿತಿಕರಣಂ]** ಸ್ಥಿರತೆಯನ್ನು **[ಅಪಿ]** ಕೂಡ **[ಕಾರ್ಯಮ್]** ಮಾಡಬೇಕಾಗುವುದು.

**ಟೀಕೆ ಃ 'ಕಾಮಕ್ರೋಧಮದಾದಿಷು ನ್ಯಾಯಾತ್ ವರ್ತ್ಮನಃ ಚಲಯಿತುಂ ಉದಿತೇಷು ಆತ್ಮನಃ ಪರಸ್ಯ ಚ ಶ್ರುತಂ ಯುಕ್ತ್ಯಾ ಸ್ಥಿತಿಕರಣಂ ಅಪಿ ಕಾರ್ಯಮ್ !'** - ಮೈಥುನದ ಭಾವ, ಕ್ರೋಧದ ಭಾವ, ಮಾನದ ಭಾವ ಮತ್ತು ಆದಿ ಶಬ್ದದಿಂದ ಲೋಭಾದಿಗಳ ಭಾವವು ನ್ಯಾಯರೂಪವಾದ ಧರ್ಮಮಾರ್ಗದಿಂದ ಭ್ರಷ್ಟ ಮಾಡಿ ಬಿಡುವಂಥದ್ದಿದೆ. ಆದುದರಿಂದ ಅವುಗಳ ಪ್ರಕಟತೆಯಾದ ಮೇಲೆ ತನ್ನನ್ನು ಮತ್ತು ಇತರ ಜೀವರುಗಳನ್ನು ಶಾಸ್ತ್ರಾನುಸಾರವಾಗಿ ಯುಕ್ತಿಯಿಂದ ಧರ್ಮದಲ್ಲಿ ಸ್ಥಿರ ಮಾಡುವುದು ಅದು ಕೂಡ ಶ್ರದ್ಧೆಯುಳ್ಳ ಪುರುಷರು ಮಾಡುವುದು ಯೋಗ್ಯವಿದೆ.

**ಭಾವಾರ್ಥ ಃ-** ಧರ್ಮದಿಂದ ಭ್ರಷ್ಟರಾದವರನ್ನು ಪುನ ಧರ್ಮದಲ್ಲಿ ಸ್ಥಾಪನೆ ಮಾಡುವುದು ಅದು ಸ್ಥಿತಿಕರಣವಿದೆ. ಮತ್ತು ಧರ್ಮದಿಂದ ಭ್ರಷ್ಟವಾಗುವುದು ಅದು ಕಾಮ-ಕ್ರೋಧಾದಿಗಳ ವಶೀಭೂತವಾಗುವುದರಿಂದ ಆಗುತ್ತದೆ. ಆದುದರಿಂದ ಇವುಗಳ ನಿಮಿತ್ತದಿಂದ ತಮ್ಮ ಪರಿಣಾಮವು ಭ್ರಷ್ಟವಾಗಿದ್ದರೆ ತಾವು ಸ್ವಯಂ ಯುಕ್ತಿಪೂರ್ವಕವಾಗಿ ಧರ್ಮದಲ್ಲಿ ಸ್ಥಿರವಾಗಬೇಕಾಗುವುದು, ಮತ್ತು ಅನ್ಯ ಜೀವರುಗಳು ಭ್ರಷ್ಟವಾಗಿದ್ದರೆ ಅವರನ್ನು ಕೂಡ ಹೇಗೆ ಸಾಧ್ಯವೋ ಹಾಗೆ ಧರ್ಮದಲ್ಲಿ ದೃಢಪಡಿಸಬೇಕಾಗುವುದು.

## ೭. ವಾತ್ಸಲ್ಯ★೧ ಅಂಗ

**ಅನವರತಮಹಿಂಸಾಯಾಂ ಶಿವಸುಖಲಕ್ಷ್ಮೀನಿಬಂಧನೇ ಧರ್ಮೇ।**
**ಸರ್ವೇಷ್ವಪಿ ಚ ಸಧರ್ಮಿಷು ಪರಮಂ ವಾತ್ಸಲ್ಯಮಾಲಂಬ್ಯಮ್ ॥೨೯॥**

**ಅನ್ವಯಾರ್ಥ ಃ- [ಶಿವಸುಖಲಕ್ಷ್ಮೀನಿಬಂಧನೇ]** ಮೋಕ್ಷ ಸುಖರೂಪವಾದ ಸಂಪತ್ತಿಗೆ ಕಾರಣಭೂತವಿರುವ **[ಧರ್ಮೇ]** ಧರ್ಮದಲ್ಲಿ **[ಅಹಿಂಸಾಯಾಂ]** ಅಹಿಂಸೆಯಲ್ಲಿ **[ಚ]** ಮತ್ತು **[ಸರ್ವೇಷ್ವಪಿ]** ಸಮಸ್ತ **[ಸಧರ್ಮಿಷು]** ಸಾಧರ್ಮೀ ಜನರಲ್ಲಿ **[ಅನವರತಂ]** ಯಾವಾಗಲೂ **[ಪರಮಂ]** ಉತ್ಕೃಷ್ಟವಾದ **[ವಾತ್ಸಲ್ಯಂ]** ವಾತ್ಸಲ್ಯ ಅಥವಾ ಪ್ರೀತಿಯ **[ಆಲಂಬ್ಯಮ್]** ಅವಲಂಬನೆ ಮಾಡಬೇಕಾಗುವುದು.

**ಟೀಕೆ ಃ- 'ಶಿವಸುಖಲಕ್ಷ್ಮೀನಿಬಂಧನೇ ಅಹಿಂಸಾಯಾಂ ಧರ್ಮೇ ಸರ್ವೇಷ್ವಪಿ ಚ ಸಧರ್ಮಿಷು ಪರಮಂ ವಾತ್ಸಲ್ಯಂ ಅನವರತಂ ಆಲಂಬ್ಯಮ್'** - ಮೋಕ್ಷಸುಖದ ಸಂಪತ್ತಿಗೆ ಕಾರಣಭೂತವಿರುವ ಹಿಂಸಾರಹಿತವಾದ ಜಿನಪ್ರಣೀತ ಧರ್ಮದಲ್ಲಿ ಹಾಗೂ ಆ ಧರ್ಮದಲ್ಲಿ ಯುಕ್ತವಿರುವ ಸಮಸ್ತ ಸಾಧರ್ಮಿಗಳಲ್ಲಿ ಉತ್ಕೃಷ್ಟವಾದ ವಾತ್ಸಲ್ಯವನ್ನು ನಿರಂತರವಾಗಿ ಇಡಬೇಕಾಗುವುದು.

**ಭಾವಾರ್ಥ ಃ- ಗೋವತ್ಸದಂತಿರುವ ಪ್ರೀತಿಯ ಹೆಸರು ವಾತ್ಸಲ್ಯವಿದೆ.** ಹೇಗೆಂದರೆ ತನ್ನ ಕರುವಿನ ಮೇಲಿನ ಪ್ರೀತಿಯಿಂದ ಗೋವುಸಿಂಹದ ಸನ್ಮುಖ ಹೋಗುತ್ತದೆ ಮತ್ತು ಸಿಂಹವು ನನ್ನನ್ನು ತಿಂದು ಹಾಕಿ ನನ್ನ ಕರುವಿನ ರಕ್ಷಣೆಯಾದರೆ ಅತ್ಯುತ್ತಮವಿದೆಯೆಂದು ಮನಸ್ಸಿನಲ್ಲಿ ವಿಚಾರ ಮಾಡುತ್ತದೆ. ಇಂಥ ಪ್ರೀತಿಯು ಧರ್ಮ ಮತ್ತು ಧರ್ಮಾತ್ಮರುಗಳ ಕುರಿತು ಇರಬೇಕಾಗುವುದು. ತನು, ಮನ, ಧನ ಸರ್ವಸ್ವವನ್ನು ಖರ್ಚು ಮಾಡಿ ತಮ್ಮ ಪ್ರೀತಿಯನ್ನು ಪಾಲಿಸಬೇಕಾಗುವುದು.

---

★೧ **ವಾತ್ಸಲ್ಯ** - ಕಪಟ ರಹಿತ ಶುದ್ಧ ಭಾವದಿಂದ ತಮ್ಮ ಜತೆಯಲ್ಲಿರುವ ಧರ್ಮಾತ್ಮ ಜೀವರುಗಳ ಕುರಿತು ಯಥಾಯೋಗ್ಯ ಸತ್ಕಾರ ಮಾಡುವಂಥದನ್ನು ವಾತ್ಸಲ್ಯ ಅಂಗವೆಂದು ಹೇಳುತ್ತಾರೆ, - ರತ್ನಕರಂಡ ಶ್ರಾವಕಾಚಾರ ಗಾಥೆ - ೧೭.

## ೮. ಪ್ರಭಾವನಾ★ ಅಂಗ

**ಆತ್ಮಾ ಪ್ರಭಾವನೀಯೋ ರತ್ನತ್ರಯತೇಜಸಾ ಸತತಮೇವ ।**
**ದಾನ ತಪೋಜಿನಪೂಜಾವಿದ್ಯಾತಿಶಯೈಶ್ಚ ಜಿನಧರ್ಮಃ ॥೩೦॥**

**ಅನ್ವಯಾರ್ಥ ಃ- [ಸತತಮೇವ]** ನಿರಂತರವಾಗಿ **[ರತ್ನತ್ರಯ ತೇಜಸಾ]** ರತ್ನತ್ರಯದ ತೇಜದಿಂದ **[ಆತ್ಮಾ]** ತನ್ನ ಆತ್ಮನನ್ನು **[ಪ್ರಭಾವನೀಯಃ]** ಪ್ರಭಾವನಾಯುಕ್ತನನ್ನಾಗಿ ಮಾಡಬೇಕಾಗುವುದು. **[ಚ]** ಮತ್ತು **[ದಾನತಪೋಜಿನಪೂಜಾವಿದ್ಯಾತಿಶಯೈಃ]** ದಾನ, ತಪ, ಜಿನಪೂಜನೆ ಹಾಗೂ ವಿದ್ಯೆಯ ಅತಿಶಯತೆಯಿಂದ ಎಂದರೆ ಇವುಗಳ ವೃದ್ಧಿ ಮಾಡಿ **[ಜಿನಧರ್ಮಃ ಪ್ರಭಾವನೀಯಃ]** ಜಿನಧರ್ಮದ ಪ್ರಭಾವನೆಯನ್ನು ಮಾಡಬೇಕಾಗುವುದು.

**ಟೀಕೆ ಃ- 'ರತ್ನತ್ರಯತೇಜಸಾ ಸತತಂ ಏವ ಆತ್ಮಾ ಪ್ರಭಾವನೀಯಃ'** - ರತ್ನತ್ರಯದ ತೇಜದಿಂದ ನಿರಂತರವಾಗಿ ತನ್ನ ಆತ್ಮನನ್ನು ಪ್ರಭಾವನೆಯಿಂದ ಸಂಯುಕ್ತನನ್ನಾಗಿ ಮಾಡಬೇಕಾಗುವುದು. ಮತ್ತು **'ದಾನ ತಪೋಜಿನಪೂಜಾವಿದ್ಯಾತಿಶಯೈಃ ಜಿನಧರ್ಮಃ ಪ್ರಭಾವನೀಯಃ** - ದಾನ, ತಪ, ಜಿನಪೂಜೆ, ವಿದ್ಯೆ, ಚಮತ್ಕಾರ ಮೊದಲಾದವುಗಳಿಂದ ಜೈನ ಧರ್ಮದ ಪ್ರಭಾವನೆ ಮಾಡಬೇಕಾಗುವುದು.

**ಭಾವಾರ್ಥ ಃ-** ಆತ್ಯಂತಿಕವಾಗಿ ಪ್ರಕಟಪಡಿಸುವುದು ಅದು ಪ್ರಭಾವನೆಯಿದೆ. ತಮ್ಮ ಆತ್ಮನ ಅತಿಶಯವಂತೂ ರತ್ನತ್ರಯದ ತೇಜಸ್ಸು ವೃದ್ಧಿಸುವುದರಿಂದ ಪ್ರಕಟವಾಗುತ್ತದೆ ಮತ್ತು ಜೈನ ಧರ್ಮದ ಅತ್ಯಂತ ಪ್ರಚುರವಾದ ದಯಾ-ದಾನದಿಂದ ಉಗ್ರ ತಪ ಮಾಡಿ, ಬಹಳಷ್ಟು ಹಣ ಖರ್ಚು ಮಾಡಿ ಭಗವಂತರ ಪೂಜೆ ಮಾಡಿಸಿ, ಶಾಸ್ತ್ರಾಭ್ಯಾಸ ಮಾಡಿ ಹಾಗೂ ನಿರ್ದೋಷ ದೇವಾದಿಕರ ಚಮತ್ಕಾರದಿಂದ ಜೈನ ಧರ್ಮದ ಮಹಿಮೆಯು ಪ್ರಕಟವಾಗುತ್ತದೆ. ಆದುದರಿಂದ ಇಂಥ ಅತಿಶಯವನ್ನು ಪ್ರಕಟ ಮಾಡಬೇಕಾಗುವುದು. ಈ ಪ್ರಕಾರ ಸಮ್ಯಕ್ತ್ವದ ಎಂಟು ಅಂಗಗಳ ವರ್ಣನೆ ಮಾಡಲಾಗಿದೆ. ಈ ಎಂಟು ಅಂಗಗಳು ಕೆಲವು ಸಮ್ಯಕ್‌ದೃಷ್ಟಿಗಳಿಗೆ ಸಂಪೂರ್ಣವಿರುತ್ತವೆ, ಕೆಲವರಿಗೆ ಕಡಿಮೆ ಇರುತ್ತವೆ, ಕೆಲವರಿಗೆ ಗೌಣರೂಪದಿಂದ ಮತ್ತು ಕೆಲವರಿಗೆ ಮುಖ್ಯರೂಪದಿಂದ ಇರುತ್ತವೆ. ಆದರೆ ಈ ಎಂಟೂ ಅಂಗಗಳು ಸಂಪೂರ್ಣವಾಗಿ ಮುಖ್ಯರೂಪದಿಂದ ಪ್ರತ್ಯಕ್ಷ ಪ್ರಕಟ ಪ್ರತಿಭಾಸವಾದಾಗಲೇ ಸಮ್ಯಕ್ತ್ವದ ನಿಜವಾದ ಶೋಭೆಯಾಗುತ್ತದೆ. ಈ ಪ್ರಕಾರ ಸಮ್ಯಕ್ತ್ವದ ಅಂಗೀಕಾರ ಮಾಡಿದ ನಂತರ ಧರ್ಮಾತ್ಮನಾದ ಗೃಹಸ್ಥನು ಏನು ಮಾಡಬೇಕಾಗುವುದೆಂಬುದನ್ನು ಮುಂದೆ ಹೇಳಿವರು.

ಈ ಪ್ರಕಾರ ಶ್ರೀಮದ್ ಅಮೃತಚಂದ್ರಸೂರಿ ವಿರಚಿತ ಪುರುಷಾರ್ಥಸಿದ್ಧಿ ಉಪಾಯ
ಅಪರನಾಮ ಜಿನಪ್ರವಚನರಹಸ್ಯಕೋಶದಲ್ಲಿ ಸಮ್ಯಗ್ದರ್ಶನ ವರ್ಣನೆ
ಯೆಂಬ ಹೆಸರಿನ ಪ್ರಥಮ ಅಧಿಕಾರವು ಸಮಾಪ್ತವಾಯಿತು.

---

★ ಪ್ರಭಾವನೆ : (ಸರ್ವಜ್ಞವೀತರಾಗ ಕಥಿತ ವಿವೇಕದೊಡನೆ) ಹೇಗೆ ಸಾಧ್ಯವಿದೆಯೋ ಹಾಗೆ ಅಜ್ಞಾನಾಂಧಕಾರದ ಪ್ರಸಾರವನ್ನು ದೂರ ಮಾಡಿ ಜಿನಶಾಸನದ ಮಾಹಾತ್ಮ್ಯವನ್ನು ಪ್ರಕಟ ಮಾಡುವುದು ಅದು ಪ್ರಭಾವನೆಯೆಂದು ಕರೆಸಿಕೊಳ್ಳುತ್ತದೆ.

- ರತ್ನಕರಂಡ ಶ್ರಾವಕಾಚಾರ ಗಾಥೆ - ೧೮

## ಸಮ್ಯಗ್ಜ್ಞಾನ ಅಧಿಕಾರ

**ಇತ್ಯಾಶ್ರಿತ ಸಮ್ಯಕ್ತ್ವೈಃ ಸಮ್ಯಗ್ಜ್ಞಾನಂ ನಿರೂಪ್ಯ ಯತ್ನೇನ।**
**ಆಮ್ನಾಯಯುಕ್ತಿಯೋಗೈಃ ಸಮುಪಾಸ್ಯಂ ನಿತ್ಯಮಾತ್ಮ ಹಿತೈಃ ॥೩೧॥**

**ಪೃಥಗಾರಾಧನಮಿಷ್ಟಂ ದರ್ಶನಸಹಭಾವಿನೋಽಪಿ ಬೋಧಸ್ಯ ।**
**ಲಕ್ಷಣಭೇದೇನ ಯತೋ ನಾನಾತ್ವಂ ಸಂಭವತ್ಯನಯೋಃ ॥೩೨॥**

**ಅನ್ವಯಾರ್ಥ :-** **[ಇತಿ]** ಈ ಪ್ರಕಾರ **[ಆಶ್ರಿತಸಮ್ಯಕ್ತ್ವೈಃ]** ಸಮ್ಯಕ್ತ್ವದ ಆಶ್ರಯ ತೆಗೆದುಕೊಂಡಿರುವಂಥ **[ಆತ್ಮಹಿತೈಃ]** ಆತ್ಮಹಿತಕಾರಿಯಾದ ಪುರುಷರು **[ನಿತ್ಯಂ]** ಯಾವಾಗಲೂ **[ಆಮ್ನಾಯಯುಕ್ತಿಯೋಗೈಃ]** ಜಿನಾಗಮದ ಪರಂಪರೆ ಮತ್ತು ಯುಕ್ತಿ ಎಂದರೆ ಪ್ರಮಾಣ-ನಯದ ಅನುಯೋಗದಿಂದ **[ನಿರೂಪ್ಯ]** ವಿಚಾರ ಮಾಡಿ **[ಯತ್ನೇನ]** ಪ್ರಯತ್ನಪೂರ್ವಕವಾಗಿ **[ಸಮ್ಯಗ್ಜ್ಞಾನಂ ಸಮುಪಾಸ್ಯಂ]** ಒಳ್ಳೆಯ ಪ್ರಕಾರದಿಂದ ಸಮ್ಯಗ್ಜ್ಞಾನದ ಸೇವನೆ ಮಾಡುವುದು ಯೋಗ್ಯವಿದೆ. **[ದರ್ಶನಸಹಭಾವಿನೋಽಪಿ]** ಸಮ್ಯಗ್ದರ್ಶನದ ಜತೆಯಲ್ಲಿಯೇ ಉತ್ಪನ್ನವಾಗಿದ್ದರೂ ಕೂಡ **[ಬೋಧಸ್ಯ ಪೃಥಗಾರಾಧನಂ]** ಸಮ್ಯಗ್ಜ್ಞಾನದ ಆರಾಧನೆಯನ್ನು ಬೇರೆಯೇ ಮಾಡುವುದು **[ಇಷ್ಟಂ]** ಕಲ್ಯಾಣಕಾರಿಯಿದೆ **[ಯತಃ]** ಏಕೆಂದರೆ **[ಅನಯೋಃ]** ಇವೆರಡರಲ್ಲಿ ಎಂದರೆ ಸಮ್ಯಗ್ದರ್ಶನ ಮತ್ತು ಸಮ್ಯಗ್ಜ್ಞಾನದಲ್ಲಿ **[ಲಕ್ಷಣಭೇದೇನ]** ಲಕ್ಷಣದ ಭೇದದಿಂದ **[ನಾನಾತ್ವಂ]** ಭಿನ್ನತೆಯು **[ಸಂಭವತಿ]** ಸಂಭವವಿದೆ.

**ಟೀಕೆ :- 'ಇತ್ಯಾಶ್ರಿತ ಸಮ್ಯಕ್ತ್ವೈಃ ಆತ್ಮಹಿತೈಃ ಚ ಯತ್ನೇನ ಸಮ್ಯಗ್ಜ್ಞಾನಂ ಸಮುಪಾಸ್ಯಮ್ ।'**- ಈ ಪ್ರಕಾರ ಸಮ್ಯಕ್ತ್ವದ ಅಂಗೀಕಾರ ಮಾಡಿರುವಂಥವರು ತಮ್ಮ ಆತ್ಮನ ಹಿತ ಮಾಡಿಕೊಳ್ಳುವಂಥ ಧರ್ಮಾತ್ಮ ಜೀವರುಗಳು ಯಾವುದಾದರೂ ಉಚಿತ ಉಪಾಯದಿಂದ ಸಮ್ಯಗ್ಜ್ಞಾನದ ಸೇವನೆ ಮಾಡಬೇಕಾಗುವುದು.

**ಭಾವಾರ್ಥ :-** ಸಮ್ಯಕ್ತ್ವವನ್ನು ಅಂಗೀಕಾರ ಮಾಡಿದ ನಂತರ ಸಮ್ಯಗ್ಜ್ಞಾನವನ್ನು ಅಂಗೀಕಾರ ಮಾಡಬೇಕು. **'ಕಿಂಕೃತ್ಯ'** - ಯಾವ ರೀತಿ ಸೇವನೆ ಮಾಡುವುದೆಂದರೆ **'ಆಮ್ನಾಯಯುಕ್ತಿಯೋಗೈಃ ನಿರೂಪ್ಯ'** ಆಮ್ನಾಯ ಎಂದರೆ ಜಿನಾಗಮದ ಪರಂಪರೆ ಮತ್ತು ಯುಕ್ತಿ ಎಂದರೆ ಪ್ರಮಾಣ-ನಯದ ಅನುಯೋಗದಿಂದ ಸರಿಯಾದ ರೀತಿಯಲ್ಲಿ ಆ ಸಮ್ಯಗ್ಜ್ಞಾನದ ವಿಚಾರಮಾಡಿ-ನಿರ್ಣಯ ಮಾಡಿ ಅದರ ಸೇವನೆ ಮಾಡಬೇಕು.

**ಭಾವಾರ್ಥ :-** ಆ ಪದಾರ್ಥದ ಸ್ವರೂಪವು ಜಿನಾಗಮದ ಪರಂಪರೆಯ ಜತೆ ಹೊಂದಿಕೆಯಾಗುತ್ತಿದ್ದರೆ ಅದನ್ನು ಪ್ರಮಾಣ ಮತ್ತು ನಯದಿಂದ ತಮ್ಮ ಉಪಯೋಗದಲ್ಲಿ ಸಮುಚಿತ ಮಾಡಿ ಯಥಾವತ್ತಾಗಿ ತಿಳಿದುಕೊಳ್ಳುವುದನ್ನೇ ಸಮ್ಯಗ್ಜ್ಞಾನದ ಸೇವನೆ ಮಾಡುವುದೆಂದು ಹೇಳಲಾಗುತ್ತದೆ. ಆ ಪ್ರಮಾಣ ನಯದ ಸ್ವರೂಪವನ್ನು ಒಂದಿಷ್ಟು ಹೇಳಲಾಗುತ್ತದೆ.

### ಪ್ರಮಾಣ-ನಯದ ಸಂಕ್ಷಿಪ್ತ ಸ್ವರೂಪ

ಸಮ್ಯಗ್ಜ್ಞಾನವನ್ನು ಪ್ರಮಾಣಜ್ಞಾನವೆಂದು ಹೇಳುತ್ತಾರೆ, ಅದು ಪ್ರತ್ಯಕ್ಷ ಮತ್ತು ಪರೋಕ್ಷದ ಭೇದದಿಂದ ಎರಡು ಪ್ರಕಾರದ್ದಿದೆ. ಪ್ರತ್ಯಕ್ಷದಲ್ಲೂ ಎರಡು ಭೇದಗಳಿವೆ. ಯಾವ ಜ್ಞಾನವು ಕೇವಲ ಆತ್ಮನ ಆಧೀನವೇ ಆಗಿ ಎಷ್ಟು ತನ್ನ ವಿಷಯವಿದೆ ಅದನ್ನು ವಿಷದವಾಗಿ ಸ್ಪಷ್ಟ ತಿಳಿಯುವುದನ್ನು ಪಾರಮಾರ್ಥಿಕ ಪ್ರತ್ಯಕ್ಷವೆಂದು ಹೇಳುತ್ತಾರೆ. ಅದರಲ್ಲೂ ಎರಡು ಭೇದಗಳಿವೆ. ಅವಧಿಜ್ಞಾನ, ಮನಃಪರ್ಯಯಜ್ಞಾನಗಳಂತೂ ಏಕದೇಶ ಪ್ರತ್ಯಕ್ಷವಿವೆ ಮತ್ತು ಕೇವಲಜ್ಞಾನವು

ಸರ್ವಪ್ರತ್ಯಕ್ಷವಿದೆ. ಇನ್ನು ಯಾವುದು ಕಣ್ಣು ಮೊದಲಾದ ಇಂದ್ರಿಯಗಳ ಮೂಲಕ ವರ್ಣಾದಿಗಳನ್ನು ಸಾಕ್ಷಾತ ಗ್ರಹಣ ಮಾಡುವುದು ಎಂದರೆ ತಿಳಿಯುವುದು, ಅದನ್ನು ಸಾಂವ್ಯವಹಾರಿಕ ಪ್ರತ್ಯಕ್ಷವೆಂದು ಹೇಳುತ್ತಾರೆ. ಪರಮಾರ್ಥದಿಂದ ಈ ತಿಳಿಯುವಿಕೆಯು ಪರೋಕ್ಷವೇ ಇದೆ, ಏಕೆಂದರೆ ಸ್ಪಷ್ಟವಾದ ತಿಳಿವಳಿಕೆಯು (ಜ್ಞಾನವು) ಇಲ್ಲ. ಹೇಗೆಂದರೆ ಕಣ್ಣುಗಳಿಂದ ಯಾವುದೇ ಒಂದು ವಸ್ತುವನ್ನು ಶ್ವೇತವೆಂದು ತಿಳಿಯುತ್ತದೆ. ಆದರೆ ಅದರಲ್ಲಿ ಮಲಿನತೆಯ ಮಿಶ್ರಣವೂ ಇದೆ. ಇಂತಿಷ್ಟು ಅಂಶವು ಶ್ವೇತವಿದೆ ಮತ್ತು ಇಂತಿಷ್ಟು ಅಂಶವು ಮಲಿನವಿದೆಯೆಂದು ಇವರಿಗೆ ಸ್ಪಷ್ಟವಾಗಿ ಪ್ರತಿಭಾಸವಾಗದಿರುವುದರಿಂದ ಇದು ವ್ಯವಹಾರ ಮಾತ್ರ ಪ್ರತ್ಯಕ್ಷವಿದೆ, ಆದರೆ ಆಚಾರ್ಯರು ಇದನ್ನು ಪರೋಕ್ಷವೆಂದೇ ಹೇಳುತ್ತಾರೆ. ಮತಿಜ್ಞಾನ ಮತ್ತು ಶ್ರುತಜ್ಞಾನದಿಂದ ಯಾವುದು ತಿಳಿದುಕೊಳ್ಳುವುದಾಗುತ್ತದೆ ಅದೆಲ್ಲವೂ ಪರೋಕ್ಷವಿದೆ.

**ಪರೋಕ್ಷ ಪ್ರಮಾಣ :-** ಯಾವ ಜ್ಞಾನವು ತನ್ನ ವಿಷಯವನ್ನು ಸ್ಪಷ್ಟವಾಗಿ ತಿಳಿಯುವುದಿಲ್ಲ, ಅದನ್ನು ಪರೋಕ್ಷ ಪ್ರಮಾಣವೆಂದು ಹೇಳುತ್ತಾರೆ. ಅದರಲ್ಲಿ ೧) ಸ್ಮೃತಿ ೨) ಪ್ರತ್ಯಭಿಜ್ಞಾನ, ೩) ತರ್ಕ, ೪) ಅನುಮಾನ
ವ ’ ು ತ ’ ು ್
೫) ಆಗಮವೆಂದು ಐದು ಭೇದಗಳಿವೆಯೆಂದು ತಿಳಿಯಬೇಕು.

**೧) ಸ್ಮೃತಿ -** ಪೂರ್ವದಲ್ಲಿ ಯಾವ ಪದಾರ್ಥವನ್ನು ತಿಳಿದುಕೊಂಡಿತ್ತು ಅದನ್ನೇ ಸ್ಮರಣೆ ಮಾಡಿಕೊಂಡು ಕಾಲಾಂತರದಲ್ಲಿ ತಿಳಿದುಕೊಳ್ಳುವುದಕ್ಕೆ ಸ್ಮೃತಿಯೆಂದು ಹೇಳುತ್ತಾರೆ.

**೨) ಪ್ರತ್ಯಭಿಜ್ಞಾನ -** ಮೊದಲು ಯಾವನೋ ಓರ್ವ ಪುರುಷನನ್ನು ನೋಡಿರುತ್ತದೆ, ಅನಂತರ ಪುನಃ ನಾನು ಮೊದಲು ನೋಡಿದ ಪುರುಷನು ಇವನೇ ಇದ್ದಾನೆಂದು ಸ್ಮರಣೆ ಮಾಡಲಾಗುತ್ತದೆ. ಮೊದಲಿನ ಮಾತನ್ನು ಸ್ಮರಣೆ ಮಾಡಿ ಪ್ರತ್ಯಕ್ಷ ಪದಾರ್ಥದ ನಿರ್ಣಯ ಮಾಡುವುದರಲ್ಲಿ ಬರುವುದನ್ನು ಪ್ರತ್ಯಭಿಜ್ಞಾನವೆಂದು ಹೇಳುತ್ತಾರೆ. ಕಾಟಿಯೆಂಬ ಹೆಸರಿನ ಪಶುವು ಕೋಣದ ಹಾಗೆ ಇರುತ್ತದೆಯೆಂದು ಮೊದಲು ಕೇಳಲಾಗಿರುತ್ತದೆ, ಅನಂತರ ಎಂದಾದರೊಮ್ಮೆ ಕಾನನದಲ್ಲಿ ಕಾಟಿಯನ್ನು ನೋಡಿದರೆ ಕೋಣದ ಹಾಗೆ ಕಾಟಿಯಿರುತ್ತದೆಯೆಂಬ ಮಾತನ್ನು ಮೊದಲು ಕೇಳಲಾಗಿತ್ತು. ಆ ಕಾಟಿನಾಮದ ಪಶುವು ಇದೇ ಇದೆಯೆಂಬ ಮಾತು ಸ್ಮರಣೆಗೆ ಬಂದು ಬಿಡುತ್ತದೆ.

**೩) ತರ್ಕ :-** ವ್ಯಾಪ್ತಿಯ ಜ್ಞಾನವನ್ನು ತರ್ಕವೆಂದು ಹೇಳುತ್ತಾರೆ. ‘ಇದರ ಹೊರತು ಇದು ಇಲ್ಲ’ವೆಂಬುದನ್ನು ವ್ಯಾಪ್ತಿಯೆಂದು ಹೇಳುತ್ತಾರೆ. ಯಾವ ಪ್ರಕಾರ ಅಗ್ನಿಯಿಲ್ಲದೆ ಹೊಗೆಯಿರುವುದಿಲ್ಲ, ಆತ್ಮನಿಲ್ಲದೆ ಚೇತನಾ ಇರುವುದಿಲ್ಲ. ಈ ವ್ಯಾಪ್ತಿಯ ಜ್ಞಾನವನ್ನು ತರ್ಕವೆಂದು ಹೇಳುತ್ತಾರೆ.

**೪) ಅನುಮಾನ :-** ಲಕ್ಷಣದ ಮೂಲಕ ಪದಾರ್ಥದ ನಿಶ್ಚಯ ಮಾಡಲಾಗುವುದನ್ನು ಅನುಮಾನವೆಂದು ಹೇಳುತ್ತಾರೆ. ಹೇಗೆಂದರೆ ಪರ್ವತದೊಳಗಿಂದ ಹೊಗೆ ಹೊರಡುತ್ತಿರುವುದನ್ನು ನೋಡಿ ಇಲ್ಲಿ ಅಗ್ನಿಯು ಇದೆಯೆಂದು ನಿಶ್ಚಯ ಮಾಡುವುದು.

**೫) ಆಗಮ :-** ಆಪ್ತರ ವಚನಗಳ ನಿಮಿತ್ತದಿಂದ ಪದಾರ್ಥಗಳನ್ನು ತಿಳಿದುಕೊಳ್ಳುವುದಕ್ಕೆ ಆಗಮವೆಂದು ಹೇಳುತ್ತಾರೆ. ಹೇಗೆಂದರೆ ಶಾಸ್ತ್ರಗಳಿಂದ ಲೋಕದ ಸ್ವರೂಪವನ್ನು ತಿಳಿದುಕೊಳ್ಳುವುದು. ಈ ಪ್ರಕಾರವಾಗಿ ಪರೋಕ್ಷ ಪ್ರಮಾಣದಲ್ಲಿ ಐದು ಭೇದಗಳಿವೆಯೆಂದು ತಿಳಿದುಕೊಳ್ಳುವುದು.

## ನಯ

ಶ್ರುತಜ್ಞಾನ ಪ್ರಮಾಣದ ಅಂಶವನ್ನು ನಯವೆಂದು ಹೇಳುತ್ತಾರೆ. ಪ್ರಮಾಣದಿಂದ ಯಾವ ಪದಾರ್ಥವನ್ನು ತಿಳಿದುಕೊಳ್ಳಲಾಗುವುದು, ಅದರ ಒಂದು ಧರ್ಮವನ್ನು ಮುಖ್ಯಮಾಡಿಕೊಂಡು ಅನುಭವ ಮಾಡಿಸುವುದಕ್ಕೆ ನಯವೆಂದು ಹೇಳುತ್ತಾರೆ. ಅದರಲ್ಲಿ ದ್ರವ್ಯಾರ್ಥಿಕ ಮತ್ತುಪರ್ಯಾಯಾರ್ಥಿಕವೆಂದು ಎರಡು ಭೇದಗಳಿವೆ. ದ್ರವ್ಯವನ್ನು ಮುಖ್ಯ ಮಾಡಿಕೊಂಡು ಅನುಭವ ಮಾಡಿಸುತ್ತದೆ, ಅದು ದ್ರವ್ಯಾರ್ಥಿಕನಯವಿದೆ. ಅದರಲ್ಲಿ ನೈಗಮ, ಸಂಗ್ರಹ ಮತ್ತು ವ್ಯವಹಾರವೆಂದು ಮೂರು ಭೇದಗಳಿವೆ.

**೧. ನೈಗಮ :-** ಸಂಕಲ್ಪ ಮಾತ್ರದಿಂದ ಪದಾರ್ಥಗಳನ್ನು ಗ್ರಹಣ ಮಾಡುವುದಕ್ಕೆ - ತಿಳಿದುಕೊಳ್ಳುವುದಕ್ಕೆ ನೈಗಮವೆಂದು ಹೇಳುತ್ತಾರೆ. ಹೇಗೆಂದರೆ ಮರದ ತಟ್ಟೆ ಮಾಡುವ ಸಲುವಾಗಿ ಓರ್ವನು ಕಟ್ಟಿಗೆ ತರುವುದಕ್ಕೆ ಹೋಗುತ್ತಿರುವುದನ್ನು ನೋಡಿ ಬೇರೊಬ್ಬನು 'ನೀವು ಎಲ್ಲಿ ಹೋಗುತ್ತಿರುವಿರೆಂ'ಂದು ಕೇಳುತ್ತಾನೆ. ಆಗ ಅವನು ನಾನು ಮರದ ತಟ್ಟೆ ತರಲು ಹೋಗುತ್ತಿದ್ದೇನೆಂದು ಉತ್ತರ ಕೊಡುತ್ತಾನೆ. ಅವನು ಎಲ್ಲಿ ಹೋಗುತ್ತಿದ್ದಾನೆ ಅಲ್ಲಿಯಂತೂ ಮರದ ತಟ್ಟೆ ದೊರಕುವುದಿಲ್ಲ, ಆದರೆ ನಾನು ಕಟ್ಟಿಗೆ ತಂದು ಅದರಲ್ಲಿ ಮರದ ತಟ್ಟೆ ಮಾಡುವೆನೆಂಬ ವಿಚಾರವು ಅವನ ಮನಸ್ಸಿನಲ್ಲಿ ಇತ್ತು.

**೨. ಸಂಗ್ರಹ :-** ಸಾಮಾನ್ಯ ರೂಪದಿಂದ ಪದಾರ್ಥಗಳ ಗ್ರಹಣವನ್ನು ಸಂಗ್ರಹನಯವೆಂದು ಹೇಳುತ್ತಾರೆ. ಹೇಗೆಂದರೆ ಆರು ಜಾತಿಯ ಸಮಸ್ತ ದ್ರವ್ಯಗಳು ಸತ್ತಾಲಕ್ಷಣಸಂಯುಕ್ತವಿವೆ. ಈ ಆರು ದ್ರವ್ಯಗಳ ಸಮೂಹವನ್ನು ದ್ರವ್ಯಸಂಜ್ಞೆಯ ಮೂಲಕ ತಿಳಿದುಕೊಳ್ಳುವುದು ಈ ನಯದ ಪ್ರಯೋಜನವಿದೆ.

**೩. ವ್ಯವಹಾರ ನಯ :-** ಸಾಮಾನ್ಯ ರೂಪದಿಂದ ತಿಳಿದುಕೊಂಡ ದ್ರವ್ಯದ ವಿಶೇಷ (ಭೇದ) ಮಾಡುವುದಕ್ಕೆ ವ್ಯವಹಾರವೆಂದು ಹೇಳುತ್ತಾರೆ. ಹೇಗೆಂದರೆ ದ್ರವ್ಯದಲ್ಲಿ ಆರು ಭೇದ ಮಾಡುವುದು. ಈ ಪ್ರಕಾರ ದ್ರವ್ಯಾರ್ಥಿಕ ನಯದ ಈ ಮೂರು ಭೇದಗಳನ್ನು ತಿಳಿಸಲಾಗಿದೆ.

ಪರ್ಯಾಯಾರ್ಥಿಕ ನಯದಲ್ಲಿ ನಾಲ್ಕು ಭೇದಗಳಿವೆ. ಯಾವುದು ಕೇವಲ ವರ್ತಮಾನ ಪರ್ಯಾಯವನ್ನು ತಿಳಿಯುತ್ತದೆ ಅದನ್ನು ಋಜುಸೂತ್ರನಯವೆಂದು ಹೇಳುತ್ತಾರೆ. (ವ್ಯಾಕರಣಾದಿಗಳ ಅನುಸಾರ ಶಬ್ದದ ಅಶುದ್ಧತೆಯನ್ನು ದೂರ ಮಾಡುವುದು, ಅದು ಶಬ್ದ ನಯವಿದೆ ಮತ್ತು ಪದಾರ್ಥದಲ್ಲಿ ಒಂದು ಅರ್ಥವನ್ನು ಆರೂಢ ಮಾಡುವುದಕ್ಕೆ ಸಮಭಿರೂಢನಯವೆಂದು ಹೇಳುತ್ತಾರೆ. ಹೇಗೆಂದರೆ **'ಗಚ್ಛತೀತಿ ಗೌಃ'** ಅನುಸಾರ 'ಯಾವುದು ಚಲಿಸುತ್ತದೆ ಅದೇ ಗೋವು' ಇರುತ್ತದೆ, ಆದರೆ ಇಲ್ಲಿ ಕುಳಿತುಕೊಂಡಿರುವುದನ್ನು ಕೂಡ ಗೋವುವೆಂದು ಹೇಳಿ ಬಿಡುತ್ತಾರೆ. ಇನ್ನು ವರ್ತಮಾನ ಕ್ರಿಯೆಯು ಹೇಗಿರುವುದು ಅದರ ಅನುಸಾರವಾಗಿಯೇ ಹೇಳುವುದು ಅದು ಏವಂಭೂತ ನಯವಿದೆ. ಹೇಗೆಂದರೆ ನಡೆಯುತ್ತಿರುವುದನ್ನೇ ಗೋವುವೆಂದು ಹೇಳುವುದು, ಮಲಗಿರುವುದನ್ನು, ಕುಳಿತುಕೊಂಡಿರುವುದನ್ನು ಗೋವುಯೆಂದು ಹೇಳದಿರುವುದು. ಈ ಪ್ರಕಾರನಯದ ಭೇದಗಳನ್ನು ತಿಳಿಯಬೇಕಾಗುವುದು.) ಇವುಗಳಲ್ಲಿ ಶಬ್ದನಯ, ಸಮಭಿರೂಢನಯ ಮತ್ತು ಏವಂಭೂತನಯವನ್ನು ಶಬ್ದನಯವೆಂದು ಹೇಳುತ್ತಾರೆ. **'ನಯಪ್ರಮಾಣಾಭ್ಯಾಂ ಯುಕ್ತಿಃ'** ಎಂಬ ವಚನದಂತೆ ಈ ಪ್ರಮಾಣ ನಯದ ಸಂಯೋಗವನ್ನು ಯುಕ್ತಿಯೆಂದು ಹೇಳುತ್ತಾರೆ. ಪ್ರಮಾಣ-ನಯವಿಲ್ಲದೆ ಪದಾರ್ಥದ ಯಥಾರ್ಥ ಸ್ವರೂಪದ ಜ್ಞಾನವಾಗದಿರುವುದರಿಂದ ಇಲ್ಲಿ ಪ್ರಮಾಣ-ನಯದ ಕಥನವನ್ನು ಒಂದಿಷ್ಟು ಮಾಡಲಾಗಿದೆ. **'ಪ್ರಮಾಣನಯೈರಧಿಗಮಃ !'** ತ.ಸೂ.ಅ. ೧-೬

ಯಾವ ಸಮಯ ಆತ್ಮನಿಗೆ ಸಮ್ಯಗ್ದರ್ಶನವಾಗುತ್ತದೆ. ಆ ಸಮಯದಲ್ಲಿ ಮತಿಜ್ಞಾನ ಮತ್ತು ಶ್ರುತಜ್ಞಾನವಂತೂ ಅವಶ್ಯವಾಗಿ ಆಗಿಯೇ ಆಗುತ್ತವೆ, ಆದರೆ ಈ ಸಮ್ಯಗ್ಜ್ಞಾನವನ್ನು ವಿಶೇಷರೂಪದಿಂದ ಬೇರೆಯಾಗಿ ಆರಾಧನೆ

ಮಾಡುವುದು ಯೋಗ್ಯವಿದೆ. ಏಕೆಂದರೆ **'ಯತಃ ಲಕ್ಷಣಭೇದೇನ ಅನಯೋಃ ನಾನಾತ್ವಂ ಸಂಭವತಿ !'** ಲಕ್ಷಣಭೇದದಿಂದ ಇವೆರಡರಲ್ಲಿ ಭಿನ್ನತ್ವವು ಸಂಭವವಿದೆ. ಸಮ್ಯಕ್ತ್ವದ ಲಕ್ಷಣವು ಯಥಾರ್ಥ ಶ್ರದ್ಧೆಯಿದೆ ಮತ್ತು ಇದರ (ಜ್ಞಾನದ) ಲಕ್ಷಣವು ಯಥಾರ್ಥ ತಿಳಿದುಕೊಳ್ಳುವುದಿರುವುದರಿಂದ ಇದನ್ನು ಬೇರೆಯಾಗಿ ಹೇಳಲಾಗಿದೆ.

ಈಗ ಸಮ್ಯಕ್ತ್ವದ ನಂತರ ಜ್ಞಾನವನ್ನು ಹೇಳುವುದರ ಕಾರಣ ಹೇಳುತ್ತಾರೆ, -

**ಸಮ್ಯಗ್ಜ್ಞಾನಂ ಕಾರ್ಯಂ ಸಮ್ಯಕ್ತ್ವಂ ಕಾರಣಂ ವದಂತಿ ಜಿನಾಃ ।**
**ಜ್ಞಾನಾರಾಧನಮಿಷ್ಟಂ ಸಮ್ಯಕ್ತ್ವಾನಂತರಂ ತಸ್ಮಾತ್ ॥೩೩॥**

**ಅನ್ವಯಾರ್ಥ ಃ- [ಜಿನಾಃ]** ಜಿನೇಂದ್ರ ದೇವರು **[ಸಮ್ಯಗ್ಜ್ಞಾನಂ]** ಸಮ್ಯಗ್ಜ್ಞಾನವನ್ನು **[ಕಾರ್ಯಂ]** ಕಾರ್ಯವೆಂದು ಮತ್ತು **[ಸಮ್ಯಕ್ತ್ವಂ]** ಸಮ್ಯಕ್ತ್ವವನ್ನು **[ಕಾರಣಂ]** ಕಾರಣವೆಂದು **[ವದಂತಿ]** ಹೇಳುತ್ತಾರೆ. **[ತಸ್ಮಾತ್]** ಆದುದರಿಂದ **[ಸಮ್ಯಕ್ತ್ವಾನಂತರಂ]** ಸಮ್ಯಕ್ತ್ವದ ಅನಂತರ ಕೂಡಲೆ **[ಜ್ಞಾನಾರಾಧನಂ]** ಜ್ಞಾನದ ಆರಾಧನೆ ಮಾಡುವುದು **[ಇಷ್ಟಮ್]** ಯೋಗ್ಯವಿದೆ.

**ಟೀಕೆ ಃ- 'ಜಿನಾಃ ಸಮ್ಯಗ್ಜ್ಞಾನಂ ಕಾರ್ಯಂ ಸಮ್ಯಕ್ತ್ವಂ ಕಾರಣಂ ವದಂತಿ'** - ಶ್ರೀ ಜಿನದೇವರು ಸಮ್ಯಗ್ಜ್ಞಾನವನ್ನು ಕಾರ್ಯವೆಂದು ಹೇಳುತ್ತಾರೆ. ಮತ್ತು ಸಮ್ಯಕ್ತ್ವವನ್ನು ಕಾರಣವೆಂದು ಹೇಳುತ್ತಾರೆ.

**ಭಾವಾರ್ಥ ಃ-** ಮತಿಜ್ಞಾನ-ಶ್ರುತಜ್ಞಾನಗಳಂತೂ ಪದಾರ್ಥಗಳನ್ನು ತಿಳಿಯುತ್ತಿದ್ದವು, ಆದರೆ ಸಮ್ಯಕ್ತ್ವವಿಲ್ಲದೆ ಅವುಗಳ ಸಂಜ್ಞೆಯು ಕುಮತಿ ಮತ್ತು ಕುಶ್ರುತಿ ಜ್ಞಾನವಿತ್ತು. ಯಾವ ಸಮಯದಲ್ಲಿ ಸಮ್ಯಕ್ತ್ವವಾಗುವುದು ಅದೇ ಸಮಯದಲ್ಲಿ ಅವುಗಳ ಸಂಜ್ಞೆಯು ಮತಿಜ್ಞಾನ-ಶ್ರುತಜ್ಞಾನವಾಗುವುದು. ಆದುದರಿಂದ ಜ್ಞಾನವಿದ್ದರೂ ಕೂಡ ಸಮ್ಯಕ್‌ತನವಂತೂ ಸಮ್ಯಕ್ತ್ವದಿಂದಲೇ ಬರುವುದು. ಆದುದರಿಂದ ಸಮ್ಯಕ್ತ್ವವು ಕಾರಣರೂಪವಿದ್ದರೆ ಸಮ್ಯಗ್ಜ್ಞಾನವು ಕಾರ್ಯರೂಪವಿದೆ. **'ತಸ್ಮಾತ್ ಸಮ್ಯಕ್ತ್ವಾನಂತರಂ ಜ್ಞಾನಾರಾಧನಂ ಇಷ್ಟಮ್'** - ಆದುದರಿಂದ ಸಮ್ಯಕ್ತ್ವದ ನಂತರವೇ ಜ್ಞಾನಾರಾಧನೆಯು ಯೋಗ್ಯವಿದೆ. ಏಕೆಂದರೆ ಕಾರಣದಿಂದಲೇ ಕಾರ್ಯವಾಗುತ್ತದೆ.

ಮೊದಲು - ನಂತರವಿದ್ದರೇನೇ ಕಾರಣ - ಕಾರ್ಯವೆಂದು ಹೇಳಲಾಗುತ್ತದೆ. ಆದರೆ ಇಲ್ಲಿಯಂತೂ ಎರಡೂ ಯುಗಪತ್ ಇವೆಯೆಂದ ಮೇಲೆ ಇವುಗಳಲ್ಲಿ ಕಾರಣ-ಕಾರ್ಯತನವು ಹೇಗೆ ಸಂಭವಿಸುತ್ತದೆಯೆಂಬ ಪ್ರಶ್ನೆಯ ಉತ್ತರ ರೂಪವಾಗಿ ಈಗ ಗಾಥೆ ಹೇಳುತ್ತಾರೆ, -

**ಕಾರಣಕಾರ್ಯವಿಧಾನಂ ಸಮಕಾಲಂ ಜಾಯಮಾನಯೋರಪಿ ಹಿ ।**
**ದೀಪಪ್ರಕಾಶಯೋರಿವ ಸಮ್ಯಕ್ತ್ವಜ್ಞಾನಯೋಃ ಸುಘಟಮ್ ॥೩೪॥**

**ಅನ್ವಯಾರ್ಥ ಃ- [ಹಿ]** ನಿಶ್ಚಯದಿಂದ **[ಸಮ್ಯಕ್ತ್ವಜ್ಞಾನಯೋಃ]** ಸಮ್ಯಗ್ದರ್ಶನ ಮತ್ತು ಸಮ್ಯಗ್ಜ್ಞಾನ ಇವೆರಡೂ **[ಸಮಕಾಲಂ)** ಏಕ ಸಮಯದಲ್ಲಿ **[ಜಾಯಮಾನಯೋಃ ಅಪಿ]** ಉತ್ಪನ್ನವಾದರೂ ಕೂಡ **[ದೀಪಪ್ರಕಾಶಯೋಃ]** ದೀಪ ಮತ್ತು ಪ್ರಕಾಶದ **[ಇವ]** ಹಾಗೆ **[ಕಾರಣಕಾರ್ಯವಿಧಾನಂ]** ಕಾರಣ ಮತ್ತು ಕಾರ್ಯದ ವಿಧಿಯು **[ಸುಘಟಮ್]** ಒಳ್ಳೆಯ ರೀತಿಯಿಂದ ಸಂಭವಿಸುತ್ತದೆ.

**ಟೀಕೆ ಃ- 'ಹಿ ಸಮ್ಯಕ್ತ್ವಜ್ಞಾನಯೋಃ ಸಮಕಾಲಂ ಜಾಯಮಾನಯೋಃ ಅಪಿ**

**ಕಾರಣಕಾರ್ಯವಿಧಾನಂ ಸುಘಟಮ್'** - ನಿಶ್ಚಯದಿಂದ ಸಮ್ಯಗ್ದರ್ಶನ ಮತ್ತು ಸಮ್ಯಗ್ಜ್ಞಾನಗಳು ಒಂದೇ ಸಮಯದಲ್ಲಿ ಉತ್ಪನ್ನವಾಗುತ್ತವೆ. ಆದಾಗ್ಯೂ ಅವುಗಳಲ್ಲಿ ಕಾರಣ-ಕಾರ್ಯದ ಪ್ರಕಾರವು ಯಥಾರ್ಥ ರೂಪದಿಂದ ಸಂಭವಿಸುತ್ತದೆ. ಯಾವ ದೃಷ್ಟಾಂತದಿಂದೆಂದರೆ **'ದೀಪಕಪ್ರಕಾಶಯೋಃ ಇವ'**- ಯಾವ ಪ್ರಕಾರ ದೀವಿಗೆ ಮತ್ತು ಪ್ರಕಾಶಗಳು ಒಂದೇ ಸಮಯದಲ್ಲಿ ಪ್ರಕಟವಾಗುತ್ತಿದ್ದರೂ ಕೂಡ ದೀವಿಗೆಯು ಪ್ರಕಾಶದ ಕಾರಣವಿದೆ, ಪ್ರಕಾಶವು ಕಾರ್ಯವಿದೆ. ಏಕೆಂದರೆ ದೀವಿಗೆಯಿಂದ ಪ್ರಕಾಶವಾಗುತ್ತದೆ. ಅದೇ ಪ್ರಕಾರ ಸಮ್ಯಗ್ದರ್ಶನವು ಸಮ್ಯಗ್ಜ್ಞಾನದ ಕಾರಣವಿದೆ ಮತ್ತು ಸಮ್ಯಗ್ಜ್ಞಾನವು ಕಾರ್ಯವಿದೆ. ಏಕೆಂದರೆ ಸಮ್ಯಕ್ತ್ವದಿಂದಲೇ ಸಮ್ಯಗ್ಜ್ಞಾನವೆಂಬ ಹೆಸರು ಪಡೆಯುತ್ತದೆ.

ಈಗ ಸಮ್ಯಗ್ಜ್ಞಾನದ ಲಕ್ಷಣ ಹೇಳುತ್ತಾರೆ, -

**ಕರ್ತವ್ಯೋಽಧ್ಯವಸಾಯಃ ಸದನೇಕಾಂತಾತ್ಮಕೇಷು ತತ್ತ್ವೇಷು ।**
**ಸಂಶಯವಿಪರ್ಯ್ಯಯಾ ನಧ್ಯವಸಾಯವಿವಿಕ್ತಮಾತ್ಮರೂಪಂ ತತ್ ॥೩೫॥**

**ಅನ್ವಯಾರ್ಥ :- [ಸದನೇಕಾಂತಾತ್ಮಕೇಷು]** ಪ್ರಶಸ್ತ ಅನೇಕಾಂತಾತ್ಮಕ ಎಂದರೆ ಅನೇಕ ಸ್ವಭಾವವುಳ್ಳ **[ತತ್ತ್ವೇಷು]** ತತ್ತ್ವಗಳಲ್ಲಿ ಅಥವಾ ಪದಾರ್ಥಗಳಲ್ಲಿ **[ಅಧ್ಯವಸಾಯಃ]** ನಿರ್ಣಯ **[ಕರ್ತವ್ಯಃ]** ಮಾಡುವುದು ಯೋಗ್ಯವಿದೆ ಮತ್ತು **[ತತ್]** ಆ ಸಮ್ಯಗ್ಜ್ಞಾನವು **[ಸಂಶಯವಿಪರ್ಯ್ಯಯಾನಧ್ಯವಸಾಯವಿವಿಕ್ತಂ]** ಸಂಶಯ, ವಿಪರ್ಯಯ ಮತ್ತು ವಿಮೋಹಗಳಿಂದ ರಹಿತವಾದ **[ಆತ್ಮರೂಪಂ]** ಆತ್ಮನ ನಿಜಸ್ವರೂಪವಿದೆ.

**ಟೀಕೆ :- 'ಸದನೇಕಾಂತಾತ್ಮಕೇಷು ತತ್ತ್ವೇಷು ಅಧ್ಯವಸಾಯಃ ಕರ್ತವ್ಯಃ'** - ಅನೇಕಾಂತ ಸ್ವಭಾವವಿರುವಂಥ ಪದಾರ್ಥಗಳ ನಿರ್ಣಯವನ್ನು ಜ್ಞಾನಪೂರ್ವಕವಾಗಿ ಮಾಡುವುದು ಯೋಗ್ಯವಿದೆ.

**ಭಾವಾರ್ಥ :-** ಪದಾರ್ಥದ ಸ್ವರೂಪವನ್ನು ಯಥಾರ್ಥವಾಗಿ ತಿಳಿದುಕೊಳ್ಳುವುದರ ಹೆಸರು ಸಮ್ಯಗ್ಜ್ಞಾನವಿದೆ. ಆ ಪದಾರ್ಥಗಳು ಅನೇಕಾಂತ ಸ್ವಭಾವವನ್ನು ಧಾರಣ ಮಾಡುತ್ತವೆ. ಅನೇಕ - ಬಹಳ ಅಂತ-ಧರ್ಮ. ಈ ಪ್ರಕಾರ ತನ್ನ ಅನಂತ ಧರ್ಮಗಳನ್ನು - ಸ್ವಭಾವವನ್ನು ಧಾರಣ ಮಾಡಿರುವಂಥದರ ಜ್ಞಾನವನ್ನು ಅವಶ್ಯವಾಗಿ ಮಾಡಿಕೊಳ್ಳಬೇಕಾಗುವುದು. ಸಮ್ಯಕ್ ಪ್ರಕಾರದಿಂದ ವಸ್ತುವನ್ನು ತಿಳಿದುಕೊಂಡರೆ ಕೊಟ್ಯಂತರ ಕಾರಣಗಳು ದೊರಕಿದರೂ ಕೂಡ ಶ್ರದ್ಧಾರಹಿತರಾಗುವುದಿಲ್ಲ. **'ತತ್ ಆತ್ಮರೂಪಂ ವರ್ತತೇ'** - ಈ ಸಮ್ಯಗ್ಜ್ಞಾನವು ಆತ್ಮನ ಸ್ವರೂಪವಿದೆ. ಏಕೆಂದರೆ ಉತ್ಪನ್ನವಾಗಿರುವಂಥ ಈ ನಿಜವಾದ ಜ್ಞಾನವು ಅದು ಕೇವಲಜ್ಞಾನದಲ್ಲಿ ಒಂದಾಗಿ ಹೋಗಿ ಶಾಶ್ವತವಾಗಿ ಉಳಿಯುವುದು. ಆ ಜ್ಞಾನವು **'ಸಂಶಯವಿಪರ್ಯ್ಯಯಾಧ್ಯವಸಾಯ ವಿವಿಕ್ತಮ್'**- ಸಂಶಯ, ವಿಪರ್ಯಯ ಮತ್ತು ವಿಮೋಹ - ಈ ಮೂರು ಭಾವಗಳಿಂದ ರಹಿತವಿದೆ.

**ಸಂಶಯ :-** ವಿರುದ್ಧವಾದ ಉಭಯತ್ರ ಜ್ಞಾನವನ್ನು ಸಂಶಯ ಜ್ಞಾನವೆಂದು ಹೇಳುತ್ತಾರೆ. ಹೇಗೆಂದರೆ ರಾತ್ರಿಯಲ್ಲಿ ಯಾವನೋ ಓರ್ವನನ್ನು ನೋಡಿ ಈ ಪದಾರ್ಥವು ಮನುಷ್ಯನಂತೆಯೂ ಪ್ರತಿಭಾಸವಾಗುತ್ತದೆ ಮತ್ತು ವ್ಯಂತರನಂತೆಯೂ ಪ್ರತಿಭಾಸವಾಗುತ್ತದೆಯೆಂಬ ಸಂದೇಹವಾಗುವುದು.

**ವಿಪರ್ಯಯಃ :-** ಅನ್ಯಥಾ । ವಿಪರೀತರೂಪ ಏಕಪಕ್ಷದ ಜ್ಞಾನವನ್ನು ವಿಪರ್ಯಯ ಜ್ಞಾನವೆಂದು ಹೇಳುತ್ತಾರೆ. ಹೇಗೆಂದರೆ ಮನುಷ್ಯರಲ್ಲಿ ವ್ಯಂತರದ ಪ್ರತೀತಿ ಮಾಡಿಕೊಳ್ಳುವುದು.

**ಅನಧ್ಯವಸಾಯ :-** 'ಏನೋ ಇದೆ'ಯೆಂದಿಷ್ಟೇ ತಿಳಿಯುವುದು, ವಿಶೇಷ ವಿಚಾರ ಮಾಡದಿರುವುದನ್ನು ಅನಧ್ಯವಸಾಯ (ವಿಮೋಹ)ವೆಂದು ಹೇಳುತ್ತಾರೆ. ಹೇಗೆಂದರೆ ಗಮನ ಮಾಡುವ ಸಮಯದಲ್ಲಿ ತೃಣದ ಸ್ಪರ್ಶದ ಜ್ಞಾನವಾಗುವುದು. ಇವು ಮೂರೂ ಭಾವಗಳಿಂದ ರಹಿತವಾದ ಯಥಾರ್ಥ ಜ್ಞಾನವನ್ನು ಸಮ್ಯಗ್ಜ್ಞಾನವೆಂದು ಹೇಳುತ್ತಾರೆ. ಇಲ್ಲಿ ಘಟ-ಪಟ ಮೊದಲಾದ ಪದಾರ್ಥಗಳನ್ನು ವಿಶೇಷವಾಗಿ ತಿಳಿದುಕೊಳ್ಳುವ ಸಲುವಾಗಿ ಉದ್ಯಮಶೀಲರಿರಬೇಕೆಂದು ತಿಳಿಸಿಲ್ಲ, ಆದರೆ ಸಂಸಾರ-ಮೋಕ್ಷದ ಕಾರಣಭೂತವಾದ ಪದಾರ್ಥಗಳನ್ನು ಯಥಾರ್ಥವಾಗಿ ತಿಳಿದುಕೊಳ್ಳುವ ಸಲುವಾಗಿ ಉದ್ಯಮಶೀಲರಾಗಿರಬೇಕೆಂಬ ಉಪದೇಶವನ್ನು ಕೊಡಲಾಗಿದೆ.

**ಪ್ರಶ್ನೆ :-** ಸಮ್ಯಕ್‌ದೃಷ್ಟಿ ಮತ್ತು ಮಿಥ್ಯಾದೃಷ್ಟಿಯ ಬುದ್ಧಿವಂತಿಕೆಯಲ್ಲಿ ಸಮಾನತೆಯಿದ್ದರೂ ಕೂಡ ಒಬ್ಬನ ಜ್ಞಾನವನ್ನು ಸಮ್ಯಕ್ ಮತ್ತು ಇನ್ನೊಬ್ಬನ ಜ್ಞಾನವನ್ನು ಮಿಥ್ಯೆಯೆಂದೇಕೆ ಹೇಳಲಾಗುತ್ತದೆ ?

**ಉತ್ತರ :-** ಸಮ್ಯಕ್‌ದೃಷ್ಟಿಗೆ ಮೂಲಭೂತವಾದ ಜೀವಾದಿ ಪದಾರ್ಥಗಳ ವಾಸ್ತವಿಕ ಜ್ಞಾನವಿರುವುದರಿಂದ ಎಷ್ಟು ಉತ್ತರ ಪದಾರ್ಥಗಳು (ವಿಶೇಷ-ಪದಾರ್ಥಗಳು) ತಿಳಿಯುವುದರಲ್ಲಿ ಬರುತ್ತವೆ ಅವೆಲ್ಲವನ್ನು ಯಥಾರ್ಥರೂಪದಿಂದ ಸಾಧಿಸುತ್ತಿರುವುದರಿಂದ ಸಮ್ಯಕ್‌ದೃಷ್ಟಿಯ ಜ್ಞಾನವನ್ನು ಸಮ್ಯಕ್‌ರೂಪವೆಂದು ಹೇಳಲಾಗಿದೆ. ಮಿಥ್ಯಾದೃಷ್ಟಿಗೆ ಮೂಲಪದಾರ್ಥಗಳ ವಾಸ್ತವಿಕ ಜ್ಞಾನವಿಲ್ಲದಿರುವುದರಿಂದ ಎಷ್ಟು ಉತ್ತರ ಪದಾರ್ಥಗಳು ತಿಳಿಯುವುದರಲ್ಲಿ ಬರುತ್ತವೆ, ಅವೆಲ್ಲವನ್ನೂ ಅಯಥಾರ್ಥ ರೂಪದಿಂದ ಸಾಧಿಸುತ್ತಿರುವುದರಿಂದ ಮಿಥ್ಯಾದೃಷ್ಟಿಯ ಜ್ಞಾನವನ್ನು ಮಿಥ್ಯಾರೂಪವೆಂದು ಹೇಳಲಾಗಿದೆ.

ಈಗ ಈ ಸಮ್ಯಗ್ಜ್ಞಾನದ ಎಂಟು ಅಂಗಗಳನ್ನು ಹೇಳುತ್ತಾರೆ, -

ಗ್ರಂಥಾರ್ಥೋಭಯಪೂರ್ಣಂ ಕಾಲೇ ವಿನಯೇನ ಸೋಪಧಾನಂ ಚ ।
ಬಹುಮಾನೇನ ಸಮನಿತಮನಿಹ್ನವಂ ಜ್ಞಾನಮಾರಾಧ್ಯಮ್ ॥೩೬॥

**ಅನ್ವಯಾರ್ಥ :- [ಗ್ರಂಥಾರ್ಥೋಭಯಪೂರ್ಣಂ]** ಗ್ರಂಥರೂಪ (ಶಬ್ದರೂಪ), ಅರ್ಥರೂಪ ಮತ್ತು ಉಭಯ ಎಂದರೆ ಶಬ್ದರೂಪ-ಅರ್ಥರೂಪದ ಶುದ್ಧತೆಯಿಂದ ಪರಿಪೂರ್ಣ **[ಕಾಲೇ]** ಕಾಲದಲ್ಲಿ ಎಂದರೆ ಅಧ್ಯಯನದ ಕಾಲದಲ್ಲಿ ಆರಾಧನೆ ಮಾಡಲು ಯೋಗ್ಯ **[ವಿನಯೇನ]** ಮನ-ವಚನ, ಕಾಯದ ಶುದ್ಧತೆಯ ರೂಪವಾದ ವಿನಯ **[ಚ]** ಮತ್ತು **[ಸೋಪಧಾನಂ]** ಧಾರಣಾ-ಯುಕ್ತ **[ಬಹುಮಾನೇನ]** ಅತ್ಯಂತ ಸನ್ಮಾನದಿಂದ ಎಂದರೆ ದೇವ-ಗುರು-ಶಾಸ್ತ್ರಗಳ ವಂದನೆ, ನಮಸ್ಕಾರ ಮೊದಲಾದವು **[ಸಮನ್ವಿತಂ]** ಸಹಿತವಾಗಿ ಹಾಗೂ **[ಅನಿಹ್ನವಂ]** ವಿದ್ಯಾಗುರುಗಳನ್ನು ಗುಪ್ತವಾಗಿ ಇರಿಸದೆ **[ಜ್ಞಾನಂ]** ಜ್ಞಾನದ **[ಆರಾಧ್ಯಮ್]** ಆರಾಧನೆಯನ್ನು ಮಾಡುವುದು ಯೋಗ್ಯವಿದೆ.

**ಟೀಕೆ :- 'ಜ್ಞಾನಂ ಆರಾಧ್ಯಮ್'** - ಶ್ರದ್ಧೆಯುಳ್ಳ ಪುರುಷರಿಗೆ ಸಮ್ಯಗ್ಜ್ಞಾನವು ಆರಾಧನೆ ಮಾಡಲು ಯೋಗ್ಯವಿದೆ. ಜ್ಞಾನವು ಹೇಗಿದೆಯೆಂದರೆ **'ಗ್ರಂಥಾರ್ಥೋಭಯಪೂರ್ಣಂ'** - ಶಬ್ದರೂಪವಿದೆ, ಅರ್ಥರೂಪವಿದೆ ಮತ್ತು ಉಭಯದಿಂದ ಪೂರ್ಣವಿದೆ.

**ಭಾವಾರ್ಥ :- ೧. ವ್ಯಂಜನಾಚಾರ -** ಎಲ್ಲಿ ಕೇವಲ ಶಬ್ದದ ಪಾಠದ್ದೇ ತಿಳುವಳಿಕೆಯಿದೆ ಅದನ್ನು ವ್ಯಂಜನಾಚಾರ ಅಂಗವೆಂದು ಹೇಳುತ್ತಾರೆ.

೨. **ಅರ್ಥಾಚಾರ** - ಎಲ್ಲಿ ಕೇವಲ ಅರ್ಥಮಾತ್ರದ ಪ್ರಯೋಜನ ಸಹಿತ ತಿಳಿವಳಿಕೆಯಿದೆ ಅದನ್ನು ಅರ್ಥಾಚಾರವೆಂದು ಹೇಳುತ್ತಾರೆ.

೩. **ಉಭಯಾಚಾರ** - ಎಲ್ಲಿ ಶಬ್ದ ಮತ್ತು ಅರ್ಥಗಳೆರಡರಲ್ಲಿ ಸಂಪೂರ್ಣ ತಿಳಿವಳಿಕೆಯಿದೆ ಅದನ್ನು ಶಬ್ದಾರ್ಥ ಉಭಯಪೂರ್ಣ ಅಂಗವೆಂದು ಹೇಳುತ್ತಾರೆ. ಈ ಪ್ರಕಾರ ಈ ಮೂರು ಅಂಗಗಳ ವರ್ಣನೆ ಮಾಡಲಾಯಿತು. ಈಗ ಜ್ಞಾನದ ಆರಾಧನೆಯನ್ನು ಯಾವಾಗ ಮಾಡುವುದು !

೪. **ಕಾಲಾಚಾರ - ಕಾಲೇ** - ಯಾವ ಕಾಲದಲ್ಲಿ ಯಾವ ಜ್ಞಾನದ ವಿಚಾರಬೇಕು ಅದನ್ನೇ ಮಾಡುವುದು (ಸೂರ್ಯೋದಯ, ಸೂರ್ಯಾಸ್ತ, ಮಧ್ಯಾಹ್ನ ಮತ್ತು ಮಧ್ಯರಾತ್ರಿ ಇವುಗಳ ಮೊದಲಿನ ಮತ್ತು ನಂತರದ ಮುಹೂರ್ತವು ಸಂಧ್ಯಾಕಾಲವಿದೆ, ಈ ಕಾಲವನ್ನು ಬಿಟ್ಟುಕೊಟ್ಟು ಉಳಿದ ನಾಲ್ಕು ಉತ್ತಮ ಕಾಲಗಳಲ್ಲಿ ಪಠಣ-ಪಾಠಣಾದಿಗಳ ರೂಪದ ಸ್ವಾಧ್ಯಾಯ ಮಾಡುವುದನ್ನು ಕಾಲಾಚಾರವೆಂದು ಹೇಳುತ್ತಾರೆ. ನಾಲ್ಕೂ ಸಂಧ್ಯಾಕಾಲದ ಮೊದಲಿನ ಹಾಗೂ ಕೊನೆಯ ಎರಡು ಗಳಿಗೆಯಲ್ಲಿ ಮತ್ತು ದಿಗ್ದಾಹ, ಉಲ್ಕಾಪಾತ, ವಜ್ರಪಾತ, ಇಂದ್ರಧನುಷ್ಯ, ಸೂರ್ಯ-ಚಂದ್ರಗ್ರಹಣ, ಬಿರುಗಾಳಿ, ಭೂಕಂಪ ಮೊದಲಾದ ಉತ್ಪಾತಗಳ ಕಾಲದಲ್ಲಿ ಸಿದ್ಧಾಂತ ಗ್ರಂಥಗಳ ಪಠಣ-ಪಾಠಣವು ವರ್ಜಿತವಿದೆ. ಆದರೆ ಸ್ತೋತ್ರ-ಆರಾಧನೆ, ಧರ್ಮಕಥೆ ಮೊದಲಾದ ಗ್ರಂಥಗಳನ್ನು ಓದಬಹುದಾಗಿದೆ.

೫. **ವಿನಯಾಚಾರ** - ಯಾವ ರೀತಿಯಿಂದ ಜ್ಞಾನಾರಾಧನೆ ಮಾಡಬೇಕೆಂದರೆ **'ವಿನಯೇನ'** ನಮ್ರತಾಯುಕ್ತವಾಗಿರುವುದು, ಉದ್ಧತವಾಗದಿರುವುದು.

೬. **ಉಪಧಾನಾಚಾರ** - ಮತ್ತೆ ಜ್ಞಾನದ ಆರಾಧನೆಯು ಹೇಗಿರಬೇಕೆಂದರೆ **'ಸೋಪಧಾನಂ'** - ಧಾರಣಾ ಸಹಿತವಾದ ಜ್ಞಾನವನ್ನು ಮರೆಯಬಾರದು. ಉಪಧಾನ ಸಹಿತವಾಗಿ ಜ್ಞಾನದ ಆರಾಧನೆ ಮಾಡುವುದು ಅದು ಆರನೆಯ ಅಂಗವಿದೆ.

೭. **ಬಹುಮಾನಾಚಾರ** - ಮತ್ತೆ ಜ್ಞಾನವು ಹೇಗಿದೆಯೆಂದರೆ **'ಬಹುಮಾನೇನ ಸಮನ್ವಿತಮ್'** - ಜ್ಞಾನದ ಎಂದರೆ ಪುಸ್ತಕದ - ಶಾಸ್ತ್ರದ ಅಥವಾ ಹೇಳಿಕೊಡುವಂಥವರ ಆದರವನ್ನು ಬಹಳಷ್ಟು ಮಾಡುವುದು. ಇವುಗಳೊಡನೆ ಜ್ಞಾನದ-ಆರಾಧನೆ ಮಾಡುವುದು ಅದು ಏಳನೆಯ ಅಂಗವಿದೆ.

೮. **ಅನಿಹ್ನವಾಚಾರ** - ಮತ್ತೆ ಜ್ಞಾನವು ಹೇಗಿದೆಯೆಂದರೆ **'ಅನಿಹ್ನವಂ'** - ಯಾವ ಶಾಸ್ತ್ರಗಳಿಂದ ಅಥವಾ ಗುರುಗಳಿಂದ ತಮಗೆ ಜ್ಞಾನವಾಗಿರುವುದು ಅವರನ್ನು ಗುಪ್ತವಾಗಿ ಇರಿಸಬಾರದು. ಇವು (ಸಮ್ಯಗ್ಜ್ಞಾನದ ವಿನಯದ) ಎಂಟು ಅಂಗಗಳಿವೆ. ಈ ಪ್ರಕಾರ ಸಮ್ಯಗ್ಜ್ಞಾನವನ್ನು ಅಂಗೀಕಾರ ಮಾಡಬೇಕು.

ಈ ಪ್ರಕಾರ ಶ್ರೀಮದ್ ಅಮೃತಚಂದ್ರಸೂರಿ ವಿರಚಿತ ಪುರುಷಾರ್ಥಸಿದ್ಧಿ ಉಪಾಯ

ಅಪರನಾಮ ಜಿನಪ್ರವಚನರಹಸ್ಯ ಕೋಶದಲ್ಲಿ ಸಮ್ಯಗ್ಜ್ಞಾನ ವರ್ಣನೆ
ಯೆಂಬ ಹೆಸರಿನ ಎರಡನೆಯ ಅಧಿಕಾರವು ಸಮಾಪ್ತವಾಯಿತು.

## ಸಮ್ಯಕ್ಚಾರಿತ್ರ - ವ್ಯಾಖ್ಯಾನ

ಸಮ್ಯಗ್ಜ್ಞಾನವನ್ನು ಅಂಗೀಕಾರ ಮಾಡಿದ ನಂತರ ಧರ್ಮಾತ್ಮ ಪುರುಷರು ಏನು ಮಾಡಬೇಕೆಂಬುದನ್ನೇ ಈಗ ಹೇಳುತ್ತಾರೆ, -

**ವಿಗಲಿತದರ್ಶನಮೋಹೈಃ ಸಮಂಜಸಜ್ಞಾನವಿದಿತತತ್ತ್ವಾರ್ಥೈಃ ।**
**ನಿತ್ಯಮಪಿ ನಿಃಪ್ರಕಂಪೈಃ ಸಮ್ಯಕ್ಚಾರಿತ್ರಮಾಲಂಬ್ಯಮ್ ॥೩೭॥**

**ಅನ್ವಯಾರ್ಥ ಃ- [ವಿಗಲಿತದರ್ಶನಮೋಹೈಃ]** ಯಾರು ದರ್ಶನಮೋಹದ ನಾಶ ಮಾಡಿ ಬಿಟ್ಟಿದ್ದಾರೆ, **[ಸಮಂಜಸಜ್ಞಾನವಿದಿತತತ್ತ್ವಾರ್ಥೈಃ]** ಯಾರು ಸಮ್ಯಗ್ಜ್ಞಾನದಿಂದ ತತ್ತ್ವಾರ್ಥಗಳನ್ನು ತಿಳಿದುಕೊಂಡಿದ್ದಾರೆ. **[ನಿತ್ಯಮಪಿ ನಿಃಪ್ರಕಂಪೈಃ]** ಯಾರು ಯಾವಾಗಲೂ ಅಕಂಪ ಎಂದರೆ ದೃಢ ಚಿತ್ತವುಳ್ಳವರಿದ್ದಾರೆ ಅಂಥ ಪುರುಷರ ಮೂಲಕ **[ಸಮ್ಯಕ್ಚಾರಿತ್ರಂ]** ಸಮ್ಯಕ್ಚಾರಿತ್ರವು **[ಆಲಂಬ್ಯಮ್]** ಅವಲಂಬನೆ ಮಾಡಲು ಯೋಗ್ಯವಿದೆ.

**ಟೀಕೆ ಃ- 'ಸಮ್ಯಕ್ಚಾರಿತ್ರಂ ಆಲಂಬ್ಯಮ್'** - ಸಮ್ಯಕ್ಚಾರಿತ್ರವನ್ನು ಅಂಗೀಕಾರ ಮಾಡಬೇಕಾಗುವುದು. ಎಂಥ ಪುರುಷರು ಸಮ್ಯಕ್ಚಾರಿತ್ರವನ್ನು ಅಂಗೀಕಾರ ಮಾಡಬೇಕೆಂದರೆ **'ವಿಗಲಿತದರ್ಶನಮೋಹೈಃ'** - ಯಾರದು ದರ್ಶನ ಮೋಹದ ನಾಶವಾಗಿದೆ ಮತ್ತು ದರ್ಶನಮೋಹದ ನಾಶವಾಗುವುದರಿಂದ ಅವರು ತತ್ತ್ವಶ್ರದ್ಧೆಯುಳ್ಳವ-ರಾಗಿದ್ದಾರೆ, ಮತ್ತೆ ಅವರು ಹೇಗಿದ್ದಾರೆಂದರೆ **'ಸಮಂಜಸಜ್ಞಾನವಿದಿತತತ್ತ್ವಾರ್ಥೈಃ'** - ಸಮ್ಯಗ್ಜ್ಞಾನದಿಂದ ತತ್ತ್ವಾರ್ಥಗಳನ್ನು ತಿಳಿದುಕೊಂಡಿದ್ದಾರೆ. ಮತ್ತೆ ಹೇಗಿದ್ದಾರೆಂದರೆ **'ನಿತ್ಯಮಪಿ ನಿಃಪ್ರಕಂಪೈಃ'** ಧಾರಣ ಮಾಡಿರುವ ಆಚರಣೆಯಲ್ಲಿ ನಿರಂತರ ನಿಷ್ಕಂಪರಿದ್ದಾರೆ. ಅವರು ಯಾವುದೇ ಪ್ರಕಾರದಿಂದ ಗ್ರಹಣ ಮಾಡಿರುವ ಆಚರಣೆಯನ್ನು ಬಿಟ್ಟು ಕೊಡುವುದಿಲ್ಲ. ಇಂಥ ಜೀವರುಗಳು ಸಮ್ಯಕ್ಚಾರಿತ್ರವನ್ನು ಅಂಗೀಕಾರ ಮಾಡಬೇಕಾಗುವುದು.

**ಭಾವಾರ್ಥ ಃ-** ಮೊದಲು ಸಮ್ಯಗ್ದರ್ಶನ ಪ್ರಾಪ್ತ ಮಾಡಿಕೊಂಡು ಸಮ್ಯಗ್ಜ್ಞಾನಿಯಾಗಬೇಕು. ಅನಂತರ ನಿಶ್ಚಲವೃತ್ತಿಯನ್ನು ಧಾರಣ ಮಾಡಿ ಸಮ್ಯಕ್ಚಾರಿತ್ರದ ಅಂಗೀಕಾರ ಮಾಡಬೇಕಾಗುವುದು.

ಈಗ ಸಮ್ಯಗ್ಜ್ಞಾನದ ನಂತರವೇ ಸಮ್ಯಕ್ಚಾರಿತ್ರವನ್ನು ಅಂಗೀಕಾರ ಮಾಡುವುದರ ಕಾರಣ ಹೇಳುತ್ತಾರೆ, -

**ನ ಹಿ ಸಮ್ಯಗ್ವ್ಯಪದೇಶಂ ಚಾರಿತ್ರಮಜ್ಞಾನಪೂರ್ವಕಂ ಲಭತೇ ।**
**ಜ್ಞಾನಾನಂತರಮುಕ್ತಂ ಚಾರಿತ್ರಾರಾಧನಂ ತಸ್ಮಾತ್ ॥೩೮॥**

**ಅನ್ವಯಾರ್ಥ ಃ- [ಅಜ್ಞಾನಪೂರ್ವಕಂ ಚಾರಿತ್ರಂ]** ಅಜ್ಞಾನ ಸಹಿತವಾಗಿರುವ ಚಾರಿತ್ರವು **[ಸಮ್ಯಗ್ವ್ಯಪ-ದೇಶಂ]** ಸಮ್ಯಕ್‌ನಾಮವನ್ನು **[ನ ಹಿ ಲಭತೇ]** ಪಡೆಯುವುದಿಲ್ಲ. **[ತಸ್ಮಾತ್]** ಅದಕ್ಕಾಗಿಯೇ **[ಜ್ಞಾನಾನಂತರಂ]** ಸಮ್ಯಗ್ಜ್ಞಾನದ ನಂತರ **[ಚಾರಿತ್ರಾರಾಧನಂ]** ಚಾರಿತ್ರದ ಆರಾಧನೆಯನ್ನು **[ಉಕ್ತಮ್]** ಹೇಳಲಾಗಿದೆ.

**ಟೀಕೆ ಃ- ಅಜ್ಞಾನಪೂರ್ವಕಂ ಚಾರಿತ್ರಂ ಸಮ್ಯಗ್ವ್ಯಪದೇಶಂ ನ ಹಿ ಲಭತೇ'** - ಮೊದಲು ಅಜ್ಞಾನಭಾವವಿರುವಂಥವರ ಚಾರಿತ್ರವು ಸಮ್ಯಕ್ ಸಂಜ್ಞೆಗೆ ಪ್ರಾಪ್ತವಾಗುವುದಿಲ್ಲ. ಒಂದು ವೇಳೆ ಮೊದಲು ಸಮ್ಯಕ್‌ಜ್ಞಾನವಿಲ್ಲದಿದ್ದರೆ ಮತ್ತು ಪಾಪಕ್ರಿಯೆಗಳ ತ್ಯಾಗ ಮಾಡಿ ಚಾರಿತ್ರದ ಭಾರವನ್ನು ಧಾರಣ ಮಾಡಿದ್ದರೆ ಆ ಚಾರಿತ್ರಕ್ಕೆ ಸಮ್ಯಕ್‌ತನವು ಪ್ರಾಪ್ತವಾಗುವುದಿಲ್ಲ. ಹೇಗೆಂದರೆ ಏನನ್ನೂ ತಿಳಿದುಕೊಳ್ಳದೆ ಔಷಧದ ಸೇವನೆ ಮಾಡಿದರೆ ಮರಣವೇ

ಸಂಭವಿಸುವುದು, ಅದೇ ಪ್ರಕಾರ ಸಮ್ಯಗ್ಜ್ಞಾನದಿಂದ ರಹಿತವಿದ್ದು ಚಾರಿತ್ರದ ಸೇವನೆ ಮಾಡುವುದು ಅದು ಸಂಸಾರವನ್ನು ಹೆಚ್ಚಿಸುವುದಿದೆ. ಜೀವ ರಹಿತವಾದ ಮೃತಕ ಶರೀರದಲ್ಲಿ ಇಂದ್ರಿಯಗಳ ಆಕಾರವು ಯಾವ ಕೆಲಸಕ್ಕೆ ಬರುವುದು ? ಅದೇ ಪ್ರಕಾರ ಸಮ್ಯಗ್ಜ್ಞಾನದಿಂದ ಶೂನ್ಯವಾದ ಶರೀರದ ವೇಷದಿಂದ ಅಥವಾ ಕ್ರಿಯಾಕಾಂಡದ ಸಾಧನದಿಂದ ಶುದ್ಧೋಪಯೋಗದ ಪ್ರಾಪ್ತಿಯಾಗುವುದಿಲ್ಲ. **'ತಸ್ಮಾತ್ ಜ್ಞಾನಾನಂತರಂ ಚಾರಿತ್ರಾರಾಧನಂ ಉಕ್ತಮ್'** ಅದಕ್ಕಾಗಿಯೇ ಸಮ್ಯಗ್ಜ್ಞಾನದ ಪ್ರಾಪ್ತಿಯ ನಂತರವೇ ಚಾರಿತ್ರದ ಆರಾಧನೆ ಮಾಡಬೇಕೆಂದು ಹೇಳಿದೆ.

ಈಗ ಚಾರಿತ್ರದ ಲಕ್ಷಣವನ್ನು ಹೇಳುತ್ತಾರೆ, -

**ಚಾರಿತ್ರಂ ಭವತಿ ಯತಃ ಸಮಸ್ತಸಾವದ್ಯಯೋಗಪರಿಹರಣಾತ್ ।**
**ಸಕಲಕಷಾಯವಿಮುಕ್ತಂ ವಿಶದಮುದಾಸೀನಮಾತ್ಮರೂಪಂತತ್ ॥೩೯॥**

**ಅನ್ವಯಾರ್ಥ :- [ಯತಃ]** ಕಾರಣವೇನೆಂದರೆ **[ತತ್]** ಆ **[ಚಾರಿತ್ರಂ]** ಚಾರಿತ್ರವು **[ಸಮಸ್ತಸಾವದ್ಯ ಯೋಗಪರಿಹರಣಾತ್]** ಸಮಸ್ತ ಪಾಪಯುಕ್ತ ಮನ, ವಚನ, ಕಾಯಗಳ ಯೋಗದ ತ್ಯಾಗದಿಂದ **[ಸಕಲಕಷಾಯವಿಮುಕ್ತಂ]** ಸಂಪೂರ್ಣ ಕಷಾಯಗಳಿಂದ ರಹಿತ, **[ವಿಷದಂ]** ನಿರ್ಮಲ, **[ಉದಾಸೀನಂ]** ಪರಪದಾರ್ಥಗಳಿಂದ ವಿರಕ್ತತಾರೂಪ ಮತ್ತು **[ಆತ್ಮರೂಪಂ ಭವತಿ]** ಆತ್ಮಸ್ವರೂಪವಿರುತ್ತದೆ.

**ಟೀಕೆ :- 'ಯತಃ ಸಮಸ್ತ ಸಾವದ್ಯಯೋಗಪರಿಹರಣಾತ್ ಚಾರಿತ್ರಂ ಭವತಿ'** - ಸಮಸ್ತ ಪಾಪಸಹಿತವಾದ ಮನ, ವಚನ, ಕಾಯದ ಯೋಗವನ್ನು ತ್ಯಾಗ ಮಾಡುವುದರಿಂದ ಚಾರಿತ್ರವಾಗುತ್ತದೆ. ಮುನಿಗಳು ಮೊದಲು ಸಾಮಾಯಿಕ ಚಾರಿತ್ರದ ಅಂಗೀಕಾರ ಮಾಡುತ್ತಾರೆ, ಆಗ ಅವರು ಮಾಡುವ ಪ್ರತಿಜ್ಞೆಯೇನೆಂದರೆ **'ಅಹಂ ಸರ್ವಸಾವದ್ಯಯೋಗವಿರತೋಽಸ್ಮಿ'** - ನಾನು ಸಮಸ್ತ ಪಾಪಸಹಿತ ಯೋಗಗಳ ತ್ಯಾಗಿಯಿದ್ದೇನೆ. ಆ ಚಾರಿತ್ರವು ಹೇಗಿದೆಯೆಂದರೆ **'ಸಕಲಕಷಾಯವಿಮುಕ್ತಮ್'** - ಸಮಸ್ತ ಕಷಾಯಗಳಿಂದ ರಹಿತವಿದೆ ; ಸಮಸ್ತ ಕಷಾಯಗಳ ಅಭಾವವಾದ ಮೇಲೆ ಯಥಾಖ್ಯಾತ ಚಾರಿತ್ರವಾಗುತ್ತದೆ. ಮತ್ತೆ ಅದು **'ವಿಶದಮ್'** - ನಿರ್ಮಲವಿದೆ. ಆತ್ಮ ಸರೋವರವು ಕಷಾಯರೂಪದ ಕೊಳಚೆಯಿಂದ ಮಲಿನವಾಗಿತ್ತು. ಕಷಾಯದ ಅಭಾವವಾದ ಮೇಲೆ ಸ್ವಾಭಾವಿಕವಾಗಿಯೇ ನಿರ್ಮಲತೆಯಾಗಿ ಹೋಗಿದೆ. ಮತ್ತು ಅದು **'ಉದಾಸೀನಮ್'** ಪರದ್ರವ್ಯಗಳಿಂದ ವಿರಕ್ತ ಸ್ವರೂಪವಿದೆ. **'ತತ್ ಆತ್ಮರೂಪಂ ವರ್ತತೇ'** - ಆ ಚಾರಿತ್ರವು ಆತ್ಮನ ಸ್ವರೂಪವಿದೆ. ಕಷಾಯರಹಿತವಾದ ಯಾವ ಆತ್ಮನ ಸ್ವರೂಪವು ಪ್ರಕಟವಾಗಿದೆ ಅದುವೇ ಸದಾಕಾಲ ಉಳಿಯುವುದು, ಈ ಅಪೇಕ್ಷೆಯಿಂದ ಆತ್ಮನ ಸ್ವರೂಪವಿದೆ. ನವೀನ ಆವರಣವೆಂದೂ ಆಗುವುದಿಲ್ಲ. ಸಾಮಾಯಿಕ ಚಾರಿತ್ರದಲ್ಲಿ ಸಕಲ ಚಾರಿತ್ರವಾಯಿತು, ಆದರೆ ಸಂಜ್ವಲನ ಕಷಾಯದ ಸದ್ಭಾವದಿಂದ ಮಲಿನತೆಯು ಹೋಗಲಿಲ್ಲ. ಆದುದರಿಂದ ಯಾವಾಗ ಸಕಲ ಕಷಾಯ ರಹಿತವಾಯಿತು, ಆಗ ಯಥಾಖ್ಯಾತ ನಾಮ ಪಡೆಯಿತು. ಹೇಗೆ ಚಾರಿತ್ರದ ಸ್ವರೂಪವಿತ್ತು ಹಾಗೆ ಪ್ರಕಟವಾಯಿತು.

**ಪ್ರಶ್ನೆ :-** ಶುಭೋಪಯೋಗರೂಪದ ಭಾವವು ಅದು ಚಾರಿತ್ರವಿದೆಯೋ ಅಥವಾ ಇಲ್ಲವೋ ?

**ಉತ್ತರ :-** ಶುಭೋಪಯೋಗವು ವಿಶುದ್ಧ ಪರಿಣಾಮಗಳಿಂದ ಆಗುತ್ತದೆ ಮತ್ತು ಮಂದಕಷಾಯಕ್ಕೆ ವಿಶುದ್ಧತೆಯೆಂದು ಹೇಳುತ್ತಾರೆ. ಆದುದರಿಂದ ಕಷಾಯದ ಹೀನತೆಯ ಕಾರಣವಾಗಿ ಕಥಂಚಿತ್ ಚಾರಿತ್ರವೆಂಬ ಹೆಸರು ಪಡೆಯುತ್ತದೆ.

**ಪ್ರಶ್ನೆ :-** ದೇವ-ಗುರು-ಶಾಸ್ತ್ರ, ಶೀಲ, ಸಂಯಮ, ತಪಸ್ಸು ಮೊದಲಾದವುಗಳಲ್ಲಿ ಅತ್ಯಂತ ರಾಗರೂಪವಾಗಿ ಪ್ರವರ್ತನೆ ಮಾಡುತ್ತಿದ್ದರೂ ಕೂಡ ಅದನ್ನು ಮಂದಕಷಾಯವೆಂದು ಹೇಗೆ ಹೇಳಲಾಗುತ್ತದೆ ?

**ಉತ್ತರ :-** ವಿಷಯ-ಕಷಾಯ ಮೊದಲಾದವುಗಳ ರಾಗದ ಅಪೇಕ್ಷೆಯಿಂದಂತೂ ಅದು ಮಂದಕಷಾಯವೇ

ಇದೆ. ಏಕೆಂದರೆ ಅವುಗಳರಾಗದಲ್ಲಿ ಕ್ರೋಧ, ಮಾನ, ಮಾಯೆಗಳಂತೂ ಇಲ್ಲವೇ ಇಲ್ಲ. ಅವುಗಳ ಪ್ರೀತಿ-ಭಾವದ ಅಪೇಕ್ಷೆಯಿಂದ ಲೋಭಕಷಾಯವಿದೆ. ಆದರೆ ಅದರಲ್ಲಿಕೂಡ ಯಾವ ಸಾಂಸಾರಿಕ ಪ್ರಯೋಜನವಿಲ್ಲದಿರುವುದರಿಂದ ಲೋಭಕಷಾಯದ್ದು ಕೂಡ ಮಂದತೆಯಿದೆ. ಅಲ್ಲಿ ಕೂಡ ಜ್ಞಾನೀ ಜೀವನು ರಾಗ-ಭಾವದಿಂದ ಪ್ರೇರಿತನಾಗುತ್ತ ಅಶುಭ ರಾಗವನ್ನು ಬಿಟ್ಟುಕೊಟ್ಟು ಶುಭ ರಾಗದಲ್ಲಿ ಪ್ರವರ್ತನೆ ಮಾಡುತ್ತಾನೆ. ಆದರೆ ಆ ಶುಭ ರಾಗವನ್ನು ಉಪಾದೇಯ ರೂಪದಿಂದಂತೂ ನಂಬುವುದಿಲ್ಲ, ಆದಾಗ್ಯೂ ಅದನ್ನು ತನ್ನ ಶುದ್ಧೋಪಯೋಗರೂಪವಾದ ಚಾರಿತ್ರದ ಸಲುವಾಗಿ ಮಲಿನತೆಯ ಕಾರಣವೆಂದೇ ತಿಳಿಯುತ್ತಾನೆ. ಅಶುಭೋಪಯೋಗದಲ್ಲಂತೂ ಕಷಾಯಗಳ ತೀವ್ರತೆಯಾಗಿರುವುದರಿಂದ ಅದಂತೂ ಯಾವುದೇ ಪ್ರಕಾರದಿಂದ ಚಾರಿತ್ರದ ಸಂಜ್ಞೆಗೆ ಪ್ರಾಪ್ತವಾಗುವ ಸಾಧ್ಯತೆಯಿಲ್ಲ.

ಈಗ ಚಾರಿತ್ರದ ಭೇದ ಹೇಳುತ್ತಾರೆ,-

ಹಿಂಸಾತೋಽನೃತವಚನಾತ್‌ಸ್ತೇಯಾದಬ್ರಹ್ಮತಃ ಪರಿಗ್ರಹತಃ ।
ಕಾತ್ಸ್ನೈರ್ಕದೇಶವಿರತೇಶ್ಚಾರಿತ್ರಂ ಜಾಯತೇ ದ್ವಿವಿಧಮ್ ॥೪೦॥

**ಅನ್ವಯಾರ್ಥ :-** [**ಹಿಂಸಾತಃ**] ಹಿಂಸೆಯಿಂದ [**ಅನೃತವಚನಾತ್**] ಅಸತ್ಯ ಭಾಷಣದಿಂದ [**ಸ್ತೇಯಾತ್**] ಚೋರಿಯಿಂದ [**ಅಬ್ರಹ್ಮತಃ**] ಕುಶೀಲದಿಂದಮತ್ತು [**ಪರಿಗ್ರಹತಃ**] ಪರಿಗ್ರಹದಿಂದ [**ಕಾತ್ಸ್ನೈರ್ಕದೇಶವಿರತೇ**] ಸರ್ವದೇಶ ಹಾಗೂ ಏಕದೇಶ ತ್ಯಾಗದಿಂದ ಆ [**ಚಾರಿತ್ರಂ**] ಚಾರಿತ್ರವು [**ದ್ವಿವಿಧಮ್**] ಎರಡು ಪ್ರಕಾರದ್ದು [**ಜಾಯತೇ**] ಇರುತ್ತದೆ.

**ಟೀಕೆ :- 'ಚಾರಿತ್ರಂ ದ್ವಿವಿಧಂ ಜಾಯತೇ'** - ಚಾರಿತ್ರವು ಎರಡು ಪ್ರಕಾರದಿಂದ ಉತ್ಪನ್ನವಾಗುತ್ತದೆ. ಹೇಗೆಂದರೆ **'ಹಿಂಸಾತಃ, ಅನೃತವಚನಾತ್, ಸ್ತೇಯಾತ್, ಅಬ್ರಹ್ಮತಃ, ಪರಿಗ್ರಹತಃ ಕಾತ್ಸ್ನೈರ್ಕದೇಶ ವಿರತೇಃ'** - ಹಿಂಸೆ, ಅಸತ್ಯ, ಕಳವು, ಕುಶೀಲ ಮತ್ತು ಪರಿಗ್ರಹದ ಸರ್ವದೇಶ ಹಾಗೂ ಏಕದೇಶ ತ್ಯಾಗದಿಂದ ಚಾರಿತ್ರದಲ್ಲಿ ಎರಡು ಭೇದಗಳಿವೆ.

**ಭಾವಾರ್ಥ :-** ಹಿಂಸೆ ಮೊದಲಾದವುಗಳ ವರ್ಣನೆಯನ್ನು ಮುಂದೆ ಮಾಡಲಾಗುತ್ತಿದೆ. ಅವುಗಳ ಸರ್ವಥಾ ತ್ಯಾಗವನ್ನು ಸಕಲಚಾರಿತ್ರವೆಂದು ಮತ್ತು ಏಕದೇಶತ್ಯಾಗವನ್ನು ದೇಶಚಾರಿತ್ರವೆಂದು ಹೇಳುತ್ತಾರೆ.

ಈಗ ಇವೆರಡೂ ಪ್ರಕಾರದ ಚಾರಿತ್ರಗಳ ಒಡೆಯನನ್ನು ತಿಳಿಸಿಕೊಡುತ್ತಾರೆ, -

ನಿರತಃ ಕಾತ್ಸ್ನರ್ಯನಿವೃತ್ತೌ ಭವತಿ ಯತಿಃ ಸಮಯಸಾರಭೂತೋಽಯಮ್ ।
ಯಾ ತ್ವೇಕದೇಶವಿರತಿರ್ನಿರತಸ್ತಸ್ಯಾಮುಪಾಸಕೋ ಭವತಿ ॥೪೧॥

**ಅನ್ವಯಾರ್ಥ :-** [**ಕಾತ್ಸ್ನರ್ಯನಿವೃತೌ**] ಸರ್ವಥಾ-ಸರ್ವದೇಶ ತ್ಯಾಗದಲ್ಲಿ [**ಲೀನ**] ಲೀನರಿರುವಂಥ [**ಅಯಂ ಯತಿಃ**] ಈ ಮುನಿಗಳು [**ಸಮಯಸಾರಭೂತಃ**] ಶುದ್ಧೋಪಯೋಗರೂಪದ ಸ್ವರೂಪದಲ್ಲಿ ಆಚರಣೆ ಮಾಡುವಂಥವರು [**ಭವತಿ**] ಇರುತ್ತಾರೆ. [**ಯಾ ತು ಏಕದೇಶವಿರತಿಃ**] ಮತ್ತು ಯಾರು ಏಕದೇಶವಿರತರಿದ್ದಾರೆ [**ತಸ್ಯಾಂ ನಿರತಃ**] ಅದರಲ್ಲಿ ತೊಡಗಿರುವಂಥವರು [**ಉಪಾಸಕ ಭವತಿ**] ಉಪಾಸಕರಿದ್ದಾರೆ ಎಂದರೆ ಶ್ರಾವಕರಿರುತ್ತಾರೆ.

**ಟೀಕೆ :- 'ಕಾತ್ಸ್ನರ್ಯನಿವೃತೌ ನಿರತಃ ಅಯಂ ಯತಿಃ ಭವತಿ'** - (ಯಾರ ಅಂತರಂಗದಲ್ಲಿ ಮೂರು ಕಷಾಯಗಳಿಂದ ರಹಿತವಾದ ಶುದ್ಧಿಯ ಬಲವಿದೆ ಮತ್ತು ) ಪಂಚ ಪಾಪಗಳ ಸರ್ವಥಾ-ಸರ್ವದೇಶ ತ್ಯಾಗದಲ್ಲಿ ತೊಡಗಿರುವಂಥ ಜೀವರುಗಳು ಅವರು ಮುನಿಗಳಿದ್ದಾರೆ. **'ಅಯಂ ಸಮಯಸಾರಭೂತಃ'** ಆ ಮುನಿಗಳು ಶುದ್ಧೋಪಯೋಗರೂಪ ಶುದ್ಧಾತ್ಮಸ್ವರೂಪರೇ ಇದ್ದಾರೆ. ಮುನಿಗಳಂತೂ ಶುದ್ಧೋಪಯೋಗಸ್ವರೂಪರಾಗಿಯೇ

ಇರುತ್ತಾರೆ, ಯಾವ ಶುಭೋಪಯೋಗರೂಪದ ಭಾವವಿದೆ ಅದು ಕೂಡ ಈ ಮುನಿ ಪದವಿಯಲ್ಲಿ ಕಲಂಕ ಸಮಾನವಿದೆ. **'ತು ಏಕದೇಶವಿರತಿಃ ಸತ್ಯಾಂ ನಿರತಃ ಉಪಾಸಕಃ ಭವತಿ'** - ಕಥಂಚಿತ್ ಆ ಪಂಚಪಾಪದ ಏಕದೇಶ ತ್ಯಾಗದಲ್ಲಿತೊಡಗಿರುವಂಥ ಜೀವರುಗಳು ಅವರು ಶ್ರಾವಕರಿದ್ದಾರೆ.

**ಭಾವಾರ್ಥ :-** ಸಕಲಚಾರಿತ್ರದ ಪ್ರಭುಗಳು ಮುನಿಗಳಿದ್ದರೆ ದೇಶ ಚಾರಿತ್ರದ ಪ್ರಭುಗಳು ಶ್ರಾವಕರಿದ್ದಾರೆಂಬುದು ತಾತ್ಪರ್ಯವಿದೆ.

ಪಂಚ ಪಾಪಗಳು ಒಂದು ಹಿಂಸೆಯ ಸ್ವರೂಪವಾಗಿಯೇ ಇವೆಯೆಂದು ಈಗ ಹೇಳುತ್ತಾರೆ, -

ಆತ್ಮ ಪರಿಣಾಮಹಿಂಸನಹೇತುತ್ವಾತ್ಸರ್ವಮೇವ ಹಿಂಸೈತತ್ ।
ಅನೃತವಚನಾದಿಕೇವಲಮುದಾಹೃತಂ ಶಿಷ್ಯಬೋಧಾಯ ॥೪೨॥

**ಅನ್ವಯಾರ್ಥ :- [ಆತ್ಮಪರಿಣಾಮಹಿಂಸನಹೇತುತ್ವಾತ್]** ಆತ್ಮನ ಶುದ್ಧೋಪಯೋಗರೂಪ ಪರಿಣಾಮಗಳ ಘಾತವಾಗುವ ಕಾರಣದಿಂದ **[ಏತತ್ಸರ್ವಂ]** ಇವೆಲ್ಲವೂ **[ಹಿಂಸೈವ]** ಹಿಂಸೆಯೇಇವೆ. **[ಅನೃತವಚನಾದಿ]** ಅಸತ್ಯವಚನ ಮೊದಲಾದವುಗಳ ಭೇದವು **[ಕೇವಲಂ]** ಕೇವಲ **[ಶಿಷ್ಯಬೋಧಾಯ]** ಶಿಷ್ಯರಿಗೆ ತಿಳಿಸಿಕೊಡುವ ಸಲುವಾಗಿ **[ಉದಾಹೃತಮ್]** ಉದಾಹರಣೆಯ ರೂಪದಲ್ಲಿ ಹೇಳಲ್ಪಟ್ಟಿವೆ.

**ಟೀಕೆ :- 'ಸರ್ವಂ ಏತತ್ ಹಿಂಸಾ ಏವ'** - ಈ ಸಮಸ್ತ ಐದೂ ಪಾಪಗಳು ಹಿಂಸೆಯೇ ಇವೆ. ಏಕೆಂದರೆ **'ಆತ್ಮ ಪರಿಣಾಮಹಿಂಸನಹೇತುತ್ವಾತ್'** - ಅವು ಆತ್ಮನ ಶುದ್ಧೋಪಯೋಗರೂಪ ಪರಿಣಾಮಗಳ ಘಾತದ ಕಾರಣಗಳಾಗಿರುವುದರಿಂದ ಅವೆಲ್ಲವೂ ಹಿಂಸೆಯೇ ಇವೆ.

**ಪ್ರಶ್ನೆ :-** ಒಂದು ವೇಳೆ ಹಿಂಸೆಗಳೇ ಇದ್ದರೆ ಅನ್ಯ ಭೇದಗಳನ್ನು ಏತಕ್ಕಾಗಿ ಹೇಳಲಾಗಿದೆ ?

**ಉತ್ತರ :- 'ಅನೃತವಚನಾದಿ ಕೇವಲಂ ಶಿಷ್ಯಬೋಧಾಯ ಉದಾಹೃತಮ್'** - ಅನೃತ ವಚನಾದಿಗಳ ಭೇದವನ್ನು ಕೇವಲ ಶಿಷ್ಯರಿಗೆ ತಿಳಿಸಿಕೊಡುವ ಸಲುವಾಗಿ ಉದಾಹಣೆಯ ರೂಪದಿಂದ ಹೇಳಲಾಗಿದೆ. ಯಾವ ಶಿಷ್ಯರು ಹಿಂಸೆಯ ವಿಶೇಷಗಳನ್ನು ತಿಳಿಯುವುದಿಲ್ಲ, ಅವರ ಸಲುವಾಗಿ ಹಿಂಸೆಯ ಉದಾಹರಣೆಯ ರೂಪದಲ್ಲಿ ಅನೃತ ವಚನಾದಿಗಳನ್ನು ಹೇಳಲಾಗಿದೆ. ಹಿಂಸೆಯ ಒಂದು ಭೇದವು ಅನೃತ ವಚನವಿದೆ ಮತ್ತು ಒಂದು ಭೇದವು ಕಳವು ಇದೆಯೆಂದು ಉದಾಹರಣೆಯ ರೂಪದಿಂದ ತಿಳಿಯುವುದು.

ಈಗ ಹಿಂಸೆಯ ಸ್ವರೂಪವನ್ನು ಹೇಳುತ್ತಾರೆ,

ಯತ್ಖಲುಕಷಾಯಯೋಗಾತ್ಪ್ರಾಣಾನಾಂ ದ್ರವ್ಯಭಾವರೂಪಾಣಾಮ್ ।
ವ್ಯಪರೋಪಣಸ್ಯ ಕರಣಂ ಸುನಿಶ್ಚಿತಾ ಭವತಿ ಸಾ ಹಿಂಸಾ ॥೪೩॥

**ಅನ್ವಯಾರ್ಥ :- [ಕಷಾಯಯೋಗಾತ್]** ಕಷಾಯರೂಪದಿಂದ ಪರಿಣಮಿಸಿದ ಮನ, ವಚನ, ಕಾಯದ ಯೋಗದಿಂದ **[ಯತ್]** ಯಾವುದು **[ದ್ರವ್ಯಭಾವರೂಪಾಣಾಮ್]** ದ್ರವ್ಯ ಮತ್ತು ಭಾವರೂಪವೆಂಬ ಎರಡು ಪ್ರಕಾರದ **[ಪ್ರಾಣಾನಾಂ]** ಪ್ರಾಣಗಳ **[ವ್ಯಪರೋಪಣಸ್ಯ ಕರಣಂ]** ವ್ಯಪರೋಪಣ ಮಾಡುವುದು - ಘಾತಮಾಡುವುದು **[ಸಾ]** ಅದು **[ಖಲು]** ನಿಶ್ಚಯದಿಂದ **[ಸುನಿಶ್ಚಿತಾ]** ಒಳ್ಳೆಯ ರೀತಿಯಿಂದ ನಿಶ್ಚತ ಮಾಡಿದ **[ಹಿಂಸಾ ಭವತಿ]** ಹಿಂಸೆಯಿದೆ.

**ಟೀಕೆ :- 'ಖಲು ಕಷಾಯಯೋಗಾತ್ ಯತ್ ದ್ರವ್ಯಭಾವರೂಪಾಣಾಂ ಪ್ರಾಣಾನಾಂ**

**ವ್ಯಪರೋಪಣಸ್ಯ - ಕರಣಂ ಸಾ ಸುನಿಶ್ಚಿತಾ ಹಿಂಸಾ ಭವತಿ** '- ನಿಶ್ಚಯದಿಂದ ಕಷಾಯರೂಪವಾಗಿ ಪರಿಣಮಿಸಿರುವ ಮನ, ವಚನ, ಕಾಯದ ಯೋಗದ ಕಾರಣದಿಂದ ದ್ರವ್ಯಭಾವರೂಪವಿರುವ ಎರಡು ಪ್ರಕಾರದ ಪ್ರಾಣಗಳನ್ನು ಬಾಧೆಗೊಳಿಸುವುದು-ಘಾತ ಮಾಡುವುದು ಅದು ನಿಶ್ಚಯದಿಂದ ಹಿಂಸೆಯಿದೆ.

**ಭಾವಾರ್ಥ :-** ತಮ್ಮ ಮನಸ್ಸಿನಲ್ಲಿ, ವಚನದಲ್ಲಿ ಅಥವಾ ಶರೀರದಲ್ಲಿ ಕ್ರೋಧ-ಕಷಾಯವು ಪ್ರಕಟವಾದ ಮೇಲೆ ಮೊದಲಂತೂ ತಮ್ಮ ಶುದ್ಧೋಪಯೋಗರೂಪ ಭಾವಪ್ರಾಣದ ಘಾತವಾಗುವುದು. ಈ ಹಿಂಸೆಯಂತೂ ತಮ್ಮ ಭಾವಪ್ರಾಣದ ವ್ಯಪರೋಪಣವಾಗುವ ಕಾರಣದಿಂದ ಮೊದಲೇ ಆಗಿ ಹೋಗುವುದು. ಎರಡನೇ ಹಿಂಸೆಯು ಬೇಕಾದರೆ ಆಗುವುದು ಅಥವಾ ಆಗದೆಯೂ ಇರುವುದು. ಅನಂತರವಿಲ್ಲಾದರೂ ತೀವ್ರ ಕಷಾಯರೂಪವಾದ ಮೇಲೆ ತಮ್ಮ ದೀರ್ಘಶ್ವಾಸ ಮೊದಲಾದವುಗಳಿಂದ ಅಥವಾ ಕೈ-ಕಾಲುಗಳಿಂದ ತನ್ನ ಅಂಗಗಳಿಗೆಪೀಡೆಯನ್ನುತ್ಪನ್ನ ಮಾಡುವುದು ಅಥವಾ ಅಪಘಾತ ಮಾಡಿಕೊಂಡು ಸತ್ತು ಹೋದರೆ ಇದರಲ್ಲಿ ತನ್ನ ದ್ರವ್ಯಪ್ರಾಣದ ಘಾತರೂಪವಾದ ಹಿಂಸೆಯಾಗುವುದು. ಅಥವಾ ಕಷಾಯದಿಂದ ಅನ್ಯ ಜೀವಗಳಿಗೆ ಕುವಚನ ಆಡುವುದು, ಮರ್ಮಭೇದಿಯಾದ ಹಾಸ್ಯ ಮಾಡುವುದು, ಅಥವಾ ಇಂಥ ಕಾರ್ಯ ಮಾಡುವುದರಿಂದ ಇತರರ ಅಂತರಂಗವು ಪೀಡಿತವಾಗಿ ಕಷಾಯದ ಪರಿಣಾಮವಾಗಿ ಹೋದರೆ ಪರದ ಭಾವಪ್ರಾಣದ ವ್ಯಪರೋಪಣದಿಂದ ಹಿಂಸೆಯಾಗುತ್ತದೆ. ಎಲ್ಲಿ ಕಷಾಯದ ವಶೀಭೂತವಾಗಿ ಪ್ರಮಾದಿಯಾಗುವನು, ಅನ್ಯ ಜೀವರುಗಳ ಶರೀರಕ್ಕೆ ಪೀಡೆಯನ್ನುಂಟು ಮಾಡುವನು, ಅಥವಾ ಪ್ರಾಣದ ನಾಶ ಮಾಡುವನು ಅಲ್ಲಿ ಇತರರ ದ್ರವ್ಯಪ್ರಾಣದ ಘಾತದಿಂದ ಹಿಂಸೆಯಾಗುವುದು. ಈ ಪ್ರಕಾರ ಹಿಂಸೆಯ ಸ್ವರೂಪವನ್ನು ಹೇಳಲಾಯಿತು.

ಈಗ ನಿಶ್ಚಯದಿಂದ ಹಿಂಸೆ ಮತ್ತು ಅಹಿಂಸೆಯ ವರ್ಣನೆ ಮಾಡುತ್ತಾರೆ, -

ಅಪ್ರಾದುರ್ಭಾವಃ ಖಲು ರಾಗಾದೀನಾಂ ಭವತ್ಯಹಿಂಸೇತಿ ।
ತೇಷಾಮೇವೋತ್ಪತ್ತಿ ಹಿಂಸೇತಿ ಜಿನಾಗಮಸ್ಯ ಸಂಕ್ಷೇಪಃ ॥೪೪॥

**ಅನ್ವಯಾರ್ಥ :- [ಖಲು]** ನಿಶ್ಚಯದಿಂದ **[ರಾಗಾದೀನಾಂ]** ರಾಗ ಮೊದಲಾದ ಭಾವಗಳ **[ಅಪ್ರದುರ್ಭಾವಃ ಇತಿ]** ಪ್ರಕಟವಾಗದಿರುವಿಕೆಯೇ **[ಅಹಿಂಸಾ ಭವತಿ]** ಅಹಿಂಸೆಯಿದೆ, ಮತ್ತು **[ತೇಷಾಮೇವ]** ಆ ರಾಗ ಮೊದಲಾದ ಭಾವಗಳ **[ಉತ್ಪತ್ತಿಃ]** ಉತ್ಪತ್ತಿಯಾಗುವುದೇ **[ಹಿಂಸಾ ಭವತಿ]** ಹಿಂಸೆಯಿದೆ **[ಇತಿ]** ಈ ಪ್ರಕಾರ **[ಜಿನಾಗಮಸ್ಯ]** ಜೈನ ಸಿದ್ಧಾಂತದ **[ಸಂಕ್ಷೇಪಃ]** ಸಾರವಿದೆ.

**ಟೀಕೆ :- 'ಖಲು ರಾಗಾದೀನಾಂ ಅಪ್ರಾದುರ್ಭಾವಃ ಇತಿ ಅಹಿಂಸಾ ಭವತಿ'** - ನಿಶ್ಚಯದಿಂದ ರಾಗ ಮೊದಲಾದ ಭಾವಗಳ ಉತ್ಪತ್ತಿಯಾಗದಿರುವುದೇ ಅಹಿಂಸೆಯಿದೆ.

**ಭಾವಾರ್ಥ :-** ತಮ್ಮ ಶುದ್ಧೋಪಯೋಗರೂಪಪ್ರಾಣಗಳ ಘಾತವು ರಾಗ ಮೊದಲಾದ ಭಾವಗಳಿಂದ ಆಗುತ್ತದೆ. ಆದುದರಿಂದ ರಾಗಾದಿ ಭಾವಗಳ ಅಭಾವವಾಗುವುದೇ ಅಹಿಂಸೆಯಿದೆ. ಮೊದಲಾದ ಶಬ್ದದಿಂದ ದ್ವೇಷ, ಮೋಹ,ಕಾಮ, ಕ್ರೋಧ, ಮಾನ, ಮಾಯೆ, ಲೋಭ, ಹಾಸ್ಯ, ಶೋಕ, ಜುಗುಪ್ಸೆ, ಪ್ರಮಾದ ಮೊದಲಾದ ಸಮಸ್ತ ವಿಭಾವ ಭಾವಗಳೆಂದು ತಿಳಿದುಕೊಳ್ಳಬೇಕು. ಇವುಗಳ ಲಕ್ಷಣ ಹೇಳುತ್ತಾರೆ. ತಮಗೆ ಯಾವುದಾದರೂ ಪದಾರ್ಥವು ಇಷ್ಟವೆಂದು ತಿಳಿದುಕೊಂಡು ಅದರಕುರಿತು ಪ್ರೀತಿರೂಪದ ಪರಿಣಾಮವಾಗುವುದು ರಾಗವಿದೆ, ತಮಗೆ ಅನಿಷ್ಟವೆಂದು ಅಪ್ರೀತಿರೂಪದ ಪರಿಣಾಮವಾಗುವುದು ದ್ವೇಷವಿದೆ, ಪರದ್ರವ್ಯದಲ್ಲಿ ಮಮತೆಯರೂಪದ ಪರಿಣಾಮವಾಗುವುದು ಮೋಹವಿದೆ, ಮೈಥುನರೂಪದ ಪರಿಣಾಮವು ಕಾಮವಿದೆ ಇವನು ಅನುಚಿತ ಮಾಡಿದನೆಂದು ತಿಳಿದುಕೊಂಡು ಇತರರಿಗೆ ದುಃಖ ಕೊಡುವ ಪರಿಣಾಮವು ಕ್ರೋಧವಿದೆ, ಇತರರಿಂದ ತನ್ನನ್ನು ದೊಡ್ಡವನೆಂದು ಮನ್ನಿಸುವುದು ಮಾನವಿದೆ,

ಮನ-ವಚನ-ಕಾಯದಲ್ಲಿ ಏಕತೆಯ ಅಭಾವವು ಮಾಯೆಯಿದೆ, ಪರದ್ರವ್ಯದಲ್ಲಿ ಸಂಬಂಧ ಮಾಡುವ ಇಚ್ಛೆಯರೂಪದ ಪರಿಣಾಮವು ಲೋಭವಿದೆ, ಒಳಿತು-ಕೆಡಕು ನೋಡಿ ವಿಕಸಿತರೂಪದ ಪರಿಣಾಮವು ಹಾಸ್ಯವಿದೆ, ತಮಗೆದುಃಖದಾಯಕವಿದೆಯೆಂದು ತಿಳಿದುಕೊಂಡು ಹೆದರಿಕೆಯ ಪರಿಣಾಮವು ಭಯವಿದೆ, ತಮ್ಮ ಇಷ್ಟದ ಅಭಾವವಾದ ಮೇಲೆ ಆರ್ತರೂಪದ ಪರಿಣಾಮವು ಶೋಕವಿದೆ, ಗ್ಲಾನಿರೂಪದ ಪರಿಣಾಮವು ಜುಗುಪ್ಸೆಯಿದೆ, ಕಲ್ಯಾಣಕರವಾದ ಕಾರ್ಯದಲ್ಲಿ ಅನಾದರ ಮಾಡುವುದು ಪ್ರಮಾದವಿದೆ. ಇವೇ ಮೊದಲಾದ ಸಮಸ್ತ ವಿಭಾವ ಭಾವಗಳು ಹಿಂಸೆಯ ಪರ್ಯಾಯಗಳಿವೆ. ಇವುಗಳ ಆಗದಿರುವಿಕೆಯೇ ಅಹಿಂಸೆಯಿದೆ. **'ತೇಷಾಮೇವ ಉತ್ಪತ್ತಿಃ ಹಿಂಸಾ'** - ಆ ರಾಗಾದಿ ಭಾವಗಳ ಉತ್ಪತ್ತಿಯಾಗುವಿಕೆಯೇ ಹಿಂಸೆಯಿದೆ. **'ಇತಿ ಜಿನಾಗಮಸ್ಯ ಸಂಕ್ಷೇಪಃ'** - ಹೀಗೆ ಜೈನ ಸಿದ್ಧಾಂತದ ರಹಸ್ಯವಿದೆ.

**ಭಾವಾರ್ಥ :-** ಜೈನ ಸಿದ್ಧಾಂತದ ವಿಸ್ತಾರವಂತೂ ಬಹಳಷ್ಟು ಇದೆ, ಆದರೆ ಅದೆಲ್ಲದರ ರಹಸ್ಯವು ಸಂಕ್ಷೇಪದಲ್ಲಿ **'ಧರ್ಮದ ಲಕ್ಷಣವು ಅಹಿಂಸೆ'** ಯೆಂದಿಷ್ಟೇ ಇದೆ. ಮತ್ತು ರಾಗಾದಿ ಭಾವಗಳ ಅಭಾವವಾಗುವುದೇ ಅಹಿಂಸೆಯಿದೆ. ಆದುದರಿಂದ ಹೇಗೆ ಸಾಧ್ಯವಿದೆಯೋ ಹಾಗೆ ಎಷ್ಟು ಸಾಧ್ಯವಿದೆಯೋ ಅಷ್ಟು (ಸ್ವಸನ್ಮುಖತೆಯ ಮೂಲಕ) ರಾಗಾದಿ ಭಾವಗಳ ನಾಶ ಮಾಡಬೇಕಾಗುವುದು. ಇದನ್ನೇ ಅನ್ಯ ಗ್ರಂಥದಲ್ಲಿ ಹೇಳುತ್ತಾರೆ - **ರಾಗಾದೀಣಾಮಣುಪ್ಪಾ ಅಹಿಂಸಾ ಗತ್ತತಿ ದೇಸಿದಂ ಸಮಏ ತೇ ಸಿಂಚೇ ದುಪ್ಪತ್ತೀ ಹಿಂಸೇತಿ ಜಿಣೇಹಿ ಣಿದ್ದಿಟ್ಠಂ ।**

**ಪ್ರಶ್ನೆ :-** ಪರಜೀವದ ಪ್ರಾಣಗಳಿಗೆ ಪೀಡೆಯನ್ನುಂಟು ಮಾಡುವುದನ್ನು ಹಿಂಸೆಯ ಲಕ್ಷಣವೆಂದೇಕೆ ಹೇಳಲಿಲ್ಲ?

**ಉತ್ತರ :-** ಈ ಲಕ್ಷಣದಲ್ಲಿ ಅತಿವ್ಯಾಪ್ತಿ ಮತ್ತು ಅವ್ಯಾಪ್ತಿ ಇವೆರಡೂ ದೋಷಗಳು ತಗಲುತ್ತವೆ.

ಈಗ ಮೊದಲು ಅತಿವ್ಯಾಪ್ತಿ ದೋಷವನ್ನು ತಿಳಿಸಿಕೊಡುತ್ತಾರೆ, -

ಯುಕ್ತಾಚರಣಸ್ಯ ಸತೋ ರಾಗಾದ್ಯಾವೇಶಮಂತರೇಣಾಪಿ ।
ನ ಹಿ ಭವತಿ ಜಾತು ಹಿಂಸಾ ಪ್ರಾಣವ್ಯಪರೋಪಣಾದೇವ ।।೪೫।।

**ಅನ್ವಯಾರ್ಥ :- [ಅಪಿ]** ಮತ್ತು **[ಯುಕ್ತಾಚರಣಸ್ಯ]** ಯೋಗ್ಯ ಆಚರಣೆಯುಳ್ಳ **[ಸಂತಃ]** ಸಾಧು ಪುರುಷರಿಗೆ **[ರಾಗಾದ್ಯಾವೇಶಮಂತರೇಣ]** ರಾಗಾದಿಭಾವಗಳಿಲ್ಲದೆ **[ಪ್ರಾಣವ್ಯಪರೋಪಣಾತ್]** ಕೇವಲಪ್ರಾಣ ಪೀಡೆಯಿಂದ **[ಜಾತು ಏವ]** ಎಂದೂ **[ಹಿಂಸಾ ನ ಹಿ ಭವತಿ]** ಹಿಂಸೆಯಾಗುವುದಿಲ್ಲ. ಗಮನಾದಿಗಳಲ್ಲಿ

**ಟೀಕೆ :- 'ಅಪಿ ಯುಕ್ತಾಚರಣಸ್ಯ ಸತಃರಾಗಾದ್ಯಾವೇಶಮಂತರೇಣ ಪ್ರಾಣವ್ಯಪರೋಪಣಾತ್ ಏವ ಜಾತು ಹಿಂಸಾ ನಹಿ ಭವತಿ'** - ನಿಶ್ಚಯದಿಂದ ಯಾರ ಆಚರಣೆಯು ಯೋಗ್ಯ ಪ್ರಯತ್ನಪೂರ್ವಕವಾಗಿ ಇರುವಂಥ ಸಾಧುಪುರುಷರಿಗೆ ರಾಗಾದಿ ಭಾವಗಳ ಪ್ರವೇಶವಿಲ್ಲದೆ, ಕೇವಲ ಪರಜೀವದ ಪ್ರಾಣ ಪೀಡನ ಮಾಡುವ ಮಾತ್ರದಿಂದಲೇ ಎಂದೂ ಹಿಂಸೆಯಾಗುವುದಿಲ್ಲ.

**ಭಾವಾರ್ಥ :-** ಮಹಾಪುರುಷರು ಧ್ಯಾನದಲ್ಲಿಲೀನರಿದ್ದಾರೆ ಅಥವಾ ಗಮನಾದಿಗಳಲ್ಲಿ ಸಾವಧಾನತೆಯಿಂದ ಯತ್ನಪೂರ್ವಕ ಪ್ರವರ್ತನೆ ಮಾಡುತ್ತಿದ್ದಾರೆ ಮತ್ತು ಎಂದಾದರೂ ಇವರ ಶರೀರದ ಸಂಬಂಧದಿಂದ ಯಾವುದೇ ಜೀವದ ಪ್ರಾಣಗಳಿಗೆ ಪೀಡೆಯನ್ನುಂಟು ಮಾಡಿದರೂ ಕೂಡ ಇವರಿಗೆ ಹಿಂಸೆಯ ದೋಷವಿಲ್ಲ. ಏಕೆಂದರೆ ಇವರ ಪರಿಣಾಮದಲ್ಲಿ ಕಷಾಯವಿಲ್ಲದಿರುವುದರಿಂದ ಪರ ಜೀವದ ಪ್ರಾಣಗಳಿಗೆ ಪೀಡೆಯಾದರೂ ಕೂಡ ಅದು ಹಿಂಸೆಯೆಂದು ಕರೆಸಿಕೊಳ್ಳುವುದಿಲ್ಲ. ಆದುದರಿಂದ ಅತಿವ್ಯಾಪ್ತಿಯ ದೋಷವು ತಗಲುತ್ತದೆ.

ಈಗ ಅವ್ಯಾಪ್ತಿಯ ದೋಷವನ್ನು ತಿಳಿಸಿಕೊಡುತ್ತಾರೆ, -

**ವ್ಯುತ್ಥಾನಾವಸ್ಥಾಯಾಂ ರಾಗಾದೀನಾಂ ವಶಪ್ರವೃತ್ತಾಯಾಮ್ ।**
**ಮ್ರಿಯತಾಂ ಜೀವೋ ಮಾ ವಾ ಧಾವತ್ಯಗ್ರೇ ಧ್ರುವಂ ಹಿಂಸಾ ॥೪೬॥**

**ಅನ್ವಯಾರ್ಥ ಃ-** **[ರಾಗಾದೀನಾಂ]**ರಾಗಾದಿ ಭಾವಗಳ **[ವಶಪ್ರವೃತ್ತಾಯಾವ್]** ವಶವರ್ತಿಯಾಗಿ ಪ್ರವರ್ತಿಸುತ್ತಿರುವ **[ವ್ಯುತ್ಥಾನಾವಸ್ಥಾಯಾಂ]** ಅಯತ್ನಾಚಾರರೂಪದ ಪ್ರಮಾದ ಅವಸ್ಥೆಯಲ್ಲಿ **[ಜೀವಃ]** ಜೀವವು **[ಮ್ರಿಯತಾಂ]** ಸಾಯಲಿ **[ವಾ]** ಅಥವಾ **[ಮಾ'ಮ್ರಿಯತಾಂ']** ಸಾಯದಿರಲಿ **[ಹಿಂಸಾ]** ಹಿಂಸೆಯಂತೂ **[ಧ್ರುವ]** ನಿಶ್ಚಯದಿಂದ **[ಅಗ್ರೇ]** ಮುಂದೆ ಮುಂದೆಯೇ **[ಧಾವತಿ]**ಧಾವಿಸುತ್ತದೆ.

**ಟೀಕೆ ಃ- 'ರಾಗಾದೀನಾಂ ವಶಪ್ರವೃತ್ತಾಯಾಂ ವ್ಯುತ್ಥಾನಾವಸ್ಥಾಯಾಂ ಜೀವಃ ಮ್ರಿಯತಾಂ ವಾ ಮಾ ಮ್ರಿಯಾತಾಂ ಹಿಂಸಾ ಅಗ್ರೇ ಧ್ರುವಂ ಧಾವತಿ'** - ರಾಗ ಮೊದಲಾದ ಪ್ರಮಾದ ಭಾವಗಳ ವಶವರ್ತಿಯಾಗಿ ಏಳುವ-ಕೂಡ್ರುವ ಮೊದಲಾದ ರೂಪದ ಕ್ರಿಯೆಗಳಲ್ಲಿ ಜೀವವು ಸಾಯಲಿ ಅಥವಾ ಸಾಯದಿರಲಿ, ಆದರೆ ಹಿಂಸೆಯಂತೂ ನಿಶ್ಚಯದಿಂದ ಮುಂದೆ ಧಾವಿಸುತ್ತದೆ.

**ಭಾವಾರ್ಥ ಃ-** ಪ್ರಮಾದಿಯಾದ ಜೀವನು ಕಷಾಯದ ವಶೀಭೂತನಾಗಿ ಗಮನಾದಿ ಕ್ರಿಯೆಗಳಲ್ಲಿ ಯತ್ನರೂಪವಾಗಿ ಪ್ರವರ್ತನೆ ಮಾಡದಿದ್ದರೆ ಅಥವಾ ಏಳುವಾಗ -ಕೂಡ್ರುವಾಗ ಕ್ರೋಧಾದಿಗಳ ಭಾವರೂಪವಾಗಿ ಪರಿಣಮನ ಮಾಡುತ್ತಿದ್ದರೆ ಅಲ್ಲಿ ಜೀವವು ಬೇಕಾದರೆ ಸಾಯಲಿ ಅಥವಾ ಸಾಯದಿರಲಿ, ಆದರೆ ಅವನಿಗಂತೂ ಕಷಾಯ ಭಾವದಿಂದ ಅವಶ್ಯವಾಗಿ ಹಿಂಸೆಯ ದೋಷವು ತಗಲುತ್ತದೆ ಎಂದರೆ ಪರಜೀವದ ಪ್ರಾಣಕ್ಕೆ ಪೀಡೆಯಾಗದಿದ್ದರೂ ಕೂಡ ಪ್ರಮಾದದ ಸದ್ಭಾವದಿಂದ ಅದನ್ನು ಹಿಂಸೆಯೆಂದು ಹೇಳಲಾಗುತ್ತದೆ. ಆದುದರಿಂದ ಆ ಲಕ್ಷಣದಲ್ಲಿ ಅವ್ಯಾಪ್ತಿಯ ದೋಷವು ತಗಲುತ್ತದೆ.

ಹಿಂಸೆಯ ಅರ್ಥವಂತೂ ಘಾತ ಮಾಡುವುದಿದೆ, ಆದರೆ ಜೀವದ/ಪ್ರಾಣದ ಘಾತ ಮಾಡಿದಲ್ಲದೆ ಅದನ್ನು ಹಿಂಸೆಯೆಂದು ಹೇಗೆ ಹೇಳಲಾಗುತ್ತದೆಯೆಂಬ ಪ್ರಶ್ನೆಯ ಉತ್ತರ ಸ್ವರೂಪವಾಗಿ ಈಗ ಗಾಥೆ ಹೇಳುತ್ತಾರೆ.

**ಯಸ್ಮಾತ್ಸಕಷಾಯಃ ಸನ್ ಹಂತ್ಯಾತ್ಮಾ ಪ್ರಥಮಮಾತ್ಮನಾತ್ಮಾನಮ್ ।**
**ಪಶ್ಚಾಜ್ಜಾಯೇತ ನ ವಾ ಹಿಂಸಾ ಪ್ರಾಣ್ಯಂತರಾಣಾಂ ತು ॥೪೭॥**

**ಅನ್ವಯಾರ್ಥ ಃ-** **[ಯಸ್ಮಾತ್]** ಏಕೆಂದರೆ **[ಆತ್ಮಾ ]** ಜೀವನು **[ಸಕಷಾಯಃ ಸನ್]** ಕಷಾಯಭಾವಗಳಿಂದ ಯುಕ್ತವಾಗುವುದರಿಂದ **[ಪ್ರಥಮಂ]** ಮೊದಲು **[ಆತ್ಮನಾ]** ತನ್ನಿಂದಲೇ **[ಆತ್ಮಾನಂ]** ತನ್ನನ್ನು **[ಹಂತಿ]** ಘಾತ ಮಾಡಿಕೊಳ್ಳುತ್ತಾನೆ. **[ತು]** ಮತ್ತು **[ಪಶ್ಚಾತ್]** ಅನಂತರ ಬೇಕಾದರೆ **[ಪ್ರಾಣ್ಯಂತರಾಣಾಂ]** ಇತರಜೀವಗಳ **[ಹಿಂಸಾ]** ಹಿಂಸೆಯು **[ಜಾಯೇತ]** ಆಗುವುದು **[ವಾ]** ಅಥವಾ **[ನ]** ಆಗದೆ ಇರುವುದು.

**ಟೀಕೆ ಃ- 'ಯಸ್ಮಾತ್ ಸಕಷಾಯಃ ಸನ್ ಆತ್ಮಾ ಪ್ರಥಮಂ ಆತ್ಮನಾ ಆತ್ಮಾನಂ ಹಂತಿ ತು ಪಶ್ಚಾತ್ ಪ್ರಾಣ್ಯಂತರಾಣಾಂ ಹಿಂಸಾ ಜಾಯೇತ ವಾ ನ ಜಾಯೇತ'** - ಏಕೆಂದರೆ ಕಷಾಯ ಭಾವಗಳಿಂದ ಯುಕ್ತನಾದ ಆತ್ಮನು ಮೊದಲು ತನ್ನ ಮೂಲಕವಾಗಿಯೇ ತನ್ನ ಘಾತ ಮಾಡಿಕೊಳ್ಳುತ್ತಾನೆ, ಅನಂತರ ಅನ್ಯ ಜೀವರುಗಳ ಘಾತವಾಗುವುದು ಅಥವಾ ಆಗದೆಯೂ ಇರುವುದು.

**ಭಾವಾರ್ಥ ಃ-** ಘಾತವಾಗುವುದನ್ನೇ ಹಿಂಸೆಯೆಂದು ಹೇಳುತ್ತಾರೆ, ಆದರೆ ಘಾತವು ಎರಡು ಪ್ರಕಾರದ್ದಿರುತ್ತದೆ. ಅದರಲ್ಲಿ ಒಂದು ಆತ್ಮಘಾತವಿದ್ದರೆ ಇನ್ನೊಂದು ಪರಘಾತವಿದೆ. ಯಾವಾಗ ಈ ಆತ್ಮನು ಕಷಾಯ ಭಾವಗಳಿಂದ ಪರಿಣಮನ ಮಾಡಿ ತನ್ನ ಕೆಡಕು ಮಾಡಿಕೊಳ್ಳುತ್ತಾನೆ. ಆಗ ಆತ್ಮ ಘಾತವಂತೂ ಮೊದಲೇ ಆಗಿ ಹೋಯಿತು. ಅನಂತರ

ಅಲ್ಲಿ ಅನ್ಯ ಜೀವದ ಆಯುಷ್ಯವು ಪೂರ್ಣವಾಗಿ ಹೋಗಿದ್ದರೆ ಅಥವಾ ಪಾಪದ ಉದಯವಾಗಿದ್ದರೆ ಅದರದೂ ಘಾತವಾಗಿ ಹೋಗುವುದು. ನೀನು ಅದರ ಘಾತವನ್ನಂತೂ ಮಾಡುವ ಸಾಧ್ಯತೆಯಿಲ್ಲ. ಏಕೆಂದರೆ ಅದರ ಘಾತವಂತೂ ಅದರ ಕರ್ಮಾಧೀನವಿದೆ. ಇವನಿಗಂತೂ ತನ್ನ ಭಾವಗಳ ದೋಷವಿದೆ. ಈ ಪ್ರಕಾರ ಪ್ರಮಾದ ಸಹಿತವಿರುವ ಯೋಗದಲ್ಲಿ ಆತ್ಮಘಾತದ ಅಪೇಕ್ಷೆಯಿಂದಂತೂ ಹಿಂಸೆಯು ಆಗಿಯೇ ಹೋಯಿತು.

ಈಗ ಪರಘಾತದ ಅಪೇಕ್ಷೆಯಿಂದ ಕೂಡ ಹಿಂಸೆಯ ಸದ್ಭಾವ ಹೇಳುತ್ತಾರೆ, -

**ಹಿಂಸಾಯಾ ಅವಿರಮಣಂ ಹಿಂಸಾ ಪರಿಣಮನಪಿ ಭವತಿ ಹಿಂಸಾ ।**
**ತಸ್ಮಾತ್ಪ್ರಮತ್ತಯೋಗೇ ಪ್ರಾಣವ್ಯಪರೋಪಣಂ ನಿತ್ಯಮ್ ॥೪೮॥**

**ಅನ್ವಯಾರ್ಥ :-** **[ಹಿಂಸಾಯಾಃ]** ಹಿಂಸೆಯಿಂದ **[ಅವಿರಮಣಂ]** ವಿರಕ್ತವಾಗದಿರುವುದರಿಂದ **[ಹಿಂಸಾ]** ಹಿಂಸೆಯಾಗುತ್ತದೆ ಮತ್ತು **[ಹಿಂಸಾಪರಿಣಮನಂ]** ಹಿಂಸಾರೂಪವಾಗಿ ಪರಿಣಮನ ಮಾಡುವುದರಿಂದ **[ಅಪಿ]** ಕೂಡ **[ಹಿಂಸಾ]** ಹಿಂಸೆಯು **[ಭವತಿ]** ಆಗುತ್ತದೆ **[ತಸ್ಮಾತ್]** ಆದುದರಿಂದ **[ಪ್ರಮತ್ತಯೋಗೇ]** ಪ್ರಮಾದದ ಯೋಗದಲ್ಲಿ **[ನಿತ್ಯಂ]** ಯಾವಾಗಲೂ **[ಪ್ರಾಣವ್ಯಪರೋಪಣಂ]** ಪ್ರಾಣಘಾತದ ಸದ್ಭಾವವಿದೆ.

**ಟೀಕೆ :- 'ಹಿಂಸಾಯಾ ಅವಿರಮಣಂ ಹಿಂಸಾ ಪರಿಣಮನಂ ಅಪಿ ಭವತಿ ಹಿಂಸಾ'** - ಹಿಂಸೆಯ ತ್ಯಾಗ ಭಾವದ ಅಭಾವವು ಅದು ಹಿಂಸೆಯಿದೆ ಮತ್ತು ಹಿಂಸಾರೂಪವಾಗಿ ಪರಿಣಮನ ಮಾಡುವುದರಿಂದಲೂ ಹಿಂಸೆಯಾಗುತ್ತದೆ.

**ಭಾವಾರ್ಥ :-** ಪರಜೀವದ ಘಾತರೂಪವಾದ ಹಿಂಸೆಯು ಎರಡು ಪ್ರಕಾರದ್ದಿದೆ. ಅದರಲ್ಲಿ ಒಂದು ಅವಿರಮಣರೂಪವಿದ್ದರೆ ಇನ್ನೊಂದು ಪರಿಣಮನರೂಪವಿದೆ.

**೧. ಅವಿರಮಣರೂಪ ಹಿಂಸೆ :-** ಯಾವ ಸಮಯದಲ್ಲಿ ಜೀವನು ಪರಜೀವದ ಘಾತದಲ್ಲಂತೂ ಪ್ರವರ್ತನೆ ಮಾಡುತ್ತಿಲ್ಲ, ಬೇರೆ ಯಾವುದೇ ಕಾರ್ಯದಲ್ಲಿ ಪ್ರವರ್ತಿಸುತ್ತಿದ್ದಾನೆ, ಆದರೆ ಹಿಂಸೆಯ ತ್ಯಾಗ ಮಾಡಿರುವುದಿಲ್ಲ. ಇದರ ಉದಾಹರಣೆ - ಯಾವ ಪ್ರಕಾರ ಒಬ್ಬನಿಗೆ ಹಸಿರು ತರಕಾರಿಯ ತ್ಯಾಗವಿಲ್ಲ ಮತ್ತು ಅವನು ಕೆಲವೊಂದು ಸಮಯದಲ್ಲಿ ಹಸಿರು ತರಕಾರಿ ಭಕ್ಷಣವನ್ನು ಮಾಡುವುದಿಲ್ಲ. ಅದೇ ಪ್ರಕಾರ ಓರ್ವನಿಗೆ ಹಿಂಸೆಯ ತ್ಯಾಗವಂತೂ ಇಲ್ಲ ಮತ್ತು ಅವನು ಕೆಲವೊಂದು ಸಮಯದಲ್ಲಿ ಹಿಂಸಾರೂಪವಾಗಿ ಪ್ರವರ್ತನೆಯನ್ನೂ ಮಾಡುವುದಿಲ್ಲ ; ಆದರೆ ಅಂತರಂಗದಲ್ಲಿ ಹಿಂಸೆ ಮಾಡುವ ಅಸ್ತಿತ್ವಭಾವದ ನಾಶ ಮಾಡಿಲ್ಲ, ಇದನ್ನು ಅವಿರಮಣರೂಪ ಹಿಂಸೆಯೆಂದು ಹೇಳುತ್ತಾರೆ.

**೨. ಪರಿಣಮನರೂಪ ಹಿಂಸೆ :-** ಯಾವ ಸಮಯದಲ್ಲಿ ಜೀವನು ಪರಜೀವದ ಘಾತದಲ್ಲಿ ಮನಸ್ಸಿನಿಂದ ವಚನದಿಂದ ಅಥವಾ ಕಾಯದಿಂದ ಪ್ರವರ್ತನೆ ಮಾಡುವನು, ಆಗ ಅದನ್ನು ಪರಿಣಮನರೂಪ ಹಿಂಸೆಯೆಂದು ಹೇಳುತ್ತಾರೆ. ಇವೆರಡು ಹಿಂಸೆಯ ಭೇದ ಹೇಳಿದೆ. ಇವೆರಡೂ ಭೇದಗಳಲ್ಲಿ ಪ್ರಮಾದ ಸಹಿತವಾದ ಯೋಗದ ಅಸ್ತಿತ್ವವಿದೆ. **'ತಸ್ಮಾತ್ ಪ್ರಮತ್ತಯೋಗೇ ನಿತ್ಯಂ ಪ್ರಾಣವ್ಯಪರೋಪಣಂ'** - ಆದುದರಿಂದ ಪ್ರಮಾದ ಸಹಿತವಿರುವ ಯೋಗದಲ್ಲಿ ಯಾವಾಗಲೂ ಪರಜೀವದ ಅಪೇಕ್ಷೆಯಿಂದ ಕೂಡ ಪ್ರಾಣಘಾತದ ಸದ್ಭಾವ ಬರುವುದು. ಇದರ ಅಭಾವವಂತೂ ಈ ಜೀವನು ಯಾವಾಗ ಪರಹಿಂಸೆಯ ತ್ಯಾಗ ಮಾಡಿ ಪ್ರಮಾದರೂಪದಿಂದ ಪರಿಣಮನ ಮಾಡದಿರುವಾಗಲೇ ಆಗುವ ಸಾಧ್ಯತೆಯಿದೆ. ಎಲ್ಲಿಯವರೆಗೆ ಪ್ರಮಾದವು ಕಂಡು ಬರುತ್ತದೆ ಅಲ್ಲಿಯವರೆಗೆ ಹಿಂಸೆಯ ಅಭಾವವಂತೂ ಯಾವುದೇ ಪ್ರಕಾರದಿಂದ ಆಗುವ ಸಾಧ್ಯತೆಯಿಲ್ಲ.

ಆ ಪ್ರಮಾದರೂಪವಾದ ತಮ್ಮ ಪರಿಣಾಮಗಳಿಂದಲೇ ಹಿಂಸೆಯು ಉತ್ಪನ್ನವಾಗುತ್ತಿದ್ದರೆ ಬಾಹ್ಯ ಪರಿಗ್ರಹಾದಿಗಳ ತ್ಯಾಗವನ್ನು ಏತಕ್ಕಾಗಿ ಮಾಡಿಸಲಾಗುತ್ತದೆಯೆಂಬ ಪ್ರಶ್ನೆಯ ಉತ್ತರ ರೂಪವಾಗಿ ಈಗ ಗಾಥೆ ಹೇಳುತ್ತಾರೆ, -

**ಸೂಕ್ಷ್ಮಾಪಿ ನ ಖಲು ಹಿಂಸಾ ಪರವಸ್ತುನಿಬಂಧನಾ ಭವತಿ ಪುಂಸಃ ।**
**ಹಿಂಸಾಯತನನಿವೃತ್ತಿಃ ಪರಿಣಾಮವಿಶುದ್ಧಯೇ ತದಪಿ ಕಾರ್ಯಾ ॥೪೯॥**

**ಅನ್ವಯಾರ್ಥ :-** **[ಖಲು]** ನಿಶ್ಚಯದಿಂದ **[ಪುಂಸಃ]** ಆತ್ಮನಿಗೆ **[ಪರವಸ್ತುನಿಬಂಧನಾ]** ಪರವಸ್ತುವಿನ ಕಾರಣದಿಂದ ಉತ್ಪನ್ನವಾಗುವಂಥ **[ಸೂಕ್ಷ್ಮಹಿಂಸಾ ಅಪಿ]** ಸೂಕ್ಷ್ಮ ಹಿಂಸೆಯು ಕೂಡ **[ನ ಭವತಿ]** ಆಗುವುದಿಲ್ಲ, **[ತದಪಿ]** ಆದಾಗ್ಯೂ **[ಪರಿಣಾಮವಿಶುದ್ಧಯೇ]** ಪರಿಣಾಮಗಳ ನಿರ್ಮಲತೆಯ ಸಲುವಾಗಿ **[ಹಿಂಸಾಯತನ ನಿವೃತ್ತಿಃ]** ಹಿಂಸೆಯ ಸ್ಥಾನರೂಪವಾದ ಪರಿಗ್ರಹ ಮೊದಲಾದವುಗಳ ತ್ಯಾಗ **[ಕಾರ್ಯ]** ಮಾಡುವುದು ಉಚಿತವಿದೆ.

**ಟೀಕೆ :- 'ಖಲು ಪುಂಸಃ ಪರವಸ್ತುನಿಬಂಧನಾ ಸೂಕ್ಷ್ಮಾಪಿ ಹಿಂಸಾ ನ ಭವತಿ'** - ನಿಶ್ಚಯದಿಂದ ಆತ್ಮನಿಗೆ ಪರವಸ್ತುವಿನ ಕಾರಣದಿಂದ ಉತ್ಪನ್ನವಾಗುವಂಥ ಹಿಂಸೆಯು ಸ್ವಲ್ಪ ಕೂಡ ಇರುವುದಿಲ್ಲ.

**ಭಾವಾರ್ಥ :-** ತಮ್ಮ ಪರಿಣಾಮಗಳ ಅಶುದ್ಧತೆಯ ಹೊರತಾಗಿ ಪರವಸ್ತುವಿನ ನಿಮಿತ್ತದಿಂದ ಸ್ವಲ್ಪ ಮಾತ್ರವೂ ಹಿಂಸೆಯ ದೋಷ ತಗಲುವುದಿಲ್ಲ. ನಿಶ್ಚಯದಿಂದಂತೂ ಹೀಗೆಯೇ ಇದೆ. **'ತದಪಿ ಪರಿಣಾಮವಿಶುದ್ಧಯೇ ಹಿಂಸಾಯತನನಿವೃತ್ತಿಃ ಕಾರ್ಯಾ'** - ಆದಾಗ್ಯೂ ಪರಿಣಾಮಗಳ ನಿರ್ಮಲತೆಯ ಸಲುವಾಗಿ ಹಿಂಸೆಯ ಸ್ಥಾನರೂಪವಿರುವ ಪರಿಗ್ರಹಾದಿಗಳ ತ್ಯಾಗವನ್ನು ಅವಶ್ಯವಾಗಿ ಮಾಡಬೇಕಾಗುವುದು.

**ಭಾವಾರ್ಥ :-** ಯಾವ ಪರಿಣಾಮವಾಗುತ್ತದೆ ಅದು ಯಾವುದಾದರೊಂದು ವಸ್ತುವಿನ ಅವಲಂಬನ ಪಡೆದೇ ಆಗುತ್ತದೆ. ಸುಭಟನ ಮಾತೆಗೆ ಸುಭಟಪುತ್ರನು ವಿದ್ಯಮಾನನಿದ್ದರೆ ಮಾತ್ರ 'ನಾನು ಸುಭಟನನ್ನು ಹೊಡೆಯುವೆ'ನೆಂದು ಪರಿಣಾಮವಾಗುತ್ತದೆ. ಆದರೆ ಯಾವಳು ಬಂಜೆಯಿದ್ದಾಳೆ ಮತ್ತು ಅವಳಿಗೆ ಪುತ್ರನೇ ಇಲ್ಲದಿದ್ದರೆ 'ನಾನು ಬಂಜೆಯ ಮಗನನ್ನು ಹೊಡೆಯುವೆ'ನೆಂಬ ಪರಿಣಾಮವು ಹೇಗೆ ಉತ್ಪನ್ನವಾಗುವ ಸಾಧ್ಯತೆಯಿದೆ ? ಆದುದರಿಂದ ಒಂದು ವೇಳೆ ಬಾಹ್ಯ ಪರಿಗ್ರಹಾದಿಗಳ ನಿಮಿತ್ತವಿದ್ದರೆ ಆಗ ಮಾತ್ರ ಅವುಗಳ ಅವಲಂಬನ ಪಡೆದು ಕಷಾಯರೂಪದ ಪರಿಣಾಮಗಳಾಗುತ್ತವೆ. ಆದರೆ ಒಂದು ವೇಳೆ ಪರಿಗ್ರಹಾದಿಗಳ ತ್ಯಾಗ ಮಾಡಿಬಿಟ್ಟದ್ದರೆ ಆಗ ನಿಮಿತ್ತವಿಲ್ಲದೆ, ಅವಲಂಬನವಿಲ್ಲದೆ ಯಾವ ರೀತಿಯಿಂದ ಪರಿಣಾಮಗಳು ಉತ್ಪನ್ನವಾಗುವವು ? ಆದುದರಿಂದ ತಮ್ಮ ಪರಿಣಾಮಗಳ ಶುದ್ಧತೆಯ ಸಲುವಾಗಿ ಬಾಹ್ಯಕಾರಣರೂಪವಿರುವ ಪರಿಗ್ರಹಾದಿಗಳ ತ್ಯಾಗವನ್ನು ಕೂಡ ಮಾಡಬೇಕಾಗುವುದು.

ಈಗ ಒಂದು ಪಕ್ಷವುಳ್ಳವರ ನಿಷೇಧ ಮಾಡುತ್ತಾರೆ, -

**ನಿಶ್ಚಯಮಬುಧ್ಯಮಾನೋ ಯೋ ನಿಶ್ಚಯತಸ್ತಮೇವ ಸಂಶ್ರಯತೇ ।**
**ನಾಶಯತಿ ಕರಣಚರಣಂ ಸ ಬಹಿಃಕರಣಾಲಸೋ ಬಾಲಃ ॥೫೦॥**

**ಅನ್ವಯಾರ್ಥ :-** **[ಯಃ]** ಯಾವ ಜೀವನು **[ನಿಶ್ಚಯಂ]** ಯಥಾರ್ಥ ನಿಶ್ಚಯ ಸ್ವರೂಪವನ್ನು **[ಅಬುಧ್ಯಮಾನಃ]** ತಿಳಿದುಕೊಳ್ಳದೆ **[ತಮೇವ]** ಅದನ್ನೇ **[ನಿಶ್ಚಯತಃ]** ನಿಶ್ಚಯ ಶ್ರದ್ಧೆಯಿಂದ **[ಸಂಶ್ರಯತೇ]** ಅಂಗೀಕಾರ ಮಾಡುತ್ತಾನೆ. **[ಸ]** ಆ **[ಬಾಲಃ]** ಮೂರ್ಖನು **[ಬಹಿಃ ಕರಣಾಲಸಃ]** ಬಾಹ್ಯಕ್ರಿಯೆಯಲ್ಲಿ ಸೋಮಾರಿಯಿದ್ದಾನೆ ಮತ್ತು **[ಕರಣಚರಣಂ]** ಬಾಹ್ಯ ಕ್ರಿಯಾರೂಪ ಆಚರಣೆಯ **[ನಾಶಯತಿ]** ನಾಶಮಾಡುತ್ತಾನೆ.

**ಟೀಕೆ :- 'ಯಃ ನಿಶ್ಚಯಂ ಅಬುಧ್ಯಮಾನಃ ನಿಶ್ಚಯತಃ ತಮೇವ ಸಂಶ್ರಯತೇ ಸ ಬಾಲಃ ಕರಣಚರಣಂ ನಾಶಯತಿಃ'** - ಯಾವ ಜೀವರುಗಳು ಯಥಾರ್ಥ ನಿಶ್ಚಯದ ಸ್ವರೂಪವನ್ನಂತೂ ತಿಳಿದುಕೊಳ್ಳುವುದಿಲ್ಲ ಮತ್ತು ತಿಳಿದುಕೊಳ್ಳದೆ ಕೇವಲ ನಿಶ್ಚಯದ ಶ್ರದ್ಧೆಯಿಂದ ಅಂತರಂಗವನ್ನೇ ಹಿಂಸೆಯೆಂದು ತಿಳಿದುಕೊಂಡು ಅಂಗೀಕಾರ ಮಾಡುತ್ತಾರೆ, ಆ ಅಜ್ಞಾನಿಗಳು ದಯಾರೂಪದ ಆಚರಣೆಯನ್ನು ನಾಶಮಾಡಿ ಬಿಡುತ್ತಾರೆ.

**ಭಾವಾರ್ಥ :-** ಯಾವನೋ ಓರ್ವನು ಕೇವಲ ನಿಶ್ಚಯದ ಶ್ರದ್ಧೆಯುಳ್ಳವನಾಗಿ ಹೇಳುವುದೇನೆಂದರೆ ಒಂದು ವೇಳೆ ನಾನು ಪರಿಗ್ರಹಾದಿಗಳನ್ನು ಇಟ್ಟುಕೊಂಡರೆ ಅಥವಾ ಭ್ರಷ್ಟಾಚಾರರೂಪವಾಗಿ ಪ್ರವರ್ತನೆ ಮಾಡಿದರೆ ಅದರಿಂದೇನಾಗುವುದು ? ನನ್ನ ಪರಿಣಾಮವು ಒಳ್ಳೆಯದಿರಬೇಕಾಗುವುದು. ಎಂದು ಹೇಳಿ ಸ್ವಚ್ಛಂದವಾಗಿ ಪ್ರವರ್ತನೆ ಮಾಡುವಂಥ ಜೀವನು ದಯೆಯ ಆಚರಣೆಯ ನಾಶ ಮಾಡುವನು. ಅವನು ಬಾಹ್ಯದಲ್ಲಂತೂ ನಿರ್ದಯಿಯೇ ಆದನು ಮತ್ತು ಅಂತರಂಗದ ನಿಮಿತ್ತ ಪಡೆದು ಪರಿಣಾಮಗಳು ಅಶುದ್ಧವಾಗಿಯೇ ಆಗುತ್ತಿರುವುದರಿಂದ ಅಂತರಂಗದ ಅಪೇಕ್ಷೆಯಿಂದಲೂ ನಿರ್ದಯನಾಗುವನು. ಹೀಗಾಗಿ ಆ ಜೀವನು ಬಾಹ್ಯ ದ್ರವ್ಯರೂಪವಿರುವ ಅನ್ಯ ಜೀವದ ದಯೆಯಲ್ಲಿ ಸೋಮಾರಿಯಿದ್ದಾನೆ, ಪ್ರಮಾದಿಯಿದ್ದಾನೆ. ಅಥವಾ ಅನ್ಯ ಪ್ರಕಾರದಿಂದ ಕೂಡ ಈ ಸೂತ್ರದ ಅರ್ಥ ಮಾಡುತ್ತಾರೆ. **'ಯಃ ನಿಶ್ಚಯಂ ಅಬುದ್ಧಮಾನಃ ತಮೇವ ನಿಶ್ಚಯತಃ ಸಂಶ್ರಯತೇ ಸಃ ಬಾಲಃ ಕರುಣಾಆಚರಣಂ ನಾಶಯತಿ'** - ಯಾವ ಜೀವನು ನಿಶ್ಚಯದ ಸ್ವರೂಪವನ್ನು ತಿಳಿದುಕೊಳ್ಳದೆ ವ್ಯವಹಾರರೂಪವಿರುವ ಬಾಹ್ಯ ಪರಿಗ್ರಹಾದಿಗಳ ತ್ಯಾಗವನ್ನೇ ನಿಶ್ಚಯದಿಂದ ಮೋಕ್ಷಮಾರ್ಗವೆಂದು ತಿಳಿದುಕೊಂಡು ಅಂಗೀಕಾರ ಮಾಡುತ್ತಾನೆ, ಆ ಜೀವನು ಶುದ್ಧೋಪಯೋಗರೂಪವಾದ ಆತ್ಮನ ದಯೆಯನ್ನು ನಾಶಮಾಡಿ ಬಿಡುತ್ತಾನೆ.

**ಭಾವಾರ್ಥ :-** ಯಾವ ಜೀವನು ನಿಶ್ಚಯನಯದ ಸ್ವರೂಪವನ್ನಂತೂ ತಿಳಿಯುವುದಿಲ್ಲ ಮತ್ತು ಕೇವಲ ವ್ಯವಹಾರ ಮಾತ್ರವಾದ ಬಾಹ್ಯ ಪರಿಗ್ರಹಾದಿಗಳ ತ್ಯಾಗ ಮಾಡುತ್ತಾನೆ, ಅದರಂತೆ ಬಾಹ್ಯ ವಸ್ತುವಿನಲ್ಲಿ ಹೇಯ-ಉಪಾದೇಯ ಬುದ್ಧಿಯಿಂದ ಪ್ರವರ್ತನೆ ಮಾಡುತ್ತಾನೆ ಆ ಜೀವನು ತನ್ನ ಸ್ವರೂಪ ಅನುಭವರೂಪವಾದ ಶುದ್ಧೋಪಯೋಗಮಯ ಅಹಿಂಸಾಧರ್ಮದ ನಾಶ ಮಾಡುತ್ತಾನೆ ಆ ಜೀವನು ತನ್ನ ಸ್ವರೂಪ ಅನುಭವರೂಪವಾದ ಶುದ್ಧೋಪಯೋಗಮಯ ಅಹಿಂಸಾಧರ್ಮದ ನಾಶ ಮಾಡುತ್ತಾನೆ. ಆ ಜೀವನು **'ಬಹಿಃ ಕರುಣಾಲಸಃ'**- ಪ್ರಯತ್ನಪೂರ್ವಕವಾಗಿ ಅಶುಭೋಪಯೋಗದ ತ್ಯಾಗವನ್ನಂತೂ ಮಾಡಿದ್ದಾನೆ, ಆದರೆ ಬಾಹ್ಯ ಪರಜೀವದ ದಯಾರೂಪವಾದ ಧರ್ಮದ ಸಾಧನೆಯಲ್ಲಿಯೇ ಸೋಮಾರಿಯಾಗಿ ಕುಳಿತುಕೊಂಡಿದ್ದಾನೆ, ಮತ್ತು ಶುದ್ಧೋಪಯೋಗರೂಪ ಭೂಮಿಕೆಯ ಆರೋಹಣೆ ಮಾಡುವ ಉದ್ಯಮವನ್ನೇ ಮಾಡುವುದಿಲ್ಲ. ಈ ಪ್ರಕಾರ ಏಕಾಂತ ಪಕ್ಷವುಳ್ಳವರ ನಿಷೇಧ ಮಾಡಿದೆ.

ಈಗ ದ್ರವ್ಯಹಿಂಸೆ ಮತ್ತು ಭಾವಹಿಂಸೆಯ ಅಪೇಕ್ಷೆಯಿಂದ ಭಿನ್ನ ಭಿನ್ನ ಪ್ರಕಾರದ ಭಂಗಗಳನ್ನು ತಿಳಿಸಿಕೊಡುತ್ತಾರೆ. ಅದರ ಕುರಿತು ಎಂಟು ಸೂತ್ರ ಹೇಳಲಿದ್ದು ಈಗ ಮೊದಲನೇ ಸೂತ್ರ ಹೇಳುತ್ತಾರೆ, -

ಅವಿಧಾಯಾಪಿ ಹಿ ಹಿಂಸಾ ಹಿಂಸಾಫಲಭಾಜನಂ ಭವತ್ಯೇಕಃ ।
ಕೃತ್ವಾಪ್ಯಪರೋ ಹಿಂಸಾ ಹಿಂಸಾಫಲಭಾಜನಂ ನ ಸ್ಯಾತ್ ॥೫೧॥

**ಅನ್ವಯಾರ್ಥ :-** [**ಹಿ**] ನಿಶ್ಚಯದಿಂದ [**ಏಕಃ**] ಓರ್ವ ಜೀವನು [**ಹಿಂಸಾ**] ಹಿಂಸೆ [**ಅವಿಧಾಯ ಅಪಿ**] ಮಾಡದಿದ್ದರು ಕೂಡ [**ಹಿಂಸಾಫಲಭಾಜನಂ ಭವತಿ**] ಹಿಂಸೆಯ ಫಲವನ್ನು ಭೋಗಿಸಲು ಪಾತ್ರನಾಗುತ್ತಾನೆ, ಮತ್ತು [**ಅಪರಃ**] ಇನ್ನೋರ್ವನು [**ಹಿಂಸಾ ಕೃತ್ವಾ ಅಪಿ**] ಹಿಂಸೆ ಮಾಡಿಯೂ ಕೂಡ [**ಹಿಂಸಾಫಲಭಾಜನಂ ನ ಸ್ಯಾತ್**] ಹಿಂಸೆಯ ಫಲವನ್ನು ಭೋಗಿಸಲು ಪಾತ್ರನಾಗುವುದಿಲ್ಲ.

**ಟೀಕೆ :- 'ಹಿ ಏಕಃ ಹಿಂಸಾ ಅವಿಧಾಯ ಅಪಿ ಹಿಂಸಾಫಲಭಾಜನಂ ಭವತಿ'**-ನಿಶ್ಚಯದಿಂದ ಯಾವನೋ ಓರ್ವ ಜೀವನು ಹಿಂಸೆ ಮಾಡದಿದ್ದರೂ ಕೂಡ ಹಿಂಸೆಯ ಫಲವನ್ನು ಭೋಗಿಸಲು ಪಾತ್ರನಾಗುತ್ತಾನೆ.

**ಭಾವಾರ್ಥ :-** ಯಾವನೋ ಓರ್ವ ಜೀವನು ಬಾಹ್ಯ ಹಿಂಸೆಯನ್ನಂತೂ ಮಾಡುವುದಿಲ್ಲ, ಆದರೆ ಪ್ರಮಾದಭಾವರೂಪದಿಂದ ಪರಿಣಮನ ಮಾಡುವ ಕಾರಣದಿಂದ ಆ ಜೀವನು ಉದಯ ಕಾಲದಲ್ಲಿ ಹಿಂಸೆಯ

ಫಲವನ್ನು ಭೋಗಿಸುತ್ತಾನೆ. **'ಅಪರ ಹಿಂಸಾ ಕೃತ್ವಾ ಅಪಿ ಹಿಂಸಾಫಲಭಾಜನಂ ನ ಸ್ಯಾತ್'** - ಬೇರೆ ಮತ್ತೊಬ್ಬ ಜೀವನು ಹಿಂಸೆ ಮಾಡಿಯೂ ಕೂಡ ಹಿಂಸೆಯ ಫಲವನ್ನು ಭೋಗಿಸಲು ಪಾತ್ರನಾಗುವುದಿಲ್ಲ.

**ಭಾವಾರ್ಥ ಃ-** ಯಾವನೋ ಓರ್ವ ಜೀವನು ಶರೀರ ಸಂಬಂಧದಿಂದ ಬಾಹ್ಯ ಹಿಂಸೆಯನ್ನಂತೂ ಮಾಡಿದ್ದಾನೆ, ಆದರೆ ಪ್ರಮಾದಭಾವರೂಪವಾಗಿ ಪರಿಣಮನ ಮಾಡದಿರುವುದರಿಂದ ಆ ಜೀವನು ಹಿಂಸೆಯ ಫಲವನ್ನು ಭೋಗಿಸಲು ಪಾತ್ರನಾಗುವುದಿಲ್ಲ.

ಈಗ ಎರಡನೆಯ ಸೂತ್ರ ಹೇಳುತ್ತಾರೆ, -

ಏಕಸ್ಯಾಲ್ಪಾ ಹಿಂಸಾ ದದಾತಿ ಕಾಲೇ ಫಲಮನಲ್ಪಮ್ ।
ಅನ್ಯಸ್ಯ ಮಹಾಹಿಂಸಾ ಸ್ವಲ್ಪಫಲಾ ಭವತಿ ಪರಿಪಾಕೇ ।।೫೨।।

**ಅನ್ವಯಾರ್ಥ ಃ- [ಏಕಸ್ಯ]** ಓರ್ವ ಜೀವನಿಗಂತೂ **[ಅಲ್ಪಾ]** ಸ್ವಲ್ಪ **[ಹಿಂಸಾ]** ಹಿಂಸೆಯು **[ಕಾಲೇ]** ಉದಯಕಾಲದಲ್ಲಿ **[ಅನಲ್ಪಮ್]** ಬಹಳಷ್ಟು **[ಫಲಂ]** ಫಲವನ್ನು **[ದದಾತಿ]** ಕೊಡುತ್ತದೆ ಮತ್ತು **[ಅನ್ಯಸ್ಯ]** ಇನ್ನೋರ್ವ ಜೀವನಿಗೆ **[ಮಹಾಹಿಂಸಾ]** ಮಹಾನ ಹಿಂಸೆಯು ಕೂಡ **[ಪರಿಪಾಕೇ]** ಉದಯಕಾಲದಲ್ಲಿ **[ಸ್ವಲ್ಪಫಲಾ ಭವತಿ]** ತೀರ ಕಡಿಮೆ ಫಲವನ್ನು ಕೊಡುವಂಥದ್ದಾಗುತ್ತದೆ.

**ಟೀಕೆ ಃ- 'ಏಕಸ್ಯ ಅಲ್ಪಾ ಹಿಂಸಾ ಕಾಲೇ ಅನಲ್ಪಂ ಫಲಂ ದದಾತಿ'** - ಯಾವನೋ ಓರ್ವ ಜೀವನಿಗೆ ಅತ್ಯಲ್ಪ ಹಿಂಸೆಯು ಕೂಡ ಉದಯಕಾಲದಲ್ಲಿ ಬಹಳಷ್ಟು ಫಲವನ್ನು ಕೊಡುತ್ತದೆ.

**ಭಾವಾರ್ಥ ಃ-** ಓರ್ವ ಜೀವನು ಬಾಹ್ಯ ಹಿಂಸೆಯನ್ನಂತೂ ಕಡಿಮೆಯೇ ಮಾಡಿದ್ದಾನೆ, ಆದರೆ ಪ್ರಮಾದಿಯಾಗಿ ಕಷಾಯರೂಪದಿಂದ ಬಹಳಷ್ಟು ಪರಿಣಮನ ಮಾಡಿರುವುದರಿಂದ ಉದಯಕಾಲದಲ್ಲಿ ಹಿಂಸೆಯ ಫಲವನ್ನು ಬಹಳಷ್ಟು ಪಡೆಯುತ್ತಾನೆ. **'ಅನ್ಯಸ್ಯ ಮಹಾಹಿಂಸಾ ಪರಿಪಾಕೇ ಸ್ವಲ್ಪಫಲಾ ಭವತಿ'** - ಅನ್ಯ ಓರ್ವ ಜೀವನ ದೊಡ್ಡ ಹಿಂಸೆಯು ಕೂಡ ಉದಯ ಕಾಲದಲ್ಲಿ ಅಲ್ಪ ಫಲವನ್ನು ಕೊಡುವಂಥದ್ದಿರುತ್ತದೆ.

**ಭಾವಾರ್ಥ ಃ-** ಯಾವನೋ ಓರ್ವ ಜೀವನು ಕಾರಣವಶದಿಂದ ಬಾಹ್ಯ ಹಿಂಸೆಯನ್ನಂತೂ ಬಹಳಷ್ಟು ಮಾಡಿದನು, ಆದರೆ ಆ ಕ್ರಿಯೆಯಲ್ಲಿ ಉದಾಸೀನನಾಗಿದ್ದುಕೊಂಡು ಅಲ್ಪಕಷಾಯ ಮಾಡಿರುವುದರಿಂದ ಉದಯಕಾಲದಲ್ಲಿ ಹಿಂಸೆಯ ಫಲವನ್ನು ಕೂಡ ಅಲ್ಪದಾಗಿಯೇ ಪ್ರಾಪ್ತ ಮಾಡಿಕೊಳ್ಳುತ್ತಾನೆ.

ಈಗ ಮೂರನೆಯ ಸೂತ್ರ ಹೇಳುತ್ತಾರೆ, -

ಏಕಸ್ಯ ಸೈವ ತೀವ್ರಂ ದಿಶತಿ ಫಲಂ ಸೈವ ಮಂದಮನ್ಯಸ್ಯ ।
ವ್ರಜತಿ ಸಹಕಾರಿಣೋರಪಿ ಹಿಂಸಾ ವೈಚಿತ್ರ್ಯಮತ್ರ ಫಲಕಾಲೇ ।।೫೩।।

**ಅನ್ವಯಾರ್ಥ ಃ- [ಸಹಕಾರಿಣೋಃ ಅಪಿ ಹಿಂಸಾ]** ಏಕತ್ರ ಕೂಡಿಕೊಂಡು ಮಾಡಿರುವ ಹಿಂಸೆಯು ಕೂಡ **[ಅತ್ರ]** ಈ **[ಫಲಕಾಲೇ]** ಉದಯಕಾಲದಲ್ಲಿ **[ವೈಚಿತ್ರ್ಯಮ್]** ವಿಚಿತ್ರತೆಗೆ **[ವಜ್ರತಿ]** ಪ್ರಾಪ್ತವಾಗುತ್ತದೆ ಮತ್ತು **[ಏಕಸ್ಯ]** ಯಾವನೋ ಓರ್ವನಿಗೆ **[ಸಾ ಏವ]** ಅದೇ ಹಿಂಸೆಯು **[ತೀವ್ರಂ]** ತೀವ್ರವಾದ **[ಫಲಂ]** ಫಲವನ್ನು **[ದಿಶತಿ]** ತೋರಿಸಿಕೊಡುತ್ತದೆ ಮತ್ತು **[ಅನ್ಯಸ್ಯ]** ಬೇರೆ ಮತ್ತೊಬ್ಬನಿಗೆ **[ಸಾ ಏವ ಹಿಂಸಾ]** ಅದೇ ಹಿಂಸೆಯು **[ಮಂದಂ]** ಕಡಿಮೆ ಫಲವನ್ನು ಕೊಡುತ್ತದೆ.

**ಟೀಕೆ ಃ- 'ಸಹಕಾರಿಣೋಃ ಅಪಿ ಹಿಂಸಾ ಅತ್ರ ಫಲಕಾಲೇ ವೈಚಿತ್ರ್ಯಂ ವ್ರಜತಿ'** - ಈರ್ವರು

ಪುರುಷರು ಏಕತ್ರ ಕೂಡಿಕೊಂಡು ಮಾಡಲಾದ ಹಿಂಸೆಯು ಫಲದ ಸಮಯದಲ್ಲಿ ವಿಚಿತ್ರರೂಪತೆಗೆ - ಅನೇಕ ಪ್ರಕಾರತೆಗೆ ಪ್ರಾಪ್ತವಾಗುತ್ತದೆಯೆಂಬುದನ್ನೇ ಹೇಳುತ್ತಾರೆ. **'ಸೈವ ಏಕಸ್ಯ ತೀವ್ರ ಫಲಂ ದಿಶತಿ'** - ಅದೇ ಹಿಂಸೆಯು ಓರ್ವ ಪುರುಷನಿಗೆ ತೀವ್ರ ಫಲವನ್ನು ಕೊಡುತ್ತದೆ. **'ಅನ್ಯಸ್ಯ ಸಾ ಏವ ಮಂದಂ ಫಲಂ ದಿಶತಿ'** - ಇನ್ನೋರ್ವ ಜೀವನಿಗೆ ಅದೇ ಹಿಂಸೆಯು ಮಂದ ಫಲವನ್ನು ಕೊಡುತ್ತದೆ.

**ಭಾವಾರ್ಥ :-** ಈರ್ವರು ಪುರುಷರು ಬಾಹ್ಯ ಹಿಂಸೆಯನ್ನಂತೂ ಒಟ್ಟಿಗೆ ಸೇರಿ ಮಾಡಿದ್ದರು ; ಆದರೆ ಆ ಕಾರ್ಯದಲ್ಲಿ ಯಾವನು ತೀವ್ರ ಕಷಾಯದಿಂದ ಹಿಂಸೆ ಮಾಡಿದ್ದಾನೆ ಅವನಿಗೆ ಆಸಕ್ತತೆಯು ಅಧಿಕವಾಗಿರುವುದರಿಂದ ಉದಯಕಾಲದಲ್ಲಿ ತೀವ್ರ ಫಲವಾಗುತ್ತದೆ. ಮತ್ತು ಯಾವನು ಮಂದ ಕಷಾಯದಿಂದ ವಿಶೇಷ ಆಸಕ್ತತೆ ಮಾಡಲಿಲ್ಲ ಅವನಿಗೆ ಉದಯಕಾಲದಲ್ಲಿ ಮಂದ ಫಲವು ಪ್ರಾಪ್ತವಾಗುತ್ತದೆ.

ಈಗ ನಾಲ್ಕನೆಯ ಸೂತ್ರ ಹೇಳುತ್ತಾರೆ, -

**ಪ್ರಾಗೇವ ಫಲತಿ ಹಿಂಸಾ ಕ್ರಿಯಮಾಣಾ ಫಲತಿ ಫಲತಿ ಚ ಕೃತಾ ಅಪಿ ।**
**ಆರಭ್ಯ ಕರ್ತುಮಕೃತಾಪಿ ಫಲತಿ ಹಿಂಸಾನುಭಾವೇನ ।।೫೪।।**

**ಅನ್ವಯಾರ್ಥ :-** **[ಹಿಂಸಾ]** ಒಂದು ಹಿಂಸೆಯು **[ಪ್ರಾಕ್ ಏವ]** ಮೊದಲೇ **[ಫಲತಿ]** ಫಲ ಕೊಡುತ್ತದೆ. ಇನ್ನೊಂದು **[ಕ್ರಿಯಮಾಣಾ]** ಮಾಡುತ್ತಿರುವಂತೆಯೇ **[ಫಲತಿ]** ಫಲ ಕೊಡುತ್ತದೆ ಮತ್ತೊಂದು **[ಕೃತಾ ಅಪಿ]** ಮಾಡಿದ ನಂತರ **[ಫಲತಿ]** ಫಲ ಕೊಡುತ್ತದೆ **[ಚ]** ಮತ್ತು ಬೇರೊಂದು **[ಕರ್ತುಮ್ ಆರಭ್ಯ]** ಹಿಂಸೆ ಮಾಡಲು ಆರಂಭ ಮಾಡಿ **[ಅಕೃತಾ ಅಪಿ]** ಮಾಡದೆ ಹೋದರು ಕೂಡ **[ಫಲತಿ]** ಫಲ ಕೊಡುತ್ತದೆ. ಇದೇ ಕಾರಣದಿಂದ **[ಹಿಂಸಾ]** ಹಿಂಸೆಯು **[ಅನುಭಾವೇನ]** ಕಷಾಯ ಭಾವದ ಅನುಸಾರವಾಗಿಯೇ **[ಫಲತಿ]** ಫಲ ಕೊಡುತ್ತದೆ.

**ಟೀಕೆ :- 'ಚ ಹಿಂಸಾ ಪ್ರಾಕ್ ಏವ ಫಲತಿ'** - ಒಂದು ಹಿಂಸೆಯು ಮೊದಲು ಫಲ ಕೊಡುತ್ತದೆ.

**ಭಾವಾರ್ಥ :-** ಓರ್ವ ಜೀವನು ಹಿಂಸೆಯ ವಿಚಾರ ಮಾಡಿದ್ದನು, ಆದರೆ ಅದಂತೂ ಸಂಭವಿಸಲಿಲ್ಲ. ಆದಾಗ್ಯೂ ಆ ವಿಚಾರದಿಂದ ಯಾವ ಕರ್ಮದ ಬಂಧವಾಗಿತ್ತು ಅದರ ಫಲವು ಉದಯದಲ್ಲಿ ಬಂದು ಬಿಡುವುದು. ಅನಂತರ ಹಿಂಸೆಯ ಯಾವ ವಿಚಾರ ಮಾಡಲಾಗಿತ್ತು ಆ ಕಾರ್ಯವುಕೂಡ ಬಾಹ್ಯದಲ್ಲಿ ನಡೆದು ಹೋಯಿತು. ಈ ಪ್ರಕಾರ ಹಿಂಸೆಯಾಗುವ ಮೊದಲೇ ಫಲ ಕೊಡುತ್ತದೆ. **'ಕ್ರಿಯಾಮಾಣೌ ಫಲತಿ'** ಮತ್ತು ಒಂದು ಹಿಂಸೆಯು ಮಾಡುವ ಸಮಯದಲ್ಲಿಯೇ ಫಲ ಕೊಡುತ್ತದೆ.

**ಭಾವಾರ್ಥ :-** ಒಬ್ಬನು ಹಿಂಸೆಯ ವಿಚಾರ ಮಾಡುವನು ಮತ್ತು ಅದರಿಂದ ಯಾವ ಕರ್ಮದ ಬಂಧವಾಗುವುದು ಆ ಕರ್ಮವು ಯಾವ ಸಮಯದೊಳಗೆ ಉದಯದಲ್ಲಿ ಬರುವುದು ಅದೇ ಸಮಯದಲ್ಲಿ ವಿಚಾರದ ಅನುಸಾರವಾಗಿ ಬಾಹ್ಯದಲ್ಲಿ ಹಿಂಸೆಯು ನಡೆದು ಹೋಗುತ್ತದೆ. ಈ ಪ್ರಕಾರ ಹಿಂಸೆ ಮಾಡುತ್ತಿರುವಾಗಲೇ ಅದರ ಫಲವು ಪ್ರಾಪ್ತವಾಗುತ್ತದೆ. **'ಕೃತಾ ಅಪಿ ಚ ಫಲತಿ'** - ಮತ್ತು ಒಂದು ಹಿಂಸೆಯು ಮಾಡಿದ ನಂತರ ಫಲ ಕೊಡುತ್ತದೆ.

**ಭಾವಾರ್ಥ :-** ಓರ್ವನು ಹಿಂಸೆಯ ವಿಚಾರ ಮಾಡುವನು ಮತ್ತು ಆ ವಿಚಾರದ ಅನುಸಾರ ಬಾಹ್ಯದಲ್ಲಿ ಹಿಂಸೆಯನ್ನೂ ಮಾಡಿ ಬಿಡುವನು, ಆದರೆ ಅದರ ಫಲವು ಅನಂತರ ಉದಯದಲ್ಲಿ ಬರುವುದು. ಈ ಪ್ರಕಾರ ಹಿಂಸೆಯು ಮಾಡಿದ ನಂತರ ಫಲಿತವಾಯಿತು. **'ಹಿಂಸಾ ಕರ್ತುಮ್ ಆರಭ್ಯ ಅಪಿ ಫಲತಿ'** - ಓರ್ವನು ಹಿಂಸೆ ಮಾಡಲು ಆರಂಭ ಮಾಡುವನು, ಆದರೆ ಅನಂತರದಲ್ಲಿ ಮಾಡದಿದ್ದರೂ ಕೂಡ ಅದು ಫಲಿತವಾಗುವುದು.

**ಭಾವಾರ್ಥ ః-** ಓರ್ವ ಜೀವನು ಹಿಂಸೆಯ ವಿಚಾರ ಮಾಡಿ ಹಿಂಸೆ ಮಾಡುವುದರಲ್ಲಿ ತತ್ಪರನಾಗುವನು, ಆದರೆ ಅನಂತರ ಯಾವುದೇ ಕಾರಣ ವಶದಿಂದ ಹಿಂಸೆ ಮಾಡಲಿಲ್ಲ. ಇಂಥ ಹಿಂಸೆಯು ಕೂಡ ಫಲ ಕೊಡುತ್ತದೆ. ಈ ಪ್ರಕಾರ ಫಲವಾಗುವ ಕಾರಣ ಹೇಳುತ್ತಾರೆ.

**'ಅನುಭಾವೇನ'** ಕಷಾಯಭಾವದ ಅನುಸಾರ ಫಲವಾಗುತ್ತದೆ. ಇದೆ ಪದವನ್ನು ಮುಂದಿನ ಸೂತ್ರಗಳಲ್ಲಿ ಕೂಡ 'ಹೊಸ್ತಿಲ ಮೇಲಿನ ದೀವಿಗೆಯ ನ್ಯಾಯ'ದಂತೆ ಎಲ್ಲೆಡೆಗೆ ತಿಳಿದುಕೊಳ್ಳುವುದು.

ಅದಕ್ಕಾಗಿಯೇ ಮಧ್ಯದಲ್ಲಿ ಹೀಗೆ ಹೇಳುತ್ತಾರೆ, -

ಏಕಃ ಕರೋತಿ ಹಿಂಸಾ ಭವಂತಿ ಫಲಭಾಗಿನೋ ಬಹವಃ ।
ಬಹವೋ ವಿದಧತಿ ಹಿಂಸಾಂ ಹಿಂಸಾಫಲಭುಗ್ ಭವತ್ಯೇಕಃ ।।೫೫।।

**ಅನ್ವಯಾರ್ಥ ః-** **[ಏಕಃ]** ಒಬ್ಬ ಪುರುಷನು **[ಹಿಂಸಾಂ]** ಹಿಂಸೆ **[ಕರೋತಿ]** ಮಾಡುತ್ತಾನೆ, ಆದರೆ **[ಫಲಭಾಗಿನಃ]** ಫಲ ಭೋಗಿಸುವಂಥವರು **[ಬಹವಃ]** ಬಹಳಷ್ಟು **[ಭವಂತಿ]** ಇರುತ್ತಾರೆ. ಇದೇ ಪ್ರಕಾರ **[ಹಿಂಸಾ]** ಹಿಂಸೆಯನ್ನು **[ಬಹವಃ]** ಅನೇಕ ಪುರುಷರು **[ವಿದಧತಿ]** ಮಾಡುತ್ತಾರೆ, ಆದರೆ **[ಹಿಂಸಾಫಲಭುಗ್]** ಹಿಂಸೆಯ ಫಲವನ್ನು ಭೋಗಿಸುವಂಥವನು **[ಏಕಃ]** ಒಬ್ಬ ಪುರುಷನು **[ಭವತಿ]** ಇರುತ್ತಾನೆ.

**ಟೀಕೆ ః- 'ಹಿಂಸಾ ಏಕಃ ಕರೋತಿ ಫಲ ಭಾಗಿನಃ ಬಹವಃ ಭವಂತಿ'** - ಕೆಲವೊಮ್ಮೆ ಹಿಂಸೆಯನ್ನಂತೂ ಒಬ್ಬ ಪುರುಷನು ಮಾಡುತ್ತಾನೆ ಮತ್ತು ಅದರ ಫಲವನ್ನು ಅನೇಕರು ಭೋಗಿಸುತ್ತಾರೆ. ಅದರ ಉದಾಹರಣೆ ః- ಕಳ್ಳನನ್ನಂತೂ (ಗಲ್ಲು ಶಿಕ್ಷೆಯಲ್ಲಿ) ಓರ್ವ ಚಾಂಡಾಲನೇ ಹೊಡೆಯುತ್ತಾನೆ, ಆದರೆ ಸಮಸ್ತ ದರ್ಶಕರು ರೌದ್ರ ಪರಿಣಾಮ ಮಾಡಿ ಪಾಪದ ಭೋಕ್ತೃಗಳಾಗುತ್ತಾರೆ. **'ಹಿಂಸಾಂ ಬಹವಃ ವಿದಧತಿ ಏಕಃ ಹಿಂಸಾಫಲಭುಕ್ ಭವತಿ'** - ಕೆಲವೊಮ್ಮೆ ಹಿಂಸೆಯನ್ನಂತೂ ಬಹಳಷ್ಟು ಪುರುಷರು ಮಾಡುತ್ತಾರೆ, ಆದರೆ ಹಿಂಸೆಯ ಫಲದ ಭೋಕ್ತೃವು ಒಬ್ಬನೇ ಪುರುಷನಾಗುತ್ತಾನೆ.ಅದರ ಉದಾಹರಣೆ - ಸಂಗ್ರಾಮದಲ್ಲಿ ಹಿಂಸೆಯನ್ನಂತೂ ಬಹಳಷ್ಟು ಪುರುಷರು ಮಾಡುತ್ತಾರೆ. ಆದರೆ ದೊರೆಯು ಸ್ವಾಮಿತ್ವ ಬುದ್ಧಿಯಿಂದ ಆ ಹಿಂಸೆಯ ಪ್ರೇರಕನಾಗಿರುವುದರಿಂದ ಅವನೇ ಸಮಸ್ತ ಹಿಂಸೆಯ ಫಲದ ಭೋಕ್ತೃವಾಗುತ್ತಾನೆ.

ಈಗ ಐದು ಮತ್ತು ಆರನೆಯ ಸೂತ್ರ ಹೇಳುತ್ತಾರೆ, -

ಕಸ್ಯಾಪಿ ದಿಶತಿ ಹಿಂಸಾ ಹಿಂಸಾಫಲಮೇಕಮೇವ ಫಲಕಾಲೇ ।
ಅನ್ಯಸ್ಯ ಸೈವ ಹಿಂಸಾ ದಿಶತ್ಯಹಿಂಸಾಫಲಂ ವಿಪುಲಮ್ ।।೫೬।।
ಹಿಂಸಾಫಲಮಪರಸ್ಯ ತು ದದಾತ್ಯಹಿಂಸಾ ತು ಪರಿಣಾಮೇ ।
ಇತರಸ್ಯ ಪುನರ್ಹಿಂಸಾ ದಿಶತ್ಯಹಿಂಸಾಫಲಂ ನಾನ್ಯತ್ ।।೫೭।।

**ಅನ್ವಯಾರ್ಥ ః-** **[ಕಸ್ಯಾಪಿ]** ಓರ್ವ ಪುರುಷನಿಗಂತೂ **[ಹಿಂಸಾ]** ಹಿಂಸೆಯು **[ಫಲಕಾಲೇ]** ಉದಯಕಾಲದಲ್ಲಿ **[ಏಕಮೇವ]** ಒಂದೇ **[ಹಿಂಸಾಫಲಂ]** ಹಿಂಸೆಯ ಫಲವನ್ನು **[ದಿಶತಿ]** ಕೊಡುತ್ತದೆ ಮತ್ತು **[ಅನ್ಯಸ್ಯ]** ಇನ್ನೋರ್ವ ಪುರುಷನಿಗೆ **[ಸೈವ]** ಅದೇ **[ಹಿಂಸಾ]** ಹಿಂಸೆಯು **[ವಿಪುಲಂ]** ಬಹಳಷ್ಟು **[ಅಹಿಂಸಾ ಫಲಂ]** ಅಹಿಂಸೆಯ ಫಲವನ್ನು **[ದಿಶತಿ]** ಕೊಡುತ್ತದೆ. **[ತು ಅಪರಸ್ಯ]** ಮತ್ತೆ ಬೇರೊಬ್ಬನಿಗೆ **[ಅಹಿಂಸಾ]** ಅಹಿಂಸೆಯು

**[ಪರಿಣಾಮೇ]** ಉದಯ ಕಾಲದಲ್ಲಿ **[ಹಿಂಸಾ ಫಲಂ]** ಹಿಂಸೆಯ ಫಲವನ್ನು **[ದದಾತಿ]** ಕೊಡುತ್ತದೆ **[ತು ಪುನಃ]** ಮತ್ತೆ **[ಇತರಸ್ಯ]** ಬೇರೆ ಇನ್ನೊಬ್ಬನಿಗೆ **[ಹಿಂಸಾ]** ಹಿಂಸೆಯು **[ಅಹಿಂಸಾ ಫಲಂ]** ಅಹಿಂಸೆಯ ಫಲವನ್ನು **[ದಿಶತಿ]** ಕೊಡುತ್ತದೆ. **[ಅನ್ಯತ್ ನ]** ಬೇರೆಯಿಲ್ಲ.

**ಟೀಕೆ :- 'ತು ಅಪರಸ್ಯ ಅಹಿಂಸಾ ಪರಿಣಾಮೇ ಹಿಂಸಾಫಲಂ ದದತಿ'** - ಬೇರೆ ಮತ್ತೊಬ್ಬ ಜೀವನಿಗೆ ಅಹಿಂಸೆಯು ಉದಯದ ಪರಿಣಾಮದಲ್ಲಿ ಹಿಂಸೆಯ ಫಲವನ್ನು ಕೊಡುತ್ತದೆ.

**ಭಾವಾರ್ಥ :-** ಒಬ್ಬನ ಅಂತರಂಗದಲ್ಲಿ ಯಾವನೋ ಓರ್ವನಿಗೆ ಕೆಡಕು ಮಾಡುವ ಪರಿಣಾಮವಿದೆ, ಆದರೆ ಬಾಹ್ಯದಲ್ಲಿ ಅವನಿಗೆ ವಿಶ್ವಾಸ ಉತ್ಪನ್ನವಾಗುವ ಸಲುವಾಗಿ ಒಳ್ಳೆಯದನ್ನೇ ಮಾಡುತ್ತಾನೆ ಅಥವಾ ಕೆಡಕು ಮಾಡಿದರೂ ಕೂಡ ಅವನ ಪುಣ್ಯದ ಉದಯದಿಂದ ಇವನ ನಿಮಿತ್ತದಿಂದ ಅವನದು ಒಳ್ಳೆಯದೇ ಆಗುತ್ತದೆ. ಆಗ ಬಾಹ್ಯದಲ್ಲಂತೂ ಅವನ ಮೇಲೆ ದಯೆ ಮಾಡಿದನು, ಆದರೆ ಅಂತರಂಗದಲ್ಲಿ ಹಿಂಸೆಯ ಪರಿಣಾಮವಿರುವುದರಿಂದ ಹಿಂಸೆಯ ಫಲವನ್ನು ಪಡೆಯುತ್ತಾನೆ. ಪುನಃ **'ಇತರಸ್ಯ ಹಿಂಸಾ ಅಹಿಂಸಾಫಲಂ ದಿಶತಿ, ಅನ್ಯತ್ ನ'** - ಬೇರೆ ಯಾವನೋ ಓರ್ವ ಜೀವನಿಗೆ ಹಿಂಸೆಯು ಅಹಿಂಸೆಯ ಫಲವನ್ನು ಕೊಡುತ್ತದೆ, ಬೇರೆ ಫಲವನ್ನಿಲ್ಲ.

**ಭಾವಾರ್ಥ :-** ಒಬ್ಬನ ಅಂತರಂಗದಲ್ಲಿ ದಯೆಯ ಭಾವವಿದೆ ಮತ್ತು ಅವನು ಯತ್ನಪೂರ್ವಕವಾಗಿ ಓರ್ವ ದುಃಖಿ ಜೀವನನ್ನು ನೋಡಿ ಅವನ ದುಃಖ ನಿವಾರಣೆ ಮಾಡುವಲ್ಲಿ ಪ್ರಯತ್ನಶೀಲನಿರುತ್ತಾನೆ, ಆದಾಗ್ಯೂ ಅವನಿಗೆ ಒಂದು ವೇಳೆ ಕೂಡಲೆ ತೊಂದರೆಯಾಗಿ ಹೋದರೆ ಅಥವಾ ಯತ್ನ ಮಾಡುತ್ತಿದ್ದರೂ ಕೂಡ ಇವನ ನಿಮಿತ್ತದಿಂದ ಆ ದುಃಖೀ ಜೀವದ ಪ್ರಾಣಘಾತವಾಗಿ ಹೋದರೆ ಆಗ ಬಾಹ್ಯದಲ್ಲಂತೂ ಅವನ ಹಿಂಸೆಯೇ ಆಗಿದೆ. ಆದರೆ ಅಂತರಂಗದಿಂದ ಅವನು ಅಹಿಂಸೆಯ ಫಲವನ್ನು ಪ್ರಾಪ್ತ ಮಾಡಿಕೊಳ್ಳುತ್ತಾನೆ.

ಈಗ ಏಳನೆಯ ಸೂತ್ರ ಹೇಳುತ್ತಾರೆ, -

ಇತಿವಿವಿಧಭಂಗಗಹನೇ ಸುದುಸ್ತರೇ ಮಾರ್ಗಮೂಢದೃಷ್ಟೀನಾಮ್ ।
ಗುರವೋ ಭವಂತಿ ಶರಣಂ ಪ್ರಬುದ್ಧನಯಚಕ್ರಸಂಚಾರಾಃ ॥೫೮॥

**ಅನ್ವಯಾರ್ಥ :- [ಇತಿ]** ಈ ಪ್ರಕಾರ **[ಸುದುಸ್ತರೇ]** ಅತ್ಯಂತ ಕಠಿಣತೆಯಿಂದ ಪಾರುಗಾಣಲು ಸಾಧ್ಯವಿರುವಂಥ ಮತ್ತು **[ವಿವಿಧಭಂಗಗಹನೇ]** ನಾನಾ ಪ್ರಕಾರದ ಭಂಗಗಳಿಂದ ಯುಕ್ತವಾದ ಗಹನ ವನದಲ್ಲಿ **[ಮಾರ್ಗಮೂಢ ದೃಷ್ಟೀನಾಮ್]** ಮಾರ್ಗವನ್ನು ಮರೆತು ಹೋದಂಥ ಪುರುಷನಿಗೆ **[ಪ್ರಬುದ್ಧನಯಚಕ್ರ ಸಂಚಾರಾಃ]** ಅನೇಕ ಪ್ರಕಾರದ ನಯ ಸಮೂಹವನ್ನು ತಿಳಿದುಕೊಂಡಿರುವಂಥ **[ಗುರವಃ]** ಶ್ರೀ ಗುರುಗಳೇ **[ಶರಣಂ ಭವಂತಿ]** ಆಶ್ರಯದಾತರಾಗುತ್ತಾರೆ.

**ಟೀಕೆ :- 'ಇತಿ ಸುದುಸ್ತರೇ ವಿವಿಧಭಂಗಗಹನೇ ಮಾರ್ಗಮೂಢದೃಷ್ಟೀನಾಂ ಗುರವಃ ಶರಣಂ ಭವಂತಿ'**- ಈ ಪ್ರಕಾರ ಸುಲಭತೆಯಿಂದ ಪಾರಾಗಿ ಹೋಗಲು ಸಾಧ್ಯವಿರದಂಥ ಅನೇಕ ಪ್ರಕಾರದ ಭಂಗರೂಪವಿರುವ ಗಹನ ವನದಲ್ಲಿ ಸತ್ಯ ಶ್ರದ್ಧೆಯ ಸ್ವರೂಪವಿರುವಂಥ ಮಾರ್ಗದಲ್ಲಿ ಯಾವನ ದೃಷ್ಟಿಯು ಭ್ರಮಿಸಿ ಹೋಗಿದೆ ಅವನ ಸಲುವಾಗಿ ಶ್ರೀಗುರುಗಳೇ ಆಶ್ರಯದಾತರಿದ್ದಾರೆ. ಅವರ ಮೂಲಕವಾಗಿಯೇ ಸತ್ಯ ಮಾರ್ಗದ ಸ್ವರೂಪವು ತಿಳಿದು ಬರುವ ಸಾಧ್ಯತೆಯಿದೆ. ಆ ಗುರುಗಳು **'ಪ್ರಬುದ್ಧನಯ ಚಕ್ರ ಸಂಚಾರಾಃ'** ಅನೇಕ ಪ್ರಕಾರದ ನಯ ಸಮೂಹದ ಪ್ರವರ್ತನೆಯನ್ನು ತಿಳಿದವರಿದ್ದಾರೆ. ಮತ್ತು ಸಮಸ್ತ ನಯಗಳನ್ನು ತಿಳಿಸಿಕೊಡುವಲ್ಲಿ ಸಮರ್ಥರಿದ್ದಾರೆ.

ಈಗ ಎಂಟನೆಯ ಸೂತ್ರ ಹೇಳುತ್ತಾರೆ.

**ಅತ್ಯಂತ ನಿಶಿತಧಾರಂ ದುರಾಸದಂ ಜಿನವರಸ್ಯ ನಯಚಕ್ರಮ್ ।**
**ಖಂಡಯತಿ ಧಾರ್ಯಮಾಣಂ ಮೂರ್ಧಾನಂ ಝುಟಿತಿ ದುರ್ವಿದಗ್ಧಾನಾಮ್ ॥೫೯॥**

**ಅನ್ವಯಾರ್ಥ ః-** **[ಜಿನವರಸ್ಯ]** ಜಿನೇಂದ್ರ ಭಗವಂತರ **[ಅತ್ಯಂತನಿಶಿತಧಾರಂ]** ಅತ್ಯಂತ ತೀಕ್ಷ್ಣ ಧಾರೆಯಿರುವಂಥ ಮತ್ತು **[ದುರಾಸದಂ]** ದುರ್ಗಮವಾದ **(ನಯಚಕ್ರಂ]** ನಯಚಕ್ರವನ್ನು **[ಧಾರ್ಯಮಾಣಂ]** ಧಾರಣಮಾಡಿದ ಮೇಲೆ **[ದುರ್ವಿದಗ್ಧಾನಾಂ]** ಮಿಥ್ಯಾಜ್ಞಾನೀ ಪುರುಷರ **[ಮೂರ್ಧಾನಂ]** ಮಸ್ತಕವನ್ನು **[ಝುಟಿತಿ]** ಕೂಡಲೇ **[ಖಂಡಯತಿ]** ತುಂಡುತುಂಡು ಮಾಡಿ ಬಿಡುತ್ತದೆ.

**ಭಾವಾರ್ಥ ః-** ಜೈನ ಮತದ ನಯ ಭೇದವನ್ನು ತಿಳಿದುಕೊಳ್ಳುವುದು ಅತ್ಯಂತ ಕಠಿಣವಿದೆ. ಅದನ್ನು ಯಾವನಾದರೂ ಮೂಢ ಪುರುಷನು ತಿಳಿದುಕೊಳ್ಳದೇ ನಯಚಕ್ರದಲ್ಲಿ ಪ್ರವೇಶ ಮಾಡಿದರೆ ಅವನು ಲಾಭಕ್ಕೆ ಪ್ರತಿಯಾಗಿ ಹಾನಿಯನ್ನೇ ಮಾಡಿಕೊಳ್ಳುತ್ತಾನೆ. ಈ ಪ್ರಕಾರ ಹಿಂಸೆಯ ಭಂಗಗಳನ್ನು ಹೇಳಲಾಯಿತು.

ಈಗ ಹಿಂಸೆಯ ತ್ಯಾಗದ ಉಪದೇಶ ಮಾಡುತ್ತಾರೆ, -

**ಅವಬುಧ್ಯ ಹಿಂಸ್ಯಹಿಂಸಕಹಿಂಸಾಹಿಂಸಾಫಲಾನಿ ತತ್ತ್ವೇನ ।**
**ನಿತ್ಯಮವಗೂಹಮಾನೈರ್ನಿಜಶಕ್ತ್ಯಾ ತ್ಯಜ್ಯತಾಂ ಹಿಂಸಾ ॥೬೦॥**

**ಅನ್ವಯಾರ್ಥ ః-** **[ನಿತ್ಯಂ]** ಯಾವಾಗಲೂ **[ಅವಗೂಹಮಾನೈಃ]** ಸಂವರದಲ್ಲಿ ಉದ್ಯಮಶೀಲರಾದ ಪುರುಷರು **[ತತ್ತ್ವೇನ]** ಯಥಾರ್ಥ ರೀತಿಯಿಂದ **[ಹಿಂಸ್ಯಹಿಂಸಕಹಿಂಸಾಹಿಂಸಾಫಲಾನಿ]** ಹಿಂಸ್ಯ, ಹಿಂಸಕ, ಹಿಂಸೆ, ಮತ್ತು ಹಿಂಸೆಯ ಫಲವನ್ನು **[ಅವಬುಧ್ಯ]** ತಿಳಿದುಕೊಂಡು **[ನಿಜಶಕ್ತ್ಯಾ]** ತಮ್ಮ ತಮ್ಮ ಶಕ್ತಿಯ ಪ್ರಮಾಣದಿಂದ **[ಹಿಂಸಾ]** ಹಿಂಸೆಯನ್ನು **[ತ್ಯಜ್ಯತಾಂ]** ಬಿಟ್ಟುಕೊಡಬೇಕಾಗುವುದು.

**ಟೀಕೆ ః-** **'ನಿತ್ಯ ಅವಗೂಹಮಾನೈಃ ನಿಜಶಕ್ತ್ಯಾ ಹಿಂಸಾ ತ್ಯಜ್ಯತಾಮ್'** - ಸಂವರದಲ್ಲಿ ಉದ್ಯಮಶೀಲ-ರಿರುವಂಥ ಜೀವರುಗಳು ಯಾವಾಗಲೂ ತಮ್ಮ ಶಕ್ತಿಯಿಂದ ಹಿಂಸೆಯ ತ್ಯಾಗ ಮಾಡಬೇಕಾಗುವುದು. ಹಿಂಸೆಯು ಎಷ್ಟು ಬಿಡುವ ಸಾಧ್ಯತೆಯಿದೆ ಅಷ್ಟನ್ನು ಬಿಟ್ಟುಕೊಡಬೇಕಾಗುವುದು. ಹೇಗೆಂದರೆ **'ತತ್ತ್ವೇನ ಹಿಂಸ್ಯ ಹಿಂಸಕ ಹಿಂಸಾ ಹಿಂಸಾಫಲಾನಿ ಅವಬುಧ್ಯ'** - ಯಥಾರ್ಥ ರೀತಿಯಿಂದ ಹಿಂಸ್ಯ, ಹಿಂಸಕ, ಹಿಂಸೆ ಮತ್ತು ಹಿಂಸೆಯ ಫಲ - ಇವು ನಾಲ್ಕು ಭಾವಗಳನ್ನು ತಿಳಿದುಕೊಂಡು ಹಿಂಸೆಯ ತ್ಯಾಗ ಮಾಡುವುದು ಉಚಿತವಿದೆ. ಅವನ್ನು ತಿಳಿದುಕೊಂಡಲ್ಲದೆ ತ್ಯಾಗವಾಗುವುದಿಲ್ಲ. ಮತ್ತು ಒಂದು ವೇಳೆ ಮಾಡಿಬಿಟ್ಟರೂ ಕೂಡ ಅದು ಕಾರ್ಯಕಾರಿಯಾಗುವುದಿಲ್ಲ. ಅದರಲ್ಲಿ -

೧) **ಹಿಂಸ್ಯ** - ಯಾವುದರ ಹಿಂಸೆಯಾಗುವುದು ಅದನ್ನು ಹಿಂಸ್ಯವೆಂದು ಹೇಳುತ್ತಾರೆ. ತಮ್ಮ ಭಾವಪ್ರಾಣ ಅಥವಾ ದ್ರವ್ಯಪ್ರಾಣ ಮತ್ತು ಪರಜೀವದ ಭಾವಪ್ರಾಣ ಅಥವಾ ದ್ರವ್ಯಪ್ರಾಣ ಇವು ಹಿಂಸೆಯ ಭೇದಗಳಿವೆ. ಅಥವಾ ಏಕೇಂದ್ರಿಯ ಮೊದಲಾದ ಜೀವಸಮಾಸದ ಭೇದ ತಿಳಿಯುವುದು ಅಥವಾ ಎಲ್ಲಿ ಎಲ್ಲಿ ಜೀವವು ಉತ್ಪನ್ನವಾಗುವ ಸ್ಥಾನಗಳಿವೆ ಅವನ್ನು ತಿಳಿದುಕೊಳ್ಳಬೇಕು. ಯಥಾಸ್ಥಾನದಲ್ಲಿ ಅವುಗಳ ವರ್ಣನೆಯು ಇದ್ದೇ ಇರುತ್ತದೆ.

೨) **ಹಿಂಸಕ** - ಹಿಂಸೆ ಮಾಡುವಂಥ ಜೀವನಿಗೆ ಹಿಂಸಕನೆಂದು ಹೇಳುತ್ತಾರೆ. ಅಲ್ಲಿ ಪ್ರಮಾದಭಾವರೂಪದಿಂದ ಪರಿಣಮನ ಮಾಡುವಂಥ ಅಥವಾ ಅಯತ್ನಾಚಾರದಲ್ಲಿ ಪ್ರವರ್ತನ ಮಾಡುವಂಥ ಜೀವವನ್ನು ಹಿಂಸಕನೆಂದು ತಿಳಿಯುವುದು.

**೩) ಹಿಂಸೆ -** ಹಿಂಸ್ಯನಿಗೆ ತೊಂದರೆ ತಲುಪಿಸುವುದು ಅಥವಾ ಅವನ ಘಾತಮಾಡುವುದು ಅದು ಹಿಂಸೆಯಿದೆ. ಅದರ ವರ್ಣನೆಯನ್ನು ಮೇಲೆ ಮಾಡಲಾಗಿದೆ.

**೪) ಹಿಂಸೆಯ ಫಲ -** ಹಿಂಸೆಯಿಂದ ಯಾವ ಒಂದಿಷ್ಟು ಫಲವು ಪ್ರಾಪ್ತವಾಗುವುದು ಅದನ್ನು ಹಿಂಸೆಯ ಫಲವೆಂದು ಹೇಳುತ್ತಾರೆ. ಈ ಲೋಕದಲ್ಲಂತೂ ಹಿಂಸಕ ಜೀವರುಗಳು ನಿಂದೆಗೆ ಪ್ರಾಪ್ತರಾಗುತ್ತಾರೆ. ದೊರೆಗಳ ಮೂಲಕ ದಂಡನೆಗೆ ಪ್ರಾಪ್ತರಾಗುತ್ತಾರೆ. ಮತ್ತು ಇವನು ಯಾವನ ಹಿಂಸೆ ಮಾಡಲು ಅಪೇಕ್ಷಿಸುತ್ತಾನೆ ಅವನ ವಶವರ್ತಿಯಾಗಿ ಹೋದರೆ ಅವನೇ ಇವನ ಘಾತಮಾಡಿಬಿಡುತ್ತಾನೆ. ಮತ್ತು ಪರಲೋಕದಲ್ಲಿ ನರಕ ಮೊದಲಾದ ಗತಿಯನ್ನು ಪಡೆಯುತ್ತಾನೆ. ಅಲ್ಲಿ ನಾನಾ ಪ್ರಕಾರದ ಛೇದನ-ಭೇದನ ಮೊದಲಾದ ಶಾರೀರಿಕ ಹಾಗೂ ಅನೇಕ ಪ್ರಕಾರದ ಮಾನಸಿಕ ಕಷ್ಟಗಳನ್ನು ಭೋಗಿಸುತ್ತಾನೆ. ನರಕದ ವರ್ಣನೆಯನ್ನು ಯಾರು ಎಷ್ಟೆಂದು ಮಾಡುವರು ? ಅದು ಸಮಸ್ತ ದುಃಖಗಳ ಸಮುದಾಯವೇ ಇದೆ. ತಿರ್ಯಂಚಗತಿಯ ದುಃಖವು ಪ್ರತ್ಯಕ್ಷವಾಗಿಯೇ ಪ್ರತಿಭಾಸವಾಗುತ್ತದೆ. ಇದು ಎಲ್ಲವೂ ಹಿಂಸೆಯ ಫಲವಿದೆ. ಈ ಪ್ರಕಾರ ಹಿಂಸ್ಯನನ್ನು ತಿಳಿದುಕೊಂಡು ತಾನು ಸ್ವಯಂ ಅವನ ಘಾತ ಮಾಡಬಾರದು. ಹಿಂಸಕನನ್ನು ತಿಳಿದುಕೊಂಡು ತಾನು ಹಾಗೆ ಆಗಬಾರದು. ಹಿಂಸೆಯನ್ನು ತಿಳಿದುಕೊಂಡು ಅದರ ತ್ಯಾಗಮಾಡಬೇಕು ಮತ್ತು ಹಿಂಸೆಯ ಫಲವನ್ನು ತಿಳಿದುಕೊಂಡು ಅದರಿಂದ ಭಯಭೀತವಿರಬೇಕು. ಅದಕ್ಕಾಗಿ ಈ ನಾಲ್ಕು ಭೇದಗಳನ್ನು ತಿಳಿದುಕೊಳ್ಳಬೇಕಾಗುವುದು.

ಯಾವ ಜೀವರುಗಳು ಹಿಂಸೆಯ ತ್ಯಾಗ ಮಾಡಲು ಅಪೇಕ್ಷಿಸುತ್ತಾರೆ ಅವರು ಮೊದಲು ಏನು ಮಾಡಬೇಕೆಂಬುದನ್ನು ಈಗ ಹೇಳುತ್ತಾರೆ, -

ಮದ್ಯಂ ಮಾಂಸಂ ಕ್ಷೌದ್ರಂ ಪಂಚೋದುಂಬರಫಲಾನಿ ಯತ್ನೇನ ।
ಹಿಂಸಾವ್ಯುಪರತಿಕಾಮ್ಯೈರ್ಮೋಕ್ತವ್ಯಾನಿ ಪ್ರಥಮಮೇವ ॥೬೧॥

**ಅನ್ವಯಾರ್ಥ :- [ಹಿಂಸಾವ್ಯುಪರತಿಕಾಮ್ಯೈಃ]** ಹಿಂಸೆಯ ತ್ಯಾಗ ಮಾಡಲು ಬಯಸುವಂಥ ಪುರುಷರು **[ಪ್ರಥಮಮೇವ]** ಮೊತ್ತಮೊದಲು **[ಯತ್ನೇನ]** ಪ್ರಯತ್ನಪೂರ್ವಕವಾಗಿ **[ಮದ್ಯಂ]** ಮದ್ಯ-ಹೆಂಡ **[ಮಾಂಸಂ]** ಮಾಂಸ **[ಕ್ಷೌದ್ರಂ]** ಜೇನುತುಪ್ಪ ಮತ್ತು **[ಪಂಚೋದುಂಬರಫಲಾನಿ]** ಐದು ಉದುಂಬರ★ ಫಲಗಳನ್ನು **[ಭೋಕ್ತವ್ಯಾನಿ]** ಬಿಟ್ಟುಕೊಡಬೇಕಾಗುವುದು.

**ಟೀಕೆ :- 'ಹಿಂಸಾವ್ಯುಪರತಿಕಾಮ್ಯೈಃ ಪ್ರಥಮಂ ಏವ ಯತ್ನೇನ ಮದ್ಯಂ, ಮಾಂಸಂ, ಕ್ಷೌದ್ರಂ, ಪಂಚಉದುಂಬರ ಫಲಾನಿ ಮೋಕ್ತವ್ಯಾನಿ' -** ಯಾವ ಜೀವರುಗಳು ಹಿಂಸೆಯ ತ್ಯಾಗ ಮಾಡಲು ಬಯಸುತ್ತಾರೆ ಅವರು ಮೊತ್ತ ಮೊದಲು ಯತ್ನಪೂರ್ವಕವಾಗಿ ಮದ್ಯ, ಮಾಂಸ, ಮಧು ಮತ್ತು ಐದು ಉದುಂಬರ ಫಲ ಈ ಎಂಟು ವಸ್ತುಗಳ ತ್ಯಾಗ ಮಾಡುವುದು ಯೋಗ್ಯವಿದೆ.

ಈಗ ಪ್ರಾರಂಭದಲ್ಲಿ ಮದ್ಯದ ದೋಷವನ್ನು ಹೇಳುತ್ತಾರೆ, -

ಮದ್ಯಂ ಮೋಹಯತಿ ಮನೋ ಮೋಹಿತಚಿತ್ತಸ್ತು ವಿಸ್ಮರತಿ ಧರ್ಮಮ್ ।
ವಿಸ್ಮೃತಧರ್ಮಾ ಜೀವೋ ಹಿಂಸಾಮವಿಶಂಕಮಾಚರತಿ ॥೬೨॥

**ಅನ್ವಯಾರ್ಥ :- [ಮದ್ಯಂ]** ಮದ್ಯವು **[ಮನೋಮೋಹಯತಿ]** ಮನಸ್ಸನ್ನು ಮೋಹಿತ ಮಾಡುತ್ತದೆ.

★ ಅತ್ತಿ-ಆಲ-ಅರಳಿ-ಗೋಳಿ-ಬಸರಿ ಇವು ಐದು ಉದುಂಬರ ಫಲಗಳಿವೆ.

ಮತ್ತು **[ಮೋಹಿತಚಿತ್ತಃತು]** ಮೋಹಿತವಾದ ಚಿತ್ತವುಳ್ಳ ಪುರುಷನಂತೂ **[ಧರ್ಮಮ್]** ಧರ್ಮವನ್ನು **[ವಿಸ್ಮರತಿ]** ಮರೆತು ಹೋಗುತ್ತಾನೆ. ಮತ್ತು **[ವಿಸ್ಮೃತಧರ್ಮಾ]**ಧರ್ಮವನ್ನು ಮರೆತುಹೋದ **[ಜೀವಃ]** ಜೀವನು **[ಅವಿಶಂಕಮ್]** ನಿಃಶಂಕನಾಗಿ - ನಿಷ್ಠುರನಾಗಿ **[ಹಿಂಸಾಂ]** ಹಿಂಸೆಯ **[ಆಚರತಿ]** ಆಚರಣೆ ಮಾಡುತ್ತಾನೆ.

**ಟೀಕೆ ಃ- 'ಮದ್ಯಂ ಮನಃ ಮೋಹಯತಿ'** ಮದ್ಯವು ಮನಸ್ಸನ್ನು ಮೋಹಿತ ಮಾಡುತ್ತದೆ. ಮದ್ಯ ಕುಡಿದ ನಂತರ ಯಾವುದೇ ಪ್ರಜ್ಞೆ ಉಳಿಯುವುದಿಲ್ಲ. **'ತು ಮೋಹಿತಚಿತ್ತಃ ಧರ್ಮಂ ವಿಸ್ಮರತಿ'** ಮತ್ತು ಮೋಹಿತವಾದ ಚಿತ್ತವುಳ್ಳ ಮನುಷ್ಯನು ಧರ್ಮವನ್ನು ಮರೆತು ಹೋಗುತ್ತಾನೆ. ಪ್ರಜ್ಞೆಯಿಲ್ಲದೆ ಧರ್ಮವನ್ನು ಯಾರು ರಕ್ಷಿಸುವರು ? **'ವಿಸ್ಮೃತಧರ್ಮಾ ಜೀವಃ ಅವಿಶಂಕವ್ ಹಿಂಸಾ ಆಚರತಿ'** ಧರ್ಮವನ್ನು ಮರೆತುಹೋದಂಥ ಜೀವನು ನಿಃಶಂಕನಾಗಿ ನಿರ್ಭಯತೆಯಿಂದ ಹಿಂಸೆಯ ಆಚರಣೆ ಮಾಡುತ್ತಾನೆ ಧರ್ಮದ ಪ್ರಜ್ಞೆಯಿಲ್ಲದಿರುವುದರಿಂದ ಹಿಂಸೆ ಮಾಡುವಲ್ಲಿ ಯಾರ ಭಯ ಮಾಡುವನು ? ಆದುದರಿಂದ ಮದ್ಯವು ಪರಂಪರೆಯಿಂದ ಹಿಂಸೆಯ ಕಾರಣವಿದೆ.

ಈಗ ಮದ್ಯವು ಹಿಂಸೆಯ ಪ್ರತ್ಯಕ್ಷ ಕಾರಣವೆಂದು ತಿಳಿಸಿಕೊಡುತ್ತಾರೆ, -

ರಸಜಾನಾಂ ಚ ಬಹೂನಾಂ ಜೀವಾನಾಂ ಯೋನಿರಿಷ್ಯತೇ ಮದ್ಯಮ್ ।
ಮದ್ಯಂ ಭಜತಾಂ ತೇಷಾಂ ಹಿಂಸಾ ಸಂಜಾಯತೇऽವಶ್ಯಮ್ ॥೬೩॥

**ಅನ್ವಯಾರ್ಥ ಃ- [ಚ]** ಮತ್ತು **[ಮದ್ಯಂ]** ಮದ್ಯವು **[ಬಹೂನಾಂ]** ಬಹಳಷ್ಟು **[ರಸಜಾನಾಂ ಜೀವಾನಾಂ]** ರಸದಿಂದ ಉತ್ಪನ್ನವಾಗಿರುವ ಜೀವಗಳ **[ಯೋನಿಃ]** ಉತ್ಪತ್ತಿಸ್ಥಾನವೆಂದು **[ಇಷ್ಯತೇಃ]** ಮನ್ನಿಸಲಾಗುತ್ತದೆ. ಆದುದರಿಂದ ಯಾರು **[ಮದ್ಯಂ]** ಮದ್ಯದ ಸೇವನೆ ಮಾಡುತ್ತಾರೆ ಅವರಿಗೆ **[ತೇಷಾಂ]** ಆ ಜೀವಗಳ **[ಹಿಂಸಾ]** ಹಿಂಸೆಯು **[ಅವಶ್ಯಮ್]** ಅವಶ್ಯವಾಗಿಯೇ **[ಸಂಜಾಯತೇ]** ಆಗುತ್ತದೆ.

**ಟೀಕೆ ಃ- 'ಚ ಮದ್ಯಂ ರಸಜಾನಾಂ ಜೀವಾನಾಂ ಬಹೂನಾಂ ಯೋನಿಃ ಇಷ್ಯತೆ'** ಮದ್ಯವು ರಸದಿಂದ ಉತ್ಪನ್ನವಾಗಿರುವ ಬಹಳಷ್ಟು ಏಕೇಂದ್ರಿಯ ಮೊದಲಾದ ಜೀವಗಳ ಯೋನಿ ಎಂದರೆ ಉತ್ಪತ್ತಿಯ ಸ್ಥಾನವಿರುವುದರಿಂದ **'ಮದ್ಯಂ ಭಜತಾಂ ತೇಷಾಂ ಹಿಂಸಾ ಅವಶ್ಯಂ ಸಂಜಾಯತೇ'** - ಯಾರು ಮದಿರಾಪಾನ ಮಾಡುತ್ತಾರೆ ಅವರಿಗೆ ಆ ಮದ್ಯದಲ್ಲಿರುವ ಜೀವಗಳ ಹಿಂಸೆಯು ಅವಶ್ಯವಾಗಿ ಆಗುತ್ತದೆ. ಮದ್ಯದಲ್ಲಿ ಉತ್ಪನ್ನವಾಗುವ ಜೀವಗಳೆಲ್ಲವನ್ನೂ ಅವರು ಕುಡಿದು ಬಿಡುವುದರಿಂದ ಹಿಂಸೆಯು ಹೇಗಾಗುವುದಿಲ್ಲ ?

ಈಗ ಮದ್ಯದಲ್ಲಿ ಭಾವಿತ ಹಿಂಸೆಯನ್ನು ಹೇಳುತ್ತಾರೆ, -

ಅಭಿಮಾನಭಯಜುಗುಪ್ಸಾ ಹಾಸ್ಯರತಿಶೋಕಕಾಮಕೋಪಾದ್ಯಾಃ ।
ಹಿಂಸಾಯಾಃ ಪರ್ಯಾಯಾಃ ಸರ್ವೇऽಪಿ ಚ ಸರಕಸನ್ನಿಹಿತಾಃ ॥೬೪॥

**ಅನ್ವಯಾರ್ಥ ಃ- [ಚ]** ಮತ್ತು **[ಅಭಿಮಾನ ಭಯ ಜುಗುಪ್ಸಾ ಹಾಸ್ಯಾರತಿಶೋಕಕಾಮಕೋಪಾದ್ಯಾಃ]** ಅಭಿಮಾನ, ಭಯ, ಜುಗುಪ್ಸೆ, ಗ್ಲಾನಿ, ಹಾಸ್ಯ, ಅರತಿ, ಶೋಕ, ಕಾಮ, ಕ್ರೋಧ ಮೊದಲಾದವು **[ಹಿಂಸಾಯಾಃ]** ಹಿಂಸೆಯ **[ಪರ್ಯಾಯಾಃ]** ಭೇದಗಳಿವೆ ಮತ್ತು **[ಸರ್ವೇऽಪಿ]** ಇವೆಲ್ಲವೂ **[ಸರಕಸನ್ನಿಹಿತಾ]** ಮದ್ಯದ ನಿಕಟವರ್ತಿಯಿವೆಯೆಂದು ತಿಳಿಯಬೇಕು.

**ಟೀಕೆ ಃ- 'ಚ ಅಭಿಮಾನಭಯಜುಗುಪ್ಸಾ ಹಾಸ್ಯ ಅರತಿ ಶೋಕ ಕಾಮ ಕೋಪಾದ್ಯಾಃ ಹಿಂಸಾಯಾಃ ಪರ್ಯಾಯಾಃ ಸರ್ವೇ ಅಪಿ ಸರಕಸನ್ನಿಹಿತಾಃ'** - ಮತ್ತು ಅಭಿಮಾನ, ಭಯ, ಜುಗುಪೆ, ಹಾಸ್ಯ, ಅರತಿ,

ಶೋಕ, ಕಾಮ, ಕ್ರೋಧ ಮೊದಲಾದ ಎಷ್ಟು ಹಿಂಸೆಯ ಭೇದಗಳಿವೆ ಅವೆಲ್ಲವೂ ಮದ್ಯದ ನಿಕಟವರ್ತಿಯಿವೆ ಒಂದು ಮದಿರಾಪಾನ ಮಾಡುವುದರಿಂದ ಅವೆಲ್ಲವೂ ಎಷ್ಟು ತೀವ್ರರೂಪದಿಂದ ಪ್ರಕಟವಾಗುತ್ತವೆಯೆಂದರೆ ಆ ಮನುಷ್ಯನು ತನ್ನ ಮಾತೆಯ ಜತೆಯಲ್ಲಿಕೂಡ ಕಾಮಕ್ರೀಡೆ ಮಾಡುವುದಕ್ಕೆ ಸಿದ್ಧನಾಗಿ ಹೋಗುತ್ತಾನೆ. ಅಭಿಮಾನಾದಿಗಳ ಲಕ್ಷಣವನ್ನು ಈ ಮೊದಲೇ ವರ್ಣನೆ ಮಾಡಿಯಾಗಿದೆ. ಈ ಪ್ರಕಾರ ಮದ್ಯದ ಪ್ರತ್ಯಕ್ಷ ದೋಷವನ್ನು ತಿಳಿದುಕೊಂಡು ಮದಿರಾಪಾನದ ತ್ಯಾಗ ಮಾಡುವುದು ಯೋಗ್ಯವಿದೆ. ಇದರ ಹೊರತಾಗಿ ಉಳಿದ ಯಾವ ಮಾದಕ-ಅಮಲೇರಿಸುವ ಪದಾರ್ಥಗಳಿವೆ ಅವುಗಳಲ್ಲಿ ಕೂಡ ಹಿಂಸೆಯ ಭೇದಗಳು ಪ್ರಕಟವಾಗುತ್ತವೆ. ಆದುದರಿಂದ ಅವೆಲ್ಲವುಗಳ ತ್ಯಾಗ ಮಾಡುವುದು ಉಚಿತವಿದೆ.

ಈಗ ಮಾಂಸದ ದೋಷವನ್ನು ತಿಳಿಸಿಕೊಡುತ್ತಾರೆ, -

ನ ವಿನಾ ಪ್ರಾಣಿವಿಘಾತಾನ್ಮಾಂಸಸ್ಯೋತ್ಪತ್ತಿರಿಷ್ಯತೇ ಯಸ್ಮಾತ್ ।
ಮಾಸಂ ಭಜತಸ್ತಸ್ಮಾತ್ ಪ್ರಸರತ್ಯನಿವಾರಿತಾ ಹಿಂಸಾ ॥೬೫॥

**ಅನ್ವಯಾರ್ಥ ः- [ಯಸ್ಮಾತ್]** ಕಾರಣವೇನೆಂದರೆ **[ಪ್ರಾಣಿವಿಘಾತಾತ್ ವಿನಾ]** ಪ್ರಾಣಿಗಳ ಘಾತ ಮಾಡದ ಹೊರತಾಗಿ **[ಮಾಂಸಸ್ಯ]** ಮಾಂಸದ **[ಉತ್ಪತ್ತಿಃ]** ಉತ್ಪತ್ತಿಯನ್ನು **[ನ ಇಷ್ಯತೇ]** ಮನ್ನಿಸುವ ಸಾಧ್ಯತೆಯಿಲ್ಲ. **[ತಸ್ಮಾತ್]** ಆದುದರಿಂದ **[ಮಾಂಸಂ ಭಜತಃ]** ಮಾಂಸ ಭಕ್ಷ್ಯಣ ಮಾಡುವ ಪುರುಷರಿಗೆ **[ಅನಿವಾರಿತಃ]** ಅನಿವಾರ್ಯ ರೂಪದಿಂದ **[ಹಿಂಸಾ]** ಹಿಂಸೆಯು **[ಪ್ರಸರತಿ]** ಹರಡುತ್ತದೆ.

**ಟೀಕೆ ः- 'ಯಸ್ಮಾತ್ ಪ್ರಾಣಿ ವಿಘಾತಾತ್ ವಿನಾ ಮಾಂಸಸ್ಯ ಉತ್ಪತ್ತಿ ನ ಇಷ್ಯತೇ'** ಪ್ರಾಣಿಗಳ ಘಾತ ಮಾಡದ ಹೊರತಾಗಿ ಮಾಂಸದ ಉತ್ಪತ್ತಿಯು ಕಂಡು ಬರುವುದಿಲ್ಲ. ಮಾಂಸವು (ದ್ವೀಂದ್ರಿಯ ಮೊದಲಾದ) ಜೀವಗಳ ಶರೀರದಲ್ಲಿ ಇರುತ್ತದೆ. ಇತರೆಡೆಯಲ್ಲಿ ಇರುವುದಿಲ್ಲ. ಆದುದರಿಂದ ಅವುಗಳ ಘಾತ ಮಾಡಿದ ನಂತರವೇ ಮಾಂಸವು ದೊರಕುತ್ತದೆ. **'ತಸ್ಮಾತ್ ಮಾಂಸಂ ಭಜತಃ ಅನಿವಾರಿತಾ ಹಿಂಸಾ ಪ್ರಸರತಿ'** ಆದುದರಿಂದ ಮಾಂಸಭಕ್ಷಣ ಮಾಡುವವರಿಗೆ ಅನಿವಾರ್ಯವಾಗಿ ಹಿಂಸೆಯು ಹರಡುತ್ತದೆ-ತಗಲುತ್ತದೆ. ಮಾಂಸ ತಿನ್ನುವವನು ಹಿಂಸೆಯನ್ನು ಹೇಗೆ ಮಾಡುವುದಿಲ್ಲ ? ಎಂದರೆ ಅವಶ್ಯವಾಗಿ ಮಾಡಿಯೇ ಮಾಡುತ್ತಾನೆ.

ತಾನು ಜೀವವನ್ನು ಹೊಡೆಯದಿದ್ದರೆ ದೋಷವಿಲ್ಲವಲ್ಲವೇ ? ಎಂದು ಕೇಳಿದ ಪ್ರಶ್ನೆಯ ಉತ್ತರರೂಪವಾಗಿ ಈಗ ಸೂತ್ರ ಹೇಳುತ್ತಾರೆ, -

ಯದಪಿ ಕಿಲ ಭವತಿ ಮಾಂಸಂ ಸ್ವಯಮೇವ ಮೃತಸ್ಯ ಮಹಿಷ ವೃಷಭಾದೇಃ ।
ತತ್ರಾಪಿ ಭವತಿ ಹಿಂಸಾ ತದಾಶ್ರಿತನಿಗೋತನಿರ್ಮಥನಾತ್ ॥೬೬॥

**ಅನ್ವಯಾರ್ಥ ः- [ಯದ್ಯಪಿ]** ಒಂದು ವೇಳೆ **[ಸ್ವಯಮೇವ]** ತಮ್ಮಿಂದ ತಾವೇ **[ಮೃತಸ್ಯ]** ಮರಣ ಹೊಂದಿದ **[ಮಹಿಷವೃಷಭಾದೇಃ]** ಎಮ್ಮೆ-ಎತ್ತು ಇವೇ ಮೊದಲಾದವುಗಳ **[ಮಾಂಸಂ]** ಮಾಂಸವು **[ಭವತಿ ಕಿಲ]** ಇರುತ್ತದೆಯೆಂಬುದು ಸತ್ಯವಿದೆ, ಆದರೆ **[ತತ್ರಾಪಿ]** ಅದರಲ್ಲಿ ಕೂಡ ಎಂದರೆ ಆ ಮಾಂಸದ ಭಕ್ಷಣ ಮಾಡುವುದರಲ್ಲಿ ಕೂಡ **[ತದಾಶ್ರಿತನಿಗೋತನಿರ್ಮಥನಾತ್]** ಆ ಮಾಂಸದ ಆಶ್ರಯದಿಂದ ಇರುವಂಥ ಅದೇ ಜಾತಿಯ ನಿಗೋದ ಜೀವಗಳ ಮಂಥನದಿಂದ **[ಹಿಂಸಾ]** ಹಿಂಸೆಯು **[ಭವತಿ]** ಆಗುತ್ತದೆ.

**ಟೀಕೆ ः- 'ಯದ್ಯಪಿ ಕಿಲ ಸ್ವಯಮೇವ ಮೃತಸ್ಯ ಮಹಿಷವೃಷಭಾದೇಃ ಭವತಿ ತತ್ರ ಅಪಿ ಹಿಂಸಾ ಭವತಿ'** ಒಂದು ವೇಳೆ ಪ್ರಕಟರೂಪದಿಂದ ತಮ್ಮಿಂದ ತಾವೇ ಸತ್ತು ಹೋದ ಎಮ್ಮೆ, ಎತ್ತು ಮೊದಲಾದ ಜೀವಗಳ

ಮಾಂಸವಿರುತ್ತದೆ. ಆದಾಗ್ಯೂ ಆ ಮಾಂಸ ಭಕ್ಷಣದಲ್ಲಿ ಕೂಡ ಹಿಂಸೆಯಾಗುತ್ತದೆ. ಹೇಗೆಂದರೆ **'ತದಾಶ್ರಿತ ನಿಗೋದ ನಿರ್ಮಥನಾತ್'** ತಾವಂತೂ ಜೀವವನ್ನು ಹೊಡೆದಿಲ್ಲ, ಆದಾಗ್ಯೂ ಕೂಡ ಆ ಮಾಂಸದ ಆಶ್ರಯದಿಂದ ನಿಗೋದ ರೂಪದ ಅನಂತ ಜೀವಗಳಿರುತ್ತವೆ ಅವುಗಳ ಘಾತಮಾಡುವುದರಿಂದ ಹಿಂಸೆಯಾಗುತ್ತದೆ.

ಈಗ ಮಾಂಸದಲ್ಲಿ ನಿಗೋದದ ಉತ್ಪತ್ತಿಯಿರುತ್ತದೆಯೆಂದು ಹೇಳುತ್ತಾರೆ, -

**ಆಮಾಸ್ವಪಿ ಪಕ್ವಾಸ್ವಪಿ ವಿಪಚ್ಯಮಾನಾಸು ಮಾಂಸಾಪೇಶೀಷು ।**
**ಸಾತತ್ಯೇನೋತ್ಪಾದಸ್ತಜ್ಜಾತೀನಾಂ ನಿಗೋತಾನಾಮ್ ॥೬೭॥**

**ಅನ್ವಯಾರ್ಥ :-** **[ಆಮಾಸು]** ಬೇಯಿಸದ **[ಪಕ್ವಾಸು]** ಬೇಯಿಸಿದ **[ಅಪಿ]** ಮತ್ತು **[ವಿಪಚ್ಯಮಾನಾಸು]** ಬೇಯುತ್ತಿರುವುದರಲ್ಲಿ **[ಅಪಿ]** ಕೂಡ **[ಮಾಂಸಪೇಶೀಷು]** ಮಾಂಸದ ಗ್ರಂಥಿಗಳಲ್ಲಿ **[ತಜ್ಜಾತೀನಾಂ]** ಅದೇ ಜಾತಿಯ **[ನಿಗೋತಾನಾಮ್]** ಸಮ್ಮೂರ್ಛನ ಜೀವಗಳ **[ಉತ್ಪಾದಃ]** ಉತ್ಪತ್ತಿಯು **[ಸಾತತ್ಯೇನ]** ನಿರಂತರ ಆಗುತ್ತದೆ.

**ಟೀಕೆ :- ಆಮಾಸ್ವಪಿ, ಪಕ್ವಾಸ್ವಪಿ ವಿಪಚ್ಯಮಾನಾಸು ಮಾಂಸಪೇಶೀಷು ತಜ್ಜಾತೀನಾಂ ನಿಗೋತಾನಾಂ ಸಾತತ್ಯೇನ ಉತ್ಪಾದಃ ಅಸ್ತಿ'** - ಅಪಕ್ವವಿರಲಿ, ಬೆಂಕಿಯಿಂದ ಪಕ್ವವಾದದ್ದಿರಲಿ ಅಥವಾ ಬೆಂಕಿಯ ಮೇಲೆ ಕುದಿಯುವಂಥದ್ದಿರಲಿ ಇಂಥ ಎಲ್ಲ ಪ್ರಕಾರದ ಮಾಂಸದ ತುಂಡುಗಳಲ್ಲಿ ಅದೇ ಜಾತಿಯ ಅನಂತ ನಿಗೋದ ಜೀವಗಳ ಉತ್ಪತ್ತಿಯು ಸಮಯ ಸಮಯಕ್ಕೆ ನಿರಂತರವಾಗಿ ಆಗುತ್ತಿರುತ್ತದೆ. ಎಲ್ಲ ಅವಸ್ಥೆಗಳಲ್ಲಿ ಮಾಂಸದ ತುಂಡುಗಳಲ್ಲಿ ನಿರಂತರವಾಗಿ ಅದೇ ಮಾಂಸದಂತಿರುವ ನವೀನ ನವೀನವಾಗಿ ಅನಂತ ಜೀವಗಳು ಉತ್ಪನ್ನವಾಗುತ್ತಿರುತ್ತವೆ.

ಈಗ ಮಾಂಸದಿಂದ ಹಿಂಸೆಯಾಗುತ್ತದೆಯೆಂದು ಪ್ರಕಟ ಮಾಡುತ್ತಾರೆ.

**ಆಮಾಂ ವಾ ಪಕ್ವಾಂ ವಾ ಖಾದತಿ ಯಃಸ್ಪ್ರಶತಿ ವಾ ಪಿಶಿತಪೇಶೀಮ್ ।**
**ಸ ನಿಹಂತಿ ಸತತನಿಚಿತಂ ಪಿಂಡಂ ಬಹುಜೀವಕೋಟೀನಾಮ್ ॥೬೮॥**

**ಅನ್ವಯಾರ್ಥ :-** **[ಯಃ]** ಯಾವ ಜೀವನು **[ಆಮಾಂ]** ಬೇಯಿಸದ **[ವಾ]** ಅಥವಾ **[ಪಕ್ವಾಂ]** ಬೆಂಕಿಯಲ್ಲಿ ಬೇಯಿಸಿದ **[ಪಿಶಿತಪೇಶೀಮ್]** ಮಾಂಸದ ಗ್ರಂಥಿಯನ್ನು **[ಖಾದತಿ]** ತಿನ್ನುತ್ತಾನೆ. **[ವಾ]** ಅಥವಾ **[ಸ್ಪೃಶತಿ]** ಸ್ಪರ್ಶ ಮಾಡುತ್ತಾನೆ. **[ಸಃ]** ಆ ಪುರುಷನು **[ಸತತನಿಚಿತಂ]** ನಿರಂತರ ಏಕತ್ರವಾದ **[ಬಹುಜೀವಕೋಟೀನಾಮ್]** ಅನೇಕ ಜಾತಿಯ ಜೀವ ಸಮೂಹದ **[ಪಿಂಡಂ]** ಪುಂಜವನ್ನು **[ನಿಹಂತಿ]** ಘಾತ ಮಾಡುತ್ತಾನೆ.

**ಟೀಕೆ :- 'ಯಃ ಆಮಾಂ ವಾ ಪಕ್ವಾಂ ಪಿಶಿತಪೇಶೀಮ್ ಖಾದತಿ ವಾ ಸ್ಪೃಶತಿ ಸಃ ಸತತನಿಚಿತಂ ಬಹು ಜೀವಕೋಟೀನಾಮ್ ಪಿಂಡಂ ನಿಹಂತಿ'** - ಯಾವ ಜೀವನು ಬೇಯಿಸದ ಅಥವಾ ಅಗ್ನಿಯಲ್ಲಿ ಬೇಯಿಸಿರುವ ಮಾಂಸದ ತುಂಡನ್ನು ಭಕ್ಷಣ ಮಾಡುತ್ತಾನೆ ಅಥವಾ ಕೈ ಮೊದಲಾದವುಗಳಿಂದ ಸ್ಪರ್ಶ ಮಾಡುತ್ತಾನೆ. ಆ ಜೀವನು ಅದರಲ್ಲಿ ನಿರಂತರ ಅನೇಕ ಜಾತಿಯ ಜೀವಗಳು ಏಕತ್ರವಾದಂಥ ಆ ಪಿಂಡದ ಘಾತ ಮಾಡುತ್ತಾನೆ. ಮಾಂಸದಲ್ಲಂತೂ ನಿರಂತರ ಜೀವಗಳು ಉತ್ಪನ್ನವಾಗಿ ಆಗಿ ಏಕತ್ರವಾಗಿರುತ್ತವೆ. ಇವನು ಆ ಮಾಂಸದ ಭಕ್ಷಣ ಮಾಡಿ ಅಥವಾ ಸ್ಪರ್ಶ ಮಾಡಿ ಇವನಿಂದ ಆ ಜೀವಗಳ ಪರಮ ಹಿಂಸೆಯುಂಟಾಗುವುದರಿಂದ ಮಾಂಸದ ತ್ಯಾಗವನ್ನು ಅವಶ್ಯವಾಗಿ ಮಾಡಬೇಕಾಗುವುದು. ಇನ್ನಿತರ ವಸ್ತುಗಳಲ್ಲಿ ಕೂಡ ಬಹಳಷ್ಟು ಜೀವಗಳ ಉತ್ಪತ್ತಿಯಾಗುತ್ತಿರುವುದು ಕಂಡು ಬರುತ್ತದೆ. ಅವೆಲ್ಲ ವಸ್ತುಗಳ ತ್ಯಾಗ ಮಾಡುವುದು ಯೋಗ್ಯವಿದೆ.

ಈಗ ಜೇನುತುಪ್ಪದ ದೋಷವನ್ನು ತಿಳಿಸಿಕೊಡುತ್ತಾರೆ, -

**ಮಧುಶಕಲಮಪಿ ಪ್ರಾಯೋ ಮಧುಕರಹಿಂಸಾತ್ಮಕಂ ಭವತಿ ಲೋಕೇ ।**
**ಭಜತಿ ಮಧು ಮೂಢಧೀಕೋ ಯಃ ಸ ಭವತಿ ಹಿಂಸಕೋಽತ್ಯಂತಮ್ ।।೬೯।।**

**ಅನ್ವಯಾರ್ಥ :-** **[ಲೋಕೇ]** ಈ ಲೋಕದಲ್ಲಿ **[ಮಧುಶಕಲಮಪಿ]** ಜೇನುತುಪ್ಪದ ಒಂದು ಬಿಂದು ಕೂಡ **[ಪ್ರಾಯಃ]** ಬಹಳ ಮಾಡಿ **[ಮಧುಕರಹಿಂಸಾತ್ಮಕಂ]** ಮಧುಕರ - ದುಂಬಿಗಳ ಅಥವಾ ಜೇನುನೊಣಗಳ ಹಿಂಸಾಸ್ವರೂಪ **[ಭವತಿ]** ಆಗುತ್ತದೆ, ಆದುದರಿಂದ **[ಯಃ]** ಯಾವ **[ಮೂಢಧೀಕಃ]** ಮೂರ್ಖ ಬುದ್ಧಿಯ ಮನುಷ್ಯನು **[ಮಧು ಭಜತಿ]** ಜೇನುತುಪ್ಪದ ಭಕ್ಷಣ ಮಾಡುತ್ತಾನೆ. **[ಸಃ]** ಅವನು **[ಅತ್ಯಂತಂ ಹಿಂಸಕಃ]** ಅತ್ಯಂತ ಹಿಂಸೆ ಮಾಡುವಂಥವನಿರುತ್ತಾನೆ. ಆದುದರಿಂದ ಎಲ್ಲ ಪ್ರಕಾರದಿಂದ ಜೇನುತುಪ್ಪದ ತ್ಯಾಗ ಮಾಡುವುದು ಯೋಗ್ಯವಿದೆ.

ಪುನಃ ಅದೇ ಮಾತನ್ನು ಪ್ರಬಲವಾಗಿ ಹೇಳುತ್ತಾರೆ, -

**ಸ್ವಯಮೇವ ವಿಗಲಿತಂ ಯೋ ಗೃಹ್ಣೀಯಾದ್ವಾ ಛಲೇನ ಮಧುಗೋಲಾತ್ ।**
**ತತ್ರಾಪಿ ಭವತಿ ಹಿಂಸಾ ತದಾಶ್ರಯಪ್ರಾಣಿನಾಂ ಘಾತಾತ್ ।।೭೦।।**

**ಅನ್ವಯಾರ್ಥ :-** **[ಯಃ]** ಯಾವನು **[ಛಲೇನ]** ಕಪಟದಿಂದ **[ವಾ]** ಅಥವಾ **[ಗೋಲಾತ್]** ಜೇನುಗೂಡಿನೊಳಗಿಂದ **[ಸ್ವಯಮೇವ ವಿಗಲಿತಮ್]** ತನ್ನಿಂದ ತಾನೇ ಉದುರಿದ **[ಮಧು]** ಜೇನುತುಪ್ಪದ **[ಗೃಹೀಯಾತ್]** ಗ್ರಹಣ ಮಾಡುತ್ತಾನೆ. **[ತತ್ರಾಪಿ]** ಅದರಲ್ಲಿ ಕೂಡ **[ತದಾಶ್ರಯಪ್ರಾಣಿನಾಮ್]** ಅದರ ಆಶ್ರಯಭೂತವಾದ ಜಂತುಗಳ **[ಘಾತಾತ್]** ಘಾತದಿಂದ **[ಹಿಂಸಾ ಭವತಿ]** ಹಿಂಸೆಯಾಗುತ್ತದೆ.

ಈಗ ಈ ತ್ಯಾಗವನ್ನು ಸಮುಚ್ಚಯ ರೂಪದಿಂದ ಹೇಳುತ್ತಾರೆ, -

**ಮಧು ಮದ್ಯಂ ನವನೀತಂ ಪಿಶಿತಂ ಚ ಮಹಾವಿಕೃತಯಸ್ತಾಃ ।**
**ವಲ್ಭ್ಯಂತೇ ನ ವ್ರತಿನಾ ತದ್ವರ್ಣಾ ಜಂತವಸ್ತತ್ರ ।।೭೧।।**

**ಅನ್ವಯಾರ್ಥ :-** **[ಮಹಾವಿಕೃತಯಃ]** ಮಹಾನ್ ವಿಕಾರಗಳನ್ನು ಧಾರಣ ಮಾಡುವಂಥ **[ಮಧು]** ಜೇನುತುಪ್ಪ **[ಮದ್ಯ]** ಹೆಂಡ **[ನವನೀತಂ]** ಬೆಣ್ಣೆ **[ಚ]** ಮತ್ತು **[ಪಿಶಿತಂ]** ಮಾಂಸ **[ತಾಃ]** ಇವು ನಾಲ್ಕೂ ಪದಾರ್ಥಗಳನ್ನು **[ವ್ರತಿನಾ]** ವ್ರತೀ ಪುರುಷನು **[ನ ವಲ್ಭ್ಯಂತೇ]** ಭಕ್ಷಣ ಮಾಡಬಾರದು. ಕಾರಣವೇನೆಂದರೆ **[ತತ್ರ]** ಆ ವಸ್ತುಗಳಲ್ಲಿ **[ತದ್ವರ್ಣಾ]** ಅದೇ ಜಾತಿಯ ಅದೇ ವರ್ಣಧಾರಿಯಾದ **[ಜಂತವಃ]** ಜೀವಗಳಿರುತ್ತವೆ.

**ಟೀಕೆ :-** **'ವ್ರತಿನಾ ಮಧು ಮದ್ಯಂ ನವನೀತಂ ಚ ಪಿಶಿತಂ ತಾಃ ಮಹಾವಿಕೃತಯಃ ನ ವಲ್ಭ್ಯಂತೇ'** ವ್ರತಧಾರಿಯಾದ ಜೀವರುಗಳು ಜೇನುತುಪ್ಪ, ಹೆಂಡ, ಬೆಣ್ಣೆ ಮತ್ತು ಮಾಂಸ ಇವು ಅಧಿಕ ವಿಕಾರವನ್ನು ಧಾರಣ ಮಾಡುವಂಥವುಗಳಿವೆ, ಮತ್ತು ಇವುಗಳ ಸಮಾನವಾಗಿರುವ ಅನ್ಯ ವಿಕಾರಯುಕ್ತ ಪದಾರ್ಥಗಳ ಭಕ್ಷಣವನ್ನು ಮಾಡಬಾರದು ಜೇನುತುಪ್ಪದ ಒಂದು ಬಿಂದು ಕೂಡ ಜೇನ್ನೊಣಗಳ ಹಿಂಸೆಯಿಂದ ಕೂಡಿರುತ್ತದೆ. ಜೇನು ತುಪ್ಪವನ್ನು ತಿನ್ನುವಂಥ ಮಂದ ಬುದ್ಧಿಗಳು ಅವರು ಅತ್ಯಂತ ಹಿಂಸಕರಿದ್ದಾರೆ. ತಾನಾಗಿಯೇ ಸೋರಿ ಬಂದ ಅಥವಾ ಮೋಸ ಮಾಡಿ ಜೇನುಗೂಡಿನಿಂದ ಜೇನು ತುಪ್ಪವನ್ನು ತೆಗೆದುಕೊಳ್ಳುವಂಥವರು ಕೂಡ ಹಿಂಸಕರಿದ್ದಾರೆ. ಏಕೆಂದರೆ ಜೇನುತುಪ್ಪದ ಆಶ್ರಯದಿಂದ ಇರುವಂಥ ಜೀವಗಳ ಹಿಂಸೆಯಂತೂ ಆ ಸಮಯದಲ್ಲಿಯೇ ಆಗುತ್ತದೆ. ಅದಕ್ಕಾಗಿಯೇ ವ್ರತೀ ಪುರುಷರು ಈ ವಸ್ತುಗಳ ಭಕ್ಷಣ ಮಾಡುವುದಿಲ್ಲ. ಏಕೆಂದರೆ **'ತತ್ರ ತದ್ವರ್ಣಾಃ ಜಂತವಃ'** - ಆ ವಸ್ತುಗಳಲ್ಲಿ ಅದೇ ವರ್ಣವುಳ್ಳ ಬಹಳಷ್ಟು ಜೀವಗಳಿರುತ್ತವೆ. ಎಂಥ ವಸ್ತುಗಳಿವೆ ಅಂಥ ಜೀವಗಳೇ ಅದರಲ್ಲಿ ಇರುತ್ತವೆ. ಅದರಂತೆ ಅನ್ಯ ವಸ್ತುಗಳನ್ನು

ಹೇಳುವುದೆಂದರೆ ಚರ್ಮದಿಂದ ಸ್ಪರ್ಶಿತವಾದ ತುಪ್ಪ, ಎಣ್ಣೆ, ನೀರು ಅಥವಾ ಉಪ್ಪಿನಕಾಯಿ, ವಿಷ, ಮಣ್ಣು ಇವೇ ಮೊದಲಾದ ಅಭಕ್ಷ್ಯ ವಸ್ತುಗಳ ತ್ಯಾಗ ಮಾಡುವುದು ಯೋಗ್ಯವಿದೆ. ಮುಖ್ಯ ರೂಪದಿಂದ ಮದ್ಯ, ಮಾಂಸ, ಮಧುಗಳ ತ್ಯಾಗ ಮಾಡಿಸಲಾಗಿದೆ ಅನಂತರ ಅಭಕ್ಷ್ಯ ವಸ್ತುಗಳನ್ನು ಬಿಡುವ ಉಪದೇಶ ಕೊಡಲಾಗಿದೆ.

ಈಗ ಐದು ಉದುಂಬರ ಫಲಗಳ ದೋಷವನ್ನು ತಿಳಿಸಿಕೊಡುತ್ತಾರೆ, -

**ಯೋನಿರುದುಂಬರಯುಗ್ಮಂ ಪ್ಲಕ್ಷನ್ಯಗ್ರೋಧಪಿಪ್ಪಲಫಲಾನಿ ।**
**ತ್ರಸಜೀವಾನಾಂ ಸ್ಯಾತ್ತೇಷಾಂ ತದ್ಭಕ್ಷಣೇ ಹಿಂಸಾ ।।೭೨।।**

**ಅನ್ವಯಾರ್ಥ :-** **[ಉದುಂಬರಯುಗ್ಮಂ]** ಎರಡು ವಿಧವಾದ ಅತ್ತಿಯ ಹಣ್ಣುಗಳು **[ಪ್ಲಕ್ಷನ್ಯಗ್ರೋಧಪಿಪ್ಪಲ- ಫಲಾನಿ]** ಬಸರಿ ಹಣ್ಣು, ಆಲದ ಹಣ್ಣು ಮತ್ತು ಅರಳಿ ವೃಕ್ಷದ ಹಣ್ಣು ಇವೆಲ್ಲವು **[ತ್ರಸ ಜೀವಾನಾಂ]** ತ್ರಸ ಜೀವಗಳ **[ಯೋನಿಃ]** ಉತ್ಪತ್ತಿಸ್ಥಾನಗಳಿವೆ **[ತಸ್ಮಾತ್]** ಆದುದರಿಂದ **[ತದ್ಭಕ್ಷಣೇ]** ಅವುಗಳ ಭಕ್ಷಣದಲ್ಲಿ **[ತೇಷಾಂ]** ಆ ತ್ರಸ ಜೀವಗಳ **[ಹಿಂಸಾ]** ಹಿಂಸೆಯಾಗುತ್ತದೆ.

**ಟೀಕೆ :- 'ಉದುಂಬರಯುಗ್ಮಂ ಪ್ಲಕ್ಷ ನ್ಯಗ್ರೋಧ ಪಿಪ್ಪಲಫಲಾನಿ ತ್ರಸಜೀವಾನಾಂ ಯೋನಿಃ'** - ಎರಡು ವಿಧವಾದ ಅತ್ತಿಯ ಹಣ್ಣುಗಳು ಹಾಗೂ ಬಸರಿ ಹಣ್ಣು, ಆಲದ ಹಣ್ಣು ಮತ್ತು ಅರಳಿ ವೃಕ್ಷದ ಹಣ್ಣು ಇವು ಮೂರು ಹೀಗೆ ಇವೆಲ್ಲವೂ ತ್ರಸ ಜೀವಗಳ ಯೋನಿಸ್ಥಾನಗಳಿವೆ. ಇವುಗಳಲ್ಲಿ ಹಾರುತ್ತಿರುವಂಥ ಜೀವಗಳು ಕಂಡು ಬರುತ್ತವೆ. **'ತಸ್ಮಾತ್ ತದ್ಭಕ್ಷಣೇ ತೇಷಾಂ ಹಿಂಸಾ ಭವತಿ'** - ಆದುದರಿಂದ ಈ ಐದು ವಸ್ತುಗಳ ಭಕ್ಷಣದಲ್ಲಿ ಆ ತ್ರಸ ಜೀವಗಳ ಹಿಂಸೆಯಾಗುತ್ತದೆ.

ಈ ಉದುಂಬರ ಮೊದಲಾದ ಐದು ಪ್ರಕಾರದ ಹಣ್ಣುಗಳಲ್ಲಿ ತ್ರಸ ಜೀವಗಳಿಲ್ಲದಾಗಂತೂ ತಿನ್ನಬಹುದಲ್ಲವೇ...? ಎಂಬ ಪ್ರಶ್ನೆಯ ಉತ್ತರ ರೂಪವಾಗಿ ಈಗ ಸೂತ್ರ ಹೇಳುತ್ತಾರೆ, -

**ಯಾನಿ ತು ಪುನರ್ಭವೇಯುಃ ಕಾಲೋಚ್ಛಿನ್ನತ್ರಸಾಣಿ ಶುಷ್ಕಾಣಿ ।**
**ಭಜತಸ್ತಾನ್ಯಪಿ ಹಿಂಸಾ ವಿಶಿಷ್ಟ ರಾಗಾದಿರೂಪಾ ಸ್ಯಾತ್ ।।೭೩।।**

**ಅನ್ವಯಾರ್ಥ :-** **[ತು ಪುನಃ]** ಮತ್ತೆ ಪುನಃ **[ಯಾನಿ]** ಈ ಐದು ಉದುಂಬರ ಫಲಗಳು **[ಶುಷ್ಕಾನಿ]** ಒಣಗಿ ಹೋಗಿ **[ಕಾಲೋಚ್ಛಿನ್ನತ್ರಸಾಣಿ]** ಸಮಯ ಕಳೆದ ಮೇಲೆ ತ್ರಸ ರಹಿತ **[ಭವೇಷು]** ಆಗಿ ಹೋಗಿದ್ದರೂ **[ತಾನ್ಯಪಿ ಭಜತಿ]** ಅವುಗಳ ಭಕ್ಷಣ ಮಾಡುವಂಥವರಿಗೆ ಕೂಡ **[ವಿಶಿಷ್ಟರಾಗಾದಿರೂಪಾ]** ವಿಶೇಷ ರಾಗಾದಿಗಳ ರೂಪದ **[ಹಿಂಸಾ]** ಹಿಂಸೆಯು **[ಸ್ಯಾತ್]** ಆಗುತ್ತದೆ.

**ಟೀಕೆ :- 'ತು ಪುನಃ ಯಾನಿ ಶುಷ್ಕಾಣಿ ಕಾಲೋಚ್ಛಿನ್ನತ್ರಸಾಣಿ ಭವೇಯುಃ ತಾನ್ಯಪಿ ಭಜತಃ ಹಿಂಸಾ ಸ್ಯಾತ್'**- ಮತ್ತೆ ಪುನಃ ಆ ಐದು ಉದುಂಬರ ಮೊದಲಾದ ಫಲಗಳು ಕಾಲ ಕಳೆದ ಮೇಲೆ ಜೀವದಿಂದ ರಹಿತವಾಗಿ ಒಣಗಿ ಹೋಗುವವು, ಆದಾಗ್ಯೂ ಕೂಡ ಅವನ್ನು ತಿನ್ನುವಂಥವರಿಗೆ ಹಿಂಸೆಯಾಗುತ್ತದೆ. **'ವಿಶಿಷ್ಟರಾಗಾದಿರೂಪಾ'**- ಅದರಲ್ಲಿ ವಿಶೇಷ ರಾಗಭಾವವಾಗಿರುವಂಥ ಸ್ವರೂಪವುಳ್ಳ ಹಿಂಸೆಯಾಗುತ್ತದೆ. ಅಧಿಕರಾಗವಿರದಿದ್ದರೆ ಇಂಥ ನಿಂದ್ಯ ವಸ್ತುಗಳನ್ನು ಏತಕ್ಕಾಗಿ ಗ್ರಹಣ ಮಾಡುತ್ತಾನೆ ? ಆದುದರಿಂದ ಎಲ್ಲಿ ಅಧಿಕ ರಾಗಭಾವವಾಗುವುದು ಅದುವೇ ಹಿಂಸೆಯಿದೆ. ಹೇಗೆಂದರೆ ಒಬ್ಬನು ಹಸಿರು ತರಕಾರಿ ವಸ್ತುಗಳನ್ನು ತಿನ್ನುವುದಿಲ್ಲ, ಆದರೆ ಆ ವಸ್ತುವಿನಲ್ಲಿ ರಾಗ ಭಾವದ ಸದ್ಭಾವವಿರುವುದರಿಂದ ಅದನ್ನು ಒಣಗಿಸಿ ತಿನ್ನುತ್ತಾರೆ. ಆ ರಾಗ ಭಾವವಿಲ್ಲದಿದ್ದರೆ ಏತಕ್ಕಾಗಿ ಇಂಥ ಪ್ರಯಾಸ

ಮಾಡುವನು ?

**ಪ್ರಶ್ನೆ :-** ಒಂದು ವೇಳೆ ಒಣಗಿರುವ ವಸ್ತುವಿನಲ್ಲಿ ದೋಷವಿದ್ದರೆ ಅನ್ನವನ್ನೇಕೆ ತಿನ್ನುತ್ತಾರೆ. ?

**ಉತ್ತರ :-** ಅನ್ನವು ನಿಂದ್ಯ ವಸ್ತುವಿಲ್ಲ. ಮತ್ತು ಅದಂತೂ ರಾಗಭಾವವಿಲ್ಲದೆ ಸ್ವಾಭಾವಿಕವಾದ ಪ್ರವೃತ್ತಿಯಿಂದ ಒಣಗುತ್ತದೆ. ಮತ್ತು ಅದರ ಭಕ್ಷಣ ಕೂಡ ಸಾಮಾನ್ಯವಾಗಿ ಹೊಟ್ಟೆ ತುಂಬಿಕೊಳ್ಳುವ ನಿಮಿತ್ತದಿಂದ ಮಾಡಲಾಗುತ್ತದೆ. ಆದುದರಿಂದ ಅದೇನು ವಿಶೇಷ ರಾಗವಾಗುವ ಕಾರಣವಿಲ್ಲ. ಇಲ್ಲಿಯಂತೂ ವಿಶೇಷರೂಪದಿಂದ ರಾಗಭಾವವಾಗುವುದೇ ಹಿಂಸೆಯೆಂದು ತಿಳಿಸಿಕೊಡಲಾಗಿದೆ.

ಈಗ ಈ ಕಥನದ ಸಂಕೋಚ ಮಾಡುತ್ತಾರೆ, -

ಅಷ್ಟಾವನಿಷ್ಟದುಸ್ತರದುರಿತಾಯತನಾನ್ಯಮೂನಿ ಪರಿವರ್ಜ್ಯ ।
ಜಿನಧರ್ಮದೇಶನಾಯಾ ಭವಂತಿ ಪಾತ್ರಾಣಿ ಶುದ್ಧಧಿಯಃ ॥೭೪॥

**ಅನ್ವಯಾರ್ಥ :- [ಅನಿಷ್ಟದುಸ್ತರದುರಿತಾಯತನಾನಿ ಅಮೂನಿ]** ದುಃಖದಾಯಕ, ದುಸ್ತರ ಮತ್ತು ಪಾಪದ ಸ್ಥಾನಗಳಾದಂಥ **[ಅಷ್ಟೌ]** ಎಂಟು ಪದಾರ್ಥಗಳ **[ಪರಿವರ್ಜ್ಯ]** ಪರಿತ್ಯಾಗ ಮಾಡಿ **[ಶುದ್ಧಧಿಯಃ]** ನಿರ್ಮಲ ಬುದ್ಧಿಯಿರುವಂಥ ಪುರುಷರು **[ಜೈನ ಧರ್ಮದೇಶನಾಯಾಃ]** ಜೈನ ಧರ್ಮದ ಉಪದೇಶಕ್ಕೆ **[ಪಾತ್ರಾಣಿ ಭವಂತಿ]** ಪಾತ್ರರಾಗುತ್ತಾರೆ.

**ಟೀಕೆ :- 'ಅನಿಷ್ಟದುಸ್ತರ ದುರಿತ ಆಯತನಾನಿ ಅಮೂನಿ ಅಷ್ಟೌ ಪರಿವರ್ಜ್ಯ ಶುದ್ಧಧಿಯಃ ಜಿನಧರ್ಮದೇಶನಾಯಾಃ ಪಾತ್ರಾಣಿ ಭವಂತಿ'** - ಮಹಾದುಃಖದಾಯಕ ಮತ್ತು ಸುಲಭತೆಯಿಂದ ಅವುಗಳನ್ನು ಪಾರುಗಾಣಲು ಸಾಧ್ಯವಿರದಂಥ ಮಹಾಪಾಪದ ಸ್ಥಾನರೂಪಗಳಾದ ಈ ಎಂಟು ವಸ್ತುಗಳನ್ನು ತಿನ್ನುವುದರಿಂದ ಮಹಾಪಾಪವು ಉತ್ಪನ್ನವಾಗುತ್ತದೆ. ಆದುದರಿಂದ ಇವನ್ನು ಸರ್ವಥಾ ಬಿಟ್ಟುಕೊಟ್ಟು ನಿರ್ಮಲ ಬುದ್ಧಿಯುಳ್ಳವನಾಗುತ್ತ ಜೈನ ಧರ್ಮದ ಉಪದೇಶಕ್ಕೆ ಪಾತ್ರನಾಗುತ್ತಾನೆ. ಮೊದಲು ಇವುಗಳ ತ್ಯಾಗ ಮಾಡಿಸಬೇಕು. ಅನಂತರವೇ ಬೇರೆ ಯಾವುದಾದರೂ ಉಪದೇಶ ಕೊಡಬೇಕು. ಯಾವ ಪ್ರಕಾರ ಮೂಲವಿಲ್ಲದೆ ವೃಕ್ಷವಿರುವುದಿಲ್ಲ, ಅದೇ ಪ್ರಕಾರ ಇವುಗಳ ತ್ಯಾಗ ಮಾಡಿದಲ್ಲದೆ ಶ್ರಾವಕನಾಗುವುದಿಲ್ಲ. ಅದರಿಂದಾಗಿಯೇ ಅವುಗಳ ಹೆಸರು ಮೂಲಗುಣವಿದೆ.

ಈಗ ಈ ಹಿಂಸೆ ಮೊದಲಾದವುಗಳ ತ್ಯಾಗ ಮಾಡುವುದರ ವಿಧಾನ ಹೇಳುತ್ತಾರೆ, -

ಕೃತಕಾರಿತಾನುಮನನೈರ್ವಾಕ್ಕಾಯಮನೋಭಿರಿಷ್ಯತೇ ನವಧಾ ।
ಔತ್ಸರ್ಗಿಕೀ ನಿವೃತ್ತಿರ್ವಿಚಿತ್ರರೂಪಾಪವಾದಿಕೀ ತ್ವೇಷಾ ॥೭೫॥

**ಅನ್ವಯಾರ್ಥ :- [ಔತ್ಸರ್ಗಿಕೀ ನಿವೃತ್ತಿಃ]** ಉತ್ಸರ್ಗರೂಪ ನಿವೃತ್ತಿಯು ಎಂದರೆ ಸಾಮಾನ್ಯ ತ್ಯಾಗವು **[ಕೃತಕಾರಿತಾನುಮನನೈಃ]** ಕೃತ, ಕಾರಿತ ಮತ್ತು ಅನುಮೋದನರೂಪ **[ವಾಕ್ಕಾಯಮನೋಭಿಃ]** ಮನ, ವಚನ ಮತ್ತು ಕಾಯದಿಂದ **[ನವಧಾ]** ಒಂಭತ್ತು ಪ್ರಕಾರದಿಂದ **[ಇಷ್ಯತೇ]** ಮನ್ನಿಸಲಾಗಿದೆ. **[ತು]** ಮತ್ತು **[ಏಷಾ]** ಈ **[ಅಪವಾದಿಕೀ]** ಅಪವಾದರೂಪ ನಿನ್ರತ್ತಿಯು **[ವಿಚಿತ್ರರೂಪಾ]** ಅನೇಕರೂಪವಿದೆ.

**ಟೀಕೆ :- 'ಔತ್ಸರ್ಗಿಕೀ ನಿವೃತ್ತಿಃ ಕೃತಕಾರಿತಾನುಮೋದನೈಃ ವಾಕ್ಕಾಯ ಮನೋಭಿಃ ನವಧಾ ಇಷ್ಯತೇ'** - ಈ ಉತ್ಸರ್ಗರೂಪ ತ್ಯಾಗವು ಕೃತ, ಕಾರಿತ, ಅನುಮೋದನದೊಡನೆ ಮನ, ವಚನ, ಕಾಯದ ಭೇದದಿಂದ ಒಂಭತ್ತು

ಪ್ರಕಾರದ್ದಾಗಿ ಹೇಳಲಾಗಿದೆ. **'ತು ಅಪವಾದಿಕೀ ಏಷಾ ವಿಚಿತ್ರರೂಪಾ'** ಮತ್ತು ಅಪವಾದರೂಪ ತ್ಯಾಗವು ಅನೇಕ ಪ್ರಕಾರದ್ದಿದೆ.

**ಭಾವಾರ್ಥ :-** ಹಿಂಸೆಯ ತ್ಯಾಗವು ಒಂದು ಉತ್ಸರ್ಗತ್ಯಾಗ ಮತ್ತು ಇನ್ನೊಂದು ಅಪವಾದ ತ್ಯಾಗವೆಂದು ಎರಡು ಪ್ರಕಾರದ್ದಿದೆ. ಉತ್ಸರ್ಗ ಎಂದರೆ ಸಾಮಾನ್ಯವಿದೆ. ಸಾಮಾನ್ಯ ರೂಪದಿಂದ ಸರ್ವಥಾ ಪ್ರಕಾರದ ತ್ಯಾಗ ಮಾಡುವುದನ್ನು ಉತ್ಸರ್ಗ ತ್ಯಾಗವೆಂದು ಹೇಳುತ್ತಾರೆ. ಅದರಲ್ಲಿ ಒಂಭತ್ತು ಭೇದಗಳಿವೆ. ಮನಸ್ಸಿನಿಂದ ಸ್ವಯಂ ಮಾಡುವ ಚಿಂತನೆ ಮಾಡದಿರುವುದು, ಇತರರ ಮೂಲಕ ಮಾಡಿಸುವ ಚಿಂತನೆ ಮಾಡದಿರುವುದು ಮತ್ತು ಯಾರಾದರೂ ಮಾಡಿದ್ದರೆ ಅದನ್ನು ಒಳ್ಳೆಯದೆಂದು ತಿಳಿಯದಿರುವುದು. ಮಾಡುವ ಸಲುವಾಗಿ ಸ್ವಯಂ ವಚನದಿಂದ ಹೇಳದಿರುವುದು, ಮಾಡಿಸುವ ಸಲುವಾಗಿ ಅನ್ಯರಿಗೆ ಉಪದೇಶ ಕೊಡದಿರುವುದು, ಯಾರಾದರೂ ಮಾಡಿದ್ದರೆ ಅದನ್ನು ಒಳ್ಳೆಯದೆಂದು ಹೇಳದಿರುವುದು. ಸ್ವಯಂ ಕಾಯದಿಂದ ಮಾಡದಿರುವುದು, ಅನ್ಯರಿಗೆ ಕೈ ಮೊದಲಾದವುಗಳಿಂದ ಪ್ರೇರಣೆ ಮಾಡಿ ಮಾಡಿಸದಿರುವುದು, ಯಾರಾದರೂ ಮಾಡಿದ್ದರೆ ಕೈ ಮೊದಲಾದವುಗಳಿಂದ ಅದರ ಪ್ರಶಂಸೆ ಮಾಡದಿರುವುದು. ಇವು ಒಂಭತ್ತು ಭೇದಗಳನ್ನು ಹೇಳಿದೆ. ಇನ್ನು ಅಪವಾದ ತ್ಯಾಗವು ಅನೇಕ ಪ್ರಕಾರದ್ದಿದೆ.ಈ ಒಂಭತ್ತು ಭಂಗಗಳನ್ನು ತಿಳಿಸಿದೆ. ಅವುಗಳೊಳಗಿಂದ ಅದೆಷ್ಟೋ ಭಂಗಗಳಿಂದ ಇಂಥ ಪ್ರಕಾರದ ತ್ಯಾಗ ಮಾಡಬೇಕು, ಇಂಥ ಪ್ರಕಾರದ ತ್ಯಾಗ ಮಾಡಬಾರದು ಅಥವಾ ಸ್ವಲ್ಪ ಇಲ್ಲವೆ ಅಧಿಕ ತ್ಯಾಗ ಮಾಡಬೇಕು, ನನಗೆ ಈ ರೀತಿಯಿಂದ ಈ ಕಾರ್ಯ ಮಾಡುವುದಿದೆ, ಈ ರೀತಿಯಿಂದ ಮಾಡುವುದಿಲ್ಲ. ಈ ಪ್ರಕಾರ ಅಪವಾದ ತ್ಯಾಗವು ಭಿನ್ನ ಭಿನ್ನ ಪ್ರಕಾರದ್ದಿದೆ. ಆದುದರಿಂದ ತಮಗೆ ಸಾಧ್ಯವಿರುವ ರೀತಿಯಿಂದ ತ್ಯಾಗ ಮಾಡಬೇಕು.

ಈಗ ಹಿಂಸೆಯ ತ್ಯಾಗದ ಎರಡು ಪ್ರಕಾರಗಳನ್ನು ಹೇಳುತ್ತಾರೆ, -

ಧರ್ಮಮಹಿಂಸಾರೂಪಂ ಸಂಶೃಣ್ವಂತೋಽಪಿ ಯೇ ಪರಿತ್ಯುಕ್ತಮ್ ।
ಸ್ಥಾವರಹಿಂಸಾಮಸಹಾಸ್ತ್ರಸಹಿಂಸಾಂ ತೇಽಪಿ ಮುಂಚಂತು ॥೭೬॥

**ಅನ್ವಯಾರ್ಥ :-** **[ಯೇ]** ಯಾವ ಜೀವರುಗಳು **[ಅಹಿಂಸಾರೂಪಂ]** ಅಹಿಂಸಾರೂಪದ **[ಧರ್ಮ]** ಧರ್ಮವನ್ನು **[ಸಂಶೃಣ್ವಂತಃ ಅಪಿ]** ಒಳ್ಳೆಯ ಪ್ರಕಾರದಿಂದ ಕೇಳಿಯು ಕೂಡ **[ಸ್ಥಾವರ ಹಿಂಸಾಂ]** ಸ್ಥಾವರ ಜೀವಗಳ ಹಿಂಸೆಯನ್ನು **[ಪರಿತ್ಯುಕ್ತಮ್]** ಬಿಡುವುದಕ್ಕೆ **[ಅಸಹಾಃ]** ಅಸಮರ್ಥರಿದ್ದಾರೆ **[ತೇ ಅಪಿ]** ಆ ಜೀವರುಗಳು ಕೂಡ **[ತ್ರಸ ಹಿಂಸಾಂ]** ತ್ರಸ ಜೀವಗಳ ಹಿಂಸೆಯನ್ನು **[ಮುಂಚಂತು]** ಬಿಟ್ಟು ಕೊಡಬೇಕು.

**ಟೀಕೆ :- 'ಯೇ ಅಹಿಂಸಾರೂಪಂ ಧರ್ಮಂ ಸಂಶೃಣ್ವಂತಃ ಅಪಿ ಸ್ಥಾವರಹಿಂಸಾಂ ಪರಿತ್ಯಕ್ತಮ್ ಅಸಹಾಃ ತೇ ಅಪಿ ತ್ರಸಹಿಂಸಾಂ ಮುಂಚಂತು'** - ಯಾವ ಜೀವರುಗಳು ಅಹಿಂಸೆಯೇ ತನ್ನ ಸ್ವರೂಪವಿರುವಂಥ ಧರ್ಮದ ಶ್ರವಣವನ್ನು ಗುರು ಮುಖದಿಂದ ಮಾಡಿಯೂ ಕೂಡ ರಾಗಭಾವದ ವಶದಿಂದ ಸ್ಥಾವರ ಹಿಂಸೆಯನ್ನು ಬಿಟ್ಟುಕೊಡುವುದಕ್ಕೆ ಸಮರ್ಥರಿಲ್ಲ ಅಂಥ ಜೀವರುಗಳು ಕೂಡ ತ್ರಸ ಹಿಂಸೆಯ ತ್ಯಾಗವನ್ನಂತೂ ಮಾಡಲೇಬೇಕಾಗುವುದು.

**ಭಾವಾರ್ಥ :-** ಹಿಂಸೆಯ ತ್ಯಾಗವು ಎರಡು ಪ್ರಕಾರದಿಂದ ಇದೆ. ಅದರಲ್ಲಿ ಒಂದಂತೂ ಸರ್ವಥಾ ತ್ಯಾಗವಿದ್ದು ಅದು ಮುನಿಧರ್ಮದಲ್ಲಿರುತ್ತದೆ ಅದನ್ನು ಅಂಗೀಕಾರ ಮಾಡಬೇಕಾಗುವುದು. ಆದರೆ ಒಂದು ವೇಳೆ ಕಷಾಯವಶದಿಂದ ಸರ್ವಥಾ ತ್ಯಾಗ ಸಂಭವಿಸದಿದ್ದರೆ ತ್ರಸ ಜೀವಗಳ ಹಿಂಸೆಯ ತ್ಯಾಗ ಮಾಡಿ ಶ್ರಾವಕ ಧರ್ಮವನ್ನು ಅಂಗೀಕಾರ ಮಾಡಬೇಕಾಗುವುದು. ಇಲ್ಲಿ ಯಾರಾದರೂ ತ್ರಸ ಜೀವದ ಸ್ವರೂಪ ವಿಚಾರಿಸಿದರೆ ಅವರಿಗೆ ಹೀಗೆ ಹೇಳುತ್ತಾರೆ.

ಸಂಸಾರೀ ಜೀವಗಳಲ್ಲಿ ಎರಡು ಪ್ರಕಾರಗಳಿದ್ದು ಅದರಲ್ಲಿ ಒಂದು ಸ್ಥಾವರವಿದ್ದರೆ ಇನ್ನೊಂದು ತ್ರಸವಿದೆ. ಒಂದು ಸ್ಪರ್ಶನೇಂದ್ರಿಯ ಸಹಿತವಾದ ಯಾವ ಏಕೇಂದ್ರಿಯ ಜೀವಗಳಿವೆ ಅವು ಸ್ಥಾವರವಿದೆ. ಅವುಗಳಲ್ಲಿ ಪೃಥ್ವೀಕಾಯಿಕ, ಜಲಕಾಯಿಕ, ಅಗ್ನಿಕಾಯಿಕ, ವಾಯುಕಾಯಿಕ ಮತ್ತು ವನಸ್ಪತಿಕಾಯಿಕವೆಂದು ಐದು ಭೇದಗಳಿವೆ. ದ್ವೀಂದ್ರಿಯ ಮೊದಲಾದ ಜೀವಗಳನ್ನು ತ್ರಸವೆಂದು ಹೇಳುತ್ತಾರೆ. ಅವುಗಳಲ್ಲಿ ನಾಲ್ಕು ಭೇದಗಳಿವೆ. ಸ್ಪರ್ಶನ ಮತ್ತು ರಸನೇಂದ್ರಿಯ ಸಹಿತ ಹೇನು, ಶಂಖ ಮೊದಲಾದ ಎರಡು ಇಂದ್ರಿಯ ಜೀವಗಳಿವೆ. ಸ್ಪರ್ಶನ, ರಸನ ಮತ್ತು ಘ್ರಾಣೇಂದ್ರಿಯ ಸಹಿತ ಇರುವೆ, ನೊಣ ಮೊದಲಾದ ಮೂರು ಇಂದ್ರಿಯ ಜೀವಗಳಿವೆ. ಸ್ಪರ್ಶನ, ರಸನ, ಘ್ರಾಣ ಮತ್ತು ಚಕ್ಷುರೇಂದ್ರಿಯ ಸಹಿತ ದುಂಬಿ, ಪತಂಗದ ಹುಳು ಮೊದಲಾದ ನಾಲ್ಕು ಇಂದ್ರಿಯ ಜೀವಗಳಿವೆ. ಸ್ಪರ್ಶನ, ರಸನ, ಘ್ರಾಣ, ಚಕ್ಷು ಮತ್ತು ಕರ್ಣೇಂದ್ರಿಯ ಸಹಿತ ಜೀವಗಳು ಪಂಚೇಂದ್ರಿಯಗಳಿವೆ. ಅವುಗಳಲ್ಲಿ ಎರಡು ಭೇದಗಳಿದ್ದು ಯಾವುದರಲ್ಲಿ ಮನಸ್ಸು ಕಂಡು ಬರುತ್ತದೆ. ಅದನ್ನು ಸಂಜ್ಞಿಯೆಂದು ಮತ್ತು ಯಾವುದರಲ್ಲಿ ಮನಸ್ಸು ಕಂಡು ಬರುವುದಿಲ್ಲ ಅದನ್ನು ಅಸಂಜ್ಞಿಯೆಂದು ಹೇಳುತ್ತಾರೆ. ಇವುಗಳಲ್ಲಿ ಸಂಜ್ಞೀ ಪಂಚೇಂದ್ರಿಯವನ್ನು ಹೊರತುಪಡಿಸಿ ಉಳಿದವುಗಳೆಲ್ಲವೂ ತಿರ್ಯಂಚಗತಿಯ ಭೇದಗಳಿವೆ. ಸಂಜ್ಞೀ ಪಂಚೇಂದ್ರಿಯಗಳಲ್ಲಿ ದೇವ, ಮನುಷ್ಯ, ನಾರಕೀ ಮತ್ತು ತಿರ್ಯಂಚವೆಂದು ನಾಲ್ಕು ಪ್ರಕಾರಗಳಿವೆ. ದೇವಗಳಲ್ಲಿ ಭವನವಾಸೀ, ವ್ಯಂತರ, ಜ್ಯೋತಿಷೀ ಮತ್ತು ಕಲ್ಪವಾಸಿಯ ಭೇದದಿಂದ ನಾಲ್ಕು ಪ್ರಕಾರಗಳಿವ. ಮನುಷ್ಯರಲ್ಲಿ ಆರ್ಯ ಮತ್ತು ಮ್ಲೇಚ್ಛದ ಭೇದದಿಂದ ಎರಡು ಪ್ರಕಾರಗಳಿವೆ. ನಾರಕೀ ಜೀವಗಳು ಏಳು ಭೂಮಿಗಳ ಅಪೇಕ್ಷೆಯಿಂದ ಏಳು ಪ್ರಕಾರವಾಗಿವೆ. ತಿರ್ಯಂಚಗಳಲ್ಲಿ ಮತ್ಸ್ಯ ಮೊದಲಾದ ಜಲಚರ, ವೃಷಭ ಮೊದಲಾದ ಸ್ಥಲಚರ ಮತ್ತು ಹಂಸ ಮೊದಲಾದ ನಭಚರವೆಂದು ಮೂರು ಪ್ರಕಾರವಿವೆ. ತ್ರಸ-ಸ್ಥಾವರದ ಈ ಭೇದಗಳನ್ನು ತಿಳಿದುಕೊಂಡು ಇವುಗಳ ರಕ್ಷಣೆ ಮಾಡಬೇಕಾಗುವುದು.

ಈಗ ಶ್ರಾವಕರ ಸ್ಥಾವರ ಹಿಂಸೆಯಲ್ಲಿ ಕೂಡ ಸ್ವಚ್ಛಂದತೆಯ ನಿಷೇಧ ಮಾಡುತ್ತಾರೆ, -

**ಸ್ತೋಕೈಕೇಂದ್ರಿಯಘಾತಾದ್ಗೃಹಿಣಾಂ ಸಂಪನ್ನಯೋಗ್ಯವಿಷಯಾಣಾಮ್ ।**
**ಶೇಷಸ್ಥಾವರಮಾರಣವಿರಮಣಮಪಿ ಭವತಿ ಕರಣೀಯಮ್ ॥೭೭॥**

**ಅನ್ವಯಾರ್ಥ :- [ಸಂಪನ್ನಯೋಗ್ಯವಿಷಯಾಣಾಮ್]** ಇಂದ್ರಿಯ-ವಿಷಯಗಳನ್ನು ನ್ಯಾಯಪೂರ್ವಕವಾಗಿ ಸೇವನೆ ಮಾಡುವಂಥ **[ಗೃಹಿಣಾಮ್]** ಗೃಹಸ್ಥರಿಗೆ **[ಸ್ತೋಕೈಕೇಂದ್ರಿಯಘಾತಾತ್]** ಅಲ್ಪ ಏಕೇಂದ್ರಿಯದ ಘಾತದ ಹೊರತಾಗಿ **[ಶೇಷಸ್ಥಾವರಮಾಣರವಿರಮಣಮಪಿ]** ಉಳಿದ ಸ್ಥಾವರ **[ಏಕೇಂದ್ರಿಯ]** ಜೀವಗಳನ್ನು ಕೊಲ್ಲುವ ತ್ಯಾಗ ಕೂಡ **[ಕರಣೀಯಮ್ ಭವತಿ]** ಮಾಡುವುದು ಯೋಗ್ಯವಿದೆ.

**ಟೀಕೆ :- 'ಸಂಪನ್ನಯೋಗ್ಯವಿಷಯಾಣಾಂ ಗೃಹಿಣಾಂ ಸ್ತೋಕೈಕೇಂದ್ರಿಯಘಾತಾತ್ ಶೇಷಸ್ಥಾವರಮಾರಣ ವಿರಮಣಮ್ ಅಪಿ ಕರಣೀಯಮ್ ಭವತಿ' -** ನ್ಯಾಯಪೂರ್ವಕವಾಗಿ ಇಂದ್ರಿಯ ವಿಷಯಗಳನ್ನು ಸೇವನೆ ಮಾಡುವಂಥ ಶ್ರಾವಕರಿಗೆ ಯತ್ನ ಮಾಡಿದರೂ ಕೂಡ ಸ್ವಲ್ಪ ಏಕೇಂದ್ರಿಯದ ಘಾತವಾಗುತ್ತದೆ. ಅದಂತೂ ಆಗಲಿ, ಆದರೆ ಉಳಿದ ಸ್ಥಾವರ ಜೀವಗಳನ್ನು ಕಾರಣವಿಲ್ಲದೆ ಹೊಡೆಯುವ ತ್ಯಾಗ ಕೂಡ ಅವರು ಮಾಡುವುದು ಯೋಗ್ಯವಿದೆ.

**ಭಾವಾರ್ಥ :-** ಯೋಗ್ಯ ವಿಷಯಗಳ ಸೇವನೆ ಮಾಡುವ ಸಮಯದಲ್ಲಿ ಸಾವಧಾನತೆಯು ವರ್ತಿಸುತ್ತಿದ್ದರೂ ಕೂಡ ಸ್ಥಾವರದ ಹಿಂಸೆಯಾಗುತ್ತದೆ. ಅದಂತೂ ಆಗಿಯೇ ಆಗುತ್ತದೆ. ಆದರೆ ಇತರ ಸ್ಥಾವರ ಜೀವಗಳ ಹಿಂಸೆ ಮಾಡುವ ತ್ಯಾಗವನ್ನಂತೂ ಮಾಡಬೇಕಾಗುವುದು.

ಈಗ ಈ ಅಹಿಂಸಾಧರ್ಮದ ಸಾಧನೆ ಮಾಡುತ್ತಿರುವಾಗ ಸಾವಧಾನ ಮಾಡುತ್ತಾರೆ,

**ಅಮೃತತ್ವಹೇತುಭೂತಂ ಪರಮಮಹಿಂಸಾರಸಾಯನಂ ಲಬ್ಧ್ವಾ ।**
**ಅವಲೋಕ್ಯ ಬಾಲಿಶಾನಾಮಸಮಂಜಸಮಾಕುಲೈರ್ನ ಭವಿತವ್ಯಮ್ ॥೭೮॥**

**ಅನ್ವಯಾರ್ಥ :- [ಅಮೃತತ್ವಹೇತು ಭೂತಂ]** ಅಮೃತ ಎಂದರೆ ಮೋಕ್ಷದ ಕಾರಣಭೂತವಿರುವ **[ಪರಮಂ]** ಉತ್ಕೃಷ್ಟವಾದ **[ಅಹಿಂಸಾರಸಾಯನಂ]** ಅಹಿಂಸಾರೂಪದ ರಸಾಯನವನ್ನು **[ಲಬ್ಧ್ವಾ]** ಪ್ರಾಪ್ತ ಮಾಡಿಕೊಂಡು **[ಬಾಲಿಶಾನಾಂ]** ಅಜ್ಞಾನೀ ಜೀವರುಗಳ **[ಅಸಮಂಜಸಮ್]** ಅಸಂಗತವಾದ ವರ್ತನವನ್ನು **[ಅವಲೋಕ್ಯ]** ನೋಡಿ **[ಆಕುಲೈಃ ನ ಭವಿತವ್ಯಮ್]** ವ್ಯಾಕುಲಚಿತ್ತರಾಗಬಾರದು.

**ಟೀಕೆ :- ಅಮೃತತ್ವಹೇತುಭೂತಂ ಪರಮ ಅಹಿಂಸಾ ರಸಾಯನಂ ಲಬ್ಧ್ವಾ ಬಾಲಿಶಾನಾಂ ಅಸಮಂಜಸಮ್ ಅವಲೋಕ್ಯ ಆಕುಲೈಃ ನ ಭವಿತವ್ಯಮ್'** - ಮೋಕ್ಷದ ಕಾರಣಭೂತವಾದ ಉತ್ಕೃಷ್ಟ ಅಹಿಂಸಾರೂಪದ ರಸಾಯನವನ್ನು ಪ್ರಾಪ್ತ ಮಾಡಿಕೊಂಡು ಅಜ್ಞಾನೀ ಜೀವರುಗಳ ಮಿಥ್ಯಾತ್ವ ಭಾವವನ್ನು ನೋಡಿ ತಾವು ವ್ಯಾಕುಲರಾಗಬಾರದು.

**ಭಾವಾರ್ಥ :-** ತಾವಂತೂ ಅಹಿಂಸಾ ಧರ್ಮದ ಸಾಧನೆ ಮಾಡುತ್ತಿರುವುದು ಮತ್ತು ಯಾವನೋ ಓರ್ವ ಮಿಥ್ಯಾದೃಷ್ಟಿಯು ಅನೇಕ ಯುಕ್ತಿಗಳಿಂದ ಹಿಂಸೆಯನ್ನು ಧರ್ಮವೆಂದು ನಿಶ್ಚಯಮಾಡಿ ಅದರಲ್ಲಿ ಪ್ರವರ್ತನೆ ಮಾಡಿದರೆ ಅವನ ಕೀರ್ತಿಯನ್ನು ಕಂಡು ತಮಗೆ ಧರ್ಮದಲ್ಲಿ ವ್ಯಾಕುಲತೆಯು ಉತ್ಪನ್ನವಾಗಬಾರದು. ಅಥವಾ ತಮಗಂತೂ ಒಂದು ಒಂದು ವೇಳೆ ಬಹಳಷ್ಟು ಪೂರ್ವಬದ್ಧ ಪಾಪದ ಉದಯದಿಂದ ಅಸಾತಾವು ಉತ್ಪನ್ನವಾಗಿದ್ದರೆ ಮತ್ತು ಅವನಿಗಂತೂ ಬಹಳಷ್ಟು ಪೂರ್ವಪುಣ್ಯದ ಉದಯದಿಂದ ಒಂದಿಷ್ಟು ಸಾತಾವು ಉತ್ಪನ್ನವಾಗಿದ್ದರೂ ಕೂಡ ಆ ಉದಯಾವಸ್ಥೆಯ ವಿಚಾರ ಮಾಡಿ ತಾವು ಧರ್ಮದಲ್ಲಿ ಆಕುಲತೆಯನ್ನು ಮಾಡಬಾರದು.

ಮಿಥ್ಯಾದೃಷ್ಟಿಗಳು ಯುಕ್ತಿಯಿಂದ ಹಿಂಸೆಯಲ್ಲಿ ಧರ್ಮವಿದೆಯೆಂದು ನಿಶ್ಚಿತ ಮಾಡುತ್ತಾರೆ.ಮ ತ್ತು ಅದನ್ನು ಪ್ರಕಟಮಾಡಿ ಶ್ರದ್ಧೆಯುಳ್ಳ ಶ್ರಾವಕರನ್ನು ಸಾವಧಾನಗೊಳಿಸುತ್ತಾರೆ. ಆ ಹನ್ನೆರಡು ಸೂತ್ರಗಳನ್ನು ಈಗ ಹೇಳುತ್ತಾರೆ, -

**ಸೂಕ್ಷ್ಮೋ ಭಗವದ್ಧರ್ಮೋ ಧರ್ಮಾರ್ಥಂ ಹಿಂಸನೇ ನ ದೋಷೋಽಸ್ತಿ ।**
**ಇತಿ ಧರ್ಮಮುಗ್ಧಹೃದಯೈರ್ನ ಜಾತು ಭೂತ್ವಾ ಶರೀರಿಣೋ ಹಿಂಸ್ಯಾಃ ॥೭೯॥**

**ಅನ್ವಯಾರ್ಥ :- [ಭಗವದ್ಧರ್ಮಃ]** ವೀತರಾಗ ಸರ್ವಜ್ಞ ಭಗವಂತರು ಹೇಳಿರುವ ಧರ್ಮವು **[ಸೂಕ್ಷ್ಮಃ]** ಅತ್ಯಂತ ಸೂಕ್ಷ್ಮವಿರುವುದರಿಂದ **[ಧರ್ಮಾರ್ಥಂ]** ಧರ್ಮದ ನಿಮಿತ್ತದಿಂದ **[ಹಿಂಸನೇ]** ಹಿಂಸೆ ಮಾಡುವಲ್ಲಿ **[ದೋಷಃ ನಾಸ್ತಿ ಇತಿ]** ದೋಷವು ಇಲ್ಲವೆಂದು **[ಧರ್ಮಮುಗ್ಧಹೃದಯೈಃ ಭೂತ್ವಾ]** ಧರ್ಮಮೂಢ ಎಂದರೆ ಭ್ರಾಂತಿರೂಪ ಹೃದಯವುಳ್ಳವರಾಗಿ **[ಜಾತು]** ಎಂದೂ **[ಶರೀರಿಣಃ]** ಶರೀರ ಧರಿಸಿದ ಜೀವಗಳನ್ನು **[ನ ಹಿಂಸ್ಯಾಃ]** ಹೊಡೆಯಬಾರದು.

**ಟೀಕೆ :- 'ಭಗವದ್ಧರ್ಮಃ ಸೂಕ್ಷ್ಮಃ** - ಜ್ಞಾನ ಸಹಿತವಾದ ಧರ್ಮವು ಸೂಕ್ಷ್ಮವಿದೆ. ಆದುದರಿಂದ **'ಧರ್ಮಾರ್ಥೇ ಹಿಂಸನೇ ದೋಷಃ ನ ಅಸ್ತಿ'** - ಧರ್ಮದ ನಿಮಿತ್ತದಿಂದ ಹಿಂಸೆ ಮಾಡುವಲ್ಲಿ ದೋಷವಿಲ್ಲ. **'ಇತಿ ಧರ್ಮಮುಗ್ಧಹೃದಯೈಃ ಭೂತ್ವಾ ಶರೀರಿಣಃ ಜಾತು ನ ಹಿಂಸ್ಯಾಃ'** - ಈ ಪ್ರಕಾರ ಧರ್ಮದಲ್ಲಿ ಭ್ರಾಂತಿರೂಪ ಚಿತ್ತವುಳ್ಳವರಾಗಿ ಪ್ರಾಣಿಗಳನ್ನು ಎಂದೂ ಹೊಡೆಯಬಾರದು.

**ಭಾವಾರ್ಥ :-** ಬೇರೆ ಕಡೆಯಲ್ಲಿ ಹಿಂಸೆ ಮಾಡುವುದಂತೂ ಪಾಪವಿದೆ, ಆದರೆ ಯಜ್ಞ ಮೊದಲಾದವುಗಳಲ್ಲಿ ಧರ್ಮದ ನಿಮಿತ್ತದಿಂದ ಹಿಂಸೆ ಮಾಡುವುದರಲ್ಲಿ ಯಾವ ದೋಷವಿಲ್ಲವೆಂದು ಕೆಲವು ಅಜ್ಞಾನಿಗಳು ಹೇಳುತ್ತಾರೆ. ಆದರೆ ಈ ಪ್ರಕಾರದ ಶ್ರದ್ಧೆಯಿಟ್ಟುಕೊಂಡು ಹಿಂಸೆಯಲ್ಲಿ ಪ್ರವರ್ತನೆ ಮಾಡುವುದು ಯೋಗ್ಯವಿಲ್ಲ. ಹಿಂಸೆಯಿರುವಲ್ಲಿ ಧರ್ಮವೆಂದೂ ಆಗುವುದಿಲ್ಲ.

**ಪ್ರಶ್ನೆ :-** ಜೈನ ಮತದಲ್ಲಿ ಮಂದಿರಗಳ ನಿರ್ಮಾಣ, ಪೂಜೆ-ಪ್ರತಿಷ್ಠೆ ಮೊದಲಾದವುಗಳನ್ನು ಮಾಡಲು ಹೇಳಲಾಗಿದೆ. ಆದರೆ ಅಲ್ಲಿ ಧರ್ಮವಿದೆಯೋ ಅಥವಾ ಇಲ್ಲವೋ ?

**ಉತ್ತರ :-** ಮಂದಿರ ನಿರ್ಮಾಣ, ಪೂಜೆ, ಪ್ರತಿಷ್ಠೆ ಮೊದಲಾದ ಕಾರ್ಯಗಳಲ್ಲಿ ಒಂದು ವೇಳೆ ಜೀವ ಹಿಂಸೆಯಾಗುವ ಭಯವನ್ನಿಟ್ಟುಕೊಳ್ಳದಿದ್ದರೆ, ಯತ್ನಾಚಾರದಿಂದ ಪ್ರವರ್ತನೆ ಮಾಡದಿದ್ದರೆ, ಕೇವಲ ತಮ್ಮ ಪ್ರತಿಷ್ಠೆ ಮತ್ತು ಮಾನ ಪೋಷಣೆಯ ಸಲುವಾಗಿ ಹೇಗಾದರೂ ಕಾರ್ಯ ಮಾಡಿದರೆ ಅಲ್ಲಿ ಧರ್ಮವಾಗುವುದಿಲ್ಲ, ಆದರೆ ಪಾಪವೇ ಆಗುತ್ತದೆ. ಮತ್ತು ಯತ್ನಪೂರ್ವಕವಾಗಿ ಕಾರ್ಯ ಮಾಡುತ್ತಿರುವಾಗ ಒಂದಿಷ್ಟು ಹಿಂಸೆಯಾದರೆ ಆ ಹಿಂಸೆಯ ಪಾಪವಂತೂ ಆಯಿತು, ಆದರೆ ಧರ್ಮದ ಅನುರಾಗದಿಂದ ಪುಣ್ಯ ಸಂಚಯವು ವಿಶೇಷವಾಗಿ ಆಗುತ್ತದೆ ಅಥವಾ ತಾವು ಸಂಗ್ರಹಿಸಿದ ಧನವನ್ನು ಖರ್ಚು ಮಾಡುವುದರಿಂದ ಲೋಭ ಕಷಾಯರೂಪದ ಅಂತರಂಗ ಹಿಂಸೆಯ ತ್ಯಾಗವಾಗುತ್ತದೆ. ಹಿಂಸೆಯ ಮೂಲ ಕಾರಣವಂತೂ ಕಷಾಯವಿದೆ, ಆದುದರಿಂದ ತೀವ್ರಕಷಾಯರೂಪವಾಗಿ ಅವುಗಳ ಹಿಂಸೆ ಮಾಡದಿರುವುದರಿಂದ ಪಾಪವು ಕೂಡ ಸ್ವಲ್ಪ ಆಗುವುದು. ಅದಕ್ಕಾಗಿ ಈ ರೀತಿಯಿಂದ ಪೂಜೆ-ಪ್ರತಿಷ್ಠೆಗಳನ್ನು ಮಾಡಿದರೆ ಪುಣ್ಯರೂಪದ ಧರ್ಮವೇ ಆಗುತ್ತದೆ. ಹೇಗೆಂದರೆ ಓರ್ವ ಮನುಷ್ಯನು ಧನ ಖರ್ಚು ಮಾಡುವ ಸಲುವಾಗಿ ಧನ ಸಂಪಾದಿಸುತ್ತಿದ್ದರೆ ಅದನ್ನು ಸಂಪಾದಿಸಿದನೆಂದೇ ಹೇಳುತ್ತಾರೆ. ಒಂದು ವೇಳೆ ಆ ಧನವನ್ನು ಧರ್ಮಕಾರ್ಯದಲ್ಲಿ ತೊಡಗಿಸದಿದ್ದರೆ ಆ ಧನದಿಂದ ವಿಷಯ ಸೇವನೆ ಮಾಡಿ ಮಹಾ ಪಾಪವನ್ನೇ ಉತ್ಪನ್ನ ಮಾಡುತ್ತಾನೆ, ಈ ದೃಷ್ಟಿಯಿಂದ ಧರ್ಮಕಾರ್ಯದಲ್ಲಿ ಅಲ್ಪ ಸಾವದ್ಯ ತಗಲಿದರೂ ಕೂಡ ಲಾಭವೇ ಆಯಿತು. ಯಾವ ಪ್ರಕಾರ ಮುನಿಗಳು ಒಂದೇ ನಗರದಲ್ಲಿರುವುದರಿಂದ ರಾಗಾದಿಗಳು (ಸ್ನೇಹಾದಿಗಳು) ಉತ್ಪನ್ನವಾಗಬಹುದೆಂಬ ಭಯದಿಂದ ಅಲ್ಲಿ ಇರಲಾರದೆ ವಿಹಾರ ಮಾಡುತ್ತಾರೆ, ವಿಹಾರ ಮಾಡುತ್ತಿರುವಾಗ ಅಲ್ಪ ಸ್ವಲ್ಪ ಹಿಂಸೆಯೂ ಆಗುತ್ತದೆ, ಆದರೆ ಲಾಭ-ಹಾನಿಯ ವಿಚಾರ ಮಾಡಿದ ಮೇಲೆ ಒಂದೇ ನಗರದಲ್ಲಿ ಇರುವುದು ಯೋಗ್ಯವಿಲ್ಲ. ಅದೇ ಪ್ರಕಾರ ಇಲ್ಲಿ ಕೂಡ ಲಾಭ-ಹಾನಿಯ ವಿಚಾರ ಮಾಡಬೇಕಾಗುವುದು. ಒಂದು ಸಾಮಾನ್ಯ ಕಥನದಿಂದ ವಿಶೇಷ ಕಥನದ ನಿಷೇಧ ಮಾಡಬಾರದು. ಇಂಥ ಕಾರ್ಯಗಳನ್ನೇ ಆರಂಭೀ, ಅವ್ರತೀ ಮತ್ತು ತುಚ್ಛವ್ರತಿಗಳು ಮಾಡುತ್ತಿರುವುದರಿಂದ ಸಂಕ್ಷೇಪದಲ್ಲಿ ಹೇಳಬೇಕೆಂದರೆ ಧರ್ಮದ ನಿಮಿತ್ತದಿಂದ ಹಿಂಸೆ ಮಾಡಬಾರದೆಂಬುದೇ ಉಪದೇಶವಿದೆ.

ಈಗ ಎರಡನೆಯ ಸೂತ್ರ ಹೇಳುತ್ತಾರೆ, -

**ಧರ್ಮೋ ಹಿ ದೇವತಾಭ್ಯಃ ಪ್ರಭವತಿ ತಾಭ್ಯಃ ಪ್ರದೇಯಮಿಹ ಸರ್ವಮ್ ।**
**ಇತಿ ದುರ್ವಿವೇಕಕಲಿತಾಂ ಧಿಷಣಾಂ ನ ಪ್ರಾಪ್ಯ ದೇಹಿನೋ ಹಿಂಸ್ಯಾಃ ॥೮೦॥**

**ಅನ್ವಯಾರ್ಥ :-** **[ಹಿ]** ನಿಶ್ಚಯದಿಂದ **[ಧರ್ಮಃ]** ಧರ್ಮವು **[ದೇವತಾಭ್ಯಃ]** ದೇವತೆಗಳಿಂದ **[ಪ್ರಭವತಿ]** ಉತ್ಪನ್ನವಾಗುತ್ತಿರುವುದರಿಂದ **[ಇಹ]** ಈ ಲೋಕದಲ್ಲಿ **[ತಾಭ್ಯಃ]** ಅವರ ಸಲುವಾಗಿ **[ಸರ್ವಂ]** ಏನೆಲ್ಲವನ್ನೂ **[ಪ್ರದೇಯಮ್]** ಕೊಟ್ಟು ಬಿಡಬೇಕಾಗುವುದು. **[ಇತಿ ದುರ್ವಿವೇಕಕಲಿತಾಂ]** - ಎಂಬ ಅವಿವೇಕದಿಂದಗ್ರಸ್ತವಾದ **[ಧಿಷಣಾಂ ಪ್ರಾಪ್ಯ]** ಬುದ್ಧಿಯನ್ನು ಪ್ರಾಪ್ತಮಾಡಿಕೊಂಡು **[ದೇಹಿನಃ]** ಶರೀರಧಾರಿಯಾದ ಜೀವಗಳನ್ನು **[ನ ಹಿಂಸ್ಯಾಃ]** ಹೊಡೆಯಬಾರದು.

**ಟೀಕೆ :- 'ಹಿ ಧರ್ಮಃ ದೇವತಾಭ್ಯಃ ಪ್ರಭವತಿ'** - ನಿಶ್ಚಯದಿಂದ ಧರ್ಮವು ದೇವತೆಗಳಿಂದ ಉತ್ಪನ್ನವಾಗುತ್ತದೆ. **'ಇಹ ತಾಭ್ಯಃ ಸರ್ವಂ ಪ್ರದೇಯಮ್'** - ಈ ಲೋಕದಲ್ಲಿ ಆ ದೇವತೆಗಳ ನಿಮಿತ್ತದಿಂದ ಏನೆಲ್ಲವನ್ನು ಕೊಟ್ಟು ಬಿಡಬೇಕಾಗುವುದು. ಜೀವಗಳನ್ನು ಕೂಡ ಕೊಂದು ಅವರಿಗೆ ಅರ್ಪಿಸಿ ಬಿಡಬೇಕು. **'ಇತಿ ದುರ್ವಿವೇಕಕಲಿತಾಂ ಧಿಷಣಾಂ ಪ್ರಾಪ್ಯ ದೇಹಿನಃ ನ ಹಿಂಸ್ಯಾಃ'** - ಎಂಬ ಅವಿವೇಕ ಪೂರ್ಣವಾದ ಬುದ್ಧಿಯಿಂದ ಪ್ರಾಣಿಗಳನ್ನು ಹೊಡೆಯಬಾರದು.

**ಭಾವಾರ್ಥ :-** ದೇವ, ದೇವಿ, ಕ್ಷೇತ್ರಪಾಲ, ಕಾಲೀ, ಮಹಾಕಾಲೀ, ಚಂಡೀ, ಚಾಮುಂಡಿ ಇತ್ಯಾದಿಕರ ಸಲುವಾಗಿ ಹಿಂಸೆ ಮಾಡಬಾರದು. ಇತರ ಜೀವಗಳನ್ನು ಹೊಡೆಯುವುದರಿಂದ ತಮ್ಮ ಕಲ್ಯಾಣ ಹೇಗಾಗುವ ಸಾಧ್ಯತೆಯಿದೆ ? ಸರ್ವಥಾ ಆಗುವ ಸಾಧ್ಯತೆಯಿಲ್ಲ.

ಈಗ ಮೂರನೆಯ ಸೂತ್ರ ಹೇಳುತ್ತಾರೆ, -

ಪೂಜ್ಯನಿಮಿತ್ತಂ ಘಾತೇ ಛಾಗಾದೀನಾಂ ನ ಕೋಽಪಿ ದೋಷೋಽಸ್ತಿ ।
ಇತಿ ಸಂಪ್ರಧಾರ್ಯ ಕಾರ್ಯಂ ನಾತಿಥಯೇ ಸತ್ತ್ವಸಂಜ್ಞಪನಮ್ ॥೮೧॥

**ಅನ್ವಯಾರ್ಥ :- [ಪೂಜ್ಯನಿಮಿತ್ತಂ]** ಪೂಜ್ಯ ಪುರುಷರ ಸಲುವಾಗಿ **[ಛಾಗಾದೀನಾಂ]** ಹೋತ ಮೊದಲಾದ ಜೀವಗಳನ್ನು **[ಘಾತೇ]** ಘಾತ ಮಾಡುವಲ್ಲಿ **[ಕಃ ಅಪಿ ದೋಷಃ ನಾಸ್ತಿ]** ಯಾವುದೇ ದೋಷವಿಲ್ಲ **[ಇತಿ]** ಎಂದು **[ಸಂಪ್ರಧಾರ್ಯ]** ವಿಚಾರ ಮಾಡಿ **[ಅತಿಥಯೇ]** ಅತಿಥಿ ಅಥವಾ ಶಿಷ್ಟ ಪುರುಷರ ಸಲುವಾಗಿ **[ಸತ್ತ್ವ-ಸಂಜ್ಞಪನಮ್]** ಜೀವಗಳ ಘಾತವನ್ನು **[ನ ಕಾರ್ಯಮ್]** ಮಾಡಬಾರದು.

**ಟೀಕೆ :- 'ಪೂಜ್ಯ ನಿಮಿತ್ತಂ ಛಾಗಾದೀನಾಂ ಘಾತೇ ಕೋಽಪಿ ದೋಷಃ ನ ಅಸ್ತಿ'** - ತಮ್ಮ ಗುರುಗಳ ಸಲುವಾಗಿ ಹೋತ ಮೊದಲಾದ ಜೀವಗಳ ಘಾತದಲ್ಲಿ ಯಾವ ದೋಷವಿಲ್ಲ **'ಇತಿ ಸಂಪ್ರಧಾರ್ಯ ಅತಿಥಯೇ ಸತ್ತ್ವಸಂಜ್ಞಪನಮ್ ನ ಕಾರ್ಯಮ್'** - ಎಂದು ವಿಚಾರ ಮಾಡಿ ಅತಿಥಿಯ (ಫಕೀರ ಮೊದಲಾದ ಗುರುಗಳ) ಸಲುವಾಗಿ ಜೀವಗಳ ಘಾತವನ್ನು ಮಾಡಬಾರದು.

**ಭಾವಾರ್ಥ :-** ಪಾಪೀ, ವಿಷಯಲಂಪಟೀ ಮತ್ತು ಜೀಹ್ವಾಲೋಲುಪಿಯಾದ ಕುಗುರು ಎಂದರೆ ಅವರು ಸ್ವಯಂ ಹಾಗೂ ಅನ್ಯ ಜೀವರುಗಳನ್ನು ಕೂಡ ನರಕದಲ್ಲಿ ತೆಗೆದುಕೊಂಡು ಹೋಗುವ ಸಲುವಾಗಿ ಸಿದ್ಧರಿರುವಂಥ ಕುಗುರುಗಳ ಸಲುವಾಗಿ ಕೂಡ ಹಿಂಸೆ ಮಾಡುವುದು ಉಚಿತವಾಗಿಲ್ಲ. ಹಿಂಸೆಯಿಂದ ಅವರ ಮತ್ತು ತಮ್ಮ ಮೋಕ್ಷವು ಹೇಗಾಗುವ ಸಾಧ್ಯತೆಯಿದೆ ? ಎಂದರೆ ಎಂದೂ ಆಗುವ ಸಾಧ್ಯತೆಯಿಲ್ಲ.

ಈಗ ನಾಲ್ಕನೆಯ ಸೂತ್ರ ಹೇಳುತ್ತಾರೆ, -

ಬಹುಸತ್ತ್ವಘಾತಜನಿತಾದಶನಾದ್ವರಮೇಕಸತ್ತ್ವಘಾತೋತ್ಥಮ್ ।
ಇತ್ಯಾಕಲಯ್ಯ ಕಾರ್ಯಂ ನ ಮಹಾಸತ್ತ್ವಸ್ಯ ಹಿಂಸನಂ ಜಾತು ॥೮೨॥

**ಅನ್ವಯಾರ್ಥ :- [ಬಹುಸತ್ತ್ವಘಾತಜನಿತಾತ್]** ಬಹಳಷ್ಟು ಜೀವಗಳ ಘಾತದಿಂದ ಉತ್ಪನ್ನವಾದ **[ಅಶನಾತ್]** ಭೋಜನದ ಅಪೇಕ್ಷೆಯಿಂದ **[ಏಕಸತ್ತ್ವಘಾತೋತ್ಥಮ್]** ಒಂದು ಜೀವದ ಘಾತದಿಂದ ಉತ್ಪನ್ನವಾದ ಭೋಜನವು **[ವರಮ್ ಇತಿ]** ಒಳ್ಳೆಯದಿದೆಯೆಂದು **[ಆಕಲಯ್ಯ]** ವಿಚಾರ ಮಾಡಿ **[ಜಾತು]** ಎಂದೂ **[ಮಹಾಸತ್ತ್ವಸ್ಯ]** ದೊಡ್ಡ ತ್ರಸ ಜೀವದ **[ಹಿಂಸನಂ ನ ಕಾರ್ಯಮ್]** ಘಾತ ಮಾಡಬಾರದು.

**ಟೀಕೆ :- 'ಬಹುಸತ್ತ್ವ ಘಾತಜನಿತಾತ್ ಅಶನಾತ್ ಏಕ ಸತ್ವಘಾತೋತ್ಥಮ್ ವರಮ್'** - ಬಹಳಷ್ಟು ಜೀವಗಳ ನಾಶದಿಂದ ಉತ್ಪನ್ನವಾದ ಭೋಜನದ ಅಪೇಕ್ಷೆಯಿಂದ ಒಂದು ಜೀವದ ನಾಶದಿಂದ ಉತ್ಪನ್ನ ಮಾಡಲಾದ ಭೋಜನವು ಉತ್ಕೃಷ್ಟವಿದೆ. **'ಇತಿ ಆಕಲಯ್ಯ ಜಾತು ಮಹಾಸತ್ತ್ವಸ್ಯ ಹಿಂಸನಂ ನ ಕಾರ್ಯಮ್'** - ಎಂದು ವಿಚಾರ ಮಾಡಿ ದೊಡ್ಡ ಜೀವದ ಹಿಂಸೆಯನ್ನು ಕೂಡ ಎಂದೂ ಮಾಡಬಾರದು.

**ಭಾವಾರ್ಥ :-** ಅನ್ನದ ಆಹಾರದಲ್ಲಂತೂ ಬಹಳಷ್ಟು ಜೀವಗಳು ಸಾಯುತ್ತಿರುವುದರಿಂದ ಒಂದು ದೊಡ್ಡ ಜೀವವನ್ನು ಕೊಂದು ಭೋಜನ ಮಾಡುವುದಂತೂ ತುಂಬ ಒಳ್ಳೆಯದಿದೆಯೆಂದು ಮನ್ನಿಸಿ ಪಂಚೇಂದ್ರಿಯ ಜೀವದ ಘಾತ ಮಾಡುತ್ತಾನೆ. ಅಲ್ಲಿ ಹಿಂಸೆಯಂತೂ ಪ್ರಾಣ ಘಾತದಿಂದ ಇದೆ, ಮತ್ತು ಏಕೇಂದ್ರಿಯದ ಅಪೇಕ್ಷೆಯಿಂದ ಪಂಚೇಂದ್ರಿಯದ ದ್ರವ್ಯಪ್ರಾಣ ಹಾಗೂ ಭಾವಪ್ರಾಣಗಳು ತುಂಬ ಅಧಿಕವಾಗಿ ಕಂಡು ಬರುತ್ತವೆ. ಇದೇ ಕಾರಣದಿಂದ ಬಹಳಷ್ಟು ಏಕೇಂದ್ರಿಯ ಜೀವಗಳನ್ನು ಕೊಲ್ಲುವುದರ ಅಪೇಕ್ಷೆಯಿಂದ ದ್ವೀಂದ್ರಿಯ ಜೀವವನ್ನು ಕೊಲ್ಲುವುದರ ಪಾಪವು ಅನೇಕ ಗುಣಿತವಾಗುತ್ತಿದ್ದರೆ ಪಂಚೇಂದ್ರಿಯವನ್ನು ಕೊಂದ ಮೇಲೆ ಬಹಳಷ್ಟು ಪಾಪವೇಕಾಗುವುದಿಲ್ಲ ? ಮತ್ತು ದ್ವೀಂದ್ರಿಯದಿಂದ ಹಿಡಿದು ಪಂಚೇಂದ್ರಿಯದವರೆಗಿನ ಜೀವಗಳನ್ನು ಕೊಲ್ಲುವುದರಲ್ಲಿಯೇ ಮಾಂಸದ ಆಹಾರವಾಗುತ್ತದೆ. ಇದರ ದೋಷವನ್ನು ಈ ಮೊದಲೇ ಹೇಳಿಯಾಗಿದೆ. ಆದುದರಿಂದ ಹೀಗೆಯೇ ಶ್ರದ್ಧೆ ಮಾಡುವುದು ಉಚಿತವಿದೆಯೆಂಬ ಉಪದೇಶವಿದೆ.

ಈಗ ಐದನೆಯ ಸೂತ್ರ ಹೇಳುತ್ತಾರೆ, -

ರಕ್ಷಾ ಭವತಿ ಭಹೂನಾಯೇಕಸ್ಯೈವಾಸ್ಯ ಜೀವಹರಣೇನ ।
ಇತಿ ಮತ್ವಾ ಕರ್ತವ್ಯಂ ನ ಹಿಂಸನಂ ಹಿಂಸ್ರಸತ್ತ್ವಾನಾಮ್ ॥೮೩॥

**ಅನ್ವಯಾರ್ಥ :- [ಅಸ್ಯ]** 'ಈ **[ಏಕಸ್ಯ ಏವ]** ಒಂದೇ **[ಜೀವಹರಣೇನ]** ಜೀವದ ಘಾತ ಮಾಡುವುದರಿಂದ **[ಬಹೂನಾಮ್]** ಬಹಳಷ್ಟು ಜೀವಗಳ **[ರಕ್ಷಾ ಭವತಿ]** ರಕ್ಷಣೆಯಾಗುತ್ತದೆ'. **[ಇತಿ ಮತ್ವಾ]** ಎಂದು ಮನ್ನಿಸಿ **[ಹಿಂಸ್ರ ಸತ್ತ್ವಾನಾಮ್]** ಹಿಂಸ್ರ ಜೀವಗಳದೂ ಕೂಡ **[ಹಿಂಸನಂ ನ ಕರ್ತವ್ಯಮ್]** ಹಿಂಸೆ ಮಾಡಬಾರದು.

**ಟೀಕೆ :- 'ಅಸ್ಯ ಏಕಸ್ಯ ಜೀವಹರಣೇನ ಬಹೂನಾಮ್ ರಕ್ಷಾ ಭವತಿ'** - ಈ ಒಂದೇ ಜೀವವನ್ನು ಹೊಡೆಯುವುದರಿಂದ ಬಹಳಷ್ಟು ಜೀವಗಳ ರಕ್ಷಣೆಯಾಗುತ್ತದೆ **'ಇತಿ ಮತ್ವಾ ಹಿಂಸ್ರ ಸತ್ತ್ವಾನಾಮ್ ಹಿಂಸನಂ ನ ಕಾರ್ಯಮ್'** - ಎಂದು ತಿಳಿದುಕೊಂಡು ಹಿಂಸ್ರ ಜೀವಗಳ ಘಾತ ಕೂಡ ಮಾಡಬಾರದು.

**ಭಾವಾರ್ಥ :-** ಚೇಳು, ಸರ್ಪ, ಸಿಂಹ, ವಾಘ್ರ ಮೊದಲಾದ ಇತರ ಜೀವಗಳನ್ನು ಕಚ್ಚುವಂಥ - ಕೊಲ್ಲುವಂಥ ಹಿಂಸ್ರ ಜೀವಗಳನ್ನು ಹೊಡೆದು ಹಾಕುವುದರಿಂದ ಬಹಳಷ್ಟು ಜೀವಗಳು ಬದುಕುವುದರಿಂದ ಇವನ್ನು ಕೊಂದು ಹಾಕುವುದರಲ್ಲಿ ಪಾಪವಿಲ್ಲವೆಂದು ಶ್ರದ್ಧೆ ಮಾಡಬಾರದು. ಏಕೆಂದರೆ ಇವನಿಗಂತೂ ಇವನ ಕಾರ್ಯದ ಪಾಪ ತಗಲುತ್ತದೆ. ಲೋಕದಲ್ಲಿ ಅನೇಕ ಜೀವಗಳು ಪಾಪ-ಪುಣ್ಯದ ಉಪಾರ್ಜನೆ ಮಾಡುತ್ತವೆ, ಅದರಿಂದ ಇವನಿಗೇನಾಗಬೇಕಿದೆ ? ಆ ಹಿಂಸ್ರ ಜೀವಗಳು ಹಿಂಸೆ ಮಾಡುತ್ತಿದ್ದರೆ ಅದರ ಪಾಪವು ಅವಕ್ಕೆ ತಗಲುತ್ತದೆ. ತಾವು ಅವುಗಳ ಹಿಂಸೆ ಮಾಡಿ ಪಾಪದ ಉಪಾರ್ಜನೆಯನ್ನೇಕೆ ಮಾಡಿಕೊಳ್ಳಬೇಕು ?

ಈಗ ಆರನೆಯ ಸೂತ್ರ ಹೇಳುತ್ತಾರೆ, -

ಬಹುಸತ್ವಘಾತಿನೋಽಮೀ ಜೀವಂತ ಉಪಾರ್ಜಯಂತಿ ಗುರು ಪಾಪಮ್ ।
ಇತ್ಯನುಕಂಪಾಂ ಕೃತ್ವಾ ನ ಹಿಂಸನೀಯಾಃ ಶರೀರಿಣೋ ಹಿಂಸ್ರಾಃ ॥೮೪॥

**ಅನ್ವಯಾರ್ಥ :-** **[ಬಹುಸತ್ತ್ವಘಾತಿನಃ]** ಬಹಳಷ್ಟು ಜೀವಗಳ ಘಾತಕವಾದ **[ಅಮೀ]** ಈ ಜೀವವು **[ಜೀವಂತಃ]** ಜೀವಂತವಾಗಿ ಇದ್ದರೆ **[ಗುರು ಪಾಪಮ್]** ಹೆಚ್ಚು ಪಾಪವನ್ನು **[ಉಪಾರ್ಜಯಂತಿ]** ಉಪಾರ್ಜನೆ ಮಾಡುವುದು' **[ಇತಿ]** ಈ ಪ್ರಕಾರದ **[ಅನುಕಂಪಾ ಕೃತ್ವಾ]** ಅನುಕಂಪೆ ಮಾಡಿ **[ಹಿಂಸ್ರಾಃ ಶರೀರಿಣಃ]** ಹಿಂಸ್ರ ಜೀವಗಳನ್ನು **[ನ ಹಿಂಸನೀಯಾಃ]** ಹೊಡೆಯಬಾರದು.

**ಟೀಕೆ :-** **'ಬಹುಸತ್ತ್ವಘಾತಿನಃ ಅಮೀ ಜೀವಂತಃ ಗುರು ಪಾಪಂ ಉಪಾರ್ಜಯಂತಿ'**- ಬಹಳಷ್ಟು ಜೀವಗಳನ್ನು ಹೊಡೆಯುವಂಥ ಈ ಪಾಪಿಯು ಜೀವಂತವಾಗಿ ಇದ್ದರೆ ಹೆಚ್ಚು ಪಾಪವನ್ನು ಉತ್ಪನ್ನಮಾಡುವುದೆಂದು **'ಇತಿ ಅನುಕಂಪಾಂ ಕೃತ್ವಾ ಹಿಂಸ್ರಾಃ ಶರೀರಿಣಃ ನ ಹಿಂಸನೀಯಾಃ'** - ದಯೆ ಮಾಡಿ ಹಿಂಸ್ರ ಜೀವಗಳನ್ನು ಕೂಡ ಹೊಡೆಯಬಾರದು.

**ಭಾವಾರ್ಥ :-** ಹದ್ದು, ಗಿಡುಗ ಮೊದಲಾದ ಯಾವ ಯಾವ ಹಿಂಸಕಗಳಿವೆ ಅವು ಜೀವಂತವಾಗಿದ್ದರೆ ಬಹಳಷ್ಟು ಪಾಪ ಮಾಡುವವು ಮತ್ತು ಅನೇಕ ಜೀವಗಳನ್ನು ಸಾಯಿಸುವವು. ಆದುದರಿಂದ ಇವನ್ನು ಕೊಂದುಹಾಕಬೇಕೆಂದು ಶ್ರದ್ಧೆ ಮಾಡಬಾರದು, ಏಕೆಂದರೆ ಅವುಗಳ ಹಿಂಸಾ ವೃತ್ತಿಯ ಪಾಪವು ಅವಕ್ಕೇ ತಟ್ಟುವುದು, ನಮಗೇನಾಗುವುದು ? ಒಂದು ವೇಳೆ ಸಾಧ್ಯವಾಗುವಂತಿದ್ದರೆ ಅವುಗಳ ಆ ಪಾಪ ಕ್ರಿಯೆಯನ್ನು ಬಿಡಿಸಿ ಬಿಡಬೇಕು.

ಈಗ ಏಳನೆಯ ಸೂತ್ರ ಹೇಳುತ್ತಾರೆ, -

ಬಹುದುಃಖಾಸಂಜ್ಞಪಿತಾಃ ಪ್ರಯಾಂತಿ ತ್ವಚಿರೇಣ ದುಃಖವಿಚ್ಛಿತ್ತಿಮ್ ।
ಇತಿ ವಾಸನಾಕೃಪಾಣೀಮಾದಾಯ ನ ದುಃಖಿನೋಽಪಿ ಹಂತವ್ಯಾಃ ॥೮೫॥

**ಅನ್ವಯಾರ್ಥ :-** **[ತು]** ಮತ್ತು **[ಬಹುದುಃಖಾಸಂಜ್ಞಪಿತಾಃ]** 'ಅನೇಕ ದುಃಖಗಳಿಂದ ಪೀಡಿತವಾದ ಜೀವವು **[ಅಚಿರೇಣ]** ಅತ್ಯಲ್ಪ ಸಮಯದಲ್ಲಿಯೇ **[ದುಃಖವಿಚ್ಛಿತ್ತಮ್ ಪ್ರಯಾಂತಿ]** ದುಃಖಗಳ ಕೊನೆಯನ್ನು ತಲುಪುವುದು' **[ಇತಿ ವಾಸನಾಕೃಪಾಣೀಂ]** ಈ ಪ್ರಕಾರದ ಭಾವನೆ ಅಥವಾ ವಿಚಾರರೂಪದ ತಲವಾರ **[ಆದಾಯ]** ತೆಗೆದುಕೊಂಡು **[ದುಃಖಿನಃ ಅಪಿ]** ದುಃಖಿ ಜೀವಗಳನ್ನು ಕೂಡ **[ನ ಹಂತವ್ಯಾಃ]** ಹೊಡೆಯಬಾರದು.

**ಟೀಕೆ :-** **'ತು ಬಹುದುಃಖಾಸಂಜ್ಞಪಿತಾಃ ಅಚಿರೇಣ ದುಃಖವಿಚ್ಛಿತ್ತಿಮ್ ಪ್ರಯಾಂತಿ'** - ಈ ಜೀವರುಗಳು ಬಹಳಷ್ಟು ದುಃಖದಿಂದ ಪೀಡಿತರಿರುವುದರಿಂದ ಅವರನ್ನು ಕೊಂದು ಹಾಕಿದರೆ ಅವರ ಸಮಸ್ತ ದುಃಖವು ದೂರವಾಗಿ ಹೋಗುವುದು **'ಇತಿ ವಾಸನಾಕೃಪಾಣೀಂ ಆದಾಯ ದುಃಖಿನಃ ಅಪಿ ನ ಹಂತವ್ಯಾಃ'** - ಎಂದು ದುಷ್ಟಭಾವನೆಯರೂಪದ ತಲವಾರ ಗ್ರಹಣಮಾಡಿ ದುಃಖೀ ಜೀವರುಗಳನ್ನು ಕೂಡ ಹೊಡೆಯಬಾರದು.

**ಭಾವಾರ್ಥ :-** ಈ ಜೀವನು ರೋಗದಿಂದ ಅಥವಾ ದರಿದ್ರತೆ ಮೊದಲಾದವುಗಳಿಂದ ಅತ್ಯಂತ ದುಃಖಿಯಿದ್ದಾನೆ, ಒಂದು ವೇಳೆ ಅವನನ್ನು ಸಾಯಿಸಿ ಬಿಟ್ಟರೆ ಆ ದುಃಖದಿಂದ ಮುಕ್ತನಾಗಿ ಹೋಗುವನೆಂದು ಶ್ರದ್ಧೆ ಮಾಡಬಾರದು. ಮನುಷ್ಯ ಮತ್ತು ತಿರ್ಯಂಚದ ಆಯುವು ಪುಣ್ಯದ ಉದಯದಿಂದ ಅಧಿಕವಾಗಿರುವುದರಿಂದ ಅದರ ಛೇದ ಮಾಡಬಾರದು. ಅಥವಾ ಆ ಜೀವದ ಉದಯವಿರುವಂತೆ ಅದು ಭೋಗಿಸುತ್ತದೆ, ನೀನು ಹಿಂಸೆ ಮಾಡಿ ಪಾಪವನ್ನೇಕೆ ಕಟ್ಟಿಕೊಳ್ಳುವೆ ?

ಈಗ ಎಂಟನೆಯ ಸೂತ್ರ ಹೇಳುತ್ತಾರೆ, -

ಕೃಚ್ಛ್ರೇಣ ಸುಖಾವಾಪ್ತಿರ್ಭವಂತಿ ಸುಖಿನೋ ಹತಾಃ ಸುಖಿನ ಏವ ।
ಇತಿ ತರ್ಕಮಂಡಲಾಗ್ರಃ ಸುಖಿನಾಂ ಘಾತಾಯ ನಾದೇಯಃ ॥೮೬॥

**ಅನ್ವಯಾರ್ಥ :-** **[ಸುಖಾವಾಪ್ತಿಃ]** 'ಸುಖದ ಪ್ರಾಪ್ತಿಯು **[ಕೃಚ್ಛ್ರೇಣ]** ಕಷ್ಟದಿಂದ ಆಗುತ್ತಿರುವುದರಿಂದ **[ಹತಾಃ]** ಕೊಲ್ಲುವುದರಲ್ಲಿ ಬರುವ **[ಸುಖಿನಃ]** ಸುಖೀ ಜೀವವು **[ಸುಖಿನಃ ಏವ ಭವಂತಿ]** ಪರಲೋಕದಲ್ಲಿ ಕೂಡ ಸುಖಿಯೇ ಆಗುವುದು' **[ಇತಿ]** ಈ ಪ್ರಕಾರ **[ತರ್ಕಮಂಡಲಾಗ್ರಃ]** ಕುತರ್ಕದ ಕತ್ತಿಯನ್ನು **[ಸುಖಿನಾಂ ಘಾತಾಯ]** ಸುಖೀ ಜೀವಗಳ ಘಾತ ಮಾಡುವ ಸಲುವಾಗಿ **[ನಾದೇಯಃ]** ಅಂಗೀಕಾರ ಮಾಡಬಾರದು.

**ಟೀಕೆ :-** **'ಕೃಚ್ಛ್ರೇಣ ಸುಖಾವಾಪ್ತಿಃ'** - ಕಷ್ಟದಿಂದ ಸುಖದ ಪ್ರಾಪ್ತಿಯಾಗುತ್ತದೆ. **'ಸುಖಿನಃ ಹತಾಃ ಸುಖಿನಃ ಏವ ಭವಂತಿ'**- ಆದುದರಿಂದ ಸುಖೀ ಜೀವಗಳನ್ನು ಸಾಯಿಸಿಬಿಟ್ಟರೆ ಅವು ಪರಲೋಕದಲ್ಲಿ ಕೂಡ ಸುಖಿಯೇ ಆಗುವವು. **'ಸುಖಿನಾಂ ಘಾತಾಯ ಇತಿ ತರ್ಕಮಂಡಲಾಗ್ರಃ ನ ಆದೇಯ'** - ಸುಖೀ ಜೀವಗಳ ಘಾತ ಮಾಡುವ ಸಲುವಾಗಿ ಈ ಪ್ರಕಾರದ ವಿಚಾರವನ್ನು ಯಾರೂ ಮಾಡಬಾರದು.

**ಭಾವಾರ್ಥ :-** ಸುಖವು ಕಷ್ಟದಿಂದ ಬರುತ್ತದೆ. ಆದುದರಿಂದ ಈ ಸುಖೀ ಜೀವಗಳನ್ನು ಕಾಶಿಯ ಕರಗಸ ಇತ್ಯಾದಿ ರೀತಿಯಿಂದ ಸಾಯಿಸಿ ಬಿಟ್ಟರೆ ಪರಲೋಕದಲ್ಲಿ ಕೂಡ ಆ ಜೀವವು ಸುಖಿಯಾಗುವುದೆಂದು ಶ್ರದ್ಧೆ ಮಾಡಬಾರದು. ಈ ಪ್ರಕಾರ ಸಾಯುವುದರಿಂದ ಅಥವಾ ಸಾಯಿಸುವುದರಿಂದ ಸುಖೀ ಹೇಗಾಗುವ ಸಾಧ್ಯತೆಯಿದೆ? ಸುಖಿಯಂತೂ ಸತ್ಯ ಧರ್ಮದ ಸಾಧನದಿಂದ ಆಗುವ ಸಾಧ್ಯತೆಯಿದೆ.

ಈಗ ಒಂಭತ್ತನೆಯ ಸೂತ್ರ ಹೇಳುತ್ತಾರೆ, -

ಉಪಲಬ್ಧಿಸುಗತಿಸಾಧನಸಮಾಧಿಸಾರಸ್ಯಭೂಯಸೋऽಭ್ಯಾಸಾತ್ ।
ಸ್ವಗುರೋಃ ಶಿಷ್ಯೇಣ ಶಿರೋ ನ ಕರ್ತನೀಯಂ ಸುಧರ್ಮಮಭಿಲಷಿತಾ ॥೮೭॥

**ಅನ್ವಯಾರ್ಥ :-** **[ಭೂಯಸಃ ಅಭ್ಯಾಸಾತ್]** ಅಧಿಕ ಅಭ್ಯಾಸದಿಂದ **[ಉಪಲಬ್ಧಿ ಸುಗತಿಸಾಧನ ಸಮಾಧಿ ಸಾರಸ್ಯ]** ಜ್ಞಾನ ಮತ್ತು ಸುಗತಿ ಮಾಡುವಲ್ಲಿ ಕಾರಣಭೂತವಾದ ಸಮಾಧಿಯ ಸಾರವನ್ನು ಪ್ರಾಪ್ತಮಾಡಿಕೊಳ್ಳುವಂಥ **[ಸ್ವಗುರೋಃ]** ತನ್ನ ಗುರುವಿನ **[ಶಿರಃ]** ಮಸ್ತಕವನ್ನು **[ಸುಧರ್ಮ ಅಭಿಲಷಿತಾ]** ಸತ್ಯಧರ್ಮದ ಅಭಿಲಾಷೆಯುಳ್ಳ **[ಶಿಷ್ಯೇಣ]** ಶಿಷ್ಯನು **[ನ ಕರ್ತನೀಯಮ್]** ಕತ್ತರಿಸಬಾರದು.

**ಟೀಕೆ :-** **'ಸುಧರ್ಮಂ ಅಭಿಲಷಿತಾ ಶಿಷ್ಯೇನ ಸ್ವಗುರೋಃ ಶಿರಂ ನ ಕರ್ತನಿಯಮ್'** - ಧರ್ಮದ ಅಭಿಲಾಷೆಯುಳ್ಳ ಶಿಷ್ಯನು ತನ್ನ ಗುರುವಿನ ಮಸ್ತಕವನ್ನು ಕತ್ತರಿಸಬಾರದು. ಆ ಗುರುಗಳು **'ಭೂಯಸಃ ಅಭ್ಯಾಸಾತ್ ಉಪಲಬ್ಧಿ ಸುಗತಿ ಸಾಧನ ಸಮಾಧಿಸಾರಸ್ಯ'** - ಬಹಳಷ್ಟು ಅಭ್ಯಾಸದಿಂದ ಸುಗತಿಗೆ ಕಾರಣಭೂತವಾದ ಸಮಾಧಿಯ ಸಾರವನ್ನು ಪಡೆದುಕೊಂಡಿದ್ದಾರೆ.

**ಭಾವಾರ್ಥ :-** ನಮ್ಮ ಗುರುಗಳು ಅಭ್ಯಾಸದಲ್ಲಿ ತೊಡಗಿದ್ದಾರೆ ಎಂದರೆ ಧ್ಯಾನ ಸಮಾಧಿಯಲ್ಲಿ ಮಗ್ನರಾಗಿದ್ದಾರೆ, ಬಹಳಷ್ಟು ಅಭ್ಯಾಸ ಮಾಡಿದ್ದಾರೆ, ಈಗ ಒಂದು ವೇಳೆ ಇವರ ಪ್ರಾಣದ ಕೊನೆ ಮಾಡಿಬಿಟ್ಟರೆ ಅವರು ಉಚ್ಚ ಪದವಿಗೆ ಪ್ರಾಪ್ತರಾಗಿ ಹೋಗುವರೆಂದು ವಿಚಾರ ಮಾಡಿ ಶಿಷ್ಯನು ತನ್ನ ಗುರುವಿನ ಮಸ್ತಕವನ್ನು ಕತ್ತರಿಸಿ ಹಾಕುವುದು ಯೋಗ್ಯವಿಲ್ಲ. ಅವರು ಯಾವ ಸಾಧನೆ ಮಾಡಿದ್ದಾರೆ ಅದರ ಫಲವನ್ನು ಅವರು ಭವಿಷ್ಯದಲ್ಲಿ ಪ್ರಾಪ್ತಮಾಡಿಕೊಂಡೇ ಮಾಡಿಕೊಳ್ಳುವರು, ನೀನು ಹಿಂಸೆ ಮಾಡಿ ಪಾಪವನ್ನೇಕೆ ಕಟ್ಟಿಕೊಳ್ಳುತ್ತಿರುವೆ.

ಈಗ ಹತ್ತನೆಯ ಸೂತ್ರ ಹೇಳುತ್ತಾರೆ, -

ಧನಲವಪಿಪಾಸಿತಾನಾಂ ವಿನೇಯವಿಶ್ವಾಸನಾಯ ದರ್ಶಯತಾಮ್ ।

ಝಟಿತಿಘಟಚಟಕಮೋಕ್ಷಂ ಶ್ರದ್ಧೇಯಂ ನೈವ ಖಾರಪಟಿಕಾನಾಮ್ ।।೮೮।।

**ಅನ್ವಯಾರ್ಥ :- [ಧನಲವಪಿಪಾಸಿತಾನಾಂ]** ಸ್ವಲ್ಪ ಧನದ ಲೋಭಿ ಮತ್ತು **[ವಿನೇಯ ವಿಶ್ವಾಸನಾಯ ದರ್ಶಯತಾಮ್]** ಶಿಷ್ಯರಿಗೆ ವಿಶ್ವಾಸವನ್ನುತ್ಪನ್ನ ಮಾಡುವ ಸಲುವಾಗಿ ತೋರಿಸಿಕೊಡುವಂಥ **[ಖಾರಪಟಿಕಾನಾಮ್]** ಖಾರ-ಪಟಿಕರ **[ಝಟಿತಿಘಟಚಟಕಮೋಕ್ಷಂ]** ಶೀಘ್ರವಾಗಿ ಕೊಡವು ಒಡೆಯುವುದರಿಂದ ಪಕ್ಷಿಗಳ ಮೋಕ್ಷದ ಹಾಗೆ ಮೋಕ್ಷದ **[ನೈವ ಶ್ರದ್ಧೇಯಂ]** ಶ್ರದ್ಧೆಯನ್ನು ಮಾಡಬಾರದು.

**ಟೀಕೆ :- 'ಖಾರಪಟಿಕಾನಾಮ್ ಝಟಿತಿಘಟಚಟಕಮೋಕ್ಷಂ ನೈವ ಶ್ರದ್ಧೇಯಂ'** - ಖಾರ ಪಟಿಕವೆಂಬುದೊಂದು ಮತವಿದ್ದು, ಅದುಕೂಡಲೆ ಕೊಡದ ಪಕ್ಷಿಯ ಮೋಕ್ಷದ ಸಮಾನವಾಗಿ ಮೋಕ್ಷವನ್ನು ಹೇಳುತ್ತದೆ, ಅದರ ಶ್ರದ್ಧೆಯನ್ನು ಮಾಡಬಾರದು.

**ಭಾವಾರ್ಥ :-** ಒಂದು ಖಾರಪಟಿಕವೆಂಬ ಹೆಸರಿನ ಮತವಿದ್ದು, ಅದರಲ್ಲಿ ಮೋಕ್ಷದ ಸ್ವರೂಪವನ್ನು ವಿಚಿತ್ರವಾಗಿ ಹೇಳುತ್ತಾರೆ. ಯಾವ ಪ್ರಕಾರ ಒಂದು ಮಣ್ಣಿನ ಕೊಡದಲ್ಲಿ ಪಕ್ಷಿಯು ಬಂಧಿತವಿದ್ದು ಆ ಕೊಡವನ್ನು ಒಡೆದು ಹಾಕಿದ ಕೂಡಲೆ ಪಕ್ಷಿಯು ಬಂಧನದಿಂದ ಬಿಡುಗಡೆಯಾಗಿ ಮುಕ್ತವಾಗಿ ಹೋಗುತ್ತದೆ ; ಅದೇ ಪ್ರಕಾರ ಆತ್ಮನು ಶರೀರದಲ್ಲಿ ಬಂಧಿತನಿದ್ದಾನೆ, ಆ ಶರೀರದ ನಾಶ ಮಾಡಿ ಬಿಟ್ಟರೆ ಆತ್ಮನು ಬಂಧನದಿಂದ ರಹಿತನಾಗಿ ಮುಕ್ತನಾಗಿ ಹೋಗುವನು. ಈ ಪ್ರಕಾರದ ಶ್ರದ್ಧೆಯನ್ನು ಮಾಡಬಾರದು., ಏಕೆಂದರೆ ಈ ಶ್ರದ್ಧೆಯು ಹಿಂಸೆಯ ಕಾರಣವಿದೆ. ಅಂತರಂಗ ಕಾರ್ಮಾಣ ಶರೀರದ ಬಂಧನದಿಂದ ಯುಕ್ತನಾದ ಆತ್ಮನು ಈ ಪ್ರಕಾರ ಮುಕ್ತ ಹೇಗಾಗುವ ಸಾಧ್ಯತೆಯಿದೆ ? ಆ ಖಾರಪಟಿಕನು **'ಧನಲವಪಿಪಾಸಿತಾನಾಮ್'** - ಸ್ವಲ್ಪ ಮಾತ್ರ ಧನದ ಲೋಭಿಯಿದ್ದಾನೆ. ಮತ್ತೆ ಅವನು **'ವಿನೇಯವಿಶ್ವಾಸನಾಯ ದರ್ಶಯತಾಮ್'** - ಶಿಷ್ಯರುಗಳನ್ನು ವಿಶ್ವಾಸದಲ್ಲಿ ತೆಗೆದುಕೊಳ್ಳುವ ಸಲುವಾಗಿ ಅದೆಷ್ಟೋ ರೀತಿಗಳನ್ನು ತೋರಿಸಿಕೊಡುತ್ತಾನೆ. ಆದುದರಿಂದ ಅವನ ಕಥನದ ಮೇಲೆ ಶ್ರದ್ಧೆ ಮಾಡಬಾರದು.

ಈಗ ಹನ್ನೊಂದನೆಯ ಸೂತ್ರ ಹೇಳುತ್ತಾರೆ, -

ದೃಷ್ಟ್ವಾಪರಂ ಪುರಸ್ತಾದಶನಾಯ ಕ್ಷಾಮಕುಕ್ಷಿಮಾಯಾಂತಮ್ ।
ನಿಜಮಾಂಸದಾನರಭಸಾದಾಲಭನೀಯೋ ನ ಚಾತ್ಮಾಪಿ ।।೮೯।।

**ಅನ್ವಯಾರ್ಥ :- [ಚ]** ಮತ್ತು **[ಅಶನಾಯ]** ಭೋಜನದ ಸಲುವಾಗಿ **[ಪುರಸ್ತಾತ್ ಆಯಂತಮ್]** ಹತ್ತಿರಕ್ಕೆ ಬಂದಿರುವ **[ಅಪರಂ ಕ್ಷಾಮಕುಕ್ಷಿಮ್]** ಇತರ ಕ್ಷುಧಿತ ಪುರುಷನನ್ನು **[ದೃಷ್ಟ್ವಾ]** ನೋಡಿ **[ನಿಜಮಾಂಸ ದಾನರಭಸಾತ್]** ತನ್ನ ಶರೀರದ ಮಾಂಸವನ್ನು ಕೊಡುವ ಉತ್ಸುಕತೆಯಿಂದ **[ಆತ್ಮಾಪಿ]** ತನ್ನದೂ ಕೂಡ **[ನ ಆಲಭನೀಯಃ]** ಘಾತ ಮಾಡಿಕೊಳ್ಳಬಾರದು.

**ಟೀಕೆ :- 'ಚ ಅಶನಾಯ ಆಯಂತಂ ಕ್ಷಾಮಕುಕ್ಷಿಂ ಪುರಸ್ತಾತ್ ದೃಷ್ಟ್ವಾ ನಿಜಮಾಂಸದಾನರಭಸಾತ್ ಆತ್ಮಾ ಅಪಿ ನ ಆಲಭನೀಯಃ'** - ಭೋಜನ ಸ್ವೀಕರಿಸುವ ಸಲುವಾಗಿ ತನ್ನ ಎದುರಿಗೆ ಬಂದಿರುವ ದುರ್ಬಲ ಉದರವುಳ್ಳ ಮನುಷ್ಯನನ್ನು ನೋಡಿ ಅವನಿಗೆ ತನ್ನ ಮಾಂಸ ಕೊಡುವ ಉತ್ಸಾಹದಿಂದ ಆತುರತೆಯಿಂದ ತನ್ನ ಶರೀರದ ಘಾತವನ್ನು ಕೂಡ ಮಾಡಬಾರದು.

**ಭಾವಾರ್ಥ :-** ಓರ್ವ ಮಾಂಸಭಕ್ಷಕ ಜೀವನು ಭೋಜನದ ಸಲುವಾಗಿ ತಮ್ಮ ಹತ್ತಿರ ಬಂದರೆ ಅವನನ್ನು ನೋಡಿ ಅವನ ಸಲುವಾಗಿ ತನ್ನ ಶರೀರದ ಘಾತ ಕೂಡ ಮಾಡಬಾರದು, ಏಕೆಂದರೆ ಮಾಂಸಭಕ್ಷಕನು ಪಾತ್ರನಿಲ್ಲ,

ಮಾಂಸದ ದಾನವು ಉತ್ತಮ ದಾನವಿಲ್ಲ.

ಈಗ ಹನ್ನೆರಡನೆಯ ಸೂತ್ರ ಹೇಳುತ್ತಾರೆ, -

**ಕೋ ನಾಮ ವಿಶತಿ ಮೋಹಂ ನಯಭಂಗವಿಶಾರದಾನುಪಾಸ್ಯಗುರೂನ್ ।**
**ವಿದಿತಜಿನಮತರಹಸ್ಯಃ ಶ್ರಯನ್ನಹಿಂಸಾಂ ವಿಶುದ್ಧಮತಿಃ ॥೯೦॥**

**ಅನ್ವಯಾರ್ಥ ಃ- [ನಯಭಂಗವಿಶಾರದಾನ್]** ನಯದ ಭಂಗಗಳನ್ನು ತಿಳಿಯುವಲ್ಲಿ ಪ್ರವೀಣರಾದ **[ಗುರೂನ್]** ಗುರುಗಳ **[ಉಪಾಸ್ಯ]** ಉಪಾಸನೆ ಮಾಡಿ **(ವಿದಿತಜಿನಮತರಹಸ್ಯಃ ಕೋ ನಾಮ್)** ಜೈನ ಮತದ ರಹಸ್ಯವನ್ನು ತಿಳಿದುಕೊಳ್ಳುವಂಥ ಯಾವ **[ವಿಶುದ್ಧಮತಿಃ]** ನಿರ್ಮಲ ಬುದ್ಧಿಧಾರಕನಿದ್ದಾನೆ ಅವನು **[ಅಹಿಂಸಾಂಶ್ರಯನ್]** ಅಹಿಂಸೆಯ ಆಶ್ರಯ ಪಡೆದು **[ಮೋಹಂ ವಿಶತಿ]** ಮೂಢತೆಗೆ ಪ್ರಾಪ್ತನಾಗುವನೇನು ?

**ಟೀಕೆ ಃ- 'ನಾಮ ನಯಭಂಗವಿಶಾರದಾನ್ ಗುರೂನ್ ಉಪಾಸ್ಯ ಕಃ ಮೋಹಂ ವಿಶತಿ'** - ಎಲೈ ಜೀವನೇ ! ನಯದ ಭೇದಗಳನ್ನು ತಿಳಿಯುವಲ್ಲಿ ಪ್ರವೀಣರಾದ ಗುರುಗಳ ಸೇವೆ ಮಾಡಿ ಯಾವ ಜೀವನು ಮೋಹಕ್ಕೆ ಪ್ರಾಪ್ತನಾಗುವನು ? ಎಂದರೆ ಯಾರೂ ಆಗುವುದಿಲ್ಲ.

**ಭಾವಾರ್ಥ ಃ-** ಗುರುಗಳ ಉಪದೇಶದಿಂದ ಜೀವನಿಗೆ ಒಳಿತು-ಕೆಡಕು, ಹಿತ-ಅಹಿತದ ಶ್ರದ್ಧೆಯಾಗುತ್ತದೆ. ಪೂರ್ವೋಕ್ತ ಅಶ್ರದ್ಧಾನಿಯಾದ ಕುಗುರುವಿನ ಮೋಸಗೊಳಿಸುವಿಕೆಯಿಂದ ಈ ಜೀವನು ಅನ್ಯಥಾ ಪ್ರವರ್ತನೆ ಮಾಡುತ್ತಾನೆ. ಆದರೆ ಯಾವ ಜೀವನು ಸಮಸ್ತ ನಯಗಳ ಜ್ಞಾತಾನಾದ ಪರಮ ಗುರುವಿನ ಸೇವೆ ಮಾಡಿದ್ದಾನೆ ಅವನು ಭ್ರಾಂತಿಯಲ್ಲಿ ಹೇಗೆ ಬೀಳುವ ಸಾಧ್ಯತೆಯಿದೆ ? ಎಂದೂ ಬೀಳುವ ಸಾಧ್ಯತೆಯಿಲ್ಲ. ಆ ಜೀವನು **'ವಿದಿತಜಿನ ಮತರಹಸ್ಯ'** - ಜೈನ ಮತದ ರಹಸ್ಯವನ್ನು ತಿಳಿದುಕೊಂಡಿದ್ದಾನೆ. ಮತ್ತು ಆ ಜೀವನು **'ಅಹಿಂಸಾಂಶ್ರಯನ್'** - ವೀತರಾಗ ಸರ್ವಜ್ಞ ಭಗವಂತರು ಹೇಳಿದ ದಯೆಯನ್ನೇ ಧರ್ಮದ ಸ್ವರೂಪವೆಂದು ತಿಳಿದುಕೊಂಡು ಅದರ ಅಂಗೀಕಾರ ಮಾಡಿದ್ದಾನೆ. ಮತ್ತೆ **'ವಿಶುದ್ಧಮತಿಃ'** - ಅವನ ಬುದ್ಧಿಯು ನಿರ್ಮಲವಿರುವುದರಿಂದ ಆ ಜೀವನು ಮೋಹಕ್ಕೆ ಪ್ರಾಪ್ತನಾಗುವುದಿಲ್ಲ. ಈ ಪ್ರಕಾರ ದಯಾಧರ್ಮವನ್ನು ದೃಢಪಡಿಸಿ ಅಹಿಂಸಾ ವ್ರತದ ವರ್ಣನೆ ಮಾಡಲಾಗಿದೆ.

ಈಗ ಅಸತ್ಯ ವಚನ ಹಾಗೂ ಅದರ ನಾಲ್ಕು ಭೇದ ಹೇಳುತ್ತಾರೆ.

**ಯದಿದಂ ಪ್ರಮಾದಯೋಗಾದಸದಭಿಧಾನಂ ವಿಧೀಯತೇ ಕಿಮಪಿ ।**
**ತದನೃತಮಪಿ ವಿಜ್ಞೇಯಂ ತದ್ಭೇದಾಃ ಸಂತಿ ಚತ್ವಾರಃ ॥೯೧॥**

**ಅನ್ವಯಾರ್ಥ ಃ- [ಯತ್]** ಯಾವ **[ಕಿಮಪಿ]** ಒಂದಿಷ್ಟು **[ಪ್ರಮಾದಯೋಗಾತ್]** ಪ್ರಮಾದಕಷಾಯದ ಯೋಗದಿಂದ **[ಇದಂ]** ಈ **[ಅಸದಭಿಧಾನಂ]** ನಿಜ-ಪರಗಳಿಗೆ ಹಾನಿಕಾರಕ ಅಥವಾ ಅನ್ಯಥಾ ರೂಪವಚನ **[ವಿಧೀಯತೇ]** ಹೇಳಲಾಗುತ್ತದೆ. **[ತತ್]** ಅದನ್ನು **[ಅನೃತಂ ಅಪಿ]** ನಿಶ್ಚಯದಿಂದ ಅಸತ್ಯವೆಂದು **[ವಿಜ್ಞೇಯಮ್]** ತಿಳಿಯಬೇಕಾಗುವುದು. **[ತದ್ಭೇದಾಃ]** ಅದರ ಭೇದಗಳು **[ಚತ್ವಾರಃ ಸಂತಿ]** ನಾಲ್ಕು ಇವೆ.

**ಟೀಕೆ ಃ- 'ಯತ್ ಕಿಮಪಿ ಪ್ರಮಾದಯೋಗಾತ್ ಇದಂ ಅಸತ್ ಅಭಿಧಾನಂ ವಿಧೀಯತೇ ತತ್ ಅನೃತಂ ಅಪಿ ವಿಜ್ಞೇಯಮ್'**- ಯಾವ ಒಂದಿಷ್ಟು ಪ್ರಮಾದ ಸಹಿತ ಯೋಗದ ಹೇತುವಿನಿಂದ ಅಸತ್ಯ ಎಂದರೆ ನಿಕೃಷ್ಟ ಅಥವಾ ಅನ್ಯಥಾರೂಪದ ವಚನವನ್ನು ನಿಶ್ಚಯದಿಂದ ಅನೃತವೆಂದು ತಿಳಿಯುವುದು. **'ತದ್ಭೇದಾಃ ಚತ್ವಾರಃ**

**ಸಂತಿ'** - ಆ ಅಸತ್ಯ ವಚನದಲ್ಲಿ ನಾಲ್ಕು ಭೇದಗಳಿವೆ.

ಈಗ ಆ ನಾಲ್ಕು ಭೇದಗಳಲ್ಲಿನ ಮೊದಲನೇ ಭೇದವನ್ನು ಹೇಳುತ್ತಾರೆ, -

ಸ್ವಕ್ಷೇತ್ರಕಾಲಭಾವೈಃ ಸದಪಿ ಹಿ ಯಸ್ಮಿನ್ನಿಷಿಧ್ಯತೇ ವಸ್ತು ।
ತತ್ಪ್ರಥಮಮಸತ್ಯಂ ಸ್ಯಾನ್ನಾಸ್ತಿ ಯಥಾ ದೇವದತ್ತೋಽತ್ರ ॥೯೨॥

**ಅನ್ವಯಾರ್ಥ :- [ಯಸ್ಮಿನ್]** ಯಾವ ವಚನದಲ್ಲಿ **[ಸ್ವಕ್ಷೇತ್ರಕಾಲಭಾವೈಃ]** ತನ್ನ ದ್ರವ್ಯ, ಕ್ಷೇತ್ರ, ಕಾಲ, ಭಾವದಿಂದ **[ಸತ್ ಅಪಿ)** ವಿದ್ಯಮಾನವಿದ್ದರೂ ಕೂಡ **[ವಸ್ತು]** ವಸ್ತುವಿನ **[ನಿಷಿಧ್ಯತೇ]** ನಿಷೇಧ ಮಾಡಲಾಗುತ್ತದೆ. **[ತತ್]** ಅದು **[ಪ್ರಥಮಮ್]** ಮೊದಲನೆಯ **[ಅಸತ್ಯಂ ಸ್ಯಾತ್]** ಅಸತ್ಯವಿದೆ **[ಯಥಾ]** ಹೇಗೆಂದರೆ **[ಅತ್ರ]** ಇಲ್ಲಿ **[ದೇವದತ್ತಃ]** ದೇವದತ್ತನು **[ನಾಸ್ತಿ]** ಇಲ್ಲ.

**ಟೀಕೆ :- 'ಯಸ್ಮಿನ್ ಸ್ವದ್ರವ್ಯಕ್ಷೇತ್ರಕಾಲಭಾವೈಃ ಸತ್ ಅಪಿ ವಸ್ತು ನಿಷಿಧ್ಯತೇ ತತ್ ಪ್ರಥಮಂ ಅಸತ್ಯಂ ಸ್ಯಾತ್'**- ಯಾವ ವಚನದಲ್ಲಿ ತನ್ನ ದ್ರವ್ಯ, ಕ್ಷೇತ್ರ, ಕಾಲ, ಭಾವದಿಂದ ಸತ್ತಾ ರೂಪದಲ್ಲಿ ವಿದ್ಯಮಾನವಿರುವ ಪದಾರ್ಥದ ನಿಷೇಧ ಕೂಡ 'ಪದಾರ್ಥವಿಲ್ಲ'ವೆಂದು ಮಾಡಲಾಗುತ್ತದೆ ಅದು ಪ್ರಥಮ ಭೇದರೂಪದ ಅಸತ್ಯವಿದೆ. **'ಯಥಾ ಅತ್ರ ದೇವದತ್ತಃ ನಾಸ್ತಿ'** ದೃಷ್ಟಾಂತದಿಂದ ಹೇಳುವುದೆಂದರೆ ಇಲ್ಲಿ ದೇವದತ್ತನಿಲ್ಲ.

**ಭಾವಾರ್ಥ :-** ಒಂದು ಕ್ಷೇತ್ರದಲ್ಲಿ ದೇವದತ್ತನೆಂಬ ಹೆಸರಿನ ಪುರುಷನು ಕುಳಿತುಕೊಂಡಿದ್ದನು, 'ಇಲ್ಲಿ ದೇವದತ್ತನಿದ್ದಾನೆಯೇ ?' - ಎಂದು ಅಲ್ಲಿ ಒಬ್ಬನು ಕೇಳುತ್ತಾನೆ. ಅದಕ್ಕೆ ಇಲ್ಲಿ ದೇವದತ್ತನಿಲ್ಲವೆಂದು ಉತ್ತರ ಕೊಡುತ್ತಾನೆ. ಇದೇ ಪ್ರಕಾರ ತನ್ನ ದ್ರವ್ಯ, ಕ್ಷೇತ್ರ, ಕಾಲ, ಭಾವದಿಂದ ಅಸ್ತಿ ರೂಪವಿರುವ ವಸ್ತುವನ್ನು ನಾಸ್ತಿ ರೂಪವಾಗಿ ಹೇಳುವುದು ಅದು ಅಸತ್ಯದ ಮೊದಲನೆಯ ಭೇದವಿದೆ. ಅಸ್ತಿರೂಪ ವಸ್ತುವನ್ನು ನಾಸ್ತಿರೂಪವೆಂದು ಹೇಳುವುದು ಅದು ಅಸತ್ಯವಿದೆ. ಯಾವುದಾದರೂ ಪದಾರ್ಥವನ್ನು ದ್ರವ್ಯವೆಂದು ಹೇಳುತ್ತಾರೆ. ಯಾವ ಕ್ಷೇತ್ರದಲ್ಲಿ ಏಕತ್ವರೂಪವಾಗಿ ನಿಂತುಕೊಂಡಿದೆ ಅದನ್ನು ಕ್ಷೇತ್ರವೆಂದು ಹೇಳುತ್ತಾರೆ ಯಾವ ಕಾಲದಲ್ಲಿ ಯಾವ ರೀತಿಯಿಂದ ಪರಿಣಮನ ಮಾಡುತ್ತದೆ ಅದನ್ನು ಕಾಲವೆಂದು ಹೇಳುತ್ತಾರೆ ಮತ್ತು ಪದಾರ್ಥದ ನಿಜ ಭಾವವನ್ನೇ ಭಾವವೆಂದು ಹೇಳುತ್ತಾರೆ. ಈ ತಮ್ಮ ಚತುಷ್ಟಯದ ಅಪೇಕ್ಷೆಯಿಂದ ಸಮಸ್ತ ಪದಾರ್ಥಗಳು ಅಸ್ತಿರೂಪವಿವೆ. ಅಲ್ಲಿ ದೇವದತ್ತನ ನಿಜ ಚತುಷ್ಟಯವಂತೂ ಇದ್ದೇ ಇತ್ತು, ಆದಾಗ್ಯೂ ನಾಸ್ತಿರೂಪದ ಯಾವ ಕಥನವಾಗಿದೆ, ಅದುವೇ ಅಸತ್ಯ ವಚನವಿದೆ.

ಈಗ ಎರಡನೆಯ ಭೇದವನ್ನು ಹೇಳುತ್ತಾರೆ,

ಅಸದಪಿ ಹಿ ವಸ್ತುರೂಪಂ ಯತ್ರ ಪರಕ್ಷೇತ್ರಕಾಲಭಾವೈಸ್ತೈಃ ।
ಉದ್ಭಾವ್ಯತೇ ದ್ವಿತೀಯಂ ತದನೃತಮಸ್ಮಿನ್ ಯಥಾಸ್ತಿ ಘಟಃ ॥೯೩॥

**ಅನ್ವಯಾರ್ಥ :- [ಹಿ]** ನಿಶ್ಚಯದಿಂದ **[ಯತ್ರ]** ಯಾವ ವಚನದಲ್ಲಿ **[ತೈ ಪರಕ್ಷೇತ್ರಕಾಲಭಾವೈಃ]** ಆ ಪರದ್ರವ್ಯ, ಕ್ಷೇತ್ರ, ಕಾಲ ಮತ್ತು ಭಾವದಿಂದ **[ಅಸತ್ ಅಪಿ]** ಅವಿದ್ಯಮಾನವಿದ್ದರೂ ಕೂಡ **[ವಸ್ತುರೂಪಂ]** ವಸ್ತುವಿನ ಸ್ವರೂಪವನ್ನು **[ಉದ್ಭಾವ್ಯತೇ]** ಪ್ರಕಟಪಡಿಸಲಾಗುತ್ತದೆ. **[ತತ್]** ಅದು **[ದ್ವಿತೀಯಂ]** ಎರಡನೆಯ **[ಅನೃತಮ್]** ಅಸತ್ಯವು **[ಸ್ಯಾತ್]** ಇದೆ **[ಯಥಾ]** ಹೇಗೆಂದರೆ **[ಅಸ್ಮಿನ್]** ಇಲ್ಲಿ **[ಘಟಃ ಅಸ್ತಿ]** ಕೊಡವಿದೆ.

**ಟೀಕೆ :- 'ಹಿ ಯತ್ರ ತೈಃಪರದ್ರವ್ಯಕ್ಷೇತ್ರಕಾಲಭಾವೈಃ ವಸ್ತುರೂಪಂ ಅಸತ್ ಅಪಿ ಉದ್ಭಾವ್ಯತೇ**

**ತತ್ ದ್ವಿತೀಯಂ ಅನೃತಂ'** - ನಿಶ್ಚಯದಿಂದ ಯಾವ ವಚನದಲ್ಲಿ ಪರದ್ರವ್ಯ, ಕ್ಷೇತ್ರ, ಕಾಲ, ಭಾವದಿಂದಪದಾರ್ಥವು ಸತ್ತಾರೂಪದಿಂದಿಲ್ಲದಿದ್ದರೂ ಕೂಡ ಅಲ್ಲಿ ಪ್ರಕಟ ಮಾಡುವುದು ಅದು ಎರಡನೆಯ ಅಸತ್ಯವಿದೆ. **'ಯಥಾ ಅಸ್ಮಿನ್ ಘಟಃ ಅಸ್ತಿ'**- ದೃಷ್ಟಾಂತ ಮೂಲಕ ಹೇಳುವುದೆಂದರೆ ಇಲ್ಲಿ ಕೊಡವಿದೆ.

**ಭಾವಾರ್ಥ ः-** ಯಾವುದೇ ಒಂದು ಕ್ಷೇತ್ರದಲ್ಲಿ ಕೊಡವಂತೂ ಇಲ್ಲದಿರುವುದರಿಂದ ಆ ಸಮಯದಲ್ಲಿ ಅದರ ದ್ರವ್ಯ, ಕ್ಷೇತ್ರ, ಕಾಲ ಭಾವಗಳೂ ಇರಲಿಲ್ಲ. ಅಲ್ಲಿ ಬೇರೆ ಪದಾರ್ಥವಿರುವುದರಿಂದ ಆ ಸಮಯದಲ್ಲಿ ಅದರದೇ ದ್ರವ್ಯ, ಕ್ಷೇತ್ರ, ಕಾಲ ಭಾವಗಳಿದ್ದವು. 'ಇಲ್ಲಿ ಕೊಡವಿದೆಯೋ ಅಥವಾ ಇಲ್ಲವೋ ? - ಎಂದು ಯಾವನಾದರೂ ಕೇಳಿದರೆ 'ಕೊಡವಿದೆ'ಯೆಂದು ಹೇಳುವುದು ಅದು ಅಸತ್ಯದ ಎರಡನೆಯ ಭೇದವಿದೆ. ಹೇಗೆಂದರೆ ನಾಸ್ತಿರೂಪ ವಸ್ತುವನ್ನು ಅಸ್ತಿಯೆಂದು ಹೇಳಿದೆ.

ಈಗ ಮೂರನೆಯ ಭೇದ ಹೇಳುತ್ತಾರೆ, -

ವಸ್ತು ಸದಪಿ ಸ್ವರೂಪಾತ್ ಪರರೂಪೇಣಾಭಿಧೀಯತೇ ಯಸ್ಮಿನ್ ।
ಅನೃತಮಿದಂ ಚ ತೃತೀಯಂ ವಿಜ್ಞೇಯಂ ಗೌರಿತಿ ಯಥಾಽಶ್ವಃ ॥೯೪॥

**ಅನ್ವಯಾರ್ಥ ः-** **[ಚ]** ಮತ್ತು **[ಯಸ್ಮಿನ್]** ಯಾವ ವಚನದಲ್ಲಿ **[ಸ್ವರೂಪಾತ್]** ತನ್ನ ಚತುಷ್ಟಯದಿಂದ **[ಸತ್ಅಪಿ]** ವಿದ್ಯಮಾನವಿದ್ದರೂ ಕೂಡ **[ವಸ್ತು]** ಪದಾರ್ಥವನ್ನು **[ಪರರೂಪೇಣ]** ಅನ್ಯಸ್ವರೂಪದಿಂದ **[ಅಭಿಧೀಯತೇ]** ಹೇಳಲಾಗುತ್ತದೆ ಅದನ್ನು **[ಇದಂ]** ಈ **[ತೃತೀಯಂ ಅನೃತಂ]** ಮೂರನೆಯ ಅಸತ್ಯವೆಂದು **[ವಿಜ್ಞೇಯಂ]** ತಿಳಿಯುವುದು **[ಯಥಾ]** ಹೇಗೆಂದರೆ **[ಗೌಃ]** ವೃಷಭವನ್ನು **[ಅಶ್ವಃ ಇತಿ]** ಕುದುರೆಯಿದೆಯೆಂದು ಹೇಳುವುದು.

**ಟೀಕೆ ः- 'ಚ ಯಸ್ಮಿನ್ ಸತ್ ಅಪಿ ವಸ್ತು ಪರರೂಪೇಣ ಅಭಿಧೀಯತೇ ಇದಂ ತೃತೀಯಂ ಅನೃತಂ ವಿಜ್ಞೇಯಂ'** - ಯಾವ ವಚನದಲ್ಲಿ ಪದಾರ್ಥವು ತನ್ನ ಸ್ವಚತುಷ್ಟಯದೊಳಗೆ ವಿದ್ಯಮಾನವಿದ್ದರೂ ಕೂಡ ಆ ಪದಾರ್ಥವನ್ನು ಅನ್ಯ ಪದಾರ್ಥರೂಪದಿಂದ ಕಥನ ಮಾಡಿದರೆ ಅದನ್ನು ಮೂರನೆಯ ಅಸತ್ಯವೆಂದು ತಿಳಿಯುವುದು **'ಯಥಾ ಗೌಃ ಅಶ್ವಃ'** - ಅದನ್ನು ಉದಾಹರಣೆಯ ಮೂಲಕ ಹೇಳುವುದೆಂದರೆ ವೃಷಭವನ್ನು ಕುದುರೆಯೆಂದು ಹೇಳುವುದು.

**ಭಾವಾರ್ಥ ः-** ಯಾವುದೇ ಒಂದು ಕ್ಷೇತ್ರದಲ್ಲಿ ವೃಷಭವು ತನ್ನ ಸ್ವಚತುಷ್ಟಯದೊಳಗೆ ಸ್ಥಿರವಿತ್ತು, ಅಲ್ಲಿ ಯಾವನೋ ಓರ್ವನು ಬಂದು 'ಇಲ್ಲಿ ಏನಿದೆ'ಯೆಂದು ಕೇಳುತ್ತಾನೆ, ಆಗ ಇಲ್ಲಿ ಕುದುರೆಯಿದೆಯೆಂದು ಹೇಳಲಾಗುತ್ತದೆ. ವಸ್ತುವನ್ನು ಅನ್ಯರೂಪದಿಂದ ಹೇಳುವುದು ಇದು ಅಸತ್ಯದ ಮೂರನೆಯ ಭೇದವಿದೆ.

ಈಗ ನಾಲ್ಕನೆಯ ಭೇದ ಹೇಳುತ್ತಾರೆ, -

ಗರ್ಹಿತಮವದ್ಯಸಂಯುತಮಪ್ರಿಯಮಪಿ ಭವತಿ ವಚನರೂಪಂ ಯತ್ ।
ಸಾಮಾನ್ಯೇನ ತ್ರೇಧಾ ಮತಿಮದಮನೃತಂ ತುರೀಯಂ ತು ॥೯೫॥

**ಅನ್ವಯಾರ್ಥ ः-** **[ತು]** ಮತ್ತು **[ಇದಂ]** ಈ **[ತುರೀಯಂ]** ನಾಲ್ಕನೆಯ **[ಅನೃತಂ]** ಅಸತ್ಯವು **[ಸಾಮಾನ್ಯೇನ]** ಸಾಮಾನ್ಯರೂಪದಿಂದ **[ಗರ್ಹಿತಂ]** ಗರ್ಹಣ, **[ಅವದ್ಯಸಂಯುತಮ್]** ಪಾಪಸಹಿತ **[ಅಪಿ]** ಮತ್ತು **[ಅಪ್ರಿಯಂ]** ಅಪ್ರಿಯವೆಂದು ಹೀಗೆ **[ತ್ರೇಧಾ]** ಮೂರು ಪ್ರಕಾರದ್ದೆಂದು **[ಮತಮ್]** ಮನ್ನಿಸಲಾಗಿದೆ.

**[ಯತ್]** ಏಕೆಂದರೆ ಅದು **[ವಚನರೂಪಂ ಭವತಿ]** ವಚನರೂಪವಿದೆ.

**ಟೀಕೆ :- 'ತುಂ ಇದಂ ತುರೀಯಂ ಅನೃತಂ ಸಾಮಾನ್ಯೇನ ತ್ರೇಧಾ ಮತಮ್-ಯತ್ ಅಪಿ ವಚನ ರೂಪಂ ಗರ್ಹಿತಂ ಅವದ್ಯಸಂಯುತಂ ಅಪ್ರಿಯಂ ಭವತಿ'** - ಈ ನಾಲ್ಕನೆಯ ಅಸತ್ಯದಲ್ಲಿ ೧) ವಚನದಿಂದ ನಿಂದೆಯ ಶಬ್ದ ಹೇಳುವುದು, ೨) ಹಿಂಸೆಯಿಂದ ಕೂಡಿದ ವಚನ ಆಡುವುದು, ೩) ಅಪ್ರಿಯ ಎಂದರೆ ಇತರರಿಗೆ ಕೆಡಕೆನಿಸುವಂಥ ವಚನವನ್ನು ಆಡುವುದು - ಹೀಗೆ ಮೂರು ಪ್ರಕಾರದ ಭೇದಗಳಿವೆ.

ಈಗ ಈ ಮೂರು ಭೇದಗಳಲ್ಲಿ ಮೊದಲನೆಯದಾದ ಗರ್ಹಣದ ಸ್ವರೂಪ ಹೇಳುತ್ತಾರೆ, -

ಪೈಶೂನ್ಯಹಾಸಗರ್ಭಂ ಕರ್ಕಶಮಸಮಂಜಸಂ ಪ್ರಲಪಿತಂ ಚ ।
ಅನ್ಯದಪಿ ಯದುತ್ಸೂತ್ರಂ ತತ್ಸರ್ವಂ ಗರ್ಹಿತಂ ಗದಿತಮ್ ।।೯೬।।

**ಅನ್ವಯಾರ್ಥ :- [ಪೈಶೂನ್ಯಹಾಸಗರ್ಭಂ]** ದುಷ್ಟತೆ ಅಥವಾ ನಿಂದಾರೂಪದ ಹಾಸ್ಯವುಳ್ಳ **[ಕರ್ಕಶಂ]** ಕಠೋರ, **[ಅಸಮಂಜಸಂ]** ಮಿಥ್ಯಾಶ್ರದ್ಧೆಯುಳ್ಳ **[ಚ]** ಮತ್ತು **[ಪ್ರಲಪಿತಂ]** ಪ್ರಲಾಪರೂಪ (ಅರ್ಥವಿಲ್ಲದ ಮಾತು) ಹಾಗೂ **[ಅನ್ಯದಪಿ]** ಬೇರೆ ಕೂಡ **[ಯತ್]** ಯಾವ **[ಉತ್ಸೂತ್ರಂ]** ಶಾಸ್ತ್ರ ವಿರುದ್ಧವಾದ ವಚನಗಳಿವೆ **[ತತ್ಸರ್ವಂ]** ಅವೆಲ್ಲವುಗಳನ್ನು **[ಗರ್ಹಿತಂ ಗದಿತಮ್]** ನಿಂದ್ಯ ವಚನಗಳೆಂದು ಹೇಳಲಾಗಿದೆ.

**ಟೀಕೆ :- 'ಯತ್ ವಚನಂ ಪೈಶೂನ್ಯಹಾಸಗರ್ಭಂ ಕರ್ಕಶಂ ಅಸಮಂಜಸಮ್ ಪ್ರಲಪಿತಂ ಚ ಅನ್ಯತ್ ಅಪಿ ಉತ್ಸೂತ್ರಂ ತತ್ ಗರ್ಹಿತಂ ಗದಿತಮ್'** - ಯಾವ ವಚನದಲ್ಲಿ ದುಷ್ಟತೆಯಿದೆ, ಅನ್ಯ ಜೀವರುಗಳಿಗೆ ಕೆಡಕು ಮಾಡುವಂಥದ್ದಿದೆ, ತಮಗೆ ರೌದ್ರಧ್ಯಾನ ಮಾಡಿಸುವಂಥದ್ದಿದೆ ಹಾಗೂ ಹಾಸ್ಯದಿಂದ ಕೂಡಿಕೊಂಡಿದೆ, ಇತರ ಜೀವರುಗಳಿಗೆ ಮರ್ಮಭೇದಕವಿದೆ, ತಮಗೆ ಪ್ರಮಾದಕಾರಕವಿದೆ, ಕರ್ಕಶ-ಕಠೋರವಿದೆ ಎಂದರೆ ಕೇಳುವುದರಲ್ಲಿ ಕೆಡಕೆನಿಸುವಂಥದ್ದಿದೆ, ಅಸಮಂಜಸ ಎಂದರೆ ಮಿಥ್ಯಾಶ್ರದ್ಧೆ ಮಾಡಿಸುವಂಥದ್ದಿದೆ, ಅಪ್ರಮಾಣರೂಪವಿದೆ ಮತ್ತು ಬೇರೆ ಕೂಡ ಶಾಸ್ತ್ರ ವಿರುದ್ಧವಾದ ವಚನಗಳೆಲ್ಲವು ಗರ್ಹಣ ವಚನದಲ್ಲಿಯೇ ಗರ್ಭಿತವಿವೆಯೆಂದು ತಿಳಿಯಬೇಕು.

ಈಗ ಅವದ್ಯಸಂಯುಕ್ತ ಅಸತ್ಯದ ಸ್ವರೂಪ ಹೇಳುತ್ತಾರೆ, -

ಛೇದನಭೇದನಮಾರಣಕರ್ಷಣವಾಣಿಜ್ಯಚೌರ್ಯವಚನಾದಿ ।
ತತ್ಸಾವದ್ಯಂ ಯಸ್ಮಾತ್ಪ್ರಾಣಿವಧಾದ್ಯಾಃ ಪ್ರವರ್ತಂತೇ ।।೯೭।।

**ಅನ್ವಯಾರ್ಥ :- [ಯತ್]** ಯಾವ **[ಛೇದನಭೇದನ ಮಾರಣಕರ್ಷಣವಾಣಿಜ್ಯಚೌರ್ಯವಚನಾದಿ]** ಛೇದನ, ಭೇದನ, ಮಾರಣ, ಶೋಷಣ, ವ್ಯಾಪಾರ ಅಥವಾ ಕಳವು ಮೊದಲಾದವುಗಳ ವಚನಗಳಿವೆ. **[ತತ್]** ಅವೆಲ್ಲವು **[ಸಾವದ್ಯಂ]** ಪಾಪಯುಕ್ತವಾದ ವಚನಗಳಿವೆ. **[ಯಸ್ಮಾತ್]** ಏಕೆಂದರೆ ಇದರಿಂದ **[ಪ್ರಾಣಿವಧಾದ್ಯಾಃ]** ಪ್ರಾಣಿಹಿಂಸೆ ಮೊದಲಾದ ಪಾಪರೂಪವಾಗಿ **[ಪ್ರವರ್ತಂತೇ]** ಪ್ರವರ್ತನೆ ಮಾಡುತ್ತಾರೆ.

**ಟೀಕೆ :- 'ಯತ್ ಛೇದನ ಭೇದನ ಮಾರಣ ಕರ್ಷಣ ವಾಣಿಜ್ಯಚೌರ್ಯ ವಚನಾದಿ ತತ್ ಸರ್ವಂ ಸಾವದ್ಯಂ ಅಸ್ತಿ ಯಸ್ಮಾತ್ ಪ್ರಾಣಿವಧಾದ್ಯಾಃ ಪ್ರವರ್ತಂತೇ'** - ಆ ಮೂಗು ಮೊದಲಾದುವನ್ನು ಛೇದಿಸುವ, ಕತ್ತರಿಸುವ, ಹೊಡೆಯುವ, ಎಳೆಯುವ, (ಘಾತಕ) ವ್ಯಾಪಾರ ಮಾಡುವ ಅಥವಾ ಪರ ವಸ್ತುವಿನ ಕಳವು ಮಾಡುವ ಮೊದಲಾದವುಗಳ ವಚನಗಳನ್ನು ಹೇಳಲಾಗುತ್ತದೆ ಅವೆಲ್ಲವು ಸಾವದ್ಯ (ಪಾಪ) ಸಹಿತ ಅಸತ್ಯ ಸ್ವರೂಪಗಳಿವೆ. ಏಕೆಂದರೆ ಇವುಗಳಿಂದ ಪ್ರಾಣಿಗಳ ಘಾತವಾಗುತ್ತದೆ.

**ಭಾವಾರ್ಥ :-** ಸಾವದ್ಯದ ಅರ್ಥವು ಪಾಪವಿರುವುದರಿಂದ ಯಾವ ವಚನಗಳಿಂದ ಪಾಪದ

ಪ್ರವೃತ್ತಿಯಾಗುವುದು ಅದನ್ನು ಸಾವದ್ಯವೆಂದು ಹೇಳುತ್ತಾರೆ.

ಈಗ ಅಪ್ರಿಯ ಅಸತ್ಯದ ಸ್ವರೂಪ ಹೇಳುತ್ತಾರೆ, -

**ಅರತಿಕರಂ ಭೀತಿಕರಂ ಖೇದಕರಂ ವೈರಶೋಕಕಲಹಕರಮ್ ।**
**ಯದಪರಮಪಿ ತಾಪಕರಂ ಪರಸ್ಯ ತತ್ಸರ್ವಮಪ್ರಿಯಂ ಜ್ಞೇಯಮ್ ॥೯೮॥**

**ಅನ್ವಯಾರ್ಥ :-** [**ಯತ್**] ಯಾವ ವಚನಗಳು [**ಪರಸ್ಯ**] ಇತರ ಜೀವರುಗಳಿಗೆ [**ಅರತಿಕರಂ**] ಅಪ್ರೀತಿಕಾರಕವಿವೆ, [**ಭೀತಿಕರಂ**] ಭಯಕಾರಕವಿವೆ, [**ಖೇದಕರಂ**] ಖೇದಕಾರಕವಿವೆ, [**ವೈರಶೋಕಕಲಹಕರಂ**] ವೈರ-ಶೋಕ ಹಾಗೂಕಲಹಕಾರಕವಿವೆ ಮತ್ತೆ ಯಾವ [**ಅಪರಮಪಿ**] ಬೇರೆಯೂ ಕೂಡ ಸಂತಾಪಕಾರಕವಿವೆ [**ತತ್ ಸರ್ವಂ**] ಅವೆಲ್ಲವೂ [**ಅಪ್ರಿಯಂ ಜ್ಞೇಯಮ್**] ಅಪ್ರಿಯವಿವೆಯೆಂದು ತಿಳಿಯಬೇಕು.

**ಟೀಕೆ :- 'ಯತ್ ವಚನಂ ಪರಸ್ಯ ಅರತಿಕರಂ ಭೀತಿಕರಂ ಖೇದಕರಂ ವೈರಶೋಕಕಲಹಕರಂ ತಥಾ ಅಪರಮಪಿ ತಾಪಕರಂ ತತ್ಸರ್ವಂ ಅಪ್ರಿಯಂ ಜ್ಞೇಯಮ್'** - ಯಾವ ವಚನಗಳು ಇತರರಿಗೆ ಅರತಿ ಮಾಡುವಂಥ ಎಂದರೆ ಕೆಡಕೆನಿಸುವಂಥವುಗಳಿವೆ, ಭಯವನ್ನುಂಟು ಮಾಡುವಂಥವುಗಳಿವೆ, ಖೇದವನ್ನುತ್ಪನ್ನ ಮಾಡುವಂಥವುಗಳಿವೆ ಮತ್ತು ವೈರ, ಶೋಕ ಹಾಗೂ ಕಲಹ ಮಾಡುವಂಥವುಗಳಿವೆ ಅಲ್ಲದೆ ಬೇರೆಯೂ ಕೂಡ ಅನೇಕ ಪ್ರಕಾರದ ದುಃಖವನ್ನು ಉತ್ಪನ್ನ ಮಾಡುವಂಥವುಗಳಿವೆ, ಅವೆಲ್ಲ ಅಪ್ರಿಯ ವಚನಗಳು ಅಸತ್ಯದ ಭೇದಗಳಿವೆ.

ಈಗ ಅಸತ್ಯ ವಚನದಲ್ಲಿ ಹಿಂಸೆಯ ಸದ್ಭಾವ ತೋರಿಸಿಕೊಡುತ್ತಾರೆ, -

**ಸರ್ವಸ್ಮಿನ್ನಪ್ಯಸ್ಮಿನ್ಪ್ರಮತ್ತಯೋಗೈಕಹೇತುಕಥನಂ ಯತ್ ।**
**ಅನೃತವಚನೇಽಪಿ ತಸ್ಮಾನ್ನಿಯತಂ ಹಿಂಸಾ ಸಮವತರತಿ ॥೯೯॥**

**ಅನ್ವಯಾರ್ಥ :-** [**ಯತ್**] ಏಕೆಂದರೆ [**ಅಸ್ಮಿನ್**] ಈ [**ಸರ್ವಸ್ಮಿನ್ನಪಿ**] ಎಲ್ಲ ವಚನಗಳಲ್ಲಿ [**ಪ್ರಮತ್ತಯೋಗೈಕಹೇತುಕಥನಂ**] ಪ್ರಮಾದ ಸಹಿತವಾದ ಯೋಗವೇ ಒಂದು ಹೇತುವೆಂದು ಹೇಳಲಾಗಿದೆ. [**ತಸ್ಮಾತ್**] ಆದುದರಿಂದ [**ಅನೃತವಚನೇ**] ಅಸತ್ಯ ವಚನದಲ್ಲಿ [**ಅಪಿ**] ಕೂಡ [**ಹಿಂಸಾ**] ಹಿಂಸೆಯು [**ನಿಯತಂ**] ನಿಶ್ಚಿತರೂಪದಿಂದ [**ಸಮವತರತಿ**] ಬರುತ್ತದೆ.

**ಟೀಕೆ :- 'ಯತ್ ಅಸ್ಮಿನ್ ಸರ್ವಸ್ಮಿನ್ ಅಪಿ ಅನೃತವಚನೇ ಪ್ರಮತ್ತಯೋಗೈಕಹೇತುಕಥನಂ ಅಸ್ತಿ ತಸ್ಮಾತ್ ಅನೃತವಚನೇ ಹಿಂಸಾ ನಿಯತಂ ಸಮವತರತಿ'** - ಈ ಎಲ್ಲ ಪ್ರಕಾರದ ಅಸತ್ಯ ವಚನಗಳಲ್ಲಿ ಪ್ರಮಾದಯೋಗವೇ ಕಾರಣವಿರುವುದರಿಂದ ಅಸತ್ಯ ವಚನಗಳನ್ನು ಆಡುವಲ್ಲಿ ಹಿಂಸೆಯು ಅವಶ್ಯವಾಗಿಯೇ ಆಗುತ್ತದೆ. ಏಕೆಂದರೆ ಹಿಂಸೆಯು ಪ್ರಮಾದದಿಂದಲೇ ಆಗುತ್ತದೆ. ಪ್ರಮಾದದ ಹೊರತು ಹಿಂಸೆಯಾಗುವುದಿಲ್ಲ. ಎಲ್ಲಿ ಪ್ರಮಾದವಿರುವುದಿಲ್ಲ ಅಲ್ಲಿ ಹಿಂಸೆ ಕೂಡ ಇರುವುದಿಲ್ಲ. ಮತ್ತು ಎಲ್ಲಿ ಪ್ರಮಾದವಿದೆ ಅಲ್ಲಿ ಹಿಂಸೆಯು ಅವಶ್ಯವಾಗಿ ಆಗುತ್ತದೆ. ತತ್ತ್ವಾರ್ಥಸೂತ್ರದಲ್ಲಿ ಹಿಂಸೆಯ ಲಕ್ಷಣವನ್ನು **'ಪ್ರಮತ್ತಯೋಗಾತ್ ಪ್ರಾಣವ್ಯಪರೋಪಣಂ ಹಿಂಸಾ'**- ಎಂದು ಹೇಳಿದೆ ಎಂದರೆ ಪ್ರಮಾದದ ಯೋಗದಿಂದ ಪ್ರಾಣಿಗಳ ಘಾತ ಮಾಡುವುದು ಅದು ಹಿಂಸೆಯಿದೆ.

ಪ್ರಮಾದ ಸಹಿತವಿರುವ ಯೋಗವು ಹಿಂಸೆಯ ಕಾರಣವಿದೆಯೆಂದು ಈಗ ಹೇಳುತ್ತಾರೆ, -

**ಹೇತೌ ಪ್ರಮತ್ತಯೋಗೇ ನಿರ್ದಿಷ್ಟೇ ಸಕಲವಿತಥವಚನಾನಾಮ್ ।**
**ಹೇಯಾನುಷ್ಠಾನಾದೇರನುವದನಂ ಭವತಿ ನಾಸತ್ಯಮ್ ॥೧೦೦॥**

**ಅನ್ವಯಾರ್ಥ :- [ಸಕಲವಿತಥವಚನಾನಾಮ್]** ಸಮಸ್ತ ಅಸತ್ಯ ವಚನಗಳ **[ಪ್ರಮತ್ತಯೋಗೇ]** ಪ್ರಮಾದ ಸಹಿತ ಯೋಗವು **[ಹೇತೌ]** ಹೇತು **[ನಿರ್ದಿಷ್ಟೇ ಸತಿ]** ನಿರ್ದಿಷ್ಟ ಮಾಡುವಲ್ಲಿ ಬರುವುದರಿಂದ **[ಹೇಯಾನುಷ್ಠಾನಾದೇಃ]** ಹೇಯ-ಉಪಾದೇಯ ಮೊದಲಾದ ಅನುಷ್ಠಾನಗಳನ್ನು **[ಅನುವದನಂ]** ಹೇಳುವುದು **[ಅಸತ್ಯಂ ನ ಭವತಿ]** ಅಸತ್ಯವಾಗುವುದಿಲ್ಲ.

**ಟೀಕೆ :- ಸಕಲ ವಿತಥ ವಚನಾನಾಮ್ ಪ್ರಮತ್ತಯೋಗೇ ಹೇತೌ ನಿರ್ದಿಷ್ಟೇ ಸತಿ ಹೇಯಾನುಷ್ಠಾನಾದೇಃ ಅನುವದನಂ ಅಸತ್ಯಂ ನ ಭವತಿ'** - ಸಮಸ್ತ ಅಸತ್ಯ ವಚನಗಳ ಕಾರಣವಾದ ಪ್ರಮಾದ ಸಹಿತ ಯೋಗವನ್ನು ತಿಳಿಸಿಕೊಟ್ಟು ಹೇಯ ಮತ್ತು ಉಪಾದೇಯದ ಕಥನವನ್ನು ಪುನಃ ಪುನಃ ಮಾಡುವುದು ಅಸತ್ಯವಿಲ್ಲ.

**ಭಾವಾರ್ಥ :-** ಅಸತ್ಯ ವಚನದ ತ್ಯಾಗಿಯಾದ ಮಹಾಮುನಿಗಳು ಹೇಯ ಮತ್ತು ಉಪಾದೇಯದ ಉಪದೇಶವನ್ನು ಪುನಃ ಪುನಃ ಕೊಡುತ್ತಾರೆ. ಅಲ್ಲಿ ಪಾಪದ ನಿಂದೆ ಮಾಡಿದ ಮೇಲೆ ಪಾಪೀ ಜೀವರುಗಳಿಗೆ ಅವರ ಉಪದೇಶವು ಅಪ್ರಿಯವೆನಿಸುತ್ತದೆ ಅಥವಾ ತಮ್ಮ ಸಲುವಾಗಿ ಕೊಡಲಾದ ಧರ್ಮೋಪದೇಶವನ್ನು ಕೇಳಿ ದುಃಖಿಯಾಗುತ್ತಾರೆ; ಆದರೆ ಆ ಆಚಾರ್ಯರುಗಳಿಗೆ ಅಸತ್ಯದ ದೋಷ ತಗಲುವುದಿಲ್ಲ. ಏಕೆಂದರೆ ಅವರ ವಚನಗಳು ಪ್ರಮಾದ (ಕಷಾಯ) ದಿಂದ ಗರ್ಭಿತವಾಗಿರುವುದಿಲ್ಲ. ಪ್ರಮಾದ ಪೂರ್ವಕವಾದ ವಚನಗಳಲ್ಲಿಯೇ, ಹಿಂಸೆಯಿರುವುದರಿಂದ ಪ್ರಮಾದ ಸಹಿತವಾದ ಯೋಗದಿಂದ ವಚನಗಳನ್ನಾಡುವುದೇ ಹಿಂಸೆಯಿದೆ, ಅನ್ಯಥಾ ಇಲ್ಲವೆಂದು ಹೇಳಲಾಗಿದೆ.

ಈಗ ಅದರ ತ್ಯಾಗದ ಪ್ರಕಾರ ಹೇಳುತ್ತಾರೆ, -

ಭೋಗೋಪಭೋಗಸಾಧನಮಾತ್ರಂ ಸಾವದ್ಯಮಕ್ಷಮಾ ಮೋಕ್ತುಮ್ ।
ಯೇ ತೇऽಪಿ ಶೇಷಮನೃತಂ ಸಮಸ್ತಮಪಿ, ನಿತ್ಯಮೇವ ಮುಂಚಂತು ॥೧೦೧॥

**ಅನ್ವಯಾರ್ಥ :- [ಯೇ]** ಯಾವ ಜೀವರುಗಳು (ಭೋಗಪಭೋಗಸಾಧನಮಾತ್ರ) ಭೋಗ-ಉಪಭೋಗದ ಸಾಧನ ಮಾತ್ರವಾದ **[ಸಾವದ್ಯಮ್]** ಸಾವದ್ಯ ವಚನಗಳನ್ನು **[ಮೋಕ್ತುಮ್]** ಬಿಟ್ಟುಕೊಡುವಲ್ಲಿ **[ಅಕ್ಷಮಾಃ]** ಅಸಮರ್ಥರಿದ್ದಾರೆ. **[ತೇ ಅಪಿ]** ಅವರು ಕೂಡ **[ಶೇಷಮ್]** ಉಳಿದ **[ಸಮಸ್ತಮಪಿ]** ಸಮಸ್ತ **[ಅನೃತಂ]** ಅಸತ್ಯ ಭಾಷಣದ **[ಮುಂಚಂತು ನಿತ್ಯಮೇವ]** ತ್ಯಾಗವನ್ನು ನಿರಂತರ ಮಾಡಬೇಕು.

**ಟೀಕೆ :- 'ಯೇ ಅಪಿ ಭೋಗೋಪಭೋಗಸಾಧನಮಾತ್ರಂ ಸಾವದ್ಯಮ್ ಮೋಕ್ತುಮ್ ಅಕ್ಷಮಾಃ (ಸಂತಿ) ತೇ ಅಪಿ ಶೇಷಂ ಸಮಸ್ತಮ್ ಅಪಿ ಅನೃತಂ ನಿತ್ಯಂ ಏವ ಮುಂಚಂತು'** - ಯಾವ ಜೀವರುಗಳು ತಮ್ಮ ನ್ಯಾಯಪೂರ್ವಕ ಭೋಗೋಪಭೋಗಕ್ಕೆ ಕಾರಣಭೂತವಿರುವ ಸಾವದ್ಯ (ಹಿಂಸಾ ಸಹಿತವಾದ) ವಚನಗಳನ್ನು ಬಿಟ್ಟುಕೊಡುವಲ್ಲಿ ಅಸಮರ್ಥರಿದ್ದಾರೆ ಅವರು ಕೂಡ ಯಾವಾಗಲೂ ಉಳಿದ ಎಲ್ಲ ಅಸತ್ಯ-ವಚನಗಳ ತ್ಯಾಗ ಮಾಡಬೇಕಾಗುವುದು.

**ಭಾವಾರ್ಥ :-** ಅಸತ್ಯದ ತ್ಯಾಗವು ಎರಡು ಪ್ರಕಾರವಿದೆ. ಅವುಗಳಲ್ಲಿ ಒಂದು ಸರ್ವಥಾ ತ್ಯಾಗವಿದ್ದರೆ ಇನ್ನೊಂದು ಏಕದೇಶ ತ್ಯಾಗವಿದೆ. ಸರ್ವಥಾ ತ್ಯಾಗವಂತೂ ಮುನಿಧರ್ಮದಲ್ಲಿಯೇ ಸಂಭವಿಸುತ್ತದೆ, ಮತ್ತು ಏಕದೇಶ ತ್ಯಾಗವು ಶ್ರಾವಕಧರ್ಮದಲ್ಲಿ ಇರುತ್ತದೆ. ಆ ಸರ್ವಥಾ ತ್ಯಾಗವು ಸಂಭವಿಸುವ ಸಾಧ್ಯತೆಯಿದ್ದರಂತೂ ಬಹಳೇ ಉತ್ತಮವಿದೆ, ಒಂದು ವೇಳೆ ಕಷಾಯದ ಉದಯದಿಂದ (ಎಂದರೆ ಕಷಾಯ ವಶದಿಂದ) ಸರ್ವಥಾ ತ್ಯಾಗವು ಸಂಭವಿಸುವ ಸಾಧ್ಯತೆಯಿಲ್ಲದಿದ್ದರೆ ಏಕದೇಶ ತ್ಯಾಗವನ್ನಾದರೂ ಅವಶ್ಯವಾಗಿ ಮಾಡಬೇಕಾಗುವದು. ಏಕೆಂದರೆ ಶ್ರಾವಕ ಅವಸ್ಥೆಯಲ್ಲಿ ಅಸತ್ಯದ ಉಳಿದ ಎಲ್ಲ ಭೇದಗಳ ತ್ಯಾಗ ಮಾಡುತ್ತಾನೆ, ಆದರೆ ಸಾವದ್ಯ ಅಸತ್ಯದ ತ್ಯಾಗವಾಗುವ

ಸಾಧ್ಯತೆಯಿಲ್ಲ. ಆದಾಗ್ಯೂ ಅಲ್ಲಿ ಕೂಡ ತಮ್ಮ ಭೋಗ-ಉಪಭೋಗದ ನಿಮಿತ್ತವೇ ಅಸತ್ಯ ವಚನ-ಸಾವದ್ಯ ವಚನವಾದರೂ ಪ್ರಯೋಜನವಿಲ್ಲದೆ ಮಾತನಾಡುವುದಿಲ್ಲ.

ಈಗ ಎರಡನೆಯ ಚೌರ್ಯಪಾಪದ ವರ್ಣನೆ ಮಾಡುತ್ತಾರೆ, -

**ಅವಿತೀರ್ಣಸ್ಯ ಗ್ರಹಣಂ ಪರಿಗ್ರಹಸ್ಯ ಪ್ರಮತ್ತಯೋಗಾದ್ಯತ್ ।**
**ತತ್ಪ್ರತ್ಯೇಯಂ ಸ್ತೇಯಂ ಸೈವ ಚ ಹಿಂಸಾ ವಧಸ್ಯ ಹೇತುತ್ವಾತ್ ॥೧೦೨॥**

**ಅನ್ವಯಾರ್ಥ :- [ಯತ್]** ಯಾವ **[ಪ್ರಮತ್ತಯೋಗಾತ್]** ಪ್ರಮಾದ ಕಷಾಯದ ಯೋಗದಿಂದ **[ಅವಿತೀರ್ಣಸ್ಯ]** ಕೊಡದಿರುವ **[ಪರಿಗ್ರಹಸ್ಯ]** ಚಿನ್ನ, ಬಟ್ಟೆ ಮೊದಲಾದ ಪರಿಗ್ರಹವನ್ನು **[ಗ್ರಹಣಂ]** ಗ್ರಹಣ ಮಾಡುತ್ತದೆ **[ತತ್]** ಅದನ್ನು **[ಸ್ತೇಯಂ ಪ್ರತ್ಯೇಯಂ]** ಕಳವುಯೆಂದು ತಿಳಿಯಬೇಕಾಗುವುದು. **[ಚ]** ಮತ್ತು **[ಸಾ ಏವ]** ಅದುವೇ **[ವಧಸ್ಯ]** ವಧೆಯ **[ಹೇತುತ್ವಾತ್]** ಕಾರಣವಾಗುವುದರಿಂದ **[ಹಿಂಸಾ]** ಹಿಂಸೆಯಿದೆ.

**ಟೀಕೆ :- 'ಯತ್ ಪ್ರಮತ್ತಯೋಗಾತ್ ಅವಿತೀರ್ಣಸ್ಯ ಪರಿಗ್ರಹಸ್ಯ ಗ್ರಹಣಂ ತತ್‌ಸ್ತೇಯಂ ಪ್ರತ್ಯೇಯಂ, ಚ ಸೈವ ಹಿಂಸಾ (ಭವತಿ) ವಧಸ್ಯ ಹೇತುತ್ವಾತ್'**-ಆ ಪ್ರಮಾದದ ಯೋಗದಿಂದ ಕೊಡದಿರುವಂಥ ಚಿನ್ನ, ಬಟ್ಟೆ, ಮೊದಲಾದ ಪರಿಗ್ರಹದ ಗ್ರಹಣ ಮಾಡುವುದು ಅದು ಕಳವೆಂದು ಕರೆಯಿಸಿಕೊಳ್ಳುತ್ತದೆ. (ಚಿನ್ನ ಮೊದಲಾದ ವಸ್ತುಗಳನ್ನು ಒಡೆಯನ ಆಜ್ಞೆಯಿಲ್ಲದೆ ಎತ್ತಿ ತೆಗೆದುಕೊಳ್ಳುವುದು, ಮರೆಸಿ ತೆಗೆದುಕೊಳ್ಳುವುದು, ಬಿದ್ದಿರುವುದನ್ನು ಎತ್ತಿಕೊಳ್ಳುವುದು, ಬಲವಂತದಿಂದ ಕಸಿದುಕೊಳ್ಳುವುದು ಅಥವಾ ಯಾವುದೇ ಪ್ರಕಾರದಿಂದ ಕೊಡದಿರುವುದನ್ನು ತೆಗೆದುಕೊಳ್ಳುವುದು ಅದು ಕಳವು ಇದೆ.) ಮತ್ತು ಅದೇ ಕಳವು ಹಿಂಸೆಯಿದೆ. ಏಕೆಂದರೆ ಅದು ತನ್ನ ಹಾಗೂ ಪರ ಜೀವದ ಪ್ರಾಣಘಾತದ ಕಾರಣವಿದೆ.

**ಭಾವಾರ್ಥ :-** ತಮಗೆ ಕಳವು ಮಾಡುವ ಭಾವವಾಗುವುದು ಅದು ಭಾವಹಿಂಸೆಯಿದೆ ಮತ್ತು ಯಾರಾದರೂ ತಮ್ಮನ್ನು ಕಳ್ಳನೆಂದು ತಿಳಿದುಕೊಂಡರೆ ಪ್ರಾಣಗಳ ವಿಯೋಗ ಮಾಡಿದರೆ ಅದುವೇ ದ್ರವ್ಯ ಹಿಂಸೆಯಿದೆ ಮತ್ತು ಯಾವ ಜೀವದ ವಸ್ತುವು ಕಳವಾಗಿ ಹೋಗುವುದರಿಂದ ಅವನ ಅಂತರಂಗದಲ್ಲಿ ಉಂಟಾದ ಪೀಡೆಯೇ ಅವನ ಭಾವಹಿಂಸೆಯಿದೆ. ಇನ್ನು ಆ ವಸ್ತುವಿನ ನಿಮಿತ್ತದಿಂದ ಆ ಜೀವದ ದ್ರವ್ಯಪ್ರಾಣವು ಪುಷ್ಟವಿತ್ತು. ಆ ಪುಷ್ಟ ಪ್ರಾಣದ ನಾಶವಾಗುವುದರಿಂದ ಅವನ ದ್ರವ್ಯ ಪ್ರಾಣವು ದುಃಖಿತವಾಗಿರುವುದೇ ಅವನ ದ್ರವ್ಯಹಿಂಸೆಯಿದೆ. ಈ ಪ್ರಕಾರ ಕಳವು ಮಾಡುವುದರಿಂದ ಕಳವು ಮಾಡುವಂಥವನ ಮತ್ತು ಯಾವನದು ಕಳವಾಗಿ ಹೋಗಿದೆ ಅವನ ದ್ರವ್ಯ ಹಾಗೂ ಭಾವ ಇವೆರಡೂ ಪ್ರಕಾರದ ಹಿಂಸೆಗಳು ಆಗುತ್ತವೆ.

ಈಗ ಚೌರ್ಯವು ಪ್ರಕಟರೂಪದಿಂದ ಹಿಂಸೆಯಿದೆಯೆಂದು ಹೇಳುತ್ತಾರೆ, -

**ಅರ್ಥಾ ನಾಮ ಯ ಏತೇ ಪ್ರಾಣಾ ಏತೇ ಬಹಿಶ್ಚರಾಃ ಪುಂಸಾಮ್ ।**
**ಹರತಿ ಸ ತಸ್ಯ ಪ್ರಾಣಾನ್ ಯೋ ಯಸ್ಯ ಜನೋ ಹರತ್ಯರ್ಥಾನ್ ॥೧೦೩॥**

**ಅನ್ವಯಾರ್ಥ :- [ಯಃ]** ಯಾವ **[ಜನಃ]** ಮನುಷ್ಯನು **[ಯಸ್ಯ]** ಯಾವ ಜೀವದ **[ಅರ್ಥಾನ್]** ಪದಾರ್ಥಗಳನ್ನು ಅಥವಾ ಧನವನ್ನು **[ಹರತಿ]** ಹರಣ ಮಾಡುತ್ತಾನೆ. **[ಸಃ]** ಆ ಮನುಷ್ಯನು **[ತಸ್ಯ]** ಆ ಜೀವದ **[ಪ್ರಾಣಾನ್]** ಪ್ರಾಣವನ್ನು **[ಹರತಿ]** ಹರಣ ಮಾಡುತ್ತಾನೆ ಏಕೆಂದರೆ ಜಗತ್ತಿನಲ್ಲಿ **[ಯೇ]** ಯಾವ **[ಏತೇ]** ಈ **[ಅರ್ಥಾನಾಮ]** ಧನ ಮೊದಲಾದ ಪದಾರ್ಥಗಳು ಪ್ರಸಿದ್ಧವಿವೆ. **[ಏತೇ]** ಅವೆಲ್ಲವೂ **[ಪುಂಸಾ]** ಮನುಷ್ಯರಿಗೆ

**[ಬಹಿಶ್ಚರಾಃ ಪ್ರಾಣಾ ಸಂತಿ]** ಬಾಹ್ಯ ಪ್ರಾಣಗಳಿವೆ.

**ಟೀಕೆ :- 'ಯೇ ಏತೇ ಅರ್ಥಾ ನಾಮ ಏತೇ ಪುಂಸಾಮ್ ಬಹಿಶ್ಚರಾಃ ಪ್ರಾಣಾಃ ಸಂತಿ ಯಸ್ಮಾತ್ ಯಃ ಜನಃ ಯಸ್ಯ ಅರ್ಥಾನ್ ಹರತಿ ಸ ತಸ್ಯಪ್ರಾಣಾನ್ ಹರತಿ'** - ಈ ಯಾವ ಪದಾರ್ಥಗಳಿವೆ ಅವೆಲ್ಲವೂ ಮನುಷ್ಯನ ಬಾಹ್ಯ ಪ್ರಾಣಗಳಿವೆ, ಆದುದರಿಂದ ಯಾವ ಜೀವನು ಬೇರೆ ಯಾರದೇ ಧನವನ್ನು ಅಪಹರಿಸಿಕೊಳ್ಳುತ್ತಾನೆ, ಕದಿಯುತ್ತಾನೆ ಅವನು ಆತನ ಪ್ರಾಣಗಳನ್ನೇ ಹರಣ ಮಾಡಿಕೊಳ್ಳುತ್ತಾನೆ.

**ಭಾವಾರ್ಥ :-** ಧನ, ಧಾನ್ಯ, ಸಂಪತ್ತು, ಎತ್ತು,ಕುದುರೆ, ಸೇವಕ, ಸೇವಕಿ, ಮನೆ, ಭೂಮಿ, ಸ್ತ್ರಿ ಪುತ್ರ, ವಸ್ತ್ರ ಮೊದಲಾದ ಅದೆಷ್ಟೋ ಪದಾರ್ಥಗಳು ಯಾವ ಜೀವದ ಹತ್ತಿರದಲ್ಲಿವೆ ಅವೆಲ್ಲವೂ ಆತನ ಬಾಹ್ಯ ಪ್ರಾಣಗಳಿವೆ. ಆ ಪದಾರ್ಥಗಳೊಳಗಿಂದ ಯಾವುದಾದರೂ ಒಂದು ಪದಾರ್ಥದ ನಾಶವಾಗಿ ಹೋದ ಮೇಲೆ ತನ್ನ ಪ್ರಾಣದ ಘಾತವಾಗಿ ಹೋದಂಥ ದುಃಖವು ಉತ್ಪನ್ನವಾಗುವುದರಿಂದ ಆ ಪದಾರ್ಥಗಳಿಗೇನೇ ಪ್ರಾಣವೆಂದು ಹೇಳಲಾಗುತ್ತದೆ.ಹೇಗೆಂದರೆ **'ಅನ್ನಂ ವೈ ಪ್ರಾಣಾಃ' ಇತಿ ವಚನಾತ್-** ಅನ್ನವೇ ಪ್ರಾಣವಿದೆಯೆಂಬ ವಚನದ ಅನುಸಾರ ತಿಳಿದುಕೊಳ್ಳಬೇಕು.

ಹಿಂಸೆ ಮತ್ತು ಚೌರ್ಯದಲ್ಲಿ ಅವ್ಯಾಪಕತೆಯಿಲ್ಲ, ಆದರೆ ವ್ಯಾಪಕತೆಯಿದೆಯೆಂದು ಈಗ ಹೇಳುತ್ತಾರೆ, -

ಹಿಂಸಾಯಾಃ ಸ್ತೇಯಸ್ಯ ಚ ನಾವ್ಯಾಪ್ತಿಃ ಸುಘುಟಮೇವ ಸಾ ಯಸ್ಮಾತ್ ।
ಗ್ರಹಣೇ ಪ್ರಮತ್ತಯೋಗೋ ದ್ರವ್ಯಸ್ಯ ಸ್ವೀಕೃತಸ್ಯಾನ್ಯೈಃ ॥೧೦೪॥

**ಅನ್ವಯಾರ್ಥ :- [ಹಿಂಸಾಯಾಃ]** ಹಿಂಸೆಯಲ್ಲಿ **[ಚ]** ಮತ್ತು **[ಸ್ತೇಯಸ್ಯ]** ಚೌರ್ಯದಲ್ಲಿ **[ಅವ್ಯಾಪ್ತಿಃ]** ಅವ್ಯಾಪ್ತಿ ದೋಷವು **[ನ]** ಇಲ್ಲ, **[ಸಾ ಸುಘುಟಮೇವ]** ಆ ಹಿಂಸೆಯು ಸರಿಯಾಗಿ ಸಂಭವಿಸುತ್ತದೆ. **[ಯಸ್ಮಾತ್]** ಕಾರಣವೇನೆಂದರೆ **[ಅನ್ಯೈಃ]** ಇತರರ ಮೂಲಕ **[ಸ್ವೀಕೃತಸ್ಯ]** ಸ್ವೀಕರಿಸಿರುವ **[ದ್ರವ್ಯಸ್ಯ]** ದ್ರವ್ಯದ **[ಗ್ರಹಣೇ]** ಗ್ರಹಣದಲ್ಲಿ **[ಪ್ರಮತ್ತಯೋಗಃ]** ಪ್ರಮಾದದ ಯೋಗವಿದೆ.

**ಟೀಕೆ :- 'ಹಿಂಸಾಯಾಃ ಸ್ತೇಯಸ್ಯ ಅವ್ಯಾಪ್ತಿಃ ನ ಸಾ ಸುಘುಟಮೇವ ಯಸ್ಮಾತ್ ಅನ್ಯೈಃ ಸ್ವೀಕೃತಸ್ಯ ದ್ರವ್ಯಸ್ಯ ಗ್ರಹಣೇ ಪ್ರಮತ್ತಯೋಗಃ ಭವತಿ'** - ಹಿಂಸೆ ಮತ್ತು ಚೌರ್ಯದಲ್ಲಿ ಅವ್ಯಾಪ್ತಿ ತನವು ಇಲ್ಲ, ಆದರೆ ಒಳ್ಳೆಯ ರೀತಿಯಿಂದ ವ್ಯಾಪಕತನವಿದೆ. ಏಕೆಂದರೆ ಇನ್ನೊಬ್ಬ ಜೀವನು ಸಂಪಾದಿಸಿರುವ ಪದಾರ್ಥಗಳಲ್ಲಿ ತನ್ನತನದ ಕಲ್ಪನೆ ಮಾಡುವುದರಲ್ಲಿ ಪ್ರಮಾದಯೋಗವೇ ಮುಖ್ಯ ಕಾರಣವಿದೆ.

**ಭಾವಾರ್ಥ :-** ಒಂದು ವೇಳೆ ಓರ್ವ ಜೀವನಿಗೆ ಒಂದು ಕಾಲದಲ್ಲಿ (ಯಾವ ಸಮಯದಲ್ಲಿ) ಎಲ್ಲಿ ಚೌರ್ಯವಿದೆ ಅಲ್ಲಿ ಹಿಂಸೆಯಿಲ್ಲದಿದ್ದರೆ ಅವ್ಯಾಪ್ತಿಯ ದೋಷವು ಬರುವ ಸಾಧ್ಯತೆಯಿದೆ, ಆದರೆ ಪ್ರಮಾದವಿಲ್ಲದೆ ಚೌರ್ಯವು ಸಂಭವಿಸುವುದಿಲ್ಲ. ಪ್ರಮಾದದ ಹೆಸರೇ ಹಿಂಸೆಯಿದೆ, ಮತ್ತು ಚೌರ್ಯದಲ್ಲಿ ಪ್ರಮಾದವು ಅವಶ್ಯವಾಗಿ ಇದ್ದೇ ಇರುವುದರಿಂದ ಎಲ್ಲಿ ಎಲ್ಲಿ ಚೌರ್ಯವಿದೆ ಅಲ್ಲಿ ಅಲ್ಲಿ ಅವಶ್ಯವಾಗಿ ಹಿಂಸೆಯಿದೆಯೆಂಬುದು ಸಿದ್ಧವಾಯಿತು.

ಹಿಂಸೆ ಮತ್ತು ಚೌರ್ಯದಲ್ಲಿ ಅತಿವ್ಯಾಪ್ತಿತನವೂ ಇಲ್ಲವೆಂದು ಈಗ ಹೇಳುತ್ತಾರೆ, -

ನಾತಿವ್ಯಾಪ್ತಿಶ್ಚ ತಯೋಃ ಪ್ರಮತ್ತಯೋಗೈಕಕಾರಣವಿರೋಧಾತ್ ।
ಅಪಿ ಕರ್ಮಾನುಗ್ರಹಣೇ ನೀರಾಗಾಣಾಮವಿದ್ಯಮಾನತ್ವಾತ್ ॥೧೦೫॥

**ಅನ್ವಯಾರ್ಥ :- [ಚ]** ಮತ್ತು **[ನೀರಾಗಾಣಾಮ್]** ವೀತರಾಗೀ ಪುರುಷರಿಗೆ **[ಪ್ರಮತ್ತಯೋಗೈಕ ಕಾರಣವಿರೋಧಾತ್]** ಪ್ರಮತ್ತಯೋಗರೂಪ ಒಂದು ಕಾರಣದ ವಿರೋಧದಿಂದ **[ಕರ್ಮಾನುಗ್ರಹಣೇ]**

ದ್ರವ್ಯಕರ್ಮ ನೋಕರ್ಮದ ಕರ್ಮವರ್ಗಣಾಗಳನ್ನು ಗ್ರಹಣ ಮಾಡುವಲ್ಲಿ **[ಅಪಿ)** ನಿಶ್ಚಯದಿಂದ **[ಸ್ತೇಯಸ್ಯ]** ಚೌರ್ಯದ **[ಅವಿದ್ಯಮಾನತ್ವಾತ್]** ಅನುಪಸ್ಥಿತಿಯಿಂದ **[ತಯೋಃ]** ಅವೆರಡರಲ್ಲಿ ಎಂದರೆ ಹಿಂಸೆ ಮತ್ತು ಚೌರ್ಯದಲ್ಲಿ **[ಅತಿವ್ಯಾಪ್ತಿಃ ನ]** ಅತಿವ್ಯಾಪ್ತಿಯು ಕೂಡ ಇಲ್ಲ.

**ಟೀಕೆ ಃ- 'ಚ ತಯೋಃ (ಹಿಂಸಾ ಸ್ತೇಯಯೋಃ) ಅತಿವ್ಯಾಪ್ತಿಃ ಚ ನ ಅಸ್ತಿ ಯತಃ ವೀತರಾಗಾಣಾಂ ಪ್ರಮತ್ತಯೋಗೈಕಕಾರಣ ವಿರೋಧಾತ್‌ಕರ್ಮಾನುಗ್ರಹಣೇ ಅಪಿ ಹಿಂಸಾಯಾಃ ಅವಿದ್ಯಮಾನತ್ವಾತ್' -** ಹಿಂಸೆ ಮತ್ತು ಚೌರ್ಯದಲ್ಲಿ ಅತಿವ್ಯಾಪ್ತಿನವು ಕೂಡ ಇಲ್ಲ ಎಂದರೆ ಚೌರ್ಯವಿರುವುದು ಮತ್ತು ಹಿಂಸೆಯಿಲ್ಲದಿರುವುದು ಎಂಬುದಾಗಿಲ್ಲ, ಅದರಂತೆ ಹಿಂಸೆಯಿರುವುದು ಮತ್ತು ಚೌರ್ಯವಿಲ್ಲದಿರುವುದು ಎಂಬುದಾಗಿಯೂ ಕೂಡ ಇಲ್ಲ. ಏಕೆಂದರೆ ವೀತರಾಗೀ ಪುರುಷರಿಗೆ ಪ್ರಮಾದ ಸಹಿತ ಯೋಗದ ಕಾರಣವಿಲ್ಲದಿರುವುದರಿಂದ ದ್ರವ್ಯಕರ್ಮ-ನೋಕರ್ಮ ವರ್ಗಣಾಗಳ ಗ್ರಹಣವಾಗುತ್ತಿದ್ದರೂ ಕೂಡ ಪ್ರಮಾದವಿಲ್ಲದಿರುವುದರಿಂದ ಚೌರ್ಯದ ಸದ್ಭಾವವಿಲ್ಲ.

**ಭಾವಾರ್ಥ ಃ-** ಕೊಡದಿರುವ ವಸ್ತುವಿನ ಗ್ರಹಣವು ಅದು ಕಳವು ಇದೆ. ವೀತರಾಗೀ ಅರಹಂತ ಭಗವಂತರಿಗೆ ಕರ್ಮ-ನೋಕರ್ಮ ವರ್ಗಣಾಗಳ ಗ್ರಹಣವಾಗುತ್ತದೆ ಮತ್ತು ಆ ವರ್ಗಣಾಗಳಿಂದ ಕಳವಿನ ಪ್ರಸಂಗ ಬರಬೇಕಾದರೆ ಅವನ್ನು ಯಾರಿಂದಲೂ ಕೊಡಲಾಗಿಲ್ಲ. ಆದರೆ ಪ್ರಮಾದ ಮತ್ತು ಯೋಗವಿಲ್ಲದೆ ಕಳವೆಂದು ಕರೆಯಿಸಿಕೊಳ್ಳುವುದಿಲ್ಲ. ಪ್ರಮಾದಯೋಗವಿದ್ದುದೇ ಹಿಂಸೆಯಿರುವುದರಿಂದ ಅತಿವ್ಯಾಪ್ತಿತನವು ಇಲ್ಲ. ಒಂದು ವೇಳೆ ಹಿಂಸೆ ಪ್ರಮಾದವಿಲ್ಲದೆ ಕಳವಾಗುವ ಸಾಧ್ಯತೆಯಿರುತ್ತಿದ್ದರೆ ಅತಿವ್ಯಾಪ್ತಿಯ ದೋಷವು ಬರುತ್ತದೆ. ಆದರೆ ಅದಂತೂ ಅಲ್ಲಿ ಇಲ್ಲವೇ ಇಲ್ಲ. ಆದುದರಿಂದ ಎಲ್ಲಿ ಕಳವು ಇದೆ, ಅಲ್ಲಿ ಹಿಂಸೆಯಿರುವುದರಿಂದ ಅವ್ಯಾಪ್ತಿಯಿಲ್ಲ ಮತ್ತು ಎಲ್ಲಿ ಹಿಂಸೆಯಿಲ್ಲ ಅಲ್ಲಿ ಕಳವು ಕೂಡ ಇಲ್ಲ. ಅದರಂತೆ ಎಲ್ಲಿ ಕಳವು ಇಲ್ಲ ಅಲ್ಲಿ ಹಿಂಸೆ ಕೂಡ ಇಲ್ಲವೆಂಬ ಮಾತು ಸಿದ್ಧವಾಗುತ್ತದೆ. ಈ ಕಾರಣದಿಂದ ಅತಿವ್ಯಾಪ್ತಿಯಿಲ್ಲದಿರುವುದರಿಂದ ಚೌರ್ಯವು ಹಿಂಸಾರೂಪವಾಗಿಯೇ ಇದೆ.

ಈಗ ಚೌರ್ಯ ತ್ಯಾಗದ ಪ್ರಕಾರ ಹೇಳುತ್ತಾರೆ, -

**ಅಸಮರ್ಥಾ ಯೇ ಕರ್ತುಂ ನಿಪಾನತೋಯಾದಿಹರಣವಿನಿವೃತ್ತಿಮ್ ।**
**ತೈರಪಿ ಸಮಸ್ತಮಪರಂ ನಿತ್ಯಮದತ್ತಂ ಪರಿತ್ಯಾಜ್ಯಮ್ ॥೧೦೬॥**

**ಅನ್ವಯಾರ್ಥ ಃ- [ಯೇ]** ಯಾವ ಜೀವರುಗಳು **[ನಿಪಾನತೋಯಾದಿಹರಣವಿನಿವೃತ್ತಿಮ್]** ಇತರರ ಬಾವಿ, ಕೊಳ ಮೊದಲಾದ ಜಲಾಶಯಗಳ ಜಲ ಮೊದಲಾದುವನ್ನು ಗ್ರಹಣ ಮಾಡುವಲ್ಲಿ ತ್ಯಾಗ **[ಕರ್ತುಮ್** ಮಾಡುವಲ್ಲಿ **[ಅಸಮರ್ಥಾ]** ಅಸಮರ್ಥರಿದ್ದಾರೆ **[ತೈಃ ಅಪಿ]** ಅವರು ಕೂಡ **[ಅಪರಂ ಸಮಸ್ತಂ]** ಉಳಿದೆಲ್ಲ **[ಅದತ್ತಂ]** ಕೊಡದಿರುವ ವಸ್ತುಗಳನ್ನು ಗ್ರಹಣ ಮಾಡುವ **[ಪರಿತ್ಯಾಜ್ಯಮ್ ನಿತ್ಯಮ್]** ತ್ಯಾಗವನ್ನು ಯಾವಾಗಲೂ ಮಾಡುವುದು ಯೋಗ್ಯವಿದೆ.

**ಟೀಕೆ ಃ- 'ಯೇ (ಜೀವಾಃ) ನಿಪಾನತೋಯಾದಿಹರಣವಿನಿವೃತ್ತಿವಮ್ ಕರ್ತುವಮ್ ಅಸಮರ್ಥಾಃ ತೈಃ (ಜೀವೈಃ) ಅಪಿ ನಿತ್ಯಂ ಸಮಸ್ತಂ ಅಪರಂ ಅದತ್ತಂ ಪರಿತ್ಯಾಜ್ಯವಮ್' -** ಯಾವ ಜೀವರುಗಳು ಕುಡಿಯಲು ಬಳಸುವ ಬಾವಿ, ಕೊಳ, ನದಿ ಮೊದಲಾದವುಗಳ ನೀರಿನಿಂದ ಹಿಡಿದು ಮಣ್ಣು ಮೊದಲಾದ ವಸ್ತುಗಳ (ಸಾಮಾನ್ಯ ಜನತೆಯ ಉಪಯೋಗದ ಸಲುವಾಗಿ ಇರುವಂಥವುಗಳ) ಗ್ರಹಣದ ತ್ಯಾಗ ಮಾಡುವಲ್ಲಿ ಅಶಕ್ತರಿದ್ದಾರೆ ಅವರು ಕೂಡ ಇತರರ ಮೂಲಕ ಕೊಡಲ್ಪಟ್ಟ ವಸ್ತುಗಳನ್ನು ಹೊರತುಪಡಿಸಿ ಉಳಿದ ಸಮಸ್ತ ವಸ್ತುಗಳ ಗ್ರಹಣದ ತ್ಯಾಗವನ್ನು ಮಾಡಬೇಕಾಗುವುದು.

**ಭಾವಾರ್ಥ ಃ-** ಚೌರ್ಯದ ತ್ಯಾಗವು ಕೂಡ ಎರಡು ಪ್ರಕಾರದಿಂದ ಇದೆ. ಅದರಲ್ಲಿ ಒಂದು ಸರ್ವಥಾ

ತ್ಯಾಗವಿದ್ದರೆ ಇನ್ನೊಂದು ಏಕದೇಶ ತ್ಯಾಗವಿದೆ; ಸರ್ವಥಾ ತ್ಯಾಗವಂತೂ ಮುನಿಧರ್ಮದಲ್ಲಿಯೇ ಇರುತ್ತದೆ. ಆದುದರಿಂದ ಅದು ಸಂಭವಿಸುವ ಸಾಧ್ಯತೆಯಿದ್ದರೆ ಅವಶ್ಯವಾಗಿ ಮಾಡಬೇಕು. ಒಂದು ವೇಳೆ ಅದು ಸಂಭವಿಸದಿದ್ದರೆ ಏಕದೇಶ ತ್ಯಾಗವನ್ನಂತೂ ಅವಶ್ಯವಾಗಿಯೇ ಮಾಡಬೇಕಾಗುವುದು. ಶ್ರಾವಕನು ಬಾವಿ, ನದಿ ಮೊದಲಾದವುಗಳ ನೀರನ್ನು ಹಾಗೂ ಸಾರ್ವಜನಿಕ ಮಣ್ಣು ಮೊದಲಾದುವನ್ನು ಯಾರನ್ನೂ ಕೇಳದೆಯೂ ಕೂಡ ಗ್ರಹಣ ಮಾಡಿದರೆ ಅದರ ಹೆಸರು ಚೌರ್ಯವಿಲ್ಲ ಮತ್ತು ಒಂದು ವೇಳೆ ಮುನಿಗಳು ಅವನ್ನು ಗ್ರಹಣ ಮಾಡಿದರೆ ಅದು ಚೌರ್ಯವೆಂದು ಕರೆಯಿಸಿಕೊಳ್ಳುವುದು.

ಈಗ ಕುಶೀಲದ ಸ್ವರೂಪ ಹೇಳುತ್ತಾರೆ, -

**ಯದ್ವೇದರಾಗಯೋಗಾನ್ಮೈಥುನಮಭಿಧೀಯತೇ ತದಬ್ರಹ್ಮ ।**
**ಅವತರತಿ ತತ್ರ ಹಿಂಸಾ ವಧಸ್ಯ ಸರ್ವತ್ರ ಸದ್ಭಾವಾತ್ ॥೧೦೭॥**

**ಅನ್ವಯಾರ್ಥ :-** **[ಯತ್]** ಯಾವ **[ವೇದರಾಗಯೋಗಾತ್]** ವೇದದ ರಾಗರೂಪ ಯೋಗದಿಂದ **[ಮೈಥುನಂ]** ಸ್ತ್ರೀ-ಪುರುಷರ ಸಹವಾಸವನ್ನು **[ಅಭಿಧೀಯತೇ)** ಹೇಳಲಾಗುತ್ತದೆ, **[ತತ್]** ಅದು **[ಅಬ್ರಹ್ಮ]** ಅಬ್ರಹ್ಮವಿದೆ ಮತ್ತು **[ತತ್ರ]** ಆ ಸಹವಾಸದಲ್ಲಿ **[ಸರ್ವತ್ರ]** ಎಲ್ಲ ಸ್ಥಾನದೊಳಗೆ **[ವಧಸ್ಯ]** ಪ್ರಾಣಿವಧೆಯ **[ಸದ್ಭಾವಾತ್]** ಸದ್ಭಾವವಿರುವುದರಿಂದ **[ಹಿಂಸಾ]** ಹಿಂಸೆಯು **[ಅವತರತಿ]** ಆಗುತ್ತದೆ.

**ಟೀಕೆ :- 'ಯತ್ ವೇದರಾಗಯೋಗಾತ್ ಮೈಥುನಂ ಅಭಿಧೀಯತೇ ತತ್ ಅಬ್ರಹ್ಮ ಭವತಿ ತತ್ರ ಹಿಂಸಾ ಅವತರತಿ (ಯತಃ) ಸರ್ವತ್ರ ವಧಸ್ಯ ಸದ್ಭಾವಾತ್ -** ಸ್ತ್ರೀವೇದ, ಪುರುಷವೇದ, ನಪುಂಸಕವೇದದ ಪರಿಣಮನ ರೂಪ ರಾಗಭಾವ ಸಹಿತವಾದ ಯೋಗದಿಂದ ಮೈಥುನ ಎಂದರೆ ಸ್ತ್ರೀ-ಪುರುಷರು ಕೂಡಿಕೊಂಡು ಕಾಮ ಸೇವನೆ ಮಾಡುವುದು ಅದು ಕುಶೀಲವಿದೆ (ಅಬ್ರಹ್ಮವಿದೆ), ಆ ಕುಶೀಲದಲ್ಲಿ ಹಿಂಸೆಯು ಉತ್ಪನ್ನವಾಗುತ್ತದೆ. ಏಕೆಂದರೆ ಕುಶೀಲ ಮಾಡುವ ಮತ್ತು ಮಾಡಿಸುವಂಥವರಿಗೆ ಸರ್ವತ್ರ ಹಿಂಸೆಯ ಸದ್ಭಾವವಿದೆ.

**ಭಾವಾರ್ಥ :-** ಸ್ತ್ರೀಯ ಯೋನಿ, ನಾಭಿ, ಮೊಲೆ ಮತ್ತು ಕಂಕುಳದಲ್ಲಿ ಮನುಷ್ಯಾಕಾರದ ಸಮ್ಮೂರ್ಛನ ಪಂಚೇಂದ್ರಿಯ ಜೀವಗಳು ಉತ್ಪನ್ನವಾಗುತ್ತವೆ, ಆದುದರಿಂದ ಸ್ತ್ರೀಯ ಜತೆ ಸಹವಾಸ ಮಾಡುವಲ್ಲಿ ದ್ರವ್ಯ ಹಿಂಸೆಯಾಗುತ್ತದೆ ಮತ್ತು ಸ್ತ್ರೀ ಹಾಗೂ ಪುರುಷ ಇವರೀರ್ವರಿಗೆ ಕಾಮರೂಪದ ಪರಿಣಾಮಗಳಾಗುವುದರಿಂದ ಭಾವಹಿಂಸೆಯಾಗುತ್ತದೆ. ಶರೀರದ ಶಿಥಿಲತೆಯ ನಿಮಿತ್ತದಿಂದ ತಮ್ಮ ದ್ರವ್ಯಪ್ರಾಣದ ಘಾತವಾಗುತ್ತದೆ. ಪರ ಜೀವವು ಸ್ತ್ರೀ ಅಥವಾ ಪುರುಷನ ವಿಕಾರ ಪರಿಣಾಮಕ್ಕೆ ಕಾರಣವಿದೆ ಅಥವಾ ಅವನಿಗೆ ಪೀಡೆ ಉತ್ಪನ್ನವಾಗುತ್ತದೆ, ಅವನ ಪರಿಣಾಮವು ವಿಕಾರಿಯಾಗುತ್ತದೆ. ಇದರಿಂದ ಅನ್ಯ ಜೀವದ ಭಾವಪ್ರಾಣದ ಘಾತವಾಗುತ್ತದೆ ಮತ್ತು ಮೈಥುನದಲ್ಲಿ ಬಹಳಷ್ಟು ಜೀವಗಳು ಸಾಯುತ್ತವೆ. ಈ ಪ್ರಕಾರ ಇತರ ಜೀವಗಳ ದ್ರವ್ಯಪ್ರಾಣದ ಘಾತವಾಗುತ್ತದೆ.

ಈಗ ಮೈಥುನದಲ್ಲಿ ಪ್ರಕಟ-ರೂಪದಿಂದ ಹಿಂಸೆಯಿದೆಯೆಂದು ಹೇಳುತ್ತಾರೆ, -

**ಹಿಂಸ್ಯಂತೇ ತಿಲನಾಲ್ಯಾಂ ತಪ್ತಾಯಸಿ ವಿನಿಹಿತೇ ತಿಲಾ ಯದ್ವತ್ ।**
**ಬಹವೋ ಜೀವಾ ಯೋನೌ ಹಿಂಸ್ಯಂತೇ ಮೈಥುನೇ ತದ್ವತ್ ॥೧೦೮॥**

**ಅನ್ವಯಾರ್ಥ :-** **[ಯದ್ವತ್]** ಯಾವ ಪ್ರಕಾರ **[ತಿಲನಾಲ್ಯಾಂ]** ಎಳ್ಳಿನಿಂದ ತುಂಬಿ ಹೋದ ನಲಿಕೆಯಲ್ಲಿ **[ತಪ್ತಾಯಸಿ ವಿನಿಹಿತೇ]** ಕಾಯ್ದ ಕಬ್ಬಿಣದ ಶಲಾಕೆಯನ್ನು ಹಾಕುವುದರಿಂದ **[ಶಿಲಾಃ]** ಎಳ್ಳು **[ಹಿಂಸ್ಯಂತೇ]** ಸುಟ್ಟು ಹೋಗುತ್ತವೆ. **[ತದ್ವತ್]** ಅದೇ ಪ್ರಕಾರ **[ಮೈಥುನೇ]** ಮೈಥುನದ ಸಮಯದೊಳಗೆ **[ಯೋನೌ]** ಯೋನಿಯಲ್ಲಿ

ಕೂಡ **[ಬಹವೋ ಜೀವಾಃ]** ಬಹಳಷ್ಟು ಜೀವಗಳು **[ಹಿಂಸ್ಯಂತೇ]** ಸತ್ತು ಹೋಗುತ್ತವೆ.

**ಟೀಕೆ ಃ- 'ಯದ್ವತ್ ತಿಲನಾಲ್ಯಾಂ ತಪ್ತಾಯಸಿ ವಿನಿಹಿತೇ (ಸತಿ) ತಿಲಾಃ ಹಿಂಸ್ಯಂತೇ ತದ್ವತ್ ಯೋನೌ ಮೈಥುನೇ (ಕೃತೇಸತಿ) ಬಹವೋ ಜೀವಾಃ ಹಿಂಸ್ಯಂತೇ'-** ಯಾವ ಪ್ರಕಾರ ತಿಲದಿಂದ ತುಂಬಿಕೊಂಡಿರುವ ನಲಿಕೆಯಲ್ಲಿ ತೀರ ಕೆಂಪಾಗಿ ಕಾಯಿಸಿದ ಲೋಹದ ಶಲಾಕೆಯನ್ನು ಹಾಕಿ ಬಿಟ್ಟರೆ ಅದರಲ್ಲಿನ ಎಳ್ಳುಗಳೆಲ್ಲ ಹುರಿದು ಹೋಗುತ್ತವೆ. ಅದೇ ಪ್ರಕಾರ ಸ್ತ್ರೀಯ ಜನನಾಂಗದಲ್ಲಿ ಪುರುಷನ ಲಿಂಗದಿಂದ ಮೈಥುನ ಮಾಡಿದ ಮೇಲೆ ಯೋನಿಯಲ್ಲಿರುವ ಸಮಸ್ತ ಜೀವಗಳು ಕೂಡಲೇ ಮರಣಕ್ಕೆ ಪ್ರಾಪ್ತವಾಗುತ್ತವೆ. ಪ್ರಕಟರೂಪದಿಂದ ಇದುವೇ ದ್ರವ್ಯಹಿಂಸೆಯಿದೆ.

ಅನಂಗ ಕ್ರೀಡೆಯಲ್ಲಂತೂ ಹಿಂಸೆಯಾಗುವುದಿಲ್ಲವೆಂದು ಹೇಳುವವರಿಗೆ ಹೀಗೆ ಹೇಳುತ್ತಾರೆ, -

> ಯದಪಿ ಕ್ರಿಯತೇ ಕಿಂಚಿನ್ಮದನೋದ್ರೇಕಾದನಂಗರಮಣಾದಿ ।
> ತತ್ರಾಪಿ ಭವತಿ ಹಿಂಸಾ ರಾಗಾದ್ಯುತ್ಪತ್ತಿತಂತ್ರತ್ವಾತ್ ॥೧೦೯॥

**ಅನ್ವಯಾರ್ಥ ಃ-** ಮತ್ತು **[ಅಪಿ]** ಅದರ ನಂತರ **[ಮದನೋದ್ರೇಕಾತ್]** ಕಾಮದ ಉತ್ಕಟತೆಯಿಂದ **[ಯತ್ ಕಿಂಚಿತ್]** ಯಾವ ಕೊಂಚ **[ಅನಂಗ ರಮಣಾದಿ]** ಅನಂಗ ಕ್ರೀಡೆಯನ್ನು **[ಕ್ರಿಯತೇ]** ಮಾಡಲಾಗುತ್ತದೆ, **[ತತ್ರಾಪಿ]** ಅದರಲ್ಲಿ ಕೂಡ **[ರಾಗಾದ್ಯುತ್ಪತ್ತಿತಂತ್ರತ್ವಾತ್]** ರಾಗಾದಿಗಳ ಉತ್ಪತ್ತಿಯ ಕಾರಣವಾಗಿ **[ಹಿಂಸಾ]** ಹಿಂಸೆಯು **[ಭವತಿ]** ಆಗುತ್ತದೆ.

**ಟೀಕೆ ಃ- 'ಯತ್ ಅಪಿ ಮದನೋದ್ರೇಕಾತ್ ಅನಂಗರಮಣಾದಿ ಕಿಂಚಿತ್ ಕ್ರಿಯತೇ ತತ್ರಾಪಿ ಹಿಂಸಾ ಭವತಿ ರಾಗಾದ್ಯುತ್ಪತ್ತಿತಂತ್ರತ್ವಾತ್'-** ಯಾವ ಜೀವನು ತೀವ್ರ ಚಾರಿತ್ರಮೋಹ ಕರ್ಮದ ಉದಯದಿಂದ (ಉದಯದಲ್ಲಿ ಸಂಯುಕ್ತವಾಗುವುದರಿಂದ) ತೀವ್ರಕಾಮವಿಕಾರವಾಗುವ ಕಾರಣದಿಂದ ಅನಂಗ ಕ್ರೀಡೆಯನ್ನು (ಕಾಮ ಸೇವನೆ ಮಾಡುವ ಯೋಗ್ಯ ಅಂಗಗಳನ್ನು ಬಿಟ್ಟುಕೊಟ್ಟು ಬೇರೆ ಅಂಗಗಳ ಮೂಲಕ ಕ್ರೀಡೆಯನ್ನು) ಮಾಡುತ್ತಾನೆ ಅಲ್ಲಿ ಕೂಡ ಹಿಂಸೆಯು ಆಗುತ್ತದೆ. ಕಾರಣವೇನೆಂದರೆ ಹಿಂಸೆಯಾಗುವುದು ಅದು ರಾಗಾದಿಗಳ ಉತ್ಪತ್ತಿಯ ಆಧೀನವಿದೆ. ಒಂದು ವೇಳೆ ರಾಗಾದಿಗಳಾಗದಿದ್ದರೆ ಹಿಂಸೆಯೆಂದೂ ಆಗುವ ಸಾಧ್ಯತೆಯಿಲ್ಲ. ರಾಗವು ತೀವ್ರವಾಗದಿದ್ದರೆ ಕಾಮಕ್ರೀಡೆಯನ್ನೇಕೆ ಮಾಡುವನು ? ಇದರಿಂದ ಅನಂಗ ಕ್ರೀಡೆಯಲ್ಲಿ ಕೂಡ ಹಿಂಸೆಯಾಗುತ್ತದೆಯೆಂದು ಸಿದ್ಧವಾಯಿತು.

ಈಗ ಕುಶೀಲ ತ್ಯಾಗದ ಕ್ರಮವನ್ನು ಹೇಳುತ್ತಾರೆ, -

> ಯೇ ನಿಜಕಲತ್ರಮಾತ್ರಂ ಪರಿಹರ್ತುಂ ಶಕ್ನುವಂತಿ ನ ಹಿ ಮೋಹಾತ್ ।
> ನಿಃಶೇಷಶೇಷಯೋಷಿನ್ನಿಷೇವಣಂ ತೈರಪಿ ನ ಕಾರ್ಯಮ್ ॥೧೧೦॥

**ಅನ್ವಯಾರ್ಥ ಃ- [ಯೇ]** ಯಾವ ಜೀವರುಗಳು **[ಮೋಹಾತ್]** ಮೋಹದ ಕಾರಣದಿಂದ **[ನಿಜಕಲತ್ರ ಮಾತ್ರಂ]** ತಮ್ಮ ವಿವಾಹಿತ ಸ್ತ್ರೀಯನ್ನು ಕೂಡ **[ಪರಿಹರ್ತುಂ]** ಬಿಟ್ಟುಕೊಡುವಲ್ಲಿ **[ಹಿ]** ನಿಶ್ಚಯದಿಂದ **[ನ ಶಕ್ನುವಂತಿ]** ಸಮರ್ಥರಿಲ್ಲ **[ತೈಃ]** ಅವರು **[ನಿಃಶೇಷಶೇಷಯೋಷಿನ್ನಿಷೇವಣಂ ಅಪಿ]** ಉಳಿದ ಸಮಸ್ತ ಸ್ತ್ರೀಯರ ಸೇವನೆಯನ್ನಂತೂ ಎಂದೂ **[ನ ಕಾರ್ಯಮ್]** ಮಾಡಬಾರದು.

**ಟೀಕೆ ಃ- 'ಯೇ (ಜೀವಾಃ) ಹಿ ಮೋಹಾತ್ ನಿಜಕಲತ್ರಮಾತ್ರಂ ಪರಿಹರ್ತುಂ ಹಿ ನ ಶಕ್ನುವಂತಿ ತೈರಪಿ ನಿಃಶೇಷಶೇಷಯೋಷಿನ್ನಿಷೇವಣಂ ನ ಕಾರ್ಯಮ್' -** ಯಾವ ಜೀವರುಗಳು ಅಪ್ರತ್ಯಾಖ್ಯಾನಾವರಣ

ಚಾರಿತ್ರ ಮೋಹನೀಯದ ಉದಯದಿಂದ (ಉದಯವಶದಿಂದ) ತಮ್ಮ ವಿವಾಹಿತ ಸ್ತ್ರೀಯರನ್ನು ಬಿಟ್ಟುಕೊಡುವಲ್ಲಿ ಸಮರ್ಥರಿಲ್ಲ ಅವರು ಕೂಡ (ತಮ್ಮ ವಿವಾಹಿತ ಸ್ತ್ರೀಯರನ್ನು ಹೊರತುಪಡಿಸಿ) ಪ್ರಪಂಚದ ಅನ್ಯ ಸಮಸ್ತ ಸ್ತ್ರೀಯರ ಜತೆ ಕಾಮಸೇವನೆಯನ್ನು ಮಾಡಬಾರದು ಮತ್ತು ತಮ್ಮ ವಿವಾಹಿತ ಸ್ತ್ರೀಯರಲ್ಲಿಯೇ ಸಂತುಷ್ಟರಾಗಿರಬೇಕು. ಇದು ಏಕದೇಶ ಬ್ರಹ್ಮಚರ್ಯವ್ರತವಿದೆ. ಸರ್ವಥಾ ತ್ಯಾಗವಂತೂ ಮುನಿಧರ್ಮದಲ್ಲಿದೆ. ಸ್ತ್ರೀ ಮಾತ್ರರ ಜತೆ ಕಾಮಸೇವನೆ ಮಾಡುವುದರ ತ್ಯಾಗ ಮಾಡುವುದು ಮಹಾವ್ರತವಿದೆ.

ಈಗ ಪರಿಗ್ರಹ ಪಾಪದ ಸ್ವರೂಪ ಹೇಳುತ್ತಾರೆ, -

**ಯಾ ಮೂರ್ಚ್ಛಾ ನಾಮೇಯಂ ವಿಜ್ಞಾತವ್ಯಃ ಪರಿಗ್ರಹೋ ಹ್ಯೇಷಃ ।**
**ಮೋಹೋದಯಾದುದೀರ್ಣೋ ಮೂರ್ಚ್ಛಾ ತು ಮಮತ್ವಪರಿಣಾಮಃ ॥೧೧೧॥**

**ಅನ್ವಯಾರ್ಥ ಃ- [ಇಯಂ]** ಈ **(ಯಾ]** ಯಾವ **[ಮೂರ್ಚ್ಛಾನಾಮ]** ಮೂರ್ಚ್ಛೆಯಿದೆ, **[ಏಷಃ]** ಇದನ್ನೇ **[ಹಿ]** ನಿಶ್ಚಯದಿಂದ **[ಪರಿಗ್ರಹಃ]** ಪರಿಗ್ರಹವೆಂದು **[ವಿಜ್ಞಾತವ್ಯಃ]** ತಿಳಿಯಬೇಕಾಗುವುದು. **[ತು]** ಮತ್ತು **[ಮೋಹೋದಯಾತ್]** ಮೋಹದ ಉದಯದಿಂದ **[ಉದೀರ್ಣಃ]** ಉತ್ಪನ್ನವಾದ **[ಮಮತ್ವ ಪರಿಣಾಮಃ]** ಮಮತೆಯರೂಪದ ಪರಿಣಾಮವೇ **[ಮೂರ್ಚ್ಛಾ]** ಮೂರ್ಚ್ಛೆಯಿದೆ.

**ಟೀಕೆ ಃ- 'ಯಾ ಇಯಂ ಮೂರ್ಚ್ಛಾ ನಾಮ ಹಿ ಏಷಃ ಪರಿಗ್ರಹಃ ವಿಜ್ಞಾತವ್ಯಃ ತು (ಪುನಃ) ಮೋಹೋದಯಾತ್ ಉದೀರ್ಣಃ ಮಮತ್ವಪರಿಣಾಮ ಮೂರ್ಚ್ಛಾ (ಅಸ್ತಿ)'** - ಎಲೈ ಭವ್ಯ ಜೀವರುಗಳೇ ! ಈ ಮೂರ್ಚ್ಛೆಯನ್ನೇ ನಿಶ್ಚಯದಿಂದ ಪರಿಗ್ರಹವೆಂದು ತಿಳಿಯಿರಿ. ಚಾರಿತ್ರಮೋಹನೀಯ ಕರ್ಮದ ಉದಯದಿಂದ ಉದಯಕ್ಕೆ ಪ್ರಾಪ್ತವಾದ ಯಾವ ಮಮತ್ವ ಪರಿಣಾಮವಿದೆ ಎಂದರೆ ಇದು ನನ್ನದಿದೆಯೆಂಬ ಯಾವ ಪರಿಣಾಮವಿದೆ ಅದುವೇ ಮೂರ್ಚ್ಛೆಯಿದೆ.

ಮಮತೆಯ ಪರಿಣಾಮವೇ ವಾಸ್ತವಿಕ ಪರಿಗ್ರಹವಿದೆಯೆಂಬ ಮಾತನ್ನು ಈಗ ದೃಢ ಮಾಡುತ್ತಾರೆ, -

**ಮೂರ್ಚ್ಛಾಲಕ್ಷಣಕರಣಾತ್ ಸುಘಟಾ ವ್ಯಾಪ್ತಿಃ ಪರಿಗ್ರಹತ್ವಸ್ಯ ।**
**ಸಗ್ರಂಥೋ ಮೂರ್ಚ್ಛಾವಾನ್ ವಿನಾಪಿ ಕಿಲ ಶೇಷಸಂಗೇಭ್ಯಃ ॥೧೧೨॥**

**ಅನ್ವಯಾರ್ಥ ಃ- [ಪರಿಗ್ರಹತ್ವಸ್ಯ]** ಪರಿಗ್ರಹತನದ **[ಮೂರ್ಚ್ಛಾಲಕ್ಷಣಕರಣಾತ್]** ಲಕ್ಷಣವು ಮೂರ್ಚ್ಛೆಯೆಂದು ಹೇಳುವುದರಿಂದ **[ವ್ಯಾಪ್ತಿಃ]** ವ್ಯಾಪ್ತಿಯು **[ಸುಘಟಾ]** ಒಳ್ಳೆಯ ರೀತಿಯಿಂದ ಸಂಭವಿಸುತ್ತದೆ. ಏಕೆಂದರೆ **[ಶೇಷಸಂಗೇಭ್ಯಃ ವಿನಾ ಅಪಿ]** ಅನ್ಯ ಪರಿಗ್ರಹವಿಲ್ಲದೆಯೂ ಕೂಡ **[ಮೂರ್ಚ್ಛಾವಾನ್]** ಮೂರ್ಚ್ಛೆ ಮಾಡುವಂಥ ಮನುಷ್ಯನು **[ಕಿಲ]** ನಿಶ್ಚಯದಿಂದ **[ಸಗ್ರಂಥಃ]** ಬಾಹ್ಯ ಪರಿಗ್ರಹಸಹಿತನಿದ್ದಾನೆ.

**ಟೀಕೆ ಃ- 'ಪರಿಗ್ರಹತ್ವಸ್ಯ ಮೂರ್ಚ್ಛಾಲಕ್ಷಣಕರಣಾತ್ ವ್ಯಾಪ್ತಿಃ ಸುಘಟಾ ಯತಃ ಕಿಲ ಶೇಷಸಂಗೇಭ್ಯಃ ವಿನಾ ಅಪಿ ಮೂರ್ಚ್ಛಾವಾನ್ ಸಗ್ರಂಥಃ ಭವತಿ'** - ಪರಿಗ್ರಹದ ಲಕ್ಷಣವನ್ನು ಮೂರ್ಚ್ಛೆಯೆಂದು ಮಾಡಿರುವಲ್ಲಿ ವ್ಯಾಪ್ತಿಯು ಒಳ್ಳೆಯ ರೀತಿಯಿಂದ ಸಂಭವಿಸುತ್ತದೆ. ಏಕೆಂದರೆ ಧನ, ಧಾನ್ಯ ಮೊದಲಾದ ಬಾಹ್ಯ ಪರಿಗ್ರಹವಿಲ್ಲದೆಯೂ ಕೂಡ ಮಮತೆಯ ಪರಿಣಾಮವಿರುವಂಥ ಜೀವನು ಪರಿಗ್ರಹ ಸಹಿತನಿರುತ್ತಾನೆ.

**ಭಾವಾರ್ಥ ಃ-** ಸಹವಾಸದ ನಿಯಮವನ್ನು ವ್ಯಾಪ್ತಿಯೆಂದು ಹೇಳುತ್ತಾರೆ ಎಂದರೆ ಎಲ್ಲಿ ಲಕ್ಷಣವಿದೆ, ಅಲ್ಲಿ ಲಕ್ಷ್ಯವೂ ಇರುವುದರ ಹೆಸರು ವ್ಯಾಪ್ತಿಯಿದೆ. ಆದುದರಿಂದ ಎಲ್ಲಿ ಎಲ್ಲಿ ಮೂರ್ಚ್ಛೆಯಿದೆ ಅಲ್ಲಿ ಅಲ್ಲಿ ಪರಿಗ್ರಹವು

ಅವಶ್ಯವಾಗಿ ಇದೆ, ಮತ್ತು ಎಲ್ಲಿ ಮೂರ್ಚ್ಛೆಯಿಲ್ಲ ಅಲ್ಲಿ ಪರಿಗ್ರಹವು ಕೂಡ ಇರುವುದಿಲ್ಲ. ಪರಿಗ್ರಹದಜತೆಯಲ್ಲಿ ಮೂರ್ಚ್ಛೆಯ ವ್ಯಾಪ್ತಿಯಿದೆ. ಓರ್ವ ಜೀವನು ನಗ್ನನಿದ್ದಾನೆ, ಬಾಹ್ಯ ಪರಿಗ್ರಹದಿಂದ ರಹಿತನಿದ್ದಾನೆ, ಆದರೆ ಒಂದು ವೇಳೆ ಅಂತರಂಗದಲ್ಲಿ ಮೂರ್ಚ್ಛೆ ಎಂದರೆ ಮಮತೆಯ ಪರಿಣಾಮವಿದ್ದರೆ ಅವನು ಪರಿಗ್ರಹವುಳ್ಳವನೇ ಇದ್ದಾನೆ, ಮತ್ತು ಒಂದು ಮಮತೆಯ ತ್ಯಾಗ ಮಾಡಿದ ದಿಗಂಬರ ಮುನಿಗೆ ಪಿಂಛೀ, ಕಮಂಡಲುರೂಪದ ಬಾಹ್ಯ ಪರಿಗ್ರಹವಿದ್ದರೂ ಕೂಡ ಅಂತರಂಗದಲ್ಲಿ ಮಮತೆಯಿಲ್ಲದಿರುವುದರಿಂದ ಅವರು ವಾಸ್ತವಿಕವಾಗಿ ಪರಿಗ್ರಹದಿಂದ ರಹಿತರಾಗಿಯೇ ಇದ್ದಾರೆ.

ಈಗ ಶಂಕಾಕಾರನ ಸಂದೇಹ ಮತ್ತು ಅದರ ಉತ್ತರ ಹೇಳುತ್ತಾರೆ, -

**ಯದ್ಯೇವಂ ಭವತಿ ತದಾ ಪರಿಗ್ರಹೋ ನ ಖಲು ಕೋऽಪಿ ಬಹಿರಂಗಃ ।**
**ಭವತಿ ನಿತರಾಂ ಯತೋऽಸೌಧತ್ತೇ ಮೂರ್ಚ್ಛಾನಿಮಿತ್ತತ್ವಮ್ ॥೧೧೩॥**

**ಅನ್ವಯಾರ್ಥ :- [ಯದಿ]** ಒಂದು ವೇಳೆ **[ಏವಂ ತದಾ]** ಹೀಗಿದ್ದರೆ ಎಂದರೆ ಮೂರ್ಚ್ಛೆಯೇ ಪರಿಗ್ರಹವಿದ್ದರೆ **[ಖಲು]** ನಿಶ್ಚಯದಿಂದ **[ಬಹಿರಂಗ ಪರಿಗ್ರಹಃ]** ಬಾಹ್ಯ ಪರಿಗ್ರಹವು **[ಕಃ ಅಪಿ]** ಸ್ವಲ್ಪವೂ ಸಿದ್ಧವಾಗುವುದಿಲ್ಲವೆಂದರೆ ಹೀಗೆ ಇಲ್ಲ **[ಯತಃ]** ಏಕೆಂದರೆ **[ಅಸೌ]** ಈ ಬಾಹ್ಯ ಪರಿಗ್ರಹವು **[ಮೂರ್ಚ್ಛಾ ನಿಮಿತ್ತತ್ವಮ್]** ಮೂರ್ಚ್ಛೆಯ ನಿಮಿತ್ತತನವನ್ನು **[ನಿತರಾಂ]** ಅತಿಶಯ ರೂಪದಿಂದ **[ಧತ್ತೇ]** ಧಾರಣ ಮಾಡುತ್ತದೆ.

**ಟೀಕೆ :- ಪ್ರಶ್ನೆ - 'ಖಲು ಯದಿ ಏವಂ ಭವತಿ ತದಾ ಬಹಿರಂಗಃ ಕೋऽಪಿ ಪರಿಗ್ರಹಃ ನ (ಸ್ಯಾತ್) ಉತ್ತರ - ಯಃ ಅಸೌ (ಬಹಿರಂಗ) ನಿತರಾಂ ಮೂರ್ಚ್ಛಾನಿಮಿತ್ತತ್ವ ಧತ್ತೇ' -** ಪ್ರಶ್ನೆ - ಒಂದು ವೇಳೆ ನಿಶ್ಚಯದಿಂದ ಮೂರ್ಚ್ಛೆಯ ಹೆಸರೇ ಪರಿಗ್ರಹವಿದ್ದರೆ ಮತ್ತೆ ಧನ, ಧಾನ್ಯ ಮೊದಲಾದ ಬಾಹ್ಯ ವಸ್ತುಗಳು ಪರಿಗ್ರಹವೆಂದು ಸಿದ್ಧವಾಗುವುದಿಲ್ಲ. ಇವನ್ನು ಪರಿಗ್ರಹವೆಂದು ಏತಕ್ಕಾಗಿ ಹೇಳುತ್ತಿರುವಿರಿ ? ಉತ್ತರ - ಈ ಧನ, ಧಾನ್ಯ ಮೊದಲಾದವುಗಳಂತೂ ಅತ್ಯಂತ ರೂಪದಿಂದ ಪರಿಗ್ರಹವಿದೆ ಏಕೆಂದರೆ ಬಾಹ್ಯ ವಸ್ತುಗಳೇ ಮೂರ್ಚ್ಛೆಯ ಕಾರಣವಿವೆ.

**ಭಾವಾರ್ಥ :-** ಪರಿಗ್ರಹದ ಲಕ್ಷಣವಂತೂ ಮೂರ್ಚ್ಛೆಯೇ ಇದೆ. ಆದರೆ ಬಾಹ್ಯದ ಧನ, ಧಾನ್ಯ ಮೊದಲಾದ ವಸ್ತುಗಳು ಮೂರ್ಛೆಯನ್ನುತ್ಪನ್ನ ಮಾಡುವ ಸಲುವಾಗಿ (ನಿಮಿತ್ತ) ಕಾರಣಗಳಿವೆ, ಆದುದರಿಂದ ಅವನ್ನೇ ಪರಿಗ್ರಹವೆಂದು ಹೇಳಲಾಗುತ್ತದೆ.

ಈಗ ಶಂಕಾಕಾರನ ಸಂದೇಹ ಹೇಳುತ್ತಾರೆ, -

**ಏವಮತಿವ್ಯಾಪ್ತಿಃ ಸ್ಯಾತ್ಪರಿಗ್ರಹಸ್ಯೇತಿ ಚೇದ್ಭವೇನ್ನೈವಮ್ ।**
**ಯಸ್ಮಾದಕಷಾಯಾಣಾಂ ಕರ್ಮಗ್ರಹಣೇ ನ ಮೂರ್ಚ್ಛಾಸ್ತಿ ॥೧೧೪॥**

**ಅನ್ವಯಾರ್ಥ :- [ಏವಂ]** ಈ ಪ್ರಕಾರ **[ಪರಿಗ್ರಹಸ್ಯ]** ಬಾಹ್ಯ ಪರಿಗ್ರಹದ **[ಅತಿವ್ಯಾಪ್ತಿಃ ಸ್ಯಾತ್]** ಅತಿವ್ಯಾಪ್ತಿಯಾಗುತ್ತದೆ. **[ಇತಿಚೇತ್]** ಎಂದು ಒಂದು ವೇಳೆ ಹೇಳುತ್ತಿದ್ದರೆ **[ಏವಂ ನ ಭವತಿ]** ಹೀಗೆ ಆಗುವುದಿಲ್ಲ. **[ಯಸ್ಮಾತ್]** ಕಾರಣವೇನೆಂದರೆ **[ಅಕಷಾಯಾಣಾಂ]** ಕಷಾಯರಹಿತರಿಗೆ ಎಂದರೆ ವೀತರಾಗೀ ಪುರುಷರಿಗೆ **[ಕರ್ಮಗ್ರಹಣೇ]** ಕಾರ್ಮಾಣವರ್ಗಣಾದ ಗ್ರಹಣದಲ್ಲಿ **[ಮೂರ್ಚ್ಛಾ]** ಮೂಚ್ಛೆ ಯು **[ನಾಸ್ತಿ]** ಇರುವುದಿಲ್ಲ.

**ಟೀಕೆ :- 'ಏವಂ ಪರಿಗ್ರಹಸ್ಯ ಅತಿವ್ಯಾಪ್ತಿಃ ಸ್ಯಾತ್ ಇತಿ ಚೇತ್ ನ ಏವಂ ಭವೇತ್ ಯಸ್ಮಾತ್ ಅಕಷಾಯಾಣಾಂ ಕರ್ಮಗ್ರಹಣೇ ಮೂರ್ಚ್ಛಾ ನಾಸ್ತಿ' -** ಆ ಪರಿಗ್ರಹವನ್ನು ಮೂರ್ಚ್ಛೆಯನ್ನುತ್ಪನ್ನ ಮಾಡುವ

ನಿಶ್ಚಯ ಕಾರಣವೆಂದು ಹೇಳುತ್ತಿದ್ದರೆ (ಮೂರ್ಚ್ಛಾ ಪರಿಗ್ರಹಃ) ಈ ಲಕ್ಷಣದಲ್ಲಿ ಅತಿವ್ಯಾಪ್ತಿಯ ದೋಷವು ಬರುತ್ತದೆ, ಏಕೆಂದರೆ ಅರಹಂತ ಅವಸ್ಥೆಯಲ್ಲಿ ಕೂಡ ಕಾರ್ಮಣವರ್ಗಣಾ ಮತ್ತು ನೋಕರ್ಮವರ್ಗಣಾ ಇವೆರಡರ ಗ್ರಹಣರೂಪದ ಪರಿಗ್ರಹವಿದೆ ಅಲ್ಲಿ ಕೂಡ ಮೂರ್ಚ್ಛೆಯಾಗಬಹುದು. ಅದರಿಂದ ಹಾಗೆ ಇಲ್ಲ, ಕಾರಣವೇನೆಂದರೆ ಕಷಾಯರಹಿತ ಜೀವರುಗಳಿಗೆ ಕರ್ಮ-ನೋಕರ್ಮದ ಗ್ರಹಣವಿದ್ದರು ಕೂಡ ಮೂರ್ಚ್ಛೆಯು ಎಂದರೆ ಮಮತೆಯ ಪರಿಣಾಮಗಳಿರುವುದಿಲ್ಲ.

**ಭಾವಾರ್ಥ :-** ನಿಷ್ಪರಿಗ್ರಹಿಯಾದ ವೀತರಾಗೀ ಮಹಾಪುರುಷರಿಗೆ ಮೂರ್ಚ್ಛೆಯಿದ್ದಾಗಲೇ ಅತಿವ್ಯಾಪ್ತಿಯಾಗುವುದು. ಆದರೆ ಅದಂತೂ ಅವರಿಗೆ ಇರುವುದೇ ಇಲ್ಲ, ಆದುದರಿಂದ ವೀತರಾಗೀ ಅರಹಂತ ಭಗವಂತರಿಗೆ ಕರ್ಮ-ನೋಕರ್ಮದ ಗ್ರಹಣವಿದ್ದರೂ ಕೂಡ ಮೂರ್ಚ್ಛೆಯ ಅಭಾವದಿಂದ ಪರಿಗ್ರಹವೆಂದು ಹೇಳಲಾಗುವುದಿಲ್ಲ, ಆದುದರಿಂದ ಅತಿವ್ಯಾಪ್ತಿಯ ದೋಷವಿಲ್ಲ. ಬಾಹ್ಯ ವಸ್ತುವು ಮೂರ್ಚ್ಛೆಯನ್ನುತ್ಪನ್ನ ಮಾಡುವಲ್ಲಿ ಕೇವಲ ಕಾರಣವಿರುವುದರಿಂದ ಅದನ್ನು ಉಪಚಾರದಿಂದ ಪರಿಗ್ರಹವೆಂದು ಹೇಳಲಾಗಿದೆ. ಪರಮಾರ್ಥದಿಂದಂತೂ ಪರಿಗ್ರಹದ ಲಕ್ಷಣವು ಮೂರ್ಚ್ಛೆಯೇ ಇದೆ.

ಈಗ ಪರಿಗ್ರಹದ ಭೇದ ಹೇಳುತ್ತಾರೆ, -

**ಅತಿಸಂಕ್ಷೇಪಾದ್ ದ್ವಿವಿಧಃ ಸ ಭವೇದಾಭ್ಯಂತರಶ್ಚ ಬಾಹ್ಯಶ್ಚ ।**
**ಪ್ರಥಮಶ್ಚತುರ್ದಶವಿಧೋ ಭವತಿ ದ್ವಿವಿಧೋ ದ್ವಿತೀಯಸ್ತು ॥೧೧೫॥**

**ಅನ್ವಯಾರ್ಥ :- [ಸ]** ಆ ಪರಿಗ್ರಹವು **[ಅತಿಸಂಕ್ಷೇಪಾತ್]** ಅತ್ಯಂತ ಸಂಕ್ಷೇಪದಿಂದ **[ಅಭ್ಯಂತರಃ]** ಅಭ್ಯಂತರ **[ಚ]** ಮತ್ತು **[ಬಾಹ್ಯಃ]** ಬಹಿರಂಗವೆಂದು **[ದ್ವಿವಿಧಃ ಭವೇತ್]** ಎರಡು ಪ್ರಕಾರದ್ದಿದೆ **[ಚ]** ಮತ್ತು **[ಪ್ರಥಮಃ]** ಮೊದಲನೆಯ ಅಂತರಂಗ ಪರಿಗ್ರಹವು **[ಚತುರ್ದಶವಿಧಃ]** ಹದಿನಾಲ್ಕು ಪ್ರಕಾರದ್ದಿದೆ **[ತು]** ಹಾಗೂ **[ದ್ವಿತೀಯಃ]** ಎರಡನೆಯ ಬಹಿರಂಗ ಪರಿಗ್ರಹವು **[ದ್ವಿವಿಧಃ ಭವತಿ]** ಎರಡು ಪ್ರಕಾರದ್ದಿದೆ.

**ಟೀಕೆ :- 'ಸ (ಪರಿಗ್ರಹಃ) ಅತಿ ಸಂಕ್ಷೇಪಾತ್ ದ್ವಿವಿಧಃ ಅಭ್ಯಂತರಃ ಬಾಹ್ಯಶ್ಚ ಪ್ರಥಮಃ (ಅಭ್ಯಂತರಃ) ಚತುರ್ದಶವಿಧಃ ಭವತಿ ದ್ವಿತೀಯಸ್ತು ದ್ವಿವಿಧಃ ಭವತಿ'** - ಆ ಪರಿಗ್ರಹವು ಸಂಕ್ಷೇಪದಲ್ಲಿ ಎರಡು ಪ್ರಕಾರದ್ದಿದೆ. ಅದರಲ್ಲಿ ಮೊದಲನೆಯದು ಅಭ್ಯಂತರವಿದ್ದರೆ ಎರಡನೆಯದು ಬಾಹ್ಯವಿದೆ. ಆತ್ಮನ ಅಂತರಂಗ ಪರಿಣಾಮವನ್ನು ಅಭ್ಯಂತರ ಪರಿಗ್ರಹವೆಂದು ಹೇಳುತ್ತಾರೆ ಮತ್ತು ಬಾಹ್ಯದಲ್ಲಿರುವ ಸಮಸ್ತ ಪದಾರ್ಥಗಳನ್ನು ಬಾಹ್ಯ ಪರಿಗ್ರಹವೆಂದು ಹೇಳುತ್ತಾರೆ. ಮೊದಲನೆಯ ಪರಿಗ್ರಹವು ಹದಿನಾಲ್ಕು ಪ್ರಕಾರದ್ದಿದೆ ಮತ್ತು ಎರಡನೆಯ ಬಾಹ್ಯ ಪರಿಗ್ರಹವು ಎರಡು ಪ್ರಕಾರದ್ದಿದೆ.

ಈಗ ಅಭ್ಯಂತರ ಪರಿಗ್ರಹದ ಹದಿನಾಲ್ಕು ಭೇದಗಳನ್ನು ಹೇಳುತ್ತಾರೆ, -

**ಮಿಥ್ಯಾತ್ವವೇದರಾಗಾಸ್ತಥೈವ ಹಾಸ್ಯಾದಯಶ್ಚ ಷಡ್ ದೋಷಾಃ ।**
**ಚತ್ವಾರಶ್ಚ ಕಷಾಯಾಶ್ಚ ಚತುರ್ದಶಾಭ್ಯಂತರಾ ಗ್ರಂಥಾಃ ॥೧೧೬॥**

**ಅನ್ವಯಾರ್ಥ :- [ಮಿಥ್ಯಾತ್ವವೇದರಾಗಾಃ]** ಮಿಥ್ಯಾತ್ವ, ಸ್ತ್ರೀ, ಪುರುಷ ಮತ್ತು ನಪುಂಸಕ ವೇದದ ರಾಗ **[ತಥೈವ ಚ]** ಇದೇ ಪ್ರಕಾರ **[ಹಾಸ್ಯಾದಯಃ]** ಹಾಸ್ಯ ಮೊದಲಾದ ಎಂದರೆ ಹಾಸ್ಯ, ರತಿ, ಅರತಿ, ಶೋಕ, ಭಯ, ಜುಗುಪ್ಸೆಯೆಂಬ ಈ **[ಷಡ್‌ದೋಷಾಃ]** ಆರು ದೋಷಗಳು **[ಚ]** ಮತ್ತು **[ಚತ್ವಾರಃ]** ನಾಲ್ಕು ಎಂದರೆ ಕ್ರೋಧ,

ಮಾನ, ಮಾಯೆ, ಲೋಭ ಅಥವಾ ಅನಂತಾನುಬಂಧೀ, ಅಪ್ರತ್ಯಾಖ್ಯಾನಾವರಣ, ಪ್ರತ್ಯಾಖ್ಯಾನಾವರಣ ಮತ್ತು ಸಂಜ್ವಲನ ಇವು ನಾಲ್ಕು **[ಕಷಾಯಾಃ]** ಕಷಾಯಭಾವವೆಂದು **[ಅಭ್ಯಂತರಾಃ ಗ್ರಂಥಾಃ]** ಅಂತರಂಗ ಪರಿಗ್ರಹಗಳು **[ಚತುರ್ದಶ]** ಹದಿನಾಲ್ಕು ಇವೆ.

**ಟೀಕೆ ಃ- 'ಅಭ್ಯಂತರಾಃ ಗ್ರಂಥಾಃ ಮಿಥ್ಯಾತ್ವವೇದರಾಗಾಃ ತಥೈವ ಹಾಸ್ಯಾದಯಃ ಷಟ್ ದೋಷಾಃ ಚ ಚತ್ವಾರಃ ಕಷಾಯಾಃ ಚತುರ್ದಶ (ಭವಂತಿ)'** - ಹದಿನಾಲ್ಕು ಪ್ರಕಾರದ ಅಭ್ಯಂತರ ಪರಿಗ್ರಹಗಳಿವೆ. ಮಿಥ್ಯಾತ್ವ (ತತ್ತ್ವಾರ್ಥದ ಅಶ್ರದ್ಧೆಯರೂಪದ ಮಿಥ್ಯಾತ್ವಭಾವ), ೨) ಪುರುಷವೇದ (ಸ್ತ್ರೀ ಅಭಿಲಾಷೆಯರೂಪದ ಪರಿಣಾಮ), ೩) ಸ್ತ್ರೀವೇದ (ಪುರುಷನ ಅಭಿಲಾಷೆಯ ರೂಪದ ಪರಿಣಾಮ), ೪) ನಪುಂಸಕವೇದ (ಸ್ತ್ರೀ-ಪುರುಷರೀರ್ವರ ಅಭಿಲಾಷೆಯ ರೂಪದ ಪರಿಣಾಮ), ೫)ಹಾಸ್ಯ, ೬)ರತಿ, ೭) ಅರತಿ, ೮) ಶೋಕ, ೯) ಭಯ, ೧೦) ಜುಗುಪ್ಸೆ, ೧೧) ಕ್ರೋಧ, ೧೨) ಮಾನ, ೧೩) ಮಾಯೆ, ಮತ್ತು ೧೪) ಲೋಭವೆಂದು ಇವು ಹದಿನಾಲ್ಕು ಅಭ್ಯಂತರ ಪರಿಗ್ರಹಗಳಿವೆ.

ಈಗ ಬಾಹ್ಯ ಪರಿಗ್ರಹದ ಎರಡು ಭೇದ ಹೇಳಿ ಅವನ್ನು ಹಿಂಸಾಮಯವೆಂದು ತಿಳಿಸಿಕೊಡುತ್ತಾರೆ, -

ಅಥ ನಿಶ್ಚಿತ್ತ ಸಚಿತ್ತೌ ಬಾಹ್ಯಸ್ಯ ಪರಿಗ್ರಹಸ್ಯ ಭೇದೌ ದ್ವೌ ।
ನೈಷಃ ಕದಾಪಿ ಸಂಗಃ ಸರ್ವೋಽಪ್ಯತಿವರ್ತತೇ ಹಿಂಸಾಮ್ ॥೧೧೭॥

**ಅನ್ವಯಾರ್ಥ ಃ- [ಅಥ]** ಇದರ ನಂತರ **[ಬಾಹ್ಯಸ್ಯ]** ಬಹಿರಂಗ **[ಪರಿಗ್ರಹಸ್ಯ]** ಪರಿಗ್ರಹದಲ್ಲಿ **[ನಿಶ್ಚಿತ್ತ ಸಚಿತ್ತೌ)** ಅಚಿತ್ತ ಮತ್ತು ಸಚಿತ್ತವೆಂದು **[ದ್ವೌ ]** ಎರಡು **[ಭೇದೌ]** ಭೇದಗಳಿವೆ. **[ಏಷಃ]** ಈ **[ಸರ್ವಃ ಅಪಿ]** ಎಲ್ಲ **[ಸಂಗ]** ಪರಿಗ್ರಹಗಳು **[ಕದಾಪಿ]** ಯಾವುದೇ ಸಮಯದಲ್ಲಿ **[ಹಿಂಸಾಮ್]** ಹಿಂಸೆಯ **[ನ ಅತಿವರ್ತತೇ]** ಉಲ್ಲಂಘನೆ ಮಾಡುವುದಿಲ್ಲ ಎಂದರೆ ಯಾವುದೇ ಪರಿಗ್ರಹವು ಎಂದೂ ಹಿಂಸೆಯಿಂದ ರಹಿತವಾಗಿರುವುದಿಲ್ಲ.

**ಟೀಕೆ ಃ- 'ಅಥ ಬಾಹ್ಯಸ್ಯ ಪರಿಗ್ರಹಸ್ಯ ನಿಶ್ಚಿತ್ತ ಸಚಿತ್ತೌ ದ್ವೌ ಭೇದೌ (ಭವತಃ) ಏಷಃ ಸರ್ವೋಽಪಿ (ಪರಿಗ್ರಹಃ) ಸಂಗಃ ಹಿಂಸಾಮ್ ಕದಾಪಿ ನ ಅತಿವರ್ತತೇ'** - ಬಾಹ್ಯ ಪರಿಗ್ರಹವು ಅಚೇತನ ಮತ್ತು ಚೇತನದ ಭೇದದಿಂದ ಎರಡು ಪ್ರಕಾರದ್ದಿದೆ. ಚಿನ್ನ, ಬೆಳ್ಳಿ, ಮನೆ, ಬಟ್ಟೆ ಮೊದಲಾದ ಚೇತನರಹಿತ ಪದಾರ್ಥಗಳು ಅಚಿತ್ತವೆಂದು ಹಾಗೂ ಪುತ್ರ, ಕಲತ್ರ, ದಾಸ, ದಾಸೀ ಮೊದಲಾದ ಚೇತನಸಹಿತ ಪದಾರ್ಥಗಳು ಸಚಿತ್ತವೆಂದು ಕರೆಸಿಕೊಳ್ಳುತ್ತವೆ. ಇವೆರಡೂ ಪ್ರಕಾರದ ಪರಿಗ್ರಹಗಳು ಹಿಂಸೆಯ ಉಲ್ಲಂಘನೆ ಮಾಡುವುದಿಲ್ಲ ಎಂದರೆ ಯಾವುದೇ ಪರಿಗ್ರಹವು ಹಿಂಸಾರಹಿತವಾಗಿಲ್ಲ.

ಈಗ ಅಹಿಂಸೆಯ ಲಕ್ಷಣ ಹೇಳಿ ಇದೇ ಅರ್ಥವನ್ನು ದೃಢ ಮಾಡುತ್ತಾರೆ, -

ಉಭಯಪರಿಗ್ರಹವರ್ಜನಮಾಚಾರ್ಯಾಃ ಸೂಚಯಂತ್ಯಹಿಂಸೇತಿ ।
ದ್ವಿವಿಧಪರಿಗ್ರಹವಹನಂ ಹಿಂಸೇತಿ ಜಿನಪ್ರವಚನಜ್ಞಾಃ ॥೧೧೮॥

**ಅನ್ವಯಾರ್ಥ ಃ- [ಜಿನಪ್ರವಚನಜ್ಞಾಃ]** ಜೈನ ಸಿದ್ಧಾಂತದ ಜ್ಞಾತಾರಾದ **[ಆಚಾರ್ಯಾಃ]** ಆಚಾರ್ಯರು **[ಉಭಯಪರಿಗ್ರಹವರ್ಜನಂ]** ಎರಡೂ ಪ್ರಕಾರದ ಪರಿಗ್ರಹದ ತ್ಯಾಗವನ್ನು **[ಅಹಿಂಸಾ ಇತಿ]** ಅಹಿಂಸೆಯೆಂದು ಮತ್ತು **[ದ್ವಿವಿಧಪರಿಗ್ರಹವಹನಂ]** ಎರಡೂ ಪ್ರಕಾರದ ಪರಿಗ್ರಹದ ಧಾರಣ ಮಾಡುವುದನ್ನು **[ಹಿಂಸಾ ಇತಿ]** ಹಿಂಸೆಯೆಂದು **[ಸೂಚಯಂತಿ]** ಸೂಚಿತಗೊಳಿಸುತ್ತ ಹೇಳುತ್ತಾರೆ.

**ಟೀಕೆ :- 'ಜಿನಪ್ರವಚನಜ್ಞಾಃ ಆಚಾರ್ಯಃ ಉಭಯಪರಿಗ್ರಹವರ್ಜನಂ ಅಹಿಂಸಾ (ಭವತಿ) ಇತಿ ಸೂಚಯಂತಿ ತಥಾ ದ್ವಿವಿಧಪರಿಗ್ರಹವಹನಂ ಹಿಂಸಾ (ಭವತಿ) ಇತಿ ಸೂಚಯಂತಿ' -** ಜೈನ ಸಿದ್ಧಾಂತದ ಜ್ಞಾತರಾದ, ಆಚಾರ್ಯರು 'ಎರಡೂ ಪ್ರಕಾರದ ಅಂತರಂಗ ಮತ್ತು ಬಹಿರಂಗ ಪರಿಗ್ರಹದ ತ್ಯಾಗ ಮಾಡುವುದೇ ಅಹಿಂಸೆಯಿದೆ ಹಾಗೂ ಎರಡೂ ಪ್ರಕಾರದ ಪರಿಗ್ರಹವನ್ನು ಧಾರಣ ಮಾಡುವುದೇ ಹಿಂಸೆಯಿದೆ'ಯೆಂದು ಹೇಳುತ್ತಾರೆ, ಪರಿಗ್ರಹದ ತ್ಯಾಗವಿಲ್ಲದೆ ಅಹಿಂಸೆಯ ಸಿದ್ಧಿಯಿಲ್ಲ.

ಈಗ ಎರಡೂ ಪರಿಗ್ರಹಗಳಲ್ಲಿ ಹಿಂಸೆಯಿದೆಯೆಂದು ತಿಳಿಸಿಕೊಡುತ್ತಾರೆ, -

ಹಿಂಸಾಪರ್ಯಾಯತ್ವಾತ್ ಸಿದ್ಧಾ ಹಿಂಸಾಂತರಂಗಸಂಗೇಷು ।
ಬಹಿರಂಗೇಷು ತು ನಿಯತಂ ಪ್ರಯಾತು ಮೂರ್ಚ್ಛೈವ ಹಿಂಸಾತ್ವಮ್॥೧೧೯॥

**ಅನ್ವಯಾರ್ಥ :- [ಹಿಂಸಾಪರ್ಯಾಯತ್ವಾತ್]** ಹಿಂಸೆಯ ಪರ್ಯಾಯರೂಪವಿರುವುದರಿಂದ **[ಅಂತರಂಗಸಂಗೇಷು]** ಅಂತರಂಗ ಪರಿಗ್ರಹಗಳಲ್ಲಿ **[ಹಿಂಸಾ]** ಹಿಂಸೆಯು **[ಸಿದ್ಧಾ]** ಸ್ವಯಂಸಿದ್ಧವಿದೆ. **[ತು]** ಮತ್ತು **[ಬಹಿರಂಗೇಷು]** ಬಹಿರಂಗ ಪರಿಗ್ರಹಗಳಲ್ಲಿ **[ಮೂರ್ಛಾ ಏವ]** ಮಮತೆಯ ಪರಿಣಾಮವೇ **[ನಿಯತಮ್]** ನಿಶ್ಚಯದಿಂದ **[ಹಿಂಸಾತ್ವಮ್]** ಹಿಂಸೆಯ ಭಾವಕ್ಕೆ **[ಪ್ರಯಾತು]** ಪ್ರಾಪ್ತವಾಗುತ್ತದೆ.

**ಟೀಕೆ :- 'ಅಂತರಂಗಸಂಗೇಷು ಹಿಂಸಾಪರ್ಯಾಯತ್ವಾತ್ ಹಿಂಸಾ ಸಿದ್ಧಾ ತು (ಪುನಃ) ಬಹಿರಂಗೇಷು ನಿಯತಂ ಮೂರ್ಚ್ಛೈವ ಹಿಂಸಾತ್ವಂ ಪ್ರಯಾತು' -** ಹದಿನಾಲ್ಕು ಪ್ರಕಾರದ ಅಂತರಂಗ ಪರಿಗ್ರಹದ ಭೇದಗಳೆಲ್ಲವೂ ಹಿಂಸೆಯ ಪರ್ಯಾಯಗಳಿರುವುದರಿಂದ ಹಿಂಸೆಯು ಸಿದ್ಧವೇ ಇದೆ. ಬಹಿರಂಗ ಪರಿಗ್ರಹದಲ್ಲಿ ನಿಶ್ಚಯದಿಂದ ಮಮತೆಯ ಪರಿಣಾಮವಿದ್ದು ಅದು ಹಿಂಸೆಗೆ ಪ್ರಾಪ್ತವಾಗುತ್ತದೆ.

**ಭಾವಾರ್ಥ :-** ಅಂತರಂಗ ಪರಿಗ್ರಹವು ಮಿಥ್ಯಾತ್ವ ಮೊದಲಾಗಿ ಹದಿನಾಲ್ಕು ಪ್ರಕಾರದ್ದಿದ್ದು ಅವೆಲ್ಲವೂ ಜೀವದ ವಿಭಾವ (ವಿಕಾರೀ) ಪರಿಣಾಮಗಳಿರುವುದರಿಂದ ಅದು ಹಿಂಸೆಯೇ ಇದೆ, ಆದರೆ ಬಾಹ್ಯ ವಸ್ತುಗಳಲ್ಲಿ ಕೂಡ ನಿಶ್ಚಯದಿಂದ ಮಮತೆಯ ಪರಿಣಾಮವಿರುವುದೇ ಹಿಂಸೆಯ ಕಾರಣವಿದೆ. ಬಾಹ್ಯ ವಸ್ತುವಿನಲ್ಲಿರುವ ಮಮತೆಯ ಪರಿಣಾಮದ ಹೆಸರೇ ಪರಿಗ್ರಹವಿದೆ. ಕೇವಲೀ ಭಗವಂತರಿಗೆ ಸಮವಸರಣ ಮೊದಲಾದ ವಿಭೂತಿಯಿದ್ದರೂ ಅದರಲ್ಲಿ ಮಮತೆಯ ಪರಿಣಾಮವಿಲ್ಲದಿರುವುದರಿಂದ ಅದು ಪರಿಗ್ರಹವಲ್ಲ. ಅಥವಾ ಯಾವನೋ ಓರ್ವನು ಪರಿಗ್ರಹವನ್ನು ಅಂಗೀಕಾರ ಮಾಡಿ ನನಗಂತೂ ಮಮತೆಯ ಪರಿಣಾಮವಿಲ್ಲವೆಂದು ಹೇಳಿದರೆ ಆ ಮಾತಂತೂ ಅಸತ್ಯವಿದೆ. ಕಾರಣವೇನೆಂದರೆ ಮಮತೆಯಿಲ್ಲದೆ ಅಂಗೀಕಾರವು ಆಗುವುದೇ ಇಲ್ಲ.

ಒಂದು ವೇಳೆ ಬಹಿರಂಗ ಪದಾರ್ಥದಲ್ಲಿ ಮಮತೆಯ ಪರಿಣಾಮವಿರುವುದೇ ಪರಿಗ್ರಹವಿದ್ದರೆ ಎಲ್ಲರಲ್ಲಿ ಸಮಾನರೂಪದಿಂದಲೇ ಪರಿಗ್ರಹಜನ್ಯ ಪಾಪಬಂಧವಾಗಬೇಕಾಗುವುದೆಂಬ ಪ್ರಶ್ನೆಗೆ ಈಗ ಉತ್ತರ ಹೇಳುತ್ತಾರೆ, -

ಏವಂ ನ ವಿಶೇಷಃ ಸ್ಯಾದುಂದುರುರಿಪುಹರಿಣಶಾವಕಾದೀನಾಮ್ ।
ನೈವಂ ಭವತಿ ವಿಶೇಷಸ್ತೇಷಾಂ ಮೂರ್ಛಾವಿಶೇಷೇಣ ॥೧೨೦॥

**ಅನ್ವಯಾರ್ಥ :- [ಏವಂ]** ಒಂದು ವೇಳೆ ಹೀಗಿದ್ದರೆ ಎಂದರೆ ಬಹಿರಂಗ ಪರಿಗ್ರಹದಲ್ಲಿರುವ ಮಮತೆಯ ಪರಿಣಾಮದ ಹೆಸರೇ ಮೂರ್ಚ್ಛೆಯಿದ್ದರೆ **[ಉಂದುರುರಿಪುಹರಿಣಶಾವಕಾದೀನಾಮ್]** ಬೆಕ್ಕು ಮತ್ತು ಜಿಂಕೆಯ ಮರಿ ಮೊದಲಾದುವಲ್ಲಿ **[ವಿಶೇಷಃ ನ ಸ್ಯಾತ್]** ಯಾವ ವಿಶೇಷತೆ ಉಳಿಯುವುದಿಲ್ಲ, ಆದರೆ **[ಏವಂ ನ ಭವತಿ]** ಹೀಗೆ ಇರುವುದಿಲ್ಲ. ಏಕೆಂದರೆ **[ಮೂರ್ಛಾವಿಶೇಷೇಣ]** ಮಮತೆಯ ಪರಿಣಾಮದ ವಿಶೇಷತೆಯಿಂದ **[ತೇಷಾಂ]**

ಆ ಬೆಕ್ಕು ಮತ್ತು ಜಿಂಕೆಯ ಮರಿ ಇತ್ಯಾದಿ ಜೀವಗಳಲ್ಲಿ **[ವಿಶೇಷಃ]** ವಿಶೇಷತೆಯಿದೆ ಎಂದರೆ ಸಮಾನತೆಯಿಲ್ಲ.

**ಟೀಕೆ ಃ- ಪ್ರಶ್ನೆ - 'ಯದಿ ಏವಂ ತಹಿಂ ಉಂದುರುರಿಪು - ಹರಿಣಶಾವಕಾದೀನಾಮ್ ವಿಶೇಷಃ ನ'** - ಆ ಬಾಹ್ಯ ಪದಾರ್ಥಗಳಲ್ಲಿನ ಮಮತೆಯ ಪರಿಣಾಮವೇ ಹಿಂಸೆಯ ಕಾರಣವಿದೆ ಮತ್ತು ಆ ಮಮತೆಯ ಪರಿಣಾಮವು ಸಾಮಾನ್ಯ ರೀತಿಯಿಂದ ಸಮಸ್ತ ಜೀವಗಳಿಗಿರುವುದರಿಂದ ಸಮಸ್ತ ಜೀವಗಳಿಗೆ ಸಮಾನ ಪಾಪವಾಗಬೇಕಾಗುವುದು. ಯಾವ ಪ್ರಕಾರ ಮಾಂಸಾಹಾರಿಯಾದ ಬೆಕ್ಕು ಮತ್ತು ಹುಲ್ಲು ತಿನ್ನುವಂಥ ಜಿಂಕೆಯ ಮರಿಯಲ್ಲಿ ಭೋಜನ ಮಾಡುವ ಸಂಬಂಧದ ಮಮತೆಯ ಪರಿಣಾಮವು ಸಾಮಾನ್ಯ ರೂಪದಿಂದ ಸಮಾನವೇ ಇದೆ (ಬಹಿರಂಗದ ಯಾವ ಪ್ರಯೋಜನ ಹೇಳಿಲ್ಲ).

**ಉತ್ತರ ಃ- 'ಏವಂ ನ ಭವತಿ ತೇಷಾಂ ಮೂರ್ಚ್ಛಾವಿಶೇಷೇಣ ವಿಶೇಷಃ ಭವತಿ'** - ಮಾತು ನೀವು ಹೇಳಿದಂತೆ ವಾಸ್ತವದಲ್ಲಿ ಇಲ್ಲ. ಬೆಕ್ಕು ಮತ್ತು ಜಿಂಕೆಯ ಮರಿಗಳ ಸಂಬಂಧದಲ್ಲಿ ಕೂಡ ವಿಶೇಷತೆಯಿದೆ, ಸಮಾನತೆಯಿಲ್ಲ, ಏಕೆಂದರೆ ಬೆಕ್ಕಿಗಂತೂ ಮಾಂಸ ತಿನ್ನುವ ಪರಿಣಾಮವಿದೆ ಮತ್ತು ಜಿಂಕೆಯ ಮರಿಗೆ ಹುಲ್ಲು ತಿನ್ನುವ ಪರಿಣಾಮವಿದೆ. ಹೀಗೆ ಮಮತೆಯ ವಿಶೇಷತೆಯು ಎಂದರೆ ಅಧಿಕತೆಯಿಂದಲೇ ವಿಶೇಷತೆಯಿದೆಯೆಂದು ಆಚಾರ್ಯ ಭಗವಂತರು ಉತ್ತರರೂಪವಾಗಿ ಹೇಳುತ್ತಾರೆ.

ಈಗ ಮಮತ್ವ ಎಂದರೆ ಮೂರ್ಚ್ಛೆಯಲ್ಲಿನ ವಿಶೇಷತೆಯನ್ನು ಹೇಳುತ್ತಾರೆ, -

ಹರಿತತೃಣಾಂಕುರಚಾರಿಣಿಮಂದಾ ಮೃಗಶಾವಕೇ ಭವತಿ ಮೂರ್ಚ್ಛಾ ।
ಉಂದುರುನಿಕರೋನ್ಮಾಥಿನಿ ಮಾರ್ಜರೇ ಸೈವ ಜಾಯತೇ ತೀವ್ರಾ ॥೧೨೧॥

**ಅನ್ವಯಾರ್ಥ ಃ- [ಹರಿತತೃಣಾಂಕುರಚಾರಿಣಿ]** ಹಸಿರು ಹುಲ್ಲಿನ ಅಂಕುರ ತಿನ್ನುವಂಥ **[ಮೃಗಶಾವಕೇ]** ಜಿಂಕೆಯ ಮರಿಯಲ್ಲಿ **[ಮೂರ್ಚ್ಛಾ ಮಂದಾ]** ಮೂರ್ಚ್ಛೆಯು ಮಂದವಾಗಿ **[ಭವತಿ]** ಇರುತ್ತದೆ ಮತ್ತು **[ಸ ಏವ]** ಅದೇ ಮೂರ್ಚ್ಛೆಯು **[ಉಂದುರುನಿಕರೋನ್ಮಾಥಿನಿ]** ಇಲಿಗಳಸಮೂಹದ ಉನ್ಮಥನ ಮಾಡುವಂಥ **[ಮಾರ್ಜರೇ]** ಬೆಕ್ಕುಗಳಲ್ಲಿ **[ತೀವ್ರಾ ಜಾಯತೇ]** ತೀವ್ರವಾಗಿರುತ್ತದೆ.

**ಟೀಕೆ ಃ- 'ಹರಿತ ತೃಣಾಂಕುರಚಾರಿಣಿ ಮೃಗಶಾವಕೇ ಮಂದಾ ಮೂರ್ಚ್ಛಾ ಭವತಿ ತಥಾ ಸೈವ ಮೂರ್ಚ್ಛಾ ಉಂದುರುನಿಕರೋನ್ಮಾಥಿನಿ ಮಾರ್ಜರೇ ತೀವ್ರಾ ಜಾಯತೇ'** - ಹಸಿರು ಹುಲ್ಲಿನ ಅಂಕುರ ತಿನ್ನುವಂಥ ಜಿಂಕೆಯ ಮರಿಯಿದೆ ಅದಕ್ಕೆ ಹುಲ್ಲು ತಿನ್ನುವಲ್ಲಿ ಕೂಡ ಅತ್ಯಂತ ಕಡಿಮೆ ಮಮತೆಯಿದೆ. ಮತ್ತು ಇಲಿಗಳ ಸಮೂಹವನ್ನು ತಿನ್ನುವಂಥ ಬೆಕ್ಕಿಗೆ ಇಲಿಗಳನ್ನು ತಿನ್ನುವಲ್ಲಿ ಬಹಳಷ್ಟು ತೀವ್ರ ಮಮತೆಯಿದೆ. ಇದುವೇ ಇವೆರಡರಲ್ಲಿನ ವಿಶೇಷತೆಯಿದೆ.

**ಭಾವಾರ್ಥ ಃ-** ಮೊದಲಂತೂ ಜಿಂಕೆಯ ಮರಿಗೆ ಹಸಿರು ಹುಲ್ಲಿನಲ್ಲಿ ಹೆಚ್ಚು ಆಸಕ್ತಿಯಿಲ್ಲ, ಅಲ್ಲದೆ ಅದಕ್ಕೆ ತಿನ್ನುವಲ್ಲಿ ಹೆಚ್ಚು ಸರಾಗತೆಯು ಕೂಡ ಇಲ್ಲ ಮತ್ತು ತಿನ್ನುವ ಸಮಯದಲ್ಲಿ ಸ್ವಲ್ಪಾದರೂ ಭಯವು ತಿಳಿದು ಬಂದರೆ ಕೂಡಲೆ ಅದನ್ನು ಬಿಟ್ಟುಕೊಟ್ಟು ಓಡಿ ಹೋಗುತ್ತದೆ. ಇದರಿಂದ ತಿಳಿದುಬರುವುದೇನೆಂದರೆ ಅದಕ್ಕೆ ಆಸಕ್ತಿಯು ಎಂದರೆ ಮಮತೆಯ ಪರಿಣಾಮವು ಹೆಚ್ಚು ತೀವ್ರವಿಲ್ಲ. ಇಲಿಗಳ ಸಮೂಹವನ್ನು ಹೊಡೆಯುವಂಥ ಬೆಕ್ಕಿಗೆ ಇಲಿಗಳನ್ನು ತಿನ್ನುವ ಆಸಕ್ತಿಯು ಅಧಿಕವಿದೆ. ಮತ್ತು ಇಲಿಗಳನ್ನು ಹೊಡೆದ ನಂತರ ಅವುಗಳನ್ನು ತಿನ್ನುವಲ್ಲಿ ಸರಾಗತೆಯು ಕೂಡ ವಿಶೇಷವಿದೆ, ಇನ್ನು ಯಾವ ಸಮಯದಲ್ಲಿ ಅದು ಇಲಿಗಳನ್ನು ತಿನ್ನುತಿರುವುದು ಆ ಸಮಯದಲ್ಲಿ ಅದರ ಮೈಮೇಲೆ ಕೋಲಿನ ಏಟು ಹಾಕಿದರೂ ಕೂಡ ಅತ್ಯಂತ ಕಠಿಣತೆಯಿಂದಲೇ ಅದನ್ನು ಬಿಡುತ್ತದೆ, ಇದರಿಂದ ತಿಳಿದು ಬರುವುದೇನೆಂದರೆ ಜಿಂಕೆಯ

ಮರಿಯ ಮೂರ್ಚೆಯಲ್ಲಿ ಮತ್ತು ಬೆಕ್ಕಿನ ಮೂರ್ಚೆಯಲ್ಲಿ ಬಹಳಷ್ಟು ಅಂತರವಿದೆ. ಇದೇ ಪ್ರಕಾರ ಹೆಚ್ಚು ಆರಂಭ-ಪರಿಗ್ರಹವುಳ್ಳ ಜೀವರುಗಳಲ್ಲಿ ಮತ್ತು ಅಲ್ಪ ಆರಂಭ-ಪರಿಗ್ರಹವುಳ್ಳ ಜೀವರುಗಳಲ್ಲಿ ಕೂಡ ಪರಿಣಾಮಗಳ ಅಂತರವಿದೆಯೆಂದು ತಿಳಿಯಬೇಕು.

ಈಗ ಈ ಪ್ರಯೋಜನವನ್ನು ಸಿದ್ಧ ಮಾಡುತ್ತಾರೆ, -

**ನಿರ್ಬಾಧಂ ಸಂಸಿಧ್ಯೇತ್ ಕಾರ್ಯವಿಶೇಷೋ ಹಿ ಕಾರಣವಿಶೇಷಾತ್ ।**
**ಔಧಸ್ಯಖಂಡಯೋರಿಹ ಮಾಧುರ್ಯ್ಯಪ್ರೀತಿಭೇದ ಇವ ॥೧೨೨॥**

**ಅನ್ವಯಾರ್ಥ :- [ಔಧಸ್ಯಖಂಡಯೋಃ]** ಹಾಲು ಮತ್ತು ಸಕ್ಕರೆಯಲ್ಲಿನ **[ಮಾಧುರ್ಯಪ್ರೀತಿಭೇದಃ ಇವ]** ಮಧುರತೆಯ ಪ್ರೀತಿ ಭೇದದ ಹಾಗೂ **[ಇಹ]** ಈ ಲೋಕದಲ್ಲಿ **[ಹಿ]** ನಿಶ್ಚಯದಿಂದ **[ಕಾರಣವಿಶೇಷಾತ್]** ಕಾರಣದ ವಿಶೇಷತೆಯಿಂದ **[ಕಾರ್ಯವಿಶೇಷಃ]** ಕಾರ್ಯದ ವಿಶೇಷತೆಯು **[ನಿರ್ಬಾಧ]** ಬಾಧೆಯಿಲ್ಲದೆ **[ಸಂಸಿಧ್ಯೇತ್]** ಒಳ್ಳೆಯ ಪ್ರಕಾರದಿಂದ ಸಿದ್ಧವಾಗುತ್ತದೆ.

**ಟೀಕೆ :- 'ಹಿ ಕಾರಣವಿಶೇಷಾತ್ ಕಾರ್ಯವಿಶೇಷಃ ನಿರ್ಬಾಧಂ ಸಂಸಿಧ್ಯೇತ್ ಯಥಾ ಔಧಸ್ಯಖಂಡಯೋಃ ಇಹ ಮಾಧುರ್ಯ್ಯಪ್ರೀತಿಭೇದಃ ಇವ ಭವತಿ'** - ನಿಶ್ಚಯದಿಂದ ಕಾರಣದ ವಿಶೇಷತೆಯಿರುವುದರಿಂದ ಕಾರ್ಯದ ವಿಶೇಷತೆಯಾಗುತ್ತದೆ. ಹೇಗೆಂದರೆ ಹಸುವಿನ ಹಾಲಿನಲ್ಲಿ ಮತ್ತು ಸಕ್ಕರೆಯಲ್ಲಿ ಹೆಚ್ಚು-ಕಡಿಮೆ ಮಾಧುರ್ಯವಿರುವ ಕಾರಣ ಹೆಚ್ಚು-ಕಡಿಮೆ ಪ್ರೀತಿಯಾಗುತ್ತದೆ. ಹಸುವಿನ ಮೊಲೆಯ ಮೇಲ್ಭಾಗದಲ್ಲಿ ಹಾಲು ವಾಸಿಸುವ ಯಾವ ಚೀಲವಿರುತ್ತದೆ ಅದನ್ನು ಔಧವೆಂದು ಹೇಳುತ್ತಾರೆ, ಅದರಲ್ಲಿ ಉತ್ಪನ್ನವಾಗುವಂಥ ವಸ್ತುವನ್ನು ಔಧಸ್ ಎಂದರೆ ಹಾಲುಯೆಂದು ಹೇಳುತ್ತಾರೆ.

**ಭಾವಾರ್ಥ :-** ಎಂಥ ಕಾರಣವಿರುತ್ತದೆ ಅಂಥದೇ ಕಾರ್ಯವು ಉತ್ಪನ್ನವಾಗುತ್ತದೆಯೆಂಬ ನಿಯಮವಿದೆ. ಹೇಗೆಂದರೆ ಹಾಲಿನಲ್ಲಿ ಮಾಧುರ್ಯವು ಕಡಿಮೆಯಿದೆ ಮತ್ತು ಸಕ್ಕರೆಯಲ್ಲಿ ಅಧಿಕವಿರುವುದರಿಂದ ಹಾಲಿನಲ್ಲಿ ಪ್ರೀತಿಯು ಕಡಿಮೆಯಿರುತ್ತದೆ. ಮತ್ತು ಸಕ್ಕರೆಯಲ್ಲಿ ವಿಶೇಷವಾಗಿರುತ್ತದೆ.

ಈಗ ಇದರ ಉದಾಹರಣೆಯನ್ನು ಪ್ರಕಟ ಮಾಡುತ್ತಾರೆ, -

**ಮಾಧುರ್ಯಪ್ರೀತಿಃ ಕಿಲ ದುಗ್ಧೇ ಮಂದೈವ ಮಂದಮಾಧುರ್ಯೇ ।**
**ಸೈವೋತ್ಕಟಮಾಧುರ್ಯೇ ಖಂಡೇ ವ್ಯಪದಿಶ್ಯತೇ ತೀವ್ರಾ ॥೧೨೩॥**

**ಅನ್ವಯಾರ್ಥ :- [ಕಿಲ]** ನಿಶ್ಚಯದಿಂದ **[ಮಂದಮಾಧುರ್ಯೇ]** ಕಡಿಮೆ ಮಾಧುರ್ಯವುಳ್ಳ **[ದುಗ್ಧೇ]** ಹಾಲಿನಲ್ಲಿ **[ಮಾಧುರ್ಯಪ್ರೀತಿಃ]** ಮಾಧುರ್ಯದ ರುಚಿಯನ್ನು **[ಮಂದಾ ಏವ]** ಕಡಿಮೆಯೆಂದೇ **[ವ್ಯಪದಿಶ್ಯತೇ]** ಹೇಳಲಾಗುತ್ತದೆ ಮತ್ತು **[ಸಾ ಏವ]** ಅದೇ ಮಾಧುರ್ಯದ ರುಚಿಯನ್ನು **[ಉತ್ಕಟಮಾಧುರ್ಯೇ]** ಅತ್ಯಂತ ಮಾಧುರ್ಯವುಳ್ಳ **[ಖಂಡೇ]** ಸಕ್ಕರೆಯಲ್ಲಿ **[ತೀವ್ರಾ]** ಅಧಿಕವೆಂದು ಹೇಳಲಾಗುತ್ತದೆ.

**ಟೀಕೆ :- 'ಕಿಲ ಮಂದಮಾಧುರ್ಯೇ ದುಗ್ಧೇ ಮಾಧುರ್ಯಪ್ರೀತಿಃ ಮಂದಾ ವ್ಯಪದಿಶ್ಯತೇ ತಥಾ ಸೈವ ಮಾಧುರ್ಯಪ್ರೀತಿಃ ಉತ್ಕಟಮಾಧುರ್ಯೇ ಖಂಡೇ ತೀವ್ರಾ ವ್ಯಪದಿಶ್ಯತೇ'** - ನಿಶ್ಚಯದಿಂದಕಡಿಮೆ ಮಾಧುರ್ಯವುಳ್ಳ ಹಾಲಿನಲ್ಲಿ ಸಿಹಿರಸದ ಅಭಿರುಚಿಯುಳ್ಳ ಪುರುಷನಿಗೆ ರುಚಿಯು ಬಹಳಷ್ಟು ಕಡಿಮೆಯಿರುತ್ತದೆ

ಮತ್ತು ಅಧಿಕ ಮಾಧುರ್ಯವುಳ್ಳ ಸಕ್ಕರೆಯಲ್ಲಿ ಅದೇ ಪುರುಷನಿಗೆ ರುಚಿಯು ಅತ್ಯಧಿಕವಿರುತ್ತದೆ.

**ಭಾವಾರ್ಥ :-** ಯಾವ ಪ್ರಕಾರ ಓರ್ವ ಮನುಷ್ಯನಿಗೆ ಸಿಹಿರಸದ ಅಭಿಲಾಷೆಯಿದ್ದರೆ ಅವನಿಗೆ ಹಾಲಿನಲ್ಲಿ ರುಚಿಯು ಕಡಿಮೆಯಿರುತ್ತದೆ ಮತ್ತು ಸಕ್ಕರೆಯಲ್ಲಿ ರುಚಿಯು ಅಧಿಕವಿರುತ್ತದೆ, ಅದೇ ಪ್ರಕಾರ ಯಾವ ಪುರುಷನಿಗೆ ಎಷ್ಟು ಪದಾರ್ಥಗಳಲ್ಲಿ ಮಮತೆಯ ಭಾವವಿರುವುದು ಆ ಪುರುಷನು ಅಷ್ಟೇ ಹಿಂಸೆಯ ಪಾಲುಗಾರನಾಗುವನು, ಹೆಚ್ಚಿನದು ಇಲ್ಲ. ಬೇಕಾದರೆ ಆತನ ಹತ್ತಿರ ಆ ಪದಾರ್ಥಗಳು ಉಪಸ್ಥಿತವಿರಲಿ ಅಥವಾ ಇಲ್ಲದಿರಲಿ, ನನಗೆ ಮಮತೆಯ ಭಾವವಿಲ್ಲ, ಬಾಹ್ಯದಲ್ಲಿ ಪರಿಗ್ರಹವು ಅಧಿಕವಿದ್ದರೇನಾಗುವುದೆಂದು ಅಧಿಕ ಆರಂಭ-ಪರಿಗ್ರಹ ಮಾಡುವಂಥ ಓರ್ವ ಜೀವನು ಹೇಳುತ್ತಾನೆ, ಆದರೆ ಹೀಗಾಗುವ ಸಾಧ್ಯತೆಯಿಲ್ಲ. ಏಕೆಂದರೆ ಆ ಮಮತೆಯ ಭಾವವು ಇಲ್ಲದಿರುತ್ತಿದ್ದರೆ ಬಾಹ್ಯ ಪರಿಗ್ರಹದ ಸಂಗ್ರಹವನ್ನಾದರೂ ಏತಕ್ಕಾಗಿ ಮಾಡಿದನು ? ಮತ್ತು ಆ ಬಾಹ್ಯ ಪರಿಗ್ರಹವಿದ್ದರೂ ಕೂಡ ಯಾವ ಪುರುಷನು ಮಮತೆಯ ತ್ಯಾಗಿಯಿದ್ದಾನೆ ಅವನು ಆ ಬಾಹ್ಯ ಪದಾರ್ಥಗಳನ್ನು ಕ್ಷಣ ಮಾತ್ರದಲ್ಲಿ ಬಿಟ್ಟುಕೊಡುವ ಸಾಧ್ಯತೆಯಿದೆ. ಆದುದರಿಂದ ಮಮತೆಯ ಭಾವವಿಲ್ಲದೆ ಬಾಹ್ಯ ಪದಾರ್ಥಗಳ ಸಂಗ್ರಹವಾಗುವ ಸಾಧ್ಯತೆಯಿಲ್ಲವೆಂಬುದು ಸಿದ್ಧವಾಯಿತು. ಹೇಗೆ ಹೇಗೆ ತಮ್ಮ ಮಮತೆಯ ಭಾವವು ಬೆಳೆಯುತ್ತ ಹೋಗುತ್ತದೆ ಹಾಗೆ ಹಾಗೆ ತಮ್ಮ ಸಲುವಾಗಿ ಬಾಹ್ಯ ಪದಾರ್ಥಗಳ ಸಂಗ್ರಹವನ್ನೂ ಮಾಡುತ್ತ ಹೋಗುತ್ತಾನೆ. ಬಾಹ್ಯ ಪರಿಗ್ರಹವನ್ನಂತೂ ಅಂಗೀಕಾರ ಮಾಡುತ್ತ ಹೋಗುವುದು ಮತ್ತು ನನ್ನ ಅಂತರಂಗದಲ್ಲಿ ಮಮತೆಯ ಭಾವವಿಲ್ಲವೆಂದುಹೇಳುವುದು ಹೇಗೆ ಸಂಭವಿಸುವುದು. ಹಿಂಸೆಯಲ್ಲಂತೂ ಬಾಹ್ಯ ಹಿಂಸೆಯಾಗಿ ಹೋಗುವುದು ಮತ್ತು ಅಂತರಂಗವು ಶುದ್ಧವಿರುವುದು ಎಂದರೆ ಒಬ್ಬನಿಗೆ ಭಾವಹಿಂಸೆಯಿಲ್ಲದೆಯೇ ದ್ರವ್ಯಹಿಂಸೆಯಂತೂ ಆಗುವ ಸಾಧ್ಯತೆಯಿದೆ, ಆದರೆ ಬಾಹ್ಯ ಪದಾರ್ಥಗಳ ಸಂಗ್ರಹವು ಎಂದರೆ ಪರಿಗ್ರಹದ ಅಂಗೀಕಾರವು ಮಮತೆಯ ಭಾವವಿಲ್ಲದೆ ಆಗುವ ಸಾಧ್ಯತೆಯಿಲ್ಲ.

ಈಗ ಪರಿಗ್ರಹ ತ್ಯಾಗ ಮಾಡುವ ಉಪಾಯ ಹೇಳುತ್ತಾರೆ, -

> **ತತ್ತ್ವಾರ್ಥಶ್ರದ್ಧಾನೇ ನಿರ್ಯುಕ್ತಂ ಪ್ರಥಮಮೇವ ಮಿಥ್ಯಾತ್ವಮ್ ।**
> **ಸಮ್ಯಗ್ದರ್ಶನಚೌರಾಃ ಪ್ರಥಮಕಷಾಯಾಶ್ಚ ಚತ್ವಾರಃ ॥೧೨೪॥**

**ಅನ್ವಯಾರ್ಥ :- [ಪ್ರಥಮಂ ಏವ]** ಮೊದಲೇ **[ತತ್ತ್ವಾರ್ಥಶ್ರದ್ಧಾನೇ]** ತತ್ತ್ವಾರ್ಥದ[೧] ಅಶ್ರದ್ಧೆಯಲ್ಲಿ **[ನಿರ್ಯುಕ್ತಂ]** ಸಂಯುಕ್ತ ಮಾಡಿರುವಂಥ **[ಮಿಥ್ಯಾತ್ವ]** ಮಿಥ್ಯಾತ್ವ[೨] **[ಚ]** ಮತ್ತು **[ಸಮ್ಯಗ್ದರ್ಶನ ಚೌರಾಃ]** ಸಮ್ಯಗ್ದರ್ಶನದ ಕಳ್ಳರು **[ಚತ್ವಾರಃ]** ನಾಲ್ವರಿದ್ದಾರೆ **[ಪ್ರಥಮ ಕಷಾಯಾಃ]** ಮೊದಲನೆಯ ಕಷಾಯ ಎಂದರೆ ಅನಂತಾನುಬಂಧೀ ಕ್ರೋಧ, ಮಾನ, ಮಾಯೆ ಮತ್ತು ಲೋಭಗಳಿವೆ.

**ಟೀಕೆ :- 'ಪ್ರಥಮಂ ತತ್ತ್ವಾರ್ಥಶ್ರದ್ಧಾನೇ ಮಿಥ್ಯಾತ್ವಂ ನಿರ್ಯುಕ್ತಂ - ಏವಂ ಮಿಥ್ಯಾತ್ವಂ ಚ ಚತ್ವಾರಃ ಪ್ರಥಮ ಕಷಾಯಾಃ ಸಮ್ಯಗ್ದರ್ಶನ ಚೌರಾಃ ಸಂತಿ'** - ಮೊದಲು ತತ್ತ್ವಾರ್ಥದ ಮಿಥ್ಯಾಶ್ರದ್ಧೆಯಲ್ಲಿ ಅದನ್ನು ಸಂಯುಕ್ತ ಮಾಡಿದೆ ಎಂದರೆ ಮೊದಲು ಮಿಥ್ಯಾತ್ವ ನಾಮದ ಅಂತರಂಗ ಪರಿಗ್ರಹವಿದೆ ಮತ್ತು ಮೊದಲನೆಯ ಚೌಕಡಿ ಎಂದರೆ ಅನಂತಾನುಬಂಧೀ ಕ್ರೋಧ-ಮಾನ-ಮಾಯೆ-ಲೋಭ ಇವು ನಾಲ್ಕು ಇವೆ. ಈ ಪ್ರಕಾರ ಇವು

---

೧. ಓರ್ವ ಪುರುಷನಿಂದ ಬಾಹ್ಯ ಹಿಂಸೆಯಾಗಿ ಹೋಗುವುದು ಮತ್ತು ಅವನಿಗೆ ಹಿಂಸೆ ಮಾಡುವ ಪರಿಣಾಮವಿಲ್ಲದಿದ್ದರೆ ಆ ಪುರುಷನು ಹಿಂಸೆಯ ಪಾಲುಗಾರನಾಗುವುದಿಲ್ಲವೆಂದು ಹಿಂಸೆಯ ಪ್ರಕರಣದಲ್ಲಿ ಹೇಳಲಾಗಿದೆ.

೨. ಮಿಥ್ಯಾತ್ವ, ಸಮ್ಯಗ್ಮಿಥ್ಯಾತ್ವ ಮತ್ತು ಸಮ್ಯಕ್ಪ್ರಕೃತಿಮಿಥ್ಯಾತ್ವ.

ಐದು ಸಮ್ಯಗ್ದರ್ಶನದ ಚೋರಗಳಿವೆ. ಎಲ್ಲಿಯವರೆಗೆ ಇವುಗಳ ನಾಶವಾಗುವುದಿಲ್ಲ ಅಲ್ಲಿಯವರೆಗೆ ಸಮ್ಯಗ್ದರ್ಶನವಾಗುವುದಿಲ್ಲ.

**ಭಾವಾರ್ಥ :-** ಹದಿನಾಲ್ಕು ಪ್ರಕಾರದ ಅಂತರಂಗ ಪರಿಗ್ರಹಗಳ ತ್ಯಾಗವನ್ನು ಯಾವ ರೀತಿಯಿಂದ ಮಾಡಲಾಗುತ್ತದೆಯೆಂಬುದನ್ನು ಇಲ್ಲಿ ತಿಳಿಸಿಕೊಡುತ್ತಿದ್ದಾರೆ. ಮೊದಲೇ ಈ ಜೀವನು ಯಾವಾಗ ಸಮ್ಯಗ್ದರ್ಶನ ಪ್ರಾಪ್ತ ಮಾಡಿಕೊಳ್ಳುತ್ತಾನೆ, ಆಗ ಮಿಥ್ಯಾತ್ವ ಮತ್ತು ಅನಂತಾನುಬಂಧೀ ಚೌಕಡಿಯ ನಾಶ ಮಾಡುತ್ತಾನೆ. ಅನಾದಿ ಮಿಥ್ಯಾದೃಷ್ಟಿಯ ಅಪೇಕ್ಷೆಯಿಂದಂತೂ ಐದರ ನಾಶವಾಗುತ್ತದೆ ಮತ್ತು ಸಾದಿ (ಮಿಥ್ಯಾದೃಷ್ಟಿ) ಯ ಅಪೇಕ್ಷೆಯಿಂದ ಏಳರ ನಾಶವಾಗುತ್ತದೆ. ಇವೆರಡು ಅಂತರಂಗ ಪರಿಗ್ರಹದ ಭೇದಗಳಾಗುವವು. ತಾತ್ಪರ್ಯವೇನೆಂದರೆ ಈ ಜೀವನು ಮೊದಲೇ ಮಿಥ್ಯಾತ್ವವೆಂಬ ಹೆಸರಿನ ಪರಿಗ್ರಹದ ತ್ಯಾಗ ಮಾಡುತ್ತಾನೆ. ತತ್ತ್ವಾರ್ಥದ ಶ್ರದ್ಧೆಯಾಗದಿರುವುದೇ ಮಿಥ್ಯಾತ್ವವಿದೆ. ಅನಂತರ ಅನಂತಾನುಬಂಧೀ ಕ್ರೋಧ, ಮಾನ, ಮಾಯೆ, ಲೋಭಗಳನ್ನು ಕೂಡ ಅದೇ ತತ್ತ್ವಾರ್ಥದ ಅಶ್ರದ್ಧೆಯ ಜತೆಯಲ್ಲಿ ಕಳುಹಿಸಿ ಕೊಡುತ್ತಾನೆ, ಏಕೆಂದರೆ ಇವು ನಾಲ್ಕೂ ಸಮ್ಯಕ್ತ್ವದ ಚೋರಗಳಿವೆ, ಇವುಗಳ ಉಪಸ್ಥಿತಿಯಲ್ಲಿ ಸಮ್ಯಗ್ದರ್ಶನವಿರುವ ಸಾಧ್ಯತೆಯಿಲ್ಲ. ಇದೇ ಹೇತುವಿನಿಂದ ಅನಂತ ಸಂಸಾರದ ಕಾರಣವೆಂದು ತಿಳಿದುಕೊಂಡು ಇವುಗಳ ಹೆಸರನ್ನು ಅನಂತಾನುಬಂಧಿಯೆಂದು ಇಡಲಾಗಿದೆ. ಇವುಗಳ ಸಂಸ್ಕಾರವು ಕೂಡ ಅನಂತ ಕಾಲದವರೆಗೆ ಇರುತ್ತದೆ.

ಈಗ ಉಳಿದ ಭೇದಗಳನ್ನು ತಿಳಿಸಿಕೊಡುತ್ತಾರೆ.

ಪ್ರವಿಹಾಯ ಚ ದ್ವಿತೀಯಾನ್ ದೇಶಚರಿತ್ರಸ್ಯ ಸನ್ಮುಖಾಯಾತಃ ।
ನಿಯತಂ ತೇ ಹಿ ಕಷಾಯಾಃ ದೇಶಚರಿತ್ರಂ ನಿರುಂಧಂತಿ ॥೧೨೫॥

**ಅನ್ವಯಾರ್ಥ :-** **[ಚ]** ಮತ್ತು **[ದ್ವಿತೀಯಾನ್]** ಎರಡನೆಯ ಕಷಾಯ ಎಂದರೆ ಅಪ್ರತ್ಯಾಖ್ಯಾನಾವರಣೀಯ ಕ್ರೋಧ-ಮಾನ-ಮಾಯೆ-ಲೋಭಗಳನ್ನು **[ಪ್ರವಿಹಾಯ]** ಬಿಟ್ಟುಕೊಟ್ಟು **[ದೇಶಚರಿತ್ರಸ್ಯ]** ದೇಶ ಚಾರಿತ್ರದ **[ಸನ್ಮುಖಾಯಾತಃ]** ಸನ್ಮುಖ ಬರುತ್ತಾನೆ **[ಹಿ]** ಏಕೆಂದರೆ **[ತೇ ಕಷಾಯಾಃ]** ಆ ಕಷಾಯಗಳು **[ನಿಯತಂ]** ನಿಶ್ಚಿತರೂಪದಿಂದ **[ದೇಶಚರಿತ್ರಂ]** ಏಕದೇಶ ಚಾರಿತ್ರವನ್ನು **[ನಿರುಂಧಂತಿ]** ತಡೆಯುತ್ತವೆ.

**ಟೀಕೆ :-** **'ಚ ಶ್ರಾವಕಃ ದ್ವಿತೀಯಾನ್ ಅಪ್ರತ್ಯಾಖ್ಯಾನ ಕ್ರೋಧಾದೀನ್ ಚತುಷ್ಕಾನ್ ಪ್ರವಿಹಾಯ ದೇಶಚರಿತ್ರಸ್ಯ ಸನ್ಮುಖಾಯಾತಃ ಭವಂತಿ ಹಿ ತೇ ಕಷಾಯಾಃ ನಿಯತಂ ದೇಶಚರಿತ್ರಂ ನಿರುಂಧಂತಿ'** - ಸಮ್ಯಕ್‌ದೃಷ್ಟಿ ಶ್ರಾವಕನು ಅಪ್ರತ್ಯಾಖ್ಯಾನಾವರಣ[೧] ಕ್ರೋಧ-ಮಾನ-ಮಾಯೆ-ಲೋಭವೆಂಬ ನಾಲ್ಕು ಕಷಾಯಗಳ ನಾಶ ಮಾಡಿ ಏಕದೇಶ ಚಾರಿತ್ರದ ಸನ್ಮುಖನಾಗುತ್ತಾನೆ ಎಂದರೆ ಗ್ರಹಣ ಮಾಡುತ್ತಾನೆ. ಏಕೆಂದರೆ ನಿಶ್ಚಯದಿಂದ ಅವೇ ಅಪ್ರತ್ಯಾಖ್ಯಾನಾವರಣ ಮೊದಲಾದ ನಾಲ್ಕು ದೇಶಚಾರಿತ್ರ ಶ್ರಾವಕನ ವ್ರತಗಳ ಘಾತ ಮಾಡುತ್ತವೆ. ಈ ಪ್ರಕಾರ ಅಂತರಂಗ ಪರಿಗ್ರಹದ ಈ ಮೂರನೆಯ ಭೇದವಾಯಿತು.

ಈಗ ಇನ್ನುಳಿದ ಭೇದಗಳನ್ನು ತಿಳಿಸಿಕೊಡುತ್ತಾರೆ, -

---

೧. ಅಪ್ರತ್ಯಾಖ್ಯಾನಾವರಣ-ಅ=ಈಷತ್-ಸ್ವಲ್ಪ, ಪ್ರತ್ಯಾಖ್ಯಾನ=ತ್ಯಾಗವನ್ನು, ಆವರಣ=ಆಚ್ಛಾದನೆ ಮಾಡುವಂಥದು.

೨. ನೋಕಷಾಯ=೧) ಹಾಸ್ಯ, ೨) ರತಿ, ೩) ಅರತಿ, ೪) ಶೋಕ, ೫) ಭಯ, ೬) ಜುಗುಪ್ಸೆ, (ಗ್ಲಾನಿ), ೭) ಸ್ತ್ರೀವೇದ, ೮) ಪುರುಷವೇದ, ೯) ನಪುಂಸಕವೇದ.

**ನಿಜಶಕ್ತ್ಯಾ ಶೇಷಾಣಾಂ ಸರ್ವೇಷಾಮಂತರಂಗಸಂಗಾನಾಮ್ ।**
**ಕರ್ತವ್ಯಃ ಪರಿಹಾರೋ ಮಾರ್ದವಶೌಚಾದಿಭಾವನಯಾ ॥೧೨೬॥**

**ಅನ್ವಯಾರ್ಥ ಃ-** ಆದುದರಿಂದ **[ನಿಜಶಕ್ತ್ಯಾ]** ತಮ್ಮ ಶಕ್ತಿಗೆ ಅನುಸರಿಸಿ **[ಮಾರ್ದವಶೌಚಾದಿ ಭಾವನಯಾ]** ಮಾರ್ದವ, ಶೌಚ, ಸಂಯಮ ಮೊದಲಾದ ದಶಲಕ್ಷಣ ಧರ್ಮದ ಮೂಲಕ **[ಶೇಷಾಣಾಂ]** ಉಳಿದ **[ಸರ್ವೇಷಾಮ್]** ಸಮಸ್ತ **[ಅಂತರಂಗ ಸಂಗಾನಾಮ್]** ಅಂತರಂಗ ಪರಿಗ್ರಹಗಳ **[ಪರಿಹಾರಃ]** ತ್ಯಾಗ **[ಕರ್ತವ್ಯಃ]** ಮಾಡಬೇಕಾಗುವುದು.

**ಟೀಕೆ ಃ- 'ಶೇಷಾಣಾಂ ಸರ್ವೇಷಾಮ್ ಅಂತರಂಗಸಂಗಾನಾಮ್ ನಿಜಶಕ್ತ್ಯಾ ಮಾರ್ದವ ಶೌಚಾದಿ ಭಾವನಯಾ ಪರಿಹಾರಃ ಕರ್ತವ್ಯಃ'** - ಉಳಿದ ಎಲ್ಲ ಪ್ರಕಾರದ ಅಂತರಂಗ ಪರಿಗ್ರಹಗಳನ್ನು ತಮ್ಮ ಶಕ್ತಿಗೆ ಅನುಸರಿಸಿ ತಮ್ಮ ಕೋಮಲ ಪರಿಣಾಮ ಹಾಗೂ ಸಂತೋಷರೂಪದ ಧರ್ಮ ಭಾವನೆಯಿಂದ ತ್ಯಾಗ ಮಾಡುವುದು ಎಂದರೆ ಯಥಾ ಕ್ರಮವಾಗಿ ಎಲ್ಲವುಗಳ ತ್ಯಾಗ ಮಾಡಬೇಕು.

**ಭಾವಾರ್ಥ ಃ-** ಹದಿನಾಲ್ಕು ಪ್ರಕಾರದ ಅಂತರಂಗ ಪರಿಗ್ರಹಗಳಿವೆ. ಅವುಗಳ ಹೆಸರನ್ನು ಇದೇ ಗ್ರಂಥದ ನೂರಹದಿನಾರನೆಯ ಶ್ಲೋಕದಲ್ಲಿ ತಿಳಿಸಿಕೊಡಲಾಗಿದೆ. ಮಿಥ್ಯಾತ್ವ, ನಾಲ್ಕು ಚೌಕಡೀರೂಪದ ನಾಲ್ಕು ಕಷಾಯಗಳು ಮತ್ತು ಹಾಸ್ಯ ಮೊದಲಾದ ಒಂಭತ್ತು ನೋಕಷಾಯಗಳು ೨ ಹೀಗೆ ಹದಿನಾಲ್ಕು ಭೇದಗಳಿವೆ. ಕ್ರಮಪೂರ್ವಕವಾಗಿ ಇವುಗಳ ತ್ಯಾಗ ಮಾಡಬೇಕು. ಇವುಗಳಲ್ಲಿನ ಮಿಥ್ಯಾತ್ವ ಮತ್ತು ಅನಂತಾನುಬಂಧಿಯ ನಾಲ್ಕು ಕಷಾಯಗಳು ಅವು ಸಮ್ಯಗ್ದರ್ಶನ ಹಾಗೂ ಸ್ವರೂಪಾಚರಣ ಚಾರಿತ್ರದ ಘಾತ ಮಾಡುತ್ತವೆ. ಅಪ್ರತ್ಯಾಖ್ಯಾನಾವರಣೀಯ ನಾಮದ ನಾಲ್ಕು ಕಷಾಯಗಳಿವೆ. ಅವು ದೇಶಚಾರಿತ್ರದ ಘಾತ ಮಾಡುತ್ತವೆ ಎಂದರೆ ಶ್ರಾವಕಪದವಾಗಗೊಡುವುದಿಲ್ಲ. ಪ್ರತ್ಯಾಖ್ಯಾನಾವರಣೀಯ ನಾಮದ ನಾಲ್ಕು ಕಷಾಯಗಳಿವೆ ಅವು ಸಕಲಸಂಯಮದ ಘಾತ ಮಾಡುತ್ತವೆ. ಎಂದರೆ ಮುನಿಪದವಾಗಗೊಡುವುದಿಲ್ಲ. (ಸರ್ವಥಾ ತ್ಯಾಗವನ್ನು ಪ್ರತ್ಯಾಖ್ಯಾನವೆಂದು ಹೇಳುತ್ತಾರೆ.) ಮತ್ತು ಸಂಜ್ವಲನ ಮೊದಲಾದ ನಾಲ್ಕು ಹಾಗೂ ಹಾಸ್ಯ ಮೊದಲಾದ ಆರು ಮತ್ತು ಮೂರು ವೇದ ಇವೆಲ್ಲವೂ ಯಥಾಖ್ಯಾತ ಚಾರಿತ್ರದ ಘಾತದಲ್ಲಿ ನಿಮಿತ್ತವಿವೆ. (ನಿಜಶಕ್ತಿಯ ಬಲದಿಂದ) ಈ ಪ್ರಕಾರ ಈ ಎಲ್ಲ ವ್ರತಗಳನ್ನು ಕ್ರಮಪೂರ್ವಕವಾಗಿ ಧಾರಣ ಮಾಡಿ, ಅಂತರಂಗ ಪರಿಗ್ರಹವನ್ನು ಕ್ರಮಪೂರ್ವಕವಾಗಿ ಬಿಟ್ಟುಕೊಡಬೇಕಾಗುವುದು.

ಈಗ ಬಾಹ್ಯ ಪರಿಗ್ರಹದ ತ್ಯಾಗದ ಕ್ರಮ ಹೇಳುತ್ತಾರೆ, -

**ಬಹಿರಂಗಾದಪಿ ಸಂಗಾತ್ ಯಸ್ಮಾತ್ಪ್ರಭವತ್ಯಸಂಯಮೋಽನುಚಿತಃ ।**
**ಪರಿವರ್ಜಯೇದಶೇಷಂ ತಮಚಿತ್ತಂ ವಾ ಸಚಿತ್ತಂ ವಾ ॥೧೨೭॥**

**ಅನ್ವಯಾರ್ಥ ಃ- [ವಾ]** ಮತ್ತು **[ತಮ್]** ಆ ಬಾಹ್ಯ ಪರಿಗ್ರಹಗಳನ್ನು **[ಅಚಿತ್ತಂ]** ಬೇಕಾದರೆ ಅದು ಅಚೇತನವಿರಲಿ **[ವಾ]** ಅಥವಾ **[ಸಚಿತ್ತಂ]** ಸಚೇತನವಿರಲಿ **[ಅಶೇಷಂ]** ಸಂಪೂರ್ಣರೂಪದಿಂದ **[ಪರಿವರ್ಜಯೇತ್]** ಬಿಟ್ಟು ಕೊಡಬೇಕಾಗುವುದು. **[ಯಸ್ಮಾತ್]** ಏಕೆಂದರೆ **[ಬಹಿರಂಗಾತ್]** ಬಹಿರಂಗ **[ಸಂಗಾತ್ ಅಪಿ]** ಪರಿಗ್ರಹದಿಂದ ಕೂಡ **[ಅನುಚಿತಃ]** ಅಯೋಗ್ಯ ಅಥವಾ ನಿಂದ್ಯವಾದ **[ಅಸಂಯಮಃ ಪ್ರಭವತಿ]** ಅಸಂಯಮವಾಗುತ್ತದೆ.

**ಟೀಕೆ ಃ- 'ಯಸ್ಮಾತ್ ಬಹಿರಂಗಾತ್ ಅಪಿ ಸಂಗಾತ್ ಅನುಚಿತಃ ಅಸಂಯಮಃ ಭವತಿ ತಸ್ಮಾತ್**

**ತಂ ಅಚಿತ್ತಂ ಸಚಿತ್ತಂ ವಾ ಅಶೇಷಂ ಪರಿಗ್ರಹಂ ಪರಿವರ್ಜಯೇತ್'** - ಏಕೆಂದರೆ ಬಾಹ್ಯ ಧನ-ಧಾನ್ಯ, ಮೊದಲಾದ ಪರಿಗ್ರಹದಿಂದ ಕೂಡ ಮಹಾನ್ ಅಸಂಯಮವು ಆಗುತ್ತದೆ ಎಂದರೆ ಎಲ್ಲಿಯವರೆಗೆ ಪರಿಗ್ರಹವಿರುತ್ತದೆ ಅಲ್ಲಿಯವರೆಗೆ ಒಳ್ಳೆಯ ರೀತಿಯಿಂದ ಸಂಯಮದ ಪಾಲನೆಯಾಗುವ ಸಾಧ್ಯತೆಯಿಲ್ಲದಿರುವುದರಿಂದ ಆ ಬಾಹ್ಯ ಪರಿಗ್ರಹವು ಬೇಕಾದರೆ ಅಜೀವವಿರಲಿ ಅಥವಾ ಸಜೀವವಿರಲಿ ಎರಡೂ ಪ್ರಕಾರದ ಪರಿಗ್ರಹವು ತ್ಯಾಗ ಮಾಡಲು ಯೋಗ್ಯವಿವೆ.

**ಭಾವಾರ್ಥ :-** ಬಾಹ್ಯ ಪರಿಗ್ರಹದಲ್ಲಿ ಪ್ರಾಯಶಃ ಪ್ರಪಂಚದ ಸಮಸ್ತ ಪದಾರ್ಥಗಳು ಬಂದು ಬಿಡುತ್ತದೆ. ಆದುದರಿಂದ ಬಾಹ್ಯ ಪರಿಗ್ರಹದಲ್ಲಿ ಸಜೀವ ಮತ್ತು ಅಜೀವವೆಂದು ಎರಡು ಭೇದ ಮಾಡಲಾಗಿದೆ. ಧನ, ಕನಕ, ಭೂಮಿ ಮೊದಲಾದವು ಅಜೀವ ಪರಿಗ್ರಹವಿವೆ,ಮತ್ತು ಆನೆ,ಕುದುರೆ, ಎತ್ತು, ಸೇವಕ, ಸೇವಕಿ ಮೊದಲಾದವರೆಲ್ಲರು ಸಜೀವ ಪರಿಗ್ರಹವಿದ್ದಾರೆ. ಇವುಗಳ ತ್ಯಾಗವು ಕೂಡ ಏಕದೇಶ ಮತ್ತು ಸರ್ವದೇಶವಾಗುತ್ತದೆ.

ಸರ್ವದೇಶ ತ್ಯಾಗ ಮಾಡಲು ಸಾಧ್ಯವಿಲ್ಲದವರು ಏಕದೇಶ ತ್ಯಾಗ ಮಾಡಬೇಕೆಂದು ಈಗ ಹೇಳುತ್ತಾರೆ, -

**ಯೋಽಪಿ ನ ಶಕ್ಯಸ್ತ್ಯಕ್ತುಂ ಧನಧಾನ್ಯಮನುಷ್ಯವಾಸ್ತುವಿತ್ತಾದಿಃ ।**
**ಸೋಽಪಿ ತನೂಕರಣೀಯೋ ನಿವೃತ್ತಿರೂಪಂ ಯತಸ್ತತ್ತ್ವಮ್ ॥೧೨೮॥**

**ಅನ್ವಯಾರ್ಥ :-** **[ಅಪಿ]** ಮತ್ತು **[ಯಃ]** ಯಾರು **[ಧನಧಾನ್ಯಮನುಷ್ಯವಾಸ್ತುವಿತ್ತಾದಿಃ]** ಧನ, ಧಾನ್ಯ, ಮನುಷ್ಯ, ಮನೆ, ಸಂಪತ್ತು ಇತ್ಯಾದಿ ಪರಿಗ್ರಹವನ್ನು **[ತ್ಯಕ್ತುಮ್]** ಸರ್ವಥಾ ಬಿಟ್ಟುಕೊಡಲು **[ಸ ಶಕ್ತಃ]** ಸಮರ್ಥರಿಲ್ಲದಿದ್ದರೆ **[ಸಃ ಅಪಿ]** ಅದನ್ನು ಕೂಡ **[ತನೂ ಕರಣೀಯಃ]** ಕಡಿಮೆ ಮಾಡಿಬಿಡಬೇಕಾಗುವುದು. **[ಯತಃ]** ಏಕೆಂದರೆ **[ತತ್ತ್ವಮ್ ನಿವೃತ್ತಿರೂಪಂ]** ವಸ್ತುವಿನ ಸ್ವರೂಪವು ತ್ಯಾಗರೂಪ[೧]ವೇ ಇದೆ.

**ಟೀಕೆ :-** **'ಯೋಽಪಿ ಮನುಷ್ಯಃ ಧನಧಾನ್ಯಮನುಷ್ಯವಾಸ್ತುವಿತ್ತಾದಿಃ ತ್ಯಕ್ತುಮ್ ನ ಶಕ್ತಃ ಸೋಽಪಿ ಮನುಷ್ಯಃ ಧನಧಾನ್ಯಾದಿಕಃ ತನೂಕರಣೀಯಃ ಯತಃ ತತ್ತ್ವಂ ನಿವೃತ್ತಿರೂಪಂ ಅಸ್ತಿ'** - ಯಾವ ಪ್ರಾಣಿಯು

---

೧. ತತ್ತ್ವವು ನಿವೃತ್ತಿರೂಪವಿರುವುದರ ಅರ್ಥ :- ಪ್ರತಿಯೊಂದು ವಸ್ತುವು ಸ್ವದ್ರವ್ಯ, ಸ್ವಕ್ಷೇತ್ರ, ಸ್ವಕಾಲ ಮತ್ತು ಸ್ವಭಾವದಿಂದ ಯಾವಾಗಲೂ ಪರಿಪೂರ್ಣವೇ ಇದೆ ಮತ್ತು ಪರದ್ರವ್ಯಾದಿಗಳಿಂದ ಶೂನ್ಯ ಎಂದರೆ ನಿವೃತ್ತಿರೂಪವೇ ಇದೆ. ವರ್ತಮಾನದ ಅಶುದ್ಧ ದಶೆಯಲ್ಲಿ ಪರದ್ರವ್ಯದ ಅವಲಂಬನದಿಂದ ರಾಗೀ ಜೀವನಿಗೆ ಬಾಹ್ಯ ಸಾಮಗ್ರಿಗಳ ಕುರಿತು ಮಮತೆಯ ರೂಪದ ರಾಗವು ಭೂಮಿಕೆಗೆ ಅನುಸರಿಸಿ ಇರುತ್ತದೆ ಸ್ವಾಶ್ರಯದ ಬಲದಿಂದ ಅದರ ತ್ಯಾಗ ಮಾಡಿಸುವ ಸಲುವಾಗಿ ಬಾಹ್ಯ ಪದಾರ್ಥಗಳ ತ್ಯಾಗದ ಉಪದೇಶವಿದೆ. ವಾಸ್ತವದಲ್ಲಂತೂ ಆತ್ಮನಿಗೆ ಪರವಸ್ತುವಿನ ತ್ಯಾಗವೇ ಇದೆ. ಆದರೆ ಯಾವ ಒಂದಿಷ್ಟು ರಾಗವಿದೆ, ಮಮತೆಯ ಭಾವವಿದೆ ಅದರ ತ್ಯಾಗರೂಪವಾದ ನಿರ್ಮಲ ಪರಿಣಾಮವು ಎಷ್ಟು ಅಂಶಗಳಲ್ಲಿ ಆಗುತ್ತದೆ ಅಷ್ಟೇ ಅಂಶಗಳಲ್ಲಿ ರಾಗಾದಿಯ ಉತ್ಪತ್ತಿಯೇ ಆಗುವುದಿಲ್ಲ. ಎಲ್ಲಿ ಹೀಗಾಗುವುದು ಅಲ್ಲಿ ಆ ಜೀವನಿಗೆ ಪರವಸ್ತುವಿನ ಕರ್ತೃವೆಂದು ಹೇಳುವುದು ಅದು ಆ ಜಾತಿಯ ಅಭಾವರೂಪ ನಿಮಿತ್ತದ ಜ್ಞಾನ ಮಾಡಿಸುವ ಸಲುವಾಗಿ ಅಸದ್ಭೂತ ವ್ಯವಹಾರನಯದ ಕಥನವಿದೆ. (ನಿಶ್ಚಯ ಸಮ್ಯಗ್ದರ್ಶನವಿಲ್ಲದೆ ಹಟರೂಪವಾದ ಅಜ್ಞಾನಿಗಳ ತ್ಯಾಗವನ್ನು ವ್ಯವಹಾರದಿಂದ ಕೂಡ ಧರ್ಮವೆಂದು ಹೇಳಲಾಗುವುದಿಲ್ಲ. ಧರ್ಮ ಸಂಜ್ಞೆ ಕೊಡಲಾಗುವುದಿಲ್ಲ.)

೨. ಸೇವಕ-ಸೇವಕಿಯರನ್ನು ದ್ವಿಪದ = ಎರಡು ಕಾಲುಗಳುಳ್ಳವರೆಂದು ಹೇಳಲಾಗುತ್ತದೆ.

೩. ತ್ಯಾಗಧರ್ಮ = ಯಾವ ಪ್ರಕಾರ ಪ್ರಕಾಶದ ಉತ್ಪತ್ತಿಯಿಲ್ಲದೆ ಅಂಧಕಾರವು ಹೋಗುವುದಿಲ್ಲ, ಅದೇ ಪ್ರಕಾರ ನಿಜಶುದ್ಧಾತ್ಮನ ಆಶ್ರಯದ ಮೂಲಕ ನಿರ್ಮಲ ಶ್ರದ್ಧೆ-ಜ್ಞಾನ-ಮತ್ತು ಸ್ವರೂಪದಲ್ಲಿ ಏಕಾಗ್ರತೆಯರೂಪದ ಶುದ್ಧಪರಿಣತಿಯನ್ನು ಪ್ರಾಪ್ತಮಾಡಿಕೊಂಡಲ್ಲದೆ ರಾಗದ ತ್ಯಾಗ ಎಂದರೆ ವೀತರಾಗಧರ್ಮರೂಪ ಮೋಕ್ಷದ ಉಪಾಯ ಮತ್ತು ಮೋಕ್ಷವು ದೊರಕುವುದಿಲ್ಲ.

ಧನ (ಹಸು, ಎಮ್ಮೆ ಮೊದಲಾದ), ಧಾನ್ಯ (ಗೋಧಿ,ರಾಗಿ ಮೊದಲಾದ) ಮನುಷ್ಯಾದಿ (ಪುತ್ರಾದಿಕರು ಅಥವಾ ಸೇವಕಾದಿಕರು), ವಾಸ್ತು (ಮನೆ ಮೊದಲಾದ), ವಿತ್ತ (ಚಿನ್ನ, ಬೆಳ್ಳಿ ಮೊದಲಾದ) ಇತ್ಯಾದಿ ಸಮಸ್ತ ಬಹಿರಂಗ (ಹತ್ತು ಪ್ರಕಾರದ) ಪರಿಗ್ರಹವನ್ನು ಸರ್ವಥಾ ಬಿಟ್ಟು ಕೊಡುವಲ್ಲಿ ಅಶಕ್ತನಿದ್ದಾನೆ, ಅವನು ಅದರೊಳಗಿಂದ ಸ್ವಲ್ಪ ಪರಿಗ್ರಹವನ್ನು ಇಟ್ಟುಕೊಳ್ಳುವ ಪರಿಣಾಮ ಮಾಡಬೇಕಾಗುವುದು. ಏಕೆಂದರೆ ತತ್ತ್ವವು ತ್ಯಾಗರೂಪವೇ ಇದೆ.

**ಭಾವಾರ್ಥ :-** ಬಹಿರಂಗ ಪರಿಗ್ರಹವು ಮೂಲತಃ ಸಜೀವ ಮತ್ತು ಅಜೀವದ ಭೇದದಿಂದ ಎರಡು ಪ್ರಕಾರದ್ದಿದೆ. ಒಟ್ಟು ಹತ್ತು ಭೇದಗಳಿವೆ. ಕ್ಷೇತ್ರ, ಮನೆ, ಚಿನ್ನ, ಬೆಳ್ಳಿ, ಧನ - ನಾಲ್ಕು ಕಾಲಿನ ಪಶು, ಬಟ್ಟೆ, ಪಾತ್ರೆ, ಧಾನ್ಯ, ಸೇವಕ, ಸೇವಕಿ ಇತ್ಯಾದಿ ಬಾಹ್ಯ ಪರಿಗ್ರಹಗಳಲ್ಲಿ ಹತ್ತು ಭೇದಗಳಿವೆ. ಇವುಗಳ ಸಂಪೂರ್ಣ ತ್ಯಾಗ ಮಾಡುವ ಸಾಧ್ಯತೆಯಿಲ್ಲದಿದ್ದರೆ (ವರ್ತಮಾನದಲ್ಲಿ ತಮ್ಮ ಹತ್ತಿರ ಎಷ್ಟು ವಿದ್ಯಮಾನವಿವೆ ಅವುಗಳೊಳಗಿಂದ ತಮಗೆ ಎಷ್ಟು ಕಡಿಮೆ ಮಾಡುವ ಸಾಧ್ಯತೆಯಿದೆಯೋ ಅಷ್ಟನ್ನು ಕಡಿಮೆ ಮಾಡಬೇಕು) ತಮ್ಮ ಅವಶ್ಯಕತೆಗೆ ಅನುಸರಿಸಿ ಪರಿಣಾಮ ಮಾಡಿಯೇ ಪರಿಗ್ರಹವನ್ನಿಟ್ಟುಕೊಳ್ಳಬೇಕು ಮತ್ತು ಉಳಿದವುಗಳ ತ್ಯಾಗ ಮಾಡಬೇಕು, ಏಕೆಂದರೆ ತತ್ತ್ವವು ತ್ಯಾಗರೂಪವಿದೆ. ಎಲ್ಲಿಯವರೆಗೆ ಈ ಆತ್ಮನು ತ್ಯಾಗಧರ್ಮದ ಆಚರಣೆ ಮಾಡುವುದಿಲ್ಲ. ಅಲ್ಲಿಯವರೆಗೆ ಅವನಿಗೆ ಮೋಕ್ಷವು ದೊರಕುವ ಸಾಧ್ಯತೆಯಿಲ್ಲ. ಮೋಕ್ಷದ ಹೆಸರು ಕೂಡ ನಿವೃತ್ತಿಯೇ ಇದೆ. ಈ ಪ್ರಕಾರ ಹಿಂಸೆ ಮೊದಲಾದ ಐದೂ ಪಾಪಗಳ ವರ್ಣನೆಯನ್ನು ವಿಸ್ತಾರವಾಗಿ ಮಾಡಲಾಯಿತು.

ಈಗ ರಾತ್ರಿಭೋಜನ ತ್ಯಾಗದ ವರ್ಣನೆ ಮಾಡುತ್ತಾರೆ, -

> **ರಾತ್ರೌ ಭುಂಜಾನಾನಾಂ ಯಸ್ಮಾದನಿವಾರಿತಾ ಭವತಿ ಹಿಂಸಾ ।**
> **ಹಿಂಸಾವಿರತೈಸ್ತಸ್ಮಾತ್ ತ್ಯಕ್ತವ್ಯಾ ರಾತ್ರಿಭುಕ್ತಿರಪಿ ॥೧೨೯॥**

**ಅನ್ವಯಾರ್ಥ :- [ಯಸ್ಮಾತ್]** ಏಕೆಂದರೆ **[ರಾತ್ರೌ]** ರಾತ್ರಿಯಲ್ಲಿ **[ಭುಂಜಾನಾನಾಂ]** ಭೋಜನ ಮಾಡುವಂಥವರಿಗೆ **[ಹಿಂಸಾ]** ಹಿಂಸೆಯು **[ಅನಿವಾರಿತಾ]** ಅನಿವಾರ್ಯವಾಗಿ **[ಭವತಿ]** ಆಗುತ್ತದೆ **[ತಸ್ಮಾತ್]** ಆದುದರಿಂದ **[ಹಿಂಸಾವಿರತೈಃ]** ಹಿಂಸೆಯ ತ್ಯಾಗಿಗಳು **[ರಾತ್ರಿ ಭುಕ್ತಿಃ ಅಪಿ]** ರಾತ್ರಿ ಭೋಜನವನ್ನು ಕೂಡ **[ತ್ಯಕ್ತವ್ಯಾ]** ತ್ಯಾಗ ಮಾಡಬೇಕಾಗುವುದು.

**ಟೀಕೆ :- 'ಯಸ್ಮಾತ್ ರಾತ್ರೌ ಭುಂಜಾನಾನಾಂ ಅನಿವಾರಿತಾ ಹಿಂಸಾ ಭವತಿ ತಸ್ಮಾತ್ ಹಿಂಸಾ ವಿರತೈಃ ರಾತ್ರಿಭುಕ್ತಿಃ ಅಪಿ ತ್ಯಕ್ತವ್ಯಾಃ' -** ರಾತ್ರಿಯಲ್ಲಿ ಭೋಜನ ಮಾಡುವಂಥವರಿಗೆ ಹಿಂಸೆಯು ಅವಶ್ಯವಾಗಿಯೇ ಆಗುತ್ತದೆ. ಏಕೆಂದರೆ ರಾತ್ರಿ ಭೋಜನದಲ್ಲಿ ಹಿಂಸೆಯ ನಿವಾರಣೆಯು ಯಾವುದೇ ಪ್ರಕಾರದಿಂದ ಆಗುವ ಸಾಧ್ಯತೆಯಿಲ್ಲ. ಆದುದರಿಂದ ಹಿಂಸೆಯ ತ್ಯಾಗ ಮಾಡಿದವರು ರಾತ್ರಿ ಭೋಜನದ ತ್ಯಾಗವನ್ನು ಅವಶ್ಯವಾಗಿಯೇ ಮಾಡಬೇಕಾಗುವುದು.

**ಭಾವಾರ್ಥ :-** ರಾತ್ರಿಯಲ್ಲಿ ಭೋಜನ ಮಾಡುವುದರಿಂದ ಜೀವಗಳ ಹಿಂಸೆಯು ಅವಶ್ಯವಾಗಿ ಆಗಿಯೇ ಆಗುತ್ತದೆ. ಪ್ರಾಯಶಃ ಬಹಳಷ್ಟು ಚಿಕ್ಕ ಚಿಕ್ಕ ಜೀವಗಳಿದ್ದು ಅವು ರಾತ್ರಿಯಲ್ಲಿಯೇ ಗಮನ ಮಾಡುತ್ತವೆ. ಮತ್ತು ದೀವಿಗೆಯ ಪ್ರಕಾಶದ ಪ್ರೀತಿಯಿಂದ ದೀವಿಗೆಯ ಹತ್ತಿರಕ್ಕೆ ಬರುತ್ತವೆ, ಆದುದರಿಂದ ರಾತ್ರಿಯಲ್ಲಿ ಒಲೆ ಉರಿಸುವುದರಲ್ಲಿ, ನೀರು ಮೊದಲಾದುವನ್ನು ತುಂಬುವಲ್ಲಿ, ಯಂತ್ರದಿಂದ ಬೀಸುವಲ್ಲಿ, ಭೋಜನ ಸಿದ್ಧಪಡಿಸುವಲ್ಲಿ ನಿಯಮದಿಂದ ಅಸಂಖ್ಯ ಜೀವಗಳ ಹಿಂಸೆಯಾಗುತ್ತಿರುವುದರಿಂದ ಹಿಂಸೆಯ ತ್ಯಾಗ ಮಾಡುವಂಥ ದಯಾಳು ಪುರುಷರು ಅವಶ್ಯವಾಗಿ ರಾತ್ರಿಯಲ್ಲಿ ತಿನ್ನುವ ತ್ಯಾಗ ಮಾಡಬೇಕಾಗುವುದು.

ರಾತ್ರಿ ಭೋಜನದಲ್ಲಿ ಭಾವಹಿಂಸೆ ಕೂಡ ಆಗುತ್ತದೆಯೆಂದು ಈಗ ಹೇಳುತ್ತಾರೆ, -

**ರಾಗಾದ್ಯುದಯಪರತ್ವಾದನಿವೃತ್ತಿರ್ನಾತಿವರ್ತತೇ ಹಿಂಸಾಮ್ ।**
**ರಾತ್ರಿಂ ದಿವಮಾಹರತಃಕಥಂ ಹಿ ಹಿಂಸಾ ನ ಸಂಭವತಿ ॥೧೩೦॥**

**ಅನ್ವಯಾರ್ಥ :-** **[ಅನಿವೃತ್ತಿಃ]** ಅತ್ಯಾಗಭಾವ **[ರಾಗಾದ್ಯುದಯಪರತ್ವಾತ್]** ರಾಗಾದಿ ಭಾವಗಳ ಉದಯದ ಉತ್ಕಟತೆಯಿಂದ **[ಹಿಂಸಾಂ]** ಹಿಂಸೆಯನ್ನು **[ನ-ಅತಿವರ್ತತೇ]** ಉಲ್ಲಂಘನ ಮಾಡಿ ಪ್ರವರ್ತಿಸದಿದ್ದರೆ **[ರಾತ್ರಿಂ ದಿವಮ್]** ರಾತ್ರಿ ಮತ್ತು ಹಗಲು **[ಆಹಾರತಃ]** ಆಹಾರ ಮಾಡುವಂಥವರಿಗೆ **[ಹಿ]** ನಿಶ್ಚಯದಿಂದ **[ಹಿಂಸಾ]** ಹಿಂಸೆಯು **[ಕಥಂ]** ಏಕೆ **[ನ ಸಂಭವತಿ]** ಸಂಭವಿಸುವುದಿಲ್ಲ ?

**ಟೀಕೆ :- 'ರಾಗಾದಿಉದಯಪರತ್ವಾತ್ ಅನಿವೃತ್ತಿಃ ಅತ್ಯಾಗಃ ಹಿಂಸಾಂ ನ ಅತಿವರ್ತತೇ ಯತಃ ರಾತ್ರಿಂ ದಿವಮ್ ಆಹರತಃ - ಭುಂಜಾನಸ್ಯ ಹಿ ಹಿಂಸಾ ಕಥಂ ನ ಸಂಭವತಿ ? - ಅಪಿತು ಸಂಭವತಿ ಏವ'** - ರಾಗಾದಿಭಾವಗಳು ಉತ್ಕಟವಾಗುವ ಕಾರಣ ರಾಗಾದಿಗಳ ಅತ್ಯಾಗತನವು ಹಿಂಸೆಯ ಉಲ್ಲಂಘನ ಮಾಡುವ ಸಾಧ್ಯತೆಯಿಲ್ಲ. (ಎಂದರೆ ಎಲ್ಲಿ ಜೀವಕ್ಕೆ ಉತ್ಕೃಷ್ಟವಾದ ರಾಗಭಾವವಾಗುತ್ತದೆ ಅಲ್ಲಿ ತ್ಯಾಗವಾಗುವ ಸಾಧ್ಯತೆಯಿಲ್ಲ. ರಾಗಭಾವವೇ ಹಿಂಸೆಯಿದೆ.) ಆದುದರಿಂದ ಎಲ್ಲಿಯವರೆಗೆ ರಾಗಾದಿಗಳ ತ್ಯಾಗವಾಗುವುದಿಲ್ಲ. ಅಲ್ಲಿಯವರೆಗೆ ಅಹಿಂಸೆಯಿಲ್ಲ. ಆದರೆ ಹಿಂಸೆಯೇಇದೆ. ಎಂದ ಮೇಲೆ ರಾತ್ರಿ-ಹಗಲಿನ ಭೇದವಿಲ್ಲದೆ ತಿನ್ನುವವರಿಗೆ ಹಿಂಸೆಯೇಕಾಗುವುದಿಲ್ಲ ? ನಿಯಮದಿಂದ ಆಗಿಯೇ ಆಗುತ್ತದೆ. ರಾಗಾದಿಗಳಿರುವುದೇ ವಾಸ್ತವಿಕ ಹಿಂಸೆಯ ಲಕ್ಷಣವಿದೆ.

ಈಗ ಶಂಕಾಕಾರನ ಶಂಕೆಯೇನೆಂಬುದನ್ನು ಹೇಳುತ್ತಾರೆ, -

**ಯದ್ಯೇವಂ ತರ್ಹಿ ದಿವಾ ಕರ್ತವ್ಯೋ ಭೋಜನಸ್ಯ ಪರಿಹಾರಃ ।**
**ಭೋಕ್ತವ್ಯಂ ತು ನಿಶಾಯಾಂ ನೇತ್ಥಂ ನಿತ್ಯಂ ಭವತಿ ಹಿಂಸಾ ॥೧೩೧॥**

**ಅನ್ವಯಾರ್ಥ :-** **[ಯದಿ ಏವಂ ತರ್ಹಿ]** ಒಂದು ವೇಳೆ ಹೀಗಿದ್ದರೆ ಎಂದರೆ ಭೋಜನ ಮಾಡುವಲ್ಲಿ ಯಾವಾಗಲೂ ಹಿಂಸೆಯಿದ್ದರೆ **[ದಿವಾ ಭೋಜನಸ್ಯ]** ಹಗಲು ಹೊತ್ತಿನಲ್ಲಿ ಭೋಜನ ಮಾಡುವ **[ಪರಿಹಾರಃ]** ತ್ಯಾಗ **[ಕರ್ತವ್ಯಃ]** ಮಾಡಬೇಕಾಗುವುದು **[ತು]** ಮತ್ತು **[ನಿಶಿಯಾಂ]** ರಾತ್ರಿಯಲ್ಲಿ **(ಭೋಕ್ತವ್ಯಂ]** ಭೋಜನ ಮಾಡಬೇಕಾಗುವುದು, ಏಕೆಂದರೆ **[ಇತ್ಥಂ]** ಈ ರೀತಿಯಿಂದ **[ಹಿಂಸಾ]** ಹಿಂಸೆಯು **[ನಿತ್ಯಂ]** ಯಾವಾಗಲೂ **[ನ ಭವತಿ]** ಆಗುವುದಿಲ್ಲ.

**ಟೀಕೆ :- 'ಯದಿ ಏವಂ ತರ್ಹಿ ದಿವಾ ಭೋಜನಸ್ಯ ಪರಿಹಾರಃ ಕರ್ತವ್ಯಃ ತು ನಿಶಾಯಾಂ ಭೋಕ್ತವ್ಯಂ ಇತ್ಥಂ ನಿತ್ಯಂ ಹಿಂಸಾ ನ ಭವತಿ'** - ಹಗಲು ಮತ್ತು ರಾತ್ರಿ ಎರಡೂ ಸಮಯದಲ್ಲಿ ಭೋಜನ ಮಾಡುವುದರಿಂದ ಹಿಂಸೆಯಾಗುತ್ತಿದ್ದರೆ ಹಗಲು ಹೊತ್ತಿನಲ್ಲಿ ಭೋಜನ ಮಾಡುವುದರ ತ್ಯಾಗ ಮಾಡಿ ರಾತ್ರಿಯಲ್ಲಿಯೇ ಭೋಜನ ಗ್ರಹಣ ಮಾಡಬೇಕಾಗುವುದು, ಅದರಿಂದ ಯಾವಾಗಲೂ ಹಿಂಸೆಯಾಗುವುದು ತಪ್ಪುತ್ತದೆಯೆಂದು ಯಾರೋ ಒಬ್ಬರು ತರ್ಕಮಾಡುತ್ತಾರೆ. ಹಗಲು ಹೊತ್ತಿನಲ್ಲೇ ಭೋಜನ ಮಾಡಬೇಕು ಮತ್ತು ರಾತ್ರಿಯಲ್ಲಿ ಮಾಡಬಾರದೆಂಬ ನಿಯಮವನ್ನೇ ಏತಕ್ಕಾಗಿ ಮಾಡಿರುವಿರಿ ?

ಆಚಾರ್ಯದೇವರು ಈಗ ಶಂಕಾಕಾರನ ಪ್ರಶ್ನೆಗೆ ಉತ್ತರ ಕೊಡುತ್ತಾರೆ, -

**ನೈವಂ ವಾಸರಭುಕ್ತೇರ್ಭವತಿ ಹಿ ರಾಗೋಽಧಿಕೋ ರಜನಿಭುಕ್ತೌ ।**
**ಅನ್ನಕವಲಸ್ಯ ಭುಕ್ತೇರ್ಭುಕ್ತಾವಿವ ಮಾಂಸಕವಲಯಸ್ಯ ।।೧೩೨।।**

**ಅನ್ವಯಾರ್ಥ ಃ-** [ಏವಂ ನ] ಹೀಗೆ ಇಲ್ಲ. ಏಕೆಂದರೆ **[ಅನ್ನ ಕವಲಯಸ್ಯ]** ಅನ್ನದ ಆಹಾರದ **[ಭುಕ್ತೇಃ]** ಭೋಜನದಿಂದ **[ಮಾಂಸಕವಲಯಸ್ಯ]** ಮಾಂಸದ ಆಹಾರದ **[ಭುಕ್ತೌ ಇವ]** ಭೋಜನದಲ್ಲಿ ಯಾವ ಪ್ರಕಾರ ರಾಗವು ಅಧಿಕವಾಗುತ್ತದೆ ಅದೇ ಪ್ರಕಾರ **[ವಾಸರಭುಕ್ತೇಃ]** ಹಗಲು ಹೊತ್ತಿನ ಭೋಜನದ ಅಪೇಕ್ಷೆಯಿಂದ **[ರಜನಿಭುಕ್ತೌ]** ರಾತ್ರಿಯ ಭೋಜನದಲ್ಲಿ **[ಹಿ]** ನಿಶ್ಚಯದಿಂದ **[ರಾಗಾಧಿಕಃ]** ಅಧಿಕ ರಾಗವು **[ಭವತಿ]** ಆಗುತ್ತದೆ.

**ಟೀಕೆ ಃ- 'ಹಿ ರಜನಿಭುಕ್ತೌ ಅಧಿಕಃ ರಾಗಃ ಭವತಿ ವಾಸರಭುಕ್ತೇ ಏವಂ ನ ಭವತಿ ಯಥಾ ಅನ್ನಕವಲಸ್ಯ ಭುಕ್ತೌ ಮಾಂಸಕವಲಸ್ಯ ಭುಕ್ತೌ ಇವ'** - ನಿಶ್ಚಯದಿಂದ ರಾತ್ರಿ ಭೋಜನ ಮಾಡುವಲ್ಲಿ ಅಧಿಕ ರಾಗಭಾವವಿದೆ ಮತ್ತು ಹಗಲು ಭೋಜನ ಮಾಡುವಲ್ಲಿ ಕಡಿಮೆ ರಾಗಭಾವವಿದೆ. ಹೇಗೆಂದರೆ ಅನ್ನದ ಭೋಜನದಲ್ಲಿ ಕಡಿಮೆ ರಾಗಭಾವವಿದೆ ಮತ್ತು ಮಾಂಸದ ಭೋಜನದಲ್ಲಿ ಅಧಿಕ ರಾಗಭಾವವಿದೆ.

**ಭಾವಾರ್ಥ ಃ-** ಹೊಟ್ಟೆ ತುಂಬುವ ಅಪೇಕ್ಷೆಯಿಂದಂತೂ ಎರಡೂ ಭೋಜನಗಳು ಸಮಾನವಿವೆ. ಆದರೆ ಪ್ರತಿಯೊಂದು ಪ್ರಾಣಿಗೆ ಅನ್ನ, ಹಾಲು, ತುಪ್ಪ ಮೊದಲಾದವುಗಳನ್ನು ತಿನ್ನುವಲ್ಲಿಯಂತೂ ಸಾಧಾರಣ ರಾಗಭಾವವಿದೆ ಎಂದರೆ ಕಡಿಮೆ ಲೋಲುಪತೆಯಿದೆ. ಏಕೆಂದರೆ ಅನ್ನದ ಆಹಾರವಂತೂ ಎಲ್ಲ ಮನುಷ್ಯರಿಗೆ ಸ್ವಾಭಾವಿಕವಾಗಿಯೇ ಇರುವುದರಿಂದ ಪ್ರಾಯಶಃ ಅಧಿಕ ಸಂಖ್ಯೆಯ ಜನರು ಅನ್ನದ ಭೋಜನವನ್ನೇ ಮಾಡುತ್ತಾರೆ. ಇನ್ನು ಮಾಂಸದ ಭೋಜನದಲ್ಲಿ ಕಾಮಾದಿಗಳ ಅಪೇಕ್ಷೆಯಿಂದ ಅಥವಾ ಶರೀರದ ಸ್ನೇಹ-ಮೋಹದ ಅಪೇಕ್ಷೆಯಿಂದ ವಿಶೇಷ ರಾಗಭಾವವಿರುತ್ತದೆ. ಏಕೆಂದರೆ ಮಾಂಸದ ಭೋಜನವು ಎಲ್ಲ ಮನುಷ್ಯರಿಗೆ ಸ್ವಾಭಾವಿಕವೂ - ಪ್ರಾಕೃತಿಕವೂ ಆದ ಆಹಾರವಲ್ಲ. ಅದೇ ಪ್ರಕಾರ ಹಗಲಿನ ಭೋಜನದಲ್ಲಿ ಪ್ರಾಯಶಃ ಎಲ್ಲ ಪ್ರಾಣಿಗಳಿಗೆ ಸಾಧಾರಣ ರಾಗಭಾವವಿದೆ, ಏಕೆಂದರೆ ಹಗಲಿನ ಭೋಜನವು ಎಲ್ಲ ಪ್ರಾಣಿಗಳಿಗೆ ಇರುತ್ತದೆ, ಮತ್ತು ರಾತ್ರಿಯ ಭೋಜನದಲ್ಲಿ ಕಾಮಾದಿಗಳ ಅಪೇಕ್ಷೆಯಿಂದ ಹಾಗೂ ಶರೀರದಲ್ಲಿ ಅಧಿಕ ಸ್ನೇಹವಿರುವ ಅಪೇಕ್ಷೆಯಿಂದ ಹೆಚ್ಚು ರಾಗಭಾವವಿರುವುದರಿಂದ ರಾತ್ರಿಯ ಭೋಜನವು ತೀರ ಕಡಿಮೆ ಮನುಷ್ಯರಿಗೆ ಇರುತ್ತದೆಯೆಂಬುದು ಸ್ವಾಭಾವಿಕವಾದ ಮಾತಿದೆ. ಏಕೆಂದರೆ ಹಗಲಿನಲ್ಲಿ ಭೋಜನ ಮಾಡುವುದರಿಂದ ಎಷ್ಟು ಒಳ್ಳೆಯ ರೀತಿಯಿಂದ ಪಚನವಾಗುತ್ತದೆ ಮತ್ತು ಆರೋಗ್ಯವು ಎಷ್ಟು ಒಳ್ಳೆಯದಾಗಿರುತ್ತದೆ ಅಷ್ಟು ರಾತ್ರಿಯಲ್ಲಿ ತಿನ್ನುವುದರಿಂದ ಎಂದೂ ಇರುವ ಸಾಧ್ಯತೆಯಿಲ್ಲ. ಆದುದರಿಂದ ರಾತ್ರಿ ಭೋಜನದ ತ್ಯಾಗ ಮಾಡಬೇಕಾಗುವುದು, ಮತ್ತು ಹಗಲಿನಲ್ಲಿಯೇ ಭೋಜನ ಮಾಡಬೇಕಾಗುವುದು. ಈ ಪ್ರಕಾರ ಶಂಕಾಕಾರನ ಶಂಕೆಯ ನಿರಾಕರಣೆಯಾಯಿತು.

ಈಗ ರಾತ್ರಿ ಭೋಜನದಲ್ಲಿ ದ್ರವ್ಯಹಿಂಸೆಯಾಗುತ್ತದೆಯೆಂದು ಹೇಳುತ್ತಾರೆ, -

**ಅರ್ಕಾಲೋಕೇನ ವಿನಾ ಭುಂಜಾನಃ ಪರಿಹರೇತ್ ಕಥಂ ಹಿಂಸಾಮ್ ।**
**ಅಪಿ ಬೋಧಿತಃ ಪ್ರದೀಪೇ ಭೋಜ್ಯಜುಷಾಂ ಸೂಕ್ಷ್ಮ ಜೀವಾನಾಮ್।।೧೩೩।।**

**ಅನ್ವಯಾರ್ಥ ಃ-** ಮತ್ತು **[ಅರ್ಕಾಲೋಕೇನ ವಿನಾ]** ಸೂರ್ಯನ ಪ್ರಕಾಶವಿಲ್ಲದ ರಾತ್ರಿಯಲ್ಲಿ **[ಭುಂಜಾನಃ]** ಭೋಜನ ಮಾಡುವಂಥ ಮನುಷ್ಯನು **[ಬೋಧಿತಃ ಪ್ರದೀಪೇ]** ಉರಿಯುತ್ತಿರುವ ದೀಪದ ಬೆಳಕಿನಲ್ಲಿ **[ಅಪಿ]** ಕೂಡ **[ಭೋಜ್ಯಜುಷಾಂ]** ಭೋಜನದಲ್ಲಿ ಬೆರೆತಿರುವ **[ಸೂಕ್ಷ್ಮ ಜೀವಾನಾಮ್]** ಸೂಕ್ಷ್ಮ ಜೀವಿಗಳ **[ಹಿಂಸಾ]** ಹಿಂಸೆಯನ್ನು

**[ಕಥಂ]** ಯಾವ ಪ್ರಕಾರ **[ಪರಿಹರೇತ್]** ನಿವಾರಿಸುವ ಸಾಧ್ಯತೆಯಿದೆ ?

**ಟೀಕೆ :- 'ಬೋಧಿತ ಪ್ರದೀಪೇ ಅಪಿ ಅರ್ಕಾಲೋಕೇನ ವಿನಾ ಭುಂಜಾನಃ ಭೋಜ್ಯಜುಷಾಂ ಸೂಕ್ಷ್ಮ ಜಂತೂನಾವ್ ಹಿಂಸಾಂ ಕಥಂ ಪರಿಹರೇತ್'** - ರಾತ್ರಿಯಲ್ಲಿ ದೀವಿಗೆಯನ್ನು ಉರಿಸಿದರೂ ಕೂಡಸೂರ್ಯನ ಪ್ರಕಾಶವಿಲ್ಲದ ರಾತ್ರಿಯಲ್ಲಿ ಭೋಜನ ಮಾಡುವಂಥ ಪುರುಷನು ಭೋಜನದಲ್ಲಿ ಪ್ರೀತಿಯಿಡುವಂಥ ಸೂಕ್ಷ್ಮ ಜಂತು ಮೊದಲಾದವುಗಳ ಹಿಂಸೆಯಿಂದ ಉಳಿಯುವ ಸಾಧ್ಯತೆಯಿಲ್ಲ.

**ಭಾವಾರ್ಥ :-** ರಾತ್ರಿಯಲ್ಲಿ ದೀವಿಗೆಯನ್ನು ಉರಿಸದೆ ಭೋಜನ ಮಾಡುವಂಥಪುರುಷರ ಆಹಾರದಲ್ಲಂತೂ ಹಲ್ಲಿ-ಜಿರಳೆಯಂಥ ದೊಡ್ಡ ದೊಡ್ಡ ಜೀವಗಳು ಬಿದ್ದುಕೊಂಡಿದ್ದರೂ ಕೂಡ ಅವುಗಳ ಸುಳಿವು ಬರುವುದಿಲ್ಲ ಮತ್ತು ಒಂದು ವೇಳೆ ದೀವಿಗೆಯನ್ನು ಉರಿಸಿ ಎಚ್ಚರಪೂರ್ವಕವಾಗಿ ವರ್ತಿಸಿದರೂ ಕೂಡ ಅವನ ಭೋಜನದಲ್ಲಿದೀವಿಗೆಯ ಸಂಬಂಧದಿಂದ ಹಾಗೂ ಭೋಜ್ಯಪದಾರ್ಥಗಳ ಸಂಬಂಧದಿಂದ ಬರುವಂಥ ಚಿಕ್ಕ ಚಿಕ್ಕ ದೀಪದ ಹುಳು ಮತ್ತುಸೊಳ್ಳೆ ಮೊದಲಾದವು ಅವಶ್ಯವಾಗಿ ಬೀಳುತ್ತವೆ ಹಾಗೂ ಅವುಗಳ ಹಿಂಸೆಯು ನಿಶ್ಚಿತವಾಗಿ ಸಂಭವಿಸುತ್ತದೆ. ಇದರಿಂದ ರಾತ್ರಿ ಭೋಜನ ಮಾಡುವ ಮನುಷ್ಯನು ದ್ರವ್ಯ ಮತ್ತು ಭಾವ ಇವೆರಡೂ ಪ್ರಕಾರದ ಹಿಂಸೆಗಳಿಂದ ಉಳಿಯುವ ಸಾಧ್ಯತೆಯಿಲ್ಲವೆಂಬುದು ಸಿದ್ಧವಾಗುತ್ತದೆ. ಆದುದರಿಂದ ಅಹಿಂಸಾವ್ರತವನ್ನು ಪಾಲನ ಮಾಡುವಂಥವರು ರಾತ್ರಿ ಭೋಜನದ ತ್ಯಾಗವನ್ನು ಅವಶ್ಯವಾಗಿ ಮಾಡಬೇಕಾಗುವುದು. ಯಾವ ಮನುಷ್ಯರು ರಾತ್ರಿಯಲ್ಲಿ ಉದ್ದು ಮೊದಲಾದವುಗಳ ವಡೆ ಹಾಗೂ ಕಜ್ಜಾಯ ಮೊದಲಾದವುಗಳನ್ನು ತರಿಸಿ ಅಥವಾ ಸಿದ್ಧಪಡಿಸಿ ತಿನ್ನುತ್ತಾರೆ ಅವರು ಕೂಡ ಎರಡೂ ಪ್ರಕಾರದ ಹಿಂಸೆ ಮಾಡುತ್ತಾರೆ.

ಈಗ ರಾತ್ರಿ ಭೋಜನದ ತ್ಯಾಗಿಯು ಅಹಿಂಸೆಯ ಪಾಲನೆ ಮಾಡುತ್ತಾನೆಂದು ಹೇಳುತ್ತಾರೆ, -

ಕಿಂ ವಾ ಬಹುಪ್ರಲಾಪಿತೈರಿತಿ ಸಿದ್ಧಂ ಯೋ ಮನೋವಚನಕಾಯೈಃ ।
ಪರಿಹರತಿ ರಾತ್ರಿಭುಕ್ತಿಂ ಸತತಮಹಿಂಸಾಂ ಸ ಪಾಲಯತಿ ॥೧೩೪॥

**ಅನ್ವಯಾರ್ಥ :-** **[ವಾ]** ಅಥವಾ **[ಬಹುಪ್ರಲಾಪಿತೈಃ ಕಿಂ]** ಹೆಚ್ಚು ಪ್ರಳಾಪದಿಂದ ಏನು ? **[ಯಃ]** ಯಾವ ಪುರುಷನು **[ಮನೋವಚನಕಾಯೈಃ)** ಮನ, ವಚನ,ಕಾಯದಿಂದ **[ರಾತ್ರಿ ಭುಕ್ತಿಂ]** ರಾತ್ರಿ ಭೋಜನದ **[ಪರಿಹರತಿ]** ತ್ಯಾಗ ಮಾಡುತ್ತಾನೆ **[ಸಃ]** ಅವನು **[ಸತತಮ್]** ಯಾವಾಗಲೂ **[ಅಹಿಂಸಾಂ]** ಅಹಿಂಸೆಯ **[ಪಾಲಯತಿ]** ಪಾಲನೆ ಮಾಡುತ್ತಾನೆ **[ಇತಿ ಸಿದ್ಧಮ್]** ಎಂದು ಸಿದ್ಧವಾಯಿತು.

**ಟೀಕೆ :- 'ವಾ ಬಹುಪ್ರಲಾಪಿತೈಃ ಕಿಂ ಇತಿ ಸಿದ್ಧಂ ಯಃ ಮನೋವಚನಕಾಯೈಃ ರಾತ್ರಿಭುಕ್ತಿಂ ಪರಿಹರತಿ ಸ ಸತತಂ ಅಹಿಂಸಾಂ ಪಾಲಯತಿ'** - ಅಥವಾ ಹೆಚ್ಚು ಹೇಳುವುದರಿಂದೇನು ಪ್ರಯೋಜನ ? ಯಾವ ಮನುಷ್ಯನು ಮನ, ವಚನ, ಕಾಯದಿಂದ ರಾತ್ರಿ ಭೋಜನದ ತ್ಯಾಗ ಮಾಡುತ್ತಾನೆ ಅವನು ನಿರಂತರ ಅಹಿಂಸಾವ್ರತದ ಪಾಲನೆ ಮಾಡುತ್ತಾನೆಂಬ ಮಾತು ಸಿದ್ಧವಾಯಿತು.

**ಭಾವಾರ್ಥ :-** ರಾತ್ರಿ ಭೋಜನ ಮಾಡುವಲ್ಲಿ ಮತ್ತು ರಾತ್ರಿಯೊಳಗೆ ಭೋಜನ ಸಿದ್ಧಪಡಿಸುವಲ್ಲಿ ಯಾವಾಗಲೂ ಹಿಂಸೆಯಿದೆ. ರಾತ್ರಿಯಲ್ಲಿ ಭೋಜನ ಮಾಡುವುದರ ಅಪೇಕ್ಷೆಯಿಂದ ರಾತ್ರಿಯಲ್ಲಿ ಭೋಜನ ಸಿದ್ಧಪಡಿಸುವುದರಲ್ಲಿ ಬಹಳಷ್ಟು ಹೆಚ್ಚು ಹಿಂಸೆಯಾಗುತ್ತಿರುವುದರಿಂದ ಅಹಿಂಸಾ ವ್ರತದ ಪಾಲನೆ ಮಾಡುವಂಥವರು ಮೊದಲೇ ಇದರ (ರಾತ್ರಿಯಲ್ಲಿ ಮಾಡುವುದರ) ತ್ಯಾಗ ಮಾಡಬೇಕಾಗುವುದು. ಮುಖ್ಯರೂಪದಿಂದ

ಮಾರುಕಟ್ಟೆಯಲ್ಲಿಸಿದ್ಧಪಡಿಸಿರುವ ಪದಾರ್ಥಗಳನ್ನಂತೂ ಸಂಪೂರ್ಣವಾಗಿ ತ್ಯಾಗ ಮಾಡಿ ಬಿಡಬೇಕಾಗುವುದು. ಆದರೆ ಒಂದು ವೇಳೆ ಪಾಕ್ಷಿಕ ಶ್ರಾವಕನು ಯಾವುದೇ ಕಾರಣವಶದಿಂದ ಸಂಪೂರ್ಣ ತ್ಯಾಗ ಮಾಡುವ ಸಾಧ್ಯತೆಯಿಲ್ಲದಿದ್ದರೆ ನೀರು, ಹಣ್ಣು-ಹಂಪಲು, ಎಲೆ-ಅಡಿಕೆ, ಏಲಕ್ಕಿ ಇವೇ ಮೊದಲಾದ ವಸ್ತುಗಳನ್ನು ಎಂದರೆ ರಾತ್ರಿಯಲ್ಲಿ ಸ್ವಲ್ಪ ಕೂಡ ಆರಂಭ ಮಾಡಬೇಕಾಗದಂಥ ವಸ್ತುಗಳನ್ನು ಬೇಕಾದರೆ ಗ್ರಹಣ ಮಾಡಬಹುದಾಗಿದೆ, ಆದರೆ ಯಾವಾಗ ತಮಗೆ ನೀರಿಲ್ಲದೆ ನಿರ್ವಾಹವು ಅಶಕ್ಯವೆನಿಸುವುದೋ ಆಗ ಮಾತ್ರ ಗ್ರಹಣ ಮಾಡಬೇಕು. (ವಾಸ್ತವಿಕವಾಗಿ ರಾತ್ರಿ ಭೋಜನದ ತ್ಯಾಗ ಮಾಡಿದಲ್ಲದೆ ಅಹಿಂಸಾವ್ರತದ ಸಿದ್ಧಿಯೇ ಆಗದಿರುವುದರಿಂದ ಕೆಲವು ಆಚಾರ್ಯರುಗಳಂತೂ ಇದನ್ನು ಅಹಿಂಸಾಣುವ್ರತದಲ್ಲಿ ಸಮಾವೇಶ ಮಾಡುತ್ತಾರೆ ಮತ್ತುಕೆಲವರು ಇದನ್ನು ಬೇರೆಯಾಗಿಯೇ ಆರನೆಯ ಅಣುವ್ರತವೆಂದು ಹೇಳುತ್ತಾರೆ.)

ರತ್ನತ್ರಯಾತ್ಮಕ ಮಾರ್ಗದಲ್ಲಿ ಪ್ರಯತ್ನಶೀಲನಿರುವವನು ಶೀಘ್ರಮೋಕ್ಷ ಪಡೆಯುತ್ತಾನೆಂದು ಈಗ ಹೇಳುತ್ತಾರೆ,-

ಇತ್ಯತ್ರ ತ್ರಿತಯಾತ್ಮನಿ ಮಾರ್ಗೇ ಮೋಕ್ಷಸ್ಯ ಯೇ ಸ್ವಹಿತಕಾಮಾಃ ।
ಅನುಪರತಂ ಪ್ರಯತಂತೇ ಪ್ರಯಾಂತಿ ತೇ ಮುಕ್ತಿಮಚಿರೇಣ ॥೧೩೫॥

**ಅನ್ವಯಾರ್ಥ :-** **[ಇತಿ]** ಈ ಪ್ರಕಾರ **[ಅತ್ರ]** ಈ ಲೋಕದಲ್ಲಿ **[ಯೇ]** ಯಾರು **[ಸ್ವಹಿತಕಾಮಾಃ]** ತಮ್ಮ ಹಿತದ ಇಚ್ಛುಕರಿದ್ದಾರೆ **[ಮೋಕ್ಷಸ್ಯ]** ಮೋಕ್ಷದ **[ತ್ರಿತಯಾತ್ಮನಿ]** ರತ್ನತ್ರಯಾತ್ಮಕವಾದ **[ಮಾರ್ಗೇ]** ಮಾರ್ಗದಲ್ಲಿ **[ಅನುಪರತಂ]** ಯಾವಾಗಲೂ ತಡೆಯಿಲ್ಲದೆ **[ಪ್ರಯತಂತೇ]** ಪ್ರಯತ್ನ ಮಾಡುತ್ತಾರೆ **[ತೇ]** ಆ ಪುರುಷರು **[ಮುಕ್ತಿಮ್]** ಮೋಕ್ಷದಲ್ಲಿ **[ಅಚಿರೇಣ]** ಶೀಘ್ರವಾಗಿಯೇ **[ಪ್ರಯಾಂತಿ]** ಗಮನ ಮಾಡುತ್ತಾರೆ.

**ಟೀಕೆ :- 'ಯೇ (ಪುರುಷಾಃ) ಸ್ವಹಿತಕಾಮಾಃ ಇತ್ಯತ್ರ ತ್ರಿತಯಾತ್ಮನಿ ಮೋಕ್ಷಮಾರ್ಗೇ ಅನುಪರತಂ ಪ್ರಯತಂತೇ ತೇ (ಪುರುಷಾಃ) ಅಚಿರೇಣ ಮುಕ್ತಿಂ ಪ್ರಯಾಂತಿ'** - ಯಾವ ಜೀವನು ತನ್ನ ಹಿತದ ಇಚ್ಛೆ ಮಾಡುತ್ತ ಅದೇ ರೀತಿಯಿಂದ ರತ್ನತ್ರಯರೂಪವಾದ ಮೋಕ್ಷ ಮಾರ್ಗದಲ್ಲಿ ಯಾವಾಗಲೂ ಪ್ರಯತ್ನ ಮಾಡುತ್ತಿರುತ್ತಾನೆ ಆ ಜೀವನು ಶೀಘ್ರವಾಗಿಯೇ ಮೋಕ್ಷವನ್ನು ಪ್ರಾಪ್ತ ಮಾಡಿಕೊಳ್ಳುತ್ತಾನೆ. ಸಮಸ್ತ ಪ್ರಾಣಿಕೋಟಿಯ ಹಿತವು ಮೋಕ್ಷವಿದ್ದು, ಅದನ್ನು ಹೊರತುಪಡಿಸಿ ಸಂಸಾರದಲ್ಲಿ ಬೇರೆಲ್ಲಿಯೂ ಆನಂದವಿಲ್ಲ. ಆದುದರಿಂದ ಯಾವ ಜೀವರುಗಳು ಮೋಕ್ಷದಲ್ಲಿ ಹೋಗಬೇಕೆಂಬ ಇಚ್ಛೆಯುಳ್ಳವರಿದ್ದಾರೆ ಅವರು ಯಾವಾಗಲೂ ಸಮ್ಯಗ್ದರ್ಶನ, ಸಮ್ಯಗ್ಜ್ಞಾನ, ಸಮ್ಯಕ್ಚಾರಿತ್ರರೂಪವಾದ ಮೋಕ್ಷ ಮಾರ್ಗದಲ್ಲಿ ನಿರಂತರ ಪ್ರಯತ್ನ ಮಾಡುತ್ತಿರಬೇಕಾಗುವುದು. ಮತ್ತು ಯಾವ ಜೀವರುಗಳು ಕೇವಲ ಮೋಕ್ಷದ ಚರ್ಚೆ ಮಾಡುತ್ತಾರೆ - ಮಾತುಕತೆ ಮಾಡುತ್ತಾರೆ, ಆದರೆ ಮೋಕ್ಷ ಮಾರ್ಗದ ಅನ್ವೇಷಣೆ ಮಾಡದಿದ್ದರೆ ಮತ್ತು ಅದರ ಅನುಸಾರವಾಗಿ ನಡೆಯುತ್ತ ಪ್ರಯತ್ನ ಮಾಡದಿದ್ದರೆ ಅವರು ಎಂದೂ ಮೋಕ್ಷವನ್ನು ಪ್ರಾಪ್ತ ಮಾಡಿಕೊಳ್ಳುವ ಸಾಧ್ಯತೆಯಿಲ್ಲ. ಇನ್ನು ಯಾವ ಜೀವರುಗಳು ಮೋಕ್ಷದ ಮಾರ್ಗದಲ್ಲಿ ನಡೆಯುತ್ತಾರೆ ಎಂದರೆ ಸಮ್ಯಗ್ದರ್ಶನ ಪ್ರಾಪ್ತ ಮಾಡಿಕೊಳ್ಳುತ್ತಾರೆ, ಆ ಜೀವರುಗಳು ಕೂಡಲೆ ಪರಮ ಪವಿತ್ರವಾದ ಮೋಕ್ಷದಲ್ಲಿ ತಲುಪಿಬಿಡುತ್ತಾರೆ. ಈ ಪ್ರಕಾರ (ತತ್ತ್ವಜ್ಞಾನಪೂರ್ವಕ) ಐದೂ ಪಾಪಗಳ ತ್ಯಾಗದೊಡನೆ ಐದು ಅಣುವ್ರತ ಹಾಗೂ ರಾತ್ರಿ ಭೋಜನ ತ್ಯಾಗದ ವರ್ಣನೆ ಮಾಡಿ, ಈಗ ಸಪ್ತ ಶೀಲ ವ್ರತಗಳ ವರ್ಣನೆ ಮಾಡುತ್ತಾರೆ. ಏಕೆಂದರೆ ಆ ಏಳು ಶೀಲ ವ್ರತಗಳು ಐದು ಅಣುವ್ರತಗಳ ರಕ್ಷಣೆ ಮಾಡುವ ಸಲುವಾಗಿ ನಗರದ ಕೋಟೆಯ ಸಮಾನವಿವೆ. ಹೇಗೆ ಕೋಟೆಯು ನಗರದ ರಕ್ಷಣೆ ಮಾಡುತ್ತದೆ ಹಾಗೆಯೇ ಶೀಲ ವ್ರತಗಳು ಐದು ಅಣುವ್ರತಗಳ ರಕ್ಷಣೆ ಮಾಡುತ್ತವೆ.

ಈಗ ಆಚಾರ್ಯದೇವರು ಸಪ್ತ ಶೀಲವ್ರತಗಳನ್ನು ಹೇಳುತ್ತಾರೆ, -

ಪರಿಧಯ ಇವ ನಗರಾಣಿ ವ್ರತಾನಿ ಕಿಲ ಪಾಲಯಂತಿ ಶೀಲಾನಿ ।
ವ್ರತಪಾಲನಾಯ ತಸ್ಮಾಚ್ಛೀಲಾನ್ಯಪಿ ಪಾಲನೀಯಾನಿ ॥೧೩೬॥

**ಅನ್ವಯಾರ್ಥ :- [ಕಿಲ]** ನಿಶ್ಚಯದಿಂದ **[ಪರಿಧಯಃ ಇವ]** ಯಾವ ಪ್ರಕಾರ ಕೋಟೆ, ದುರ್ಗಗಳು **[ನಗರಾಣಿ]** ನಗರಗಳ ರಕ್ಷಣೆ ಮಾಡುತ್ತವೆ, ಅದೇ ಪ್ರಕಾರ **[ಶೀಲಾನಿ]** ಮೂರು ಗುಣವ್ರತ ಮತ್ತು ನಾಲ್ಕು ಶಿಕ್ಷಾವ್ರತ ಇವು ಏಳು ಶೀಲಗಳು **[ವ್ರತಾನಿ]** ಐದೂ ಅಣುವ್ರತಗಳ **[ಪಾಲಯಂತಿ]** ಪಾಲನೆ ಎಂದರೆ ರಕ್ಷಣೆ ಮಾಡುತ್ತವೆ. **[ತಸ್ಮಾತ್]** ಆದುದರಿಂದ **[ವ್ರತ ಪಾಲನಾಯ]** ವ್ರತಗಳ ಪಾಲನೆ ಮಾಡುವ ಸಲುವಾಗಿ **[ಶೀಲಾನಿ ಅಪಿ]** ಏಳು ಶೀಲ ವ್ರತಗಳನ್ನು ಕೂಡ **[ಪಾಲನೀಯಾನಿ]** ಪಾಲನೆ ಮಾಡಬೇಕಾಗುವುದು.

**ಟೀಕೆ :- 'ಕಿಲ ಶೀಲಾನಿ ವ್ರತಾನಿ ಪಾಲಯಂತಿ ಪರಿಧಯಃ ನಗರಾಣಿ ಇವ ತಸ್ಮಾತ್ ವ್ರತಪಾಲನಾಯ ಶೀಲಾನಿ ಅಪಿ ಪಾಲನೀಯಾನಿ' -** ನಿಶ್ಚಯದಿಂದ ಯಾವ ಏಳು ಶೀಲವ್ರತಗಳಿವೆ ಅವು ಐದೂ ಅಣುವ್ರತಗಳ ರಕ್ಷಣೆ ಮಾಡುತ್ತವೆ. ಯಾವ ಪ್ರಕಾರ ಕೋಟೆಯು ನಗರದ ರಕ್ಷಣೆ ಮಾಡುತ್ತದೆ ಹಾಗೆಯೇ ಅವು ಮಾಡುತ್ತವೆ. ಆದುದರಿಂದ ಐದು ಅಣುವ್ರತಗಳ ಪಾಲನೆ ಮಾಡುವ ಸಲುವಾಗಿ ಮೂರು ಗುಣವ್ರತ ಮತ್ತು ನಾಲ್ಕು ಶಿಕ್ಷಾವ್ರತ ಈ ಪ್ರಕಾರ ಇವು ಏಳು ಶೀಲ ವ್ರತಗಳನ್ನು ಅವಶ್ಯವಾಗಿ ಪಾಲನೆ ಮಾಡಲೇಬೇಕಾಗುವುದು. ಈಗ ಅವುಗಳ ವರ್ಣನೆ ಮಾಡುವ ಸಲುವಾಗಿ ಮೊದಲು ಅವುಗಳ ಹೆಸರು ಹೇಳುತ್ತಾರೆ. ೧) ದಿಗ್ವ್ರತ, ೨)ದೇಶವ್ರತ, ೩) ಅನರ್ಥದಂಡತ್ಯಾಗವ್ರತ ಇವು ಮೂರು ಗುಣವ್ರತಗಳ ಹೆಸರುಗಳಿದ್ದು ೧) ಸಾಮಾಯಿಕ, ೨) ಪ್ರೋಷಧೋಪವಾಸ, ೩) ಭೋಗೋಪಭೋಗಪರಿಮಾಣವ್ರತ, ೪) ವೈಯಾವೃತ್ಯ ಇವು ನಾಲ್ಕು ಶಿಕ್ಷಾವ್ರತಗಳ ಹೆಸರುಗಳಿವೆ. ಈ ಪ್ರಕಾರ ಇವು ಏಳು ಶೀಲವ್ರತಗಳಿವೆ.

ಈಗ ಮೊದಲು ದಿಗ್ವ್ರತ ನಾಮದ ಗುಣವ್ರತದ ಸ್ವರೂಪ ಹೇಳುತ್ತಾರೆ, -

ಪ್ರವಿಧಾಯ ಸುಪ್ರಸಿದ್ಧೈರ್ಮರ್ಯಾದಾಂ ಸರ್ವತೋಪ್ಯಭಿಜ್ಞಾನೈಃ ।
ಪ್ರಾಚ್ಯಾದಿಭ್ಯೋ ದಿಗ್ಭ್ಯಃ ಕರ್ತವ್ಯಾ ವಿರತಿರವಿಚಲಿತಾ ॥೧೩೭॥

**ಅನ್ವಯಾರ್ಥ :- [ಸುಪ್ರಸಿದ್ಧೈಃ]** ಒಳ್ಳೆಯ ರೀತಿಯಿಂದ ಪ್ರಸಿದ್ಧವಿರುವ **[ಅಭಿಜ್ಞಾನೈಃ]** ಗ್ರಾಮ, ನದೀ, ಪರ್ವತ ಮೊದಲಾದ ಭಿನ್ನ ಭಿನ್ನ ಲಕ್ಷಣಗಳಿಂದ **[ಸರ್ವತಃ]** ಸಮಸ್ತ ದಿಶೆಗಳಲ್ಲಿ **[ಮರ್ಯಾದಾಂ]** ಮರ್ಯಾದೆ **[ಪ್ರವಿಧಾಯ]** ಮಾಡಿ **[ಪ್ರಾಚ್ಯಾದಿಭ್ಯಃ]** ಪೂರ್ವ ಮೊದಲಾದ **[ದಿಗ್ಭ್ಯಃ]** ದಿಶೆಗಳಲ್ಲಿ **[ಅವಿಚಲಿತಾ ವಿರತಿಃ]** ಗಮನ ಮಾಡದಿರುವ ಪ್ರತಿಜ್ಞೆಯನ್ನು **[ಕರ್ತವ್ಯಾ]** ಮಾಡಬೇಕಾಗುವುದು.

**ಟೀಕೆ :- 'ಸುಪ್ರಸಿದ್ಧೈಃ ಅಭಿಜ್ಞಾನೈಃಸರ್ವತಃ ಮರ್ಯಾದಾಂ ಪ್ರವಿಧಾಯ ಪ್ರಾಚ್ಯಾದಿಭ್ಯಃ ದಿಗ್ಭ್ಯಃ ಅವಿಚಲಿತಾ ವಿರತಿಃ ಕರ್ತವ್ಯಾ'-** ಪ್ರಸಿದ್ಧವಾದ ಹಾಗೂ ಸರ್ವವಿದಿತವಾದ ಮಹಾನ ಪರ್ವತ, ನಗರ ಅಥವಾ ಸಮುದ್ರ ಮೊದಲಾದವುಗಳಿಂದ ಸೀಮೆಯನ್ನು ಕಟ್ಟಿಕೊಂಡು ಇಡೀ ಜೀವನ ಪರ್ಯಂತ ನಾಲ್ಕು ದಿಶೆಗಳು, ನಾಲ್ಕು ವಿದಿಶೆಗಳು ಮತ್ತು ಮೇಲೆ ಹಾಗೂ ಕೆಳಗೆ ಈ ಪ್ರಕಾರ ಹತ್ತೂ ದಿಶೆಗಳಲ್ಲಿ ಹೋಗುವ ಪ್ರತಿಜ್ಞೆಯನ್ನು ಮಾಡಿಕೊಳ್ಳಬೇಕಾಗುವುದು. ಅದರ ನಂತರ ಆ ಕಟ್ಟಿಕೊಂಡ ಮರ್ಯಾದೆಯಿಂದ ಹೊರಗೆ ಇಡೀ ಜೀವನದ ತುಂಬೆಲ್ಲ ಹೋಗದಿರುವುದನ್ನು ದಿಗ್ವ್ರತವೆಂದು ಹೇಳುತ್ತಾರೆ. ಇಲ್ಲಿ ಪರ್ವತ ಮೊದಲಾದ ಅಥವಾ ವಿಮಾನದಲ್ಲಿಕುಳಿತುಕೊಂಡು ಮೇಲೆ ಹೋಗುವ ಅಪೇಕ್ಷೆಯಿಂದ ಊರ್ದ್ವ್ವದಿಶೆಯ ಮತ್ತು ಬಾವಿ ಅಥವಾ ಸಮುದ್ರ ಮೊದಲಾದವುಗಳಲ್ಲಿ ಪ್ರವೇಶಿಸುವ ಅಪೇಕ್ಷೆಯಿಂದ ಅಧೋದಿಶೆಯ ಗ್ರಹಣ ಮಾಡಲಾಗಿದೆ.

ಈಗ ದಿಗ್ವ್ರತವನ್ನು ಪಾಲನೆ ಮಾಡುವುದರ ಫಲ ಹೇಳುತ್ತಾರೆ, -

**ಇತಿ ನಿಯಮಿತದಿಗ್ಭಾಗೇ ಪ್ರವರ್ತತೇ ಯಸ್ತತೋ ಬಹಿಸ್ತಸ್ಯ।**
**ಸಕಲಾಸಂಯಮವಿರಹಾದ್ಭವತ್ಯಹಿಂಸಾವ್ರತಂ ಪೂರ್ಣಮ್ ॥೧೩೮॥**

**ಅನ್ವಯಾರ್ಥ :-** **[ಯಃ]** ಯಾವನು **[ಇತಿ]** ಈ ಪ್ರಕಾರ **[ನಿಯಮಿತದಿಗ್ಭಾಗೇ]** ಮರ್ಯಾದೆ ಮಾಡಲಾದ ದಿಶೆಗಳ ಒಳಗೆ **[ಪ್ರವರ್ತತೇ]** ಇರುತ್ತಾನೆ **[ತಸ್ಯ]** ಆ ಪುರುಷನಿಗೆ **[ತತಃ]** ಆ ಕ್ಷೇತ್ರದ **[ಬಹಿಃ]** ಹೊರಗಿನ **[ಸಕಲಾಸಂಯಮವಿರಹಾತ್]** ಸಮಸ್ತ ಅಸಂಯಮದ ತ್ಯಾಗದ ಕಾರಣ **[ಪೂರ್ಣಂ]** ಪರಿಪೂರ್ಣ **[ಅಹಿಂಸಾ ವ್ರತಂ ಭವತಿ]** ಅಹಿಂಸಾವ್ರತವಾಗುತ್ತದೆ.

**ಟೀಕೆ :- 'ಯಃ (ಪುರುಷಃ) ಇತಿ ನಿಯಮಿತ ದಿಗ್ಭಾಗೇ ಪ್ರವರ್ತತೇ ತಸ್ಯ ತತಃ ಬಹಿಃ ಸಕಲಾಸಂಯಮವಿರಹಾತ್ ಪೂರ್ಣಂ ಅಹಿಂಸಾವ್ರತಂ ಭವತಿ'** - ಯಾವ ಮನುಷ್ಯನು ಈ ಪ್ರಕಾರ ಮರ್ಯಾದಿತವಾದ ಹತ್ತೂ ದಿಶೆಗಳ ಕ್ಷೇತ್ರದ ಒಳಗೇ ತನ್ನ ಸಮಸ್ತ ಕಾರ್ಯವನ್ನು ಮಾಡುತ್ತಾನೆ. ಅವನಿಗೆ ಆ ಕ್ಷೇತ್ರಗಳ ಹೊರಗಿನ ಸಮಸ್ತ ಅಸಂಯಮದ ತ್ಯಾಗವಾಗುವ ಕಾರಣ ಸಂಪೂರ್ಣ ಅಹಿಂಸಾವ್ರತವು - ಮಹಾವ್ರತವು ಪಾಲಿಸಲ್ಪಡುವುದರಿಂದ ದಿಗ್ವ್ರತದ ಪಾಲನೆ ಮಾಡುವುದರಿಂದ ಅಹಿಂಸಾವ್ರತವು ಪುಷ್ಟವಾಗುತ್ತದೆ.

ಈಗ ದೇಶವ್ರತ ನಾಮದ ಗುಣವ್ರತದಸ್ವರೂಪ ಹೇಳುತ್ತಾರೆ, -

**ತತ್ರಾಪಿ ಚ ಪರಿಮಾಣಂ ಗ್ರಾಮಾಪಣಭವನಪಾಟಕಾದೀನಾಮ್ ।**
**ಪ್ರವಿಧಾಯ ನಿಯತಕಾಲಂ ಕರಣೀಯಂ ವಿರಮಣಂ ದೇಶಾತ್ ॥೧೩೯॥**

**ಅನ್ವಯಾರ್ಥ :-** **[ಚ]** ಮತ್ತು **[ತತ್ರ ಅಪಿ]** ಆ ದಿಗ್ವ್ರತದಲ್ಲಿ ಕೂಡ **[ಗ್ರಾಮಾಪಣಭವನಪಾಟಕಾದೀನಾಮ್]** ಗ್ರಾಮ, ಅಂಗಡಿ-ಮನೆ, ಓಣಿ ಇತ್ಯಾದಿಗಳ **[ಪರಿಮಾಣಂ]** ಪರಿಮಾಣ-ಅಳತೆ **[ಪ್ರವಿಧಾಯ]** ಮಾಡಿ **[ದೇಶಾತ್]**ಮರ್ಯಾದೆ ಮಾಡಿರುವ ಕ್ಷೇತ್ರದಿಂದ ಹೊರಗೆ **[ನಿಯತಕಾಲಂ]** ತಾವು ನಿಶ್ಚಯ ಮಾಡಿಕೊಂಡಿರುವ ಸಮಯದವರೆಗೆ ಹೋಗುವ **[ವಿರಮಣಂ]** ತ್ಯಾಗ **[ಕರಣೀಯಂ]** ಮಾಡಬೇಕಾಗುವುದು.

**ಟೀಕೆ :- 'ತತ್ರಾಪಿ ಚ ದಿಗ್ವ್ರತೋಽಪಿ ಚ ಗ್ರಾಮಾಪಣಭವನಪಾಟಕಾದೀನಾಮ್ ನಿಯತಕಾಲಂ ಪರಿಮಾಣಂ ಪ್ರವಿಧಾಯದೇಶಾತ್ ವಿರಮಣಂ ಕರಣೀಯಮ್'** - ದಿಗ್ವ್ರತದಲ್ಲಿ ಯಾವ ಹತ್ತೂ ದಿಶೆಗಳ ಮರ್ಯಾದೆ ಮಾಡಲಾಗಿತ್ತು ಅದರಲ್ಲಿ ಕೂಡ ಗ್ರಾಮ, ಪೇಟೆ, ಮನೆ, ಓಣಿ ಮೊದಲಾದವುಗಳವರೆಗೆ ಒಂದು ದಿವಸ, ಒಂದು ವಾರ, ಒಂದು ಪಕ್ಷ, ತಿಂಗಳು, ಅಯನ, ವರ್ಷ ಇವೇ ಮೊದಲಾದ ನಿಶ್ಚಿತಕಾಲದವರೆಗೆ ಬರ-ಹೋಗುವ ಪ್ರಮಾಣ ಮಾಡಿ ಹೊರಗಿನ ಕ್ಷೇತ್ರದಿಂದ ವಿರಕ್ತವಾಗುವುದು ಅದು ದೇಶವ್ರತವೆಂದು ಕರೆಯಿಸಿಕೊಳ್ಳುತ್ತದೆ. ಈ ದೇಶವ್ರತದಿಂದ ಕೂಡ ಅಹಿಂಸೆಯ ಪಾಲನೆಯಾಗುತ್ತದೆ.

ಈಗ ಮತ್ತೆ ಅದನ್ನೇ ವಿಶೇಷವಾಗಿ ಹೇಳುತ್ತಾರೆ, -

**ಇತಿ ವಿರತೋ ಬಹುದೇಶಾತ್ ತದುತ್ಥಹಿಂಸಾವಿಶೇಷಪರಿಹಾರಾತ್ ।**
**ತತ್ಕಾಲಂ ವಿಮಲಮತಿಃ ಶ್ರಯತ್ಯಹಿಂಸಾಂ ವಿಶೇಷೇಣ ॥೧೪೦॥**

**ಅನ್ವಯಾರ್ಥ :-** **[ಇತಿ]** ಈ ಪ್ರಕಾರ **[ಬಹುದೇಶಾತ್ ವಿರತಂಃ]** ಬಹಳಷ್ಟು ಕ್ಷೇತ್ರದ ತ್ಯಾಗ ಮಾಡುವಂಥ **[ವಿಮಲಮತಿಃ]** ನಿರ್ಮಲಬುದ್ಧಿಯುಳ್ಳ ಶ್ರಾವಕನು **[ತತ್ಕಾಲಂ]** ಆನಿಯಮಿತ ಕಾಲದಲ್ಲಿ **[ತದುತ್ಥಹಿಂಸಾವಿಶೇಷ**

**ಪರಿಹಾರಾತ್]** ಮರ್ಯಾದೆ ಮಾಡಿದ ಕ್ಷೇತ್ರದಿಂದ ಉತ್ಪನ್ನವಾಗುವಂಥ ಹಿಂಸಾವಿಶೇಷದ ತ್ಯಾಗದಿಂದ **[ವಿಶೇಷೇಣ]** ವಿಶೇಷ ರೂಪದಿಂದ **[ಅಹಿಂಸಾಂ]** ಅಹಿಂಸಾವ್ರತದ **[ಶ್ರಯತಿ]** ಆಶ್ರಯ ಮಾಡುತ್ತಾನೆ.

**ಟೀಕೆ :- 'ಇತಿ ಬಹುದೇಶಾತ್ ವಿರತೋಃ ವಿಮಲಮತಿಃ ತತ್ಕಾಲಂ ತದುತ್ಥಹಿಂಸಾವಿಶೇಷ ಪರಿಹಾರಾತ್ ವಿಶೇಷೇಣ ಅಹಿಂಸಾಂ ಶ್ರಯತಿ'** - ಈ ಪ್ರಕಾರ ದಿಗ್ವ್ರತದಲ್ಲಿ ಮಾಡಿರುವ ಕ್ಷೇತ್ರದ ಪರಿಮಾಣ ಮಾಡಿ ಆ ಕ್ಷೇತ್ರದಿಂದ ಹೊರಗಿನ ಹಿಂಸೆಯ ತ್ಯಾಗವಾದರೂ ಕೂಡ ಉತ್ತಮ ಬುದ್ಧಿಯುಳ್ಳ ಶ್ರಾವಕನು ಆ ಸಮಯದಲ್ಲಿ ಬೇರೆಯೂ ಕೂಡ ಸ್ವಲ್ಪ ಕ್ಷೇತ್ರದ ಮರ್ಯಾದೆ ಮಾಡುತ್ತಿದ್ದರೆ ಅವನು ವಿಶೇಷ ರೂಪದಿಂದ ಅಹಿಂಸೆಯ ಆಶ್ರಯ ಮಾಡುತ್ತಾನೆ. ಯಾವ ಪುರುಷನು ತನ್ನ ಇಡೀ ಜೀವನದ ಸಲುವಾಗಿ ದಕ್ಷಿಣದಲ್ಲಿ ಕನ್ಯಾಕುಮಾರೀ ಮತ್ತು ಉತ್ತರದಲ್ಲಿ ಹಿಮಾಲಯದವರೆಗೆ ಹೋಗುವ ದಿಗ್ವ್ರತ ಮಾಡುತ್ತಾನೆ ಅವನು ದಿನಂಪ್ರತಿಯಂತೂ ಹಿಮಾಲಯಕ್ಕೆ ಹೋಗದಿರುವುದರಿಂದ ಅವನು ಇಂದು ನಾನು ಇಂಥ ಒಂದು ಊರಿನಲ್ಲಿಯೇ ಇರುವೆನು ಅದರಿಂದ ಹೊರಗೆ ಹೋಗಲಾರೆನೆಂದು ದಿನಂಪ್ರತಿ ಪ್ರತಿಜ್ಞೆ ಮಾಡುತ್ತಾನೆ. ಆದುದರಿಂದ ಅವನು ಯಾವ ದಿವಸ ಆ ಊರಿನಲ್ಲಿಯೇ ಇರುವ ನಿಯಮ ಮಾಡಿಕೊಳ್ಳುತ್ತಾನೆ ಆ ದಿವಸ ಆ ಊರಿನ ಹೊರಗಿನ ಪ್ರದೇಶದಲ್ಲಿ ಅಹಿಂಸಾ ಮಹಾವ್ರತದ ಪಾಲನೆಯಾಗಿ ಹೋಗುತ್ತದೆ.

## ಅನರ್ಥದಂಡತ್ಯಾಗ ನಾಮದ ಗುಣವ್ರತದ ಸ್ವರೂಪ

ಪ್ರಯೋಜನವಿಲ್ಲದೆ ಉತ್ಪನ್ನವಾಗುವ ಪಾಪದ ತ್ಯಾಗವನ್ನು ಅನರ್ಥದಂಡತ್ಯಾಗವ್ರತವೆಂದು ಹೇಳುತ್ತಾರೆ. ಅದರಲ್ಲಿ ೧) ಅಪಧ್ಯಾನತ್ಯಾಗವ್ರತ, ೨) ಪಾಪೋಪದೇಶತ್ಯಾಗವ್ರತ, ೩) ಪ್ರಮಾದಚರ್ಯಾತ್ಯಾಗ ವ್ರತ, ೪) ಹಿಂಸಾದಾನತ್ಯಾಗ ವ್ರತ ಮತ್ತು ೫) ದುಃಶ್ರುತಿತ್ಯಾಗವ್ರತವೆಂದು ಐದು ಭೇದಗಳಿವೆ.

ಈಗ ಅಪಧ್ಯಾನ ಅನರ್ಥದಂಡತ್ಯಾಗ ವ್ರತದ ಸ್ವರೂಪ ಹೇಳುತ್ತಾರೆ, -

ಪಾಪರ್ದ್ಧಿಜಯಪರಾಜಯಸಂಗರಪರದಾರಗಮನ ಚೌರ್ಯಾದ್ಯಾಃ ।
ನ ಕದಾಚನಾಪಿ ಚಿಂತ್ಯಾಃ ಪಾಪಫಲಂ ಕೇವಲಂ ಯಸ್ಮಾತ್ ॥೧೪೧॥

**ಅನ್ವಯಾರ್ಥ :- [ಪಾಪರ್ದ್ಧಿ-ಜಯ-ಪರಾಜಯ-ಸಂಗರ-ಪರದಾರಗಮನ-ಚೌರ್ಯಾದ್ಯಾಃ]** ಬೇಟೆ, ಜಯ, ಪರಾಜಯ, ಯುದ್ಧ, ಪರಸ್ತ್ರೀಗಮನ, ಕಳವು ಮೊದಲಾದವುಗಳ **[ಚಿಂತ್ಯಾಃ ನ ಕದಾಚನಾಪಿ]** ಚಿಂತನೆಯನ್ನು ಯಾವುದೇ ಸಮಯದಲ್ಲಿ ಮಾಡಬಾರದು. **[ಯಸ್ಮಾತ್]** ಏಕೆಂದರೆ ಈ ಅಪಧ್ಯಾನಗಳ **[ಪಾಪಫಲಂ ಕೇವಲಂ]** ಫಲವು ಕೇವಲ ಪಾಪವೇ ಇದೆ.

**ಟೀಕೆ :- 'ಪಾಪರ್ದ್ಧಿ ಜಯ-ಪರಾಜಯ-ಸಂಗರ ಪರದಾರ ಗಮನ ಚೌರ್ಯಾದ್ಯಾಃಕದಾಚನ ಅಪಿ ನ ಚಿಂತ್ಯಾಃಯಸ್ಮಾತ್ ಕೇವಲ ಪಾಪಫಲಂ ಭವತಿ'**- ಬೇಟೆಯಾಡುವ ಎಂದರೆ ಈ ಜೀವವನ್ನು ಈ ಪ್ರಕಾರ ಕೊಲ್ಲುವೆನೆಂಬ ಭಾವ ಮಾಡುವುದು, ಯುದ್ಧರಂಗದಲ್ಲಿ ಒಬ್ಬನಿಗೆ ಜಯ ಮತ್ತು ಒಬ್ಬನಿಗೆ ಪರಾಜಯ, ಪರಸ್ತ್ರೀ ಗಮನ ಮಾಡುವುದರ ಚಿಂತನೆ ಅಥವಾ ಕಳವು ಮಾಡುವ ಚಿಂತನೆ ಇವೇ ಮೊದಲಾದ ದುಷ್ಟಕಾರ್ಯಗಳನ್ನು ಮಾಡುವುದರಿಂದ ಕೇವಲಪಾಪವೇ ಆಗುತ್ತದೆ, ಅವುಗಳ ಚಿಂತನೆಯನ್ನು ಎಂದೂ ಮಾಡಬಾರದು. ಆದುದರಿಂದ ಯಾವ ಮಾತಿನ ವಿಚಾರ ಮಾಡುವುದರಿಂದ ಕೇವಲ ಪಾಪದ ಬಂಧನವೇ ಆಗುತ್ತದೆ ಅದನ್ನೇ ಅಪಧ್ಯಾನವೆಂದು ಹೇಳುತ್ತಾರೆ. ಮತ್ತು ಸ್ವರೂಪದಲ್ಲಿ ವಿಶೇಷ ಸಾವಧಾನತೆಯ ಮೂಲಕ ಅದರ ತ್ಯಾಗ ಮಾಡುವುದೇ ಅಪಧ್ಯಾನಅನರ್ಥದಂಡತ್ಯಾಗವ್ರತವೆಂದು ಹೇಳುತ್ತಾರೆ.

ಈಗ ಪಾಪೋಪದೇಶ ನಾಮದ ಅನರ್ಥದಂಡತ್ಯಾಗವ್ರತದ ಸ್ವರೂಪ ಹೇಳುತ್ತಾರೆ, -

**ವಿದ್ಯಾವಾಣಿಜ್ಯಮಷೀಕೃಷಿ ಸೇವಾಶಿಲ್ಪಜೀವಿನಾಂ ಪುಂಸಾಮ್ ।**
**ಪಾಪೋಪದೇಶದಾನಂ ಕದಾಚಿದಪಿ ನೈವ ವಕ್ತವ್ಯಮ್ ।।೧೪೨।।**

**ಅನ್ವಯಾರ್ಥ :- [ವಿದ್ಯಾ-ವಾಣಿಜ್ಯ-ಮಷೀ-ಕೃಷಿ-ಸೇವಾ-ಶಿಲ್ಪಜೀವಿನಾಂ]** ವಿದ್ಯೆ, ವ್ಯಾಪಾರ, ಲೇಖನ ಕಲೆ, ಒಕ್ಕಲುತನ, ನೌಕರೀ ಮತ್ತು ಕರಕುಶಲತೆಯಿಂದ ಆಜೀವಿಕೆ ನಡೆಸುವಂಥ **[ಪುಂಸಾಮ್]** ಪುರುಷರಿಗೆ **[ಪಾಪೋಪದೇಶದಾನಂ]** ಪಾಪದ ಉಪದೇಶವು ದೊರಕುವಂಥ **[ವಚನಂ]** ವಚನಗಳನ್ನು **[ಕದಾಚಿತ್ ಅಪಿ]** ಯಾವ ಸಮಯದಲ್ಲಿ ಕೂಡ **[ನೈವ ವಕ್ತವ್ಯಮ್]** ಮಾತನಾಡಬಾರದು.

**ಟೀಕೆ :- 'ವಿದ್ಯಾ ವಾಣಿಜ್ಯ ಮಷೀ ಕೃಷಿ ಸೇವೆ ಶಿಲ್ಪ ಜೀವಿನಾಂ ಪುಂಸಾವ್ ಪಾಪೋಪ-ದೇಶದಾನಂ ವಚನಂ ಕದಾಚಿತ್ ಅಪಿ ನೈವ ವಕ್ತವ್ಯಮ್'** - ವಿದ್ಯೆ ಎಂದರೆ ವೈದ್ಯಕೀಯ, ಜ್ಯೋತಿಷ್ಯ ಮೊದಲಾದುವನ್ನು ಮಾಡುವಂಥವರಿಗೆ, ಅನ್ನ ಮೊದಲಾದವುಗಳ ವ್ಯಾಪಾರ ಮಾಡುವಂಥವರಿಗೆ, ಲೇಖನ ಕಾರ್ಯ ಮಾಡುವಂಥವರಿಗೆ, ಒಕ್ಕಲುತನ ಮಾಡುವಂಥವರಿಗೆ ನೌಕರೀ ಮಾಡುವಂಥವರಿಗೆ ಹಾಗೂಕಮ್ಮಾರ, ಅಕ್ಕಸಾಲಿಗ, ದರ್ಜೀ ಮೊದಲಾದ ಕೆಲಸ ಮಾಡುವಂಥವರಿಗೆ ಇವೇ ಕಾರ್ಯಗಳ ಸಂಬಂಧವಾಗಿ ಅಥವಾ ಬೇರೆ ಯಾವುದೇ ಪಾಪಬಂಧ ಮಾಡುವಂಥ ಕಾರ್ಯಗಳಿವೆ ಅವುಗಳ ಸಲುವಾಗಿ ಯಾರಿಗೂ ಉಪದೇಶ ಕೊಡಬಾರದು. ಇದನ್ನೇ ಪಾಪೋಪದೇಶ ಅನರ್ಥದಂಡ ತ್ಯಾಗವ್ರತವೆಂದು ಹೇಳುತ್ತಾರೆ. ಶ್ರಾವಕ ಗೃಹಸ್ಥರು ತಮ್ಮ ಕುಟುಂಬದವರಿಗೆ, ಅಣ್ಣ -ತಮ್ಮಂದಿರಿಗೆ, ನಿಕಟ ಸಂಬಂಧವುಳ್ಳವರಿಗೆ ಅಥವಾ ಯಾರ ಜತೆಯಲ್ಲಿ ತಮ್ಮ ಪ್ರಯೋಜನವಿದೆ, ಅವರಿಗೆ ಮತ್ತು ತಮ್ಮ ಸಾಧರ್ಮಿ ಸಹೋದರರಿಗೆ ಜೀವನ ನಿರ್ವಾಹ ಮಾಡುವ ಸಲುವಾಗಿ ಅವಶ್ಯವಾಗಿ ವ್ಯಾಪಾರ ಮೊದಲಾದವುಗಳ ಉಪದೇಶವಿತ್ತು ನಿಮಿತ್ತ ಸಂಬಂಧದ ಪ್ರಯತ್ನ ಮಾಡಬಹುದಾಗಿದೆ, ಆದರೆ ಯಾರ ಜತೆಯಲ್ಲಿ ತಮ್ಮದು ಯಾವುದೇ ಪ್ರಯೋಜನವಿಲ್ಲ ಅವರಿಗೆ ಉಪದೇಶ ಕೊಡಬಾರದು.

ಈಗ ಪ್ರಮಾದಚರ್ಯೆ ಅನರ್ಥದಂಡತ್ಯಾಗವ್ರತದ ಸ್ವರೂಪ ಹೇಳುತ್ತಾರೆ, -

**ಭೂಖನನವೃಕ್ಷಮೊಟ್ಟನಶಾಡ್ವಲದಲನಾಂಬುಸೇಚನಾದೀನಿ ।**
**ನಿಷ್ಕಾರಣಂ ನ ಕುರ್ಯಾದ್ದಲಫಲಕುಸುಮೋಚ್ಚಯಾನಪಿ ಚ ।।೧೪೩।।**

**ಅನ್ವಯಾರ್ಥ :- [ಭೂಖನನ ವೃಕ್ಷಮೊಟ್ಟನಶಾಡ್ವಲದಲನಾಂಬುಸೇಚನಾದೀನಿ]** ನೆಲ ಅಗೆಯುವುದು, ಮರ ಕತ್ತರಿಸುವುದು, ಹೆಚ್ಚು ಹುಲ್ಲಿರುವಂಥ ಭೂಮಿಯನ್ನು ಮೆಟ್ಟಿ ತುಳಿಯುವುದು, ನೀರನ್ನು ಎರಚುವುದು ಇವೇ ಮೊದಲಾದುವನ್ನು **[ಚ]** ಮತ್ತು **[ದಲಫಲಕುಸುಮೋಚ್ಚಯಾನ]** ಪತ್ರ, ಫಲ, ಪುಷ್ಪಗಳನ್ನು ಕೊಯ್ಯುವುದು **[ಅಪಿ]** ಇತ್ಯಾದಿಗಳನ್ನು ಕೂಡ **[ನಿಷ್ಕಾರಣ]** ಪ್ರಯೋಜನವಿಲ್ಲದೆ **[ನ ಕುರ್ಯಾತ್]** ಮಾಡಬಾರದು.

**ಟೀಕೆ :- 'ನಿಷ್ಕಾರಣಂ ಭೂಖನನ ವೃಕ್ಷಮೊಟ್ಟನ ಶಾಡ್ವಲದಲನ ಅಂಬುಸೇಚನಾದೀನಿ ಚ ದಲಫಲ-ಕುಸುಮೋಚ್ಚಯಾನ್ ಅಪಿ ಚ ನ ಕುರ್ಯಾತ್'** - ಯಾವುದೇ ಪ್ರಯೋಜನವಿಲ್ಲದೆ ನೆಲ ಅಗೆಯುವುದು, ಮರ ಕತ್ತರಿಸುವುದು, ಹುಲ್ಲನ್ನು ಮೆಟ್ಟಿ ತುಳಿಯುವುದು, ನೀರು ಎರಚುವುದು, ಪತ್ರ-ಫಲ-ಪುಷ್ಪಗಳನ್ನು ಕೊಯ್ಯುವುದು ಇವೇ ಮೊದಲಾದ ಯಾವ ಕಾರ್ಯವನ್ನೂ ಮಾಡಬಾರದು.

**ಭಾವಾರ್ಥ :-** ಗೃಹಸ್ಥ ಶ್ರಾವಕನು ತನ್ನ ಪ್ರಯೋಜನದ ಸಲುವಾಗಿ ಭೂಮಿಕೆಗೆ ಅನುಸರಿಸಿ ಏನನ್ನೂ

ಮಾಡಬಹುದಾಗಿದೆ, ಆದರೆ ಅದರಲ್ಲಿ ತನ್ನದು ಯಾವುದೇ ಸ್ವಾರ್ಥವಿರಬಾರದು. ಹೇಗೆಂದರೆ ದಾರಿಯಿಂದ ಹೋಗುತ್ತಿರುವಾಗ ಕೈಗೆ ಸಿಲುಕಿದ ವನಸ್ಪತಿ ಮೊದಲಾದುವನ್ನು ಮುರಿಯುವುದು, ನೆಲ ಕೆದರುತ್ತ ನಡೆಯುವುದು ಇವೇ ಮೊದಲಾದ ವ್ಯರ್ಥ ಕಾರ್ಯಗಳನ್ನು ಮಾಡಕೂಡದು. ಅದನ್ನೇ ಪ್ರಮಾದಚರ್ಯೆ ಅನರ್ಥ ದಂಡತ್ಯಾಗವ್ರತವೆಂದು ಹೇಳುತ್ತಾರೆ.

ಈಗ ಹಿಂಸಾಪ್ರದಾನ ಅನರ್ಥದಂಡತ್ಯಾಗವ್ರತದ ಸ್ವರೂಪ ಹೇಳುತ್ತಾರೆ, -

ಅಸಿಧೇನುವಿಷಹುತಾಶನಲಾಂಗಲಕರವಾಲಕಾರ್ಮುಕಾದೀನಾಮ್ ।
ವಿತರಣಮುಪಕರಣಾನಾಂ ಹಿಂಸಾಯಾಃ ಪರಿಹರೇದ್ಯತ್ನಾತ್ ॥೧೪೪॥

**ಅನ್ವಯಾರ್ಥ :- [ಅಸಿ-ಧೇನು-ವಿಷ-ಹುತಾಶನ-ಲಾಂಗಲ-ಕರವಾಲ-ಕಾರ್ಮುಕಾದೀನಾಮ್]** ಚೂರಿ, ವಿಷ, ಅಗ್ನಿ, ನೇಗಿಲು, ಕರವಾಳ, ಧನುಷ ಮೊದಲಾದ **[ಹಿಂಸಾಯಾಃ]** ಹಿಂಸೆಯ **[ಉಪಕರಣಾನಾಂ]** ಉಪಕರಣಗಳ **[ವಿತರಣಮ್]** ವಿತರಣ ಮಾಡುವುದು ಎಂದರೆ ಇತರರಿಗೆ ಕೊಡುವುದನ್ನು **[ಯತ್ನಾತ್]** ಜಾಗರೂಕತೆಯಿಂದ **[ಪರಿಹರೇತ್]** ಬಿಟ್ಟುಕೊಡಬೇಕಾಗುವುದು.

**ಟೀಕೆ :- 'ಹಿಂಸಾಯಾಃ ಉಪಕರಣಾನಾಂ ಅಸಿ ಧೇನು ವಿಷ ಹುತಾಶನ ಲಾಂಗಲ ಕಾರ್ಮುಕಾದೀನಾಮ್ ಪರಿಹರೇತ್ -** ಹಿಂಸೆ ಮಾಡುವ ಸಾಧನಗಳಾದ ಚೂರಿ, ವಿಷ, ಅಗ್ನಿ, ನೇಗಿಲು, ಕರವಾಳ, ಬಿಲ್ಲು, ಬಾಣ ಮೊದಲಾದುವನ್ನು ಕೊಡುವುದರ ತ್ಯಾಗವನ್ನು ಪ್ರಯತ್ನಪೂರ್ವಕವಾಗಿ ಮಾಡಬೇಕು ಎಂದರೆ ಅನ್ಯರಿಗೆ ಕೊಡಬಾರದು. ಇದನ್ನೇ ಹಿಂಸಾದಾನ ಅನರ್ಥದಂಡತ್ಯಾಗವ್ರತವೆಂದು ಹೇಳುತ್ತಾರೆ. ಯಾವ ವಸ್ತುಗಳನ್ನು ಕೊಡುವುದರಿಂದ ಹಿಂಸೆಯಾಗುವುದು ಆ ವಸ್ತುಗಳ ಉಪಯೋಗವನ್ನು ಪ್ರಯೋಜನ ವಶದಿಂದ ತಮ್ಮ ಸಲುವಾಗಿಯಂತೂ ಮಾಡಬಹುದಾಗಿದೆ, ಆದರೆ ಆ ವಸ್ತುಗಳನ್ನು ಇತರರಿಗೆ ಎಂದೂ ಕೊಡಬಾರದು.

ಈಗ ದುಃಶ್ರುತಿ ಅನರ್ಥದಂಡತ್ಯಾಗವ್ರತದ ಸ್ವರೂಪ ಹೇಳುತ್ತಾರೆ, -

ರಾಗಾದಿವರ್ದ್ಧನಾನಾಂ ದುಷ್ಟಕಥಾನಾಮಬೋಧಬಹುಲಾನಾಮ್ ।
ನ ಕದಾಚನ ಕುರ್ವೀತ ಶ್ರವಣಾರ್ಜನ ಶಿಕ್ಷಣಾದೀನಿ ॥೧೪೫॥

**ಅನ್ವಯಾರ್ಥ :- [ರಾಗಾದಿವರ್ದ್ಧನಾನಾಂ]** ರಾಗ, ದ್ವೇಷ, ಮೋಹಗಳನ್ನು ವೃದ್ಧಿಸುವಂಥ ಮತ್ತು **[ಅಬೋಧಬಹುಲಾನಾಮ್]** ಹೆಚ್ಚು ಅಂಶಗಳಲ್ಲಿ ಅಜ್ಞಾನದಿಂದ ತುಂಬಿರುವ **[ದುಷ್ಟಕಥಾನಾಮ್]** ದುಷ್ಟ ಕಥನಗಳನ್ನು **[ಶ್ರವಣಾರ್ಜನಶಿಕ್ಷಣಾದೀನಿ]** ಆಲಿಸುವುದು, ಧಾರಣ ಮಾಡುವುದು, ಕಲಿಯುವುದು ಮೊದಲಾದುವನ್ನು **[ಕದಾಚನ]** ಎಂದೂ ಯಾವಾಗಲೂ **[ನ ಕುರ್ವೀತ]** ಮಾಡಬಾರದು.

**ಟೀಕೆ :- 'ಅಬೋಧ (ಮಿಥ್ಯಾತ್ವ) ಬಹುಲಾನಾಂ ರಾಗಾದಿವರ್ದ್ಧನಾನಾಂ ದುಷ್ಟಕಥಾನಾಂ ಶ್ರವಣಾರ್ಜನಕ್ಷಣಾದೀನಿ ನ ಕದಾಚನ ಕುರ್ವೀತಿ'-** ಮಿಥ್ಯಾತ್ವಸಹಿತ ರಾಗ-ದ್ವೇಷ, ವೈರಭಾವ, ಮೋಹ, ಮದ ಮೊದಲಾದುವನ್ನು ಹೆಚ್ಚಿಸುವಂಥ ಕುಕಥೆಗಳ ಶ್ರವಣ ಹಾಗೂ ನವೀನ ಕಥೆಗಳ ರಚನೆ ಓದುವುದು ಮೊದಲಾದುವನ್ನು ಎಂದೂ ಮಾಡಬಾರದು. ಇದನ್ನೇ ದುಃಶ್ರುತಿ ಅನರ್ಥದಂಡತ್ಯಾಗವ್ರತವೆಂದು ಹೇಳುತ್ತಾರೆ.

**ಭಾವಾರ್ಥ :-** ಯಾವ ಕಥೆಗಳನ್ನು ಕೇಳುವುದರಿಂದ, ಓದುವುದರಿಂದ ಹಾಗೂ ಕಲಿಯುವುದರಿಂದ

ವಿಷಯಗಳ ವೃದ್ಧಿಯಾಗುವುದು, ಮೋಹವು ಹೆಚ್ಚುವುದು ಮತ್ತು ತಮ್ಮ ಹಾಗೂ ಇತರರ ಪರಿಣಾಮಗಳಲ್ಲಿ ಸಂಕ್ಲೇಶವಾಗುವುದರಿಂದ ಇಂಥ ರಾಜಕಥೆ, ಚೋರಕಥೆ, ಭೋಜನಕಥೆ, ಸ್ತ್ರೀಕಥೆ ಇತ್ಯಾದಿ ಕಥೆಗಳನ್ನು ಹೇಳುವುದು ಅಥವಾ ಕೇಳುವುದು ಮಾಡಬಾರದು.

ಮಹಾಹಿಂಸೆಯ ಕಾರಣ ಮತ್ತು ಅನೇಕ ಅನರ್ಥಗಳನ್ನು ಉತ್ಪನ್ನ ಮಾಡುವಂಥ ಜೂಜನ್ನು ಕೂಡ ತ್ಯಾಗ ಮಾಡಬೇಕಾಗುವುದೆಂದು ಈಗ ಹೇಳುತ್ತಾರೆ, -

ಸರ್ವಾನರ್ಥಪ್ರಥಮಂ ಮಥನಂ ಶೌಚಸ್ಯ ಸದ್ಮ ಮಾಯಾಯಾಃ ।
ದೂರಾತ್ಪರಿಹರಣೀಯಂ ಚೌರ್ಯಾಸತ್ಯಾಸ್ಪದಂ ದ್ಯೂತಮ್ ॥೧೪೬॥

**ಅನ್ವಯಾರ್ಥ :-** **[ಸರ್ವಾನರ್ಥಪ್ರಥಮಂ]** ಸಪ್ತವ್ಯಸನಗಳಲ್ಲಿ ಪ್ರಥಮ ಅಥವಾ ಸಮಸ್ತ ಅನರ್ಥಗಳಲ್ಲಿ ಮುಖ್ಯ **[ಶೌಚಸ್ಯಮಥನಂ]** ಸಂತೋಷದ ನಾಶ ಮಾಡುವಂಥ, **[ಮಾಯಾಯಾಃ]** ಮಾಯಾಚಾರದ **[ಸದ್ಮ]** ಆಲಯ ಮತ್ತು **[ಚೌರ್ಯಾಸತ್ಯಾಸ್ಪದಮ್]** ಕಳವು ಹಾಗೂ ಅಸತ್ಯದ ಸ್ಥಾನವಾದಂಥ **[ದ್ಯೂತಮ್]** ಜೂಜನ್ನು **[ದೂರಾತ್]** ದೂರದಿಂದಲೇ **[ಪರಿಹರಣೀಯಮ್]** ತ್ಯಾಗ ಮಾಡಬೇಕು.

**ಟೀಕೆ :- 'ಸರ್ವಾನರ್ಥಪ್ರಥಮವಮ್ ಮಥನಂ ಶೌಚಸ್ಯ, ಸದ್ಮ ಮಾಯಾಯಾಃ ಚೌರ್ಯಾಸತ್ಯಾಸ್ಪದಂ ದ್ಯೂತಮ್ ದೂರಾತ್ ಪರಿಹರಣೀಯಮ್'** - ಸಮಸ್ತ ಅನರ್ಥಗಳನ್ನು ಉತ್ಪನ್ನ ಮಾಡುವಂಥ, ಶೌಚ ಎಂದರೆ ಯಾವ ಲೋಭದ ತ್ಯಾಗವಿದೆ ಅದರ ನಾಶ ಮಾಡುವಂಥ ಮತ್ತು ಕಪಟದ ಆಲಯವಾದಂಥ ಜೂಜನ್ನು ದೂರದಿಂದಲೇ ಬಿಟ್ಟು ಕೊಡಬೇಕಾಗುವುದು.

**ಭಾವಾರ್ಥ :-** ವಾಸ್ತವಿಕವಾಗಿ ಜೂಜು ಆಡುವುದು ಬಹಳೇ ನಿಂದ್ಯವಾದ ಕಾರ್ಯವಿದೆ ಮತ್ತು ಏಳೂ ವ್ಯಸನಗಳಲ್ಲಿ ಎಲ್ಲಕ್ಕಿಂತ ಹೆಚ್ಚು ನಿಕೃಷ್ಟವಿದೆ. ಜೂಜುಗಾರ ಮನುಷ್ಯನು ಸಾಮಾನ್ಯವಾಗಿ ಎಲ್ಲ ಪಾಪಗಳ ಆಚರಣೆ ಮಾಡುತ್ತಾನೆ. ಆದುದರಿಂದ ದ್ಯೂತದ ತ್ಯಾಗವನ್ನು ಅವಶ್ಯವಾಗಿ ಮಾಡಬೇಕಾಗುವುದು. ಅನರ್ಥ ದಂಡದ ತ್ಯಾಗ ಮಾಡುವವನು ದ್ಯೂತದ ತ್ಯಾಗವನ್ನೂ ಮಾಡಬೇಕಾಗುವುದು.

ಈಗ ಮತ್ತೆ ಇದನ್ನೇ ವಿಶೇಷವಾಗಿ ಹೇಳುತ್ತಾರೆ, -

ಏವಂವಿಧಮಪರಮಪಿ ಜ್ಞಾತ್ವಾ ಮುಂಚತ್ಯನರ್ಥದಂಡಂ ಯಃ ।
ತಸ್ಯಾನಿಶಮನವದ್ಯಂ ವಿಜಯಮಹಿಂಸಾವ್ರತಂ ಲಭತೇ ॥೧೪೭॥

**ಅನ್ವಯಾರ್ಥ :-** **[ಯಃ]** ಯಾವ ಮನುಷ್ಯನು **[ಏವಂ ವಿಧಂ]** ಈ ಪ್ರಕಾರದ **[ಅಪರಂ ಅನರ್ಥ-ದಂಡಮ್ ಅಪಿ]** ಎರಡನೆಯ ಅನರ್ಥದಂಡವನ್ನು ಕೂಡ **[ಜ್ಞಾತ್ವಾ]** ತಿಳಿದುಕೊಂಡು **[ಮುಂಚತಿ]** ತ್ಯಾಗ ಮಾಡುತ್ತಾನೆ **[ತಸ್ಯ]** ಅವನ **[ಅನವದ್ಯ]** ನಿರ್ದೋಷವಾದ **[ಅಹಿಂಸಾವ್ರತ]** ಅಹಿಂಸಾವ್ರತವು **[ಅನಿಶಂ]** ನಿರಂತರ **[ವಿಜಯಂ]** ವಿಜಯವನ್ನು **[ಲಭತೇ]** ಪಡೆಯುತ್ತದೆ.

**ಟೀಕೆ :- (ಯಃ) ಏವಂ ವಿಧಂ ಅಪರಂ ಅಪಿ ಅನರ್ಥದಂಡಂ ಜ್ಞಾತ್ವಾ ಮುಂಚತಿ ತಸ್ಯ ಅನವದ್ಯಂ ಅಹಿಂಸಾವ್ರತಂ ಅನಿಶಂ ವಿಜಯಂ ಲಭತೇ'** - ಯಾವ ಮನುಷ್ಯನು ಈ ಪ್ರಕಾರ ಯಾವ ಪ್ರಯೋಜನವಿಲ್ಲದೆ ಪಾಪಬಂಧ ಮಾಡುವಂಥ ಎರಡನೆಯ ಅನರ್ಥದಂಡವನ್ನು ಕೂಡ ತಿಳಿದುಕೊಂಡು ಬಿಟ್ಟುಕೊಡುತ್ತಾನೆ ಅವನ

ಪಾಪರಹಿತವಾದ ಅಹಿಂಸಾವ್ರತವು ಯಾವಾಗಲೂ ವಿಜಯ ಪಡೆಯುತ್ತದೆ. ಎಂದರೆ ನಿರಂತರ ಪುಣ್ಯಬಂಧ ಮಾಡಿ, ಪಾಪದ ತ್ಯಾಗ ಮಾಡುತ್ತ ಕರ್ಮಗಳ ನಿರ್ಜರೆ ಮಾಡುತ್ತದೆ.

**ಭಾವಾರ್ಥ :-** ಪ್ರಪಂಚದಲ್ಲಿ ಇಂಥ ಅನೇಕ ಚಿಕ್ಕ ಚಿಕ್ಕ ಕಾರ್ಯಗಳಿದ್ದು ಅವನ್ನು ಮಾಡುವುದರಿಂದ ವ್ಯರ್ಥವಾಗಿಯೇ ಪಾಪದ ಬಂಧವಾಗುತ್ತಿರುತ್ತದೆ. ಆದುದರಿಂದ ತಮ್ಮದು ಯಾವುದೇ ಪ್ರಯೋಜನವಿಲ್ಲದಂಥ ವ್ಯರ್ಥ ಅನರ್ಥದಂಡದ ತ್ಯಾಗವನ್ನು ಎಲ್ಲ ಮನುಷ್ಯರು ಅವಶ್ಯವಾಗಿ ಮಾಡಬೇಕಾಗುವುದು ಮತ್ತು ಇದುವೇ ಕರ್ತವ್ಯವಿದೆ. ಈ ಪ್ರಕಾರ ಮೂರು ಗುಣವ್ರತಗಳ ವರ್ಣನೆಯು ಸಮಾಪ್ತವಾಯಿತು.

ಈಗ ನಾಲ್ಕು ಶಿಕ್ಷಾವ್ರತಗಳ ವರ್ಣನೆ ಮಾಡುತ್ತಿದ್ದು ಅದರಲ್ಲಿ ಮೊದಲನೆಯ ಸಾಮಾಯಿಕ ಶಿಕ್ಷಾವ್ರತವನ್ನು ಹೇಳುತ್ತಾರೆ, -

ರಾಗದ್ವೇಷತ್ಯಾಗಾನ್ನಿಖಿಲದ್ರವ್ಯೇಷು ಸಾಮ್ಯಮವಲಂಬ್ಯ ।
ತತ್ತ್ವೋಪಲಬ್ಧಿಮೂಲಂ ಬಹುಶಃ ಸಾಮಾಯಿಕಂ ಕಾರ್ಯಮ್ ॥೧೪೮॥

**ಅನ್ವಯಾರ್ಥ :- [ರಾಗದ್ವೇಷತ್ಯಾಗಾತ್]** ರಾಗ-ದ್ವೇಷಗಳ ತ್ಯಾಗದಿಂದ **[ನಿಖಿಲದ್ರವ್ಯೇಷು]** ಸಮಸ್ತ ಇಷ್ಟ-ಅನಿಷ್ಟಪದಾರ್ಥಗಳಲ್ಲಿ **[ಸಾಮ್ಯಂ]** ಸಾಮ್ಯಭಾವವನ್ನು **[ಅವಲಂಬ್ಯ]** ಅಂಗೀಕಾರ ಮಾಡಿ **[ತತ್ತ್ವೋಪಲಬ್ಧಿ-ಮೂಲಂ]** ಆತ್ಮತತ್ತ್ವದಪ್ರಾಪ್ತಿಯ ಮೂಲಕಾರಣವಾದಂಥ **(ಸಾಮಾಯಿಕಂ]** ಸಾಮಾಯಿಕವನ್ನು **[ಬಹುಶಃ]** ಬಹಳಷ್ಟು ಬಾರಿ **[ಕಾರ್ಯಮ್]** ಮಾಡಬೇಕಾಗುವುದು.

**ಟೀಕೆ :- ನಿಖಿಲದ್ರವ್ಯೇಷು ರಾಗದ್ವೇಷತ್ಯಾಗಾತ್ ಸಾಮ್ಯಂ ಅವಲಂಬ್ಯ ತತ್ತ್ವೋಪಲಬ್ಧಿಮೂಲಂ ಸಾಮಾಯಿಕಂ ಬಹುಶಃ ಕಾರ್ಯಮ್'** - ಸಮಸ್ತ ಇಷ್ಟ -ಅನಿಷ್ಟ ಪದಾರ್ಥಗಳಲ್ಲಿ ರಾಗ-ದ್ವೇಷ ಭಾವಗಳ ತ್ಯಾಗಪೂರ್ವಕವಾಗಿ ಸಮತೆಯ ಭಾವದ ಅವಲಂಬನ ಮಾಡಿ, ಆತ್ಮನ ಶುದ್ಧ ಸ್ವರೂಪದ ಪ್ರಾಪ್ತಿ ಮಾಡಿಕೊಳ್ಳುವಲ್ಲಿ ಮೂಲಕಾರಣವು ಸಾಮಾಯಿಕವಿದ್ದು ಅದನ್ನು ಮತ್ತೆ ಮತ್ತೆ ಮಾಡಬೇಕಾಗುವುದು, ಎಂದರೆ ಪ್ರತಿದಿವಸ ಮೂರು ಕಾಲದಲ್ಲಿ ಮಾಡಬೇಕಾಗುವುದು. ಇದುವೇ ಸಾಮಾಯಿಕ ಶಿಕ್ಷಾವ್ರತವಿದೆ.

**ಭಾವಾರ್ಥ :- 'ಸಮ್'** ಎಂದರೆ ಏಕರೂಪ ಮತ್ತು **'ಅಯ'** ಎಂದರೆ ಆತ್ಮನ ಸ್ವರೂಪದಲ್ಲಿ ಗಮನ ಮಾಡುವುದು ಅದು **'ಸಮಯ'**ವಿದೆ ಇಂಥ **'ಸಮಯ'ವು** ಯಾವುದರ ಪ್ರಯೋಜನವಿದೆ ಅದನ್ನು ಸಾಮಾಯಿಕವೆಂದು ಹೇಳುತ್ತಾರೆ. ಈ ಸಾಮಾಯಿಕವು ಸಮತೆಯ ಭಾವವಿಲ್ಲದೆ ಆಗುವ ಸಾಧ್ಯತೆಯಿಲ್ಲ. ಆದುದರಿಂದ ಸುಖದಾಯಕ ಹಾಗೂ ದುಃಖದಾಯಕವಾದ ಪದಾರ್ಥಗಳಲ್ಲಿ ಸಮಾನ ಬುದ್ಧಿಯನ್ನು ಇರಿಸುತ್ತ ಸ್ವರೂಪದಲ್ಲಿ ಮಗ್ನವಾಗುವುದೇ ಪರಮಕಾರ್ಯವಿದೆ. ಶ್ರಾವಕರು ಇಂಥ ಸಾಮಾಯಿಕವನ್ನು ಮೂರು ಕಾಲದಲ್ಲಿ ಐದೂ ಪಾಪಗಳ ತ್ಯಾಗಪೂರ್ವಕ ಅವಶ್ಯವಾಗಿ ಮಾಡಬೇಕಾಗುವುದು. ಇದನ್ನೇ ಸಾಮಾಯಿಕ ಶಿಕ್ಷಾವ್ರತವೆಂದು ಹೇಳುತ್ತಾರೆ.

---

★ಸಾಮಾಯಿಕದಲ್ಲಿ ೧) ಯೋಗ್ಯಕ್ಷೇತ್ರ, ೨) ಯೋಗ್ಯ ಕಾಲ, ೩) ಯೋಗ್ಯ ಆಸನ, ೪) ಯೋಗ್ಯ ವಿನಯ, ೫) ಮನಸ್ಸಿನ ಶುದ್ಧಿ, ೬) ವಚನಶುದ್ಧಿ, ೭) ಭಾವಶುದ್ಧಿ, ೮) ಕಾಯಶುದ್ಧಿಯೆಂದು ಈ ಎಂಟು ಮಾತುಗಳ ಅನುಕೂಲತೆಯಿರುವುದು ಅವಶ್ಯಕವಿದೆ. ಅದರಲ್ಲಿ ಭೇದಜ್ಞಾನಪೂರ್ವಕ ಸ್ವಸನ್ಮುಖತೆಯ ಬಲದಿಂದ ಎಷ್ಟು ಪರಿಣಾಮಗಳ ಶುದ್ಧತೆಯಾಗುವುದು ಅಷ್ಟು ನಿಶ್ಚಯ ಸಾಮಾಯಿಕವಿದೆ. ಅಲ್ಲಿ ವರ್ತಿಸುತ್ತಿರುವ ಶುಭರಾಗವನ್ನು ಸಾಮಾಯಿಕವೆಂದು ಹೇಳುತ್ತಾರೆ. ನಿಶ್ಚಯ ಸಮ್ಯಗ್ದರ್ಶನ-ಜ್ಞಾನಪೂರ್ವಕವಾಗಿ ಯಾವನು ಕಷಾಯಗಳ ಎರಡು ಚೌಕಡಿಗಳನ್ನು ಅಭಾವ ಮಾಡಿದ್ದಾನೆ. ಆ ಜೀವನಿಗೆ ನಿಜವಾದ ಅಣುವ್ರತ ಮತ್ತು ಸಾಮಾಯಿಕ ವ್ರತವಿರುತ್ತದೆ. ಯಾವನಿಗೆ ನಿಶ್ಚಯ ಸಮ್ಯಗ್ದರ್ಶನವಾಗಿಲ್ಲ ಅವನ ವ್ರತಗಳನ್ನು ಭಗವಾನ ಸರ್ವಜ್ಞದೇವರು ಬಾಲವ್ರತ ಎಂದರೆ ಅಜ್ಞಾನಮಯವ್ರತವೆಂದು ಹೇಳುತ್ತಾರೆ.

ಸಾಮಾಯಿಕವನ್ನು ಯಾವಾಗ ಮತ್ತು ಯಾವ ಪ್ರಕಾರದಿಂದ ಮಾಡಬೇಕೆಂಬುದನ್ನು ತಿಳಿಸಿಕೊಡುತ್ತಾರೆ, -

ರಜನೀದಿನಯೋರಂತೇ ತದವಶ್ಯಂ ಭಾವನೀಯಮವಿಚಲಿತಮ್ ।
ಇತರತ್ರ ಪುನಃ ಸಮಯೇ ನ ಕೃತಂ ದೋಷಾಯ ತದ್ಗುಣಾಯ ಕೃತಮ್ ॥೧೪೯॥

**ಅನ್ವಯಾರ್ಥ :-** **[ತತ್]** ಆ ಸಾಮಾಯಿಕವನ್ನು **[ರಜನೀದಿನಯೋಃ]** ರಾತ್ರಿ ಮತ್ತು ದಿವಸದ **[ಅಂತೇ]** ಕೊನೆಯಲ್ಲಿ **[ಅವಿಚಲಿತವನ್]** ಏಕಾಗ್ರತೆಯೊಡನೆ **[ಅವಶ್ಯಂ]** ಅವಶ್ಯವಾಗಿ **[ಭಾವನೀಯುವನ್]** ಮಾಡಬೇಕಾಗುವುದು. **[ಪುನಃ]** ಮತ್ತು ಒಂದು ವೇಳೆ **[ಇತರತ್ರಸಮಯೇ]** ಅನ್ಯ ಸಮಯದಲ್ಲಿ ಕೂಡ **[ಕೃತಂ]** ಮಾಡಿದರೆ **[ತತ್‌ಕೃತಂ]** ಆ ಸಾಮಾಯಿಕ ಕಾರ್ಯವು **[ದೋಷಾಯ]** ದೋಷದ ಸಲುವಾಗಿ **[ನ]** ಇಲ್ಲ, ಆದರೆ **[ಗುಣಾಯ]** ಗುಣದ ಸಲುವಾಗಿಯೇ ಇರುತ್ತದೆ.

**ಟೀಕೆ :- 'ತತ್ ಸಾಮಾಯಿಕಂ ರಜನೀ ದಿನಯೋಃ ಅಂತೇ ಅವಶ್ಯಂ ಅವಿಚಲಿತಂ ಭಾವನೀಯವನ್ ಪುನಃ ಇತರತ್ರ ಸವುಯೇ ದೋಷಾಯ ಕೃತವನ್ ನ ಕಿಂತು ತತ್ ಗುಣಾಯ ಕೃತವನ್ ಅಸ್ತಿ'** - ಆ ಸಾಮಾಯಿಕವನ್ನು *ಪ್ರತಿಯೊಬ್ಬ ಶ್ರಾವಕನು ರಾತ್ರಿ ಮತ್ತು ದಿವಸದ ಕೊನೆಯಲ್ಲಿ ಎಂದರೆ ಪ್ರಾತಃಕಾಲ ಮತ್ತು ಸಾಯಂಕಾಲದಲ್ಲಿ ನಿಯಮಪೂರ್ವಕ ಅವಶ್ಯವಾಗಿ ಮಾಡಬೇಕಾಗುವುದು. ಇದನ್ನು ಹೊರತುಪಡಿಸಿ ಒಂದು ವೇಳೆ ಉಳಿದ ಸಮಯದಲ್ಲಿ ಕೂಡ ಸಾಮಾಯಿಕವನ್ನು ಮಾಡಿದರೆ ಅದು ಗುಣದ ನಿಮಿತ್ತವೇ ಇದೆ, ಆದರೆ ದೋಷದ ನಿಮಿತ್ತವಿಲ್ಲ.

**ಭಾವಾರ್ಥ :-** ಗೃಹಸ್ಥನಾದ ಶ್ರಾವಕನು ಮನೆತನದ ಅನೇಕ ಕಾರ್ಯಗಳಲ್ಲಿ ಸಂಲಗ್ನನಿರುವುದರಿಂದ ಅವನ ಸಲುವಾಗಿ ಅವಲಂಬನರೂಪವಾಗಿ ಬೆಳಿಗ್ಗೆ ಮತ್ತು ಸಾಯಂಕಾಲ ಎರಡೂ ಸಮಯಗಳನ್ನು ಆಚಾರ್ಯದೇವರು ನಿಯಮಿತ ಮಾಡಿದ್ದಾರೆ. ಈ ಸಾಮಾಯಿಕವನ್ನಂತೂ ತಮಗೆಯಾವಾಗ ಇಚ್ಛೆಯಾಗುವುದು ಆಗ ಮಾಡಬಹುದಾಗಿದೆ, ಅದರಿಂದ ಆತ್ಮನ ಕಲ್ಯಾಣವೇ ಇದೆ, ಹಾನಿಯಂತೂ ಎಂದೂ ಇಲ್ಲವೇ ಇಲ್ಲ. ಆದುದರಿಂದ ಪ್ರತಿಯೊಬ್ಬ ಶ್ರಾವಕನು ಎರಡು ಸಮಯ ಅಥವಾ ಮೂರು ಸಮಯ ಉತ್ಕೃಷ್ಟ ಆರುಗಳಿಗೆ, ಮಧ್ಯಮ ನಾಲ್ಕುಗಳಿಗೆ ಜಘನ್ಯ ಎರಡು ಗಳಿಗೆಯವರೆಗೆ ಐದೂ ಪಾಪ ಮತ್ತು ಆರಂಭ-ಪರಿಗ್ರಹದ ತ್ಯಾಗ ಮಾಡಿ ಏಕಾಂತ ಸ್ಥಾನದಲ್ಲಿ ಶುದ್ಧ ಮನಸ್ಸಿನಿಂದ ಮೊದಲು ಪೂರ್ವ ದಿಕ್ಕಿನಲ್ಲಿ ನಮಸ್ಕಾರ ಮಾಡುವುದು ಎಂದರೆ ಅಂಗಗಳನ್ನು ನೆಲಕ್ಕೆ ತಗುಲಿಸಿ ನಮಿಸುವುದು, ಅನಂತರ ಒಂಬತ್ತು ಬಾರಿ ಣಮೋಕಾರ ಮಂತ್ರದ ಜಪ ಮಾಡುವುದು, ಅದಾದ ನಂತರ ಮೂರು ಆವರ್ತನ ಎಂದರೆ ಕೈಗಳನ್ನು ಜೋಡಿಸಿ ಪ್ರದಕ್ಷಿಣೆ ಮಾಡುವುದು ಮತ್ತು ಒಂದು ಶಿರೋನತಿ ಎಂದರೆ ಕೈಗಳನ್ನು ಜೋಡಿಸಿ ಮಸ್ತಕ ನಮಿಸುವುದು. ಈ ಪ್ರಕಾರ ನಾಲ್ಕೂ ದಿಶೆಗಳಲ್ಲಿ ಮಾಡಿ ಖಡ್ಗಾಸನ ಅಥವಾ ಪದ್ಮಾಸನ ಧಾರಣ ಮಾಡಿ ಸಾಮಾಯಿಕ ಮಾಡಬೇಕಾಗುವುದು. ಮತ್ತು ಯಾವಾಗ ಸಾಮಾಯಿಕವು ಪೂರ್ಣವಾಗಿ ಹೋಗುವುದು, ಆಗ ಕೊನೆಯಲ್ಲಿ ಕೂಡ ಪ್ರಾರಂಭದ ಹಾಗೆ ಒಂಬತ್ತು ಬಾರಿ ಣಮೋಕಾರ ಮಂತ್ರದ ಜಪ, ಮೂರು ಮೂರು ಆವರ್ತನ, ಒಂದು ಬಾರಿ ಶಿರೋನತಿ ಮಾಡಬೇಕಾಗುವುದು. ಇದುವೇ ಸಾಮಾಯಿಕ ಮಾಡುವ ಸ್ಥೂಲವಿಧಿಯಿದೆ. ಸಾಮಾಯಿಕ ಮಾಡುವ ಸಮಯ-ಸಾಮಾಯಿಕ ಕಾಲದಲ್ಲಿ ಶ್ರಾವಕನು ಕೂಡ ಮುನಿಯ ಸಮಾನನೇ ಇದ್ದಾನೆ.

ಸಾಮಾಯಿಕ ದಶೆಯು ಪ್ರಾಪ್ತವಾದ ಶ್ರಾವಕರಿಗೆ ಮಹಾವ್ರತವಾಗುತ್ತದೆಂದು ಹೇಳುತ್ತಾರೆ,-

ಸಾಮಾಯಿಕಶ್ರಿತಾನಾಂ ಸಮಸ್ತಸಾವದ್ಯಯೋಗಪರಿಹಾರಾತ್ ।
ಭವತಿ ಮಹಾವ್ರತಮೇಷಾಮುದಯೇಽಪಿ ಚಾರಿತ್ರಮೋಹಸ್ಯ ॥೧೫೦॥

**ಅನ್ವಯಾರ್ಥ :- [ಏಷಾಮ್]** ಈ **[ಸಾಮಾಯಿಕಶ್ರಿತಾನಾಂ]** ಸಾಮಾಯಿಕ ದಶೆಗೆ ಪ್ರಾಪ್ತವಾದ ಶ್ರಾವಕರಿಗೆ **[ಚಾರಿತ್ರಮೋಹಸ್ಯ]** ಚಾರಿತ್ರಮೋಹದ **[ಉದಯೇ ಅಪಿ]** ಉದಯವಿದ್ದರೂ ಕೂಡ **[ಸಮಸ್ತ ಸಾವದ್ಯಯೋಗಪರಿಹಾರಾತ್]** ಸಮಸ್ತಪಾಪದ ಯೋಗದ ತ್ಯಾಗವಿರುವುದರಿಂದ **[ಮಹಾವ್ರತಂ]** ಮಹಾವ್ರತವು **[ಭವತಿ]** ಆಗುತ್ತದೆ.

**ಟೀಕೆ :- 'ಸಾಮಾಯಿಕಶ್ರಿತಾನಾಂ ಏಷಾಂ ಶ್ರಾವಕಾನಾಂ ಸಮಸ್ತಸಾವದ್ಯಯೋಗಪರಿಹಾರಾತ್ ಚಾರಿತ್ರ - ಮೋಹಸ್ಯ ಉದಯೇ ಅಪಿ ಮಹಾವ್ರತಂ ಭವತಿ'** - ಸಾಮಾಯಿಕ ಮಾಡುವಂಥ ಶ್ರಾವಕನಿಗೆ ಆ ಸಮಯದಲ್ಲಿ ಸಮಸ್ತ ಐದೂ ಪಾಪಗಳ ತ್ಯಾಗವಿರುವುದರಿಂದ ಪ್ರತ್ಯಾಖ್ಯಾನಾವರಣ ಚಾರಿತ್ರಮೋಹನೀಯ ಕರ್ಮದ ಉದಯವಿದ್ದರೂ ಕೂಡ ಮಹಾವ್ರತವೇ ಇದೆ.

**ಭಾವಾರ್ಥ :-** ಶ್ರಾವಕನು ಯಾವ ಸಮಯದಲ್ಲಿ ಸಾಮಾಯಿಕ ಮಾಡುತ್ತಿರುವನು ಆ ಸಮಯದಲ್ಲಿ ವಾಸ್ತವಿಕವಾಗಿ ಅವನ ಅವಸ್ಥೆಯು ಮುನಿಯ ಸಮಾನವೇ ಇದೆ. ಅವನ ಪರಿಣಾಮಗಳಲ್ಲಿ ಮತ್ತು ಮುನಿಯ ಪರಿಣಾಮಗಳಲ್ಲಿ ವಿಶೇಷ ಅಂತರವಿರುವುದಿಲ್ಲ. ಭೇದವು ಕೇವಲ ಮುನಿಗಳು ದಿಗಂಬರರಿದ್ದರೆ ಶ್ರಾವಕನು ವಸ್ತ್ರ ಸಹಿತನಾಗಿರುವುದಿಷ್ಟೇ ಇದೆ. ಮುನಿ ಮಹಾರಾಜರು ಪ್ರತ್ಯಾಖ್ಯಾನಾವರಣ ಕಷಾಯಗಳ ತ್ಯಾಗ ಮಾಡಿ ಬಿಟ್ಟಿದ್ದಾರೆ. ಮತ್ತು ಶ್ರಾವಕನು ಇದುವರೆಗೆ ಪ್ರತ್ಯಾಖ್ಯಾನಾವರಣ ಕಷಾಯದ ತ್ಯಾಗ ಮಾಡಿಲ್ಲ.

ಈಗ ಎರಡನೆಯ ಪ್ರೋಷಧೋಪವಾಸ ಶಿಕ್ಷಾವ್ರತದ ಸ್ವರೂಪ ಹೇಳುತ್ತಾರೆ, -

ಸಾಮಾಯಿಕಸಂಸ್ಕಾರಂ ಪ್ರತಿದಿನಮಾರೋಪಿತಂ ಸ್ಥಿರೀಕರ್ತುಮ್ ।
ಪಕ್ಷಾರ್ದ್ಧಯೋರ್ದ್ವಯೋರಪಿ ಕರ್ತವ್ಯೋಽವಸ್ಯ ಮುಪವಾಸಃ ॥೧೫೧॥

**ಅನ್ವಯಾರ್ಥ :- [ಪ್ರತಿದಿನಂ]** ಪ್ರತಿದಿವಸ **[ಆರೋಪಿತಂ]** ಅಂಗೀಕಾರ ಮಾಡಿರುವ **[ಸಾಮಾಯಿಕ ಸಂಸ್ಕಾರಂ]** ಸಾಮಾಯಿಕರೂಪದ ಸಂಸ್ಕಾರವನ್ನು **[ಸ್ಥಿರೀಕರ್ತುಮ್]** ಸ್ಥಿರಗೊಳಿಸುವ ಸಲುವಾಗಿ **[ದ್ವಯೋಃ]** ಎರಡೂ **[ಪಕ್ಷಾರ್ದ್ಧಯೋಃ]** ಪಕ್ಷದ ಅರ್ಧ ಭಾಗದಲ್ಲಿ ಎಂದರೆ ಅಷ್ಟಮೀ ಮತ್ತು ಚತುರ್ದಶಿಯ ದಿವಸ **[ಅವಶ್ಯಮಪಿ]** ಅವಶ್ಯವಾಗಿಯೇ **[ಉಪವಾಸಃ ಕರ್ತವ್ಯಃ]** ಉಪವಾಸ ಮಾಡಬೇಕಾಗುವುದು.

**ಟೀಕೆ :- 'ಪ್ರತಿದಿನಂ ಆರೋಪಿತಂ ಸಾಮಾಯಿಕ ಸಂಸ್ಕಾರಂ ಸ್ಥಿರೀಕರ್ತುಮ್ ದ್ವಯೋರಪಿ ಪಕ್ಷಾರ್ದ್ಧಯೋಃ ಅವಶ್ಯಂ ಉಪವಾಸಃ ಕರ್ತವ್ಯಃ'** - ಪ್ರತಿದಿವಸ ಅಂಗೀಕಾರ ಮಾಡಿರುವ ಸಾಮಾಯಿಕ ವ್ರತದ ದೃಢತೆ ಮಾಡುವ ಸಲುವಾಗಿ ಎರಡೂ ಪಕ್ಷಗಳ ಎಂದರೆ ಶುಕ್ಲಪಕ್ಷ ಮತ್ತು ಕೃಷ್ಣಪಕ್ಷದ ಅರ್ಧ ಭಾಗದಲ್ಲಿ ಚತುರ್ದಶಿ ಮತ್ತು ಅಷ್ಟಮಿಯ ದಿವಸ ಅವಶ್ಯವಾಗಿ ಉಪವಾಸ ಮಾಡಬೇಕಾಗುವುದು.

**ಭಾವಾರ್ಥ :-** ಪ್ರೋಷಧದ ಅರ್ಥವು ಪರ್ವವಿದೆ ಮತ್ತು ಉಪವಾಸದ ಅರ್ಥವು ಹತ್ತಿರದಲ್ಲಿ ವಾಸ ಮಾಡುವುದಿದೆ. ಪರ್ವದಲ್ಲಿ ಪಾಪದಿಂದಬಿಡುಗಡೆ ಹೊಂದಿ ಧರ್ಮದಲ್ಲಿ ವಾಸ ಮಾಡುವುದನ್ನು ಪ್ರೋಷಧೋಪವಾಸ ವೆಂದು ಹೇಳುತ್ತಾರೆ. ಈ ಪ್ರೋಷಧೋಪವಾಸವನ್ನು ಪ್ರತಿಯೊಂದು ತಿಂಗಳಿನಲ್ಲಿ ನಾಲ್ಕು ನಾಲ್ಕು ಮಾಡಲಾಗುತ್ತದೆ, ಎಂದರೆ ಪ್ರತಿಯೊಂದು ಚತುರ್ದಶಿ ಮತ್ತು ಅಷ್ಟಮಿಯ ದಿವಸ ಮಾಡಲಾಗುತ್ತದೆ. ಇದರಿಂದ ಸಾಮಾಯಿಕ ಮಾಡುವ ಭಾವನೆಯು ದೃಢವಾಗಿ ಉಳಿಯುತ್ತದೆ. ಎಂದರೆ ಚಿತ್ತವು ಯಾವಾಗಲೂ ವಿಷಯ ಕಷಾಯಗಳಿಂದ ವಿರಕ್ತವಾಗಿಯೇ ಉಳಿಯುವುದರಿಂದ ಪ್ರತಿಯೊಬ್ಬ ಗೃಹಸ್ಥನು ಅವಶ್ಯವಾಗಿ ಸಾಮಾಯಿಕ ಮಾಡಬೇಕಾಗುವುದು.

ಈಗ ಪ್ರೋಷಧೋಪವಾಸದ ವಿಧಿಯನ್ನು ಹೇಳುತ್ತಾರೆ, -

ಮುಕ್ತಸಮಸ್ತಾರಂಭಃಪ್ರೋಷಧದಿನಪೂರ್ವವಾಸರಸ್ಯಾರ್ಧೇ .
ಉಪವಾಸಂ ಗೃಹ್ಣೀಯಾನ್ಮಮತ್ವಮಪಹಾಯ ದೇಹಾದೌ ।।೧೫೨।।

**ಅನ್ವಯಾರ್ಥ ಃ- [ಮುಕ್ತಸಮಸ್ತಾರಂಭಃ]** ಸಮಸ್ತ ಆರಂಭದಿಂದ ಬಿಡುಗಡೆ ಹೊಂದಿ **[ದೇಹಾದೌ]** ಶರೀರ ಮೊದಲಾದವುಗಳಲ್ಲಿ **[ಮಮತ್ವಂ]** ಮಮತೆಯ ಬುದ್ಧಿಯ **[ಅಪಹಾಯ]** ತ್ಯಾಗ ಮಾಡಿ **[ಪ್ರೋಷಧದಿನ ಪೂರ್ವವಾಸರಸ್ಯಾರ್ಧೇ]** ಪರ್ವದ ಮೊದಲನೆಯ ದಿವಸದ ಮಧ್ಯಾಹ್ನ ಕಾಲದಲ್ಲಿ **[ಉಪವಾಸಂ]** ಉಪವಾಸವನ್ನು **[ಗೃಹ್ಣೀಯಾತ್]** ಅಂಗೀಕಾರ ಮಾಡಬೇಕಾಗುವುದು.

**ಟೀಕೆ ಃ- 'ಪ್ರೋಷಧದಿನಪೂರ್ವವಾಸರಸ್ಯಾರ್ಧೇ ಮುಕ್ತ ಸಮಸ್ತಾರಂಭಃ ದೇಹಾದೌ ಮಮತ್ವಂ ಅಪಹಾಯ ಉಪವಾಸಂ ಗೃಹ್ಣೀಯಾತ್'** - ಯಾವ ದಿವಸ ಉಪವಾಸ ಮಾಡುವುದಿದೆ ಅದರ ಮೊದಲು ಒಂದು ದಿವಸ ಎಂದರೆ ಧಾರಣದ ದಿವಸ ಸಮಸ್ತ ಆರಂಭವನ್ನು ಬಿಟ್ಟುಕೊಟ್ಟು ನಾಲ್ಕು ಪ್ರಕಾರದ ಆಹಾರದ ತ್ಯಾಗ ಮಾಡಿ ಶರೀರದಲ್ಲಿನ ಮಮತೆಯ ಭಾವವನ್ನು ತೊರೆದು ಉಪವಾಸ ಗ್ರಹಣ ಮಾಡಬೇಕು.

**ಭಾವಾರ್ಥ ಃ-** ಹೇಗೆಂದರೆ ಅಷ್ಟಮಿಯ ದಿವಸ ಉಪವಾಸ ಮಾಡುವುದಿದ್ದರೆ ಸಪ್ತಮಿಯ ಮಧ್ಯಾಹ್ನದ ಹನ್ನೆರಡು ಗಂಟೆಯಿಂದ ನಾಲ್ಕೂ ಪ್ರಕಾರದ ಆಹಾರದ ತ್ಯಾಗ ಮಾಡಿ, ಸಮಸ್ತ ಆರಂಭದ ತ್ಯಾಗ ಮಾಡುತ್ತ ಶರೀರಾದಿಗಳ ಮೇಲಿನ ಮೋಹವನ್ನು ಬಿಟ್ಟುಕೊಟ್ಟು ಉಪವಾಸ ಧಾರಣ ಮಾಡಬೇಕು.

ಈಗ ಉಪವಾಸ ದಿವಸದ ಕರ್ತವ್ಯ ಹೇಳುತ್ತಾರೆ, -

ಶ್ರಿತ್ವಾ ವಿವಿಕ್ತವಸತಿಂ ಸಮಸ್ತಸಾವದ್ಯಯೋಗಮಪನೀಯ ।
ಸರ್ವೇಂದ್ರಿಯಾರ್ಥವಿರತಃ ಕಾಯಮನೋವಚನಗುಪ್ತಿಭಿಸ್ತಿಷ್ಠೇತ್ ।।೧೫೩।।

**ಅನ್ವಯಾರ್ಥ ಃ-** ಪುನಃ **[ವಿವಿಕ್ತವಸತಿಂ]** ನಿರ್ಜನವಾದ ವಸತಿಕೆ[೧]-ನಿವಾಸಸ್ಥಾನದಲ್ಲಿ **[ಶ್ರಿತ್ವಾ]** ಹೋಗಿ **[ಸಮಸ್ತಸಾವದ್ಯಯೋಗಂ** ಸಮಸ್ತಸಾವದ್ಯಯೋಗದ[೨] **[ಅಪನೀಯ)** ತ್ಯಾಗ ಮಾಡಿ **[ಸರ್ವೇಂದ್ರಿಯಾರ್ಥ-ವಿರತಃ]** ಎಲ್ಲ ಇಂದ್ರಿಯಗಳಿಂದ ವಿರಕ್ತರಾಗಿ **[ಕಾಯಮನೋವಚನಗುಪ್ತಿಭಿಃ]** ಮನೋಗುಪ್ತಿ, ವಚನಗುಪ್ತಿ ಮತ್ತು ಕಾಯಗುಪ್ತಿಯಿಂದ ಸಹಿತ **[ತಿಷ್ಠೇತ್]** ಸ್ಥಿರವಾಗಬೇಕು.

**ಟೀಕೆ ಃ- 'ವಿವಕ್ತ ವಸತಿಂ ಶ್ರಿತ್ವಾ ಸಮಸ್ತ ಸಾವದ್ಯಯೋಗಂ ಅಪನೀಯ ಸರ್ವೇಂದ್ರಿಯಾರ್ಥವಿರತಃ ಕಾಯಮನೋವಚನಗುಪ್ತಿಭಿಃ ತಿಷ್ಠೇತ್'** - ಸಪ್ತಮಿಯ ದಿವಸ ಉಪವಾಸ ಧಾರಣ ಮಾಡಿರುವಂಥ ಶ್ರಾವಕನು ಅದೇ ಸಮಯದಲ್ಲಿ ಏಕಾಂತಸ್ಥಾನಕ್ಕೆ ಹೋಗಿ (ಹದಿನಾರು ಪ್ರಹರ ಎಂದರೆ ೪೮ ಗಂಟೆಗಳ ಸಲುವಾಗಿ) ಹಿಂಸೆ

---

೧. ಪ್ರಾಚೀನ ಕಾಲದಲ್ಲಿ ನಗರ-ಗ್ರಾಮಗಳ ಹೊರಗೆ ಧರ್ಮಾತ್ಮ ಜನರಾದ ಮುನಿಗಳು ಇರುವ ಸಲುವಾಗಿ ವಿಶ್ರಾಂತಿಯ ಸಲುವಾಗಿ ಅಥವಾ ಸಾಮಾಯಿಕ ಮೊದಲಾದುವನ್ನು ಮಾಡುವ ಸಲುವಾಗಿ ಕುಟೀರ ಮೊದಲಾದುವನ್ನು ರಚಿಸುತ್ತಿದ್ದರು, ಅದನ್ನು ವಸತಿಕೆಯೆಂದು ಹೇಳುತ್ತಿದ್ದರು. ಇಂದೂ ಕೂಡ ಅನೇಕ ನಗರಗಳಲ್ಲಿ ವಸತಿಕೆಗಳು ಕಂಡು ಬರುತ್ತವೆ.

೨. ಸಂಪೂರ್ಣ ಸಾವದ್ಯಯೋಗದ ತ್ಯಾಗ ಯಾವ ಸಮಯದಲ್ಲಿ ಸಾವದ್ಯಯೋಗದತ್ಯಾಗ ಮಾಡುವುದು ಆ ಸಮಯದಲ್ಲಿ ನಾನು ಎಲ್ಲ ಸಾವದ್ಯಯೋಗದ ತ್ಯಾಗಿಯಾಗುತ್ತೇನೆ'ದು ಪ್ರತಿಜ್ಞೆ ಮಾಡಬೇಕು.

ಮೊದಲಾದ ಐದೂ ಪಾಪಗಳನ್ನು ಸಂಕಲ್ಪಪೂರ್ವಕವಾಗಿ ತ್ಯಾಗ ಮಾಡಿ, ಐದೂ ಇಂದ್ರಿಯ ವಿಷಯಗಳಿಂದ ವಿರಕ್ತನಾಗಿ, ಮನ-ವಚನ-ಕಾಯವನ್ನು ವಶದಲ್ಲಿಟ್ಟುಕೊಳ್ಳಬೇಕು ಎಂದರೆ ಮೂರು ಗುಪ್ತಿಯ ಪಾಲನೆ ಮಾಡಬೇಕು.

**ಭಾವಾರ್ಥ :-** ಉಪವಾಸದ ಸಮಸ್ತಸಮಯವನ್ನು ಧರ್ಮಧ್ಯಾನದಲ್ಲಿಯೇ ವ್ಯತೀತ ಮಾಡಬೇಕಾಗುವುದು, ಏಕಾಂತ ಸ್ಥಾನವಿಲ್ಲದೆ ಧರ್ಮಧ್ಯಾನವಾಗುವ ಸಾಧ್ಯತೆಯಿಲ್ಲ, ಆದುದರಿಂದ ಏಕಾಂತ ಸ್ಥಾನಗಳಾದ ಧರ್ಮಶಾಲೆ, ಚೈತ್ಯಾಲಯ ಮೊದಲಾದವುಗಳಲ್ಲಿ ವಾಸ ಮಾಡಬೇಕು ಮತ್ತು ಮನಸ್ಸಿನಲ್ಲಿ ವಿಚಾರ ಮಾಡಿದರೆ ಕೇವಲ ಧಾರ್ಮಿಕ ಮಾತುಗಳ ವಿಚಾರವನ್ನೇ ಮಾಡಬೇಕು, ವಚನ ಆಡಿದರೆ ಧಾರ್ಮಿಕ ಮಾತುಗಳ ವಿವೇಚನೆಯನ್ನೇ ಮಾಡಬೇಕು, ಮತ್ತು ಕಾಯದ ಚೇಷ್ಟೆ ಮಾಡಿದರೆ ತನ್ನ ಮರ್ಯಾದೆಯ ಪ್ರಮಾಣವಾದ ಕ್ಷೇತ್ರದಲ್ಲಿ ಧರ್ಮರೂಪವಾಗಿಯೇ ಮಾಡಬೇಕು, ನಿರರ್ಥಕ ಗಮನಾದಿಗಳನ್ನು ಮಾಡಬಾರದು. ಈ ಪ್ರಕಾರ ಮೂರು ಗುಪ್ತಿಗಳ ಪಾಲನೆ ಮಾಡಬೇಕು.

ಅನಂತರ ಏನು ಮಾಡಬೇಕೆಂಬುದನ್ನು ಈಗ ತಿಳಿಸಿಕೊಡುತ್ತಾರೆ, -

ಧರ್ಮಧ್ಯಾನಾಸಕ್ತೋ ವಾಸರಮತಿವಾಹ್ಯ ವಿಹಿತಸಾಂಧ್ಯವಿಧಿಮ್ ।
ಶುಚಿಸಂಸ್ತರೇ ತ್ರಿಯಾಮಾಂ ಗಮಯೇತ್ಸ್ವಾಧ್ಯಾಯ ಜಿತನಿದ್ರಃ ॥೧೫೪॥

**ಅನ್ವಯಾರ್ಥ :-** **[ವಿಹಿತಸಾಂಧ್ಯವಿಧಿಮ್]** ಪ್ರಾತಃಕಾಲ ಹಾಗೂ ಸಾಯಂಕಾಲದ ಸಾಮಾಯಿಕ ಮೊದಲಾದ ಕ್ರಿಯೆಗಳನ್ನು ಮಾಡಿ **[ವಾಸರಮ್]** ಹಗಲು ಹೊತ್ತನ್ನು **[ಧರ್ಮಧ್ಯಾನಾಸಕ್ತಃ]** ಧರ್ಮಧ್ಯಾನದಲ್ಲಿ ಲೀನನಾಗಿ **[ಅತಿವಾಹ್ಯ]** ವ್ಯತೀತ ಮಾಡಬೇಕು ಮತ್ತು **[ಸ್ವಾಧ್ಯಾಯಜಿತನಿದ್ರಃ]** ಪಠಣ-ಪಾಠಣದಿಂದ ನಿದ್ರೆಯನ್ನು ಜಯಿಸಿ **[ಶುಚಿಸಂಸ್ತರೇ]** ಪವಿತ್ರವಾದ ಹಾಸಿಗೆಯ (ಚಾಪೆ ಮೊದಲಾದವುಗಳ) ಮೇಲೆ **[ತ್ರಿಯಾಮಾಂ]**ರಾತ್ರಿಯನ್ನು **[ಗಮಯೇತ್]** ಪೂರ್ಣ ಮಾಡಬೇಕು.

**ಟೀಕೆ :- 'ಧರ್ಮಧ್ಯಾನಾಸಕ್ತೋ ವಾಸರಂ ಅತಿವಾಹ್ಯ ವಿಹಿತ ಸಾಂಧ್ಯವಿಧಿವ್ ಸ್ವಾಧ್ಯಾಯ ಜಿತನಿದ್ರಃ ಶುಚಿಸಂಸ್ತರೇ ತ್ರಿಯಾಮಾಂ ಗಮಯೇತ್'** - ಉಪವಾಸ ಅಂಗೀಕಾರ ಮಾಡಿದ ಶ್ರಾವಕನು ಧರ್ಮಧ್ಯಾನದಲ್ಲಿ ಲೀನನಾಗಿ ಹಗಲು ಹೊತ್ತನ್ನು ಪೂರ್ಣ ಮಾಡುವನು ಮತ್ತು ಸಾಯಂಕಾಲದ ಸಾಮಾಯಿಕ ಮೊದಲಾದುವನ್ನು ಮಾಡಿ ಮೂರು ಪ್ರಹರದವರೆಗೆ ಪವಿತ್ರವಾದ ಹಾಸಿಗೆಯ ಮೇಲೆ ಕುಳಿತು ಯಥಾ ಶಕ್ತಿ ಸ್ವಾಧ್ಯಾಯ ಮಾಡುತ್ತ ರಾತ್ರಿಯನ್ನು ವ್ಯತೀತ ಮಾಡುವನು.

**ಭಾವಾರ್ಥ :-** ಇದು ಉಪವಾಸ ಧಾರಣದ ದಿವಸವಿರುವುದರಿಂದ ಮಧ್ಯಾಹ್ನದ ಹನ್ನೆರಡು ಗಂಟೆಯಿಂದ ಸಾಯಂಕಾಲದವರೆಗೆ ಧರ್ಮಧ್ಯಾನ ಮಾಡುವುದು, ಅನಂತರ ಸಾಮಾಯಿಕ ಮಾಡಿ ಸ್ವಾಧ್ಯಾಯ ಮಾಡುವುದು ನಂತರ ಶಯನ ಮಾಡುವುದು ಮತ್ತು ಯಥಾಶಕ್ತಿ ಬ್ರಹ್ಮಚರ್ಯ ವ್ರತದ ಪಾಲನೆ ಮಾಡುವದು. ಇದರ ನಂತರ ಪ್ರಾತಃಕಾಲದ ನಾಲ್ಕು ಗಂಟೆಯಿಂದ ಹಾಸಿಗೆಯನ್ನು ಬಿಟ್ಟುಕೊಟ್ಟು ಜಾಗೃತವಾಗಿ ಬಿಡಬೇಕಾಗುವುದು.

ಇದಾದ ನಂತರ ಏನು ಮಾಡಬೇಕೆಂಬುದನ್ನು ಈಗ ಹೇಳುತ್ತಾರೆ, -

---

★ ಪ್ರಾಸುಕ - ಆ ದ್ರವ್ಯವು ಪಕ್ವವಾಗಿರಬೇಕು. ಅಗ್ನಿಯಿಂದ ಕಾಯಿಸಿದ್ದಿರಬೇಕು - ಲವಣ ಹಾಗೂ ಆಮ್ಲರಸ ಮಿಶ್ರಿತವಿರಬೇಕು - ಗಾಣ, ಚೂರಿ, ಗಿರಣಿ ಮೊದಲಾದ ಯಂತ್ರಗಳಿಂದ ಭಿನ್ನ-ಭಿನ್ನ ಮಾಡಿದ್ದಿರಬೇಕು - ಹಾಗೂ ಸಂಶೋಧಿತವಿರಬೇಕು. ಇವೆಲ್ಲವೂ ಪ್ರಸುಕವಿವೆ ಅಚಿತ್ತವಿದೆ. ಈ ಗಾಥೆಯು ಸ್ವಾಮಿ ಕಾರ್ತಿಕೇಯ ಗ್ರಂಥದ ಸಂಸ್ಕೃತ ಟೀಕೆಯಲ್ಲಿ ಮತ್ತು ಗೊಮ್ಮಟಸಾರದ ಕೇಶವವರ್ಣಿಕೃತ ಸಂಸ್ಕೃತ ಟೀಕೆಯಲ್ಲಿ ಸತ್ಯವಚನದ ಭೇದಗಳಲ್ಲಿ ಹೇಳಲಾಗಿದೆ.

**ಪ್ರಾತಃ ಪ್ರೋತ್ಥಾಯ ತತಃ ಕೃತ್ವಾ ತಾತ್ಕಾಲಿಕಂ ಕ್ರಿಯಾಕಲ್ಪಮ್ ।**
**ನಿರ್ವರ್ತಯೇದ್ಯಥೋಕ್ತಂ ಜಿನಪೂಜಾಂ ಪ್ರಾಸುಕೈರ್ದ್ರವ್ಯೈಃ ॥೧೫೫॥**

**ಅನ್ವಯಾರ್ಥ ಃ- [ತತಃ]** ಇದರ ನಂತರ **[ಪ್ರಾತಃ]** ಪ್ರಾತಃಕಾಲದಲ್ಲಿಯೇ **[ಪ್ರೋತ್ಥಾಯ]** ಎದ್ದು **[ತಾತ್ಕಾಲಿಕಂ]** ಪ್ರಾತಃಕಾಲದ **[ಕ್ರಿಯಾಕಲ್ಪಮ್]** ಸಾಮಾಯಿಕ ಮೊದಲಾದ ಕ್ರಿಯೆಗಳನ್ನು **[ಕೃತ್ವಾ]** ಮಾಡಿ **[ಪ್ರಾಸುಕೈಃ]** ಪ್ರಾಸುಕ ಎಂದರೆ ಜೀವರಹಿತ **[ದ್ರವ್ಯೈಃ]** ದ್ರವ್ಯಗಳಿಂದ **[ಯಥೋಕ್ತಂ]** ಆರ್ಷಗ್ರಂಥಗಳಲ್ಲಿ ಹೇಳಿದ ಪ್ರಕಾರ **[ಜಿನಪೂಜಾಂ]** ಜಿನೇಂದ್ರದೇವರ ಪೂಜೆಯನ್ನು **[ನಿರ್ವರ್ತಯೇತ್]** ಮಾಡಬೇಕು.

**ಟೀಕೆ ಃ- 'ತತಃ ಪ್ರಾತಃ ಪ್ರೋತ್ಥಾಯ ತಾತ್ಕಾಲಿಕಂ ಕ್ರಿಯಾಕಲ್ಪಂ ಕೃತ್ವಾ ಯಥೋಕ್ತಂ ಪ್ರಾಸುಕೈಃ ದ್ರವ್ಯೈಃ ಜಿನಪೂಜಾಂ ನಿರ್ವರ್ತಯೇತ್'** - ಶಯನದ ನಂತರ ಬೆಳಿಗ್ಗೆ ನಾಲ್ಕು ಗಂಟೆಗೆ ಬ್ರಹ್ಮಮುಹೂರ್ತದಲ್ಲಿ ಜಾಗೃತವಾಗಿ ಸಾಮಾಯಿಕ ಮತ್ತು ಭಜನೆ - ಸ್ತುತಿ ಮೊದಲಾದವುಗಳನ್ನು ಮಾಡಿ, ಶೌಚ-ಸ್ನಾನ ಮೊದಲಾದವುಗಳಿಂದ ನಿವೃತ್ತವಾಗಿ ಎಂಟು ಪ್ರಕಾರದ ಪ್ರಾಸುಕದ್ರವ್ಯಗಳಿಂದ ಭಗವಂತರ ಪೂಜೆ ಮಾಡುವುದು ಹಾಗೂ ಸ್ವಾಧ್ಯಾಯ ಮೊದಲಾದುವನ್ನು ಮಾಡುವುದು.

**ಭಾವಾರ್ಥ ಃ-** ಪ್ರಾಸುಕ ದ್ರವ್ಯಗಳಿಂದ ಭಗವಂತರ ಪೂಜೆ ಮಾಡಬೇಕೆಂಬುದು ಆಚಾರ್ಯರ ಅಭಿಪ್ರಾಯವಿದೆ. ಆದುದರಿಂದ ನೀರನ್ನು ಲವಂಗದಿಂದ ಪ್ರಾಸುಕ*ವನ್ನಾಗಿ ಮಾಡಿಕೊಳ್ಳಬೇಕು, ಅಥವಾ ನೀರನ್ನು ಕುದಿಸಿ ತೆಗೆದುಕೊಳ್ಳಬೇಕು ಮತ್ತು ಅದೇ ನೀರಿನಿಂದ ಪೂಜಾ ದ್ರವ್ಯಗಳನ್ನು ತೊಳೆದುಕೊಳ್ಳಬೇಕು. ಭಗವಂತರ ಪೂಜೆಯಲ್ಲಿ ಅನೇಕ ಪ್ರಕಾರದ ಸಚಿತ್ತ ಪದಾರ್ಥಗಳನ್ನು ಎಂದರೆ ಮೊಸಂಬಿ, ಕಿತ್ತಳೆಹಣ್ಣು, ಸೀತಾಫಳ, ಕಬ್ಬು ಮೊದಲಾದ ವಸ್ತುಗಳನ್ನು ಉಪವಾಸದ ವ್ರತ ಧಾರಣ ಮಾಡಿದವರು ಎಂದೂ ಏರಿಸಬಾರದು.

ಇಷ್ಟಾದ ನಂತರ ಮತ್ತೆ ಏನು ಮಾಡಬೇಕೆಂಬುದನ್ನು ಈಗ ಹೇಳುತ್ತಾರೆ, -

**ಉಕ್ತೇನ ತತೋ ವಿಧಿನಾ ನೀತ್ವಾ ದಿವಸಂ ದ್ವಿತೀಯರಾತ್ರಿಂ ಚ ।**
**ಅತಿವಾಹಯೇತ್ಪ್ರಯತ್ನಾದರ್ಧಂ ಚ ತೃತೀಯ ದಿವಸಸ್ಯ ॥೧೫೬॥**

**ಅನ್ವಯಾರ್ಥ ಃ- [ತತಃ]** ಅದರ ನಂತರ **[ಉಕ್ತೇನ]** ಪೂರ್ವೋಕ್ತ **[ವಿಧಿನಾ]** ವಿಧಿಯಿಂದ **[ದಿವಸಂ]** ಉಪವಾಸದ ದಿವಸವನ್ನು **[ಚ]** ಮತ್ತು **[ದ್ವಿತೀಯರಾತ್ರಿಂ]** ಎರಡನೆಯ ರಾತ್ರಿಯನ್ನು **[ನೀತ್ವಾ]** ವ್ಯತೀತ ಮಾಡಿ **[ಚ]** ಪುನಃ **[ತೃತೀಯ ದಿವಸಸ್ಯ]** ಮೂರನೆಯ ದಿವಸದ **[ಅರ್ಧಂ]** ಅರ್ಧಭಾಗವನ್ನು ಕೂಡ **[ಪ್ರಯತ್ನಾತ್]** ಅತ್ಯಂತ ಪ್ರಯತ್ನಪೂರ್ವಕವಾಗಿ **[ಅತಿವಾಹಯೇತ್]** ವ್ಯತೀತ ಮಾಡಬೇಕು.

**ಟೀಕೆ ಃ- 'ತತಃ ಉಕ್ಕೇನ ವಿಧಿನಾ ದಿವಸಂ ನೀತ್ವಾ ಚ ದ್ವಿತೀಯ ರಾತ್ರಿಂ ನೀತ್ವಾ ಚ ತೃತೀಯ ದಿವಸಸ್ಯ ಅರ್ದ್ಧಂ ಪ್ರಯತ್ನಾತ್ ಅತಿವಾಹಯೇತ್'** - ಪುನಃ ಯಾವ ಪ್ರಕಾರ ಧರ್ಮಧ್ಯಾನಪೂರ್ವಕ ಮೊದಲನೆಯ ಅರ್ಧ ದಿವಸವನ್ನು ವ್ಯತೀತ ಮಾಡಲಾಗಿತ್ತು ಅದೇ ಪ್ರಕಾರ ಎರಡನೆಯ ದಿವಸವನ್ನು ಕೂಡ ವ್ಯತೀತ ಮಾಡಿ, ಮತ್ತು ಹೇಗೆ ಸ್ವಾಧ್ಯಾಯಪೂರ್ವಕವಾಗಿ ಮೊದಲನೆಯ ರಾತ್ರಿಯನ್ನು ಕಳೆಯಲಾಗಿತ್ತು ಹಾಗೆಯೇ ಎರಡನೆಯ ರಾತ್ರಿಯನ್ನು ಕೂಡ ವ್ಯತೀತ ಮಾಡಿ ಅತ್ಯಂತ ಪ್ರಯತ್ನಪೂರ್ವಕವಾಗಿ ಮೂರನೆಯ ಅರ್ಧ ದಿವಸವನ್ನು ಕೂಡ ವ್ಯತೀತ ಮಾಡಬೇಕಾಗುವುದು.

**ಭಾವಾರ್ಥ ಃ-** ಯಾವ ಪ್ರಕಾರ ಧಾರಣಾದ ದಿವಸವನ್ನು ವ್ಯತೀತ ಮಾಡಲಾಗಿತ್ತು ಅದೇ ಪ್ರಕಾರ ಪಾರಣೆಯ

ದಿವಸವನ್ನು ಕೂಡ ವ್ಯತೀತ ಮಾಡಬೇಕು. ಧಾರಣಾದಿಂದ ಹಿಡಿದು ಪಾರಣೆಯವರೆಗಿನ ಹದಿನಾರು ಪ್ರಹರದ ಸಮಯಯವನ್ನು (ನಲವತ್ತೆಂಟು ಗಂಟೆಗಳನ್ನು) ಶ್ರಾವಕನು ಒಳ್ಳೆಯ ಪ್ರಕಾರದ ಧರ್ಮ ಪೂರ್ವಕವಾಗಿಯೇ ಕಳೆಯಬೇಕಾಗುವುದು, ಎಂದರೇನೇ ಅವನ ಉಪವಾಸ ಮಾಡುವುದು ಸಾರ್ಥಕವಿದೆ. ಏಕೆಂದರೆ ವಿಷಯ-ಕಷಾಯಗಳ ತ್ಯಾಗ ಮಾಡುವ ಸಲುವಾಗಿಯೇ ಉಪವಾಸ ಮೊದಲಾದುವನ್ನು ಮಾಡಲಾಗುತ್ತದೆ.

ಈಗ ಉಪವಾಸ ಮಾಡುವುದರ ಫಲವನ್ನು ತಿಳಿಸಿಕೊಡುತ್ತಾರೆ, -

ಇತಿ ಯಃ ಷೋಡಶಯಾಮಾನ್ ಗಮಯತಿ ಪರಿಮುಕ್ತಸಕಲಸಾವದ್ಯಃ ।
ತಸ್ಯ ತದಾನೀಂ ನಿಯತಂ ಪೂರ್ಣಮಹಿಂಸಾವ್ರತಂ ಭವತಿ ।।೧೫೮।।

**ಅನ್ವಯಾರ್ಥ :-** **[ಯಃ]** ಯಾವ ಜೀವನು **[ಇತಿ]** ಈ ಪ್ರಕಾರ **[ಪರಿಮುಕ್ತಸಕಲಸಾವದ್ಯಃ ಸನ್]** ಸಂಪೂರ್ಣ ಪಾಪಕ್ರಿಯೆಗಳಿಂದ ರಹಿತನಾಗಿ **[ಷೋಡಶಯಾಮಾನ್]** ಹದಿನಾರು ಪ್ರಹರಗಳನ್ನು **[ಗಮಯತಿ]** ಕಳೆಯುತ್ತಾನೆ. **[ತಸ್ಯ]** ಅವನಿಗೆ **[ತದಾನೀಂ]** ಆ ಸಮಯದಲ್ಲಿ **[ನಿಯತಂ]** ನಿಶ್ಚಯಪೂರ್ವಕವಾಗಿ **[ಪೂರ್ಣಂ]** ಸಂಪೂರ್ಣ **[ಅಹಿಂಸಾವ್ರತಂ]** ಅಹಿಂಸಾವ್ರತವು **[ಭವತಿ]** ಆಗುತ್ತದೆ.

**ಟೀಕೆ :- 'ಇತಿ (ಪೂರ್ವೋಕ್ತರೀತ್ಯಾ) ಯಃ (ಶ್ರಾವಕಃ) ಪರಿಮುಕ್ತಸಕಲಸಾವದ್ಯಃ ಷೋಡಶಯಾಮಾನ್ ಗಮಯತಿ, ತಸ್ಯ (ಶ್ರಾವಕಸ್ಯ) ತದಾನೀಂ ನಿಯತಂ ಪೂರ್ಣಂ ಅಹಿಂಸಾವ್ರತಂ ಭವತಿ'** - ಯಾವ ಪ್ರಕಾರದಿಂದ ಉಪವಾಸದ ವಿಧಿಯನ್ನು ಮಾಡಲಾಗಿದೆ ಅದೇ ಪ್ರಕಾರದಿಂದ ಯಾವ ಶ್ರಾವಕನು ಸಂಪೂರ್ಣ ಆರಂಭ-ಪರಿಗ್ರಹದ ತ್ಯಾಗ ಮಾಡಿ ಹದಿನಾರು ಪ್ರಹರಗಳನ್ನು ವ್ಯತೀತ ಮಾಡುತ್ತಾನೆ ಆ ಶ್ರಾವಕನಿಗೆ ಆ ಹದಿನಾರು ಪ್ರಹರಗಳಲ್ಲಿ ನಿಯಮದಿಂದ ಪೂರ್ಣ ಅಹಿಂಸಾವ್ರತದ ಪಾಲನೆಯಾಗುತ್ತದೆ.

**ಭಾವಾರ್ಥ :-** ಉಪವಾಸವು ಮೂರು ಪ್ರಕಾರದ್ದಿದೆ. ಅದರಲ್ಲಿ ಉತ್ಕೃಷ್ಟ ಉಪವಾಸವು ಹದಿನಾರು ಪ್ರಹರದ್ದಿದೆ, ಮಧ್ಯಮ ಉಪವಾಸವು ಹನ್ನೆರಡು ಪ್ರಹರದ್ದಿದೆ, ಜಘನ್ಯ ಉಪವಾಸವು ಎಂಟು ಪ್ರಹರದ್ದಿದೆ.

೧) ಸಪ್ತಮಿಯ ದಿವಸ ಮಧ್ಯಾಹ್ನ ಹನ್ನೆರಡು ಗಂಟೆಗೆ ಉಪವಾಸ ಧಾರಣ ಮಾಡುವುದು ಮತ್ತು ನವಮಿಯ ದಿವಸ ಮಧ್ಯಾಹ್ನ ಹನ್ನೆರಡು ಗಂಟೆಗೆ ಪಾರಣೆ ಮಾಡುವುದು. ಈ ಪ್ರಕಾರ ಹದಿನಾರು ಪ್ರಹರಗಳಾದವು, ಇದು ಉತ್ಕೃಷ್ಟ ಉಪವಾಸವಿದೆ.

೨) ಸಪ್ತಮಿಯ ದಿವಸ ಸಾಯಂಕಾಲ ಐದು ಗಂಟೆಗೆ ಉಪವಾಸ ಧಾರಣ ಮಾಡುವುದು ಮತ್ತು ನವಮಿಯ ದಿವಸ ಪ್ರಾತಃಕಾಲ ಏಳು ಗಂಟೆಗೆ ಪಾರಣೆ ಮಾಡುವುದು. ಇದು ಹನ್ನೆರಡು ಪ್ರಹರದ ಮಧ್ಯಮ ಉಪವಾಸವಿದೆ.

೩) ಜಘನ್ಯ ಉಪವಾಸವು ಎಂಟು ಪ್ರಹರದ್ದಿದೆ. ಅಷ್ಟಮಿಯ ದಿವಸ ಪ್ರಾತಃಕಾಲ ಎಂಟು ಗಂಟೆಗೆ ಉಪವಾಸ ಧಾರಣ ಮಾಡುವುದು ಮತ್ತು ನವಮಿಯ ದಿವಸ ಪ್ರಾತಃಕಾಲ ಎಂಟು ಗಂಟೆಗೆ ಪಾರಣೆ ಮಾಡುವುದು. ಇದು ಎಂಟು ಪ್ರಹರದ ಜಘನ್ಯ ಉಪವಾಸವಾಯಿತು. ಈ ಪ್ರಕಾರ ಉಪವಾಸದ ವರ್ಣನೆಯು ಪೂರ್ಣವಾಯಿತು.

ಉಪವಾಸದಲ್ಲಿ ವಿಶೇಷವಾಗಿ ಅಹಿಂಸೆಯ ಪುಷ್ಟಿಯಾಗುತ್ತದೆಯೆಂದು ಈಗ ಹೇಳುತ್ತಾರೆ, -

ಭೋಗೋಪಭೋಗಹೇತೋಃ ಸ್ಥಾವರಹಿಂಸಾ ಭವೇತ್ ಕಿಲಾಮೀಷಾಮ್ ।
ಭೋಗೋಪಭೋಗ ವಿರಹಾದ್ಭವತಿ ನ ಲೇಶೋಽಪಿ ಹಿಂಸಾಯಾಃ ।।೧೫೯।।

**ಅನ್ವಯಾರ್ಥ :-** **[ಕಿಲ]** ನಿಶ್ಚಯದಿಂದ **[ಅಮೀಷಾವ್]** ಈ ದೇಶವ್ರತಿ ಶ್ರಾವಕನಿಗೆ **[ಭೋಗೋಪಭೋಗಹೇತೋಃ]** ಭೋಗ-ಉಪಭೋಗದ ಹೇತುವಿನಿಂದ **[ಸ್ಥಾವರಹಿಂಸಾ]** ಸ್ಥಾವರ ಎಂದರೆ ಏಕೇಂದ್ರಿಯ ಜೀವಗಳ ಹಿಂಸೆಯು **[ಭವೇತ್]** ಆಗುತ್ತದೆ, ಆದರೆ **[ಭೋಗೋಪಭೋಗವಿರಹಾತ್]** ಭೋಗ-ಉಪಭೋಗದ ತ್ಯಾಗದಿಂದ **[ಹಿಂಸಾಯಾ]** ಹಿಂಸೆಯು **[ಲೇಶಃ ಅಪಿ]** ಲೇಶಮಾತ್ರವೂ **[ನ ಭವತಿ]** ಆಗುವುದಿಲ್ಲ.

**ಟೀಕೆ :- 'ಕಿಲ ಅಮೀಷಾವ್ (ಶ್ರಾವಕಾನಾಮ್) ಭೋಗೋಪಭೋಗಹೇತೋಃ ಸ್ಥಾವರಹಿಂಸಾ ಭವೇತ್ (ಅತಃ ಉಪವಾಸೇ) ಭೋಗೋಪಭೋಗವಿರಹಾತ್ ಹಿಂಸಾಯಾಃ ಲೇಶೋऽಪಿ ನ ಭವತಿ'** - ನಿಶ್ಚಯದಿಂದ ಈ ದೇಶವ್ರತೀ ಶ್ರಾವಕರಿಗೆ ಭೋಗೋಪಭೋಗದ ನಿಮಿತ್ತದಿಂದ ಸ್ಥಾವರಹಿಂಸೆಯಾಗುತ್ತದೆ ; ಏಕೆಂದರೆ ಅವರು ಪೂರ್ಣರೂಪದಿಂದ ತ್ರಸಹಿಂಸೆಯ ತ್ಯಾಗಿಗಳೇ ಇದ್ದಾರೆ. ಯಾವಾಗ ಗೃಹಸ್ಥ ಶ್ರಾವಕನು ಉಪವಾಸದಲ್ಲಿ ಸಮಸ್ತ ಆರಂಭ-ಪರಿಗ್ರಹ ಮತ್ತು ಐದೂ ಪಾಪಗಳ ಸಂಪೂರ್ಣ ತ್ಯಾಗ ಮಾಡಿ ಬಿಡುತ್ತಾನೆ. ಆಗ ಅವನಿಗೆ ಉಪವಾಸದಲ್ಲಿ ಸ್ಥಾವರಹಿಂಸೆಯು ಕೂಡ ಆಗುವುದಿಲ್ಲ. ಏಕೆಂದರೆ ಭೋಗೋಪಭೋಗದ ತ್ಯಾಗವಾಗಿ ಹೋಗುವುದರಿಂದ ಹಿಂಸೆಯ ಅಂಶಮಾತ್ರವು ಕೂಡ ಉಳಿಯದಿರುವುದರಿಂದ ಅಹಿಂಸಮಹಾವ್ರತದ ಪಾಲನೆಯಾಗುತ್ತದೆ.

ಈ ಪ್ರಕಾರ ಉಪವಾಸದಲ್ಲಿ ಅಹಿಂಸಾ ಮಹಾವ್ರತದ ಹಾಗೆ ಉಳಿದ ನಾಲ್ಕು ಮಹಾವ್ರತಗಳ ಪಾಲನೆಯು ಕೂಡ ಆಗಿ ಹೋಗುತ್ತದೆಯೆಂಬ ಮಾತನ್ನು ಈಗ ತಿಳಿಸಿಕೊಡುತ್ತಾರೆ, -

ವಾಗ್ಗುಪ್ತೇರ್ನಾಸ್ತ್ಯನೃತಂ ನ ಸಮಸ್ತಾದಾನವಿರಹಿತಃ ಸ್ತೇಯಮ್ ।
ನಾಬ್ರಹ್ಮ ಮೈಥುನಮುಚಃ ಸಂಗೋ ನಾಂಗೇಪ್ಯಮೂರ್ಛಸ್ಯ ॥೧೫೯॥

**ಅನ್ವಯಾರ್ಥ :-** ಮತ್ತು ಉಪವಾಸ ಧಾರಣ ಮಾಡಿದ ಪುರುಷನಿಗೆ **[ವಾಗ್ಗುಪ್ತೇ]** ವಚನ ಗುಪ್ತಿಯಿರುವುದರಿಂದ **[ಅನೃತಂ ನ]** ಅಸತ್ಯ ವಚನವಿರುವುದಿಲ್ಲ. **[ಸಮಸ್ತಾದಾನವಿರಹಿತಃ]** ಸಂಪೂರ್ಣ ಅದತ್ತದಾನದ ತ್ಯಾಗದಿಂದ **[ಸ್ತೇಯಮ್ ನ]** ಕಳವು ಇರುವುದಿಲ್ಲ. **[ಮೈಥುನಮುಚಃ]** ಮೈಥುನದ ತ್ಯಾಗ ಮಾಡುವವನಿಗೆ **[ಅಬ್ರಹ್ಮನ]** ಅಬ್ರಹ್ಮಚರ್ಯವಿರುವುದಿಲ್ಲ ಮತ್ತು **[ಅಂಗೇ]** ಶರೀರದಲ್ಲಿ **[ಅಮೂರ್ಛಸ್ಯ]** ಮಮತೆಯಿಲ್ಲದಿರುವುದರಿಂದ **[ಸಂಗಃ]** ಪರಿಗ್ರಹವು **[ಅಪಿ]** ಕೂಡ **[ನ]** ಇರುವುದಿಲ್ಲ.

**ಟೀಕೆ :- 'ವಾಗ್ಗುಪ್ತೇಃ ಅನೃತಂ ನಾಸ್ತಿ, ಸಮಸ್ತಾದಾನವಿರಹಿತಃ ಸ್ತೇಯಂ ನಾಸ್ತಿ, ಮೈಥುನಮುಚಃ ಅಬ್ರಹ್ಮ ನಾಸ್ತಿ, ಅಂಗೇ ಅಪಿ ಅಮೂರ್ಛಸ್ಯ ಸಂಗಃ ನಾಸ್ತಿ ।'** - ಉಪವಾಸ ಧಾರಣ ಮಾಡಿದ ಪುರುಷನಿಗೆ ವಚನಗುಪ್ತಿಯ ಪಾಲನೆಯಿರುವುದರಿಂದ ಸತ್ಯ ಮಹಾವ್ರತದ ಪಾಲನೆಯಾಗುತ್ತದೆ, ಕೊಡದಿರುವಂಥ ಸಮಸ್ತ ವಸ್ತುಗಳ ಗ್ರಹಣ ಮಾಡುವುದರ ತ್ಯಾಗವಿರುವುದರಿಂದ ಅಚೌರ್ಯ ಮಹಾವ್ರತದ ಪಾಲನೆಯಾಗುತ್ತದೆ, ಸಂಪೂರ್ಣ ಮೈಥುನ ಕರ್ಮದ ತ್ಯಾಗವಿರುವುದರಿಂದ ಬ್ರಹ್ಮಚರ್ಯ ಮಹಾವ್ರತದ ಪಾಲನೆಯಾಗುತ್ತದೆ. ಮತ್ತು ಶರೀರದಲ್ಲಿಯೇ ಮಮತೆಯ ಪರಿಣಾಮವಿಲ್ಲದಿರುವುದರಿಂದ ಪರಿಗ್ರಹ ತ್ಯಾಗ ಮಹಾವ್ರತದ ಪಾಲನೆಯು ಕೂಡ ಆಗುತ್ತದೆ. ಈ ಪ್ರಕಾರ ನಾಲ್ಕೂ ಮಹಾವ್ರತಗಳ ಪಾಲನೆಯು ಉಪವಾಸದಲ್ಲಿ ಆಗಿ ಹೋಗುತ್ತದೆ.

ಶ್ರಾವಕನಿಗೆ ಕೂಡ ಮಹಾವ್ರತವಿದೆ ಮತ್ತು ಮುನಿಗಳಿಗೆ ಕೂಡ ಮಹಾವ್ರತವಿದೆಯೆಂದ ಮೇಲೆ ಅವೆರಡರಲ್ಲಿ ಯಾವ ಅಂತರವಿದೆಯೆಂಬ ಪ್ರಶ್ನೆಯ ಉತ್ತರ ರೂಪವಾಗಿ ಈಗ ಹೇಳುತ್ತಾರೆ, -

**ಇತ್ಥಮಶೇಷಿತಹಿಂಸಾಃ ಪ್ರಯಾತಿ ಸ ಮಹಾವ್ರತಿತ್ವಮುಪಚಾರಾತ್ ।**
**ಉದಯತಿ ಚರಿತ್ರಮೋಹೇ ಲಭತೇ ತು ನ ಸಂಯಮಸ್ಥಾನಮ್ ॥೧೬೦॥**

**ಅನ್ವಯಾರ್ಥ :-** **[ಇತ್ಥಮ್]** ಈ ಪ್ರಕಾರ **[ಅಶೇಷಿತಹಿಂಸಾಃ]** ಸಂಪೂರ್ಣ ಹಿಂಸೆಗಳಿಂದ ರಹಿತವಾದ **[ಸಃ]** ಆ ಪ್ರೋಷಧೋಪವಾಸ ಮಾಡುವಂಥ ಪುರುಷನು **[ಉಪಚಾರಾತ್]** ಉಪಚಾರದಿಂದ ಅಥವಾ ವ್ಯವಹಾರನಯದಿಂದ **[ಮಹಾವ್ರತಿತ್ವಂ]** ಮಹಾವ್ರತತ್ವ **[ಪ್ರಯಾತಿ]** ಪಡೆಯುತ್ತಾನೆ, **[ತು]** ಆದರೆ **[ಚಾರಿತ್ರ-ಮೋಹೇ]** ಚಾರಿತ್ರಮೋಹದ **[ಉದಯತಿ]** ಉದಯರೂಪವಿರುವ ಕಾರಣ **[ಸಂಯಮಸ್ಥಾನಮ್]** ಸಂಯಮ ಸ್ಥಾನ ಎಂದರೆ ಪ್ರಮತ್ತಾದಿ ಗುಣಸ್ಥಾನಗಳನ್ನು **[ನ ಲಭತೇ]** ಪ್ರಾಪ್ತ ಮಾಡಿಕೊಳ್ಳುವುದಿಲ್ಲ.

**ಟೀಕೆ :- 'ಇತ್ಥಂ ಅಶೇಷಿತಹಿಂಸಾಃ ಸಃ (ಶ್ರಾವಕಃ) ಉಪಚಾರಾತ್ ಮಹಾವ್ರತಿತ್ವಂ ಪ್ರಯಾತಿ, ತು ಚಾರಿತ್ರಮೋಹೇ ಉದಯತಿ (ಸತಿ) ಸಂಯಮಸ್ಥಾನಂ ನ ಲಭತೇ'** - ಈ ಪ್ರಕಾರ ಹಿಂಸೆಯು ಅವಶೇಷವಿಲ್ಲದಂಥ ಶ್ರಾವಕನು ಉಪಚಾರದಿಂದ ಮಹಾವ್ರತಿಯೆಂದು ಕರೆಸಿಕೊಳ್ಳುತ್ತಾನೆ. ವಾಸ್ತವದಲ್ಲಿ ಅವನು ಮಹಾವ್ರತಿಯಿಲ್ಲ, ಏಕೆಂದರೆ ಪ್ರತ್ಯಾಖ್ಯಾನಾವರಣ ಚಾರಿತ್ರಮೋಹನೀಯ ಕರ್ಮದ ಉದಯದಲ್ಲಿ ಯುಕ್ತನಿರುವುದರಿಂದ ಆ ಶ್ರಾವಕನು ಮಹಾವ್ರತ ಸಂಯಮಕ್ಕೆ ಪ್ರಾಪ್ತನಾಗುವ ಸಾಧ್ಯತೆಯಿಲ್ಲ.

**ಭಾವಾರ್ಥ :-**ವಾಸ್ತವದಲ್ಲಿಯಾವನಿಗೆ ಪ್ರತ್ಯಾಖ್ಯಾನಾವರಣ ಕ್ರೋಧ-ಮಾನ-ಮಾಯೆ-ಲೋಭದ ಅಭಾವವಾಗಿ ಹೋಗಿದೆ ಅವನೇ ಮಹಾವ್ರತಿ ಸಂಯಮಿಯೆಂದು ಕರೆಯಿಸಿಕೊಳ್ಳುತ್ತಾನೆ. ಆದರೆ ಯಾವನಿಗೆ ಆ ಕಷಾಯಗಳ ಅಭಾವವಂತೂ ಆಗಿಯೇ ಇಲ್ಲ, ಆದರೆ ಆ ದ್ರವ್ಯರೂಪ ಐದೂ ಪಾಪಗಳ ಅಭಾವವಾಗಿ ಹೋಗಿದ್ದರೆ ಅವನಿಗೆ ಉಪಚಾರದಿಂದ ಮಹಾವ್ರತವಿದೆ ; ವಾಸ್ತವದಲ್ಲಿ ಮಹಾವ್ರತವಿಲ್ಲ. ಏಕೆಂದರೆ ಪೂರ್ಣ ಸಂಯಮವು ಪ್ರಮತ್ತಗುಣಸ್ಥಾನದಲ್ಲಿಯೇ ಪ್ರಾರಂಭವಾಗುತ್ತದೆ ಮತ್ತು ಆ ಪ್ರಮತ್ತ ಗುಣಸ್ಥಾನವು ಪ್ರತ್ಯಾಖ್ಯಾನಾವರಣ ಕಷಾಯದ ಅಭಾವವಿಲ್ಲದೆ ಆಗುವುದಿಲ್ಲ. ಈ ಪ್ರಕಾರವಾಗಿ ಪ್ರೋಷಧೋಪವಾಸದ ವರ್ಣನೆ ಮಾಡಲಾಯಿತು. ಈ ಪ್ರೋಷಧೋಪವಾಸವನ್ನು ಸಮಸ್ತ ಶ್ರಾವಕರು ಮಾಡಬೇಕಾಗುವುದು. ಏಕೆಂದರೆ ಇದರಲ್ಲಿ ಐದೂ ಮಹಾಪಾಪಗಳ ತ್ಯಾಗವಾಗಿ ಹೋಗುತ್ತದೆ ಮತ್ತು ಐದೂ ಇಂದ್ರಿಯಗಳ ವಿಷಯ ಹಾಗೂ ಕಷಾಯಗಳ ನಿಗ್ರಹವು ಕೂಡ ಆಗಿ ಹೋಗುತ್ತದೆ. ಯಾವ ಗೃಹಸ್ಥನು ಕೇವಲ ಮಾನ-ದೊಡ್ಡಸ್ತಿಕೆಯ ಸಲುವಾಗಿಯೇ ಉಪವಾಸವನ್ನು ಅಂಗೀಕಾರ ಮಾಡುತ್ತಾನೆ ಮತ್ತು ತನ್ನ ಕಷಾಯಗಳ ತ್ಯಾಗ ಮಾಡುವುದಿಲ್ಲ ಅವನ ಉಪವಾಸ ಮಾಡುವಿಕೆಯು ಅದು ಮಾಡದಿರುವುದರ ಸಮಾನವೇ ಇದೆ.

ಈಗ ಮೂರನೆಯ ಶಿಕ್ಷಾವ್ರತ-ಭೋಗೋಪಭೋಗಪರಿಮಾಣವನ್ನು ಹೇಳುತ್ತಾರೆ, -

**ಭೋಗೋಪಭೋಗಮೂಲಾ ವಿರತಾವಿರತಸ್ಯ ನಾನ್ಯತೋ ಹಿಂಸಾ ।**
**ಅಧಿಗಮ್ಯ ವಸ್ತುತತ್ತ್ವಂ ಸ್ವಶಕ್ತಿಮಪಿ ತಾವಪಿ ತ್ಯಾಜ್ಯೌ ॥೧೬೧॥**

**ಅನ್ವಯಾರ್ಥ :-** **[ವಿರತಾವಿರತಸ್ಯ)** ದೇಶವ್ರತಿಯಾದ ಶ್ರಾವಕನಿಗೆ **[ಭೋಗೋಪಭೋಗಮೂಲಾ]** ಭೋಗ ಮತ್ತು ಉಪಭೋಗದ ನಿಮಿತ್ತದಿಂದಾಗುವಂಥ **[ಹಿಂಸಾ]** ಹಿಂಸೆಯಾಗುತ್ತದೆ **[ಅನ್ಯತಃ ನ]** ಬೇರೆ ಪ್ರಕಾರದಿಂದ ಆಗದಿರುವುದರಿಂದ **[ತೌ]** ಅವೆರಡನ್ನು ಎಂದರೆ ಭೋಗ ಮತ್ತು ಉಪಭೋಗಗಳೆರಡನ್ನು **[ಅಪಿ]** ಕೂಡ **[ವಸ್ತುತತ್ತ್ವಂ]** ವಸ್ತುಸ್ವರೂಪ **[ಅಪಿ]** ಮತ್ತು **[ಸ್ವಶಕ್ತಿಂ]** ತನ್ನ ಶಕ್ತಿಯನ್ನು **[ಅಧಿಗಮ್ಯ]** ತಿಳಿದುಕೊಂಡು ಎಂದರೆ ತನ್ನ ಶಕ್ತಿಗೆ ಅನುಸರಿಸಿ

[ತ್ಯಾಜ್ಯೌ] ಬಿಟ್ಟುಕೊಡುವುದು ಯೋಗ್ಯವಿದೆ.

**ಟೀಕೆ :- 'ವಿರತಾವಿರತಸ್ಯ ಭೋಗೋಪಭೋಗವಮೂಲಾ ಹಿಂಸಾ ಭವತಿ । ಅನ್ಯತಃ ನ ಇತಿ ಹೇತೋಃ ಭಾವಕೇನ ವಸ್ತುತತ್ತ್ವಂ ಅಧಿಗಮ್ಯ ತಥಾ ಸ್ವಶಕ್ತಿಂ ಅಪಿ ಅಧಿಗಮ್ಯ ತೌ ಅಪಿ ಭೋಗೋಪ-ಭೋಗೌ ಅಪಿ ತ್ಯಾಜ್ಯೌ'** - ವ್ರತ ಮತ್ತು ಅವ್ರತದ ಧಾರಣ ಮಾಡಿದ ದೇಶವ್ರತಿ ಶ್ರಾವಕನಿಗೆ ಭೋಗ ಮತ್ತು ಉಪಭೋಗ ಪದಾರ್ಥಗಳ ಸಂಬಂಧವಾಗಿ ಹಿಂಸೆಯಾಗುತ್ತದೆ, ಆದರೆ ಅನ್ಯ ಪ್ರಕಾರದ ಬೇರೆ ಯಾವುದೇ ಹಿಂಸೆಯಾಗುವುದಿಲ್ಲ. ಆದುದರಿಂದ ವಸ್ತುಸ್ವರೂಪವನ್ನು ತಿಳಿದುಕೊಂಡು ಎಂದರೆ ಈ ವಸ್ತುವನ್ನು ಭೋಗಿಸುವಲ್ಲಿ ಇಷ್ಟು ದೋಷವಿದೆ, ಈ ವಸ್ತುವು ಭಕ್ಷ್ಯವಿದೆ, ಈ ವಸ್ತುವು ಅಭಕ್ಷ್ಯವಿದೆಯೆಂದು ವಿಚಾರ ಮಾಡಿ, ಹಾಗೂ ತನ್ನ ಶಕ್ತಿ ಎಂದರೆ ಶರೀರ ಮತ್ತು ಪರಿಣಾಮಗಳ ಶಕ್ತಿಯನ್ನು ತಿಳಿದುಕೊಂಡು ಎಷ್ಟು ಸಂಭವಿಸುವ ಸಾಧ್ಯತೆಯಿದೆ ಅಷ್ಟು ಭೋಗೋಪಭೋಗದ ಪರಿಮಾಣ ಮಾಡಿ ಉಳಿದವುಗಳ ತ್ಯಾಗ ಮಾಡಿ ಬಿಡಬೇಕಾಗುವುದು.

**ಭಾವಾರ್ಥ :-** ಯಾವುದು ಒಂದು ಬಾರಿ ಭೋಗಿಸುವಲ್ಲಿ ಬರುತ್ತದೆ ಅದನ್ನು ಭೋಗವೆಂದು ಹೇಳುತ್ತಾರೆ. ಹೇಗೆಂದರೆ ಅನ್ನ, ಬೇಳೆ, ಚಪಾತಿ, ಹಾಲು, ಮೊಸರು, ತುಪ್ಪ, ಜಿಲೇಬಿ, ಮೈಸೂರಪಾಕ ಇವೇ ಮೊದಲಾದವುಗಳೆಲ್ಲವು ಭೋಗ ಪದಾರ್ಥಗಳಿವೆ. ಯಾವವು ಪುನಃ ಪುನಃ ಭೋಗಿಸುವಲ್ಲಿ ಬರುತ್ತವೆ ಅವನ್ನು ಉಪಭೋಗವೆಂದು ಹೇಳುತ್ತಾರೆ. ಹೇಗೆಂದರೆ ಬಟ್ಟೆ, ಪಾತ್ರೆ, ಮನೆ, ಗದ್ದೆ, ಹಸು, ಎತ್ತು, ಒಡವೆ, ವಾಹನ ಇವೇ ಮೊದಲಾದವುಗಳೆಲ್ಲವು ಉಪಭೋಗ ಪದಾರ್ಥಗಳಿವೆ. ಶ್ರಾವಕನಿಗೆ ಈ ಪದಾರ್ಥಗಳ ಸಂಬಂಧದಿಂದ ಹಿಂಸೆಯಾಗುತ್ತಿರುವುದರಿಂದ ಅವನು ಈ ಹಿಂಸೆಯ ಕಾರಣಗಳನ್ನು ಕೂಡ ಶೀಘ್ರವಾಗಿಯೇ ತ್ಯಾಗ ಮಾಡಬೇಕಾಗುವುದು.

ಏಕೆ ತ್ಯಾಗ ಮಾಡಬೇಕೆಂಬುದನ್ನು ಈಗ ತಿಳಿಸಿಕೊಡುತ್ತಾರೆ, -

ಏಕಮಪಿ ಪ್ರಜಿಘಾಂಸುರ್ನಿಹಂತ್ಯನಂತಾನ್ಯತಸ್ತತೋऽವಶ್ಯಮ್ ।
ಕರಣೀಯಮಶೇಷಾಣಾಂ ಪರಿಹರಣಮನಂತಕಾಯಾನಾಮ್ ॥೧೬೨॥

**ಅನ್ವಯಾರ್ಥ :-** **[ತತಃ]** ಕಾರಣವೇನೆಂದರೆ **[ಏಕಮ್]** ಒಂದು ಸಾಧಾರಣ ಶರೀರವನ್ನು - ಕಂದ ಮೂಲಾದಿಗಳನ್ನು **[ಅಪಿ]** ಕೂಡ **[ಪ್ರಜಿಘಾಂಸು]** ಘಾತ ಮಾಡುವ ಇಚ್ಛೆ ಮಾಡುವಂಥ ಪುರುಷನು **[ಅನಂತಾನಿ]** ಅನಂತ ಜೀವಗಳನ್ನು **[ನಿಹಂತಿ]** ಕೊಲ್ಲುತ್ತಾನೆ, **[ಅತಃ]** ಆದುದರಿಂದ **[ಅಶೇಷಾಣಾಂ]** ಸಂಪೂರ್ಣ **[ಅನಂತಕಾಯಾನಾಂ]** ಅನಂತಕಾಯದ **[ಪರಿಹರಣಂ]** ಪರಿತ್ಯಾಗವನ್ನು **[ಅವಶ್ಯಂ]** ಅವಶ್ಯವಾಗಿ **[ಕರಣೀಯಂ]** ಮಾಡಬೇಕಾಗುವುದು.

**ಟೀಕೆ :- 'ಏಕಂ ಅಪಿ ಪ್ರಜಿಘಾಂಸುಃ ಅತಃ ಅನಂತಾನಿ ನಿಹಂತಿ ತತಃ ಅಶೇಷಾಣಾಂ ಅನಂತಕಾಯಾನಾಂ ಅವಶ್ಯಂ ಪರಿಹರಣಂ ಕರಣೀಯಮ್'** - ಒಂದು ಕಂದಮೂಲ ಸಂಬಂಧದ ಜೀವವನ್ನು ತಿನ್ನುವ ಇಚ್ಛೆ ಮಾಡುವಂಥ ಗೃಹಸ್ಥನು ಆ ಜೀವದ ಜತೆ ಜತೆ ಅದರ ಆಶ್ರಯದಿಂದಿರುವಂಥ ಸಾಧಾರಣ ಅನಂತ

★ ಅವೆಲ್ಲವುಗಳ ತ್ಯಾಗ ಎಂದರೆ ಅವುಗಳ ಸಂಬಂಧದ ರಾಗದ ತ್ಯಾಗವಿದೆ, ಅದುಕೂಡ ಮಿಥ್ಯಾ ಅಭಿಪ್ರಾಯದ ತ್ಯಾಗರೂಪ ಮತ್ತು ಸ್ವಾಶ್ರಯದ ಗ್ರಹಣರೂಪದ ಸಮ್ಯಗ್ದರ್ಶನವಿಲ್ಲದೆ 'ಯಥಾರ್ಥರೀತಿಯಿಂದ ವ್ಯವಹಾರ ತ್ಯಾಗ'ವೆಂದೂ ಹೇಳಲಾಗುವುದಿಲ್ಲ. ಧರ್ಮಾತ್ಮ ಜೀವನು ತ್ರಸ ಹಾಗೂ ಸ್ಥಾವರ ಜೀವದ ಭೇದವನ್ನು ತಿಳಿದುಕೊಳ್ಳಬೇಕಾಗುವುದು. ದ್ವೀಂದ್ರಿಯ ಮೊದಲಾದುವಿಂದ ಪಂಚೇಂದ್ರಿಯವರೆಗಿನ ಜೀವಗಳನ್ನು ತ್ರಸವೆಂದು ಮತ್ತು ಪೃಥ್ವೀಕಾಯಿಕ, ಜಲಕಾಯಿಕ, ವಾಯುಕಾಯಿಕ, ಅಗ್ನಿಕಾಯಿಕ ಮತ್ತು ವನಸ್ಪತಿಕಾಯಿಕ ಜೀವಗಳನ್ನು ಸ್ಥಾವರವೆಂದು ಹೇಳುತ್ತಾರೆ. (ಸ್ಥಾವರ ಜೀವಕ್ಕೆ ಏಕೇಂದ್ರಿಯತನವಿದೆ.)

ಜೀವಗಳಿದ್ದು ಅವೆಲ್ಲವುಗಳ ಘಾತ ಮಾಡುತ್ತಿರುವುದರಿಂದ ಸಾಧಾರಣ ಅನಂತ ಕಾಯವುಳ್ಳ ಎಷ್ಟು ವನಸ್ಪತಿಗಳಿವೆ ಅವೆಲ್ಲವುಗಳ★ ತ್ಯಾಗವನ್ನು ಅವಶ್ಯವಾಗಿ ಮಾಡಬೇಕಾಗುವುದು.

**ಭಾವಾರ್ಥ ಃ-** ವನಸ್ಪತಿಗಳು ಸಾಧಾರಣ ಮತ್ತು ಪ್ರತ್ಯೇಕವೆಂದು ಎರಡು ಪ್ರಕಾರದ್ದಿರುತ್ತವೆ. ಅವುಗಳೊಳಗಿಂದ ಸಾಧಾರಣ ವನಸ್ಪತಿಯ ತ್ಯಾಗವನ್ನಂತೂ ಸರ್ವಥಾ ಗೃಹಸ್ಥಶ್ರಾವಕರು ಮಾಡಿ ಬಿಡಬೇಕಾಗುವುದು. ಮತ್ತು ಯಥಾಶಕ್ತಿ ಪ್ರತ್ಯೇಕ ವನಸ್ಪತಿಯ ತ್ಯಾಗವನ್ನೂ ಮಾಡಬೇಕಾಗುವುದು. ಈಗ ಇಲ್ಲಿ ಪ್ರತ್ಯೇಕ ಮತ್ತು ಸಾಧಾರಣದ ಸಮಸ್ತ ಭೇದ-ಪ್ರಭೇದಗಳ ಕಥನವನ್ನು ಸ್ಪಷ್ಟರೂಪದಿಂದ ಮಾಡಲಾಗುತ್ತಿದೆ.

ಐದು ಸ್ಥಾವರಗಳಲ್ಲಿ ಪೃಥ್ವಿಕಾಯ, ಜಲಕಾಯ, ವಾಯುಕಾಯ, ಅಗ್ನಿಕಾಯ ಈ ನಾಲ್ಕರಲ್ಲಂತೂ ನಿಗೋದದ ಜೀವಗಳಿರುವುದಿಲ್ಲ, ಕೇವಲ ಒಂದು ವನಸ್ಪತಿ ಕಾಯದಲ್ಲಿಯೇ ಇರುತ್ತವೆ. ಅದರಲ್ಲಿ ಪ್ರತ್ಯೇಕ ಮತ್ತು ಸಾಧಾರಣವೆಂದು ಎರಡು ಭೇದಗಳಿವೆ. ಯಾವ ಶರೀರಕ್ಕೆ ಒಂದೇ ಜೀವದ ಸ್ವಾಮಿತ್ವವಿದೆ ಅದನ್ನು ಸಾಧಾರಣವೆಂದು ಹೇಳುತ್ತಾರೆ. ಪ್ರತ್ಯೇಕದಲ್ಲಿ ಕೂಡ ಸಪ್ರತಿಷ್ಠಿತ ಪ್ರತ್ಯೇಕ ಮತ್ತು ಅಪ್ರತಿಷ್ಠಿತ ಪ್ರತ್ಯೇಕವೆಂದು ಎರಡು ಭೇದಗಳಿವೆ. ಯಾವುದು ನಿಗೋದ ಸಹಿತವಿದೆ ಎಂದರೆ ಯಾವ ಶರೀರದ ಸ್ವಾಮಿಯು ಒಂದೇ ಜೀವವಿದೆ ಮತ್ತು ಆ ಶರೀರದ ಆಶ್ರಯದಿಂದ ಅನಂತ ಜೀವಗಳಿರುತ್ತವೆ ಅದನ್ನು ಸಪ್ರತಿಷ್ಠಿತವೆಂದು ಹೇಳುತ್ತಾರೆ. ಯಾವ ಶರೀರದ ಮೂಲ ಸ್ವಾಮಿಯು ಒಂದು ಜೀವವಿದೆ ಮತ್ತು ಅದರ ಆಶ್ರಯದಿಂದ ಅನಂತ ಜೀವಗಳಿರುವುದಿಲ್ಲ ಎಂದರೆ ನಿಗೋದ ಸಹಿತವಿರುವುದಿಲ್ಲ ಅದನ್ನು ಅಪ್ರತಿಷ್ಠಿತ ಪ್ರತ್ಯೇಕವೆಂದು ಹೇಳುತ್ತಾರೆ.

ಸಾಧಾರಣ ವನಸ್ಪತಿಯ ಲಕ್ಷಣ-ಯಾವುದನ್ನು ತುಂಡರಿಸಿದ ಮೇಲೆ ಸಮಾನ ಭಂಗವಾಗುವುದು, ಅದರ ಎಲೆಗಳಲ್ಲಿ ಎಲ್ಲಿಯವರೆಗೆ ತಂತುರೇಖೆ ಮತ್ತು ತಂತು ಜಾಲ ಹೊರಡುವುದಿಲ್ಲ, ಅದರ ಮೂಲ, ಸ್ಕಂಧ, ಸ್ಕಂಧಮೂಲ, ತೊಗಟೆ, ಪರ್ಣ, ಚಿಕ್ಕ ರೆಂಬೆ, ಹೂವು, ಹಣ್ಣು ಮತ್ತು ಬೀಜದಲ್ಲಿ - ಅದನ್ನು ತುಂಡರಿಸುವ ಸಮಯದಲ್ಲಿ -ಸಮಾನ ಭಂಗವಾಗಿ ಹೋಗುವುದು ಅಲ್ಲಿಯವರೆಗೆ ಅದೆಲ್ಲವೂ ಸಾಧಾರಣ ವನಸ್ಪತಿಯಿದೆ ಮತ್ತು ಯಾವಾಗ ಅವುಗಳಲ್ಲಿ ಸಮಾನ ಭಂಗವಾಗುವುದಿಲ್ಲ ಆಗ ಅದೇ ವನಸ್ಪತಿಯು ಪ್ರತ್ಯೇಕವಾಗಿ ಹೋಗುತ್ತದೆ. ಒಂದು ವೇಳೆ ಸಾಧಾರಣ ವನಸ್ಪತಿ ಮತ್ತು ಸಪ್ರತಿಷ್ಠಿತ ಪ್ರತ್ಯೇಕ ವನಸ್ಪತಿ ಇವೆರಡರಲ್ಲಿ ಅನಂತ ಜೀವಗಳಿದ್ದರೂ ಕೂಡ ಸಾಧಾರಣ ವನಸ್ಪತಿಯ ಶರೀರದಲ್ಲಿ ಎಷ್ಟು ಜೀವಗಳಿವೆ ಅವೆಲ್ಲವೂ ಆ ಶರೀರದ ಸ್ವಾಮಿಯಿವೆ ಮತ್ತು ಆ ವನಸ್ಪತಿಯನ್ನು ತುಂಡರಿಸಿದ -ಕತ್ತರಿಸಿದ ಮೇಲೆ ಅವೆಲ್ಲ ಜೀವಗಳ ಘಾತವಾಗುತ್ತದೆ ಮತ್ತು ಸಪ್ರತಿಷ್ಠಿತ ಪ್ರತ್ಯೇಕ ವನಸ್ಪತಿಯ ಒಂದು ಶರೀರದಲ್ಲಿ ಶರೀರದ ಸ್ವಾಮಿಯಂತೂ ಒಂದೇ ಜೀವವಿದೆ, ಆದರೆ ಆ ಶರೀರದ ಆಶ್ರಯದಿಂದ ಅನಂತ ಜೀವಗಳಿವೆ ಅವೆಲ್ಲವೂ ಸ್ವಾಮಿಯಿಲ್ಲ ಮತ್ತು ಆ ಶರೀರದ ಸ್ವಾಮಿಯ ಮರಣ-ಜೀವನದ ಜತೆ ಆ ಸಮಸ್ತ ಜೀವಗಳ ಮರಣ-ಜೀವನದ ಯಾವ ಸಂಬಂಧವಿಲ್ಲ. ಇದುವೇ ಅವೆರಡರಲ್ಲಿನ ಭೇದವಿದೆ. ಆದುದರಿಂದ ಗೃಹಸ್ಥ ಶ್ರಾವಕನು ಸಾಧಾರಣ ವನಸ್ಪತಿಯ ಸರ್ವಥಾ ತ್ಯಾಗ ಮಾಡಬೇಕಾಗುವುದು ಮತ್ತು ಸಪ್ರತಿಷ್ಠಿತ ಪ್ರತ್ಯೇಕದ್ದೂ ತಾಗ ಮಾಡಬೇಕಾಗುವುದು. ಏಕೆಂದರೆ ಒಂದು ಸಾಧಾರಣ ವನಸ್ಪತಿಯ ಒಂದು ಶರೀರದಲ್ಲಿ ಅನಂತಾನಂತ ಜೀವಗಳಿರುತ್ತವೆ. ಆದುದರಿಂದ ನಾವು ಯಾವಾಗ ಒಂದು ಆಲೂಗಡ್ಡೆಯನ್ನು ತಿನ್ನುತ್ತೇವೆ ಆಗ ಅನಂತಾನಂತ ಜೀವಗಳ ಘಾತ ಮಾಡುತ್ತೇವೆ.

ಈಗ ಇಲ್ಲಿ ಒಂದು ಸಾಧಾರಣ ವನಸ್ಪತಿಯ ವಿಚಾರ ಮಾಡಲಾಗುತ್ತದೆ. ಹೇಗೆಂದರೆ ಒಂದು ಆಲೂಗಡ್ಡೆ ಅಥವಾ ಹಸಿಯ ಶುಂಠಿ ಇತ್ಯಾದಿ ಸಾಧಾರಣ ವನಸ್ಪತಿಯ ವಿಚಾರಮಾಡಿದರೆ ಅದರಲ್ಲಿ ಲೋಕದ ಎಷ್ಟು ಪ್ರದೇಶಗಳಿವೆ ಅವುಗಳಿಂದ ಅಸಂಖ್ಯಾತ ಗುಣಿತವಾಗಿ ಶರೀರಗಳಿವೆ ಆ ಸಮಸ್ತ ಶರೀರಗಳ ಪಿಂಡವನ್ನು 'ಸ್ಕಂಧ' - ವೆಂದು ಹೇಳುತ್ತಾರೆ. (ತಮ್ಮದು ಒಂದು ಶರೀರವಿರುವಂತೆ) ಮತ್ತು ಆ ಒಂದು ಸ್ಕಂಧದಲ್ಲಿ ಅಸಂಖ್ಯಾತ ಲೋಕ ಪ್ರಮಾಣ

'ಅಂಡಕೋಶ'ಗಳಿವೆ. (ತಮ್ಮ ಶರೀರದಲ್ಲಿ ಕೈ-ಕಾಲು ಮೊದಲಾದ ಉಪಾಂಗಗಳಿರುವಂತೆ) ಮತ್ತು ಒಂದು ಅಂಡಕೋಶದಲ್ಲಿ ಅಸಂಖ್ಯಾತ ಲೋಕಪ್ರಮಾಣ 'ಪುಲವಿ' ಗಳಿವೆ. (ತಮ್ಮ ಕೈಯಲ್ಲಿಬೆರಳುಗಳಿರುವಂತೆ) ಮತ್ತು ಒಂದು ಪುಲವಿಯಲ್ಲಿ ಅಸಂಖ್ಯಾತ ಲೋಕಪ್ರಮಾಣ 'ಆವಾಸ'ಗಳಿವೆ. (ಒಂದು ಬೆರಳಿನಲ್ಲಿ ಮೂರು ಗಣಿಕೆಗಳಿರುವಂತೆ) ಮತ್ತು ಒಂದು ಆವಾಸದಲ್ಲಿ ಅಸಂಖ್ಯಾತ ಲೋಕ ಪ್ರಮಾಣ ನಿಗೋದ 'ಶರೀರ'ಗಳಿವೆ. (ಹೇಗೆ ಒಂದು ಗಣಿಕೆಯಲ್ಲಿ ಅನೇಕ ರೇಖೆಗಳಿರುವಂತೆ) ಮತ್ತು ಒಂದು ನಿಗೋದ ಶರೀರದಲ್ಲಿ ಸಿದ್ಧರಾಶಿಯಿಂದ ಎಂದರೆ ಮುಕ್ತಾತ್ಮರುಗಳಿಂದ ಅನಂತಗುಣಿತವಾದ ಜೀವಗಳಿವೆ, ಎಂದರೆ ಸಿದ್ಧಾಲಯದಲ್ಲಿ ಯಾವ ಅನಂತ ಸಿದ್ಧ ಜೀವರುಗಳು ವಿರಾಜಮಾನರಿದ್ದಾರೆ ಅವರಿಂದಲೂ ಕೂಡ ಅನಂತ ಗುಣಿತ ಜೀವಗಳು ಒಂದು ನಿಗೋದ ಶರೀರದಲ್ಲಿವೆ. (ಒಂದು ಬೆರಳಿನ ರೇಖೆಯಲ್ಲಿ ಅಸಂಖ್ಯಾತ ಪ್ರದೇಶಗಳಿರುವಂತೆ) ಈ ಪ್ರಕಾರ ಒಂದು ಆಲೂಗಡ್ಡೆ ಅಥವಾ ಹಸಿಯ ಶುಂಠಿ ಇತ್ಯಾದಿಗಳ ಒಂದು ತುಂಡಿನಲ್ಲಿ ಅನಂತಾನಂತ ಜೀವಗಳಿರುತ್ತವೆ. ಆದುದರಿಂದ ಇಂಥ ವನಸ್ಪತಿಗಳ ತ್ಯಾಗವನ್ನು ಶೀಘ್ರವಾಗಿಯೇ ಮಾಡಿಬಿಡಬೇಕಾಗುವುದು.

ಈಗ ಮತ್ತೆ ವಿಶೇಷರೂಪದಿಂದ ಹೇಳುತ್ತಾರೆ, -

**ನವನೀತಂ ಚ ತ್ಯಾಜ್ಯಂ ಯೋನಿಸ್ಥಾನಂ ಪ್ರಭೂತಜೀವಾನಾಮ್ ।**
**ಯದ್ವಾಪಿ ಪಿಂಡಶುದ್ಧೌ ವಿರುದ್ಧಮಭಿಧೀಯತೇ ಕಿಂಚಿತ್ ।।೧೬೩।।**

**ಅನ್ವಯಾರ್ಥ :-** **[ಚ]** ಮತ್ತು **[ಪ್ರಭೂತಜೀವಾನಾಮ್]** ಬಹಳಷ್ಟು ಜೀವಗಳ **[ಯೋನಿಸ್ಥಾನಂ]** ಉತ್ಪತ್ತಿಸ್ಥಾನರೂಪವಾದ **[ನವನೀತಂ]** ನವನೀತ ಎಂದರೆ ಬೆಣ್ಣೆಯು **[ತ್ಯಾಜ್ಯಂ]** ತ್ಯಾಗ ಮಾಡಲು ಯೋಗ್ಯವಾಗಿದೆ. **[ವಾ]** ಅಥವಾ **[ಪಿಂಡಶುದ್ಧೌ]** ಆಹಾರದ ಶುದ್ಧಿಯಲ್ಲಿ **[ಯತ್ಕಿಂಚಿತ್]** ಯಾವುದನ್ನು ಸ್ವಲ್ಪ ಕೂಡ **[ವಿರುದ್ಧಂ]** ವಿರುದ್ಧವೆಂದು **[ಅಭಿಧೀಯತೇ]** ಹೇಳಲಾಗಿದೆ **[ತತ್]** ಅದನ್ನು **[ಅಪಿ]** ಕೂಡ-ತ್ಯಾಗ ಮಾಡುವುದು ಯೋಗ್ಯವಿದೆ.

**ಟೀಕೆ :- 'ಚ ಪ್ರಭೂತ ಜೀವಾನಾಂ ಯೋನಿಸ್ಥಾನಂ ನವನೀತಂ ತ್ಯಾಜ್ಯಂ ವಾ ಪಿಂಡಶುದ್ಧೌ ಯತ್ಕಿಂಚಿತ್ ವಿರುದ್ಧಂ ಅಭಿಧೀಯತೇ ತತ್ ಅಪಿ ತ್ಯಾಜ್ಯಮ್'** - ಮತ್ತು ಬಹಳಷ್ಟು ಜೀವಗಳ ಉತ್ಪತ್ತಿಯ ಸ್ಥಾನವಾದ (ಮೊಸರಿನೊಳಗಿಂದ ಹೊರಟಿರುವ - ಬೆಂಕಿಯ ಮೇಲೆ ಇಟ್ಟು ಕಾಯಿಸದ - ನವನೀತ) ಆ ಬೆಣ್ಣೆಯು - ತಾಜಾ ಬೆಣ್ಣೆಯು ಕೂಡ ತ್ಯಾಗ ಮಾಡಲು ಯೋಗ್ಯವಿದೆ ಮತ್ತು ಆಹಾರ ಶುದ್ಧಿಯಲ್ಲಿ ಯಾವುದು ಸ್ವಲ್ಪ ಕೂಡ ನಿಷಿದ್ಧವಿದೆ ಅದೆಲ್ಲವನ್ನೂ ಬಿಟ್ಟುಕೊಡಬೇಕಾಗುವುದು.

**ಭಾವಾರ್ಥ :-** ಆಚಾರ ಶಾಸ್ತ್ರದಲ್ಲಿ ಯಾವ ಪದಾರ್ಥಗಳನ್ನು ಅಭಕ್ಷ್ಯಮತ್ತು ನಿಷಿದ್ಧವೆಂದು ತಿಳಿಸಿಕೊಡಲಾಗಿದೆ ಅವೆಲ್ಲವುಗಳ ತ್ಯಾಗ ಮಾಡಬೇಕಾಗುವುದು. ಹೇಗೆಂದರೆ ಚರ್ಮದಲ್ಲಿ ಇಡಲಾದ ಅಥವಾ ಚರ್ಮದ ಸ್ಪರ್ಶ ಮಾಡಿರುವ ನೀರು, ಎಣ್ಣೆ, ತುಪ್ಪ, ಹಿಂಗು ಮತ್ತು ನಲ್ಲಿಯ ನೀರು ಇವೇ ಮೊದಲಾದವುಗಳೆಲ್ಲವು ಅಶುದ್ಧವಿರುವುದರಿಂದ ಅವನ್ನು ತಿನ್ನಬಾರದು. ಒಂದು ಮುಹೂರ್ತ ಎಂದರೆ ನಲವತ್ತೆಂಟು ನಿಮಿಷಕ್ಕಿಂತ ಅಧಿಕ ಸಮಯದವರೆಗೆ ಇಟ್ಟಿರುವ ಕಚ್ಚಾಹಾಲು, ಒಂದು ದಿವಸದ ನಂತರದ ಮೊಸರು, ಅಂಗಡಿಯ ಹಿಟ್ಟು, ಅಪರಿಚಿತವಿರುವ ಹಣ್ಣು, ಹುಳುಕು ಧಾನ್ಯ, ಬಹುಬೀಜವಿರುವ ವಸ್ತುಗಳನ್ನು ತಿನ್ನಬಾರದು. ಮರ್ಯಾದೆಯ ಅನಂತರದ ಸಮಯದ ಹಿಟ್ಟು ತಿನ್ನಬಾರದು. (ಉಪ್ಪಿನಕಾಯಿ, ಗುಳಂಬ,ಹಳಸಿಹೋದ ಅನ್ನ, ಮೊಸರು, ಉದ್ದಿನ ವಡೆ, ಉತ್ಯಂತ ತುಚ್ಛವಾದ ಫಳ ಇವೇ ಮೊದಲಾಗಿ ಯಾವ ವಸ್ತುಗಳು ಶಾಸ್ತ್ರದಲ್ಲಿ ನಿಷಿದ್ಧವಿವೆ ಅವುಗಳ ತ್ಯಾಗ ಮಾಡಬೇಕಾಗುವುದು.) ಮೂವತ್ತೆರಡು ಅಂಗುಲ ಉದ್ದ, ಇಪ್ಪತ್ನಾಲ್ಕು ಅಂಗುಲ ಅಗಲ ದಪ್ಪ ಸ್ವಚ್ಛವಾದ ಬಟ್ಟೆಯನ್ನು ತೆಗೆದುಕೊಂಡು ಅದನ್ನು ಎರಡು ಪದರು ಮಾಡಿ ನೀರು ಶೋಧಿಸಬೇಕಾಗುವುದು ಮತ್ತು ಅದೇ ಶೋಧಿಸಿದ ನೀರು ಕುಡಿಯಲು ಹಾಗೂ ಬೇರೆ ಕೆಲಸಕ್ಕೆ ಉಪಯೋಗ

ಮಾಡಬೇಕಾಗುವುದು. ಆ ಶೋಧಿಸಿದ ಕಚ್ಚಾ ನೀರಿನ ಮರ್ಯಾದೆಯು ನಲವತ್ತೆಂಟು ನಿಮಿಷದ್ದಿದೆ. ಒಂದು ವೇಳೆ ಶೋಧಿಸಿದ ನೀರಿನಲ್ಲಿ ಲವಂಗ, ಏಲಕ್ಕಿ,ಕಪ್ಪು ಮೆಣಸಿನಕಾಳು ಇತ್ಯಾದಿಗಳನ್ನು ಕುಟ್ಟಿ ಪುಡಿ ಮಾಡಿ ಹಾಕಿದರೆ ಎಂದರೆ ಅದನ್ನು ಆ ನೀರಿನ ವರ್ಣ ಮತ್ತು ಸ್ವಾದವು ಬದಲಾಗಿ ಹೋಗುವಷ್ಟು ಪರಿಮಾಣದಲ್ಲಿ ಹಾಕಿದರೆ ಆ ನೀರಿನ ಮರ್ಯಾದೆಯು ಎರಡು ಪ್ರಹರ ಎಂದರೆ ಆರು ಗಂಟೆಯದಿದೆ. ಮತ್ತು ಆ ನೀರನ್ನು ಉಕ್ಕು ಬರುವ ಹಾಗೆ ಕಾಯಿಸಿದರೆ ಆ ಕುದಿ ಬಂದ ನೀರಿನ ಮರ್ಯಾದೆಯು ಇಪ್ಪತ್ತಾ ನ್ಲುಕ್ಕು ಗಂಟೆಯದಿದೆ ಅದರ ನಂತರ ಅದನ್ನು ಕೂಡ ಯಾವುದೇಕೆಲಸಕ್ಕೆ ತೆಗೆದುಕೊಳ್ಳಬಾರದು. ಈ ಪ್ರಕಾರ ನೀರನ್ನು ಉಪಯೋಗದಲ್ಲಿ ತೆಗೆದುಕೊಳ್ಳಬೇಕಾಗುವುದು. ಮತ್ತು ಶೋಧಿಸಿದ ಆ ನೀರಿನ ಜೀವಾಳವನ್ನು ಯಾವ ಬಾವಿ ಮೊದಲಾದವುಗಳಿಂದ ನೀರನ್ನು ತಂದಿರುತ್ತದೆ ಅದೇ ಬಾವಿ ಮೊದಲಾದವುಗಳಲ್ಲಿ ಹಾಕಬೇಕಾಗುವುದು. ಬೇರೊಂದರಲ್ಲಿ ಹಾಕಲಾಗದು. (ಹಿಟ್ಟಿನ ಮರ್ಯಾದೆಯು ಶೀತ ಋತುವಿನಲ್ಲಿ ಏಳು ದಿವಸ, ಗ್ರೀಷ್ಮದಲ್ಲಿ ಐದು ದಿವಸ ಮತ್ತು ಮಳೆಗಾಲದಲ್ಲಿ ಮೂರು ದಿವಸವಿರುತ್ತದೆ, ಅದರ ನಂತರ ಗ್ರಹಣ ಮಾಡಬಾರದು.) ಈ ಪ್ರಕಾರ ಶ್ರಾವಕನು ತನ್ನ ಭೋಗ-ಉಪಭೋಗದ ಸಾಮಗ್ರಿಗಳಲ್ಲಿ ವಿವೇಕವನ್ನಿಟ್ಟುಕೊಂಡು ತ್ಯಾಗ ಮತ್ತು ಗ್ರಹಣ ಮಾಡಬೇಕಾಗುವುದು.

ಈಗ ಮತ್ತೆ ವಿಶೇಷವಾಗಿ ಹೇಳುತ್ತಾರೆ, -

**ಅವಿರುದ್ಧಾ ಅಪಿ ಭೋಗಾ ನಿಜಶಕ್ತಿಮಪೇಕ್ಷ್ಯ ಧೀಮತಾ ತ್ಯಾಜ್ಯಾಃ ।**
**ಅತ್ಯಾಜ್ಯೇಷ್ವಪಿ ಸೀಮಾ ಕಾರ್ಯೈಕದಿವಾನಿಶೋಪಭೋಗ್ಯತಯಾ ।।೧೬೪।।**

**ಅನ್ವಯಾರ್ಥ :-** [**ಧೀಮತಾ**]ಬುದ್ಧಿವಂತ ಪುರುಷರು [**ನಿಜಶಕ್ತಿ**] ತಮ್ಮ ಶಕ್ತಿ [**ಅಪೇಕ್ಷ್ಯ**] ನೋಡಿ [**ಅವಿರುದ್ಧಾಃ**] ಅವಿರುದ್ಧವಾದ [**ಭೋಗಾಃ ಅಪಿ**] ಭೋಗವನ್ನು ಕೂಡ [**ತ್ಯಾಜ್ಯಾಃ**] ಬಿಟ್ಟುಕೊಡಬೇಕು ಮತ್ತು ಆ [**ಅತ್ಯಾಜ್ಯೇಷು**] ಉಚಿತ ಭೋಗ ಉಪಭೋಗದ ತ್ಯಾಗವಾಗುವ ಸಾಧ್ಯತೆಯಿಲ್ಲದಿದ್ದರೆ ಅದರಲ್ಲಿ [**ಅಪಿ**] ಕೂಡ [**ಏಕದಿವಾನಿಶೋಪಭೋಗ್ಯತಯಾ**] ಒಂದು ದಿವಸದ ರಾತ್ರಿಯ ಉಪಭೋಗ್ಯತೆಯಿಂದ [**ಸೀಮಾ**] ಮರ್ಯಾದೆ [**ಕಾರ್ಯಾ**] ಮಾಡಬೇಕಾಗುವುದು.

**ಟೀಕೆ :- 'ಧೀಮತಾ ನಿಜಶಕ್ತಿಂ ಅಪೇಕ್ಷ್ಯ ಅವಿರುದ್ಧಾಃ ಅಪಿ ಭೋಗಾಃ ತ್ಯಾಜ್ಯಾಃ ತಥಾ ಅತ್ಯಾಜ್ಯೇಷು ಅಪಿ ಏಕ ದಿವಾನಿಶೋಪಭೋಗ್ಯತಯಾ ಸೀಮಾ ಕಾರ್ಯಾ'** - ಬುದ್ಧಿವಂತ ಶ್ರಾವಕನು ತನ್ನ ಶಕ್ತಿಯ ವಿಚಾರ ಮಾಡಿ, ಶ್ರಾವಕನ ಸಲುವಾಗಿ ತಿನ್ನಲು ಯೋಗ್ಯವಿರುವ ಪದಾರ್ಥಗಳನ್ನು ಕೂಡ ಎಷ್ಟು ಸಂಭವಿಸುವ ಸಾಧ್ಯತೆಯಿದೆಯೋ ಅಷ್ಟನ್ನು ಬಿಟ್ಟುಕೊಡಬೇಕು ಮತ್ತು ಸರ್ವಥಾ ಬಿಟ್ಟುಕೊಡಲು ಸಾಧ್ಯವಿಲ್ಲದಂಥವುಗಳಲ್ಲಿ ಕೂಡ ಒಂದು ದಿವಸ, ಒಂದುರಾತ್ರಿ, ಒಂದು ವಾರ, ಒಂದು ಪಕ್ಷ ಮೊದಲಾದವುಗಳ ಮರ್ಯಾದೆ ಮಾಡಿ ಕ್ರಮ ಕ್ರಮದಿಂದ ಬಿಡಬೇಕು. (ಎಂದರೆ ಈ ಭೋಗವನ್ನು ನನಗೆ ಇಷ್ಟೇ ಕಾಲದಲ್ಲಿ ಭೋಗಿಸುವುದಿದೆ, ಅನ್ಯ ಕಾಲದಲ್ಲಿ ನನ್ನದು ತ್ಯಾಗವಿದೆಯೆಂದು ಮರ್ಯಾದೆ ಮಾಡಿಕೊಳ್ಳಬೇಕು.)

ಈಗ ಮತ್ತೆ ವಿಶೇಷ ಹೇಳುತ್ತಾರೆ, -

---

★ ಇಲ್ಲಿ ಭೂಮಿಕೆಗೆ ಅನುಸರಿಸಿ ಇಂಥರಾಗವು ಬರುತ್ತದೆ, ಅದರ ಜ್ಞಾನ ಮಾಡಿಸುವ ಸಲುವಾಗಿ ಈ ಉಪದೇಶವಚನವಿದೆ. ಆತ್ಮನ ಕಲ್ಯಾಣವಂತೂ ಅಂತರಂಗದಲ್ಲಿ ನಿಜಕಾರಣಪರಮಾತ್ಮನ ಆಶ್ರಯದಿಂದ ಉಂಟಾಗುವಂಥ ಶುದ್ಧಿ ಎಂದರೆ ವೀತರಾಗ ಭಾವವಿದೆ. ಅಲ್ಲಿ ಅಶುಭದಿಂದ ತಪ್ಪಿಸಿಕೊಳ್ಳುವ ಸಲುವಾಗಿ ಯಾವ ಶುಭರಾಗವು ಬರುತ್ತದೆ. ಅದನ್ನು ಉಪಚಾರದಿಂದ - ವ್ಯವಹಾರದಿಂದ ಒಳ್ಳೆಯದೆಂದು ಹೇಳುವ ರೀತಿಯಿದೆ.

ಪುನರಪಿ ಪೂರ್ವಕೃತಾಯಾಂ ಸಮೀಕ್ಷ್ಯ ತಾತ್ಕಾಲಿಕೀಂ ನಿಜಾಂ ಶಕ್ತಿಮ್ ।
ಸೀಮನ್ಯಂತರಸೀಮಾ ಪ್ರತಿದಿವಸಂ ಭವತಿ ಕರ್ತವ್ಯಾ ॥೧೬೫॥

**ಅನ್ವಯಾರ್ಥ :- [ಪೂರ್ವಕೃತಾಯಾಂ]** ಮೊದಲು ಮಾಡಿರುವ **[ಸೀಮನಿ]** ಮರ್ಯಾದೆಯಲ್ಲಿ **[ಪುನಃ]** ಮತ್ತೆ **[ಅಪಿ]** ಕೂಡ **[ತಾತ್ಕಾಲಿಕೀ]** ಆ ಸಮಯದ ಎಂದರೆ ವರ್ತಮಾನ ಸಮಯದ **[ನಿಜಾಂ]** ತನ್ನ **[ಶಕ್ತಿಮ್]** ಶಕ್ತಿಯನ್ನು **[ಸಮೀಕ್ಷ್ಯ]** ವಿಚಾರ ಮಾಡಿ **[ಪ್ರತಿದಿವಸಂ]** ಪ್ರತಿಯೊಂದು ದಿವಸ **[ಅಂತರಸೀಮಾ]** ಮರ್ಯಾದೆಯಲ್ಲಿ ಕೂಡ ಸ್ವಲ್ಪ ಮರ್ಯಾದೆ **[ಕರ್ತವ್ಯಾ ಭವತಿ]** ಮಾಡುವುದು ಯೋಗ್ಯವಿದೆ.

**ಟೀಕೆ :- 'ಪುನರಪಿ ಪೂರ್ವಕೃತಾಯಾಂ ಸೀಮನಿ ತಾತ್ಕಾಲಿಕೀಂ ನಿಜಾಂ ಶಕ್ತಿಮ್ ಸಮೀಕ್ಷ್ಯ ಪ್ರತಿದಿವಸಂ ಅಂತರ ಸೀಮಾ ಕರ್ತವ್ಯಾ ಭವತಿ । '** - ಮೊದಲು ಯಾವ ಒಂದು ದಿವಸ ಒಂದು ವಾರ ಇತ್ಯಾದಿಯ ಕ್ರಮದಿಂದ ತ್ಯಾಗ ಮಾಡಲಾಗಿತ್ತು ಅದರಲ್ಲಿಕೂಡ ತಮ್ಮ ವರ್ತಮಾನ ಶಕ್ತಿಯನ್ನು ನೋಡಿ ಗಳಿಗೆ, ಗಂಟೆ,ಪ್ರಹರ ಇತ್ಯಾದಿಗಳ ಸ್ವಲ್ಪ ಸ್ವಲ್ಪ ಮರ್ಯಾದೆ ಮಾಡಿ ಎಷ್ಟು ತ್ಯಾಗವು ಸಂಭವವಿದೆ ಅಷ್ಟರ ತ್ಯಾಗ ಮಾಡಬೇಕು. ಈ ಪ್ರಕಾರ ತಮ್ಮ ಭೋಗ-ಉಪಭೋಗದ ಸಾಮಗ್ರಿಯ ಪದಾರ್ಥಗಳ ಸಂಖ್ಯೆ ಮತ್ತು ಎಷ್ಟು ಕಾಲದ ಮರ್ಯಾದೆಯನ್ನು ಕಡಿಮೆ ಮಾಡುವ ಸಾಧ್ಯತೆಯಿದೆ ಅಷ್ಟನ್ನು ಅವಶ್ಯವಾಗಿ ಕಡಿಮೆ ಮಾಡಬೇಕಾಗುವುದು. ಇದರಲ್ಲಿಯೇ ಆತ್ಮನ★ ಕಲ್ಯಾಣವಿದೆ.

ಈಗ ಮತ್ತೆ ವಿಶೇಷ ಹೇಳುತ್ತಾರೆ, -

ಇತಿ ಯಃ ಪರಿಮಿತಭೋಗೈಃ ಸಂತುಷ್ಟಸ್ತ್ಯಜತಿ ಬಹುತರಾನ್ ಭೋಗಾನ್ ।
ಬಹುತರಹಿಂಸಾವಿರಹಾತ್ತಸ್ಯಾಽಹಿಂಸಾ ವಿಶಿಷ್ಟಾ ಸ್ಯಾತ್ ॥೧೬೬॥

**ಅನ್ವಯಾರ್ಥ :- [ಯಃ]** ಯಾವ ಗೃಹಸ್ಥನು **[ಇತಿ]** ಈ ಪ್ರಕಾರ **[ಪರಿಮಿತಭೋಗೈಃ]** ಮರ್ಯಾದೆಯ ರೂಪದ ಭೋಗಗಳಿಂದ **[ಸಂತುಷ್ಟಃ]** ಸಂತುಷ್ಟನಾಗಿ **[ಬಹುತರಾನ್]** ಬಹಳಷ್ಟು **[ಭೋಗಾನ್]** ಭೋಗಗಳನ್ನು **[ತ್ಯಜತಿ]** ಬಿಟ್ಟುಕೊಡುತ್ತಾನೆ **[ತಸ್ಯ]** ಅವನಿಗೆ **[ಬಹುತರಹಿಂಸಾವಿರಹಾತ್]** ಬಹಳಷ್ಟು ಹಿಂಸೆಯ ತ್ಯಾಗದಿಂದ **[ವಿಶಿಷ್ಟಾ ಅಹಿಂಸಾ]** ವಿಶೇಷ ಅಹಿಂಸಾವ್ರತವು **[ಸ್ಯಾತ್]** ಆಗುತ್ತದೆ.

**ಟೀಕೆ :- 'ಯಃ ಇತಿ ಪರಿಮಿತಭೋಗೈಃಸಂತುಷ್ಟಃ ಬಹುತರಾನ್ ಭೋಗಾನ್ ತ್ಯಜತಿ ತಸ್ಯಬಹುತರಹಿಂಸಾವಿರಹಾತ್ ವಿಶಿಷ್ಟ ಅಹಿಂಸಾ ಸ್ಯಾತ್ ।'** - ಈ ಪ್ರಕಾರ ಯಾವ ಶ್ರಾವಕನು ಭೋಗ-ಉಪಭೋಗದ ಪದಾರ್ಥಗಳಿಂದ ಸಂತುಷ್ಟನಾಗುತ್ತ ಬಹಳಷ್ಟು ಭೋಗೋಪಭೋಗದ ಪದಾರ್ಥಗಳನ್ನು ಬಿಟ್ಟು ಕೊಡುತ್ತಾನೆ ಅವನಿಗೆ ಅಧಿಕ ಹಿಂಸೆಯಾಗದಿರುವುದರಿಂದ ಅಹಿಂಸಾವ್ರತವು ವಿಶೇಷರೂಪದಿಂದ ಆಗುತ್ತದೆ.

**ಭಾವಾರ್ಥ :-** ಯಾವ ಶ್ರಾವಕನು ಭೋಗ-ಉಪಭೋಗದ ಪದಾರ್ಥಗಳನ್ನು ಮರ್ಯಾದೆಪೂರ್ವಕವಾಗಿ ತ್ಯಾಗ ಮಾಡುತ್ತಿರುತ್ತಾನೆ ಅವನಿಗೆ ಅಷ್ಟೇ ಅಂಶಗಳಲ್ಲಿ ಸಂತೋಷವು ಪ್ರಕಟವಾಗಿ ಲೋಭ ಮೊದಲಾದ ಕಷಾಯಗಳ ತ್ಯಾಗರೂಪದ ಸಮ್ಯಕ್ ಅಹಿಂಸೆಯು ಪ್ರಕಟವಾಗುತ್ತದೆ. ಆ ಭೋಗ ಉಪಭೋಗದ ನಿಮಿತ್ತಗಳ ಅವಲಂಬನೆ ಮಾಡುವುದರಿಂದ ಹಿಂಸಾರೂಪದ ಭಾವವಾಗುತ್ತಿತ್ತು. ಅದರ ತ್ಯಾಗವಾಗುವುದರಿಂದ ಭಾವಹಿಂಸೆಯು ಆಗಲಿಲ್ಲ

★ ಜಾತರೂಪ = ಜನ್ಮ ಪ್ರಮಾಣ (ನಿರ್ದೋಷ)ದಂಥ ರೂಪದಲ್ಲಿ ಇರುವಂಥ ಎಂದರೆ ನಗ್ನ ದಿಗಂಬರ, ಅಥವಾ ಉತ್ತಮ ಗುಣ ಸಹಿತರಾದ ಅತಿಥಿ = ಅವರ ಆಗಮನಕ್ಕೆ ತಿಥಿಯ ನಿಯಮವಿಲ್ಲದಿರುವುದು.

ಮತ್ತು ಇತರ ಜೀವರುಗಳ ಹಿಂಸೆಯಾಗದಿರುವುದರಿಂದ ದ್ರವ್ಯಹಿಂಸೆಯೂ ಆಗಲಿಲ್ಲ. ಅಲ್ಲದೆ ಅಷ್ಟೇ ಅಂಶಗಳಲ್ಲಿ ಲೋಭ ಕಷಾಯದ ತ್ಯಾಗವಾಗಿ ಹೋಗುವುದರಿಂದ ಭಾವಹಿಂಸೆಯು ಕೂಡ ಆಗಲಿಲ್ಲ. ಆದುದರಿಂದ (ಅಕಷಾಯ-ಜ್ಞಾತಾಸ್ವರೂಪದಲ್ಲಿ ಸಾವಧಾನವಿರುವಂಥ) ತ್ಯಾಗೀ ಮನುಷ್ಯನಿಗೆ ಅವಶ್ಯವಾಗಿ ವಿಶೇಷ ಅಹಿಂಸೆಯಾಗುತ್ತದೆ. ಈ ಪ್ರಕಾರ ಭೋಗೋಪಭೋಗಪರಿಮಾಣವೆಂಬ ಹೆಸರಿನ ಮೂರನೆಯ ಶಿಕ್ಷಾವ್ರತದ ವರ್ಣನೆ ಮಾಡಲಾಯಿತು.

ಈಗ ನಾಲ್ಕನೆಯದಾದ ವೈಯಾವೃತ್ತ ಎಂದರೆ ಅತಿಥಿ ಸಂವಿಭಾಗ ಶಿಕ್ಷಾವ್ರತದ ವರ್ಣನೆ ಮಾಡುತ್ತಾರೆ, -

ವಿಧಿನಾ ದಾತೃಗುಣವತಾ ದ್ರವ್ಯವಿಶೇಷಸ್ಯ ಜಾತರೂಪಾಯ ।
ಸ್ವಪರಾನುಗ್ರಹಹೇತೋಃ ಕರ್ತವ್ಯೋಽವಶ್ಯಮತಿಥಯೇ ಭಾಗಃ ॥೧೬೭॥

**ಅನ್ವಯಾರ್ಥ :- [ದಾತೃಗುಣವತಾ]** ದಾತೃವಿನ ಗುಣಗಳಿಂದ ಯುಕ್ತನಿರುವ ಗೃಹಸ್ಥನ ಮೂಲಕ **[ಜಾತರೂಪಾಯ★ ಅತಿಥಯೇ]** ದಿಗಂಬರ ಮುನಿಗಳಿಗೆ **[ಸ್ವಪರಾನುಗ್ರಹಹೇತೋಃ]** ತನ್ನ ಮತ್ತು ಇತರರ ಅನುಗ್ರಹದ ಸಲುವಾಗಿ **[ದ್ರವ್ಯವಿಶೇಷಸ್ಯ]** ವಿಶೇಷ ದ್ರವ್ಯದ ಎಂದರೆ ಕೊಡಲು ಯೋಗ್ಯವಾದ ವಸ್ತುವಿನ **[ಭಾಗಃ]** ಭಾಗವನ್ನು **[ವಿಧಿನಾ]** ವಿಧಿಪೂರ್ವಕವಾಗಿ **[ಅವಶ್ಯಮ್]** ಅವಶ್ಯವಾಗಿ **[ಕರ್ತವ್ಯಃ]** ಕೊಡಬೇಕಾಗುವುದು.

**ಟೀಕೆ :- 'ವಿಧಿನಾ ದಾತೃಗುಣವತಾ ದ್ರವ್ಯವಿಶೇಷಸ್ಯ ಜಾತರೂಪಾಯ ಅತಿಥಯೇ ಸ್ವಪರಾನು-ಗ್ರಹಹೇತೋಃ ಅವಶ್ಯ ಭಾಗಃ ಕರ್ತವ್ಯಃ ।'** - ನವಧಾ ಭಕ್ತಿಪೂರ್ವಕ ಹಾಗೂ ದಾತೃವಿನ ಗುಣಗಳಿಂದ ಸಂಯುಕ್ತನಿರುವ ಶ್ರಾವಕನು ದಾನ ಕೊಡಲು ಯೋಗ್ಯವಾದ ವಸ್ತುಗಳನ್ನು ಯಾವ ಗುಣವಂತ ಪಾತ್ರರಿದ್ದಾರೆ ಅವರಿಗೆ ತನ್ನ ಹಾಗೂ ಇತರರ ಉಪಕಾರದ ಸಲುವಾಗಿ ಅವಶ್ಯವಾಗಿ ದಾನ ಕೊಡಬೇಕಾಗುವುದು.

**ಭಾವಾರ್ಥ :-** ನ್ಯಾಯಪೂರ್ವಕವಾಗಿ ಧನದ ಉಪಾರ್ಜನೆ ಮಾಡುತ್ತಿರುವಂಥ ಶ್ರಾವಕರು ತಮ್ಮ ಧನದೊಳಗಿಂದ ಕೆಲವೊಂದು ಭಾಗ ಧನವನ್ನು ನಾಲ್ಕು ಪ್ರಕಾರದ ದಾನ ಕೊಡುವ ನಿಮಿತ್ತದಿಂದ ಅವಶ್ಯವಾಗಿ ತೆಗೆದಿರಿಸಬೇಕಾಗುವುದು, ಮತ್ತು ಅದನ್ನು ವಿಧಿಪೂರ್ವಕವಾಗಿ ದಾನ ಕೊಡಬೇಕಾಗುವುದು. ಹೀಗೆ ಮಾಡುವುದರಿಂದ ಅವರ ಧನದ ಸದುಪಯೋಗವಾಗುವುದು, ಕರ್ಮಗಳ ನಿರ್ಜರೆಯಾಗುವುದು ಮತ್ತು ಚತುರ್ವಿಧ ಸಂಘವು ತಮ್ಮ ತಪಸ್ಸಿನ ವೃದ್ಧಿಮಾಡಿಕೊಳ್ಳುವರು.

(ಆಗಮಿಸಿರುವ ಯೋಗ್ಯ ಅಭ್ಯಾಗತರಿಗೆ ಪ್ರತಿದಿವಸವೂ ಭೋಜನಾದಿಗಳ ದಾನ ಮಾಡಿ ಅನಂತರ ತಾವು ಭೋಜನ ಮಾಡಬೇಕೆಂಬುದು ಶ್ರಾವಕರ ನಿತ್ಯ ಕರ್ಮವಿದೆ, ಅದನ್ನು ಅತಿಥಿ ಸಂವಿಭಾಗವೆಂದು ಹೇಳುತ್ತಾರೆ. ಅದರಲ್ಲಿ ವಿಧಿಯಿರುವಂತೆ ದಾತೃನಿರಬೇಕು, ಎಂಥ ವಸ್ತುವಿನ ದಾನ ಮಾಡಲಾಗುವುದು ಮತ್ತು ಎಂಥ ಪಾತ್ರನಿರುವನು ಅಂಥದೇ ಫಲವು ಪ್ರಾಪ್ತವಾಗುವುದು.)

ಈಗ ನವಧಾಭಕ್ತಿಯ ಹೆಸರು ಹೇಳುತ್ತಾರೆ, -

ಸಂಗ್ರಹಮುಚ್ಚಸ್ಥಾನಂ ಪಾದೋದಕಮರ್ಚನಂ ಪ್ರಣಾಮಂ ಚ ।
ವಾಕ್ಕಾಯಮನಃಶುದ್ಧಿರೇಷಣಶುದ್ಧಿಶ್ಚ ವಿಧಿಮಾಹುಃ ॥೧೬೮॥

**ಅನ್ವಯಾರ್ಥ :- [ಚ]** ಮತ್ತು **[ಸಂಗ್ರಹಮ್]** ಪ್ರತಿಗ್ರಹಣ **[ಉಚ್ಚಸ್ಥಾನಂ]** ಉನ್ನತ ಆಸನ ಕೊಡುವುದು, **[ಪಾದೋದಕಂ]** ಕಾಲು ತೊಳೆಯುವುದು, **[ಅರ್ಚನಂ]** ಪೂಜೆ ಮಾಡುವುದು, **[ಪ್ರಣಾಮಂ]** ನಮಸ್ಕಾರ ಮಾಡುವುದು, **[ವಾಕ್ಕಾಯಮನಃ ಶುದ್ಧಿಃ]** ಮನಸ್ಸಿನ ಶುದ್ಧಿ, ವಚನಶುದ್ಧಿ ಹಾಗೂ ಕಾಯಶುದ್ಧಿಯಿಡುವುದು **[ಚ]**

ಮತ್ತು **[ಏಷಣಶುದ್ಧಿಃ]** ಭೋಜನಶುದ್ಧಿಯೆಂದು ಹೀಗೆ ಆಚಾರ್ಯರು **[ವಿಧಿಮ್]** ನವಧಾ ಭಕ್ತಿರೂಪದ ವಿಧಿಯನ್ನು **[ಆಹುಃ]** ಹೇಳಿದ್ದಾರೆ.

**ಟೀಕೆ ಃ- 'ಸಂಗ್ರಹಮ್, ಉಚ್ಚಸ್ಥಾನಂ, ಪಾದೋದಕಂ, ಅರ್ಚನಂ, ಪ್ರಣಾಮಂ ವಾಕ್‌ಶುದ್ಧಿಃ, ಕಾಯಶುದ್ಧಿಃ, ಮನಶುದ್ಧಿಃ, ಏಷಣಶುದ್ಧಿಃ, ಇತಿ ವಿಧಿಮ್ ಆಹುಃ !'** - ಸಂಗ್ರಹ ಎಂದರೆ ಬಲಗೊಳ್ಳುವುದು, ಮುನಿರಾಜರನ್ನು ಅತ್ಯಂತ ಆದರ ಪೂರ್ವಕವಾಗಿ ಭೋಜನದ ಸಲುವಾಗಿ ವಿನಂತಿ ಮಾಡಿಕೊಳ್ಳುತ್ತ ತಮ್ಮ ಮನೆಯಲ್ಲಿ ಪ್ರವೇಶ ಮಾಡಿಸುವುದು, ೨) ಉಚ್ಚ ಸ್ಥಾನ ಎಂದರೆ ಮನೆಯಲ್ಲಿ ಕರೆದುಕೊಂಡು ಹೋಗಿ ಅವರನ್ನು ಉನ್ನತ ಆಸನದ ಮೇಲೆ ಕೂಡ್ರಿಸುವುದು, ೩) ಪಾದೋದಕ ಎಂದರೆ ಪ್ರಾಸುಕ - ನಿರ್ದೋಷ ಜಲದಿಂದ ಪಾದಪ್ರಕ್ಷಾಲನ ಮಾಡುವುದು, ೪) ಅರ್ಚನೆ ಎಂದರೆ ಉತ್ತಮವಾದ ಅಷ್ಟ ದ್ರವ್ಯಗಳಿಂದ ಅವರ ಪೂಜೆ ಮಾಡುವುದು ಅಥವಾ ಕೇವಲ ಅರ್ಘ್ಯ ಕೊಡುವುದು. ೫) ಪ್ರಣಾಮ ಎಂದರೆ ಪೂಜೆಯ ನಂತರ ಅತ್ಯಂತ ವಿನಮ್ರರಾಗಿ ನಮಸ್ಕಾರ ಮಾಡುವುದು ಮತ್ತು ಮೂರು ಪ್ರದಕ್ಷಿಣೆ ಹಾಕುವುದು, ೬) ವಾಕ್‌ಶುದ್ಧಿ ಎಂದರೆ ವಿನಯಪೂರ್ವಕವಾಗಿ ವಚನ ಆಡುವುದು, ೭) ಕಾಯಶುದ್ಧಿ ಎಂದರೆ ತಮ್ಮ ಕೈ ಹಾಗೂ ಶರೀರವನ್ನು ಶುದ್ಧವಾಗಿಟ್ಟುಕೊಳ್ಳುವುದು ಮತ್ತು ಅವರ ಸೇವೆ ಮಾಡುವುದು, ೮) ಮನಶುದ್ಧಿ ಎಂದರೆ ಮನಸ್ಸನ್ನು ಶುದ್ಧ ಮಾಡುತ್ತ ದಾನ ಕೊಡುವಲ್ಲಿ ಭಕ್ತಿ ಮತ್ತು ಸೇವೆಯ ರೂಪದ ಪರಿಣಾಮವಿಡುವುದು - ದೂಷಿತ ಪರಿಣಾಮ ಮಾಡದಿರುವುದು, ೯) ಏಷಣಶುದ್ಧಿ ಎಂದರೆ ಆಹಾರದ ಶುದ್ಧಿಯಿಡುವುದು, ಆಹಾರದ ಸಮಸ್ತ ವಸ್ತುಗಳನ್ನು ನಿರ್ದೋಷವಾಗಿ ಇಡುವುದು. ಈ ಪ್ರಕಾರ ನವಧಾಭಕ್ತಿಪೂರ್ವಕವಾಗಿಯೇ ದಾನ ಕೊಡುವ ವಿಧಾನ ಹೇಳಿರುವುದರಿಂದ ಇದೇ ಪ್ರಕಾರ ಆಹಾರ ದಾನ ಕೊಡಬೇಕಾಗುವುದು. ಈ ನವಧಾಭಕ್ತಿಯು ಮುನಿಮಹಾರಾಜರುಗಳ ಸಲುವಾಗಿಯೇ ಇದೆ ಅನ್ಯರ ಸಲುವಾಗಿಯಂತೂ ಯೋಗ್ಯತಾನುಸಾರ ಇರಬೇಕಾಗುವುದು.

**ಭಾವಾರ್ಥ ಃ-** ಯಾರು ಉತ್ತಮ ಪಾತ್ರರಿದ್ದಾರೆ ಎಂದರೆ ಮುನಿರಾಜರಿದ್ದಾರೆ ಅವರಿಗೆ ಈ ಒಂಭತ್ತು ಪ್ರಕಾರದ ವಿಧಾನಪೂರ್ವಕವಾಗಿಯೇ ದಾನ ಕೊಡಬೇಕಾಗುವುದು. ಉಳಿದ ಯಾವ ಮಧ್ಯಮ ಹಾಗೂ ಜಘನ್ಯ ಪಾತ್ರರಿದ್ದಾರೆ ಅವರ ದಾನದಲ್ಲಿ ಯಥಾಯೋಗ್ಯ ಹೀನಾಧಿಕ ತಮ್ಮ ಹಾಗೂ ಪಾತ್ರದ ಗುಣಗಳ ವಿಚಾರ ಮಾಡಿ ವಿಧಾನ ಮಾಡುವುದು. ಮತ್ತು ಯಾರು ಅಪಾತ್ರರಿದ್ದಾರೆ ಅವರಸಲುವಾಗಿ ಪ್ರತಿಗ್ರಹ ಮೊದಲಾದ ವಿಧಾನ ಮಾಡಬಾರದು. ಏಕೆಂದರೆ ವಿಷಯ ಕಷಾಯಗಳಿಂದ ಯುಕ್ತರಾದ, ಶ್ರದ್ಧೆಯಿಲ್ಲದ ಪಾಪೀ ಜೀವರುಗಳ ಆದರ ಸತ್ಕಾರ ಮಾಡುವುದರಿಂದ ಮಹಾಪಾಪವು ಉತ್ಪನ್ನವಾಗುತ್ತದೆ ಮತ್ತು ಅವರ ಪಾಪದ ಅನುಮೋದನೆಯಾಗುವುದರಿಂದ ಅಪಾತ್ರರಿಗೆ ಭಕ್ತಿ ಮಾಡಬಾರದು. ಒಂದು ವೇಳೆ ಯಾವನಾದರೂ ಅಪಾತ್ರ ದೀನ - ದುಃಖೀ ಮತ್ತು ಪೀಡಿತನಾಗಿ ಕಂಡು ಬಂದರೆ ಅವನ ಮೇಲೆ ಕರುಣೆ ಮಾಡಿ ಅವನ ದುಃಖ ನಿವಾರಣೆ ಮಾಡಬೇಕು; ಆದರೆ ಧರ್ಮಬುದ್ಧಿಯಿಂದ ಅವನ ಆದರ-ಸತ್ಕಾರವನ್ನು ಮಾಡಬಾರದು. ।

ಈಗ ದಾತೃವಿನ ಏಳು ಗುಣಗಳನ್ನು ತಿಳಿಸಿಕೊಡುತ್ತಾರೆ, -

**ಐಹಿಕಫಲಾನಪೇಕ್ಷಾ ಕ್ಷಾಂತಿರ್ನಿಷ್ಕಪಟತಾನಸೂಯತ್ವಮ್ ।**

---

★ ರತ್ನಕರಂಡ ಶ್ರಾವಕಾಚಾರದ ೧೩೩ ನೇ ಸೂತ್ರದಲ್ಲಿ ದಾತಾರನ ಏಳು ಗುಣಗಳನ್ನು ಹೀಗೆ ಹೇಳಿದ್ದಾರೆ - ೧) ಭಕ್ತಿ-ಧರ್ಮದಲ್ಲಿ ತತ್ಪರರಿದ್ದುಕೊಂಡು, ಪಾತ್ರದ ಗುಣಗಳ ಸೇವನೆಯಲ್ಲಿ ಲೀನರಿದ್ದುಕೊಂಡು ಪಾತ್ರರನ್ನು ಅಂಗೀಕಾರ ಮಾಡಬೇಕು, ಪ್ರಮಾದರಹಿತ, ಜ್ಞಾನಸಹಿತ, ಶಾಂತ ಪರಿಣಾಮಿಯಾದ ಪಾತ್ರದ ಭಕ್ತಿಯಲ್ಲಿ ವರ್ತಿಸಬೇಕು. ೨) ತುಷ್ಟಿ-ಕೊಡುವಲ್ಲಿ ಅತ್ಯಂತ ಆಸಕ್ತಿ, ಪಾತ್ರಲಾಭವನ್ನು ಪರಮ ನಿಧಾನದ ಲಾಭವೆಂದು ಮನ್ನಿಸುವುದು. ೩) ಶ್ರದ್ಧೆ ೪) ವಿಜ್ಞಾನ, ೫) ಅಲೋಲುಪ, ೬) ಸಾತ್ವಿಕ ಮತ್ತು ೭) ಕ್ಷಮೆ.

ಅವಿಷಾದಿತ್ವಮುದಿತ್ವೇ ನಿರಹಂಕಾರಿತ್ವಮಿತಿ ಹಿ ದಾತೃಗುಣಾಃ ॥೧೬೯॥

**ಅನ್ವಯಾರ್ಥ :- [ಐಹಿಕಫಲಾನಪೇಕ್ಷಾ]** ಈ ಲೋಕ ಸಂಬಂಧದ ಫಲದ ಇಚ್ಛೆ ಮಾಡದಿರುವುದು, **[ಕ್ಷಾಂತಿ]** ಕ್ಷಮೆ ಅಥವಾ ಸಹನಶೀಲತೆ, ನಿಷ್ಕಪಟತೆ, **[ಅನಸೂಯತ್ವ]** ಈರ್ಷಾರಹಿತವಾಗಿರುವುದು, **[ಅವಿಷಾದಿತ್ವಮುದಿತ್ವೇ]** ಅಖಿನ್ನಭಾವ, ಹರ್ಷಭಾವ ಮತ್ತು **[ನಿರಹಂಕಾರಿತ್ವ]** ಅಭಿಮಾನರಹಿತವಾಗಿರುವುದು. **[ಇತಿ]** ಈ ಪ್ರಕಾರ **[ಹಿ]** ನಿಶ್ಚಯದಿಂದ ಇವು ಏಳು **[ದಾತೃಗುಣಾಃ]** ದಾತೃವಿನ ಗುಣಗಳಿವೆ.

**ಟೀಕೆ : 'ಹಿ ಐಹಿಕಫಲಾನಪೇಕ್ಷಾ, ಕ್ಷಾಂತಿಃ, ನಿಷ್ಕಪಟತಾ, ಅನಸೂಯತ್ವಂ, ಅವಿಷಾದಿತ್ವಂ, ಮುದಿತ್ವಂ, ನಿರಹಂಕಾರಿತ್ವಮ್ ಇತಿಸಪ್ತ ದಾತೃಗುಣಾಃ ಸಂತಿ ।'** - ೧) **ಐಹಿಕಫಲ ಅನಪೇಕ್ಷಾ** - ದಾನ ಕೊಟ್ಟು ಈ ಲೋಕ ಸಂಬಂಧದ ಯಶಸ್ಸು - ಸೌಭಾಗ್ಯ ಮೊದಲಾದವು ಅಥವಾ ಉತ್ತಮವಾದ ಭೋಗೋಪಭೋಗದ ಸಾಮಗ್ರಿ ದೊರಕುವುದು ಮೊದಲಾದವುಗಳ ಇಚ್ಛೆ ಮಾಡಬಾರದು. ೨) **ಕ್ಷಾಂತಿ** - ದಾನ ಕೊಡುವ ಸಮಯದಲ್ಲಿ ಕ್ಷಮಾಭಾವ ಧಾರಣ ಮಾಡಬೇಕು. ೩) **ನಿಷ್ಕಪಟತೆ** - ಕಪಟ ಮಾಡಬಾರದು-ಬಾಹ್ಯದಲ್ಲಿ ಭಕ್ತಿ ಮಾಡಬೇಕು. ಮತ್ತು ಅಂತರಂಗದಲ್ಲಿ ಮಲಿನ ಪರಿಣಾಮ ಮಾಡಬಾರದು. ೪) **ಅನಸೂಯತ್ವ** - ಇತರ ದಾತೃವಿನ ಕುರಿತು ಈರ್ಷೆಯ ಭಾವ-ದುರ್ಭಾವವಿಡಬಾರದು ಎಂದರೆ ತನ್ನ ಮನೆಯಲ್ಲಿ ಮುನಿರಾಜರ ಆಹಾರವಾಗದಿದ್ದರೆ ಮತ್ತು ಇತರರ ಮನೆಯಲ್ಲಿ ಆಗಿ ಹೋದರೆ ಇತರರ ಕುರಿತು ಅನಿಷ್ಟಭಾವ ಮಾಡಬಾರದು. ೫) **ಅವಿಷಾದಿತ್ವ** - ವಿಷಾದ ಮಾಡದಿರುವುದು ಎಂದರೆ ನಮ್ಮಲ್ಲಿ ಒಳ್ಳೆಯ ವಸ್ತುಗಳಿದ್ದು ಅವನ್ನು ನಾವು ಅವರಿಗೆ ಹೀಗೆಯೇ ಕೊಟ್ಟು ಬಿಡಬೇಕು ಅಥವಾ ನಮಲ್ಲಿ ಒಳ್ಳೆಯ ವಸ್ತುಗಳಿದ್ದವು ಅವನ್ನು ನಾವು ಕೊಡಲಿಲ್ಲವೆಂದು ಖಿನ್ನ ಪರಿಣಾಮ ಮಾಡಬಾರದು. ೬) **ಮುದಿತ್ವ** - ದಾನ ಕೊಟ್ಟು ಹೆಚ್ಚು ಹರುಷ ಪಡಬೇಕು ಎಂದರೆ ಅತ್ಯಂತ ಆನಂದಿತರಾಗಬೇಕು. ೭) **ನಿರಹಂಕಾರಿತ್ವ**-ಅಭಿಮಾನ ಪಡಬಾರದು ಎಂದರೆ ನಾವು ಮಹಾನ ದಾನಿಗಳಿದ್ದೇವೆಂದು ಮನಸ್ಸಿನಲ್ಲಿ ಅಭಿಮಾನ ಪಟ್ಟುಕೊಳ್ಳಬಾರದು. ಈ ಪ್ರಕಾರ ಇವು ಏಳು ದಾತಾರನ ಗುಣಗಳಿವೆ.★ ಇವು ಪ್ರತಿಯೊಬ್ಬ ದಾತಾರನಲ್ಲಿ ಅವಶ್ಯವಾಗಿ ಇರಬೇಕಾಗುವವು. ಈ ಪ್ರಕಾರ ಒಂಭತ್ತು ಪ್ರಕಾರದ ಭಕ್ತಿಯೊಡನೆ ಮತ್ತು ಏಳು ಗುಣಗಳಿಂದ ಯುಕ್ತನಾಗಿ ಯಾವನು ದಾನ ಕೊಡುತ್ತಾನೆ ಆ ದಾನವು ವಿಶೇಷ ಫಲ ಪ್ರದಾನ ಮಾಡುತ್ತದೆ. ಒಂದು ವೇಳೆ ಈ ಗುಣಗಳು ದಾನಿಯಲ್ಲಿ ಇಲ್ಲದಿದ್ದರೆ ಅವನು ಕೊಡಲ್ಪಟ್ಟ ದಾನವು ಅಧಿಕಫಲ ಕೊಡುವಂಥಹದಿರುವುದಿಲ್ಲ.

ಈಗ ಯಾವ ವಸ್ತುಗಳ ದಾನ ಕೊಡಬೇಕೆಂಬುದನ್ನು ತಿಳಿಸಿಕೊಡುತ್ತಾರೆ, -

ರಾಗದ್ವೇಷಾಸಂಯಮಮದದುಃಖಭಯಾದಿಕಂ ನ ಯತ್ಕುರುತೇ ।
ದ್ರವ್ಯಂ ತದೇವ ದೇಯಂ ಸುತಪಃ ಸ್ವಾಧ್ಯಾಯ ವೃದ್ಧಿಕರಮ್ ॥೧೭೦॥

**ಅನ್ವಯಾರ್ಥ :- [ಯತ್]** ಯಾವ **[ದ್ರವ್ಯಂ]** ದ್ರವ್ಯವು **[ರಾಗದ್ವೇಷಾಸಂಯಮಮದದುಃಖ ಭಯಾದಿಕಂ]** ರಾಗ, ದ್ವೇಷ, ಅಸಂಯಮ, ಮದ, ದುಖ, ಭಯ ಮೊದಲಾದುವನ್ನು **[ನ ಕುರುತೇ]** ಮಾಡುವುದಿಲ್ಲ ಮತ್ತು **[ಸುತಪಃ ಸ್ವಾಧ್ಯಾಯ ವೃದ್ಧಿಕರಮ್]** ಉತ್ತಮ ತಪಸ್ಸು ಹಾಗೂ ಸ್ವಾಧ್ಯಾಯದ ವೃದ್ಧಿಮಾಡುವಂಥದ್ದಿದೆ. **[ತತ್ ಏವ]** ಅದುವೇ **[ದೇಯಂ]** ಕೊಡಲು ಯೋಗ್ಯವಿದೆ.

**ಟೀಕೆ :- 'ಯತ್ (ವಸ್ತು) ರಾಗದ್ವೇಷ ಅಸಂಯಮ ಮದ ದುಃಖ ಭಯಾದಿಕಂ ನ ಕುರುತೇ ತತ್ ಏವ ಸುತಪಃ ಸ್ವಾಧ್ಯಾಯವೃದ್ಧಿಕರಂ ದ್ರವ್ಯಂ ದೇಯಂ !'** - ಯಾವ ವಸ್ತುವು ರಾಗ, ದ್ವೇಷ, ಅಸಂಯಮ,

ಮದ, ದುಃಖ ಮತ್ತು ಭಯದ ಉತ್ಪತ್ತಿಗೆ ಕಾರಣವಿಲ್ಲ ಹಾಗೂ ಯಾವ ವಸ್ತುವು ತಪಸ್ಸು ಮತ್ತುಶಾಸ್ತ್ರಸ್ವಾಧ್ಯಾಯವನ್ನು ಹೆಚ್ಚಿಸುವಂಥದ್ದಿದೆ, ಅದರದೇ ದಾನ ಕೊಡಬೇಕಾಗುವುದು. ಯಾವ ದ್ರವ್ಯದ ದಾನ ಕೊಡುವುದರಿಂದ ತಮ್ಮ ಕರ್ಮಗಳ ನಿರ್ಜರೆಯಾಗುವುದು ಮತ್ತು ಪಾತ್ರ ಜೀವರುಗಳಿಗೆ ತಪಸ್ಸು, ಸ್ವಾಧ್ಯಾಯ ಮೊದಲಾದವುಗಳ ವೃದ್ಧಿಯಾಗುವುದು ಅಂಥ ದ್ರವ್ಯದ ದಾನವನ್ನೇ ಶ್ರಾವಕನು ಕೊಡಬೇಕಾಗುವುದು. ಆದರೆ ಯಾವುದರಿಂದ ಆಲಸ್ಯ ಮೊದಲಾದವುಗಳ ವೃದ್ಧಿಯಾಗುವುದು ಅಂಥ ಗರಿಷ್ಠ ಭೋಜನ ಮೊದಲಾದುವನ್ನು ಕೊಡಬಾರದು. ೧) **ಆಹಾರದಾನ**-ಕ್ಷುಧೆಯ ನಿವಾರಣೆಯ ಸಲುವಾಗಿ ಹಾಗೂ ಶರೀರದ ಸ್ಥಿರತೆಯ ಸಲುವಾಗಿ ಆಹಾರ ಕೊಡುವುದು ಅದು ಪ್ರಥಮ ದಾನವಿದೆ. ೨) **ಔಷಧದಾನ** - ರೋಗಾದಿಗಳ ಪೀಡೆಯನ್ನು ದೂರ ಮಾಡುವ ಸಲುವಾಗಿ ಔಷಧ ಕೊಡುವುದು ಅದು ದ್ವಿತೀಯ ದಾನವಿದೆ. ೩) **ಜ್ಞಾನದಾನ** - ಅಜ್ಞಾನದ ನಾಶ ಮಾಡುವ ಜ್ಞಾನದ ವಿಕಾಸ ಮಾಡುವ ಸಲುವಾಗಿ ಶಾಸ್ತ್ರ ಮೊದಲಾದುವನ್ನು ಕೊಡುವುದು ಅದು ತೃತೀಯ ಜ್ಞಾನದಾನವಿದೆ. ೪) **ಅಭಯದಾನ** - ಭಯ ನಿವಾರಣೆ ಮಾಡುವುದು ಮತ್ತು ಕಾಡಿನಲ್ಲಿ ಕುಟೀರ, ವಸತಿಕೆ, ಧರ್ಮಶಾಲೆ ಮೊದಲಾದುವನ್ನು ಮಾಡಿಸುವುದು, ಅಂಧಕಾರದ ಮಾರ್ಗದಲ್ಲಿ ಪ್ರಕಾಶದ ವ್ಯವಸ್ಥೆ ಇತ್ಯಾದಿಗಳನ್ನು ಮಾಡಿಸುವುದು ಅದು ಚತುರ್ಥದಾನವಿದೆ. (ಅಥವಾ - ಭಿಕ್ಷೆ, ಉಪಕರಣ, ಔಷಧ, ಪ್ರತಿಶ್ರಮದ ಭೇದದಿಂದ ನಾಲ್ಕು ಪ್ರಕಾರದ ದಾನವಿದೆ. ಭಿಕ್ಷೆ ಎಂದರೆ ಆಹಾರ, ಉಪಕರಣ ಎಂದರೆ ಧರ್ಮದ ಸಲುವಾಗಿ ಉಪಕಾರಿಯಾದ ಶಾಸ್ತ್ರ ಮೊದಲಾದವು, ಔಷಧ ಎಂದರೆ ರೋಗ ನಿವಾರಣೆಯ ಸಲುವಾಗಿ ಮದ್ದು, ಪ್ರಾಯಶ್ಚಿತ್ತ ಎಂದರೆ ವಸತಿಕೆಗಳ ದಾನ ಕೊಡುವುದು ಯೋಗ್ಯವಿದೆ.) ಈ ಪ್ರಕಾರ ಆತ್ಮ ಕಲ್ಯಾಣದ ನಿಮಿತ್ತವಾಗಿ ದಾನ ಕೊಡುವುದೇ ವಾಸ್ತವಿಕ ದಾನವಿದೆ. ಆದರೆ ಯಾವ ವಸ್ತುಗಳ ದಾನ ಕೊಡುವುದರಿಂದ ಸಂಸಾರದ ವಿಷಯ ಮೊದಲಾದವುಗಳ ಹಾಗೂ ರಾಗ-ದ್ವೇಷಗಳ ವೃದ್ಧಿಯಾಗುವುದು ಅಂಥ ದಾನ ಕೊಡಬಾರದು.

**ಭಾವಾರ್ಥ ಃ-** ಯಾವ ಪ್ರಕಾರ ಭೂಮಿ, ಮನೆ, ಆನೆ, ಕುದುರೆ, ಹಸು, ಚಿನ್ನ, ಬೆಳ್ಳಿ, ಸ್ತ್ರೀ, ಶಸ್ತ್ರಮೊದಲಾದ ವಸ್ತುಗಳು ರಾಗಾದಿ ಭಾವಗಳ ಉತ್ಪತ್ತಿ ಮಾಡುವಂಥವುಗಳಿವೆ ಅಥವಾ ಕಾಮೋದ್ದೀಪನ ಮೊದಲಾದ ವಿಕಾರ ಭಾವಗಳನ್ನು ಉತ್ಪನ್ನ ಮಾಡುವಂಥವುಗಳಿವೆ ಅಥವಾ ದುಃಖ ಕೊಡುವಂಥ ವಿಷ ಮೊದಲಾದ ವಸ್ತುಗಳಿವೆ ಅವುಗಳ ದಾನ ಕೊಡಬಾರದು. ಏಕೆಂದರೆ ಅವೆಲ್ಲವೂ ಕುದಾನಗಳಿವೆ. ಅವುಗಳ ದಾನ ಕೊಡುವುದರಿಂದ ಕೀಳುಗತಿಯ ಬಂಧದ ಹೊರತಾಗಿ ಬೇರೇನೂ ಆಗುವುದಿಲ್ಲ. ಆದುದರಿಂದ ಇಂಥ ಕುದಾನಗಳನ್ನು ಎಂದೂ ಕೊಡಬಾರದು.

ಈಗ ಪಾತ್ರಗಳ ಭೇದವನ್ನು ತಿಳಿಸಿಕೊಡುತ್ತಾರೆ.

**ಪಾತ್ರಂ ತ್ರಿಭೇದಮುಕ್ತಂ ಸಂಯೋಗೋ ಮೋಕ್ಷ ಕಾರಣಗುಣಾನಾಮ್ ।**
**ಅವಿರತಸಮ್ಯಕ್‌ದೃಷ್ಟಿಃ ವಿರತಾವಿರತಶ್ಚ ಸಕಲವಿರತಶ್ಚ ॥೧೭೧॥**

**ಅನ್ವಯಾರ್ಥ ಃ- [ಮೋಕ್ಷಕಾರಣಗುಣಾನಾಮ್]** ಮೋಕ್ಷದ ಕಾರಣರೂಪ ಗುಣಗಳ ಎಂದರೆ ಸಮ್ಯಗ್ದರ್ಶನ, ಸಮ್ಯಗ್ಜ್ಞಾನ ಮತ್ತು ಸಮ್ಯಕ್ಚಾರಿತ್ರರೂಪ ಗುಣಗಳ **[ಸಂಯೋಗಃ]** ಸಂಯೋಗವುಳ್ಳ **[ಪಾತ್ರಂ]** ಪಾತ್ರರಲ್ಲಿ **[ಅವಿರತ ಸಮ್ಯಕ್‌ದೃಷ್ಟಿಃ]** ವ್ರತರಹಿತ ಸಮ್ಯಕ್‌ದೃಷ್ಟಿ **[ಚ]** ಮತ್ತು **[ವಿರತಾವಿರತಃ]** ದೇಶವ್ರತೀ **[ಚ]** ಮತ್ತು **[ಸಕಲವಿರತಃ]** ಮಹಾವ್ರತಿಯೆಂದು **[ತ್ರಿಭೇದ]** ಮೂರು ಭೇದಗಳನ್ನು **[ಉಕ್ತಮ್]** ಹೇಳಲಾಗಿದೆ.

**ಟೀಕೆ ಃ- 'ಮೋಕ್ಷಕಾರಣಗುಣಾನಾಂ ಸಂಯೋಗಃ ಪಾತ್ರಂ ತ್ರಿಭೇದಂ ಉಕ್ತಮ್ ಸಕಲವಿರತಃ ಚ ವಿರತಾವಿರತಃ ಚ ಅವಿರತಸಮ್ಯಕ್‌ದೃಷ್ಟಿ ಚ ಇತಿ ।'** - ಮೋಕ್ಷದ ಕಾರಣವಾದ ಸಮ್ಯಗ್ದರ್ಶನ, ಸಮ್ಯಗ್ಜ್ಞಾನ

ಮತ್ತು ಸಮ್ಯಕ್ಚಾರಿತ್ರದ ಏಕತೆಯರೂಪದ ಸಂಯೋಗವು ಯಾರಲ್ಲಿ ಕಂಡು ಬರುತ್ತದೆ ಅವರು ಪಾತ್ರರೆಂದು ಕರೆಸಿಕೊಳ್ಳುತ್ತಾರೆ. ಅವರು ಉತ್ತಮ, ಮಧ್ಯಮ ಮತ್ತು ಜಘನ್ಯದ ಭೇದದಿಂದ ಮೂರು ಪ್ರಕಾರದವರಿದ್ದಾರೆ.

**ಭಾವಾರ್ಥ :-** ಸಕಲಚಾರಿತ್ರ ಮತ್ತು ಸಮ್ಯಕ್ತ್ವ ಸಹಿತರಾದ ಮಹಾಮುನಿಗಳು ಉತ್ತಮ ಪಾತ್ರರಿದ್ದಾರೆ, ದೇಶಚಾರಿತ್ರ ಮತ್ತು ಸಮ್ಯಕ್ತ್ವ ಸಹಿತರಾದ ಶ್ರಾವಕರು ಮಧ್ಯಮ ಪಾತ್ರರಿದ್ದಾರೆ. ಮತ್ತು ವ್ರತರಹಿತ ಸಮ್ಯಕ್ತ್ವ ಸಹಿತರಾದ ಶ್ರಾವಕರು ಜಘನ್ಯ ಪಾತ್ರರಿದ್ದಾರೆ. ಯಾವ ಜೀವನಿಗೆ ಸಮ್ಯಗ್ದರ್ಶನವು ಪ್ರಾಪ್ತವಾಗಿ ಹೋಗಿದೆ ಅವನೇ ಪಾತ್ರನೆಂದು ತಿಳಿದುಕೊಳ್ಳಲು ಯೋಗ್ಯನಿದ್ದಾನೆ. ಸಮ್ಯಗ್ದರ್ಶನದ ಅಭಾವದಲ್ಲಿ ಯಾವುದೇ ಪ್ರಕಾರದ ಪಾತ್ರತೆಯು ಬರುವ ಸಾಧ್ಯತೆಯಿಲ್ಲದಿರುವುದರಿಂದ ದ್ರವ್ಯಲಿಂಗೀ ಮುನಿಯು ಪಾತ್ರನಿಲ್ಲ, ಆದರೆ ಉತ್ತಮ ಕುಪಾತ್ರನಿದ್ದಾನೆ. ಏಕೆಂದರೆ ಅವನಿಗೆ ಸಮ್ಯಗ್ದರ್ಶನವಿಲ್ಲ. ಈಗ ಇಲ್ಲಿ ಪಾತ್ರದ ಭೇದವು ವ್ಯವಹಾರ ಸಮ್ಯಗ್ದರ್ಶನದ ಅಪೇಕ್ಷೆಯಿಂದ ಇದೆಯೋ ಅಥವಾ ನಿಶ್ಚಯ ಸಮ್ಯಗ್ದರ್ಶನದ ಅಪೇಕ್ಷೆಯಿಂದ ಇದೆಯೋ ? - ಎಂಬ ಮಾತಿನ ವಿಚಾರ ಮಾಡುವುದಿದೆ. ಒಂದು ವೇಳೆ ನಿಶ್ಚಯ ಸಮ್ಯಗ್ದರ್ಶನದ ಅಪೇಕ್ಷೆಯಿಂದ ಮನ್ನಿಸ ಹೋದರೆ ಆಗಂತೂ ಉತ್ತಮ ಪಾತ್ರದ ಪರಿಚಯ ಮಾಡಿಕೊಳ್ಳುವುದು ಸಾಧಾರಣ ಜನರ ಬುದ್ಧಿಯ ಬಾಹ್ಯದ ಮಾತು ಇದೆ, ಮತ್ತು ಒಂದು ವೇಳೆ ವ್ಯವಹಾರ ಸಮ್ಯಗ್ದರ್ಶನದ ಅಪೇಕ್ಷೆಯಿಂದ ಮನ್ನಿಸಹೋದರೆ ಪ್ರಥಮ ಗುಣಸ್ಥಾನವುಳ್ಳ ಜೀವನು ಕೂಡ ವ್ಯವಹಾರ ಸಮ್ಯಕ್‌ದೃಷ್ಟಿಯಾಗುವ ಸಾಧ್ಯತೆಯಿದೆ ಮತ್ತು ಇದೇ ಒಳ್ಳೆಯದೇ ಎನಿಸುತ್ತದೆ. ಏಕೆಂದರೆ ಪಾತ್ರದ ಪರಿಚಯ ಮಾಡಿಕೊಳ್ಳುವುದು ಶ್ರಾವಕನ ಕಾರ್ಯವಿದೆ. ಶ್ರಾವಕನು ಯಾವ ಮಾತಿನ ಪರೀಕ್ಷೆಯನ್ನು ಎಷ್ಟು ಮಾಡುವ ಸಾಧ್ಯತೆಯಿದೆ ಅಷ್ಟನ್ನೇ ಮಾಡುವನು, ಆದುದರಿಂದ ದ್ರವ್ಯಲಿಂಗಿಗೆ ಕೂಡ (ವ್ಯವಹಾರ) ಪಾತ್ರತೆಯಾಗುವ ಸಾಧ್ಯತೆಯಿದೆ. ಆದುದರಿಂದ ವ್ಯವಹಾರ ಸಮ್ಯಗ್ದರ್ಶನದಿಂದಪಾತ್ರಗಳ ಪರೀಕ್ಷೆ ಮಾಡಿ ಅವರಿಗೆ ಯಥಾ ಯೋಗ್ಯ ವಿನಯ, ಆದರಪೂರ್ವಕ ದಾನ ಕೊಡುವುದು ಯೋಗ್ಯವಿದೆ. ಎಂದರೆ ಯಾವ ಪಾತ್ರರು ವ್ಯವಹಾರ ರತ್ನತ್ರಯದಿಂದ ಸಂಯುಕ್ತರಿದ್ದಾರೆ ಅವರಿಗೆ ಯಥಾಯೋಗ್ಯ ವಿನಯಪೂರ್ವಕ ದಾನ ಕೊಡುವುದು ಉಚಿತವಿದೆ. ಇವರನ್ನು ಹೊರತುಪಡಿಸಿ ದುಃಖೀ ಜೀವರುಗಳಿಗೆ ಕರುಣೆಯ ಭಾವದಿಂದ ದಾನ ಕೊಡಬೇಕಾಗುವುದು, ಆದರೆ ಭಕ್ತಿಭಾವದಿಂದ ಇಲ್ಲ. ಏಕೆಂದರೆ ಆ ಮಿಥ್ಯಾದೃಷ್ಟಿ ಪಾಪೀ ಜೀವರುಗಳ ವಿನಯದಿಂದ ವಿನಯ ಮಿಥ್ಯಾತ್ವವಾಗುತ್ತದೆ. ಮತ್ತು ಅವರ ಪಾಪದ ಅನುಮೋದನದಿಂದ ತಾವು ಕೂಡ ಅವರ ಸಮಾನ ಪಾಪಿಯಾಗುತ್ತಾರೆ.

ಯಾರು ದುಃಖಿಗಳಿಲ್ಲ, ತಮ್ಮ ಆಜೀವಿಕೆ ಮಾಡುವಲ್ಲಿ ಸಮರ್ಥರಿದ್ದಾರೆ, ವ್ಯಸನೀ ವ್ಯಭಿಚಾರಿಗಳಿದ್ದಾರೆ ಅವರಿಗೆ ದಾನ ಕೊಡಬಾರದು. ಅವರಿಗೆ ದಾನ ಕೊಡುವುದರಿಂದ ಅನೇಕ ಪಾಪಗಳು ಉತ್ಪನ್ನವಾಗುತ್ತವೆ, ಆದುದರಿಂದ ಅವರಿಗೆ ಎಂದೂ ದಾನ ಕೊಡಬಾರದು. ಉತ್ತಮ ಪಾತ್ರರಿಗೆ ದಾನ ಕೊಡುವುದರಿಂದ ಉತ್ತಮ ಭೋಗಭೂಮಿ, ಮಧ್ಯಮ ಪಾತ್ರರಿಗೆ ದಾನ ಕೊಡುವುದರಿಂದ ಮಧ್ಯಮ ಭೋಗಭೂಮಿ ಮತ್ತು ಜಘನ್ಯ ಪಾತ್ರರಿಗೆ ದಾನ ಕೊಡುವುದರಿಂದ ಜಘನ್ಯ ಭೋಗಭೂಮಿ ಹಾಗೂ ಕುಪಾತ್ರರಿಗೆ ದಾನ ಕೊಡುವುದರಿಂದ ಕುಭೋಗಭೂಮಿ ದೊರಕುತ್ತದೆ. ಮತ್ತು ಅಪಾತ್ರರಿಗೆ ದಾನ ಕೊಡುವುದರಿಂದ ನರಕ ಮೊದಲಾದ ಗತಿಗಳ ಪ್ರಾಪ್ತಿಯಾಗುತ್ತದೆ.

ಇದನ್ನೇ ರಯಣಸಾರದಲ್ಲಿ ಹೇಳುತ್ತಾರೆ, -

**''ಸಪ್ಪುರಿಸಾಣಂ ದಾಣಂ ಕಪ್ಪತರೂಣಂ ಫಲಾಣ ಸೋಹಂ ವಾ ।**
**ಲೋಹೀಣಂ ದಾಣಂ ಜಇ ವಿಮಾಣ ಸೋಹಾ ಸವ್ವಸ್ಸ ಜಾಣೇಹಂ ।।೨೬।।**

**ಅರ್ಥ :-** ಸತ್ಪುರುಷರಿಗೆ ದಾನ ಕೊಡುವುದೆಂದರೆ ಕಲ್ಪವೃಕ್ಷದ ಹಾಗೆ ಶೋಭಾಯಮಾನವಿದೆ ಎಂದರೆ ಶೋಭೆಯೂ ಆಗುತ್ತದೆ ಮತ್ತು ಮನೋವಾಂಛಿತ ಫಲದ ಪ್ರಾಪ್ತಿಯೂ ಆಗುತ್ತದೆ. ಮತ್ತು ಲೋಭೀ, ಪಾಪೀ ಪುರುಷರಿಗೆ ದಾನ ಕೊಡುವುದು ಅದು ಶವ ಸಾಗಿಸುವ ವಿಮಾನದ ಹಾಗೆ ಶೋಭೆಯಿದೆ ಎಂದರೆ ಶೋಭೆಯಂತೂ ಆಗುತ್ತದೆ, ಆದರೆ ದುಃಖವು ಕೂಡ ಆಗುತ್ತದೆ. ಹೇಗೆಂದರೆ ಶವದ ಅಸ್ಥಿಪಂಜರದ ವಿಮಾನ ಮಾಡಿ ಅದನ್ನು ಅಲಂಕರಿಸಿ ಹೊರಡಿಸುವುದರಿಂದ ಲೋಕದಲ್ಲಿ ಕೀರ್ತಿ ಮತ್ತು ಶೋಭೆಯಂತೂ ಆಗುತ್ತದೆ, ಆದರೆ ಮನೆಯ ಯಜಮಾನನಿಗೆ ದುಃಖದಾಯಕವಾಗುತ್ತದೆ. ಇದೇ ಪ್ರಕಾರ ಲೋಭೀ ಅಪಾತ್ರನಿಗೆ ದಾನ ಕೊಡುವುದರಿಂದ ಲೋಕದಲ್ಲಿ ಯಶಸ್ಸಂತೂ ಆಗುತ್ತದೆ, ಆದರೆ ದಾನ ಕೊಟ್ಟವನಿಗೆ ಮಹಾನ ಪಾಪವು ಉತ್ಪನ್ನವಾಗುತ್ತದೆ, ಮತ್ತು ಅದರ ಫಲವು ಕೂಡ ಅನಿಷ್ಟವೇ ದೊರಕುತ್ತದೆ, ಒಳ್ಳೆಯ ಫಲವು ದೊರಕುವುದಿಲ್ಲ. ಹೀಗೆ ತಿಳಿದುಕೊಂಡು ಪಾತ್ರ-ಅಪಾತ್ರದ ವಿಚಾರ ಮಾಡಿಯೇ ದಾನ ಕೊಡುವುದು ಯೋಗ್ಯವಿದೆ.

ಈಗ ದಾನ ಕೊಡುವುದರಿಂದ ಹಿಂಸೆಯ ತ್ಯಾಗವಾಗುತ್ತದೆಯೆಂದು ಹೇಳುತ್ತಾರೆ, -

ಹಿಂಸಾಯಾಃ ಪರ್ಯಾಯೋ ಲೋಭೋಽತ್ರ ನಿರಸ್ಯತೇ ಯತೋ ದಾನೇ ।
ತಸ್ಮಾದತಿಥಿವಿತರಣಂ ಹಿಂಸಾವ್ಯುಪರಮಣಮೇವೇಷ್ಟಮ್ ॥೧೭೨॥

**ಅನ್ವಯಾರ್ಥ :- [ಯತಃ]** ಏಕೆಂದರೆ **[ಅತ್ರ ದಾನೇ]** ಇಲ್ಲಿ ದಾನದಿಂದ **[ಹಿಂಸಾಯಾಃ]** ಹಿಂಸೆಯ **[ಪರ್ಯಾಯಃ]** ಪರ್ಯಾಯವಾದ **[ಲೋಭಃ]** ಲೋಭದ **[ನಿರಸ್ಯತೇ]** ನಾಶ ಮಾಡುವುದರಲ್ಲಿ ಬರುತ್ತದೆ, **[ತಸ್ಮಾತ್]** ಆದುದರಿಂದ **[ಅತಿಥಿವಿತರಣಂ]** ಅತಿಥಿ ದಾನವನ್ನು **[ಹಿಂಸಾವ್ಯುಪರಮಣಮೇವ]** ಹಿಂಸೆಯ ತ್ಯಾಗವೆಂದೇ **[ಇಷ್ಟಮ್]** ಹೇಳಲಾಗಿದೆ.

**ಟೀಕೆ :- 'ಯತ್ರಃ ಅತ್ರ ದಾನೇ ಹಿಂಸಾಯಾಃ ಪರ್ಯಾಯಃ ಲೋಭಃ ನಿರಸ್ಯತೇ ತಸ್ಮಾತ್ ಅತಿಥಿ ವಿತರಣಂ ಹಿಂಸಾವ್ಯುಪರಮಣಂ ಏವ ಇಷ್ಟಮ್' ।-** ಈ ದಾನದಲ್ಲಿ ಹಿಂಸೆಯ ಒಂದು ಭೇದವಾದ ಯಾವ ಲೋಭವಿದೆ ಅದರ ತ್ಯಾಗವಾಗುತ್ತದೆ. ಏಕೆಂದರೆ ಲೋಭವು ಬಿಟ್ಟ ಮೇಲೆ ತನ್ನ ವಸ್ತುವನ್ನು ಕೊಡಲಾಗುತ್ತದೆ. ಆದುದರಿಂದ ಅತಿಥಿ ಪಾತ್ರಕ್ಕೆ ದಾನ ಕೊಡುವುದೆಂದರೆ ಹಿಂಸೆಯ ತ್ಯಾಗವೇ ಇದೆ.

**ಭಾವಾರ್ಥ :-** ವಾಸ್ತವಿಕವಾಗಿ ತಮ್ಮ ಅಂತರಂಗ ಕಷಾಯವಾದ ಯಾವ ಲೋಭವಿದೆ ಅದರ ತ್ಯಾಗವಾದ ನಂತರವೇ ತಮ್ಮ ಪರಿಣಾಮವು ಬಾಹ್ಯ ವಸ್ತುವನ್ನು ವಿತರಣ ಮಾಡಲಿಕ್ಕೆ ಸಿದ್ಧವಾಗುತ್ತದೆ. ಆದುದರಿಂದ ಲೋಭ ಕಷಾಯದ ತ್ಯಾಗವೇ ವಾಸ್ತವಿಕ ದಾನವಿದೆ. ಮತ್ತು ಆ ಲೋಭ ಕಷಾಯವು ಭಾವಹಿಂಸೆಯ ಒಂದು ಭೇದವಿರುವುದರಿಂದ ಯಾವ ಸತ್ಪುರುಷರು ದಾನ ಕೊಡುತ್ತಾರೆ ಅವರೇ ವಾಸ್ತವದಲ್ಲಿ ಅಹಿಂಸಾವ್ರತದ ಪಾಲನೆ ಮಾಡುತ್ತಾರೆ.

ಈಗ ಮತ್ತೇ ದಾನದ ಮಹಿಮೆಯನ್ನೇ ಹೇಳುತ್ತಾರೆ, -

ಗೃಹಮಾಗತಾಯ ಗುಣೀನೇ ಮಧುಕರವೃತ್ತ್ಯಾ ಪರಾನಪೀಡಯತೇ ।
ವಿತರತಿ ಯೋ ನಾತಿಥಯೇ ಸ ಕಥಂ ನ ಹಿ ಲೋಭವಾನ್ ಭವತಿ ॥೧೭೩॥

**ಅನ್ವಯಾರ್ಥ :-** **[ಯಃ]** ಯಾವ ಗೃಹಸ್ಥನು **[ಗೃಹಮಾಗತಾಯ]** ಮನೆಗೆ ಬಂದಿರುವ **[ಗುಣಿನೇ]** ಸಂಯಮಾದಿ ಗುಣಗಳಿಂದಯುಕ್ತ ಮತ್ತು **[ಮಧುಕರವೃತ್ಯಾ]** ಭ್ರಮರ ಸಮಾನ ವೃತ್ತಿಯಿಂದ **[ಪರಾನ್]** ಇತರರಿಗೆ **[ಅಪೀಡಯತೇ]** ಬಾಧೆ ಕೊಡದಂಥ **[ಅತಿಥಯೇ]** ಅತಿಥಿ ಸಾಧುವಿಗೆ **[ನ ವಿತರತಿ]** ಭೋಜನಾದಿಗಳನ್ನು ಕೊಡುವುದಿಲ್ಲ. **[ಸಃ]** ಅವನು **[ಲೋಭವಾನ್]** ಲೋಭಿಯು **[ಕಥಂ]** ಹೇಗೆ **[ನ ಹಿ ಭವತಿ]** ಇರುವುದಿಲ್ಲ ? ಅವಶ್ಯವಾಗಿ ಇರುವನು.

**ಟೀಕೆ :- 'ಯಃ ಗೃಹಮಾಗತಾಯ ಗುಣಿನೇ ಪರಾನ್ ಅಪೀಡಯತೇ ಅತಿಥಯೇ ನ ವಿತರತಿ ಸಃ ಲೋಭವಾನ್ ಕಥಂ ನ ಭವತಿ ।' -** ಸ್ವಯಮೇವ ತಮ್ಮಿಂದ ತಾವೇ ಮನೆಗೆ ಬಂದಿರುವ ಹಾಗೂ ರತ್ನತ್ರಯಾದಿ ಗುಣ ಸಹಿತ ಮತ್ತು ದುಂಬಿಯಂಥ ವೃತ್ತಿಯಿಂದ ದಾತಾರನಿಗೆ ಕಷ್ಟ ತಲುಪಿಸದಂಥ ಅತಿಥಿಗಳು ಮುನಿ ಮಹಾರಾಜ ಮೊದಲಾದವರಿದ್ದಾರೆ, ಅವರಿಗೆ ಯಾವ ಗೃಹಸ್ಥನು-ಶ್ರಾವಕನು ದಾನ ಕೊಡುವುದಿಲ್ಲ ಅವನು ಅವಶ್ಯವಾಗಿ ಲೋಭಿ-ಹಿಂಸಾಸಂಯುಕ್ತನಿದ್ದಾನೆ. (ಏಕೆಂದರೆ ಅಂತರಂಗದಲ್ಲಿ ಮಹಾಕೃಪಣ ಬುದ್ಧಿಯು ಬಿದ್ದುಕೊಂಡಿರುವುದರಿಂದಲೇ ತೀವ್ರ ಲೋಭವು ಕಂಡು ಬರುತ್ತಿರುವುದರಿಂದ ಅತಿಥಿಗಳಿಗೆ ದಾನ ಕೊಡುವ ಭಾವವು ಉತ್ಪನ್ನವಾಗುವುದಿಲ್ಲ.)

**ಭಾವಾರ್ಥ :-** ಯಾವ ಪ್ರಕಾರ ದುಂಬಿಯು ಎಲ್ಲ ಪುಷ್ಪಗಳ ವಾಸನೆ ತೆಗೆದುಕೊಳ್ಳುತ್ತಿದ್ದರೂ ಕೂಡ ಅದು ಯಾವುದೇ ಪುಷ್ಪಕ್ಕೆಬಾಧೆಯನ್ನುಂಟು ಮಾಡುವುದಿಲ್ಲ, ಅದೇ ಪ್ರಕಾರ ಮುನಿಮಹಾರಾಜ ಮೊದಲಾದ ಅತಿಥಿಗಳೂ ಯಾವುದೇ ಶ್ರಾವಕಗೃಹಸ್ಥನಿಗೆ ಯಾವುದೇ ಪ್ರಕಾರದ ಬಾಧೆಯನ್ನು ತಲುಪಿಸದೆ ಆಹಾರಾದಿಗಳನ್ನು ಸ್ವೀಕರಿಸುತ್ತಾರೆ. ನೀವು ನಮ್ಮ ಸಲುವಾಗಿ ಭೋಜನ ಮಾಡಿರಿ ಅಥವಾ ಭೋಜನ ಕೊಡಿರೆಂದು ಅವರು ಯಾರಿಗೂ ಹೇಳುವುದಿಲ್ಲ. ಆದರೆ ಸ್ವಯಂ ಶ್ರಾವಕನು ಯಾವಾಗ ಆದರ ಭಕ್ತಿಪೂರ್ವಕವಾಗಿ ಕರೆಯುತ್ತಾನೆ ಆಗ ಅವರು ಒಂದಿಷ್ಟು ನಿಸ್ಸಾರ - ನೀರಸ ಶುದ್ಧ ಪ್ರಾಸುಕ ಯಾವುದೇ ಆಹಾರ ದೊರಕಲಿ ಅದರ ಗ್ರಹಣ ಮಾಡುತ್ತಾರೆ. ಆದುದರಿಂದ ಯಾವ ಶ್ರಾವಕನು

ಇಂಥ ಪರಮ ಸಂತೋಷಿಯಾದ ಅತಿಥಿಗಳಿಗೂ ದಾನ ಕೊಡುವುದಿಲ್ಲ ಅವನು ಅವಶ್ಯವಾಗಿ ಹಿಂಸೆಯ ಪಾಲುಗಾರನಾಗುತ್ತಾನೆ, ಮತ್ತು ~~ಅವನಿಗೆ ಅತಿಥಿ ಸಂವಿಭಾಗ ವ್ರತವು ಎಂದೂ ಆ~~ಗುವುದಿಲ್ಲ.

ಈಗ ದಾನವು ಅಹಿಂಸಾ ಸ್ವರೂಪವೇ ಇದೆಯೆಂದು ಹೇಳುತ್ತಾರೆ, -

**ಕೃತಮಾತ್ಮಾರ್ಥಂ ಮುನಯೇ ದದಾತಿ ಭಕ್ತಿಮಿತಿ ಭಾವಿತಸ್ತ್ಯಾಗಃ ।**
**ಅರತಿವಿಷಾದವಿಮುಕ್ತಃ ಶಿಥಿಲತಲೋಭೋ ಭವತ್ಯಹಿಂಸೈವ ॥೧೭೪॥**

**ಅನ್ವಯಾರ್ಥ :-** **[ಆತ್ಮಾರ್ಥಂ]** ತಮ್ಮ ಸಲುವಾಗಿ **[ಕೃತಮ್]** ಮಾಡಿರುವ **[ಭುಕ್ತಮ್]** ಭೋಜನವನ್ನು **[ಮುನಯೇ]** ಮುನಿಗಳಿಗೆ **[ದದಾತಿ]** ಕೊಡುವುದು **[ಇತಿ]** ಈ ಪ್ರಕಾರ **[ಭಾವಿತಃ]** ಭಾವಪೂರ್ವಕ **[ಅರತಿವಿಷಾದವಿಮುಕ್ತಃ)** ಅಪ್ರೀತಿ ಮತ್ತು ವಿಷಾದರಹಿತ ಹಾಗೂ **[ಶಿಥಿಲಿತಲೋಭಃ]** ಲೋಭವನ್ನು ಶಿಥಿಲಗೊಳಿಸುವಂಥ **[ತ್ಯಾಗಃ]** ದಾನವು **[ಅಹಿಂಸಾ ಏವ]** ಅಹಿಂಸಾಸ್ವರೂಪವೇ **[ಭವತಿ]** ಇದೆ.

**ಟೀಕೆ :- 'ಆತ್ಮಾರ್ಥಂ ಕೃತಂ ಭುಕ್ತಮ್ ಮುನಯೇ ದದಾತಿ ಇತಿ ಭಾವತಃ ತ್ಯಾಗಃ ಅರತಿವಿಷಾದ-ವಿಮುಕ್ತಃ ಶಿಥಿಲಿತಲೋಭಃ ಅಹಿಂಸೈವ ಭವತಿ ।'** - ಯಾವ ಶ್ರಾವಕನು ತನ್ನ ಸಲುವಾಗಿ ಮಾಡಿರುವ ಭೋಜನವನ್ನು ನಾನು 'ಮುನಿ ಮಹಾರಾಜರಿಗೆ ಕೊಡುತ್ತೇನೆಂ'ಬ ತ್ಯಾಗ ಭಾವವನ್ನು ಅಂಗೀಕಾರ ಮಾಡಿ, ದಾನ ಕೊಡುವಲ್ಲಿ ಅರತಿ-ಪಶ್ಚಾತ್ತಾಪ, ವಿಷಾದ ಮೊದಲಾದ ದೋಷಗಳ ತ್ಯಾಗ ಮಾಡಿ, ತನ್ನ ಲೋಭವು ಶಿಥಿಲವಾಗಿರು-ವಂಥ ಶ್ರಾವಕನಿಗೆ ಅವಶ್ಯವಾಗಿ ಅಹಿಂಸೆಯಾಗುತ್ತದೆ.

**ಭಾವಾರ್ಥ :-** ಈ ಅತಿಥಿ ಸಂವಿಭಾಗ-ವೈಯಾವೃತ್ತ ಶಿಕ್ಷಾವ್ರತದಲ್ಲಿದ್ರವ್ಯ-ಅಹಿಂಸೆಯಂತೂ ಪ್ರಕಟವೇ ಇದೆ. ಏಕೆಂದರೆ ದಾನ ಕೊಡುವುದರಿಂದ ಪರಜೀವದ ಕ್ಷುಧೆ-ತೃಷೆಗಳ ಬಾಧೆಯು ಹಿಂಗಿ ದುಃಖವು ದೂರವಾಗುತ್ತದೆ ಮತ್ತು ದಾನಿಯು ಲೋಭಕಷಾಯದ ತ್ಯಾಗ ಮಾಡುವುದರಿಂದ ಭಾವ ಅಹಿಂಸೆಯು ಆಗುತ್ತದೆ. ಎಂದರೆ ದಾನ ಕೊಡುವವನು ಪೂರ್ಣ ಅಹಿಂಸಾವ್ರತ ಪಾಲನೆ ಮಾಡುತ್ತಾನೆ. ಈ ಪ್ರಕಾರ ಏಳು ಶೀಲ ವ್ರತಗಳ ವರ್ಣನೆಯು ಪೂರ್ಣವಾಯಿತು.

ಇಲ್ಲಿಯವರೆಗೆ ಶ್ರಾವಕನ ಹನ್ನೆರಡು ವ್ರತಗಳ ವರ್ಣನೆಯು ಪೂರ್ಣವಾಯಿತು.

## ಸಲ್ಲೇಖನಾಧರ್ಮ ವ್ಯಾಖ್ಯಾನ

ಈ ಪ್ರಕಾರ ಸಮ್ಯಕ್ತ್ವಸಹಿತ ಐದು ಅಣುವ್ರತಗಳನ್ನು ಧಾರಣ ಮಾಡಿ, ಏಳು ಶೀಲವ್ರತಗಳ ಪಾಲನೆ ಮಾಡಿ ಕೊನೆಯಲ್ಲಿ ಸಲ್ಲೇಖನದ ಅಂಗೀಕಾರ ಮಾಡಬೇಕಾಗುವುದು.

ಈಗ ಸಲ್ಲೇಖನದ ಸ್ವರೂಪ ಹೇಳುತ್ತಾರೆ, -

**ಇಯಮೇಕೈವ ಸಮರ್ಥಾ ಧರ್ಮಸ್ವಂ ಮೇ ಮಯಾ ಸಮಂ ನೇತುಮ್ ।**
**ಸತತಮಿತಿ ಭಾವನೀಯಾ ಪಶ್ಚಿಮಸಲ್ಲೇಖನಾ ಭಕ್ತ್ಯಾ ॥೧೭೫॥**

**ಅನ್ವಯಾರ್ಥ :-** **[ಇಯಮ್]** ಈ **(ಏಕಾ]** ಒಂದು **[ಪಶ್ಚಿಮಸಲ್ಲೇಖನಾ ಏವ]** ಮರಣದ

ಕೊನೆಯಲ್ಲಿಸಂಭವಿಸುವಂಥ ಸಲ್ಲೇಖನವೇ **[ಮೇ]** ನನ್ನ **[ಧರ್ಮಸ್ವಂ)** ಧರ್ಮರೂಪದ ಧನವನ್ನು **[ಮಯಾ]** ನನ್ನ **[ಸಮಂ]** ಜತೆಯಲ್ಲಿ **[ನೇತುಮ್]** ತೆಗೆದುಕೊಂಡು ಹೋಗುವಲ್ಲಿ **[ಸಮರ್ಥಾ]** ಸಮರ್ಥವಿದೆ. **[ಇತಿ]** ಈ ಪ್ರಕಾರ **[ಭಕ್ತ್ಯಾ]** ಭಕ್ತಿಯಿಂದ **[ಸತತಮ್]** ನಿರಂತರ **[ಭಾವನೀಯಾ]** ಭಾವನೆ ಮಾಡಬೇಕಾಗುವುದು.

**ಟೀಕೆ :- 'ಇಯಮ್ ಏಕೈವ ಮೇ ಧರ್ಮಸ್ವಂ ಮಯಾ ಸಮಂ ನೇತುಮ್ ಸಮರ್ಥಾ ಇತಿ ಇತೌಃ ಪಶ್ಚಿಮ ಸಲ್ಲೇಖನಾ ಭಕ್ತ್ಯಾ ಸತತಂ ಭಾವನೀಯಾಃ'** - ಕೇವಲ ಈ ಒಂದು ಸಲ್ಲೇಖನವೇ ನನ್ನ ಧರ್ಮವನ್ನು ನನ್ನ ಜತೆಯಲ್ಲಿ ತೆಗೆದುಕೊಂಡು ಹೋಗುವಲ್ಲಿ ಸಮರ್ಥವಿರುವುದರಿಂದ ಪ್ರತಿಯೊಬ್ಬ ಮನುಷ್ಯನಿಗೆ ಈ ಅಂತಿಮ ಸಲ್ಲೇಖನ ಅಥವಾ ಸಮಾಧಿ ಮರಣದ ಭಾವನೆಯನ್ನು ಯಾವಾಗಲೂ ಭಕ್ತಿಪೂರ್ವಕ ಮಾಡಬೇಕಾಗುವುದು.

**ಭಾವಾರ್ಥ :-** ಸಂಸಾರದ ಕಾರಣವು ಮಿಥ್ಯಾತ್ವ ಹಾಗೂ ಕ್ರೋಧ ಮೊದಲಾದ ಕಷಾಯಗಳಿವೆ, ಮತ್ತು ಅವುಗಳ ನಿಮಿತ್ತ ಕಾರಣದಿಂದ ಆಹಾರ ಮೊದಲಾದ ಪರಿಗ್ರಹದಲ್ಲಿ ಇಚ್ಛೆಯಿದೆ. (ಸ್ವಸನ್ಮುಖತೆಯ ಬಲದಿಂದ) ಇವೆಲ್ಲವುಗಳನ್ನು ಕಡಿಮೆ ಮಾಡುವುದನ್ನೇ ಸಲ್ಲೇಖನವೆಂದು ಹೇಳುತ್ತಾರೆ. ಈ ಸಲ್ಲೇಖನವೂ ಎರಡು ಪ್ರಕಾರದ್ದಿದೆ. ಅವುಗಳಲ್ಲಿ ಒಂದು ಕ್ರಮ ಕ್ರಮದಿಂದ ತ್ಯಾಗ ಮಾಡುವುದಿದ್ದರೆ ಇನ್ನೊಂದು ಸರ್ವಥಾ ತ್ಯಾಗ ಮಾಡುವುದಿದೆ. (ಎಂದರೆ ಅನುಕ್ರಮದಿಂದ ಆಹಾರವನ್ನು ಕಡಿಮೆ ಮಾಡುವುದು ಅಥವಾ ಸರ್ವಥಾ ತ್ಯಾಗ ಮಾಡುವುದು ಅದು ಕಾಯಸಲ್ಲೇಖನವಿದೆ ಮತ್ತು ಕ್ರೋಧಾದಿ ಕಷಾಯಗಳನ್ನು ಕಡಿಮೆ ಮಾಡುವುದು ಅಥವಾ ತ್ಯಾಗ ಮಾಡುವುದು ಅದು ಕಷಾಯ ಸಲ್ಲೇಖನವಿದೆ.) ಆದುದರಿಂದ ವಿಚಾರ ಮಾಡಿ ಶ್ರಾವಕನು ತನ್ನ ಮರಣದ ಕೊನೆಯ ಸಮಯದಲ್ಲಿ ಅವಶ್ಯವಾಗಿ ಸಲ್ಲೇಖನ ಮಾಡಬೇಕಾಗುವುದು. ನಾನು ಜೀವನ ತುಂಬೆಲ್ಲ ಯಾವ ಪುಣ್ಯರೂಪದ ಕಾರ್ಯ ಮಾಡಿದ್ದೇನೆ ಮತ್ತು ಧರ್ಮದ ಪಾಲನೆ ಮಾಡಿದ್ದೇನೆ ಆ ಧರ್ಮರೂಪದ ಧನವನ್ನು ನನ್ನ ಜತೆಯಲ್ಲಿ ತೆಗೆದುಕೊಂಡು ಹೋಗಲು ಈ ಒಂದು ಸಲ್ಲೇಖನವೇ ಸಮರ್ಥವಿದೆ. ಈಗ ಒಂದು ವೇಳೆ ಮರಣ ಸಮಯದಲ್ಲಿ ಸನ್ಯಸನ ಧಾರಣ ಮಾಡಿದೆನೆಂದರೆ ಎಲ್ಲ ಧರ್ಮವು ಪರಲೋಕದಲ್ಲಿ ನನ್ನ ಜತೆ ಬರುವುದು ಮತ್ತು ಇಲ್ಲಿ ಪರಿಣಾಮವು ಭ್ರಷ್ಟವಾಗಿ ಹೋದರೆ ದುರ್ಗತಿಯಲ್ಲಿ ಗಮನವಾಗುವುದು. ಆದುದರಿಂದ ಇಂಥ ಭಾವನೆಯೊಡನೆ ಶ್ರಾವಕನು ಅವಶ್ಯವಾಗಿ ಸಮಾಧಿ ಮರಣ ಮಾಡುವುದು ಯೋಗ್ಯವಿದೆ.

ಮರಣ ಸಮಯದ ಮೊದಲೇ ಸಲ್ಲೇಖನ ಧಾರಣ ಮಾಡಬೇಕೆಂದು ಹೇಳುತ್ತಾರೆ, -

**ಮರಣಾಂತೇऽವಶ್ಯಮಹಂ ವಿಧಿನಾ ಸಲ್ಲೇಖನಾ★ ಕರಿಷ್ಯಾಮಿ ।**
**ಇತಿ ಭಾವನಾಪರಿಣತೋऽನಾಗತಮಪಿ ಪಾಲಯೇದಿದಂ ಶೀಲಮ್ ॥೧೭೬॥**

**ಅನ್ವಯಾರ್ಥ :- [ಅಹಂ]** ನಾನು **[ಮರಣಾಂತೇ]** ಮರಣದ ಸಮಯದಲ್ಲಿ **[ಅವಶ್ಯಂ]** ಅವಶ್ಯವಾಗಿ **[ವಿಧಿನಾ]** ಶಾಸ್ತ್ರೋಕ್ತ ವಿಧಿಯಿಂದ **[ಸಲ್ಲೇಖನಾಂ]** ಸಮಾಧಿಮರಣ **[ಕರಿಷ್ಯಾಮಿ]** ಮಾಡುವೆನು **[ಇತಿ]** ಈ ಪ್ರಕಾರವಾಗಿ **[ಭಾವನಾ ಪರಿಣತಃ]** ಭಾವನಾರೂಪದ ಪರಿಣತಿ ಮಾಡಿ **[ಅನಾಗತಮಪಿ]** ಮರಣಕಾಲ ಬರುವ

★ ಸತ್-ಸಮ್ಯಕ್ ಪ್ರಕಾರದಿಂದ, ಲೇಖನ-ಕಷಾಯವನ್ನು ಕ್ಷೀಣ-ಕೃಶಮಾಡುವುದನ್ನು ಸಲ್ಲೇಖನವೆಂದು ಹೇಳುತ್ತಾರೆ. ಅದರಲ್ಲಿ ಅಭ್ಯಂತರ ಮತ್ತುಬಾಹ್ಯವೆಂದು ಎರಡು ಭೇದಗಳಿವೆ. ಕಾಯಕೃಶ ಮಾಡುವುದನ್ನು ಬಾಹ್ಯ ಸಲ್ಲೇಖನವೆಂದು ಹೇಳುತ್ತಾರೆ ಮತ್ತು ಅಂತರಂಗದ ಕ್ರೋಧಾದಿ ಕಷಾಯಗಳನ್ನು ಕೃಶ ಮಾಡುವುದಕ್ಕೆ ಅಭ್ಯಂತರ ಸಲ್ಲೇಖನವೆಂದು ಹೇಳುತ್ತಾರೆ.

ಮೊದಲೇ **[ಇದಂ]** ಈ **[ಶೀಲಮ್]** ಸಲ್ಲೇಖನ ವ್ರತವನ್ನು **[ಪಾಲಯೇತ್]** ಪಾಲಿಸುವುದು ಎಂದರೆ ಅಂಗೀಕಾರ ಮಾಡುವುದು.

**ಟೀಕೆ ಃ- ಃ 'ಅಹಂ ಮರಣಾಂತೇ ಅವಶ್ಯಂ ವಿಧಿನಾ ಸಲ್ಲೇಖನಾಂ ಕರಿಷ್ಯಾಮಿ ಃ ಇತಿ ಭಾವನಾ ಪರಿಣತಃ ಅನಾಗತಂ ಅಪಿ ಶೀಲಂ ಪಾಲಯೇತ್ ।'** - ನಾನು ಮರಣ ಸಮಯದಲ್ಲಿ ಅವಶ್ಯವಾಗಿ ವಿಧಿ ಪೂರ್ವಕ ಸಮಾಧಿಮರಣ ಮಾಡುವೆನೆಂಬ ಭಾವನೆಯೊಡನೆ ಶ್ರಾವಕನು ತನಗೆ ಪ್ರಾಪ್ತವಾಗಿರದಂಥ ಶೀಲವನ್ನು - ಸ್ವಭಾವವನ್ನು ಪ್ರಾಪ್ತ ಮಾಡಿಕೊಳ್ಳುತ್ತಾನೆ. । ಸಲ್ಲೇಖನವೆನ್ನಿರಿ ಅಥವಾ ಸನ್ಯಾಸವೆನ್ನಿರಿ ಅದರ ಧಾರಣವಂತೂ ಮರಣಾಂತದಲ್ಲಿ ಆಗುವುದು ಎಂದರೆ ಸಮಯ ಸಮಯಕ್ಕೆ ಈ ಜೀವದ ಆಯುವು ಕಡಿಮೆಯಾಗುವ ಅಪೇಕ್ಷೆಯಿಂದ ಪ್ರತಿಯೊಂದು ಸಮಯಕ್ಕೆ ಮರಣವಾಗುತ್ತಲಿದೆ ಮತ್ತು ಅದರ ಕೊನೆಯಲ್ಲಿ ಸನ್ಯಾಸ ಧಾರಣ ಮಾಡಲಾಗುವುದು, ಆದರೆ ನಾನು ಮರಣಕಾಲದಲ್ಲಿ ಸನ್ಯಾಸ ಧಾರಣ ಮಾಡುವೆನೆಂಬ ಪ್ರತಿಜ್ಞೆಯನ್ನು ಮೊದಲಿನಿಂದಲೇ ಮಾಡಬೇಕಾಗುವುದು. ಎಂದರೇನೇ ಈ ಪ್ರತಿಜ್ಞೆಯ ಅಪೇಕ್ಷೆಯಿಂದ ಈ ಶೀಲವನ್ನು ಮೊದಲೇ ಪಾಲನೆ ಮಾಡುವುದರಲ್ಲಿ ಬಂದು ಬಿಡುತ್ತದೆ. ।

ಭಾವಾರ್ಥ ಃ- ನಾನು ನನ್ನ ಮರಣ ಸಮಯದಲ್ಲಿ ಅವಶ್ಯವಾಗಿ ಸಲ್ಲೇಖನಧಾರಣ ಮಾಡುವೆನೆಂಬ ಮಾತಿನ ವಿಚಾರವು ಶ್ರಾವಕನಿಗೆ ಯಾವಾಗಲೂ ಇರಬೇಕಾಗುವುದು. ಅವನು ಅಂಥ ವಿಚಾರ ಮಾಡಬೇಕಾಗುವುದು. ಏಕೆಂದರೆ ಮರಣ ಸಮಯದಲ್ಲಿ ಪ್ರಾಯಶಃ ಮನುಷ್ಯರ ಪರಿಣಾಮವು ಅತ್ಯಂತ ದುಃಖಿಯಾಗಿ ಹೋಗುತ್ತದೆ. ಮತ್ತು ಕುಟುಂಬದ ಜನರಿಂದ ಹಾಗೂ ಧನಾದಿಗಳಿಂದ ಮಮತೆಯ ಭಾವವು ಬಿಟ್ಟು ಹೋಗುವುದಿಲ್ಲ. ಯಾವನಿಗೆ ಮಮತೆಯ ಭಾವವು ಬಿಟ್ಟು ಹೋಗುತ್ತದೆ ಅವನಿಗೇ ಸಲ್ಲೇಖನವಾಗುತ್ತದೆ. ಮಮತೆಯ ಭಾವವು ಬಿಡುವುದರಿಂದ ಪಾಪದ ಬಂಧವಾಗದಿರುವ ಕಾರಣ ನರಕ ಮೊದಲಾದ ಗತಿಗಳ ಬಂಧವೂ ಆಗುವುದಿಲ್ಲ. ಆದುದರಿಂದ ಮರಣ ಸಮಯದಲ್ಲಿ ಅವಶ್ಯವಾಗಿ ಸಲ್ಲೇಖನ ಮಾಡುವ ಪರಿಣಾಮವನ್ನು ಇಟ್ಟುಕೊಳ್ಳಬೇಕಾಗುವುದು.

ಈಗ ಸಲ್ಲೇಖನವು ಆತ್ಮಘಾತವಲ್ಲವೆಂದು ಹೇಳುತ್ತಾರೆ, -

ಮರಣೇಽವಶ್ಯಂ ಭಾವಿನಿ ಕಷಾಯಸಲ್ಲೇಖನಾತನೂಕರಣಮಾತ್ರೇ ।
ರಾಗಾದಿಮಂತರೇಣ ವ್ಯಾಪ್ರಿಯಮಾಣಸ್ಯ ನಾತ್ಮಘಾತೋಽಸ್ತಿ ॥೧೭೭॥

**ಅನ್ವಯಾರ್ಥ ಃ- [ಅವಶ್ಯಂ]** ಅವಶ್ಯವಾಗಿ **[ಭಾವಿನಿ]** ಆಗುವಂಥ **[ಮರಣೇ'ಸತಿ']** ಮರಣವಾದ ಮೇಲೆ **[ಕಷಾಯಸಲ್ಲೇಖನಾತನೂಕರಣಮಾತ್ರೇ]** ಕಷಾಯಸಲ್ಲೇಖನದ ಕೃಶ ಮಾಡುವ ಮಾತ್ರದ ವ್ಯಾಪಾರದಲ್ಲಿ **[ವ್ಯಾಪ್ರಿಯಮಾಣಸ್ಯ]** ಪ್ರವರ್ತಮಾನನಾದ ಪುರುಷನಿಗೆ **[ರಾಗಾದಿಮಂತರೇಣ]** ರಾಗಾದಿ ಭಾವಗಳ ಅಭಾವದಲ್ಲಿ **[ಆತ್ಮಘಾತಃ]** ಆತ್ಮಘಾತವು **[ನಾಸ್ತಿ]** ಇಲ್ಲ.

**ಟೀಕೆ ಃ- 'ಅವಶ್ಯಂ ಭಾವಿನಿ ಮರಣೇ ಕಷಾಯಸಲ್ಲೇಖನಾತನೂಕರಣಮಾತ್ರೇ ರಾಗಾದಿಮಂತರೇಣ ವ್ಯಾಪ್ರಿಯಮಾಣಸ್ಯ ಆತ್ಮಘಾತಃ ನ ಅಸ್ತಿ ।'**- ಅವಶ್ಯವಾಗಿ ಸಂಭವಿಸುವಂಥ ಯಾವ ಮರಣವಿದೆ ಅದರಲ್ಲಿ ಆಗ ಕಷಾಯದ ತ್ಯಾಗಮಾಡುತ್ತ, ರಾಗ-ದ್ವೇಷಗಳಿಲ್ಲದೆಯೇ ಪ್ರಾಣತ್ಯಾಗಮಾಡುವಂಥ ಯಾವ ಮನುಷ್ಯನಿದ್ದಾನೆ ಅವನಿಗೆ ಆತ್ಮಘಾತವಾಗುವ ಸಾಧ್ಯತೆಯಿಲ್ಲ.

**ಭಾವಾರ್ಥ ಃ-** ಸನ್ಯಾಸದಲ್ಲಂತೂ ಆತ್ಮಘಾತದ ದೋಷವು ಬರುತ್ತದೆಂದು ಇಲ್ಲಿ ಯಾರಾದರೂ

ಹೇಳಬಹುದಾಗಿದೆ. ಆದರೆ ಸಲ್ಲೇಖನ ಮಾಡುವಂಥ ಪುರುಷನು ಯಾವ ಸಮಯದಲ್ಲಿ ತನ್ನ ಮರಣವು ಅವಶ್ಯವಾಗಿ ಆಗುತ್ತದೆಯೆಂದು ತಿಳಿಯುತ್ತಾನೆ. ಆಗ ಸನ್ಯಾಸದ ಅಂಗೀಕಾರ ಮಾಡಿ ಕಷಾಯಗಳನ್ನು ಕಡಿಮೆ ಮಾಡುತ್ತಾನೆ ಮತ್ತು ರಾಗ-ದ್ವೇಷಗಳನ್ನು ಕೆಡಿಸುತ್ತಾನೆ ಅದರಿಂದ ಅವನಿಗೆ ಆತ್ಮಘಾತದ ದೋಷವಿಲ್ಲ. ನಾನು ಬಲವಂತದಿಂದ ಮರಣ ತಂದುಕೊಳ್ಳುವೆನೆಂಬ ಇಚ್ಛೆಯು ಅವನಿಗಿರುವುದಿಲ್ಲ. ಆದರೆ ಯಾವಾಗ ಬಲಾತ್ ರೂಪದಿಂದ ಮರಣವಾಗಲಾರಂಭಿಸುತ್ತದೆ ಆಗ ನನ್ನ ಪರಿಣಾಮವು ಶುದ್ಧವಿರಲಿ ಮತ್ತು ನಾನು ಸಾಂಸಾರಿಕ ವಿಷಯ ಭೋಗಗಳಿಂದ ಮಮತೆಯನ್ನು ತ್ಯಾಗ ಮಾಡುತ್ತೇನೆಂಬ ಅಭಿಪ್ರಾಯವು ಅವನಿಗಿರುತ್ತದೆ. ಒಂದು ವೇಳೆ ಅವನ ಮರಣದಲ್ಲಿ ರಾಗ-ದ್ವೇಷಗಳಾದರೆ ಆತ್ಮಘಾತವಾಗುತ್ತದೆ. ಆದರೆ ಯಾವ ಮನುಷ್ಯನು ರಾಗ-ದ್ವೇಷಗಳ ತ್ಯಾಗ ಮಾಡುತ್ತಿದ್ದಾನೆ ಅವನಿಗೆ ಆತ್ಮಘಾತವಾಗುವ ಸಾಧ್ಯತೆಯಿಲ್ಲ.

ಈಗ ಯಾವನು ಆತ್ಮಘಾತಿಯಿದ್ದಾನೆಂಬುದನ್ನು ತಿಳಿಸಿಕೊಡುತ್ತಾರೆ, -

**ಯೋ ಹಿ ಕಷಾಯಾವಿಷ್ಟಃಕುಂಭಕಜಲಧೂಮಕೇತುವಿಷಶಸ್ತ್ರೈಃ ।**
**ವ್ಯಪರೋಪಯತಿ ಪ್ರಾಣಾನ್ ತಸ್ಯ ಸ್ಯಾತ್ಸತ್ಯಮಾತ್ಮ ವಧಃ ॥೧೭೮॥**

**ಅನ್ವಯಾರ್ಥ :-** **[ಹಿ]** ನಿಶ್ಚಯದಿಂದ **[ಕಷಾಯಾವಿಷ್ಟಃ]** ಕ್ರೋಧಾದಿಕಷಾಯಗಳಿಂದ ಆವರಿಸಿಕೊಂಡ **[ಯಃ]** ಯಾವ ಪುರುಷನು **[ಕುಂಭಕಜಲಧೂಮಕೇತುವಿಷಶಸ್ತ್ರೈಃ]** ಶ್ವಾಸನಿರೋಧ, ಜಲ, ಅಗ್ನಿ, ವಿಷ, ಶಸ್ತ್ರ ಮೊದಲಾದವುಗಳಿಂದ ತನ್ನ **[ಪ್ರಾಣಾನ್]** ಪ್ರಾಣವನ್ನು **[ವ್ಯಪರೋಪಯತಿ]** ಪೃಥಕ್ ಮಾಡುತ್ತಾನೆ **[ತಸ್ಯ]** ಅವನಿಗೆ **[ಸತ್ಯಮ್]** ವಾಸ್ತವದಲ್ಲಿ **[ಆತ್ಮವಧಃ ಸ್ಯಾತ್]** ಆತ್ಮಘಾತವಾಗುತ್ತದೆ.

**ಟೀಕೆ :- 'ಹಿ ಯಃ (ಶ್ರಾವಕಃ) ಕಷಾಯಾವಿಷ್ಟಃ (ಸನ್) ಕುಂಭಕಜಲ-ಧೂಮಕೇತು-ವಿಷ-ಶಸ್ತ್ರೈಃ ಪ್ರಾಣಾನ್ ವ್ಯಪರೋಪಯತಿ ತಸ್ಯ ಆತ್ಮವಧಃ ಸತ್ಯಮ್ ಸ್ಯಾತ್ ।'** - ಯಾವ ಜೀವನು ಕ್ರೋಧ ಮೊದಲಾದ ಕಷಾಯಗಳಿಂದ ಸಂಯುಕ್ತನಾಗಿ ಶ್ವಾಸ ನಿರೋಧ ಮಾಡಿ ಎಂದರೆ ನೇಣು ಹಾಕಿಕೊಂಡು, ನೀರಿನಲ್ಲಿ ಮುಳುಗಿ, ಅಗ್ನಿಯಲ್ಲಿ ಬೆಂದು, ವಿಷ ಭಕ್ಷಣ ಮಾಡಿ ಅಥವಾ ಶಸ್ತ್ರಾದಿಗಳಿಂದ ತನ್ನ ಪ್ರಾಣದ ವಿಯೋಗ ಮಾಡುತ್ತಾನೆ. ಅವನಿಗೆ ಯಾವಾಗಲೂ ಆತ್ಮಘಾತದ ದೋಷವು ತಗಲುತ್ತದೆ.

**ಭಾವಾರ್ಥ :-** ಯಾವ ಜೀವನು ಕ್ರೋಧ-ಮಾನ-ಮಾಯೆ-ಲೋಭ ಮೊದಲಾದ ಕಷಾಯಗಳ ತೀವ್ರತೆಯಿಂದ (ಅಥವಾ ಇಷ್ಟವಿಯೋಗದ ಖೇದದಿಂದ ಅಥವಾ ಭವಿಷ್ಯ ನಿದಾನದ ವಶವರ್ತಿಯಾಗಿ) ತನ್ನ ಪ್ರಾಣದ ಘಾತ ಮಾಡಿಕೊಳ್ಳುತ್ತಾನೆ ಅವನಿಗೆ ಆತ್ಮಘಾತದ ದೋಷವು ತಗಲುತ್ತದೆ.

**ವಿಶೇಷ :-** ಸಲ್ಲೇಖನ ಧರ್ಮವು - ಸಮಾಧಿ ಮರಣ ವಿಧಿಯು ಮುನಿ ಮತ್ತು ಗೃಹಸ್ಥ ಇವರೀರ್ವರ ಸಲುವಾಗಿ ಇದೆ. ಸಲ್ಲೇಖನ ಅಥವಾ ಸಮಾಧಿ ಮರಣದ ಅರ್ಥವು ಒಂದೇ ಇರುವುದರಿಂದ ಹನ್ನೆರಡು ವ್ರತಗಳ ನಂತರ ಸಲ್ಲೇಖನದ ವರ್ಣನೆ ಮಾಡಿದೆ. **ಈ ಸಲ್ಲೇಖನವ್ರತದ ಉತ್ಕೃಷ್ಟ ಮರ್ಯಾದೆಯು ಹನ್ನೆರಡು ವರ್ಷಗಳವರೆಗಿದೆಯೆಂದು ಶ್ರೀ ವೀರನಂದಿ ಆಚಾರ್ಯಕೃತ ಯತ್ನಾಚಾರವೆಂಬ ಹೆಸರಿನ ಗ್ರಂಥದಲ್ಲಿ ಹೇಳಿದೆ.** ಯಾವಾಗ ಶರೀರವು ಯಾವುದೇ ಅಸಾಧ್ಯ ರೋಗದಿಂದ ಅಥವಾ ವೃದ್ಧಾವಸ್ಥೆಯಿಂದ ಅಸಮರ್ಥವಾಗಿ ಹೋಗುತ್ತದೆ, ದೇವ-ಮನುಷ್ಯ ಮೊದಲಾದವರು ಮಾಡಿದ ಯಾವುದಾದರೂ ದುರ್ನಿವಾರವಾದ ಉಪಸರ್ಗವು

★ ನಾಲ್ಕು ಪ್ರಕಾರದ ಸಂಘ = ಮುನಿ, ಆರ್ಯಿಕೆ, ಶ್ರಾವಕ, ಶ್ರಾವಿಕೆ.

ಬಂದು ಬಿಡುತ್ತದೆ, ಯಾವುದೇ ಒಂದು ಮಹಾನ ಬರಗಾಲದಿಂದ ಧಾನ್ಯ ಮೊದಲಾದ ಭೋಜ್ಯ ಪದಾರ್ಥಗಳ ಅಭಾವವಾಗಿ ಹೋಗುತ್ತದೆ, ಅಥವಾ ಧರ್ಮದ ನಾಶ ಮಾಡುವಂಥ ಯಾವುದೇ ವಿಶೇಷ ಕಾರಣವು ಉಪಸ್ಥಿತವಾಗಿಬಿಡುತ್ತದೆ, ಆಗ ತನ್ನ ಶರೀರವನ್ನು ಪಕ್ವವಾದ ಪತ್ರದ ಸಮಾನ ಅಥವಾ ಎಣ್ಣೆ ತೀರಿದ ದೀವಿಗೆಯಸಮಾನ ತಾನಾಗಿಯೇ ವಿನಾಶದ ಸನ್ಮುಖವಾಗಿರುವುದನ್ನು ತಿಳಿದುಕೊಂಡು ಸನ್ಯಾಸಧಾರಣ ಮಾಡಬೇಕು. ಒಂದು ವೇಳೆ ಮರಣದಲ್ಲಿ ಯಾವುದೇ ಪ್ರಕಾರದ ಸಂದೇಹವಿದ್ದರೆ ಈ ಉಪಸರ್ಗದಲ್ಲಿ ನನ್ನ ಆಯುಷ್ಯವು ಪೂರ್ಣವಾಗಿ ಹೋದರೆ (ಮರಣವಾಗಿ ಬಿಟ್ಟರೆ) ನನಗೆ ಆಹಾರ ಮೊದಲಾದವುಗಳ ಸರ್ವಥಾ ತ್ಯಾಗವಿದೆ ಮತ್ತು ಒಂದು ವೇಳೆ ಕದಾಚಿತ್ ಜೀವನವು ಬಾಕಿ ಉಳಿದುಕೊಂಡರೆ ಆಹಾರಾದಿಗಳನ್ನು ಗ್ರಹಣ ಮಾಡುವೆನೆಂದು ಮರ್ಯಾದೆ ಪೂರ್ವಕ ಪ್ರತಿಜ್ಞೆ ಮಾಡಬೇಕು. ಇದು ಸನ್ಯಾಸ ಗ್ರಹಣ ಮಾಡುವ ಕ್ರಮವಿದೆ.

ರೋಗಾದಿಗಳಾದ ಮೇಲೆ ಯಥಾಶಕ್ತಿ ಔಷಧ ಮಾಡಬೇಕು. ಆದರೆ ಯಾವಾಗ ರೋಗವು ಅಸಾಧ್ಯವಾಗಿ ಹೋಗುತ್ತದೆ, ಯಾವುದೇ ಪ್ರಕಾರದ ಉಪಚಾರದಿಂದ ಲಾಭವಾಗದಿದ್ದರೆ ಅಂಥ ದಶೆಯಲ್ಲಿ ಶರೀರವು ದುಷ್ಟ ಸಮಾನವಿದೆ ಸರ್ವಥಾ ತ್ಯಾಗ ಮಾಡಲು ಯೋಗ್ಯವೆಂದು ಹೇಳಿದೆ, ಮತ್ತು ಐಚ್ಛಿಕ ಫಲ ಕೊಡುವಂಥ ಧರ್ಮವು ವಿಶೇಷರೂಪದಿಂದ ಪಾಲನೆ ಮಾಡಲು ಯೋಗ್ಯವೆಂದು ಹೇಳಿದೆ. ಶರೀರವಂತೂ ಮರಣವಾದ ನಂತರ ಬೇರೊಂದು ದೊರಕುವುದು, ಆದರೆ ಧರ್ಮಪಾಲನೆ ಮಾಡುವ ಯೋಗ್ಯತೆಯನ್ನು ಪ್ರಾಪ್ತಮಾಡಿಕೊಳ್ಳುವುದು ಅತಿಶಯ ದುರ್ಲಭವಿದೆ. ಆದುದರಿಂದ ವಿಧಿ ಪೂರ್ವಕವಾಗಿ ಶರೀರದ ತ್ಯಾಗ ಮಾಡುವಲ್ಲಿ ಶೋಕಾಕುಲರಾಗದೆ-ದುಃಖಿ ಯಾಗದೇ ಸಂಯಮಪೂರ್ವಕವಾಗಿ ಮನ-ವಚನ-ಕಾಯದ ಉಪಯೋಗವನ್ನು ಆತ್ಮನಲ್ಲಿ ಕೇಂದ್ರಿತ ಮಾಡಬೇಕಾಗುವುದು. ಮತ್ತು 'ಜನ್ಮ-ಜರಾ-ಮರಣಗಳು ಶರೀರಕ್ಕೆ ಸಂಬಂಧಿಸಿವೆ, ಆದರೆ ನನಗಿಲ್ಲ'ವೆಂದು ಚಿಂತನೆ ಮಾಡಿ ಮಮತೆಯಿಂದ ರಹಿತನಾಗಿ, ವಿಧಿಪೂರ್ವಕ ಆಹಾರ ಕಡಿಮೆ ಮಾಡಿ ತನ್ನ ತ್ರಿಕಾಲೀ ಅಕಷಾಯ ಜ್ಞಾಯಕ ಸ್ವರೂಪದ ಲಕ್ಷ್ಯದಿಂದ ಕಾಯಕೃಶ ಮಾಡಬೇಕಾಗುವುದು. ಮತ್ತು ಶಾಸ್ತ್ರಾಮೃತದ ಪಾನದಿಂದ ಹಾಗೂ ಸ್ವಸನ್ಮುಖತೆಯ ಮೂಲಕ ಕಷಾಯಗಳನ್ನು ಕೃಶ ಮಾಡಬೇಕಾಗುವುದು, ಅನಂತರ ನಾಲ್ಕು ಪ್ರಕಾರದ ಸಂಘದ★ ಸಾಕ್ಷ್ಯದಿಂದ ಸಮಾಧಿ ಮರಣದಲ್ಲಿ ಸಾವಧಾನವಾಗಿ ಉದ್ಯಮ ಮಾಡಬೇಕಾಗುವುದು.

ಕೊನೆಯ ಆರಾಧನೆಯಿಂದ ಚಿರಕಾಲದಿಂದ ಮಾಡಿರುವ ಸಮ್ಯಕ್‌ವ್ರತ-ನಿಯಮರೂಪದ ಧರ್ಮಾರಾಧನೆಯು ಸಫಲವಾಗಿ ಹೋಗುತ್ತದೆ. ಏಕೆಂದರೆ ಅದರಿಂದ ಕ್ಷಣ ಮಾತ್ರದಲ್ಲಿದೀರ್ಘಕಾಲದಿಂದ ಸಂಚಿತ ಪಾಪದ ನಾಶವಾಗಿ ಹೋಗುತ್ತದೆ. ಮತ್ತು ಒಂದು ವೇಳೆ ಕೊನೆಯ ಮರಣವು ಕೆಟ್ಟು ಹೋದರೆ ಎಂದರೆ ಅಸಂಯಮದೊಡನೆ ಅಥವಾ ಶರೀರದಲ್ಲಿ ಏಕತೆಯ ಬುದ್ಧಿಪೂರ್ವಕವಾಗಿ ಮರಣವಾಗಿ ಹೋದರೆ ಇಡೀ ಜೀವನದ ತುಂಬೆಲ್ಲ ಮಾಡಿರುವ ಧರ್ಮಾರಾಧನೆಯು ನಿಷ್ಫಲವಾಗಿ ಹೋಗುತ್ತದೆ.

**ಪ್ರಶ್ನೆ :-** ಒಂದು ವೇಳೆ ಕೊನೆಯ ಸಮಯದಲ್ಲಿ ಸಮಾಧಿ ಮರಣ ಮಾಡಿಕೊಳ್ಳುವುದರಿಂದಲೇ ಕ್ಷಣ ಮಾತ್ರದಲ್ಲಿ ಪೂರ್ವ ಸಂಚಿತ ಪಾಪಗಳ ನಾಶವಾಗಿ ಹೋಗುತ್ತಿದ್ದರೆ ಯುವಾವಸ್ಥೆಯಲ್ಲಿ ಧರ್ಮ ಮಾಡುವುದರ ಅವಶ್ಯಕತೆಯಾದರೂ ಏನಿದೆ ? ಕೊನೆಯ ಸಮಯದಲ್ಲಿ ಸನ್ಯಾಸ ಧಾರಣ ಮಾಡುವುದರಿಂದಲೇ ಎಲ್ಲ ಮನೋರಥಗಳು ತಾನಾಗಿಯೇ ಸಿದ್ಧವಾಗಿ ಬಿಡಬಹುದಲ್ಲವೇನು ?

**ಉತ್ತರ :-** ಯಾವ ಜೀವರುಗಳು ತಮ್ಮ ಪೂರ್ವಾವಸ್ಥೆಯಲ್ಲಿ ಧರ್ಮದಿಂದ ವಿಮುಖರಾಗಿದ್ದಾರೆ ಎಂದರೆ ಯಾರು ತತ್ತ್ವಜ್ಞಾನಪೂರ್ವಕವಾಗಿ ವ್ರತ-ನಿಯಮ ಮೊದಲಾದ ಧರ್ಮಾರಾಧನೆಯನ್ನು ಮಾಡಿಲ್ಲ, ಆ ಜೀವರುಗಳು ಕೊನೆಯ ಕಾಲದಲ್ಲಿ ಧರ್ಮಸನ್ಮುಖ ಎಂದರೆ ಸನ್ಯಾಸಸಂಯುಕ್ತರು ಎಂದೂ ಆಗುವ ಸಾಧ್ಯತೆಯಿಲ್ಲ. ಏಕೆಂದರೆ

ಚಂದ್ರಪ್ರಭಚರಿತ್ರದ ಪ್ರಥಮ ಸ್ವರ್ಗದಲ್ಲಿ ಹೇಳಿರುವುದೇನೆಂದರೆ **'ಚಿರಂತನಾಭ್ಯಾಸನಿಬಂಧನೇ ರಿತಾಗುಣೇಷು ದೋಷೇಷು ಚ ಜಾಯತೇ ಮತಿಃ'-** ಎಂದರೆ ಚಿರಕಾಲದ ಅಭ್ಯಾಸದಿಂದ ಪ್ರೇರಿತ ಮಾಡುವುದರಲ್ಲಿ ಬಂದಿರುವ ಬುದ್ಧಿಯು ಗುಣ ಅಥವಾ ದೋಷಗಳಲ್ಲಿ ಹೋಗುತ್ತದೆ. ಬಟ್ಟೆಯು ಮೊದಲಿನಿಂದಲೇ ಉಜ್ವಲವಾಗಿದ್ದರೆ ಅದರ ಮೇಲೆ ಮನಸ್ಪೋಪ್ಪುವ ಬಣ್ಣವನ್ನು ಹಾಕಬಹುದಾಗಿದೆ, ಆದರೆ ಒಂದು ವೇಳೆ ಬಟ್ಟೆಯು ಮೊದಲಿನಿಂದಲೇ ಮಲಿನವಾಗಿದ್ದರೆ ಅದರ ಮೇಲೆ ಎಂದೂ ಯಾವ ಬಣ್ಣವನ್ನೂ ಹಾಕುವ ಸಾಧ್ಯತೆಯಿಲ್ಲ. ಆದುದರಿಂದ ಯಾರು ಪ್ರಥಮಾವಸ್ಥೆಯಿಂದಲೇ ಧರ್ಮದ ಆರಾಧನೆಯಲ್ಲಿ ಸರಿಯಾಗಿ ಸಾವಧಾನರಾಗಿದ್ದಾರೆ ಅವರೇ ಸಮಾಧಿಮರಣ ಧಾರಣ ಮಾಡುವ ಸಾಧ್ಯತೆಯಿದೆ. ಇನ್ನು ಒಬ್ಬನು ಇಡೀ ಜೀವನದ ತುಂಬೆಲ್ಲ ಧರ್ಮಸೇವನೆಯಲ್ಲಿ ತನ್ನ ಚಿತ್ತವನ್ನೇ ತೊಡಗಿಸದವನು ಒಮ್ಮೆಲೆ ಅಪೂರ್ವ ವಿವೇಕದ ಬಲವನ್ನು ಪ್ರಾಪ್ತಮಾಡಿಕೊಂಡು ಸಮಾಧಿಮರಣ ಎಂದರೆ ಸನ್ಯಾಸಪೂರ್ವಕ ಮರಣ ಹೊಂದಿ ಸ್ವರ್ಗ ಮೊದಲಾದ ಸುಖಗಳಿಗೆ ಪ್ರಾಪ್ತವಾಗಿ ಹೋಗಿರುವುದು ಎಂದಾದರೊಮ್ಮೆ ಯಾವುದಾದರೊಂದು ಸ್ಥಾನದಲ್ಲಿಕಂಡು ಬರುತ್ತದೆ. ಆದರೆ ಅದಂತೂ ಕಾಕತಾಳೀಯ ನ್ಯಾಯದಂತೆ ಅತ್ಯಂತ ಕಠಿಣವಿದೆ. (ತಾಳೆಯ ಮರದಿಂದ ಕಳಚಿದ ಫಲವು ಹಾರಿ ಹೋಗುತ್ತಿರುವ ಕಾಗೆಯ ಬಾಯಲ್ಲಿ ಬೀಳುವುದು ಎಷ್ಟು ಕಠಿಣವಿದೆಯೋ ಅಷ್ಟೇ ಸಂಸ್ಕಾರಹೀನ ಜೀವನದಿಂದ ಸಮಾಧಿಮರಣ ಪಡೆಯುವುದು ಕಠಿಣವಿದೆ.) ಆದುದರಿಂದ ಸರ್ವಜ್ಞ ವೀತರಾಗರ ವಚನಗಳಲ್ಲಿ ಯಾರಿಗೆ ನಿಜವಾದ ಶ್ರದ್ಧೆಯಿದೆ ಅವರು ಉಪರೋಕ್ತ ಸಂದೇಹಕ್ಕೆ ತಮ್ಮ ಚಿತ್ತದಲ್ಲಿ ಎಂದೂ ಸ್ಥಾನ ಕೊಡಬಾರದು.

ಸಮಾಧಿಮರಣದ ಇಚ್ಛೆಯುಳ್ಳ ಪುರುಷರು ತಮಗೆ ಎಲ್ಲಿಯವರೆಗೆ ಸಾಧ್ಯವಿದೆಯೋ ಅಲ್ಲಿಯವರೆಗೆ ಜಿನೇಶ್ವರ ಭಗವಂತರ ಜನ್ಮ ಮೊದಲಾದ ತೀರ್ಥಭೂಮಿಗಳ ಆಶ್ರಯ ಗ್ರಹಣ ಮಾಡಬೇಕು. ಅದು ಸಂಭವಿಸದಿದ್ದರೆ ಜಿನಮಂದಿರ ಅಥವಾ ಸಂಯಮಧಾರಿಯಾದ ಜನರ ಆಶ್ರಯದಲ್ಲಿರಬೇಕು. ಸನ್ಯಾಸಾರ್ಥಿಯು ತೀರ್ಥಕ್ಷೇತ್ರಗಳಿಗೆ ಹೋಗುವ ಸಮಯದಲ್ಲಿ ಎಲ್ಲರಿಂದ ಕ್ಷಮೆಯ ಯಾಚನೆ ಮಾಡಬೇಕು ಮತ್ತು ತಾನು ಕೂಡ ಮನ-ವಚನ-ಕಾಯಗಳಿಂದ ಎಲ್ಲರನ್ನು ಕ್ಷಮಿಸಿ ಬಿಡಬೇಕು. ಅಸ್ತ ಸಮಯದಲ್ಲಿ ಕ್ಷಮೆ ಮಾಡುವಂಥವನು ಸಂಸಾರದಿಂದ ಪಾರಾಗಿ ಹೋಗುತ್ತಾನೆ ಮತ್ತು ವೈರ-ವಿರೋಧವನ್ನಿಟ್ಟುಕೊಳ್ಳುವವನು ಎಂದರೆ ಕ್ಷಮೆಯನ್ನಿಟ್ಟುಕೊಳ್ಳದವನು ಅನಂತ ಸಂಸಾರಿಯಾಗುತ್ತಾನೆ. ಸನ್ಯಾಸಾರ್ಥಿಯು ಸ್ತ್ರೀ-ಪುತ್ರ ಹಾಗೂ ಕುಟುಂಬ ಜನರಿಂದ ಮತ್ತು ಸಮಸ್ತ ಸಾಂಸಾರಿಕ ಸಂಪದಗಳಿಂದ ಸರ್ವಥಾ ಮೋಹ ಬಿಟ್ಟುಕೊಟ್ಟು (ನಿರ್ಮೋಹಿಯಾಗಿ ನಿಜ ಭಗವಾನಾತ್ಮನ ಭಜನೆ ಮಾಡಬೇಕಾಗುವುದು.) ಉತ್ತಮ ಸಾಧಕ ಧರ್ಮಾತ್ಮರುಗಳ ಸಹಾಯ ತೆಗೆದುಕೊಳ್ಳಬೇಕಾಗುವುದು. ಏಕೆಂದರೆ ಸಾಧರ್ಮಿ ಹಾಗೂ ಆಚಾರ್ಯರುಗಳ ಸಹಾಯದಿಂದ ಅಶುಭ ಕರ್ಮವು ಬೇಕಷ್ಟು ಬಾಧೆಯ ಕಾರಣ ಪಡೆಯುವುದಿಲ್ಲ. ವ್ರತದ ಅತಿಚಾರಗಳನ್ನು ಸಾಧರ್ಮಿಗಳ ಅಥವಾ ಆಚಾರ್ಯರುಗಳ ಸಮ್ಮುಖ ಪ್ರಕಟಪಡಿಸಿ ನಿಃಶಲ್ಯರಾಗಿ ಪ್ರತಿಕ್ರಮಣ-ಪ್ರಾಯಶ್ಚಿತ್ತ ಮೊದಲಾದುವನ್ನು ಶಾಸ್ತ್ರದಲ್ಲಿ ವರ್ಣಿಸಿದ ವಿಧಾನಗಳಿಂದ ಶೋಧನೆ ಮಾಡಬೇಕಾಗುವುದು.

ನಿರ್ಮಲಭಾವರೂಪದ ಅಮೃತದಿಂದ ಸೇಚನೆಗೊಂಡ ಸಮಾಧಿಮರಣದ ಸಲುವಾಗಿ ಪೂರ್ವ ಅಥವಾ ಉತ್ತರ ದಿಶೆಯಕಡೆಗೆ ಮಸ್ತಕವನ್ನಿಡಬೇಕು ಆ ಶ್ರಾವಕನು ಮಹಾವ್ರತದ ಯಾಚನೆ ಮಾಡಿದರೆ ಅವನಿಗೆ ಮಹಾವ್ರತ ಕೊಡುವುದು ನಿರ್ಣಾಯಕ ಆಚಾರ್ಯರಿಗೆ ಉಚಿತವಿದೆ, ಮಹಾವ್ರತದ ಗ್ರಹಣದಲ್ಲಿ ನಗ್ನವಾಗಬೇಕಾಗುವುದು. ಆರ್ಯಿಕೆಯರಿಗೆ ಕೂಡ ಕೊನೆಯ ಕಾಲವು ಉಪಸ್ಥಿತವಾದ ಮೇಲೆ ಏಕಾಂತ ಸ್ಥಾನದಲ್ಲಿ ವಸ್ತ್ರಗಳ ತ್ಯಾಗ ಮಾಡುವುದು ಉಚಿತವೆಂದು ಹೇಳಲಾಗಿದೆ. ಸನ್ಯಾಸ ತೆಗೆದುಕೊಳ್ಳುವ ಸಮಯದಲ್ಲಿ (ಸಮಾಧಿ ಮರಣದ ಮೊದಲಿನ ವಿಧಿಯ ಸಮಯದಲ್ಲಿ) ಅನೇಕ ಪ್ರಕಾರದ ಯೋಗ್ಯ ಆಹಾರ ತೋರಿಸಿ ಭೋಜನ ಮಾಡಿಸಬೇಕು. ಅಥವಾ ಒಂದು ವೇಳೆ

ಅವನಿಗೆ ಅಜ್ಞಾನತೆಯ ವಶದಿಂದ ಭೋಜನದಲ್ಲಿ ಆಸಕ್ತನೆಂದು ತಿಳಿದರೆ ಪರಮಾರ್ಥದ ಜ್ಞಾನಿಯಾದ ಆಚಾರ್ಯರು ಅವನಿಗೆ ಉತ್ತಮ ಪ್ರಭಾವಶಾಲಿಯಾದ ವ್ಯಾಖ್ಯಾನದಿಂದ ಹೀಗೆ ತಿಳಿಸಬೇಕು-

ಅಯ್ಯಾ ಜಿತೇಂದ್ರಿಯನೇ ! ನೀನು ಭೋಜನ-ಶಯನಾದಿರೂಪದ ಕಾಲ್ಪನಿಕ ಪುದ್ಗಲಗಳನ್ನು ಈಗ ಕೂಡ ಉಪಕಾರಿಯೆಂದು ತಿಳಿದುಕೊಳ್ಳುವೆ ! ಮತ್ತು ಇವುಗಳಲ್ಲಿ ಕೆಲವೊಂದು ಪುದ್ಗಲಗಳನ್ನು ನಾನು ಎಂದೂ ಭೋಗಿಸಿಯೇ ಇಲ್ಲವೆಂದು ಕೂಡ ಮನ್ನಿಸುತ್ತಿರುವೆ ! ಆದರೆ ಇದಂತೂ ಮಹಾನ ಆಶ್ಚರ್ಯದ ಮಾತಿದೆ ! ಅಯ್ಯಾ, ಈ ಮೂರ್ತಿಕ ಪುದ್ಗಲವು ನಿನ್ನ ಅರೂಪಿಯಲ್ಲಿ ಹೇಗೆ ಯಾವ ಪ್ರಕಾರದಿಂದ ಕೂಡುವ ಸಾಧ್ಯತೆಯಿದೆಯೆಂಬುದರ ವಿಚಾರವನ್ನಾದರೂ ಒಂದಿಷ್ಟು ಮಾಡು ! ಕೇವಲ ಇಂದ್ರಿಯಗಳ ಗ್ರಹಣಪೂರ್ವಕ ಅದರ ಅನುಭವ ಮಾಡಿ, ನಾನೇ ಅದರ ಭೋಗ ಮಾಡುತ್ತೇನೆಂದು ನೀನು ಮನ್ನಿಸಿಕೊಂಡಿರುವೆ. ಎಲೈ ದೂರದರ್ಶಿಯೇ ! ಈಗ ಇಂಥ ಭ್ರಾಂತ ಬುದ್ಧಿಯನ್ನು ಸರ್ವಥಾ ಬಿಟ್ಟುಕೊಡು ಮತ್ತು ನಿರ್ಮಲ ಜ್ಞಾನಾನಂದಮಯವಾದ ಆತ್ಮತತ್ತ್ವದಲ್ಲಿ ನಿಶ್ಚಲಲೀನನಾಗು. ಯಾವುದರಲ್ಲಿ ಜ್ಞಾನೀ ಜೀವರುಗಳು ಶುದ್ಧತೆಯಲ್ಲಿ ಸಾವಧಾನರಿರುತ್ತಾರೆ ಇದು ಅದೇ ಸಮಯವಿದೆ. ಮತ್ತು 'ನಾನು ಬೇರೆಯಿದ್ದೇನೆ ಹಾಗೂ ಈ ಪುದ್ಗಲ ದೇಹಾದಿಗಳು ನನ್ನಿಂದ ಸರ್ವಥಾ ಬೇರೆಯಿವೆ ಭಿನ್ನ ಪದಾರ್ಥಗಳೇ ಇವೆ'ಯೆಂದು ಭೇದಜ್ಞಾನದ ಬಲದಿಂದ ಚಿಂತನೆ ಮಾಡುತ್ತಾನೆ. ಆದುದರಿಂದ ಎಲೈ ಮಹಾಶಯನೇ ! ಪರದ್ರವ್ಯಗಳಲ್ಲಿನ ಮೋಹವನ್ನು ಕೂಡಲೆ ಬಿಟ್ಟುಕೊಡು ಮತ್ತು ನಿನ್ನ ಆತ್ಮನಲ್ಲಿ ನಿಶ್ಚಲ-ಸ್ಥಿರವಿರುವ ಪ್ರಯತ್ನ ಮಾಡು. ಒಂದು ವೇಳೆ ಯಾವುದಾದರೂ ಪುದ್ಗಲದಲ್ಲಿ ಆಸಕ್ತನಾಗಿದ್ದುಕೊಂಡು ಮರಣ ಹೊಂದಿದರೆ ನೀನು ತೀರ ತುಚ್ಛ-ಕೀಳುಕ್ರಿಮಿಯಾಗಿ ಪುದ್ಗಲಗಳ ಭಕ್ಷಣೆಯನ್ನು ಅನಂತಬಾರಿ ಮಾಡಬೇಕಾಗುವುದೆಂಬುದನ್ನು ಚನ್ನಾಗಿ ಲಕ್ಷ್ಯದಲ್ಲಿ ಇಟ್ಟುಕೋ ! ಈ ಭೋಜನದಿಂದ ನೀನು ಶರೀರದ ಮೇಲೆ ಉಪಕಾರ ಮಾಡಲು ಬಯಸುತ್ತಿರುವೆ, ಆದರೆ ಅದು ಯಾವ ಪ್ರಕಾರದಿಂದಲೂ ಒಂದಿಷ್ಟೂ ಉಚಿತವಿಲ್ಲ. ಏಕೆಂದರೆ ಶರೀರವು ಎಷ್ಟು ಕೃತಘ್ನವಿದೆಯೆಂದರೆ ಅದು ಯಾರೂ ಮಾಡಿರುವ ಉಪಕಾರವನ್ನು ಎಂದೂ ಮನ್ನಿಸುವುದಿಲ್ಲ. ಆದುದರಿಂದ ಭೋಜನದ ಇಚ್ಛೆಯನ್ನು ಬಿಟ್ಟುಕೊಟ್ಟು ಕೇವಲ ಆತ್ಮಹಿತದಲ್ಲಿಯೇ ಚಿತ್ತವನ್ನು ತೊಡಗಿಸುವುದು ಬುದ್ಧಿವಂತಿಕೆಯಿದೆ.

ಈ ಪ್ರಕಾರ ಹಿತೋಪದೇಶರೂಪದ ಅಮೃತಧಾರೆಯನ್ನೇ ಅಭಿವರ್ಷಿಸಿ ಅನ್ನದ ತೃಷ್ಣೆಯನ್ನು ದೂರ ಮಾಡಿಸಿ ಕವಲಾಹಾರವನ್ನು ಬಿಡಿಸಬೇಕು ಮತ್ತು ಹಾಲು ಮೊದಲಾದ ಪೇಯ ಪದಾರ್ಥಗಳ ಮೇಲೆ ಇಡುವುದು, ಅನಂತರ ಕ್ರಮದಿಂದ ಅದರದೂ ತ್ಯಾಗ ಮಾಡಿಸಿ ಬಿಸಿ ನೀರನ್ನು ಮಾತ್ರ ತೆಗೆದುಕೊಳ್ಳುವ ನಿಯಮ ಮಾಡಿಸಬೇಕು. ಒಂದು ವೇಳೆ ಗ್ರೀಷ್ಮಕಾಲ, ಮಾರವಾಡದಂಥ ಉಷ್ಣಪ್ರದೇಶ ಮತ್ತು ಪಿತ್ತ ಪ್ರಕೃತಿಯ ಕಾರಣ ತೃಷೆಯ ಬಾಧೆಯನ್ನು ಸಹನೆ ಮಾಡುವಲ್ಲಿ ಅಸಮರ್ಥನಿದ್ದರೆ ಕೇವಲ ಶೀತಲ ನೀರು ತೆಗೆದುಕೊಳ್ಳುವ ನಿಯಮವಿಡಬೇಕು ಮತ್ತು ಎಲೈ ಆರಾಧಕನೇ ! ಎಲೈ ಆರ್ಯನೇ ! ಪರಮಾಗಮದಲ್ಲಿ ಪ್ರಶಂಸನೀಯವಾದ ಮಾರಣಾಂತಿಕ ಸಲ್ಲೇಖನವು ಅತ್ಯಂತ ದುರ್ಲಭವೆಂದು ತಿಳಿಸಲಾಗಿದೆ, ಆದುದರಿಂದ ನೀನು ವಿಚಾರಪೂರ್ವಕವಾಗಿ ಅತಿಚಾರ ಮೊದಲಾದ ದೋಷಗಳಿಂದ ಅದರ ರಕ್ಷಣೆ ಮಾಡಬೇಕಾಗುವುದೆಂಬ ಶಿಕ್ಷೆ ಕೊಡಬೇಕು.

ಅನಂತರ ಅಶಕ್ತಿಯ ವೃದ್ಧಿಯನ್ನು ನೋಡಿ, ಮರಣಕಾಲವು ಸನ್ನಿಹಿತವಾಗಿದೆಯೆಂಬ ನಿರ್ಣಯವಾದ ಮೇಲೆ ಆಚಾರ್ಯರು ಸಮಸ್ತ ಸಂಘದ ಅನುಮತಿಯಿಂದ ಸನ್ಯಾಸದಲ್ಲಿ ನಿಶ್ಚಲತೆಯಾಗುವ ಸಲುವಾಗಿ ನೀರಿನದೂ ತ್ಯಾಗ ಮಾಡಿಸಬೇಕು. ಈ ಪ್ರಕಾರ ಅನುಕ್ರಮದಿಂದ ನಾಲ್ಕೂ ಪ್ರಕಾರದ ಆಹಾರದ ತ್ಯಾಗವಾದ ಮೇಲೆ ಸಮಸ್ತ ಸಂಘದ ಕ್ಷಮೆ ಮಾಡಿಸಬೇಕು ಮತ್ತು ನಿರ್ವಿಘ್ನ ಸಮಾಧಿಯ ಸಿದ್ಧಿಯ ಸಲುವಾಗಿ ಕಾಯೋತ್ಸರ್ಗ ಮಾಡಬೇಕು. ಅದರ ನಂತರ

ವಚನಾಮೃತದ ಸೇಚನೆ ಮಾಡಬೇಕು ಎಂದರೆ ಸಂಸಾರದಿಂದ ವೈರಾಗ್ಯ ಉತ್ಪನ್ನ ಮಾಡುವಂಥ ಕಾರಣಗಳನ್ನು ಉಕ್ತ ಆರಾಧಕನ ಕಿವಿಯಲ್ಲಿ ಮಂದ ಮಂದವಾದ ವಾಣಿಯಿಂದ ಜಪ ಮಾಡಬೇಕು. ಶ್ರೇಣಿಕ, ವಾರಿಷೇಣ, ಸುಭಗ ಮೊದಲಾದವರ ದೃಷ್ಟಾಂತಗಳನ್ನು ಕೇಳಿಸಬೇಕು ಮತ್ತು ವ್ಯವಹಾರ- ಆರಾಧನೆಯಲ್ಲಿ ಸ್ಥಿರವಾಗಿ, ನಿಶ್ಚಯ ಆರಾಧನೆಯ ತತ್ಪರತೆಯ ಸಲುವಾಗಿ ಈ ಪ್ರಕಾರ ಉಪದೇಶ ಮಾಡಬೇಕು-

ಎಲೈ ಆರಾಧಕನೇ ! ಶ್ರುತ ಸ್ಕಂಧದ **'ಏಗೋ ಮೇ ಸಾಸದಾ ಆದಾ'** - ಇತ್ಯಾದಿ ವಾಕ್ಯ **'ಣಮೋ ಅರಹಂತಾಣಂ'** ಇತ್ಯಾದಿ ಪದ ಮತ್ತು **'ಅಹಂ'** ಇತ್ಯಾದಿ ಅಕ್ಷರ ಇವುಗಳೊಳಗಿಂದ ಯಾವುದು ನಿನಗೆ ರುಚಿಕರವೆನಿಸುತ್ತದೆ ಅದರ ಆಶ್ರಯ ಮಾಡಿ ನಿನ್ನ ಚಿತ್ತವನ್ನು ಅದರಲ್ಲಿ ತನ್ಮಯ ಮಾಡು ! ಎಲೈ ಆರ್ಯನೇ ! 'ನಾನೊಬ್ಬ ಶಾಶ್ವತ ಆತ್ಮನಿದ್ದೇನೆ'ಂದು ಶ್ರುತ ಜ್ಞಾನದಿಂದ ನಿನ್ನ ಆತ್ಮನ ನಿರ್ಣಯ ಮಾಡು ! ಸ್ವಸಂವೇದನದಿಂದ ಆತ್ಮನ ಭಾವನೆ ಮಾಡು ! ಸಮಸ್ತ ಚಿಂತೆಗಳಿಂದ ಪೃಥಕ್ ಆಗಿ ಪ್ರಾಣ ವಿಸರ್ಜನೆ ಮಾಡು ! ಮತ್ತು ಒಂದು ವೇಳೆ ನಿನ್ನ ಚಿತ್ತವು ಯಾವುದಾದರೂ ಕ್ಷುಧೆಯ ಪರೀಷಹದಿಂದ ಅಥವಾ ಯಾವುದಾದರೂ ಉಪಸರ್ಗದಿಂದ ವಿಕ್ಷಿಪ್ತ (ವ್ಯಗ್ರ)ವಾಗಿ ಹೋಗಿದ್ದರೆ ನರಕ ಮೊದಲಾದ ವೇದನೆಗಳ ಸ್ಮರಣೆ ಮಾಡಿ ಜ್ಞಾನಾಮೃತರೂಪದ ಸರೋವರದಲ್ಲಿ ಪ್ರವೇಶ ಮಾಡು! ಏಕೆಂದರೆ ಅಜ್ಞಾನೀ ಜೀವನು ಶರೀರದಲ್ಲಿ ಆತ್ಮಬುದ್ಧಿ ಎಂದರೆ 'ನಾನು ದುಃಖಿಯಿದ್ದೇನೆ, ನಾನು ಸುಖಿಯಿದ್ದೇನೆಂ'ದು ಸಂಕಲ್ಪ ಮಾಡಿ ದುಃಖಿಯಾಗುತ್ತಲಿದ್ದಾನೆ. ಆದರೆ ಭೇದ ವಿಜ್ಞಾನೀ ಜೀವನು ಆತ್ಮ ಮತ್ತು ದೇಹವನ್ನು ಭಿನ್ನ ಭಿನ್ನವಾಗಿ ಮನ್ನಿಸಿ ದೇಹದ ಕಾರಣದಿಂದ ಸುಖೀ-ದುಃಖಿಯಾಗುವುದಿಲ್ಲ; ಆದರೆ ನನಗೆ ಮರಣವೇ ಇಲ್ಲವೆಂದ ಮೇಲೆ ಭಯವೇತರದು ? ನನಗೆ ರೋಗವೇ ಇಲ್ಲವೆಂದ ಮೇಲೆ ವೇದನೆ ಯಾವುದರದು ? ನಾನು ಬಾಲಕ, ಯುವಕ ಅಥವಾ ವೃದ್ಧನಿಲ್ಲವೆಂದ ಮೇಲೆ ನನಗೆ ಮನೋವೇದನೆಯೆಲ್ಲಿಯದು ? - ಎಂದು ವಿಚಾರ ಮಾಡುತ್ತಾನೆ. ಎಲೈ ಮಹಾಭಾಗ್ಯನೇ ! ಈ ಅತ್ಯಂತ ತುಚ್ಛವಾದ ಶಾರೀರಿಕ ದುಃಖದಿಂದ ಹೇಡಿಯಾಗಿ ಪ್ರತಿಜ್ಞೆಯಿಂದ ಕಿಂಚಿತ್ ಕೂಡ ಚ್ಯುತನಾಗಬೇಡ. ದೃಢಚಿತ್ತವುಳ್ಳವನಾಗಿ ಪರಮನಿರ್ಜರೆಯ ಅಭಿಲಾಷೆ ಮಾಡುವುದು. ಎಲ್ಲಿಯವರೆಗೆ ನೀನು ಆತ್ಮ ಚಿಂತನೆ ಮಾಡುತ್ತ ಸನ್ಯಾಸ ಗ್ರಹಣ ಮಾಡಿ ಸಮಾಧಿ ಮರಣದ ಆರಾಧನೆಯಲ್ಲಿ ಕುಳಿತುಕೊಂಡಿರುವೆ, ಅಲ್ಲಿಯವರೆಗೆ ಪ್ರತಿಕ್ಷಣದಲ್ಲೂ ನಿನ್ನ ಪ್ರಚುರಕರ್ಮಗಳ ವಿನಾಶವಾಗುತ್ತಲಿದೆ ! ನೀನು ಧೀರ ವೀರರಾದ ಪಾಂಡವರ ಚರಿತ್ರೆಯನ್ನು ಮರೆತು ಬಿಟ್ಟಿರುವೆಯೇನು ! ಅವರಿಗೆ ಶತ್ರುಗಳು ಲೋಹದ ಆಭರಣಗಳನ್ನು ಅಗ್ನಿಯಿಂದ ಕೆಂಪಾಗಿ ಕಾಯಿಸಿ ಮೈಮೇಲೆ ತೊಡಿಸಿದ್ದರೂ ಕೂಡ ಅವರು ತಪಶ್ಚರ್ಯದಿಂದ ಸ್ವಲ್ಪ ಮಾತ್ರವೂ-ಚ್ಯುತರಾಗದೆ ಆತ್ಮಧ್ಯಾನದಿಂದ ಮೋಕ್ಷ ಪ್ರಾಪ್ತ ಮಾಡಿಕೊಂಡರು ! ನೀನು ಮಹಾಸುಕುಮಾರನಾದ ಸುಕುಮಾರ ಕುಮಾರನ ಚರಿತ್ರವನ್ನು ಕೇಳಿಲ್ಲವೇನು ? ಅವರ ಶರೀರವನ್ನು ನರಿಯು ಸ್ವಲ್ಪ ಸ್ವಲ್ಪ ತಿಂದು ಅತಿಶಯ ದುಃಖ ಕೊಡುವ ಸಲುವಾಗಿ ಹೀಗೆ ಮೂರು ದಿವಸಗಳವರೆಗೆ ತಿನುತ್ತಲಿತ್ತು, ಆದರೆ ಅವರು ಕಿಂಚಿತ್ ಕೂಡ ಮಾರ್ಗದಿಂದ ಚ್ಯುತವಾಗದೆ ಸರ್ವಾರ್ಥಸಿದ್ಧಿ ಸ್ವರ್ಗವನ್ನು ಪ್ರಾಪ್ತ ಮಾಡಿಕೊಂಡಿದ್ದಾರೆ. ಇಂಥ ಅಸಂಖ್ಯ ಉದಾಹರಣೆಗಳು ಶಾಸ್ತ್ರಗಳಲ್ಲಿ ಇವೆ, ಅನೇಕ ಸಾಧುಗಳು ದುಸ್ಸಹವಾದ ಉಪಸರ್ಗವನ್ನು ಸಹನೆ ಮಾಡಿ ಸರ್ವಾರ್ಥಸಿದ್ಧಿಗೆ ಹೋಗಿದ್ದಾರೆ. ಅವರುಗಳ ಅನುಕರಣೆ ಮಾಡುವುದು ಇದು ನಿನ್ನ ಕರ್ತವ್ಯವಿಲ್ಲವೇನು ? ಅಯ್ಯೊ, ನೀನು ಜೀವನ-ಧನ ಮೊದಲಾದವುಗಳಲ್ಲಿ ನಿರ್ವಾಂಛಕನಾಗಿ, ಅಂತರಂಗ-ಬಹಿರಂಗ ಪರಿಗ್ರಹದ ತ್ಯಾಗಪೂರ್ವಕ ಸಾಮ್ಯಭಾವದಿಂದ ನಿರುಪಾಧಿಯಲ್ಲಿ ಸ್ಥಿರವಾಗಿ ಆನಂದಾಮೃತದ ಪಾನ ಮಾಡು ! ಈ ಪ್ರಕಾರ ಉಪರೋಕ್ತ ಉಪದೇಶದಿಂದ ಸಮ್ಯಕ್ ಪ್ರಕಾರ ಕಷಾಯಗಳನ್ನು ಕೃಶಗೊಳಿಸಿ-ಕಡಿಮೆ ಮಾಡಿ ರತ್ನತ್ರಯದ ಭಾವನೆಯ ರೂಪವಾದ ಪರಿಣಮನದಿಂದ ಪಂಚ ಣಮೋಕಾರ ಮಂತ್ರದ ಸ್ಮರಣೆಯೊಡನೆ ಸಮಾಧಿ ಮರಣ ಮಾಡಬೇಕಾಗುವುದು. ಇದು ಸಮಾಧಿ ಮರಣದ ಸಂಕ್ಷಿಪ್ತ ವಿಧಿಯಿದೆ.

ಸಲ್ಲೇಖನವು ಕೂಡ ಅಹಿಂಸೆಯಿದೆಯೆಂದು ಈಗ ಹೇಳುತ್ತಾರೆ, -

**ನೀಯಂತೇऽತ್ರ ಕಷಾಯಾ ಹಿಂಸಾಯಾ ಹೇತವೋ ಯತಸ್ತನುತಾಮ್ ।**
**ಸಲ್ಲೇಖನಾಮಪಿ ತತಃ ಪ್ರಾಹುರಹಿಂಸಾಪ್ರಸಿದ್ಧ್ಯರ್ಥಮ್ ॥೧೭೯॥**

**ಅನ್ವಯಾರ್ಥ :-** **[ಯತಃ]** ಕಾರಣವೇನೆಂದರೆ **[ಅತ್ರ]** ಈ ಸನ್ಯಾಸ ಮರಣದಲ್ಲಿ **[ಹಿಂಸಾಯಾಃ]** ಹಿಂಸೆಯ **[ಹೇತವಃ)** ಹೇತುಭೂತವಾದ **[ಕಷಾಯಾಃ]** ಕಷಾಯವು **[ತನುತಾಮ್]** ಕ್ಷೀಣತೆಗೆ **[ನೀಯಂತೇ]** ಪ್ರಾಪ್ತವಾಗುತ್ತದೆ **[ತತಃ]** ಈ ಕಾರಣದಿಂದ **[ಸಲ್ಲೇಖನಾಮಪಿ]** ಸನ್ಯಾಸವನ್ನು ಕೂಡ ಆಚಾರ್ಯರು **[ಅಹಿಂಸಾ ಪ್ರಸಿದ್ಧ್ಯರ್ಥಂ]** ಅಹಿಂಸೆಯ ಸಿದ್ಧಿಯ ಸಲುವಾಗಿ **[ಪ್ರಾಹುಃ]** ಹೇಳುತ್ತಾರೆ.

**ಟೀಕೆ :-** **'ಯತಃ ಹಿಂಸಾಯಾಃ ಹೇತವಃ ಕಷಾಯಾಃ ಅತ್ರ (ಸಲ್ಲೇಖನಾಯಾಂ) ತನುತಾಮ್ ನೀಯಂತೇ ತತಃ ಸಲ್ಲೇಖನಾಮ್ ಅಹಿಂಸಾ ಪ್ರಸಿದ್ಧ್ಯರ್ಥಮ್ ಪ್ರಾಹುಃ ।'** - ಹಿಂಸೆಯ ಮೂಲ ಕಾರಣವು ಕಷಾಯಗಳಿವೆ, ಅವು ಈ ಸಲ್ಲೇಖನಾದಲ್ಲಿ ಕ್ಷೀಣವಾಗಿ ಹೋಗುತ್ತವೆ - ಕರಗಿ ಹೋಗುತ್ತವೆ, ಆದುದರಿಂದ ಆಚಾರ್ಯರು ಸನ್ಯಾಸವನ್ನು ಕೂಡ ಅಹಿಂಸೆಯ ಪುಷ್ಟಿಯ ಸಲುವಾಗಿ ಹೇಳುತ್ತಾರೆ.

**ಭಾವಾರ್ಥ :-** ಈ ಸನ್ಯಾಸದಲ್ಲಿ ಕಷಾಯಗಳು ಕ್ಷೀಣವಾಗುತ್ತವೆ ಮತ್ತು ಕಷಾಯವೇ ಹಿಂಸೆಯ ಮೂಲ ಕಾರಣವಿರುವುದರಿಂದ ಸನ್ಯಾಸದ ಅಂಗೀಕಾರ ಮಾಡುವುದರಿಂದ ಕೂಡ ಅಹಿಂಸಾವ್ರತದ ಸಿದ್ಧಿಯೇ ಆಗುತ್ತದೆ. ಈ ಪ್ರಕಾರ ಕೊನೆಯ ಸಲ್ಲೇಖನದ ಕಥನ ಮಾಡಲಾಯಿತು.

ಈಗ ಈ ಶೀಲಗಳ ಕಥನವನ್ನು ಸಂಕೋಚಗೊಳಿಸುತ್ತಾರೆ, -

**ಇತಿ ಯೋ ವ್ರತರಕ್ಷಾರ್ಥಂ ಸತತಂ ಪಾಲಯತಿ ಸಕಲಶೀಲಾನಿ ।**
**ವರಯತಿ ಪತಿಂವರೇವ ಸ್ವಯಮೇವ ತಮುತ್ಸುಕಾ ಶಿವಪದಶ್ರೀಃ ॥೧೮೦॥**

**ಅನ್ವಯಾರ್ಥ :-** **[ಯಃ]** ಯಾವನು **[ಇತಿ]** ಈ ಪ್ರಕಾರ **[ವ್ರತರಕ್ಷಾರ್ಥಂ]** ಐದು ಅಣುವ್ರತಗಳ ರಕ್ಷಣೆಯ ಸಲುವಾಗಿ **[ಸಕಲಶೀಲಾನಿ]** ಸಮಸ್ತ ಶೀಲಗಳನ್ನು **[ಸತತಂ]** ನಿರಂತರವಾಗಿ **[ಪಾಲಯತಿ]** ಪಾಲನೆ ಮಾಡುತ್ತಾನೆ. **[ತಮ್]** ಆ ಪುರುಷನಿಗೆ **[ಶಿವಪದಶ್ರೀಃ]** ಮೋಕ್ಷರೂಪದ ಲಕ್ಷ್ಮಿಯು **[ಉತ್ಸುಕಾ]** ಅತಿಶಯ ಉತ್ಕಂಠಿತಳಾಗಿ **[ಪತಿಂವರಾ ಇವ]** ಸ್ವಯಂವರದ ಕನ್ಯೆಯ ಹಾಗೆ **[ಸ್ವಯಮೇವ]** ತಾನಾಗಿಯೇ **[ವರಯತಿ]** ಸ್ವೀಕಾರ ಮಾಡುತ್ತಾಳೆ ಎಂದರೆ ಪ್ರಾಪ್ತಳಾಗುತ್ತಾಳೆ.

**ಟೀಕೆ :-** **'ಇತಿ ಯಃ ವ್ರತರಕ್ಷಾರ್ಥಂ ಸಕಲಶೀಲಾನಿ ಸತತಂ ಪಾಲಯತಿ ತವ್ ಉತ್ಸುಕಾ ಶಿವಪದಶ್ರೀಃ ಪತಿಂವರಾ ಇವ ಸ್ವಯಮೇವ ವರಯತಿ!'**- ಯಾವ ಧರ್ಮಾತ್ಮ ಶ್ರಾವಕನು ಈ ಪ್ರಕಾರ ಐದು ಅಣುವ್ರತಗಳ ರಕ್ಷಣೆಯ ನಿಮಿತ್ತವಾಗಿ ಸಪ್ತ ಶೀಲವ್ರತಗಳ ಪಾಲನೆ ಮಾಡುತ್ತಾನೆ ಅವನಿಗೆ ಮೋಕ್ಷರೂಪದ ಲಕ್ಷ್ಮಿಯು ಉತ್ಸುಕಳಾಗಿ ಸ್ವಯಂವರದಲ್ಲಿನ ಕನ್ಯೆಯ ಹಾಗೆ ತಾನಾಗಿಯೇ ವರಿಸುತ್ತಾಳೆ.

**ಭಾವಾರ್ಥ :-** ಯಾವ ಪ್ರಕಾರ ಸ್ವಯಂವರದಲ್ಲಿ ಕನ್ಯೆಯು ತಾನಾಗಿಯೇ ತನಗೆ ಯೋಗ್ಯನಿರುವ ಪುರುಷನನ್ನು ಗುರುತಿಸಿ ಅವನಿಗೆ ವರಮಾಲೆಯನ್ನು ಹಾಕಿ ಬಿಡುತ್ತಾಳೆ. ಅದೇ ಪ್ರಕಾರ ಮೋಕ್ಷ ಲಕ್ಷ್ಮಿಯು ವ್ರತಧಾರಿ ಹಾಗೂ ಸಮಾಧಿಮರಣ ಮಾಡುವಂಥ ಶ್ರಾವಕನಿಗೆ ತಾನಾಗಿಯೇ ಪ್ರಾಪ್ತಳಾಗುತ್ತಾಳೆ. ಇಂಥ ವ್ರತೀಶ್ರಾವಕನು ಅವಶ್ಯವಾಗಿ ಮೋಕ್ಷಲಕ್ಷ್ಮಿಯನ್ನು ಪ್ರಾಪ್ತ ಮಾಡಿಕೊಳ್ಳುತ್ತಾನೆ.

ಈ ಪ್ರಕಾರ ಐದು ಅಣುವ್ರತ, ಮೂರು ಗುಣವ್ರತ, ನಾಲ್ಕು ಶಿಕ್ಷಾವ್ರತ, ಒಂದು ಸಲ್ಲೇಖನ ಮತ್ತು ಒಂದು ಸಮ್ಯಕ್ತ್ವ ಹೀಗೆ ಶ್ರಾವಕನ ಹದಿನಾಲ್ಕು ವ್ರತಗಳ ವರ್ಣನೆ ಮಾಡಲಾಯಿತು. -

ಈಗ ಇವುಗಳ ಐದು ಐದು ಅತಿಚಾರಗಳ ವರ್ಣನೆ ಮಾಡುತ್ತಾರೆ, -

**ಅತಿಚಾರಾಃ ಸಮ್ಯಕ್ತ್ವೇ ವ್ರತೇಷು ಶೀಲೇಷು ಪಂಚ ಪಂಚೇತಿ ।**
**ಸಪ್ತತಿರಮೀ ಯಥೋದಿತಶುದ್ಧಿಪ್ರತಿಬಂಧಿನೋ ಹೇಯಾಃ ॥೧೮೧॥**

**ಅನ್ವಯಾರ್ಥ ಃ- [ಸಮ್ಯಕ್ತ್ವೇ]** ಸಮ್ಯಕ್ತ್ವದಲ್ಲಿ **[ವ್ರತೇಷು]** ವ್ರತಗಳಲ್ಲಿ ಮತ್ತು **[ಶೀಲೇಷು]** ಶೀಲಗಳಲ್ಲಿ **[ಪಂಚಪಂಚೇ]** ಐದು ಐದರ ಕ್ರಮದಿಂದ **[ಅಮೀ]** ಇವು **[ಸಪ್ತತಿಃ]** ಎಪ್ಪತ್ತು **[ಯಥೋದಿತಶುದ್ಧಿಪ್ರತಿಬಂಧಿನಃ]** ಯಥಾರ್ಥವಾದ ಶುದ್ಧಿಯನ್ನು ತಡೆಯುವಂಥ **[ಅತಿಚಾರಾಃ]** ಅತಿಚಾರಗಳು **[ಹೇಯಾಃ]** ಬಿಡಲು ಯೋಗ್ಯವಿವೆ.

**ಟೀಕೆ ಃ- 'ಸಮ್ಯಕ್ತ್ವೇ ವ್ರತೇಷು (ಸಲ್ಲೇಖನಾ ಪಂಚ) ಪಂಚ ಪಂಚ ಅತಿಚಾರಾಃ ಇತಿ ಅಮೀ ಸಪ್ತತಿಃ ಯಥೋದಿತಶುದ್ಧಿಪ್ರತಿಬಂಧಿನಃಹೇಯಾಃ ।'** - ಸಮ್ಯಗ್ದರ್ಶನದಲ್ಲಿ ಐದು ಅಣುವ್ರತಗಳಲ್ಲಿ, ಮೂರು ಗುಣವ್ರತಗಳಲ್ಲಿ ನಾಲ್ಕು ಶಿಕ್ಷಾವ್ರತಗಳಲ್ಲಿ ಮತ್ತು ಸಲ್ಲೇಖನದಲ್ಲಿ ಈ ಪ್ರತಿಯೊಂದರಲ್ಲಿ ಐದು ಐದು ಅತಿಚಾರಗಳಿವೆ. ಈ ಪ್ರಕಾರ ಇವು ಎಪ್ಪತ್ತು ಅತಿಚಾರಗಳಿವೆ. ಅವೆಲ್ಲವೂ ವ್ರತಗಳ ಶುದ್ಧಿಯಲ್ಲಿ ದೋಷ ತಗಲಿಸುವಂಥವುಗಳಿವೆ.

**ಭಾವಾರ್ಥ ಃ-** ವ್ರತದ ಸರ್ವದೇಶ ಭಂಗವಾಗುವುದನ್ನಂತೂ ಅನಾಚಾರವೆಂದು ಹೇಳಲಾಗುತ್ತದೆ ಮತ್ತು ಏಕದೇಶ ಭಂಗವಾಗುವುದು ಅಥವಾ ದೋಷ ತಗಲುವುದನ್ನು ಅತಿಚಾರವೆಂದು ಹೇಳಲಾಗುತ್ತದೆ. (ಈ ಅತಿಚಾರವು ವ್ರತಗಳ ಶುದ್ಧತೆಯನ್ನು ದೂರ ಮಾಡುವಂಥದ್ದಿದೆ, ಏಕೆಂದರೆ ವ್ರತಗಳಲ್ಲಿ ದೋಷ ತಗಲಿದ ಮೇಲೆ ಅವುಗಳ ಶುದ್ಧತೆಯು ಅಕ್ಷುಣ್ಣವಾಗಿ ಹೇಗೆ ಉಳಿಯುವ ಸಾಧ್ಯತೆಯಿದೆ ?) ಈ ಪ್ರಕಾರ ಮೇಲೆ ಹೇಳಿದ ಶ್ರಾವಕನ ಹದಿನಾಲ್ಕು ವ್ರತಗಳ ಅತಿಚಾರಗಳು ಎಪ್ಪತ್ತು ಆಗುತ್ತವೆ.

ಈಗ ಸಮ್ಯಗ್ದರ್ಶನದ ಐದು ಅತಿಚಾರಗಳನ್ನು ಹೇಳುತ್ತಾರೆ, -

**ಶಂಕಾ ತಥೈವ ಕಾಂಕ್ಷಾ ವಿಚಿಕಿತ್ಸಾ ಸಂಸ್ತವೋಽನ್ಯದೃಷ್ಟೀನಾಮ್ ।**
**ಮನಸಾ ಚ ತತ್ಪ್ರಶಂಸಾ ಸಮ್ಯಕ್‌ದೃಷ್ಟೇರತೀಚಾರಾಃ ॥೧೮೨॥**

**ಅನ್ವಯಾರ್ಥ ಃ- [ಶಂಕಾ]** ಸಂದೇಹ **[ಕಾಂಕ್ಷಾ]** ಅಭಿಲಾಷೆ **[ವಿಚಿಕಿತ್ಸಾ]** ಗ್ಲಾನಿ **[ತಥೈವ]** ಅದೇ ಪ್ರಕಾರ **[ಅನ್ಯದೃಷ್ಟೀನಾಮ್]** ಮಿಥ್ಯಾದೃಷ್ಟಿಗಳ **[ಸಂಸ್ತವಃ]** ಸ್ತುತಿ **[ಚ]** ಮತ್ತು **[ಮನಸಾ]** ಮನಸ್ಸಿನಿಂದ **[ತತ್ಪ್ರಶಂಸಾ]** ಅನ್ಯಮತಾವಲಂಬಿಗಳ ಪ್ರಶಂಸೆ ಮಾಡುವುದು ಇವು **(ಸಮ್ಯಕ್‌ದೃಷ್ಟೇಃ)** ಸಮ್ಯಕ್‌ದೃಷ್ಟಿಯ **(ಅತಿಚಾರಾಃ)** ಅತಿಚಾರಗಳಿವೆ.

**ಟೀಕೆ ಃ- 'ಶಂಕಾ ತಥೈವ ಕಾಂಕ್ಷಾ ವಿಚಿಕಿತ್ಸಾ ಅನ್ಯದೃಷ್ಟೀನಾಮ್ ಸಂಸ್ತವಃ ಚ ಮನಸಾ ಪ್ರಶಂಸಾ ಸಮ್ಯಕ್‌ದೃಷ್ಟೇಃ ಅತಿಚಾರಾಃ ಭವಂತಿ!'**- ೧) ಜಿನ ವಚನಗಳಲ್ಲಿ ಶಂಕೆ ಮಾಡುವುದು, ೨) ವ್ರತದ ಪಾಲನೆ ಮಾಡಿ ಈ ಲೋಕ ಹಾಗೂ ಪರಲೋಕ ಸಂಬಂಧವಾಗಿ ಇಷ್ಟ ವಸ್ತುಗಳ ಅಭಿಲಾಷೆ ಎಂದರೆ ಸಾಂಸಾರಿಕ ಸುಖದ ಇಚ್ಛೆ ಮಾಡುವುದು, ೩) (ಅನಿಷ್ಟ ಅಥವಾ ದುರ್ಗಂಧಮಯವಾದ ವಸ್ತುವಿನಲ್ಲಿ ಅಪ್ರೀತಿ - ಗ್ಲಾನಿ ಮಾಡುವುದು ಅಥವಾ) ಮುನಿರಾಜರು ಮೊದಲಾದವರ ಶರೀರವನ್ನು ನೋಡಿ ಜುಗುಪ್ಸೆ ಪಡುವುದು, ೪) ಅನ್ಯಮತಾವಲಂಬಿಯಾದ ಮಿಥ್ಯಾದೃಷ್ಟಿಗಳನ್ನು ಇವರು ಕೂಡ ಒಂದಿಷ್ಟು ಒಳ್ಳೆಯ ಸಾಧನೆ ಮಾಡುತ್ತಾರೆಂದು ಪ್ರಶಂಸೆ ಮಾಡುವುದು, ೫)

ಮನಸ್ಸಿನಿಂದ ಅವರ ಕಾರ್ಯಗಳ ಪ್ರಶಂಸೆ ಮಾಡುವುದು-ಹೊಗಳುವುದು ಎಂದರೆ ಅವರನ್ನು ಕೂಡ ಒಳ್ಳೆಯವರೆಂದು ತಿಳಿದುಕೊಳ್ಳುವುದು, ಇವು ಸಮ್ಯಗ್ದರ್ಶನದ ಐದು ಅತಿಚಾರಗಳಿವೆ, ಇವುಗಳಿಂದ ಸಮ್ಯಕ್ತ್ವವು ಮಲಿನವಾಗುತ್ತದೆ.

**ಭಾವಾರ್ಥ ః-** ಎಲ್ಲಿಯವರೆಗೆ ಈ ಐದು ಅತಿಚಾರಗಳ ತ್ಯಾಗವಾಗುವುದಿಲ್ಲ ಅಲ್ಲಿಯವರೆಗೆ ಅವನು ನಿಶ್ಚಯ ಸಮ್ಯಕ್‌ದೃಷ್ಟಿಯಾಗುವ ಸಾಧ್ಯತೆಯಿಲ್ಲ.

ಈಗ ಅಹಿಂಸಾ ಅಣುವ್ರತದ ಐದು ಅತಿಚಾರಗಳನ್ನು ಹೇಳುತ್ತಾರೆ, -

ಭೇದನತಾಡನಬಂಧಾ ಭಾರಸ್ಯಾರೋಪಣಂ ಸಮಧಿಕಸ್ಯ ।
ಪಾನಾನ್ನಯೋಶ್ಚ ರೋಧಃ ಪಂಚಾಸಿಂಸಾವ್ರತಸ್ಯೇತಿ ॥೧೮೩॥

**ಅನ್ವಯಾರ್ಥ ః- [ಭೇದನತಾಡನಬಂಧಾಃ]** ಭೇದಿಸುವುದು, ದಂಡನೆ ಮಾಡುವುದು, ಕಟ್ಟುವುದು, **[ಸಮಧಿ ಕಸ್ಯ]** ಅತ್ಯಂತ ಅಧಿಕವಾಗಿ **[ಭಾರಸ್ಯ]** ಭಾರವನ್ನು **[ಆರೋಪಣಂ]** ಹೊರಿಸುವುದು **[ಚ]** ಮತ್ತು **[ಪಾನಾನ್ನಯೋಃ]** ಅನ್ನ-ನೀರುಗಳನ್ನು **[ರೋಧಃ]** ತಡೆಯುವುದು ಎಂದರೆ ಕೊಡದಿರುವುದು **[ಇತಿ]** ಈ ಪ್ರಕಾರ **[ಅಹಿಂಸಾವ್ರತಸ್ಯ]** ಅಹಿಂಸಾವ್ರತದ **[ಪಂಚ]** ಐದು ಅತಿಚಾರಗಳಿವೆ.

**ಟೀಕೆ ః- 'ಭೇದನ ತಾಡನ ಬಂಧಾಃ ಸಮಧಿಕಸ್ಯ ಭಾರಸ್ಯ ಆರೋಪಣಂ ಪಾನಾನ್ನಯೋಶ್ಚ ರೋಧಃ ಇತಿ ಅಹಿಂಸಾವ್ರತಸ್ಯ ಪಂಚ ಅತಿಚಾರಾಃ' !** - ಭೇದನ ಎಂದರೆ ಕಿವಿ, ಮೂಗು, ಕೈ ಇತ್ಯಾದಿಗಳನ್ನು ಕತ್ತರಿಸುವುದು, ತಾಡನ ಎಂದರೆ ಕೋಲು, ಚಾಟಿ, ದಬ್ಬಣ ಇತ್ಯಾದಿಗಳಿಂದ ಹೊಡೆಯುವುದು, ಬಂಧ ಎಂದರೆ ಒಂದೇ ಸ್ಥಾನದಲ್ಲಿ ಕಟ್ಟಿಹಾಕಿ ತಡೆದು ಇಡುವುದು, ಅಧಿಕಭಾರ ಎಂದರೆ ಒಂಟೆ, ಎತ್ತು, ಕುದುರೆ ಇವೇ ಮೊದಲಾದವುಗಳ ಮೇಲೆ ಅವುಗಳ ಶಕ್ತಿಗಿಂತ ಅಧಿಕ ಭಾರ ಹೊರಿಸುವುದು, ಮತ್ತು ಯೋಗ್ಯ ಸಮಯದಲ್ಲಿ ಹುಲ್ಲು, ಮೇವು, ನೀರು ಇತ್ಯಾದಿಗಳನ್ನು ಕೊಡದಿರುವುದು ಇವು ಅಹಿಂಸಾ ಅಣುವ್ರತದ ಐದು ಅತಿಚಾರಗಳಿವೆ.

ಈಗ ಸತ್ಯ ಅಣುವ್ರತದ ಐದು ಅತಿಚಾರಗಳನ್ನು ಹೇಳುತ್ತಾರೆ, -

ಮಿಥ್ಯೋಪದೇಶದಾನಂ ರಹಸೋಽಭ್ಯಾಖ್ಯಾನಕೂಟಲೇಖಕೃತೀ ।
ನ್ಯಾಸಾಪಹಾರವಚನಂ ಸಾಕಾರಮಂತ್ರಭೇದಶ್ಚ ॥೧೮೪॥

**ಅನ್ವಯಾರ್ಥ ః- [ಮಿಥ್ಯೋಪದೇಶದಾನಂ]** ಸುಳ್ಳು ಉಪದೇಶ ಕೊಡುವುದು, **[ರಹಸೋಽಭ್ಯಾಖ್ಯಾನ - ಕೂಟಲೇಖಕೃತೀ]** ಏಕಾಂತದ ಗುಪ್ತ ಮಾತುಗಳನ್ನು ಪ್ರಕಟ ಮಾಡುವುದು, ಸುಳ್ಳು ಲೇಖನ ಬರೆಯುವುದು, **[ನ್ಯಾಸಾಪಹಾರವಚನಂ]** ಅಮಾನತ್ತದ ಅಪಹರಣ ಮಾಡುವ ವಚನಗಳನ್ನು ಹೇಳುವುದು **[ಚ]** ಮತ್ತು **(ಸಾಕಾರಮಂತ್ರಭೇದಃ)** ಕಾಯದ ಚೇಷ್ಟೆಗಳಿಂದ ತಿಳಿದುಕೊಂಡು ಇತರರ ಅಭಿಪ್ರಾಯವನ್ನು ಪ್ರಕಟ ಮಾಡುವುದು. ಇವು ಐದು ಸತ್ಯಾಣುವ್ರತದ ಅತಿಚಾರಗಳಿವೆ.

**ಟೀಕೆ ః- 'ಮಿಥ್ಯೋಪದೇಶದಾನಂ ರಹಸೋಽಭ್ಯಾಖ್ಯಾನಂ ಕೂಟಲೇಖಕೃತಿ' ನ್ಯಾಸಾಪಹಾರ ವಚನಂ ಸಾಕಾರಮಂತ್ರಭೇದಶ್ಚ ಇತಿ ಸತ್ಯಾಣುವ್ರತಸ್ಯ ಪಂಚ ಅತಿಚಾರಾಃ ಸಂತಿ!'** - ೧) ಸುಳ್ಳು ಉಪದೇಶ ಕೊಡುವುದರಿಂದ ಜೀವಗಳ ಅಹಿತವಾಗುವುದು, ೨) ಯಾರೋ ಸ್ತ್ರೀ-ಪುರುಷರ ಗುಪ್ತ ಮಾತುಗಳನ್ನು ಪ್ರಕಟ ಮಾಡುವುದು, ೩) ಸುಳ್ಳು ಲೇಖನ ಬರೆಯುವುದು ಅಥವಾ ಸುಳ್ಳು ಮುಟ್ಟೋಲೆ (ರಶೀತ)ಮೊದಲಾದುವನ್ನು ಸ್ವಯಂ ಬರೆಯುವುದು, ೪) ಯಾರದೋ ಅಮಾನತ್ತನ್ನು ಅಪಹರಿಸಿಕೊಳ್ಳುವುದು, ೫) ಯಾರದೋ ಆಕೃತಿ ನೋಡಿ ಅದರ ಅಭಿಪ್ರಾಯ ಪ್ರಕಟ ಮಾಡಿ ಬಿಡುವುದು. ಇವು ಐದು ಸತ್ಯ ಅಣುವ್ರತದ ಅತಿಚಾರಗಳಿವೆ.

**ಭಾವಾರ್ಥ :-** ೧) ಜನರು ಕಲ್ಯಾಣಕಾರಿಯಾದ ಧರ್ಮವನ್ನು ಬಿಟ್ಟುಕೊಟ್ಟು ಅಧರ್ಮದಲ್ಲಿ ತೊಡಗಿ ಬಿಡುವಂಥ ಸುಳ್ಳು ಉಪದೇಶ ಕೊಡುವುದು. ೨) ಯಾವ ಕಾರ್ಯವನ್ನು ಸ್ತ್ರೀ-ಪುರುಷರು ಏಕಾಂತದಲ್ಲಿ ಮಾಡಿರುತ್ತಾರೆ ಅದನ್ನು ಪ್ರಕಟ ಮಾಡಿ ಬಿಡುವುದು. ಯಾವನು ಹೇಳಿಯೂ ಇಲ್ಲ ಮಾಡಿಯೂ ಇಲ್ಲ ಅಂಥ ಅಸತ್ಯವನ್ನೇ ಮೋಸ ಮಾಡುವ ಸಲುವಾಗಿ ಅವನು ಹೀಗೆ ಹೇಳಿದ್ದಾನೆ, ಹೀಗೆ ಮಾಡಿದ್ದಾನೆಂದು ಕಪಟಪೂರ್ವಕವಾಗಿ ಬರೆಯುವುದು. ೩) ತಮ್ಮ ಹತ್ತಿರ ಯಾವನೋ ಓರ್ವ ಮನುಷ್ಯನು ಅಮಾನತ್ತು ಇಟ್ಟು ಹೋಗಿರುತ್ತಾನೆ ಮತ್ತು ಯಾವಾಗ ಅವನು ಅದನ್ನು ಮರಳಿ ತೆಗೆದುಕೊಳ್ಳಲು ಬರುತ್ತಾನೆ ಆಗ ಅವನು ಭ್ರಾಂತಿಯಿಂದ ಎಷ್ಟು ಇಟ್ಟಿರುತ್ತಾನೋ ಅದಕ್ಕಿಂತ ಕಡಿಮೆ ಬೇಡತೊಡಗಿದರೆ ಅವನಿಗೆ ಅಹುದು, ಇಷ್ಟೇ ಇದ್ದವು ಅಥವಾ ಎಷ್ಟು ಇದ್ದವು ಅಷ್ಟನ್ನು ತೆಗೆದುಕೊಂಡು ಹೋಗೆಂದು ಹೇಳುವುದು. ಇದನ್ನು ನ್ಯಾಸಾಪಹಾರವೆಂದು ಹೇಳುತ್ತಾರೆ. ೪) ಯಾವನೋ ಓರ್ವನ ಆಕೃತಿಯನ್ನು ನೋಡಿ ಅವನ ಅಭಿಪ್ರಾಯವನ್ನು ತಿಳಿದುಕೊಂಡು ಈತನ ಅಭಿಪ್ರಾಯ ಹೀಗಿದೆಯೆಂದು ಅದನ್ನು ಪ್ರಕಟ ಮಾಡಿ ಬಿಡುವುದು. ೫) ಸುಳ್ಳು ಮುಟ್ಟೋಲೆಯನ್ನು ಬರೆದು ಕೊಡುವುದು ಅಥವಾ ಬಲವಂತದಿಂದ ಬರೆಸಿಕೊಳ್ಳುವುದು. ಇದು ಕೂಟ ಲೇಖವಿದೆ. ಹೀಗೆ ಇವು ಐದು ಸತ್ಯಾಣುವ್ರತದ ಅತಿಚಾರಗಳಿವೆ.

ಈಗ ಅಚೌರ್ಯ ಅಣುವ್ರತದ ಐದು ಅತಿಚಾರಗಳನ್ನು ಹೇಳುತ್ತಾರೆ, -

ಪ್ರತಿರೂಪವ್ಯವಹಾರಃ ಸ್ತೇನನಿಯೋಗಸ್ತದಾಹೃತಾದಾನಮ್ ।
ರಾಜವಿರೋಧಾತಿಕ್ರಮಹೀನಾಧಿಕಮಾನಕರಣೇ ಚ ॥೧೮೫॥

**ಅನ್ವಯಾರ್ಥ :- [ಪ್ರತಿರೂಪವ್ಯವಹಾರಃ]** ಪ್ರತಿರೂಪ ವ್ಯವಹಾರ ಎಂದರೆ ಮೂಲ ವಸ್ತುವಿನಲ್ಲಿ ನಕಲಿ ವಸ್ತುವನ್ನು ಸೇರಿಸಿ ಮಾರುವುದು, **[ಸ್ತೇನನಿಯೋಗಃ]** ಕಳವು ಮಾಡುವಂಥವರಿಗೆ ಸಹಾಯ ಮಾಡುವುದು, **[ತದಾಹೃತಾದಾನಮ್]** ಕಳವು ಮಾಡಿ ತಂದಿರುವ ವಸ್ತುಗಳನ್ನು ಇಟ್ಟುಕೊಳ್ಳುವುದು **[ಚ]** ಮತ್ತು **[ರಾಜ ವಿರೋಧಾತಿಕ್ರಮಹೀನಾಧಿಕಮಾನಕರಣೇ]** ಸರಕಾರದವರಿಂದ ಹೊರಡಿಸಿದ ನಿಯಮಗಳ ಉಲ್ಲಂಘನೆ ಮಾಡುವುದು, ಅಳೆಯುವ ಅಥವಾ ತೂಕದ ಗಜ, ಮೀಟರ ತೂಕದಕಲ್ಲು, ತಕ್ಕಡಿ ಮೊದಲಾದವುಗಳ ಅಳತೆಯಲ್ಲಿ ಹೆಚ್ಚು ಕಡಿಮೆ ಮಾಡುವುದು । **ಏತೇ ಪಂಚಾಸ್ತೇಯವ್ರತಸ್ಯ** । ಇವು ಐದು ಅಚೌರ್ಯವ್ರತದ ಅತಿಚಾರಗಳಿವೆ.

**ಟೀಕೆ :- 'ಪ್ರತಿರೂಪವ್ಯವಹಾರಃ ಸ್ತೇನನೀಯೋಗಃ ತದಾಹೃತಾದಾನಮ್ ರಾಜವಿರೋಧಾತಿಕ್ರಮಃ ಚ ಹೀನಾಧಿಕಮಾನಕರಣೇ ಇತಿ ಅಚೌರ್ಯಾಣುವ್ರತಸ್ಯ ಪಂಚ ಅತಿಚಾರಾಃ ಸಂತಿ!'-** ೧) ಸುಳ್ಳು ವಸ್ತುವನ್ನು (ಅಶುದ್ಧ ವಸ್ತುವನ್ನು) ಶುದ್ಧ ವಸ್ತುವಿನ ಹಾಗೆ ಮಾಡಿ ಮೂಲ ವಸ್ತುವಿನಲ್ಲಿ ಮಿಶ್ರಣ ಮಾಡಿ ನಡೆಸುವುದು. (ನಕಲಿ ನೋಟುಗಳನ್ನು ಅಸಲು ನೋಟುಗಳಲ್ಲಿ ಸೇರಿಸಿ ನಡೆಸುವುದು) ಇದರ ಹೆಸರು ಪ್ರತಿರೂಪ ವ್ಯವಹಾರವಿದೆ. ೨) ಕಳ್ಳತನಕ್ಕೆ ಪ್ರೇರಣೆ ಕೊಡುವುದು, ಅನುಮೋದನೆ ಮಾಡುವುದು ಅಥವಾ ಕಳವು ಮಾಡುವ ಉಪಾಯ ತಿಳಿಸಿಕೊಡುವುದು ಇದು ಸ್ತೇನ ಪ್ರಯೋಗ ಅತಿಚಾರವಿದೆ. ೩) ಕಳವಿನ ವಸ್ತುಗಳನ್ನು ಕೊಳ್ಳುವುದು. ಇದು ಮೂರನೆಯ ಅತಿಚಾರವಿದೆ. ೪) ರಾಜಾಜ್ಞೆಯ ಉಲ್ಲಂಘನೆ ಮಾಡುವುದು. ಅಥವಾ ತೆರಿಗೆ ಕೊಡದಿರುವುದು ಇದು ನಾಲ್ಕನೆಯ ಅತಿಚಾರವಿದೆ ೫) ಹೆಚ್ಚು ಬೆಲೆಯುಳ್ಳ ವಸ್ತುವಿನಲ್ಲಿ ಕಡಿಮೆ ಬೆಲೆಯುಳ್ಳ ವಸ್ತುವನ್ನು ಮಿಶ್ರಣ ಮಾಡುವುದು, ಅಧಿಕ ಮೌಲ್ಯದ ವಸ್ತುವನ್ನು ಕಡಮೆ ಮೌಲ್ಯದಲ್ಲಿ ತೆಗೆದುಕೊಳ್ಳುವುದು, ಅಳತೆ-ತೂಕದ ಉಪಕರಣಗಳಾದ ಮೀಟರ,

★ರತ್ನಕರಂಡ ಶ್ರಾವಕಾಚಾರದ ೬೦ನೇ ಶ್ಲೋಕದಲ್ಲಿ ಇತ್ವರಿಕಾಗಮನದ ಅರ್ಥ - ಇತ್ವಾರಿಕಾ ಆ ವ್ಯಭಿಚಾರಿಣೀ ಸ್ತ್ರೀಯ ಮನೆಗೆ ಹೋಗುವುದು ಅಥವಾ ಅವಳನ್ನು ತಮ್ಮ ಮನೆಗೆ ಕರೆಸಿಕೊಳ್ಳುವುದು ಧನ ಮೊದಲಾದುವನ್ನು ಕೊಡಕೊಳ್ಳುವುದು, ಪರಸ್ಪರ ಮಾತುಕತೆ ಮಾಡುವುದು - ಶೃಂಗಾರ ನೋಡುವುದು - ಇದು ಇತ್ವರಿಕಾಗಮನವೆಂಬ ಹೆಸರಿನ ಅತಿಚಾರವಿದೆ.

ತಕ್ಕಡಿ ಇತ್ಯಾದಿಗಳನ್ನು ಹೀನಾಧಿಕ ಮಾಡುವುದು ಅಥವಾ ಹೆಚ್ಚು-ಕಡಿಮೆ ತೂಕ ಮಾಡಿ ಕೊಡುವುದು - ತೆಗೆದು ಕೊಳ್ಳುವುದು ಇದು ಐದನೆಯ ಅತಿಚಾರವಿದೆ. ಈ ಪ್ರಕಾರ ಇವು ಐದು ಅಚೌರ್ಯ ಅಣುವ್ರತದ ಅತಿಚಾರಗಳಿವೆ.

ಈಗ ಬ್ರಹ್ಮಚರ್ಯ ಅಣುವ್ರತದ ಐದು ಅತಿಚಾರಗಳನ್ನು ಹೇಳುತ್ತಾರೆ, -

ಸ್ಮರತೀವ್ರಾಭಿನಿವೇಶೋಽನಂಗಕ್ರೀಡಾನ್ಯಪರಿಣಯನಕರಣಮ್ ।
ಅಪರಿಗೃಹೀತೇ ತರಯೋರ್ಗಮನೇ ಚೇತ್ವರಿಕಯೋಃ ಪಂಚ ॥೧೮೬॥

**ಅನ್ವಯಾರ್ಥ :- [ಸ್ಮರತೀವ್ರಾಭಿನಿವೇಶಃ]** ಕಾಮ ಸೇವನೆಯ ಇಚ್ಛೆಯನ್ನು ಅತಿಯಾಗಿ ಇಡುವುದು, **[ಅನಂಗಕ್ರೀಡಾ]** ಯೋಗ್ಯ ಅಂಗಗಳನ್ನು ಬಿಟ್ಟುಕೊಟ್ಟು ಬೇರೆ ಅಂಗಗಳ ಜತೆ ಕಾಮಕ್ರೀಡೆ ಮಾಡುವುದು, **[ಅನ್ಯಪರಿಣಯನಕರಣಮ್]** ಇತರರ ವಿವಾಹ ಮಾಡುವುದು, **[ಚ]** ಮತ್ತು **[ಅಪರಿಗ್ರಹೀತೇತರಯೋಃ]** ಅವಿವಾಹಿತ ಅಥವಾ ವಿವಾಹಿತ **[ಇತ್ವರಿಕಯೋಃ★]** ವ್ಯಭಿಚಾರಿಣಿ ಸ್ತ್ರೀಯರ ಹತ್ತಿರ **[ಗಮನೇ]** ಹೋಗುವುದು, ಕೊಡ-ಕೊಳ್ಳುವ ಇತ್ಯಾದಿಗಳ ವ್ಯವಹಾರ ಮಾಡುವುದು **[ಏತೇ ಬ್ರಹ್ಮವ್ರತಸ್ಯ]** ಇವು ಬ್ರಹ್ಮಚರ್ಯವ್ರತದ **[ಪಂಚ]** ಐದು ಅತಿಚಾರಗಳಿವೆ.

**ಟೀಕೆ :- 'ಸ್ಮರತೀವ್ರಾಭಿನಿವೇಶಃ ಅನಂಗಕ್ರೀಡಾ ಅನ್ಯಪರಿಣಯನಕರಣಂ ಇತ್ವರಿಕಯೋಃ ಅಪರಿಗೃಹೀತಾ ಗಮನಂ ಚ ಇತ್ವರಿಕಾ ಪರಿಗೃಹೀತಾ ಗಮನಂ ಚ ಇತಿ ಪಂಚ ಅತಿಚಾರಾಃ ಬ್ರಹ್ಮಚರ್ಯಾಣುವ್ರತಸ್ಯ ಸಂತಿ!'-** ೧)ಕಾಮ-ಭೋಗ-ವಿಷಯ ಸೇವನೆ ಮಾಡುವುದರ ಕುರಿತು ಅತ್ಯಂತ ಅಭಿಲಾಷೆ ಇಡುವುದು, ೨) ವಿಷಯ ಸೇವನೆ ಮಾಡುವ ಯಾವ ಅಂಗಗಳಿವೆ ಅವನ್ನು ಬಿಟ್ಟುಕೊಟ್ಟು ಮುಖ, ನಾಭಿ, ಸ್ತನ ಮೊದಲಾದ ಅನಂಗಗಳಲ್ಲಿ ರಮಣ ಮಾಡುವುದು, ೩) ಇತರರ ಮಕ್ಕಳ ಮದುವೆ ಮಾಡಿಸುವುದು ಅಥವಾ ಮಾಡುವುದು, ೪) ವ್ಯಭಿಚಾರಿಣಿಯಾದ ವೇಶ್ಯೆ ಅಥವಾ ಅವಿವಾಹಿತ ಕನ್ಯೆ ಮೊದಲಾದವರ ಜತೆ ಕೊಡ-ಕೊಳ್ಳುವ ಮೊದಲಾದ ವ್ಯವಹಾರವಿಟ್ಟುಕೊಳ್ಳುವುದು, ಮಾತುಕತೆ ಮಾಡುವುದು, ರೂಪು-ಶೃಂಗಾರ ಮೊದಲಾದುವನ್ನು ನೋಡುವುದು, ೫) ವ್ಯಭಿಚಾರಿಣೀ ವಿವಾಹಿತ ಸ್ತ್ರೀಯರ ಜತೆಯಲ್ಲೂ ಇದೇ ಪ್ರಕಾರದ ವ್ಯವಹಾರ ಮಾಡುವುದು ಇವು ಐದು ಬ್ರಹ್ಮಚರ್ಯಾಣುವ್ರತದ ಅತಿಚಾರಗಳಿವೆ.

ಈಗ ಪರಿಗ್ರಹಪರಿಮಾಣವ್ರತದ ಐದು ಅತಿಚಾರಗಳನ್ನು ಹೇಳುತ್ತಾರೆ, -

ವಾಸ್ತುಕ್ಷೇತ್ರಾಷ್ಟಾಪದಹಿರಣ್ಯಧನಧಾನ್ಯದಾಸದಾಸೀನಾಮ್ ।
ಕುಪ್ಯಸ್ಯ ಭೇದಯೋರಪಿ ಪರಿಮಾಣಾತಿಕ್ರಿಯಾಃ ಪಂಚ ॥೧೮೭॥

**ಅನ್ವಯಾರ್ಥ :- [ವಾಸ್ತುಕ್ಷೇತ್ರಾಷ್ಟಾಪದಹಿರಣ್ಯಧನಧಾನ್ಯದಾಸದಾಸೀನಾಮ್]** ಮನೆ, ಭೂಮಿ, ಚಿನ್ನ, ಬೆಳ್ಳಿ, ಧನ, ಧಾನ್ಯ, ಸೇವಕ, ಸೇವಕಿ ಮತ್ತು **[ಕುಪ್ಯಸ್ಯ]** ಸುವರ್ಣಾದಿ ಧಾತುಗಳಲ್ಲದೆ ವಸ್ತ್ರ ಮೊದಲಾದ **[ಭೇದಯೋಃ]** ಎರಡೂ ಭೇದಗಳದ್ದು **[ಅಪಿ]** ಕೂಡ **[ಪರಿಮಾಣಾತಿಕ್ರಿಯಾಃ]** ಪರಿಮಾಣದ ಉಲ್ಲಂಘನೆ ಮಾಡುವುದು **[ಏತೇ ಅಪರಿಗ್ರಹವ್ರತಸ್ಯ]** ಇವು ಅಪರಿಗ್ರಹವ್ರತದ **[ಪಂಚ]** ಐದು ಅತಿಚಾರಗಳಿವೆ.

**ಟೀಕೆ :- 'ವಾಸ್ತು ಕ್ಷೇತ್ರ ಪರಿಮಾಣಾತಿಕ್ರಮಃ ಅಷ್ಟಾಪದಹಿರಣ್ಯಪರಿಮಾಣಾತಿಕ್ರಮಃ, ಧನಧಾನ್ಯ ಪರಿಮಾಣಾತಿಕ್ರಮಃ, ದಾಸದಾಸೀಪರಿಮಾಣಾತಿಕ್ರಮಃ, ಅಪಿ ಕುಪ್ಯಸ್ಯ ಭೇದಯೋಃ ಪರಿಮಾಣಾತಿಕ್ರಮಃ ಇತಿ ಪಂಚ ಪರಿಗ್ರಹಪರಿಮಾಣವ್ರತಸ್ಯ ಅತಿಚಾರಾಃ ಸಂತಿ !'-** ೧) ಮನೆ ಮತ್ತು ಕ್ಷೇತ್ರದ ಪರಿಮಾಣ

ಹೆಚ್ಚಿಸುವುದು, ೨) ಚಿನ್ನ-ಬೆಳ್ಳಿಯ ಪರಿಮಾಣ ಹೆಚ್ಚಿಸುವುದು, ೩) ಕುದುರೆ, ಹಸು, ಎಮ್ಮೆ, ಗೋದಿ, ಬೇಳೆ ಮೊದಲಾದವುಗಳ ಪರಿಮಾಣ ಹೆಚ್ಚಿಸುವುದು, ೪) ಸೇವಕ, ಸೇವಕಿಯರ ಪರಿಮಾಣ ಹೆಚ್ಚಿಸುವುದು, ೫)ಕುಪ್ಯ ಎಂದರೆ ಉಣ್ಣೆ ಮತ್ತು ನೂಲು ಇವೆರಡೂ ಪ್ರಕಾರದ ವಸ್ತ್ರಗಳ ಪರಿಮಾಣ ಹೆಚ್ಚಿಸುವುದು ಈ ಪ್ರಕಾರ ಇವು ಐದು ಪರಿಗ್ರಹ ಪರಿಮಾಣವ್ರತದ ಅತಿಚಾರಗಳಿವೆ.

ಈಗ ದಿಗ್ವ್ರತದ ಐದು ಅತಿಚಾರಗಳನ್ನು ಹೇಳುತ್ತಾರೆ, -

ಊರ್ಧ್ವಮಧಸ್ತಾತ್ತಿರ್ಯಗ್ವ್ಯತಿಕ್ರಮಾಃ ಕ್ಷೇತ್ರವೃದ್ಧಿರಾಧಾನಮ್ ।
ಸ್ಮೃತ್ಯಂತರಸ್ಯ ಗದಿತಾಃ ಪಂಚೇತಿ ಪ್ರಥಮಶೀಲಸ್ಯ ॥೧೮೮॥

**ಅನ್ವಯಾರ್ಥ :- [ಊರ್ಧ್ವಮಧಸ್ತಾತ್ತಿರ್ಯಗ್ವ್ಯತಿಕ್ರಮಾಃ]** ಮೇಲೆ, ಕೆಳಗೆ ಮತ್ತು ಸಮಾನ ಭೂಮಿಯ ಮಾಡಿರುವ ಮರ್ಯಾದೆಯ ಉಲ್ಲಂಘನೆ ಮಾಡುವುದು ಎಂದರೆ ಎಷ್ಟು ಪ್ರಮಾಣ ಮಾಡಿರುತ್ತದೆ ಅದರ ಹೊರಗೆ ಹೊರಟು ಹೋಗುವುದು, **[ಕ್ಷೇತ್ರವೃದ್ಧಿಃ]** ಲೋಭಾದಿಗಳ ವಶದಿಂದ ಪರಿಮಾಣ ಮಾಡಿರುವ ಕ್ಷೇತ್ರದ ವೃದ್ಧಿ ಮಾಡುವುದು ಮತ್ತು **[ಸ್ಮೃತ್ಯಂತರಸ್ಯ]** ಸ್ಮರಣೆಯಿಲ್ಲದೆ ಕ್ಷೇತ್ರದ ಮರ್ಯಾದೆಯನ್ನು **[ಆಧಾನಮ್]** ಧಾರಣ ಮಾಡುವುದು ಎಂದರೆ ಮರ್ಯಾದೆಯನ್ನು ಮರೆತು ಬಿಡುವುದು. **[ಇತಿ]** ಈ ಪ್ರಕಾರ **[ಪ್ರಥಮಶೀಲಸ್ಯ]** ಪ್ರಥಮಶೀಲ ಎಂದರೆ ದಿಗ್ವ್ರತದಲ್ಲಿ **[ಪಂಚ]** ಐದು ಅತಿಚಾರಗಳನ್ನು **[ಗದಿತಾಃ]** ಹೇಳಲಾಗಿದೆ.

**ಟೀಕೆ :- 'ಊರ್ಧ್ವ ವ್ಯತಿಕ್ರಮಃ ಅಧಸ್ತಾತ್ ವ್ಯತಿಕ್ರಮಃ ತಿರ್ಯಕ್ ವ್ಯತಿಕ್ರಮಃ ಕ್ಷೇತ್ರವೃದ್ಧಿಃ ಸ್ಮೃತ್ಯಂತರಸ್ಯ ಆಧಾನಮ್ ಇತಿ ಪಂಚ ಅತಿಚಾರಾಃ ಪ್ರಥಮಶೀಲಸ್ಯ ದಿಗ್ವ್ರತಸ್ಯ ಸಂತಿ ।'** - ಮರ್ಯಾದೆ ಮಾಡಿರುವ ಮೇಲಿನ ದಿಶೆಗಳ ಉಲ್ಲಂಘನೆ ಮಾಡುವುದು, (ಹೇಗೆಂದರೆ ಪರ್ವತದ ಮೇಲೆ ಹತ್ತುವುದು ಅಥವಾ ವಿಮಾನದಲ್ಲಿ ಕುಳಿತು ಮೇಲೆ ಆಕಾಶದಲ್ಲಿ ಹಾರುವುದು, ೨) ಮರ್ಯಾದೆ ಮಾಡಿಕೊಂಡಿರುವ ಕೆಳಗಿನ ದಿಶೆಗಳ ಉಲ್ಲಂಘನೆ ಮಾಡುವದು, (ಹೇಗೆಂದರೆ ಆಳವಾದ ಬಾವಿಯಲ್ಲಿ ಇಳಿಯುವುದು, ಸಮುದ್ರದಲ್ಲಿ ಮುಳುಗುವುದು ಅಥವಾ ಕಲ್ಲಿದ್ದಲು ಮೊದಲಾದ ಗಣಿಗಳಲ್ಲಿ ಇಳಿಯುವುದು) ೩) ಮರ್ಯಾದೆ ಮಾಡಿಕೊಂಡಿರುವ ತಿರ್ಯಕ್ ದಿಶೆಗಳ ಉಲ್ಲಂಘನೆ ಮಾಡುವುದು, (ಹೇಗೆಂದರೆ ಗುಹೆ ಇತ್ಯಾದಿಗಳಲ್ಲಿ ಪ್ರವೇಶ ಮಾಡುವುದು, ೪) ಮರ್ಯಾದೆ ಮಾಡಿಕೊಂಡಿರುವ ಕ್ಷೇತ್ರವನ್ನು ಹೆಚ್ಚಿಸುವುದು ಎಂದರೆ ಯಾವ ದಿಶೆಗಳ ಪ್ರಮಾಣ ಮಾಡಿತ್ತು ಅದನ್ನು ಲೋಭದ ವಶದಿಂದ ಇನ್ನೂ ಹೆಚ್ಚಿಸಿಕೊಳ್ಳುವುದು, (ಈ ಅತಿಚಾರಗಳು ಪ್ರಮಾದ ಅಥವಾ ಮೋಹದಿಂದ ಆಗುತ್ತವೆ.) ೫) ಪರಿಮಾಣ ಮಾಡಿಕೊಂಡಿರುವ ಮರ್ಯಾದೆಯನ್ನು ಮರೆತು ಸೀಮೆಯನ್ನು ಹೆಚ್ಚಿಸಿಕೊಳ್ಳುವುದು ಇವು ದಿಗ್ವ್ರತದ ಐದು ಅತಿಚಾರಗಳಿವೆ.

ಈಗ ದೇಶವ್ರತದ ಐದು ಅತಿಚಾರಗಳನ್ನು ಹೇಳುತ್ತಾರೆ, -

ಪ್ರೇಷಸ್ಯ ಸಂಪ್ರಯೋಜನಮಾನಯನಂ ಶಬ್ದರೂಪವಿನಿಪಾತೌ ।
ಕ್ಷೇಪೋಽಪಿ ಪುದ್ಗಲಾನಾಂ ದ್ವಿತೀಯಶೀಲಸ್ಯ ಪಂಚೇತಿ ॥೧೮೯॥

**ಅನ್ವಯಾರ್ಥ :- [ಪ್ರೇಷ್ಯಸ್ಯಸಂಪ್ರಯೋಜನಮ್]** ಪ್ರಮಾಣ ಮಾಡಿಕೊಂಡಿರುವ ಕ್ಷೇತ್ರದ ಹೊರಗೆ ಬೇರೆ ಮನುಷ್ಯನನ್ನು ಕಳಿಸುವುದು, **[ಆನಯನಂ]** ಅಲ್ಲಿಂದ ಯಾವುದಾದರೂ ವಸ್ತುವನ್ನು ಬೇಡಿಸುವುದು,

**[ಶಬ್ದರೂಪವಿನಿಪಾತೌ]** ಶಬ್ದ ಕೇಳುವುದು, ರೂಪುತೋರಿಸಿ ಸನ್ನೆ ಮಾಡುವುದು ಮತ್ತು **[ಪುದ್ಗಲಾನಾಂ]** ಹರಳು ಮೊದಲಾದವುಗಳನ್ನು **[ಕ್ಷೇಪೋऽಪಿ]** ಕೂಡ ಎಸೆಯುವುದು **[ಇತಿ]** ಈ ಪ್ರಕಾರ **[ದ್ವಿತೀಯಶೀಲಸ್ಯ ಪಂಚ]** ಎರಡನೆಯ ಶೀಲದ ಎಂದರೆ ದೇಶವ್ರತದ ಐದು ಅತಿಚಾರಗಳನ್ನು ಹೇಳಲಾಗಿದೆ.

**ಟೀಕೆ :- 'ಪ್ರೇಷ್ಯಸ್ಯ ಸಂಪ್ರಯೋಜನವಮ್ ಆನಯನಂ ಶಬ್ದವಿನಿಪಾತೌ ರೂಪವಿನಿಪಾತೌ ಪುದ್ಗಲನಾಂ ಕ್ಷೇಪಃ ಇತಿ ಪಂಚ ಅತಿಚಾರಾಃ ದ್ವಿತೀಯ ಶೀಲಸ್ಯ ಸಂತಿ ।'-** ತಾವಂತೂ ಮರ್ಯಾದಿತ ಕ್ಷೇತ್ರದ ಒಳಗೆ ಇರುವುದು, ಆದರೆ ಸೇವಕ-ನೌಕರರನ್ನು ಮರ್ಯಾದೆಯಿಂದ ಹೊರಗೆ ಕಳಿಸಿಕೊಡುವುದು, ೨) ಮರ್ಯಾದೆಯ ಹೊರಗಿನಿಂದ ಯಾವುದಾದರೂ ವಸ್ತುವನ್ನು ತರಿಸಿಕೊಳ್ಳುವುದು, ೩) ಮರ್ಯಾದೆಯ ಹೊರಗೆ ಶಬ್ದಮಾಡಿ ಕೂಗಿ ಹೇಳಿ ತಮ್ಮ ಕಾರ್ಯ ಮಾಡಿಕೊಳ್ಳುವುದು. ೪) ಮರ್ಯಾದೆಯ ಹೊರಗೆ ತಮ್ಮ ರೂಪು ತೋರಿಸಿ ಸ್ವಾರ್ಥ ಸಾಧಿಸಿಕೊಳ್ಳುವುದು. ೫) ಮರ್ಯಾದೆಯ ಹೊರಗೆ ಯಾವುದಾದರೂ ವಸ್ತು ಮೊದಲಾದುವನ್ನು ಎಸೆದು ತಮ್ಮ ಕಾರ್ಯ ಸಾಧಿಸಿಕೊಳ್ಳುವುದು. ಇವು ಐದು ದೇಶವ್ರತದ ಅತಿಚಾರಗಳಿವೆ.

ಈಗ ಅನರ್ಥದಂಡತ್ಯಾಗವ್ರತದ ಐದು ಅತಿಚಾರಗಳನ್ನು ಹೇಳುತ್ತಾರೆ, -

ಕಂದರ್ಪಃ ಕೌತ್ಕುಚ್ಯಂ ಭೋಗಾನರ್ಥಕ್ಯಮಪಿ ಚ ಮೌಖರ್ಯಮ್ ।
ಅಸಮೀಕ್ಷಿತಾಧಿಕರಣಂ ತೃತೀಯಶೀಲಸ್ಯ ಪಂಚೇತಿ ॥೧೯೦॥

**ಅನ್ವಯಾರ್ಥ :- [ಕಂದರ್ಪಃ]** ಕಾಮದ ವಚನಗಳನ್ನು ಆಡುವುದು **[ಕೌತ್ಕುಚ್ಯಂ]** ನಿರ್ಲಜ್ಯರೂಪದ ಅಯೋಗ್ಯ ಕಾಯಚೇಷ್ಟೆ ಮಾಡುವುದು, **[ಭೋಗಾನರ್ಥಕ್ಯಮ್]** ಭೋಗ-ಉಪಭೋಗದ ಪದಾರ್ಥಗಳ ಅನರ್ಥಕ್ಯ, **[ಮೌಖರ್ಯಮ್]** ವಾಚಾಲತೆ **[ಚ]** ಮತ್ತು **[ಅಸಮೀಕ್ಷಿತಾಧಿಕರಣಂ]** ವಿಚಾರ ಮಾಡದೆಯೇ ಕಾರ್ಯ ಮಾಡುವುದು, **[ಇತಿ]** ಈ ಪ್ರಕಾರ **[ತೃತೀಯಶೀಲಸ್ಯ]** ಮೂರನೆಯ ಶೀಲ ಎಂದರೆ ಅನರ್ಥ ದಂಡವಿರತಿವ್ರತದಲ್ಲಿ **[ಅಪಿ]** ಕೂಡ **[ಪಂಚ]** ಐದು ಅತಿಚಾರಗಳಿವೆ.

**ಟೀಕೆ :- 'ಕಂದರ್ಪಃ ಕೌತ್ಕುಚ್ಯಂ ಭೋಗಾನರ್ಥಕ್ಯಮ್ ಮೌಖರ್ಯಮ್ ಚ ಅಸಮೀಕ್ಷಿತಾಧಿ ಕರಣಂ ಇತಿ ತೃತೀಯ ಶೀಲಸ್ಯ ಪಂಚ ಅತಿಚಾರಾಃ ಸಂತಿ ।' -** ೧) ರಾಗ ಭಾವದಿಂದ ಹಾಸ್ಯ ಸಹಿತ ನಿರ್ಲಜ್ಜ ವಚನಗಳನ್ನು ಆಡುವುದು, ೨) ಹಾಸ್ಯ ವಚನ ಸಹಿತ ಕಾಯದ ಕುಚೇಷ್ಟೆ ಮಾಡುವುದು, ೩) ಪ್ರಯೋಜನಕ್ಕಿಂತ ತುಂಬ ಹೆಚ್ಚು ಭೋಗೋಪಭೋಗದ ಸಾಮಗ್ರಿಗಳನ್ನು ಏಕತ್ರಿತ ಮಾಡುವುದು, ೪) ಧೃಷ್ಟತೆಯುಕ್ತವಾಗಿ ಆಡುವುದು, ಮತ್ತು ಜಗಳ-ಕದನ ಮಾಡಿಸುವಂಥ ವಚನಗಳನ್ನು ಆಡುವುದು, ೫) ಪ್ರಯೋಜನವಿಲ್ಲದೆ ಮನ-ವಚನ-ಕಾಯದ ವ್ಯಾಪಾರವನ್ನು ಬೆಳೆಸುತ್ತ ಹೋಗುವುದು (ಅಥವಾ ಯಾವುದೇ ವಿಚಾರ ಮಾಡದೆ ನಿಷ್ಪ್ರಯೋಜನವಾದ ಕಾರ್ಯ ಮಾಡುವುದು) ಇವು ಐದು ಅನರ್ಥದಂಡತ್ಯಾಗವ್ರತದ ಅತಿಚಾರಗಳಿವೆ.

ಈಗ ಸಾಮಾಯಿಕ ಶಿಕ್ಷಾವ್ರತದ ಐದು ಅತಿಚಾರಗಳನ್ನು ಹೇಳುತ್ತಾರೆ, -

ವಚನಮನಃಕಾಯಾನಾಂ ದುಃಪ್ರಣಿಧಾನಂ ತ್ವನಾದರಶ್ಚೈವ ।
ಸ್ಮೃತ್ಯನುಪಸ್ಥಾನಯುತಾಃ ಪಂಚೇತಿ ಚತುರ್ಥಶೀಲಸ್ಯ ॥೧೯೧॥

**ಅನ್ವಯಾರ್ಥ :- [ಸ್ಮೃತ್ಯನುಪಸ್ಥಾನಯುತಾಃ]** ಸ್ಮೃತಿ ಅನುಪಸ್ಥಾನ ಸಹಿತ **[ವಚನಮನಃಕಾಯಾನಾಂ]** ವಚನ, ಮನಸ್ಸು ಮತ್ತುಕಾಯದ **[ದುಃಪ್ರಣಿಧಾನಂ]** ಸುಳ್ಳು ಪ್ರವೃತ್ತಿ **[ತು]** ಮತ್ತು **[ಅನಾದರಃ]** ಅನಾದರ **[ಇತಿ]**

ಈ ಪ್ರಕಾರ **[ಚತುರ್ಥಶೀಲಸ್ಯ]** ನಾಲ್ಕನೆಯ ಶೀಲ ಎಂದರೆ ಸಾಮಾಯಿಕ ವ್ರತದಲ್ಲಿ **[ಏವ]** ಕೂಡ **[ಪಂಚ)** ಐದು ಅತಿಚಾರಗಳಿವೆ.

**ಟೀಕೆ :- 'ವಚನಪ್ರಣಿಧಾನಂ, ಮನಃಪ್ರಣಿಧಾನಂ, ಕಾಯಪ್ರಣಿಧಾನಂ ತು ಅನಾದರಃ ಚ ಸ್ಮೃತ್ಯನುಪಸ್ಥಾನ ಯುತಾಃ ಇತಿ ಪಂಚ ಚತುರ್ಥಶೀಲಸ್ಯ ಅತಿಚಾರಾಃ ಸಂತಿ' ।** - ೧) ವಚನದ ದುರುಪಯೋಗ ಮಾಡುವುದು ಎಂದರೆ ಸಾಮಾಯಿಕ ಮಾಡುವ ಸಮಯದಲ್ಲಿ ಮಂತ್ರದ ಉಚ್ಚಾರಣೆ ಅಥವಾ ಸಾಮಾಯಿಕ ಪಾಠದ ಉಚ್ಚಾರಣೆಯನ್ನು ಸರಿಯಾಗಿ ಮಾಡದಿರುವುದು, ೨) ಮನಸ್ಸಿನ ದುರುಪಯೋಗ ಎಂದರೆ ಮನಸ್ಸಿನಲ್ಲಿ ಕೆಡಕು ಭಾವನೆ ಉತ್ಪನ್ನವಾಗುವುದು, ಮನಸ್ಸಿನಲ್ಲಿ ಅನೇಕ ಸಂಕಲ್ಪ-ವಿಕಲ್ಪಗಳು ಏಳುವುದು, ೩) ಕಾಯದ ದುರುಪಯೋಗ ಎಂದರೆ ಸಾಮಾಯಿಕ ಮಾಡುವ ಸಮಯದಲ್ಲಿ ಕೈಕಾಲುಗಳನ್ನು ಅಲ್ಲಾಡಿಸುವುದು, ೪) ಅನಾದರ ಎಂದರೆ ಸಾಮಾಯಿಕವನ್ನು ಆದರಪೂರ್ವಕವಾಗಿ ಮಾಡದಿರುವುದು ಅಥವಾ ನಿರರ್ಥಕವೆಂದು ತಿಳಿದುಕೊಂಡು ಹೇಗಾದರೂ ಮಾಡಿ ಪೂರ್ಣಮಾಡುವ ಇಚ್ಛೆ ಮಾಡುವುದು, ೫) ಸ್ಮೃತ್ಯನುಪಸ್ಥಾನ ಎಂದರೆ ಏಕಾಗ್ರತೆಯಾಗದ ಕಾರಣ ಪಾಠವನ್ನು ಮರೆತು ಹೋಗುವುದು. ಇವು ಸಾಮಾಯಿಕ ಶಿಕ್ಷಾವ್ರತದ ಐದು ಅತಿಚಾರಗಳಿವೆ. ಸಾಮಾಯಿಕದಲ್ಲಿ ಮನ, ವಚನ ಮತ್ತು ಕಾಯ ಈ ಮೂರರ ಏಕಾಗ್ರತೆಯ ಅತ್ಯಂತ ಅವಶ್ಯಕತೆಯಿದೆ. ಇವು ಮೂರನ್ನು ವಶದಲ್ಲಿಟ್ಟುಕೊಳ್ಳದ ಹೊರತು ಸಾಮಾಯಿಕವಾಗುವ ಸಾಧ್ಯತೆಯೇ ಇಲ್ಲ. ಆದುದರಿಂದ ಅವಶ್ಯವಾಗಿ ವಶದಲ್ಲಿಟ್ಟುಕೊಳ್ಳಬೇಕಾಗುವುದು.

ಈಗ ಪ್ರೋಷಧೋಪವಾಸ ಶಿಕ್ಷಾವ್ರತದ ಐದು ಅತಿಚಾರಗಳನ್ನು ಹೇಳುತ್ತಾರೆ, -

ಅನವೇಕ್ಷಿತಾಪ್ರಮಾರ್ಜಿತಮಾದಾನಂ ಸಂಸ್ತರಸ್ತಥೋತ್ಸರ್ಗಃ ।
ಸ್ಮೃತ್ಯನುಪಸ್ಥಾನಮನಾದರಶ್ಚ ಪಂಚೋಪವಾಸಸ್ಯ ॥೧೯೨॥

**ಅನ್ವಯಾರ್ಥ :- [ಅನವೇಕ್ಷಿತಾಪ್ರಮಾರ್ಜಿತಮಾದಾನಂ]** ನೋಡದ ಹೊರತಾಗಿ ಅಥವಾ ಶುದ್ಧ ಮಾಡದ ಹೊರತಾಗಿ ಗ್ರಹಣ ಮಾಡುವುದು. **[ಸಂಸ್ತರಃ]** ಚಾಪೆ ಮೊದಲಾದ ಹಾಸಿಗೆ ಹಾಕುವುದು **[ತಥಾ]** ಮತ್ತು **[ಉತ್ಸರ್ಗಃ]** ಮಲ-ಮೂತ್ರಗಳ ತ್ಯಾಗ ಮಾಡುವುದು, **[ಸ್ಮೃತ್ಯನುಪಸ್ಥಾನಮ್]** ಉಪವಾಸದ ವಿಧಿಯನ್ನು ಮರೆತು ಹೋಗುವುದು **[ಚ]** ಮತ್ತು **[ಅನಾದರಃ]** ಅನಾದರ ಇವು **[ಉಪವಾಸಸ್ಯ]** ಉಪವಾಸದ **[ಪಂಚ]** ಐದು ಅತಿಚಾರಗಳಿವೆ.

**ಟೀಕೆ :- ೧) 'ಅನವೇಕ್ಷಿತಾಪ್ರಮಾರ್ಜಿತಮಾದಾನಂ, ೨) ಅನವೇಕ್ಷಿತಾಪ್ರಮಾರ್ಜಿತ ಸಂಸ್ತರಃ, ೩) ಅನವೇಕ್ಷಿತಾಪ್ರಮಾರ್ಜಿತ ಉತ್ಸರ್ಗಃ, ೪) ಸ್ಮೃತ್ಯನುಪಸ್ಥಾನಮ್, ೫) ಅನಾದರಶ್ಚ ಇತಿ ಪಂಚ ಅತಿಚಾರಾಃ ಉಪವಾಸಸ್ಯ ಸಂತಿ' ।** - ೧) ನೋಡದ ಹೊರತಾಗಿ ಅಥವಾ ಕೋಮಲವಾದ ಉಪಕರಣಗಳಿಂದ ಒರೆಸದ ಹೊರತಾಗಿಪೂಜಾದಿಗಳ ಸಾಮಗ್ರಿ ಅಥವಾ ಯಾವುದೇ ವಸ್ತುವಿನ ಗ್ರಹಣ ಮಾಡುವುದು, ೨) ನೋಡದ ಹೊರತಾಗಿ ಸ್ವಚ್ಛ ಮಾಡದ ಹೊರತಾಗಿ ಕುಳಿತುಕೊಳ್ಳುವುದು, ಮಲಗಿಕೊಳ್ಳುವುದು ಅಥವಾ ಹಾಸಿಗೆ ಹಾಸುವುದು, ೩) ನೋಡದ ಹೊರತಾಗಿ ಸ್ವಚ್ಛ ಮಾಡದ ಭೂಮಿಯ ಮೇಲೆ ಮಲ-ಮೂತ್ರಗಳ ವಿಸರ್ಜನೆ ಮಾಡುವುದು, ೪) ಉಪವಾಸದಲ್ಲಿ ಏಕಾಗ್ರತೆಯಾಗದಿರುವುದು ಅಥವಾ ವಿಧಿ ಮರೆತುಹೋಗುವುದು ಮತ್ತು ೫) ತಪಸ್ಸು ಹಾಗೂ ಉಪವಾಸದ ವಿಧಿಯಲ್ಲಿ ಅನಾದರ (ಉದಾಸೀನತೆ) ಮಾಡುವುದು (ಅಥವಾ ಬೇಗ ಪೂರ್ಣವಾಗುವ ಆಕುಲತೆಯಿರುವುದು) ಇವು ಪ್ರೋಷಧೋಪವಾಸವ್ರತದ ಐದು ಅತಿಚಾರಗಳಿವೆ.

---

★ಹಾಲು-ತುಪ್ಪ ಮೊದಲಾದ ರಸಮಿಶ್ರಿತವಾದ ಕಾಮೋತ್ಪಾದಕ ಆಹಾರ.

ಈಗ ಭೋಗ-ಉಪಭೋಗದಪರಿಮಾಣ ಶಿಕ್ಷಾವ್ರತದ ಐದು ಅತಿಚಾರಗಳನ್ನು ಹೇಳುತ್ತಾರೆ, -

**ಆಹಾರೋ ಹಿ ಸಚಿತ್ತಃ ಸಚಿತ್ತಮಿಶ್ರ ಸಚಿತ್ತಸಂಬಂಧಃ ।**
**ದುಷ್ಪಕ್ವೋಽಭಿಷವೋಪಿ ಚ ಪಂಚಾಮೀ ಷಷ್ಠಶೀಲಸ್ಯ ॥೧೯೩॥**

**ಅನ್ವಯಾರ್ಥ ಃ-** **[ಹಿ]** ನಿಶ್ಚಯದಿಂದ **[ಸಚಿತ್ತಃ ಆಹಾರಃ]** ಸಚಿತ್ತ ಆಹಾರ, **[ಸಚಿತ್ತ ಮಿಶ್ರಃ]** ಸಚಿತ್ತ ಮಿಶ್ರ ಆಹಾರ, **[ಸಚಿತ್ತಸಂಬಂಧಃ]** ಸಚಿತ್ತಕ್ಕೆ ಸಂಬಂಧಿಸಿದ ಆಹಾರ, **[ದುಷ್ಪಕ್ವಃ]** ದುಷ್ಪಕ್ವ ಆಹಾರ **[ಚ ಅಪಿ]** ಮತ್ತು **[ಅಭಿಷವ ಆಹಾರ]** ಅಭಿಷವ★ ಆಹಾರ **[ಅಮೀ]** ಇವು **[ಷಷ್ಠಶೀಲಸ್ಯ)** ಆರನೆಯ ಶೀಲ ಎಂದರೆ ಭೋಗೋಪಭೋಗಪರಿಮಾಣ ವ್ರತದ **[ಪಂಚ]** ಐದು ಅತಿಚಾರಗಳಿವೆ.

**ಟೀಕೆ ಃ-** **'ಹಿ ಸಚಿತ್ತಃ ಆಹಾರಃ ಸಚಿತ್ತ ಮಿಶ್ರಃ ಆಹಾರಃ ಸಚಿತ್ತ ಸಂಬಂಧಃ ಆಹಾರಃ ಚ ದುಃಪಕ್ವಃ ಆಹಾರಃ ಅಭಿಷವಾಹಾರಃ ಇತಿ ಅಮೀ ಪಂಚ ಅತಿಚಾರಾಃ ಷಷ್ಠಶೀಲಸ್ಯ ಸಂತಿ ।'** - ೧) ನಿಶ್ಚಯದಿಂದಲೇ ಸಚಿತ್ತ-ಜೀವಸಹಿತ ಮಾಗದ ಹಸಿರು ವಸ್ತುವಿನ ಆಹಾರ ಮಾಡುವುದು, ೨) ಸಚಿತ್ತಾಚಿತ್ತದ ಮಿಶ್ರಣವುಳ್ಳ ವಸ್ತುವಿನ ಆಹಾರ ಮಾಡುವುದು, ೩) ಹಸಿರು-ಸಚಿತ್ತದಿಂದ ಆಚ್ಛಾದಿಸಿರುವ ವಸ್ತುವಿನ ಆಹಾರ ತೆಗೆದುಕೊಳ್ಳುವುದು ೪) ಅಗ್ನಿಯ ಮೇಲೆ ಒಳ್ಳೆಯ ರೀತಿಯಿಂದ ಪಕ್ವವಾಗಿರದಂಥ ವಸ್ತುವಿನ ಆಹಾರ ಮಾಡುವುದು ಎಂದರೆ ಹೆಚ್ಚು ಪಕ್ವವಾಗಿರುವುದು ಅಥವಾ ಸ್ವಲ್ಪ ಅಪಕ್ವ ಉಳಿದಿರುವುದು ಮತ್ತು ೫) ಗರಿಷ್ಠ ಎಂದರೆ ಕಾಮೋದ್ದೀಪಕ ಪುಷ್ಟಿಕಾರಕವಾದ ವಸ್ತುವಿನ ಆಹಾರ ಮಾಡುವುದು ಇವು ಐದು ಭೋಗೋಪಭೋಗಪರಿಮಾಣವ್ರತದ ಅತಿಚಾರಗಳಿವೆ.

**ಭಾವಾರ್ಥ ಃ-** ಒಂದು ವೇಳೆ ಈ ಭೋಗೋಪಭೋಗಪರಿಮಾಣ ಶಿಕ್ಷಾವ್ರತವನ್ನು ಪಾಲಿಸುವಂಥ ಶ್ರಾವಕನು ಇನ್ನೂ ಸಚಿತ್ತದ ತ್ಯಾಗಿಯಾಗಿರದಿದ್ದರೂ ಕೂಡ ಸಚಿತ್ತತ್ಯಾಗ ಪ್ರತಿಮೆಯನ್ನು ಪಾಲಿಸುವ ಅಭ್ಯಾಸದ ಸಲುವಾಗಿ ಮತ್ತು ಖಾದ್ಯಪದಾರ್ಥಗಳಲ್ಲಿರುವ ಅಧಿಕ ಲೋಲುಪತೆಯನ್ನು ನಿವಾರಿಸುವ ಸಲುವಾಗಿ ಅವನು ಈ ಅತಿಚಾರಗಳನ್ನು ನಿವಾರಿಸಬೇಕಾಗುವುದು.

ಈಗ ವೈಯಾವೃತ್ತ ಅತಿಥಿಸಂವಿಭಾಗದ ಐದು ಅತಿಚಾರಗಳನ್ನು ಹೇಳುತ್ತಾರೆ, -

**ಪರದಾತೃವ್ಯಪದೇಶಃ ಸಚಿತ್ತನಿಕ್ಷೇಪತತ್ಪಿಧಾನೇ ಚ ।**
**ಕಾಲಸ್ಯಾತಿಕ್ರಮಣಂ ಮಾತ್ಸರ್ಯಂ ಚೇತ್ಯತಿಥಿದಾನೇ ॥೧೯೪॥**

**ಅನ್ವಯಾರ್ಥ ಃ-** **[ಪರದಾತೃವ್ಯಪದೇಶಃ]** ಪರದಾತೃ ವ್ಯಪದೇಶ, **[ಸಚಿತ್ತನಿಕ್ಷೇಪತತ್ಪಿಧಾನೇ ಚ]** ಸಚಿತ್ತನಿಕ್ಷೇಪ ಮತ್ತು ಸಚಿತ್ತವಿಧಾನ. **[ಕಾಲಸ್ಯಾತಿಕ್ರಮಣಂ]** ಕಾಲದ ಅತಿಕ್ರಮಣ **[ಚ]** ಮತ್ತು **[ಮಾತ್ಸರ್ಯಂ]** ಮಾತ್ಸರ್ಯ **(ಇತಿ)** ಈ ಪ್ರಕಾರ **(ಅತಿಥಿದಾನೇ)** ಅತಿಥಿಸಂವಿಭಾಗವ್ರತದ ಐದು ಅತಿಚಾರಗಳಿವೆ.

**ಟೀಕೆ ಃ-** **'ಅತಿಥಿದಾನೇ ಪರದಾತೃವ್ಯಪದೇಶಃ ಅತಿಥಿದಾನೇ ಸಚಿತ್ತನಿಕ್ಷೇಪಃ ಅತಿಥಿದಾನೇ ಸಚಿತ್ತಪಿಧಾನಂ ಅತಿಥಿದಾನೇ ಕಾಲಸ್ಯ ಅತಿಕ್ರಮಣಂ ಚ ಅತಿಥಿದಾನೇ ಮಾತ್ಸರ್ಯಂ - ಇತಿ ಪಂಚ ಅತಿಚಾರಾಃ ವೈಯಾವೃತಸ್ಯ ಸಂತಿ !'** - ೧) ಮನೆಯ ಕಾರ್ಯವು ಅಧಿಕವಾಗಿರುವ ಕಾರಣ ತಮ್ಮ ಕೈಯಿಂದ ಆಹಾರ ಕೊಡದೆ ಬೇರೆ ಇನ್ನೊಬ್ಬರ ಕೈಯಿಂದ ಕೊಡಿಸುವುದು, ೨) ಆಹಾರದ ವಸ್ತುವನ್ನು ಕಮಲ ಪತ್ರ ಮೊದಲಾದ ಹಸಿರು ಎಲೆಗಳಲ್ಲಿ ಇಡುವುದು, ೩) ಆಹಾರದ ವಸ್ತುವನ್ನು ಮೇಲೆ ಹೇಳಿದ ಹಸಿರು ಎಲೆಗಳಿಂದ ಮುಚ್ಚಿಡುವುದು,

೪) ಮುನಿ ಮಹಾರಾಜರ ಆಹಾರ ಚರ್ಯದ ಸಮಯದಲ್ಲಿ ಮನೆಯೊಳಗೆ ದೊರಕದಿರುವುದು ಎಂದರೆ ಭೋಜನದ ಸಮಯದ ಉಲ್ಲಂಘನೆ ಮಾಡುವುದು ಮತ್ತು ೫) ದಾನ ಕೊಡುವ ಸಮಯದಲ್ಲಿ ಆದರ ಭಾವವಿಲ್ಲದಿರುವುದು, ಅಥವಾ ತಮ್ಮ ಮನೆಯಲ್ಲಿ ಮುನಿಮಹಾರಾಜರ ಸಲುವಾಗಿ ಆಹಾರದ ವಿಧಿಯು ದೊರಕುವ ಸಾಧ್ಯತೆಯಿಲ್ಲದಿರುವ ಕಾರಣದಿಂದ ಅಥವಾ ತಮ್ಮ ಮನೆಯೊಳಗೆ ಮುನಿರಾಜರು ಬಾರದಿರುವ ಕಾರಣದಿಂದ ಒಂದು ವೇಳೆ ಬೇರೊಬ್ಬ ಶ್ರಾವಕನ ಮನೆಯಲ್ಲಿ ಮುನಿರಾಜರ ಆಹಾರದಾನವಾದರೆ ಆ ಶ್ರಾವಕನ ಕುರಿತು ದ್ವೇಷ ಭಾವವನ್ನಿಡುವುದು - ಇವು ಐದು ಅತಿಥಿಸಂವಿಭಾಗ ಶಿಕ್ಷಾವ್ರತದ ಅತಿಚಾರಗಳಿವೆ.

ಈಗ ಸಲ್ಲೇಖನದ ಐದು ಅತಿಚಾರಗಳನ್ನು ಹೇಳುತ್ತಾರೆ, -

**ಜೀವಿತಮರಣಾಶಂಸೇ ಸುಹೃದನುರಾಗಃ ಸುಖಾನುಬಂಧಶ್ಚ ।**
**ಸನಿದಾನಃ ಪಂಚೈತೇ ಭವಂತಿ ಸಲ್ಲೇಖನಾಕಾಲೇ ।।೧೯೫।।**

**ಅನ್ವಯಾರ್ಥ ಃ- [ಜೀವಿತಮರಣಾಶಂಸೇ]** ಜೀವನದ ಅಭಿಲಾಷೆ ಮರಣದ ಅಭಿಲಾಷೆ, **[ಸುಹೃದನುರಾಗಃ]** ಸುಹೃದ ಎಂದರೆ ಮಿತ್ರರ ಕುರಿತು ಅನುರಾಗ, **[ಸುಖಾನುಬಂಧಃ]** ಸುಖದ ಅನುಬಂಧ **[ಚ]** ಮತ್ತು **[ಸನಿದಾನಃ]** ನಿದಾನ ಸಹಿತವಿರುವುದು **[ಏತೇ]** ಇವು **[ಸಲ್ಲೇಖನಾಕಾಲೇ]** ಸಮಾಧಿ ಮರಣದ ಸಮಯದಲ್ಲಿ **[ಪಂಚ]** ಐದು ಅತಿಚಾರಗಳು **[ಭವಂತಿ]** ಇರುತ್ತವೆ.

**ಟೀಕೆ ಃ- 'ಜೀವಿತಾಶಂಸಾ ಮರಣಾಶಂಸಾ ಸುಹೃದನುರಾಗಃ ಸುಖಾನುಬಂಧಃ ಚ ಸನಿದಾನಃ ಇತಿ ಏತೇ ಪಂಚ ಸಲ್ಲೇಖನಾಕಾಲೇ ಅತಿಚಾರಾಃ ಸಂತಿ !'** - ೧) ಸಲ್ಲೇಖನ ಧಾರಣ ಮಾಡಿದ ನಂತರ ಜೀವಂತವಿರುವ ಇಚ್ಛೆ ಮಾಡುವುದು, ಯಾವುದೇ ಪ್ರಕಾರದಿಂದ ಮರಣವಾಗದಿರಲೆಂದು ಇಚ್ಛೆ ಮಾಡುವುದು, ೨) ಸಲ್ಲೇಖನ ಧಾರಣ ಮಾಡಿದ ನಂತರ ರೋಗಗಳ ವೇದನೆಯು ಅಧಿಕವಾಗುತ್ತಿದ್ದರೆ ನನ್ನ ಮರಣವು ಶೀಘ್ರವಾಗಿ ಆಗಿ ಹೋದರೆ ಒಳ್ಳೆಯದೆಂದು ಇಚ್ಛೆ ಮಾಡುವುದು, ೩) ಇಂಥ ನನ್ನ ಮಿತ್ರರುಗಳು ತುಂಬ ಒಳ್ಳೆಯವರಿದ್ದರು ನಾನು ಅವರ ಜತೆಯಲ್ಲಿ ಕ್ರೀಡೆ ಮೊದಲಾದ ಕಾರ್ಯ ಮಾಡುತ್ತಿದ್ದೆನೆಂದು ಮೊದಲಿನ ಮಿತ್ರರುಗಳ ಸ್ಮರಣೆ ಮಾಡುವುದು, ೪) ಪೂರ್ವದಲ್ಲಿ ಭೋಗಿಸಿದ ಸುಖವನ್ನು - ಸಾತಾದ ಸಾಮಗ್ರಿಗಳನ್ನು ಸ್ಮರಣೆ ಮಾಡುವುದು ಮತ್ತು ಆ ಭೋಗವು ನನಗೆ ಯಾವಾಗ ಸಿಗುವುದೆಂದು 'ಚಿಂತನೆ' ಮಾಡುವುದು ಮತ್ತು ೫) ಭವಿಷ್ಯಕಾಲದಲ್ಲಿ ಒಳ್ಳೊಳ್ಳೆಯ ಭೋಗಗಳ ಪ್ರಾಪ್ತಿಯಾಗಲೆಂದು ಇಚ್ಛೆ ಮಾಡುವುದು ಇವು ಐದು ಸಲ್ಲೇಖನದ ಅತಿಚಾರಗಳಿವೆ.

---

★ ನಿಶ್ಚಯ ಸಮ್ಯಗ್ದರ್ಶನ - ಜ್ಞಾನಪೂರ್ವಕ ಮೊದಲಿನ ಎರಡು ಕಷಾಯ ಚೌಕಡಿಯ ಅಭಾವರೂಪ ಶುದ್ಧಭಾವರೂಪ (ಆಂಶಿಕ ವೀತರಾಗ ಸ್ವಾಶ್ರಯರೂಪ) ನಿಶ್ಚಯವ್ರತದ ಪಾಲನೆ ಮಾಡುವಂಥ ಜೀವನಿಗೆ ನಿಜವಾದ ಅಣುವ್ರತವಿರುತ್ತದೆ. ನಿಶ್ಚಯ ಸಮ್ಯಗ್ದರ್ಶನವಿಲ್ಲದಿದ್ದರೆ ಅವನ ವ್ರತ ತಪಗಳನ್ನು ಸರ್ವಜ್ಞದೇವರು ಬಾಲವ್ರತ ಎಂದರೆ ಅಜ್ಞಾನವ್ರತ ಮತ್ತು ಅಜ್ಞಾನ ತಪವೆಂದು ಹೇಳುತ್ತಾರೆ. ಹೀಗೆ ಸರ್ವತ್ರ ತಿಳಿದುಕೊಳ್ಳಬೇಕಾಗುವುದು.

★ಸಮ್ಯಕ್‌ತಪದ ಅರ್ಥ ಃ- ಶುದ್ಧೋಪಯೋಗರೂಪ ಮುನಿಧರ್ಮ ಅಥವಾ ನಿಜಪರಮಾತ್ಮನ ಆಶ್ರಯದಿಂದ ನಿಶ್ಚಯ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರರೂಪ ಶುದ್ಧಿಯಿಂದ ಶುಭಾಶುಭ ಇಚ್ಛೆಗಳ ನಿರೋಧಪೂರ್ವಕ ಆತ್ಮನಲ್ಲಿ ನಿರ್ಮಲ-ನಿರಾಕುಲ ಜ್ಞಾನ ಆನಂದದ ಅನುಭವದಿಂದ ಅಖಂಡಿತ ಪ್ರತಾಪವಂತನಾಗಿ ಇರುವುದು, ನಿಸ್ತರಂಗ ಚೈತನ್ಯ ರೂಪದಿಂದ ಶೋಭಿತವಾಗುವುದು ಅದು ತಪವಿದೆ. ಇಂಥ ನಿಶ್ಚಯ ತಪವು ಶ್ರಾವಕರಿಗೆ ಹಾಗೂ ಮುನಿಗಳಿಗೆ ಇರುತ್ತದೆ. ಆಗ ಬಾಹ್ಯದಲ್ಲಿ ಹನ್ನೆರಡು ಪ್ರಕಾರದ ತಪಗಳೊಳಗಿಂದ ಯಥಾಯೋಗ್ಯನಿಮಿತ್ತವಿರುತ್ತದೆ, ಅದರ ಜ್ಞಾನ ಮಾಡಿಸಿ ಕೊಡುವ ಸಲುವಾಗಿ ಅದನ್ನು ವ್ಯವಹಾರ ತಪವೆಂದು ಹೇಳಲಾಗುತ್ತದೆ. (ವಿಶೇಷರೂಪದಿಂದ ತಿಳಿದುಕೊಳ್ಳುವ ಸಲುವಾಗಿ ಮೋಕ್ಷಮಾರ್ಗಪ್ರಕಾಶಕದ ಏಳನೇ ಅಧ್ಯಾಯದಲ್ಲಿ 'ನಿರ್ಜರಾತತ್ತ್ವದ ಶ್ರದ್ಧೆಯ ಅಯಥಾರ್ಥತೆ'ಯನ್ನು ನೋಡುವುದು.)

**ಭಾವಾರ್ಥ :-** ಈ ಪ್ರಕಾರ ಒಂದು ಸಮ್ಯಗ್ದರ್ಶನ, ಐದು ಅಣುವ್ರತ, ಮೂರು ಗುಣವ್ರತ, ನಾಲ್ಕು ಶಿಕ್ಷಾವ್ರತ ಮತ್ತು ಒಂದು ಸಲ್ಲೇಖನ ಹೀಗೆ ಹದಿನಾಲ್ಕರ ಎಪ್ಪತ್ತು ಅತಿಚಾರಗಳ ವರ್ಣನೆ ಮಾಡಲಾಯಿತು. ಆದುದರಿಂದ ನೈಷ್ಠಿಕ ಶ್ರಾವಕನು ಇವೆಲ್ಲವುಗಳ ಪಾಲನೆಯನ್ನು ಎಲ್ಲಿಯವರೆಗೆ ಎಷ್ಟು ಸಂಭವಿಸುತ್ತವೆಯೋ ಅಷ್ಟನ್ನು ಯಥಾಶಕ್ತಿಯಾಗಿ ಅತಿಚಾರವಿಲ್ಲದೆ ಮಾಡಬೇಕಾಗುವುದು, ಆಗಲೇ ಮನುಷ್ಯ ಭವವು ದೊರಕಿರುವುದಕ್ಕೆ ಸಾರ್ಥಕತೆಯಿದೆ. ಮೇಲೆ ಹೇಳಿದ ಹದಿನಾಲ್ಕು ವ್ರತಗಳನ್ನು★ ಮೂರೂ ಪ್ರಕಾರದ ಶ್ರಾವಕರು ಪಾಲಿಸುತ್ತಾರೆ. ೧)ಪಾಕ್ಷಿಕ ಶ್ರಾವಕನು ಸಮ್ಯಗ್ದರ್ಶನದ ಧಾರಕನಿರುತ್ತಾನೆ, ಅವನು ಸಪ್ತ ವ್ಯಸನಗಳ ತ್ಯಾಗಿ ಮತ್ತು ಅಷ್ಟಮೂಲಗುಣಗಳ ಪಾಲಕನಿರುತ್ತಾನೆ. ೨) ನೈಷ್ಠಿಕ ಶ್ರಾವಕನು ಮೇಲಿನ ಮಾತುಗಳೊಡನೆ ಹನ್ನೆರಡು ವ್ರತಗಳ ಪಾಲನೆ ಮಾಡುತ್ತಾನೆ, ಈ ನೈಷ್ಠಿಕ ಅವಸ್ಥೆಯು ಜೀವನದ ಪರ್ಯಂತ ಇರುತ್ತದೆ. ೩) ಸಾಧಕ ಶ್ರಾವಕನು ಯಾವಾಗ ಮರಣದ ಸಮಯವು ಹತ್ತಿರ ಬರುತ್ತದೆ. ಆಗ ಆ ನೈಷ್ಠಿಕ ಶ್ರಾವಕನು ಸಾಧಕ ಅವಸ್ಥೆಗೆ ಪ್ರಾಪ್ತವಾಗುವ ಸಾಧ್ಯತೆಯಿದೆ. ಈ ಪ್ರಕಾರ ಯಾವ ಮನುಷ್ಯನು ಇವು ಮೂರು ಅವಸ್ಥೆಗಳನ್ನು ಪ್ರಾಪ್ತ ಮಾಡಿಕೊಳ್ಳುತ್ತಾನೆ ಅವನು ಅವಶ್ಯವಾಗಿ ಸ್ವರ್ಗವನ್ನು ಪ್ರಾಪ್ತ ಮಾಡಿಕೊಳ್ಳುವ ಸಾಧ್ಯತೆಯಿದೆ ಮತ್ತು ಪರಂಪರೆಯಿಂದ ಮೋಕ್ಷ ಪಡೆಯುತ್ತಾನೆ. ಇದೇ ಮೋಕ್ಷಪ್ರಾಪ್ತಿಯ ಕ್ರಮವಿದೆ.

ಈಗಅತಿಚಾರ ತ್ಯಾಗ ಮಾಡುವುದರ ಫಲವನ್ನು ಹೇಳುತ್ತಾರೆ, -

**ಇತ್ಯೇಕಾನತಿಚಾರಾನಮಾನಪಿ ಸಂಪ್ರತರ್ಕ್ಯ ಪರಿವರ್ಜ್ಯ ।**
**ಸಮ್ಯಕ್ತ್ವವ್ರತಶೀಲೈರಮಲೈಃ ಪುರುಷಾರ್ಥಸಿದ್ಧಿಮೇತ್ಯಚಿರಾತ್ ॥೧೯೬॥**

**ಅನ್ವಯಾರ್ಥ :-** **[ಇತಿ]** ಈ ಪ್ರಕಾರ ಗೃಹಸ್ಥನು **[ಏತಾನ್]** ಈ ಮೊದಲು ಹೇಳಿದ **[ಅತಿಚಾರಾನ್]** ಅತಿಚಾರ ಮತ್ತು **[ಅಪರಾನ್]** ಇತರ ದೋಷಗಳನ್ನುತ್ಪನ್ನ ಮಾಡುವಂಥ ಅತಿಕ್ರಮ, ವ್ಯತಿಕ್ರಮ ಮೊದಲಾದವುಗಳದ್ದು **[ಅಪಿ]** ಕೂಡ **[ಸಂಪ್ರತರ್ಕ್ಯ]** ವಿಚಾರ ಮಾಡಿ **[ಪರಿವರ್ಜ್ಯ]** ಬಿಟ್ಟುಕೊಟ್ಟು **[ಅಮಲೈಃ]** ನಿರ್ಮಲವಾದ **[ಸಮ್ಯಕ್ತ್ವವ್ರತಶೀಲೈಃ]** ಸಮ್ಯಕ್ತ್ವ, ವ್ರತ ಮತ್ತು ಶೀಲದ ಮೂಲಕ **[ಅಚಿರಾತ್]** ಅಲ್ಪಕಾಲದಲ್ಲಿಯೇ **[ಪುರುಷಾರ್ಥಸಿದ್ಧಿಮ್]** ಪುರುಷನ ಪ್ರಯೋಜನದ ಸಿದ್ಧಿಯನ್ನು **[ಏತಿ]** ಪಡೆಯುತ್ತಾನೆ.

**ಟೀಕೆ :-** **'ಇತಿ ಏತಾನ್ ಅತಿಚಾರಾನ್ ಅಪಿ ಅಪರಾನ್ ಸಂಪ್ರತರ್ಕ್ಯ ಚ ಪರಿವರ್ಜ್ಯ ಅಮಲೈಃ ಸಮ್ಯಕ್ತ್ವವ್ರತಶೀಲೈಃ ಅಚಿರಾತ್ ಪುರುಷಾರ್ಥಸಿದ್ಧಿಮ್ ಏತಿ ।'** - ಈ ಪ್ರಕಾರ ಈ ಅತಿಚಾರಗಳನ್ನು ಹಾಗೂ ಬೇರೆ ಯಾವ ದೋಷಗಳಿವೆ ಅವನ್ನು ಕೂಡ ಯಾವ ಪುರುಷನು ಒಳ್ಳೆಯ ಪ್ರಕಾರದಿಂದ ವಿಚಾರ ಮಾಡಿ ಬಿಟ್ಟುಕೊಡುತ್ತಾನೆ ಮತ್ತು ನಿರ್ದೋಷ ಸಮ್ಯಗ್ದರ್ಶನ, ಐದು ಅಣುವ್ರತ, ನಾಲ್ಕು ಶಿಕ್ಷಾವ್ರತ, ಮೂರು ಗುಣವ್ರತ ಈ ಎಲ್ಲ ವ್ರತಗಳ ಪಾಲನೆಯ ಮೂಲಕ ಜೀವನು ಶೀಘ್ರದಲ್ಲಿಯೇ ಮೋಕ್ಷವನ್ನು ಪ್ರಾಪ್ತ ಮಾಡಿಕೊಳ್ಳುವ ಸಾಧ್ಯತೆಯಿದೆ.

**ಭಾವಾರ್ಥ :-** ಪುರುಷವೆಂಬ ಹೆಸರು ಆತ್ಮನದಿದೆ ಮತ್ತು ಅರ್ಥವೆಂಬ ಹೆಸರು ಮೋಕ್ಷದ್ದಿದೆ. ಈ ಪ್ರಕಾರ (ಸ್ವಾಶ್ರಯ ನಿಶ್ಚಯಶುದ್ಧಿ ಸಹಿತ) ವ್ರತಗಳ ಪಾಲನೆಯಿಂದ ಸಮ್ಯಕ್‌ಚಾರಿತ್ರದ ಪ್ರಾಪ್ತಿಯಾಗುತ್ತದೆ. ಮತ್ತು ಸಮ್ಯಕ್‌ಚಾರಿತ್ರದ ಪ್ರಾಪ್ತಿಯಾಗುವುದರಿಂದ ಶೀಘ್ರದಲ್ಲಿಯೇ ಮೋಕ್ಷದ ಪ್ರಾಪ್ತಿಯಾಗಿ ಬಿಡುತ್ತದೆ. ತಪಸ್ಸು★ ಮಾಡಿದಲ್ಲದೆ ಸಮ್ಯಕ್‌ಚಾರಿತ್ರದ ಪ್ರಾಪ್ತಿಯಾಗುವುದಿಲ್ಲ.

## ಸಕಲಚಾರಿತ್ರವ್ಯಾಖ್ಯಾನ

ಈಗ ತಪದ ಸೇವನೆ ಮಾಡುವುದು ಯೋಗ್ಯವಿದೆಯೆಂದು ಹೇಳುತ್ತಾರೆ, -

**ಚಾರಿತ್ರಾಂತರ್ಭಾವಾತ್ ತಪೋಽಪಿ ಮೋಕ್ಷಾಂಗಮಾಗಮೇ ಗದಿತಮ್ ।**
**ಅನಿಗೂಹಿತನಿಜವೀರ್ಯೈಸ್ತದಪಿ ನಿಷೇವ್ಯಂ ಸಮಾಹಿತಸ್ವಾಂತೈಃ ॥೧೯೭॥**

**ಅನ್ವಯಾರ್ಥ ಃ-** **[ಆಗಮೇ]** ಜೈನ ಆಗಮದಲ್ಲಿ **[ಚಾರಿತ್ರಾಂತರ್ಭಾವಾತ್]** ಚಾರಿತ್ರದ ಅಂತರ್ವರ್ತಿ-ಯಿರುವುದರಿಂದ **[ತಪಃ]** ತಪವನ್ನು **[ಅಪಿ]** ಕೂಡ **[ಮೋಕ್ಷಾಂಗಮ್]** ಮೋಕ್ಷದ ಅಂಗವೆಂದು **[ಗದಿತಮ್]** ಹೇಳಲಾಗಿದೆ. ಆದುದರಿಂದ **[ಅನಿಗೂಹಿತನಿಜವೀರ್ಯೈಃ]** ತಮ್ಮ ಸಾಮರ್ಥ್ಯವನ್ನು ಬಚ್ಚಿಡದಂಥ ಹಾಗೂ **[ಸಮಾಹಿತಸ್ವಾಂತೈಃ]** ಸಾವಧಾನ ಚಿತ್ತವುಳ್ಳ ಪುರುಷರು **[ತದಪಿ ನಿಷೇವ್ಯಮ್]** ಆ ತಪದ ಸೇವನೆಯನ್ನು ಕೂಡ ಮಾಡುವುದು ಯೋಗ್ಯವಿದೆ.

**ಟೀಕೆ ಃ- 'ಚಾರಿತ್ರಾಂತರ್ಭಾವಾತ್ ತಪಃ ಅಪಿ ಆಗಮೇ ಮೋಕ್ಷಾಂಗಮ್ ಅತಃ ಏವ ಅನಿಗೂಹಿತನಿಜ- ವೀರ್ಯೈಃ ಸಮಾಹಿತಸ್ವಾಂತೈಃ ತದಪಿ ನಿಷೇವ್ಯಂ!'-** ಸಮ್ಯಕ್ ಚಾರಿತ್ರದಲ್ಲಿ ಸಮಾವಿಷ್ಟವಾಗಿ ಹೋಗುವ ಕಾರಣದಿಂದ ತಪವನ್ನು ಕೂಡ ಜೈನ ಸಿದ್ಧಾಂತದಲ್ಲಿ ಮೋಕ್ಷದ ಕಾರಣವೆಂದು ಹೇಳಲಾಗಿದೆ. ಆದುದರಿಂದ ತಮ್ಮ ಶಕ್ತಿಯನ್ನು ಬಚ್ಚಿಡದೆ ಮನಸ್ಸನ್ನು ವಶೀಭೂತ ಮಾಡಿಕೊಂಡು ಆ ತಪಸ್ಸಿನ ಆಚರಣೆಯನ್ನು ಕೂಡ ಮಾಡಬೇಕಾಗುವುದು.

**ಭಾವಾರ್ಥ ಃ-** ತಪಸ್ಸು ಇದು ಒಂದು ಪ್ರಕಾರದ ವ್ಯವಹಾರ ಚಾರಿತ್ರವಿದೆ. (ಭೂತಾರ್ಥದ ಆಶ್ರಯ ಮಾಡುವವರಿಗೆ) ವ್ಯವಹಾರ ಚಾರಿತ್ರದಿಂದ ನಿಶ್ಚಯಚಾರಿತ್ರದ - ಆ ಸಮ್ಯಕ್ ಚಾರಿತ್ರದ ಪ್ರಾಪ್ತಿಯಾಗುತ್ತದೆ ಎಂದರೆ ತಪಶ್ಚರಣವಿಲ್ಲದೆ ನಿಶ್ಚಯಚಾರಿತ್ರದ ಪ್ರಾಪ್ತಿಯಾಗುವುದೇ ಇಲ್ಲವೆಂಬ ನಿಯಮವಿರುವುದರಿಂದ ಮೋಕ್ಷದ ಅಭಿಲಾಷೆಯುಳ್ಳ ಪುರುಷರು ಅವಶ್ಯವಾಗಿ (ಸರ್ವಜ್ಞ ವೀತರಾಗ ಕಥಿತ ಸಮ್ಯಕ್) ತಪದ ಧಾರಣ ಮಾಡಬೇಕಾಗುವುದು.

। **ಟಿಪ್ಪಣಿ** -ಚಾರಿತ್ರವಂತೂ ವೀತರಾಗತೆಯೇ ಇದೆ ಮತ್ತು ಅದು ನಿಜ ಶುದ್ಧಾತ್ಮನ ಆಶ್ರಯದಿಂದಲೇ ಪ್ರಕಟವಾಗುತ್ತದೆ. ಆದರೆ ಅಲ್ಲಿ ಆ ಸಮಯದೊಳಗೆ ವ್ಯವಹಾರಾಚರಣೆಯು ಹೇಗಿರುತ್ತದೆಂಬುದನ್ನು ತಿಳಿಸಿಕೊಡುವ ಸಲುವಾಗಿ ಅದನ್ನು ವ್ಯವಹಾರನಯದಿಂದ ಕಾರಣವೆಂದು ಹೇಳಿದೆ. ರಾಗವಿದೆ ಅದಂತೂ ಬಾಧಕವೇ ಇದೆ, ಆದರೆ ಆಯಾಭೂಮಿಕೆಯ ಯೋಗ್ಯ ರಾಗವು ಅದು ಆ ಗುಣಸ್ಥಾನದ ನಾಶಕವಿಲ್ಲವೆಂಬಿಷ್ಟು ಸಂಬಂಧವನ್ನು ತಿಳಿಸಿಕೊಡುವ ಸಲುವಾಗಿ ಉಪಚಾರ - ವ್ಯವಹಾರ ನಿರೂಪಣದ ರೀತಿ ಇದು ಇದೆ. ರಾಗ ಮಾಡುತ್ತ ಮಾಡುತ್ತ ನಿಶ್ಚಯ ಚಾರಿತ್ರವಾಗುವ ಸಾಧ್ಯತೆಯಿಲ್ಲವೆಂಬುದನ್ನು ಮೊದಲಿನಿಂದಲೇ ನಿಸ್ಸಂದೇಹವಾಗಿ ಪ್ರತೀತಿ ಮಾಡಿಕೊಳ್ಳಬೇಕಾಗುವುದು. ।

ಈಗ ತಪಸ್ಸು ಬಾಹ್ಯ ಮತ್ತು ಅಂತರಂಗದ ಭೇದದಿಂದ ಎರಡು ಪ್ರಕಾರವಾಗಿದ್ದು ಅದರಲ್ಲಿ ಮೊದಲು ಬಾಹ್ಯ ತಪದ ಭೇದಗಳನ್ನು ತಿಳಿಸಿಕೊಡುತ್ತಾರೆ, -

**ಅನಶನಮವಮೌದರ್ಯಂ ವಿವಿಕ್ತಶಯ್ಯಾಸನಂ ರಸತ್ಯಾಗಃ ।**
**ಕಾಯಕ್ಲೇಶೋ ವೃತ್ತೇಃ ಸಂಖ್ಯಾ ಚ ನಿಷೇವ್ಯಮಿತಿ ತಪೋ ಬಾಹ್ಯಮ್ ॥೧೯೮॥**

**ಅನ್ವಯಾರ್ಥ ಃ-** **[ಅನಶನಂ]** ಅನಶನ, **[ಅವಮೌದರ್ಯಂ]** ಊನೋದರ **[ವಿವಿಕ್ತಶಯ್ಯಾಸನ]** ವಿವಿಕ್ತ ಶಯ್ಯಾಸನ, **[ರಸತ್ಯಾಗಃ]** ರಸದ ಪರಿತ್ಯಾಗ, **[ಕಾಯಕ್ಲೇಶಃ]** ಕಾಯಕ್ಲೇಶ **[ಚ]** ಮತ್ತು **[ವೃತ್ತೇಃ ಸಂಖ್ಯಾ]** ವೃತ್ತಿಯ ಸಂಖ್ಯೆ-**[ಇತಿ]** ಈ ಪ್ರಕಾರ **(ಬಾಹ್ಯತಪಃ]** ಬಾಹ್ಯ ತಪಸ್ಸಿನ **[ನಿಷೇವ್ಯಮ್]** ಸೇವನೆ ಮಾಡುವುದು ಯೋಗ್ಯವಿದೆ.

**ಟೀಕೆ ಃ- 'ಅನಶನಂ ಅವಮೌದರ್ಯಂ ವಿವಿಕ್ತಶಯ್ಯಾಸನಂ ರಸತ್ಯಾಗಃ ಕಾಯಕ್ಲೇಶಃ ಚ ವೃತ್ತೇಃ ಸಂಖ್ಯಾ ಬಾಹ್ಯಂ ತಪಃ ಇತಿ ನಿಷೇವ್ಯಮ್!'- ೧) ಅನಶನ ತಪ** - ಎಂದರೆ ಉಪವಾಸದ ಮೂಲಕ ನಾಲ್ಕು

ಪ್ರಕಾರದ ಆಹಾರದ ತ್ಯಾಗ ಮಾಡುವುದು - ಖಾದ್ಯ ಎಂದರೆ ತಿನ್ನುವ ವಸ್ತುಗಳು, ಸ್ವಾದ್ಯ ಎಂದರೆ ಎಲೆ, ಅಡಿಕೆ, ಏಲಕ್ಕಿ ಮೊದಲಾದ ಸ್ವಾದ ತೆಗೆದುಕೊಳ್ಳುವ ವಸ್ತುಗಳು, ಲೇಹ್ಯ ಎಂದರೆ ನೆಕ್ಕುವ ವಸ್ತುಗಳು, ಪೇಯ ಎಂದರೆ ಕುಡಿಯುವ ವಸ್ತುಗಳು - ಇವೆಲ್ಲವುಗಳ ತ್ಯಾಗ ಮಾಡುವುದು ಅನಶನವಿದೆ. ೨) **ಅವಮೌದರ್ಯ ತಪ** - ಎಂದರೆ ಏಕಾಶನ ಮಾಡುವುದು, ಹಸಿವೆಗಿಂತ ಕಡಿಮೆ ತಿನ್ನುವುದು, ಇವೆರಡೂ ಪ್ರಕಾರದ ತಪಸ್ಸಿನಿಂದ ಕರ್ಮಗಳ ನಿರ್ಜರೆಯಾಗುತ್ತದೆ, ಧ್ಯಾನದ ಪ್ರಾಪ್ತಿಯಾಗುತ್ತದೆ. ನಿದ್ರೆಯ ನಾಶವಾಗುತ್ತದೆ, ಸಂತೋಷವಾಗುತ್ತದೆ, ಸ್ವಾಧ್ಯಾಯ ಮಾಡುವಲ್ಲಿ ಮನಸ್ಸು ತೊಡಗುತ್ತದೆ ಮತ್ತು ದೋಷಗಳು ಕಡಿಮೆಯಾಗುತ್ತವೆ. ೩) **ವಿವಿಕ್ತ ಶಯ್ಯಾಸನ** - ವಿಷಯೀ ಜೀವರುಗಳ ಸಂಚಾರವಿಲ್ಲದಂಥ - ಬರಹೋಗುವಿಕೆಯಿಲ್ಲದಂಥ ಏಕಾಂತ ಸ್ಥಾನದಲ್ಲಿ ಇರುವುದು. (ಇದರಿಂದ ಬಾಧೆಯಿಲ್ಲದೆ ಬ್ರಹ್ಮಚರ್ಯದ ಪಾಲನೆಯಾಗುತ್ತದೆ ಮತ್ತು ಧ್ಯಾನಾಧ್ಯಯನಗಳು ಕೂಡ ಆಗುತ್ತವೆ). ೪) **ರಸತ್ಯಾಗ** - ಹಾಲು, ಮೊಸರು, ತುಪ್ಪ, ಸಕ್ಕರೆ, ಎಣ್ಣೆ ಈ ಐದು ರಸದ ತ್ಯಾಗ ಮತ್ತು ಲವಣ ಹಾಗೂ ಹಸಿರು ವಸ್ತುಗಳ ತ್ಯಾಗ ಕೂಡ ಮಾಡುವುದು ಅದು ರಸತ್ಯಾಗವೆನಿಸಿಕೊಳ್ಳುತ್ತದೆ. ಒಂದು ವೇಳೆ ರಸಗಳು ಐದೇ ಇದ್ದರು ಕೂಡ ಇಂದ್ರಿಯ ಸಂಯಮದ ಅಪೇಕ್ಷೆಯಿಂದ ಏಳರ ತ್ಯಾಗ ಮಾಡಬೇಕಾಗುವುದು. ಇವುಗಳತ್ಯಾಗದ ಕ್ರಮವು ಮೊದಲು ಲವಣ, ಹಸಿರು ವಸ್ತು, ಮಿಷ್ಠ ವಸ್ತು, ತುಪ್ಪ, ಹಾಲು, ಮೊಸರು ಮತ್ತು ಎಣ್ಣೆ ಈ ಪ್ರಕಾರವಿದೆ, ಅಲ್ಲದೆ ಇದನ್ನು ರವಿವಾರದ ದಿವಸದಿಂದ ಪ್ರಾರಂಭ ಮಾಡಬೇಕಾಗುವುದು. (ಇದರಲ್ಲಿ ಪರಿಣಾಮದ ಶುದ್ಧಿಗೆ ಅನುಸರಿಸಿ ಇಂದ್ರಿಯಗಳ ದಮನವಾಗುತ್ತದೆ, ನಿದ್ರೆಯು ಜಯಿಸಲ್ಪಡುತ್ತದೆ, ಆಲಸ್ಯವು ಹೊರಟು ಹೋಗುತ್ತದೆ, ಸ್ವಾಧ್ಯಾಯ ಸುಖದ ಸಿದ್ಧಿಯಾಗುತ್ತದೆ. ೫) **ಕಾಯಕ್ಲೇಶ** - ಶರೀರಕ್ಕೆ ಪರೀಷಹಗಳನ್ನು ಉತ್ಪನ್ನ ಮಾಡಿ ಸಹನೆ ಮಾಡುವುದು ಕಾಯಕ್ಲೇಶವಿದೆ. ಇದರ ಅಭ್ಯಾಸ ಮಾಡುವುದರಿಂದ ಅನೇಕ ಕಠೋರ ಉಪಸರ್ಗಗಳನ್ನು ಸಹನೆ ಮಾಡುವ ಶಕ್ತಿಯು ವೃದ್ಧಿಸುತ್ತದೆ, ಶರೀರದ ಜತೆಗಿರುವ ಮಮತೆಯ ಭಾವವು ಕಡಿಮೆಯಾಗುತ್ತದೆ ಮತ್ತು ರಾಗದ ಅಭಾವವಾಗುತ್ತದೆ. ೬) **ವೃತ್ತಿಸಂಖ್ಯಾ**- ವೃತ್ತಿಯ ಮರ್ಯಾದೆ ಮಾಡಿಕೊಳ್ಳುವುದು, ಹೇಗೆಂದರೆ ಇಂದು ನನಗೆ ಇಂಥ ಆಹಾರ ದೊರಕಿದರೆ ಮಾತ್ರ ಭೋಜನ ಮಾಡುವೆನು ಅಥವಾ ಭೋಜನದ ಸಲುವಾಗಿ ಇಂತಿಷ್ಟೇ ಮನೆಗಳಿಗೆ ಹೋಗುವೆನು ಇತ್ಯಾದಿ ಪ್ರಕಾರದಿಂದ ನಿಯಮ ಮಾಡಿಕೊಳ್ಳುವುದು. ಹೀಗೆ ಈ ಆರು ಭೇದರೂಪ ಬಾಹ್ಯತಪದ ನಿರೂಪಣೆ ಮಾಡಲಾಯಿತು.

ಅಂತರಂಗ ತಪದಲ್ಲಿ ಆರು ಭೇದಗಳಿದ್ದು ಈಗ ಅವುಗಳ ನಿರೂಪಣೆ ಮಾಡುತ್ತಾರೆ, -

ವಿನಯೋ ವೈಯಾವೃತ್ಯಂ ಪ್ರಾಯಶ್ಚಿತ್ತಂ ತಥೈವ ಚೋತ್ಸರ್ಗಃ ।
ಸ್ವಾಧ್ಯಾಯೋಽಥ ಧ್ಯಾನಂ ಭವತಿ ನಿಷೇವ್ಯಂ ತಪೋಽಂತರಂಗಮಿತಿ ॥೧೯೯॥

**ಅನ್ವಯಾರ್ಥ** :- **[ವಿನಯಃ]** ವಿನಯ, **[ವೈಯಾವೃತ್ಯಂ]** ವೈಯಾವೃತ್ಯ **[ಪ್ರಾಯಶ್ಚಿತ್ತಂ]** ಪ್ರಾಯಶ್ಚಿತ್ತ **[ತಥೈವ ಚ]** ಮತ್ತು ಇದೇ ಪ್ರಕಾರ **[ಉತ್ಸರ್ಗಃ]** ಉತ್ಸರ್ಗ, **[ಸ್ವಾಧ್ಯಾಯಃ]** ಸ್ವಾಧ್ಯಾಯ **[ಅಥ]** ಮತ್ತು **[ಧ್ಯಾನಂ]** ಧ್ಯಾನ **[ಇತಿ]** ಈ ರೀತಿಯಾಗಿ **[ಅಂತರಂಗಮ್]** ಅಂತರಂಗ **[ತಪಃ]** ತಪವು **[ನಿಷೇವ್ಯಂ]** ಸೇವನೆ ಮಾಡಲು ಯೋಗ್ಯ **[ಭವತಿ]** ಇದೆ.

**ಟೀಕೆ** :- **'ವಿನಯ ವೈಯಾವೃತ್ಯಂ ಪ್ರಾಯಶ್ಚಿತ್ತಂ ಚ ಉತ್ಸರ್ಗಃ ತಥೈವ ಸ್ವಾಧ್ಯಾಯಃ ಧ್ಯಾನಂ ಇತಿ ಅಂತರಂಗ ತಪಃ ನಿಷೇವ್ಯಮ್!'**- ೧) ವಿನಯ - (ವಿನಯ ಎಂದರೆ ಪೂಜ್ಯರಲ್ಲಿ ಆದರ ಭಾವವು ಪೂಜ್ಯತೆಯು ಸಮ್ಯಗ್ದರ್ಶನ, ಜ್ಞಾನ, ಚಾರಿತ್ರದಲ್ಲಿ ಕಂಡು ಬರುವುದರಿಂದ ಇವನ್ನು ಅತ್ಯಂತ ಆದರ ಭಾವದೊಡನೆ ಅಂಗೀಕಾರ ಮಾಡಬೇಕಾಗುವುದು ಇದುವೇ ವಾಸ್ತವಿಕ ವಿನಯವಿದೆ.) ವಿನಯವೆಂಬ ಹೆಸರಿನ ಅಂತರಂಗ ತಪವು ೧) ದರ್ಶನ ವಿನಯ, ೨) ಜ್ಞಾನವಿನಯ, ೩) ಚಾರಿತ್ರವಿನಯ ಮತ್ತು ೪) ಉಪಚಾರ ವಿನಯವೆಂದು ನಾಲ್ಕು ಪ್ರಕಾರದ್ದಿದೆ.

೧) **ದರ್ಶನವಿನಯ -** ಸಮ್ಯಗ್ದರ್ಶನ ಪ್ರಾಪ್ತಿಯ ಉಪಾಯ ಮಾಡುವುದು, ಸಮ್ಯಗ್ದರ್ಶನದ ಮಹಾತ್ಮ್ಯದ ಪ್ರಚಾರ ಮಾಡುವುದು, ಸಮ್ಯಕ್‌ದೃಷ್ಟಿ ಜೀವರುಗಳ ವೃದ್ಧಿಯಾಗಲೆಂದು ಪ್ರಯತ್ನ ಮಾಡುವುದು ಮತ್ತು ತಮ್ಮ ಸಮ್ಯಗ್ದರ್ಶನವನ್ನು ಯಾವಾಗಲೂ ನಿರ್ದೋಷವಾಗಿಡುವುದು ಇದು ದರ್ಶನ ವಿನಯವಿದೆ. ೨) ಜ್ಞಾನವಿನಯ - ಜ್ಞಾನದ ಪ್ರಾಪ್ತಿ ಮಾಡಿಕೊಳ್ಳುವುದು, ಜ್ಞಾನದ ಪ್ರಚಾರ ಮಾಡುವುದು, ಸ್ವಾಧ್ಯಾಯ ಮಂದಿರ, ವಿದ್ಯಾಲಯ ತೆರೆಯುವುದು, ವಿನಯದೊಡನೆ ಶಾಸ್ತ್ರಗಳ ವಿತರಣೆ ಮಾಡುವುದು, ಶಾಸ್ತ್ರ ಓದುವುದು ಇದೆಲ್ಲವೂ ಜ್ಞಾನವಿನಯವಿದೆ. ೩) ಚಾರಿತ್ರವಿನಯ - ಚಾರಿತ್ರ ಪ್ರಾಪ್ತ ಮಾಡಿಕೊಳ್ಳುವುದು, ಚಾರಿತ್ರದ ಉಪದೇಶ ಕೊಡುವುದು ಇತ್ಯಾದಿಯು ಚಾರಿತ್ರ ವಿನಯವಿದೆ. ೪) ಉಪಚಾರ ವಿನಯ -ರತ್ನತ್ರಯ ಎಂದರೆ ಸಮ್ಯಗ್ದರ್ಶನ - ಜ್ಞಾನ- ಚಾರಿತ್ರದ ಧಾರಕರಾದ ಧರ್ಮಾತ್ಮರುಗಳ ಹಾಗೂ ಅನ್ಯ ಧರ್ಮಾತ್ಮ ಬಂಧುಗಳ ಶಾರೀರಿಕ ವಿನಯ ಮಾಡುವುದು, ಅವರು ಬಂದ ಕೂಡಲೆ ಎದ್ದು ನಿಂತುಕೊಳ್ಳುವುದು, ನಮಸ್ಕಾರ ಮಾಡುವುದು, ಕೈ ಮುಗಿಯುವುದು, ಪಾದ ಸ್ಪರ್ಶ ಮಾಡುವುದು ಇತ್ಯಾದಿಗಳೆಲ್ಲವು ಉಪಚಾರ ವಿನಯವಿದೆ. ತೀರ್ಥ ಕ್ಷೇತ್ರಗಳ ವಂದನೆ ಮಾಡುವುದು ಕೂಡ ಉಪಚಾರವಿನಯವಿದೆ. ಪೂಜೆ-ಭಕ್ತಿ ಮಾಡುವುದು ಕೂಡ ಉಪಚಾರ ವಿನಯವಿದೆ, ರತ್ನತ್ರಯದ ಪ್ರಾಪ್ತಿ ಮಾಡಿಕೊಳ್ಳುವುದೇ ನಿಜವಾದ ವಿನಯವಿದೆ. ಈ ಪ್ರಕಾರ ವಿನಯ ತಪದ ವರ್ಣನೆ ಮಾಡಿತು. (ಇದರಿಂದ ಮಾನಕಷಾಯದ ಹಾನಿಯಾಗುತ್ತದೆ ಮತ್ತು ಜ್ಞಾನಾದಿಗುಣಗಳ ಪ್ರಾಪ್ತಿಯಾಗುತ್ತದೆ.)

೨) **ವೈಯಾವೃತ್ಯ :-** ತಮ್ಮ ಗುರು ಮೊದಲಾದಪೂಜ್ಯ ಪುರುಷರ ಆಚಾರ್ಯ, ಉಪಾಧ್ಯಾಯ, ಸರ್ವಸಾಧು ಆರ್ಯಿಕೆ, ಶ್ರಾವಕ, ಶ್ರಾವಿಕೆ, ತ್ಯಾಗೀ ಇತ್ಯಾದಿ ಧರ್ಮಾತ್ಮ ಸಜ್ಜನರುಗಳ ಸೇವೆ-ಸುಶ್ರೂಷೆ ಮಾಡುವುದು, ಎಂದೋ ಯಾವನೋ ಓರ್ವ ವ್ರತಧಾರಿಗೆ ಯಾವುದಾದರೂ ರೋಗವಾಗಿದ್ದರೆ ಶುದ್ಧ ಪ್ರಾಸುಕ ಔಷಧದ ಮೂಲಕ ಅವರ ರೋಗ ನಿವಾರಣೆ ಮಾಡುವುದು, ಅರಣ್ಯದಲ್ಲಿ ವಸತಿಕೆ, ಕುಟೀರ ಮೊದಲಾದುವನ್ನು ನಿರ್ಮಿಸುವುದು ಇದೆಲ್ಲವೂ ವೈಯಾವೃತ್ಯವೇ ಇದೆ.

೩) **ಪ್ರಾಯಶ್ಚಿತ್ತ :-** ಪ್ರಮಾದದಿಂದ ಯಾವುದಾದರೂ ದೋಷವು ತಗಲಿದ್ದರೆ ಅದನ್ನು ತಮ್ಮ ಗುರುಗಳ ಸಮ್ಮುಖದಲ್ಲಿ ಪ್ರಕಟ ಮಾಡುವುದು, ಅವರ ಆಜ್ಞೆಯ ಮೇರೆಗೆ ಆ ದೋಷವನ್ನು ಸ್ವೀಕಾರ ಮಾಡಿ, ಭವಿಷ್ಯದಲ್ಲಿ ಪುನಃ ಅದನ್ನು ಮಾಡದಿರುವ ಪ್ರತಿಜ್ಞೆ ಮಾಡುವುದು ಮತ್ತು ಅವರ ಮೂಲಕ ಆದೇಶಿಸಿದ ದಂಡನೆಯನ್ನು ಸ್ವೀಕಾರ ಮಾಡಿ ಅದರ ಅನುರೂಪವಾಗಿ ಆಚರಣೆ ಮಾಡುವುದು ಅದು ಪ್ರಾಯಶ್ಚಿತ್ತ ಅಂತರಂಗ ತಪವಿದೆ. ಇದರಿಂದ ವ್ರತ-ಚಾರಿತ್ರದ ಶುದ್ಧಿಯಾಗುತ್ತದೆ. (ಪರಿಣಾಮದಲ್ಲಿನ ಶಲ್ಯವು ನಾಶವಾಗುತ್ತದೆ ಮತ್ತು ಮಾನ ಮೊದಲಾದ ಕಷಾಯಗಳು ಕಡಿಮೆಯಾಗುತ್ತವೆ.) ಪ್ರಾಯಶ್ಚಿತ್ತ ತಪದಲ್ಲಿ ೧) ಆಲೋಚನೆ, ೨) ಪ್ರತಿಕ್ರಮಣ, ೩) ಆಲೋಚನೆ ಪ್ರತಿಕ್ರಮಣ, ೪) ವಿವೇಕ, ೫) ವ್ಯುತ್ಸರ್ಗ, ೬) ತಪಸ್ಸು, ೭) ಛೇದ, ೮) ಪರಿಹಾರ, ೯) ಉಪಸ್ಥಾಪನೆಯೆಂದು ಒಂಭತ್ತು ಭೇದಗಳಿವೆ.

೪) **ಉತ್ಸರ್ಗ :-** ಶರೀರದಲ್ಲಿನ ಮಮತೆಯ ತ್ಯಾಗ ಮಾಡುವುದು, ಅಂತರಂಗ ಪರಿಗ್ರಹಗಳಾದ ಕ್ರೋಧ ಮೊದಲಾದಕಷಾಯಗಳ ತ್ಯಾಗ ಮಾಡುವುದು, ಸಂಸಾರದ ವಸ್ತುವನ್ನು ತನ್ನದೆಂದು ಮನ್ನಿಸದಿರುವುದು ಇವೇ ಮೊದಲಾದ ಅಹಂಕಾರ - ಮಮಕಾರಗಳ ತ್ಯಾಗ ಮಾಡುವುದು. 'ಇದುವೇ ನಾನಿದ್ದೇನೆಂ'ದು ಯಾವುದನ್ನಾದರೂ ತನ್ನದೆಂದು ಮನ್ನಿಸುವುದು ಅಥವಾ 'ಇವನು ನನ್ನವನಿದ್ದಾನೆ. ನಾನು ಇವನವನಿದ್ದೇನೆಂ'ದು ಯಾರನ್ನಾದರೂ ಮನ್ನಿಸುವುದು - ಈ ಪ್ರಕಾರದ ಅಹಂಕಾರ ಹಾಗೂ ಮಮಕಾರ ಬುದ್ಧಿಯ (ಸ್ವಸನ್ಮುಖತೆಯ ರೂಪದ ಭೇದಜ್ಞಾನದಿಂದ) ತ್ಯಾಗ ಮಾಡುವುದು ಉತ್ಸರ್ಗನಾಮದ ಅಂತರಂಗ ತಪವಿದೆ.

೫) **ಸ್ವಾಧ್ಯಾಯ :-** (ಸ್ವಾಧ್ಯಾಯ ಎಂದರೆ ಜ್ಞಾನಭಾವನೆಯಲ್ಲಿ ಆಲಸ್ಯ ಮಾಡದಿರುವುದು)

ಪ್ರಥಮಾನುಯೋಗ, ಚರಣಾನುಯೋಗ, ಕರಣಾನುಯೋಗ ಮತ್ತು ದ್ರವ್ಯಾನುಯೋಗವೆಂಬ ಈ ನಾಲ್ಕು ಪ್ರಕಾರದ ಶಾಸ್ತ್ರಗಳ ಸ್ವಾಧ್ಯಾಯ ಮಾಡುವುದು. (ಎಲ್ಲಿ ಸಂಶಯವಿದೆ ಅಥವಾ ಶ್ರದ್ಧೆಯನ್ನು ಗಾಢ ಮಾಡುವುದಿದೆ ಅಲ್ಲಿ ಬೇರೆ ವಿಶೇಷ ಜ್ಞಾನಿಗಳನ್ನು ಕೇಳಬೇಕು. ಯಾವುದರ ಶ್ರದ್ಧೆಯು ದೃಢವಾಗಿದೆ ಅದನ್ನು ಮತ್ತೆ ಮತ್ತೆ ಮನಸ್ಸಿನಲ್ಲಿ ಅಭ್ಯಾಸ ಮಾಡುವುದು ಅಥವಾ ಚಿಂತನೆ ಮಾಡುವುದು, ಪಾಠವನ್ನು ಶುದ್ಧತೆಯೊಡನೆ ಪುನಃ ಪುನಃ ಓದುವುದು ಮತ್ತು ಧರ್ಮಾರ್ಥಿಗಳಿಗೆ - ಧರ್ಮದ ಲೋಭವುಳ್ಳವರಿಗೆ - ಭವ್ಯ ಜೀವರುಗಳಿಗೆ ಧರ್ಮೋಪದೇಶ ಕೊಡುವುದು) ಕಲಿಯುವುದು, ಕಲಿಸುವುದು, ವಿಚಾರ ಮಾಡುವುದು, ಮನನ ಮಾಡುವುದು ಇವೇ ಮೊದಲಾದವು ಸ್ವಾಧ್ಯಾಯವೆಂಬ ಹೆಸರಿನ ತಪವಿದೆ. ಇದರ ಮೂಲಕ ಸಮ್ಯಗ್ಜ್ಞಾನದ ಪ್ರಾಪ್ತಿಯಾಗುತ್ತದೆ, ಅನ್ಯ ಜೀವರುಗಳಿಗೆ ಸಮ್ಯಗ್ಜ್ಞಾನದ ಬೋಧವಾಗುತ್ತದೆ, ಪರಿಣಾಮವು ಸ್ಥಿರವಿರುತ್ತದೆ, ಸಂಸಾರದಿಂದ ವಿರಕ್ತಿಯಾಗುತ್ತದೆ, ಧರ್ಮದ ವೃದ್ಧಿಯಾಗುತ್ತದೆ ಇತ್ಯಾದಿ ಅನೇಕ ಗುಣಗಳು ಪ್ರಕಟವಾಗುತ್ತವೆ, ಆದುದರಿಂದ ಸ್ವಾಧ್ಯಾಯ ಮಾಡಬೇಕಾಗುತ್ತದೆ.

**೬) ಧ್ಯಾನ :-** ಏಕಾಗ್ರಚಿತ್ತರಾಗಿ ಸಮಸ್ತ ಆರಂಭ - ಪರಿಗ್ರಹಗಳಿಂದ ಮುಕ್ತರಾಗಿ, ಪಂಚಪರಮೇಷ್ಠಿ ಮತ್ತು ಆತ್ಮನ ಧ್ಯಾನ ಮಾಡುವುದಕ್ಕೆ ಧ್ಯಾನವೆಂದು ಹೇಳುತ್ತಾರೆ. ಅಲ್ಲಿ ಪ್ರಶಸ್ತರಾಗಪೂರ್ವಕವಾಗಿ ಅರಹಂತಾದಿಗಳ ಚಿಂತನೆಯಲ್ಲಿ ಪ್ರವರ್ತನ ಮಾಡುವುದು ಶುಭಧ್ಯಾನವಿದೆ ಮತ್ತು ಕೇವಲ ಶುದ್ಧಾತ್ಮನಲ್ಲಿ ಏಕಾಗ್ರನಾಗುವುದು ಶುದ್ಧಧ್ಯಾನವಿದೆ. ಆರ್ತಧ್ಯಾನ, ರೌದ್ರಧ್ಯಾನ, ಧರ್ಮಧ್ಯಾನ ಮತ್ತು ಶುಕ್ಲ ಧ್ಯಾನದ ಭೇದದಿಂದ ಧ್ಯಾನವು ನಾಲ್ಕು ಪ್ರಕಾರದ್ದಿದೆ. ಅವುಗಳಲ್ಲಿ ಆರ್ತಧ್ಯಾನ ಮತ್ತು ರೌದ್ರಧ್ಯಾನಗಳು ಸಂಸಾರದ ಕಾರಣವಿದ್ದರೆ ಧರ್ಮಧ್ಯಾನ ಮತ್ತು ಶುಕ್ಲಧ್ಯಾನಗಳು ಮೋಕ್ಷದ ಕಾರಣವಿವೆ.

ಧ್ಯಾನದಲ್ಲಿ ಸಾಮಾನ್ಯವಾಗಿ ಅಶುಭಧ್ಯಾನ, ಶುಭಧ್ಯಾನ ಮತ್ತು ಶುದ್ಧಧ್ಯಾನವೆಂದು ಮೂರು ಭೇದಗಳಾಗುತ್ತವೆ. ಇವುಗಳಲ್ಲಿ ಆರ್ತಧ್ಯಾನ ಮತ್ತು ರೌದ್ರಧ್ಯಾನ ಇವೆರಡು ಅಶುಭಧ್ಯಾನಗಳಿವೆ. ಧರ್ಮಧ್ಯಾನವು ಶುದ್ಧತೆಯುಕ್ತ ಶುಭಧ್ಯಾನವಿದೆ ಮತ್ತು ಶುಕ್ಲಧ್ಯಾನವು ಶುದ್ಧಧ್ಯಾನವಿದೆ. ಆದುದರಿಂದ ಮೋಕ್ಷಾರ್ಥಿಯಾದ ಜೀವರುಗಳು ಧರ್ಮಧ್ಯಾನ ಮತ್ತು ಶುಕ್ಲಧ್ಯಾನವನ್ನು ಅವಶ್ಯವಾಗಿ ಸ್ವೀಕರಿಸಬೇಕಾಗುವುದು. ಧ್ಯಾನದ ಅವಲಂಬನರೂಪದಿಂದ ಪಿಂಡಸ್ಥ, ಪದಸ್ಥ, ರೂಪಸ್ಥ ಮತ್ತು ರೂಪಾತೀತವೆಂದು ನಾಲ್ಕು ಭೇದಗಳಿವೆ. ಇವುಗಳ ವಿಶೇಷ ವರ್ಣನೆಯನ್ನು ಜ್ಞಾನಾರ್ಣವ ಗ್ರಂಥದಿಂದ ತಿಳಿದುಕೊಳ್ಳಬೇಕಾಗುವುದು. ಇಲ್ಲಿ ಹೇಳುವುದರಿಂದ ತುಂಬ ವಿಸ್ತಾರವಾಗುವುದು.

**ಭಾವಾರ್ಥ :-** ಧ್ಯಾನ ತಪದಿಂದ ಚಾರಿತ್ರಭಾವವು ಸಂಪೂರ್ಣತೆಗೆ ಪ್ರಾಪ್ತವಾಗುತ್ತದೆ, ಮನಸ್ಸು ವಶವರ್ತಿಯಾಗುತ್ತದೆ, ಅನಾಕುಲತೆಯಾಗುವುದರಿಂದ ಪರಮಾನಂದವಾಗುತ್ತದೆ, ಈ ಪ್ರಕಾರ ಆರು ಭೇದಯುಕ್ತ ಅಭ್ಯಂತರ ತಪದ ಸೇವನೆ ಮಾಡುವುದು ಯೋಗ್ಯವಿದೆ. ಈ ತಪಸ್ಸು ಮನಸ್ಸಿನ ಆಧೀನವಿರುವುದರಿಂದ ಇದನ್ನು ಅಂತರಂಗ ತಪವೆಂದು ಹೇಳುತ್ತಾರೆ. ಆದುದರಿಂದ ನಿರಂತರವಾಗಿ ಇದರ ಸೇವನೆ ಮಾಡುವುದು ಯೋಗ್ಯವಿದೆ. ಇಲ್ಲಿ ಬಾಹ್ಯತಪದಲ್ಲಿ ಮತ್ತು ಅಂತರಂಗ ತಪದಲ್ಲಿ ಏನು ಅಂತರವಿದೆಯೆಂಬ ಮಾತನ್ನು ತಿಳಿದುಕೊಳ್ಳುವುದು ಅತ್ಯಾವಶ್ಯಕವಿದೆ. ಬಾಹ್ಯ ತಪದಲ್ಲಿ ಕೇವಲ ಬಾಹ್ಯ ಪದಾರ್ಥ ಹಾಗೂ ಶರೀರದ ಕ್ರಿಯೆಯೇ ಮುಖ್ಯ ಕಾರಣವಿರುತ್ತದೆ ಮತ್ತು ಅಂತರಂಗ ತಪದಲ್ಲಿ ಆತ್ಮೀಯಭಾವ ಹಾಗೂ ಮನಸ್ಸಿನ ಅವಲಂಬನೆಯೇ ಮುಖ್ಯ ಕಾರಣ ಸಂಭವಿಸುತ್ತದೆ. ಯಾವ ಪ್ರಕಾರ ಅಗ್ನಿಯು ಚಿನ್ನವನ್ನು ಶುದ್ಧ ಮಾಡುತ್ತದೆ ಅದೇ ಪ್ರಕಾರ ಇವೆರಡೂ ಪ್ರಕಾರದ ತಪಗಳು ಆತ್ಮನನ್ನು ಶುದ್ಧ ಮಾಡುತ್ತವೆ. ಏಕೆಂದರೆ ತಪವಿಲ್ಲದೆ ಚಾರಿತ್ರವಿರುವುದಿಲ್ಲ ಮತ್ತು ಚಾರಿತ್ರವಿಲ್ಲದೆ ಕರ್ಮಗಳ ನಿರ್ಜರೆಯಾಗುವುದಿಲ್ಲ. ಆದುದರಿಂದ ಎರಡೂ ಪ್ರಕಾರದ ತಪಗಳ ಆಚರಣೆಯನ್ನು ಅವಶ್ಯವಾಗಿ ಮಾಡಬೇಕಾಗುವುದು. ಇಲ್ಲಿಯವರೆಗೆ ಗೃಹಸ್ಥರ ವ್ರತಗಳ ವರ್ಣನೆ ಮಾಡಲಾಯಿತು. ಅನಂತರ ಶ್ರೀ

ಅಮೃತಚಂದ್ರಾಚಾರ್ಯದೇವರು ಮುನಿಗಳ ಚಾರಿತ್ರದ ವರ್ಣನೆ ಮಾಡುತ್ತಾರೆ. ಮುನಿ ಪದವನ್ನು ಧಾರಣ ಮಾಡದ ಹೊರತಾಗಿ ಮೋಕ್ಷದ ಪ್ರಾಪ್ತಿಯು ಎಂದೂ ಆಗುವುದಿಲ್ಲ. ಆದುದರಿಂದ ಮೋಕ್ಷಾರ್ಥಿಯಾದ ಭವ್ಯಾತ್ಮರುಗಳು ಎಲ್ಲಿಯವರೆಗೆ ಸಂಭವಿಸುವ ಸಾಧ್ಯತೆಯಿದೆ ಅಲ್ಲಿಯವರೆಗೆ ಸಮಸ್ತ ಆರಂಭ-ಪರಿಗ್ರಹದ ತ್ಯಾಗ ಮಾಡಿ ಮುನಿಪದದ ಧಾರಣ ಮಾಡಬೇಕು. ಅಷ್ಟಕರ್ಮಗಳನ್ನು ಕ್ಷಯ ಮಾಡಿ ಮೋಕ್ಷಲಕ್ಷ್ಮಿಯ ಪ್ರಾಪ್ತಿಯನ್ನು ಮಾಡಿಕೊಳ್ಳಬೇಕಾಗುವುದು.

ಈಗ ಮುನಿವ್ರತ ಧಾರಣಮಾಡುವ ಉಪದೇಶ ಕೊಡುತ್ತಾರೆ, -

**ಜಿನಪುಂಗವಪ್ರವಚನೇ ಮುನೀಶ್ವರಾಣಾಂ ಯದುಕ್ತಮಾಚರಣಮ್ ।**
**ಸುನಿರೂಪ್ಯ ನಿಜಾಂ ಪದವೀಂ ಶಕ್ತಿಂ ಚ ನಿಷೇವ್ಯಮೇತದಪಿ ॥೨೦೦॥**

**ಅನ್ವಯಾರ್ಥ :-** **[ಜಿನಪುಂಗವಪ್ರವಚನೇ]** ಜಿನ ಭಗವಂತರ ಸಿದ್ಧಾಂತದಲ್ಲಿ **[ಮುನೀಶ್ವರಾಣಾಮ್]** ಮುನೀಶ್ವರರ ಎಂದರೆ ಸಕಲವ್ರತಧಾರಿಗಳ **[ಯತ್]** ಯಾವ **[ಆಚರಣಮ್]** ಆಚರಣೆಯನ್ನು **[ಉಕ್ತಮ್]** ಹೇಳಲಾಗಿದೆ, **[ಏತತ್]** ಅದನ್ನು **[ಅಪಿ]** ಕೂಡ ಗೃಹಸ್ಥರು **[ನಿಜಾಂ]** ತಮ್ಮ **[ಪದವೀ]** ಪದವಿ **[ಚ]** ಮತ್ತು **[ಶಕ್ತಿಂ]** ಶಕ್ತಿಯನ್ನು **[ಸುನಿರೂಪ್ಯ]** ಒಳ್ಳೆಯ ರೀತಿಯಿಂದ ವಿಚಾರಮಾಡಿ **[ನಿಷೇವ್ಯಮ್]** ಸೇವನೆ ಮಾಡುವುದು ಯೋಗ್ಯವಿದೆ.

**ಟೀಕೆ :-** **'ಜಿನಪುಂಗವಪ್ರವಚನೇ ಮುನೀಶ್ವರಾಣಾಂ ಯತ್ ಆಚರಣಂ ಉಕ್ತಂ ಏತತ್ ಅಪಿ ನಿಜಾಂ ಪದವೀಂ ಸುನಿರೂಪ್ಯ ಶಕ್ತಿಂ ಚ ಸುನಿರೂಪ್ಯ ನಿಷೇವ್ಯಮ್।'**- ಅರಹಂತ ಭಗವಂತರು ಹಾಗೂ ಗಣಧರ ಮೊದಲಾದವರು ಹೇಳಿದ ಜಿನ ಶಾಸ್ತ್ರಗಳಲ್ಲಿ ಆ ಮುನಿ-ಮಹಾತ್ಮರುಗಳ ಸರ್ವದೇಶ ತ್ಯಾಗರೂಪದ ಆಚರಣೆಯನ್ನು ಹೇಳಲಾಗಿದೆ ಆ ಆಚರಣೆಯನ್ನು ಗೃಹಸ್ಥರು ತಮ್ಮ ಪದವಿ, ಯೋಗ್ಯತೆ ಮತ್ತು ತಮ್ಮ ಶಕ್ತಿಯನ್ನು ನೋಡಿಕೊಂಡು ಅವಶ್ಯವಾಗಿ ಮಾಡಬೇಕಾಗುವುದು.

**ಭಾವಾರ್ಥ :-** (ಯಾವ ಪ್ರಕಾರ ಮುನಿರಾಜರು ಸರ್ವದೇಶ ಮೋಕ್ಷಮಾರ್ಗಕ್ಕೆ ಪ್ರಾಪ್ತರಾಗಿದ್ದಾರೆ ಅದೇ ಪ್ರಕಾರ ಶ್ರಾವಕರು ಕೂಡ ಮೋಕ್ಷಮಾರ್ಗದಲ್ಲಿ ಏಕದೇಶ ಪ್ರವರ್ತನೆ ಮಾಡುತ್ತಾರೆ. ಆದುದರಿಂದ ಶಾಸ್ತ್ರದಲ್ಲಿ ಮುನಿಗಳ ಆಚರಣೆಯನ್ನು - ಕ್ರಿಯಾ ಕಾಂಡವನ್ನು ಹೇಗೆ ಹೇಗೆ ಹೇಳಲಾಗಿದೆ ಹಾಗೆಯೇ ಶ್ರಾವಕರು ಕೂಡ ಅಂಗೀಕಾರ ಮಾಡಬೇಕಾಗುವುದು ; ಆದರೆ ತಮ್ಮ ಪದವೀ ಮತ್ತು ಶಕ್ತಿಯ ವಿಚಾರ ಮಾಡಿ, ಎಂಥ ಪ್ರತಿಮೆಯ ಧಾರಕರಿರುವಿರಿ ಅದಕ್ಕನುಸಾರವಾಗಿಯೇ ಯಥಾಯೋಗ್ಯ ಆಚರಣೆ ಮಾಡುವುದು ಯೋಗ್ಯವಿದೆ.) ತಮಗೆ ಎಲ್ಲಿಯವರೆಗೆ ಆಗುವ ಸಾಧ್ಯತೆಯಿದೆ ಅಲ್ಲಿಯವರೆಗೆ ಪ್ರತಿಯೊಬ್ಬ ಆತ್ಮ ಕಲ್ಯಾಣಾರ್ಥಿಯು ಮುನಿಪದವನ್ನು ಸ್ವೀಕಾರ ಮಾಡಿ ತಮ್ಮ ಆತ್ಮನ ಕಲ್ಯಾಣ ಮಾಡಿಕೊಳ್ಳಬೇಕಾಗುವುದು. ಒಂದು ವೇಳೆ ಅದು ಯಾವುದೇ ಪ್ರಕಾರ ಪೂರ್ಣರೂಪದಿಂದ ಸರ್ವವ್ರತದ ಪಾಲನೆ ಮಾಡುವ ಸಾಧ್ಯತೆಯಿಲ್ಲದಿದ್ದರೆ ಮೊದಲು ಅಣುವ್ರತ ಪಾಲನೆ ಮಾಡಬೇಕು ಅನಂತರ ಮಹಾವ್ರತ ಧಾರಣ ಮಾಡಬೇಕಾಗುವುದು.

ಈಗ ಮುನೀಶ್ವರರುಗಳ ಆಚರಣೆಯನ್ನು ಶ್ರಾವಕರಿಗೂ ಕೂಡ ಯಥಾಯೋಗ್ಯ ಅಂಗೀಕಾರ ಮಾಡುವ ಸಲುವಾಗಿ ಹೇಳಿದೆ ಅದರ ವರ್ಣನೆ ಮಾಡುತ್ತಾರೆ, ಮೊದಲು ಆರು ಆವಶ್ಯಕಗಳ ವರ್ಣನೆ ಮಾಡುತ್ತಾರೆ,-

**ಇದಮಾವಶ್ಯಕಷಟ್ಕಂ ಸಮತಾಸ್ತವವಂದನಾಪ್ರತಿಕ್ರಮಣಮ್ ।**
**ಪ್ರತ್ಯಾಖ್ಯಾನಂ ವಪುಷೋ ವ್ಯುತ್ಸರ್ಗಶ್ಚೇತಿ ಕರ್ತವ್ಯಮ್ ॥೨೦೧॥**

**ಅನ್ವಯಾರ್ಥ :-** **[ಸಮತಾಸ್ತವವಂದನಾಪ್ರತಿಕ್ರಮಣಮ್]** ಸಮತೆ, ಸ್ತವನ, ವಂದನೆ, ಪ್ರತಿಕಮಣ

**[ಪ್ರತ್ಯಾಖ್ಯಾನಂ]** ಪ್ರತ್ಯಾಖ್ಯಾನ **[ಚ]** ಮತ್ತು **[ವಪುಷೋವ್ಯುತ್ಸರ್ಗಃ]** ಕಾಯೋತ್ಸರ್ಗ - **[ಇತಿ]** ಈ ಪ್ರಕಾರ **[ಇದಮ್]** ಈ **[ಆವಶ್ಯಕಷಟ್ಕಂ]** ಆರು ಆವಶ್ಯಕಗಳನ್ನು **[ಕರ್ತವ್ಯಮ್]** ಮಾಡಬೇಕಾಗುವುದು.

**ಟೀಕೆ ಃ- 'ಸಮತಾ ಸ್ತವ ವಂದನಾ ಪ್ರತಿಕ್ರಮಣಂ ಪ್ರತ್ಯಾಖ್ಯಾನಂ ವಪುಷೋ ವ್ಯುತ್ಸರ್ಗಃ ಇತಿ ಇದಂ ಆವಶ್ಯಕ ಷಟ್ಕವ್ ।'**

೧) **ಸಮತೆ -** ಸಮಸ್ತ ಜೀವರುಗಳ ಮೇಲೆ ಸಮತಾಭಾವವನ್ನಿಡುವುದು (ಎಂದರೆ ಲಾಭ-ಅಲಾಭ, ಸುಖ-ದುಃಖ, ಜೀವನ-ಮರಣದಲ್ಲಿ ಹರ್ಷ-ವಿಷಾದ ಮಾಡದೆ ಸಮಭಾವವಿಡುವುದು) ಅಥವಾ ಸಾಮಾಯಿಕ ಮಾಡುವುದು.

ಜೀವಗಳೆಲ್ಲವು ಜ್ಞಾನಮಯ ಇವೆಯೆಂಬಾ ಸಮಭಾವವನು
ಈ ವಿಧಪೇಳ್ವರು ಜಿನವರರು ನಿಜದಿಂ ತಿಳಿ ಅದು ಸಾಮಯಿಕ ॥

- ಯೋಗಸಾರ ಗಾಥೆ ೯೯

೨) **ಸ್ತವ -** ಶ್ರೀಭಗವಾನ ಅರಹಂತದೇವ-ತೀರ್ಥಂಕರ ಭಗವಂತರ ಗುಣಗಳ ಕೀರ್ತನೆ ಮಾಡುವುದು ಎಂದರೆ ಸ್ತುತಿ ಮಾಡುವುದು. ಈ ಸ್ತವವು ವ್ಯವಹಾರಸ್ತವ ಮತ್ತು ನಿಶ್ಚಯಸ್ತವದ ಭೇದದಿಂದ ಎರಡು ಪ್ರಕಾರದ್ದಿದೆ.

೩) **ವಂದನೆ -** ಪಂಚ ಪರಮೇಷ್ಠಿಗಳಿಗೆ ಪ್ರತ್ಯಕ್ಷ ಅಥವಾ ಪರೋಕ್ಷ ರೂಪದಿಂದ ಸಾಷ್ಟಾಂಗ ನಮಸ್ಕಾರ ಮಾಡುವುದು.

೪) **ಪ್ರತಿಕ್ರಮಣ -** ತಾನು ಮಾಡಿರುವ ದೋಷಗಳ ಪಶ್ಚಾತ್ತಾಪ ಮಾಡುವುದು ಎಂದರೆ ತಮ್ಮಿಂದ ಯಾವುದಾದರೂ ದೋಷ ಅಥವಾ ತಪ್ಪು ಆಗಿ ಹೋಗಿದ್ದರೆ ಅದನ್ನು ತಮ್ಮ ಗುರುಗಳ ಎದುರಿಗೆ ಪ್ರಕಟ ಮಾಡಿ ಆ ದೋಷವನ್ನು ಸ್ವೀಕಾರ ಮಾಡುವುದೇ ಪ್ರತಿಕ್ರಮಣವಿದೆ.

೫) **ಪ್ರತ್ಯಾಖ್ಯಾನ -** (ಭಾವಿ ಆಸ್ರವದ ನಿರೋಧ) ಯಾರು ರತ್ನತ್ರಯದಲ್ಲಿ ವಿಘ್ನವನ್ನುತ್ಪನ್ನ ಮಾಡುವಂಥವರಿದ್ದಾರೆ ಅವರನ್ನು ಮನ, ವಚನ ಹಾಗೂ ಕಾಯದಿಂದ ತಡೆಯುವುದು ಮತ್ತು ಅವರ ತ್ಯಾಗ ಮಾಡುವುದನ್ನೇ ಪ್ರತ್ಯಾಖ್ಯಾನವೆಂದು ಹೇಳುತ್ತಾರೆ. ಈ ಪ್ರತ್ಯಾಖ್ಯಾನವು ೧) ಅಖಂಡಿತ, ೨)ಸಾಕಾರ, ೩) ನಿರಾಕಾರ, ೪) ಪರಿಮಾಣ, ೫) ಇತರತ್, ೬) ವರ್ತನೀಪಾತ, ೭) ಸಹೇತುಕ ಮೊದಲಾದ ಭೇದದಿಂದ ಹತ್ತು ಪ್ರಕಾರದ್ದಿದೆ.

೬) **ವ್ಯುತ್ಸರ್ಗ -** ಶರೀರದ ಮಮತೆಯನ್ನು ಬಿಟ್ಟುಕೊಟ್ಟು ವಿಶೇಷ ಪ್ರಕಾರದ ಆಸನದೊಡನೆ ಧ್ಯಾನ ಮಾಡುವುದು ಇದು ವ್ಯುತ್ಸರ್ಗನಾಮದ ಆವಶ್ಯಕವಿದೆ.

**ಭಾವಾರ್ಥ ಃ-** ಈ ಪ್ರಕಾರ ಈ ಆರು ಆವಶ್ಯಕಗಳ ವರ್ಣನೆ ಮಾಡಲಾಯಿತು. ಮುನಿ ಹಾಗೂ ಶ್ರಾವಕರೀರ್ವರು ಇವುಗಳ ಪಾಲನೆಯನ್ನು ದಿನ ನಿತ್ಯವೂ ಅವಶ್ಯವಾಗಿ ಮಾಡಬೇಕಾಗಿರುವುದರಿಂದ ಇದನ್ನು ಆವಶ್ಯಕವೆಂದು ಹೇಳಲಾಗಿದೆ. ಆದುದರಿಂದ ಮುನಿವರರು ಅವುಗಳ ಪಾಲನೆಯನ್ನು ಸರ್ವದೇಶ ಮಾಡಬೇಕಾಗುವುದು ಮತ್ತು ಶ್ರಾವಕರು ತಮ್ಮ ಯೋಗ್ಯತೆಗೆ ಅನುಸರಿಸಿ ಏಕದೇಶ ಮಾಡಬೇಕಾಗುವುದು.

ಈಗ ಮೂರು ಗುಪ್ತಿಗಳ ವರ್ಣನೆ ಮಾಡುತ್ತಾರೆ, -

**ಸಮ್ಯಗ್ದಂಡೋ ವಪುಷಃ ಸಮ್ಯಗ್ದಂಡಸ್ತಥಾ ಚ ವಚನಸ್ಯ ।**
**ಮನಸಃ ಸಮ್ಯಗ್ದಂಡೋ ಗುಪ್ತೀನಾಂ ತ್ರಿತಯಮವಗಮ್ಯಮ್ ॥೨೦೨॥**

**ಅನ್ವಯಾರ್ಥ ಃ- [ವಪುಷಃ]** ಶರೀರವನ್ನು **[ಸಮ್ಯಗ್ದಂಡಃ]** ಒಳ್ಳೆಯ ಪ್ರಕಾರ ಶಾಸ್ತ್ರೋಕ್ತ ವಿಧಿಯಿಂದ

ವಶಪಡಿಸಿಕೊಳ್ಳುವುದು, **[ತಥಾ]** ಹಾಗೂ **[ವಚನಸ್ಯ]** ವಚನವನ್ನು **[ಸಮ್ಯಗ್ದಂಡಃ]** ಸರಿಯಾದ ರೀತಿಯಿಂದ ಅವರೋಧನ ಮಾಡುವುದು **[ಚ]** ಮತ್ತು **[ಮನಸಃ]** ಮನಸ್ಸನ್ನು **[ಸಮ್ಯಗ್ದಂಡಃ]** ಸಮ್ಯಕ್‌ರೂಪದಿಂದ ನಿರೋಧ ಮಾಡುವುದು. ಈ ಪ್ರಕಾರ **[ಗುಪ್ತೀನಾಂ ತ್ರಿತಯಮ್]** ಮೂರು ಗುಪ್ತಿಗಳನ್ನು **[ಅವಗಮ್ಯಮ್]** ತಿಳಿದುಕೊಳ್ಳ ಬೇಕಾಗುವುದು.

**ಟೀಕೆ :- 'ವಪುಷಃ ಸಮ್ಯಗ್ದಂಡಃ ತಥಾ ವಚನಸ್ಯ ಸಮ್ಯಗ್ದಂಡಃ ಚ ಮನಸಃ ಸಮ್ಯಗ್ದಂಡಃ ಇತಿ ಗುಪ್ತೀನಾಂ ತ್ರಿತಯಂ ಸಮನುಗಮ್ಯಮ್!'-** ಶರೀರವನ್ನು ವಶಪಡಿಸಿಕೊಳ್ಳುವುದು, ವಚನವನ್ನು ವಶಪಡಿಸಿಕೊಳ್ಳುವುದು ಮತ್ತು ಮನಸ್ಸನ್ನು ವಶಪಡಿಸಿಕೊಳ್ಳುವುದು - ಇವು ಮೂರು ಗುಪ್ತಿಗಳಿವೆಯೆಂದು ತಿಳಿದುಕೊಳ್ಳಬೇಕು.

**ಭಾವಾರ್ಥ :-** ಗುಪ್ತಿಯ ಅರ್ಥವು ಗುಪ್ತವಾಗಿಡುವುದು ಅಥವಾ ಬಚ್ಚಿಡುವುದಿದೆ. ಹೇಗೆಂದರೆ ಮನಸ್ಸಿನ ಕ್ರಿಯೆಯನ್ನು ತಡೆಯುವುದು ಎಂದರೆ ಮನಸ್ಸಿನ ಚಂಚಲತೆಯನ್ನು ತಡೆದು ಏಕಾಗ್ರತೆ ಮಾಡುವುದು ಅದು ಮನಗುಪ್ತಿಯಿದೆ. ವಚನವನ್ನು ಆಡದಿರುವುದು ಎಂದರೆ ಮೌನಧಾರಣ ಮಾಡುವುದು ಅದು ವಚನಗುಪ್ತಿಯಿದೆ. ಮತ್ತು ಶರೀರದ ಕ್ರಿಯೆಯನ್ನು ತಡೆಯುವುದು - ನಿಶ್ಚಲವಾಗಿ ಹೋಗುವುದು ಅದು ಕಾಯಗುಪ್ತಿಯಿದೆ. ಈ ಮೂರೂ ಗುಪ್ತಿಗಳಲ್ಲಿ ಮನೋಗುಪ್ತಿಯ ಪಾಲನೆ ಮಾಡುವುದು ಅತ್ಯಂತ ಕಠಿಣವಿದೆ. ಯಾವ ಮುನಿಗೆ ಮನೋಗುಪ್ತಿಯಿರುತ್ತದೆ ಅವರಿಗೆ ಅವಧಿಜ್ಞಾನವು ಅವಶ್ಯವಾಗಿ ನಿಯಮದಿಂದ ಇರುತ್ತದೆ. ಯಾವಾಗ ಮೂರೂ ಗುಪ್ತಿಗಳು ಆಗಿ ಹೋಗುತ್ತವೆ. ಆಗ ಆತ್ಮಧ್ಯಾನವಾಗುತ್ತದೆ.

ಈಗ ಐದು ಸಮಿತಿಗಳ ವರ್ಣನೆ ಮಾಡುತ್ತಾರೆ, -

ಸಮ್ಯಗ್ಗಮನಾಗಮನಂ ಸಮ್ಯಗ್ಭಾಷಾ ತಥೈಷಣಾ ಸಮ್ಯಕ್ ।
ಸಮ್ಯಗ್ಗ್ರಹನಿಕ್ಷೇಪೌ ವ್ಯತ್ಸರ್ಗಃ ಸಮ್ಯಗಿತಿ ಸಮಿತಿಃ ॥೨೦೩॥

**ಅನ್ವಯಾರ್ಥ :- [ಸಮ್ಯಗ್ಗಮನಾಗಮನಂ]** ಸಾವಧಾನತೆಯಿಂದ ನಿರೀಕ್ಷಣೆ ಮಾಡಿ ಗಮನ ಮತ್ತು ಆಗಮನ, **[ಸಮ್ಯಕ್ಭಾಷಾ]** ಉತ್ತಮ ಹಿತಮಿತರೂಪದ ವಚನ, **[ಸಮ್ಯಕ್‌ಏಷಣಾ]** ಯೋಗ್ಯ ಆಹಾರದ ಗ್ರಹಣ, **[ಸಮ್ಯಗ್ಗ್ರಹನಿಕ್ಷೇಪೌ]** ಪದಾರ್ಥಗಳನ್ನು ಯತ್ನಪೂರ್ವಕ ಗ್ರಹಣ ಯತ್ನಪೂರ್ವಕ ಕ್ಷೇಪನ ಮಾಡುವುದು. **[ತಥಾ]** ಮತ್ತು **[ಸಮ್ಯಕ್‌ವ್ಯತ್ಸರ್ಗಃ]** ಪ್ರಾಸುಕ ಭೂಮಿ ನೋಡಿಕೊಂಡು ಮಲ-ಮೂತ್ರಾದಿಗಳ ವಿಸರ್ಜನೆ ಮಾಡುವುದು **[ಇತಿ]** ಈ ಪ್ರಕಾರ ಇವು ಐದು **[ಸಮಿತಿಃ]** ಸಮಿತಿಗಳಿವೆ.

**ಟೀಕೆ :- 'ಸಮ್ಯಗ್ಗಮನಾಗಮನಂ ಸಮ್ಯಗ್ಭಾಷಾ ತಥಾ ಸಮ್ಯಕ್ ಏಷಣಾ ಚ ಸಮ್ಯಗ್ರಹನಿಕ್ಷೇಪಃ ಸಮ್ಯಕ್ ವುತ್ಸರ್ಗಃ ಇತಿ (ಪಂಚ) ಸಮಿತಿಃ ।'**

**೧) ಈರ್ಯಾಸಮಿತಿ -** ಮುನಿರಾಜರು ಹಗಲು ಹೊತ್ತಿನಲ್ಲಿಯೇ ಎಂದರೆ ಸೂರ್ಯೋದಯವಾದ ಎರಡು ಗಳಿಗೆಯ ನಂತರ ಯಾವಾಗ ಸೂರ್ಯನ ಕಿರಣಗಳು ಸ್ಪಷ್ಟವಾಗಿ ಹೋಗುತ್ತವೆ ಮತ್ತು ಮಾರ್ಗವು ಪ್ರಾಸುಕವಾಗಿ ಬಿಡುತ್ತದೆ, ಆಗ ಯತ್ನಾಚಾರ ಪೂರ್ವಕವಾಗಿ ನಾಲ್ಕು ಮೊಳ ಪ್ರಮಾಣದ ಭೂಮಿಯನ್ನು ಸ್ಥೂಲದೃಷ್ಟಿಯಿಂದ ನೋಡಿ ಗಮನಾಗಮನ ಮಾಡುವರು ಮತ್ತು ಕಾಲುಗಳನ್ನು ನೆಲ ನೋಡಿ ನೋಡಿಕೊಂಡು ಇಡುವರು. (ಯಾವಾಗ ಮಾರ್ಗದ ಮೇಲೆ ಕುದುರೆ-ಬಂಡಿ-ಪಥಿಕ ಮೊದಲಾದವರು ನಡೆಯಲಾರಂಭಿಸುತ್ತಾರೆ ಆಗ ಅದು ಸ್ವಾಭಾವಿಕವಾಗಿಯೇ

ಪ್ರಾಸುಕವಾಗಿ ಹೋಗುತ್ತದೆ.)

೨) **ಭಾಷಾಸಮಿತಿ -** ಕೇಳುವುದರಿಂದ ಯಾವುದೇ ಪ್ರಾಣಿಗೆ ದುಃಖವಾಗದಂಥ ಹಿತಮಿತ ಮತ್ತು ಸಂದೇಹರಹಿತವಾದ ವಚನಗಳನ್ನು ಆಡುವುದು.

೩) **ಏಷಣಾಸಮಿತಿ -** ನಲವತ್ತಾರು ದೋಷ, ಮೂವತ್ತೆರಡು ಅಂತರಾಯಗಳನ್ನು ನಿವಾರಿಸಿ ಉತ್ತಮ ಕುಲೀನ ಶ್ರಾವಕನ ಮನೆಯಲ್ಲಿ ಆಚಾರಸಹಿತ ವಿಧಿಪೂರ್ವಕ ಶುದ್ಧಪ್ರಾಸುಕ ಆಹಾರವನ್ನು ದಿವಸದಲ್ಲಿ ಒಂದು ಬಾರಿ ತೆಗೆದುಕೊಳ್ಳುವುದು.

೪) **ಆದಾನ ನಿಕ್ಷೇಪಣಸಮಿತಿ -** ಯತ್ನಾಚಾರಪೂರ್ವಕ ನೋಡಿ ಸಂಭಾಳಿಸಿ ಪುಸ್ತಕ, ಪಿಂಛೀ, ಕಮಂಡಲು ಮೊದಲಾದುವನ್ನು ಎತ್ತಿಕೊಳ್ಳುವುದು ಮತ್ತು ಇಡುವುದು.

೫) **ಪ್ರತಿಷ್ಠಾಪನಾಸಮಿತಿ -** ಯತ್ನಪೂರ್ವಕ ದೃಷ್ಟಿಯಿಂದ ನೋಡಿ ಮತ್ತು ಪಿಂಛಿಯಿಂದ ಸ್ವಚ್ಛ ಮಾಡಿ ಮಲ-ಮೂತ್ರ-ಕಫ ಮೊದಲಾದ ನವದ್ವಾರದ ಮಲವನ್ನು ಪ್ರಾಸುಕ (ನಿರ್ಜೀವ) ಭೂಮಿಯ ಮೇಲೆ ವಿಸರ್ಜನೆ ಮಾಡುವುದು, ಜಲದಲ್ಲಿ, ಒದ್ದೆಯಿರುವ ಭೂಮಿಯಲ್ಲಿ, ಹಸಿರು ಹುಲ್ಲಿನಲ್ಲಿ ಮಲದ ವಿಸರ್ಜನೆ ಮಾಡಬಾರದು. ಮತ್ತು ಜನರು ಬರ-ಹೋಗುವ ಮಾರ್ಗದಿಂದ ದೂರ ಹೋಗಿ ನಿರ್ದೋಷವಾದ ಭೂಮಿಯಲ್ಲಿ ಮಲದ ವಿಸರ್ಜನೆ ಮಾಡಬೇಕು. ಈ ಪ್ರಕಾರ ಸಮಿತಿಗಳ ವರ್ಣನೆ ಮಾಡಲಾಯಿತು. ಇವು ಐದೂ ಸಮಿತಿಗಳು ಗುಪ್ತಿಗಳ ಪಾಲನೆಯಲ್ಲಿ ಸಹಾಯಕವಾಗುತ್ತವೆ. ಮೇಲೆ ಹೇಳಿದ ಪ್ರಕಾರದಿಂದ ಇವುಗಳ ಪಾಲನೆಯನ್ನಂತೂ ಮುನಿ ಮಹಾರಾಜರುಗಳೇ ಮಾಡುತ್ತಾರೆ. ಆದರೂ ಕೂಡ ಎಷ್ಟು ಸಾಧ್ಯವಿದೆ ಅಷ್ಟು ಇವುಗಳ ಪಾಲನೆಯನ್ನು ಶ್ರಾವಕರು ಕೂಡ ಮಾಡಬೇಕಾಗುವುದು. ಶ್ರಾವಕರು ಕೂಡ ನೋಡಿಕೊಂಡು ನಡೆಯಬೇಕಾಗುವುದು, ಸಂಕ್ಷಿಪ್ತ ಹಾಗೂ ಹಿತಕರವಾದ ವಚನಗಳನ್ನು ಆಡಬೇಕಾಗುವುದು, ಶುದ್ಧ ಪ್ರಾಸುಕ ಆಹಾರ ತೆಗೆದುಕೊಳ್ಳಬೇಕಾಗುವುದು, ಎಲ್ಲ ವಸ್ತುಗಳನ್ನು ನೋಡಿಕೊಂಡೇ ಇಡಬೇಕು - ತೆಗೆದುಕೊಳ್ಳಬೇಕು ಮತ್ತು ಜೀವರಹಿತವಾದ ಸ್ಥಾನದಲ್ಲಿಯೇ ಮಲ-ಮೂತ್ರಾದಿಗಳನ್ನು ವಿಸರ್ಜನೆ ಮಾಡಬೇಕಾಗುವುದು. ಇದೇ ಪ್ರಕಾರ ಶ್ರಾವಕರು ಯಥಾಶಕ್ತಿಯಾಗಿ ಇವೆಲ್ಲವುಗಳ ಪಾಲನೆ ಮಾಡಬೇಕಾಗುವುದು.

ಈಗ ದಶಧರ್ಮಗಳ ನಿರೂಪಣೆ ಮಾಡುತ್ತಾರೆ, -

ಧರ್ಮಃ ಸೇವ್ಯಃ ಕ್ಷಾಂತಿರ್ಮೃದುತ್ವಮೃಜುತಾ ಚ ಶೌಚಮಥ ಸತ್ಯಮ್ ।
ಆಕಿಂಚನ್ಯಂ ಬ್ರಹ್ಮ ತ್ಯಾಗಶ್ಚ ತಪಶ್ಚ ಸಂಯಮಶ್ಚೇತಿ ॥೨೦೪॥

**ಅನ್ವಯಾರ್ಥ :-** **[ಕ್ಷಾಂತಿಃ]** ಕ್ಷಮೆ, **[ಮೃದುತ್ವಂ]** ಮಾರ್ದವ, **[ಋಜುತಾ]** ಸರಳತೆ ಎಂದರೆ ಆರ್ಜವ, **[ಶೌಚಮ್]** ಶೌಚ **[ಅಥ]** ಅನಂತರ **[ಸತ್ಯಮ್]** ಸತ್ಯ **[ಚ]** ಮತ್ತು **[ಆಕಿಂಚನ್ಯಂ]** ಆಕಿಂಚನ, **[ಬ್ರಹ್ಮ]** ಬ್ರಹ್ಮಚರ್ಯ **[ಚ]** ಮತ್ತು **[ತ್ಯಾಗಃ]** ತ್ಯಾಗ **[ಚ]** ಮತ್ತು **[ತಪಃ]** ತಪ **[ಚ]** ಮತ್ತು **[ಸಂಯಮಃ]** ಸಂಯಮ- **[ಇತಿ]** ಈ ಪ್ರಕಾರ **[ಧರ್ಮಃ]** ಹತ್ತು ಪ್ರಕಾರದ ಧರ್ಮಗಳನ್ನು **[ಸೇವ್ಯಃ]** ಸೇವನೆ ಮಾಡುವುದು ಯೋಗ್ಯವಿದೆ.

**ಟೀಕೆ :- 'ಕ್ಷಾಂತಿ ಮೃದುತ್ವಂ ಋಜುತಾ ಚ ಶೌಚಮ್ ಅಥ ಸತ್ಯಮ್ ಆಕಿಂಚನ್ಯ ಬ್ರಹ್ಮ ಚ ತ್ಯಾಗಃ ಚ ತಪಃ ಚ ಸಂಯಮಃ ಇತಿ ಧರ್ಮಃ ಸೇವ್ಯಃ ।'-** ೧) ಕ್ರೋಧದ ತ್ಯಾಗ ಮಾಡಿ ಕ್ಷಮಾ ಧಾರಣ ಮಾಡುವುದು ಅದು **ಉತ್ತಮಕ್ಷಮೆ**ಯೆಂಬ ಹೆಸರಿನ ಮೊದಲನೆಯ ಧರ್ಮವಿದೆ. ೨) ಮಾನ ಕಷಾಯದ ತ್ಯಾಗ ಮಾಡಿ ಕೋಮಲತೆಯನ್ನು ಧಾರಣ ಮಾಡುವುದು ಅದು **ಉತ್ತಮಮಾರ್ದವ**ವೆಂಬ ಹೆಸರಿನ ಎರಡನೆಯ

ಧರ್ಮವಿದೆ. ೩) ಮಾಯಾಚಾರದ ಎಂದರೆ ಕಪಟದ ತ್ಯಾಗ ಮಾಡಿ ಸರಳತೆಯನ್ನು ಧಾರಣ ಮಾಡುವುದು. ಅದು **ಉತ್ತಮಆರ್ಜವ**ವೆಂಬ ಹೆಸರಿನ ಮೂರನೆಯ ಧರ್ಮವಿದೆ. ೪) ಲೋಭದ ತ್ಯಾಗ ಮಾಡಿ ಸಂತೋಷವನ್ನು ಧಾರಣ ಮಾಡುವುದು ಅದು **ಉತ್ತಮಶೌಚ**ವೆಂಬ ಹೆಸರಿನ ನಾಲ್ಕನೆಯ ಧರ್ಮವಿದೆ. ಶೌಚದ ಅರ್ಥವು ಶುದ್ಧಿಯಿದ್ದು, ಆ ಶುದ್ಧಿಯು ೧) ಬಾಹ್ಯಶುದ್ಧಿ ಮತ್ತು ೨) ಅಂತರಂಗ ಶುದ್ಧಿಯೆಂದು ಎರಡು ಪ್ರಕಾರದ್ದಿದೆ. ಸ್ನಾನ ಮೊದಲಾದವುಗಳಿಂದ ಶರೀರವನ್ನು ಪವಿತ್ರವಾಗಿ ಇಟ್ಟುಕೊಳ್ಳುವುದು ಅದು ಬಾಹ್ಯಶುದ್ಧಿಯಿದೆ. ಮತ್ತು ಲೋಭ ಕಷಾಯದ ತ್ಯಾಗ ಮಾಡುವುದು ಅದು ಅಂತರಂಗ ಶುದ್ಧಿಯಿದೆ. ಇವೆರಡೂ ಪ್ರಕಾರದ ಶುದ್ಧಿ ಮಾಡಿಕೊಳ್ಳುವುದೇ **ಶೌಚಧರ್ಮ**ವಿದೆ. ಇವೆರಡೂ ಪ್ರಕಾರದ ಶುದ್ಧಿಗಳು ಗೃಹಸ್ಥರ-ಶ್ರಾವಕರ ಅಪೇಕ್ಷೆಯಿಂದಲೇ ಇವೆ, ಮುನಿಗಳ ಅಪೇಕ್ಷೆಯಿಂದ ಇಲ್ಲವೆಂಬ ಮಾತು ಇಲ್ಲಿ ವಿಚಾರ ಯೋಗ್ಯವಿದೆ. ಏಕೆಂದರೆ ಮುನಿರಾಜರಿಗಂತೂ ಅಂತರಂಗ ಶುದ್ಧಿಯದೇ ಮುಖ್ಯತೆಯಿದೆ.

೫) ಇನ್ನೊಬ್ಬರಿಗೆ ದುಃಖವನ್ನು ಉತ್ಪನ್ನ ಮಾಡುವಂಥ, ನಿಂದನೀಯ ಕಪಟ ವಚನಗಳನ್ನು ಆಡದಿರುವುದು ಅದು ಸತ್ಯವೆಂದು ಕರೆಸಿಕೊಳ್ಳುತ್ತದೆ ಮತ್ತು ಇದುವೇ ಐದನೆಯ **ಉತ್ತಮಸತ್ಯಧರ್ಮ**ವಿದೆ. ೬) ಪಂಚೇಂದ್ರಿಯಗಳ ವಿಷಯಗಳನ್ನು ಹಾಗೂ ಮನಸ್ಸಿನ ವಿಷಯಗಳನ್ನು ತಡೆಯುವುದು ಮತ್ತು ಷಟ್‌ಕಾಯ ಜೀವಗಳ ಹಿಂಸೆ ಮಾಡದಿರುವುದನ್ನು ಸಂಯಮವೆಂದು ಹೇಳುತ್ತಾರೆ. ವ್ರತಗಳ ಧ್ಯಾನ ಮಾಡುವುದರಿಂದ ಸಮಿತಿಗಳ ಪಾಲನೆ ಮಾಡುವುದರಿಂದ, ಕಷಾಯಗಳ ನಿಗ್ರಹ ಮಾಡುವುದರಿಂದ ಮತ್ತು ಮನ-ವಚನ-ಕಾಯಗಳನ್ನು ವಶದಲ್ಲಿಟ್ಟುಕೊಳ್ಳುವುದರಿಂದ ಈ ಸಂಯಮದ ಪಾಲನೆಯಾಗುತ್ತದೆ, ಇದುವೇ ಆರನೆಯ **ಉತ್ತಮ ಸಂಯಮ**ಧರ್ಮವಿದೆ. ೭) ಯಾವ ಪ್ರಕಾರ ಚಿನ್ನದ ಮಾಲಿನ್ಯವನ್ನು ದೂರ ಮಾಡುವ ಸಲುವಾಗಿ ಅಗ್ನಿಯ ಶಾಖ ಕೊಡಲಾಗುತ್ತದೆ, ಅದೇ ಪ್ರಕಾರ ಆತ್ಮನ ಜತೆ ಆವರಿಸಿಕೊಂಡಿರುವ ಕರ್ಮಗಳನ್ನು ದೂರ ಮಾಡುವ ಸಲುವಾಗಿ (ಸರ್ವಜ್ಞ ವೀತರಾಗ ಕಥಿತ) ತಪ ಮಾಡಲಾಗುತ್ತದೆ. ಈ ತಪವು ಹನ್ನೆರಡು ಪ್ರಕಾರದ್ದಿದೆ. 'ಇಚ್ಛಾ ನಿರೋಧಸ್ತಪಃ' - ಇಚ್ಛೆಯ ನಿರೋಧ ಮಾಡುವುದೇ ತಪವಿದೆ. ಇದು ಏಳನೆಯ **ಉತ್ತಮ ತಪಧರ್ಮ**ವಿದೆ. (ಈ ಹನ್ನೆರಡು ಭಾವನೆಗಳಲ್ಲಿ ಸ್ವಾಶ್ರಯದ ಬಲದಿಂದ ಎಷ್ಟು ಪರಿಣಾಮಗಳ ಶುದ್ಧಿಯಿದೆ ಅದಂತೂ ನಿರ್ಜರೆಗೆ ಕಾರಣರೂಪವಾದ ನಿಶ್ಚಯತಪವಿದೆ ಮತ್ತು ಅದೇ ಸಮಯದಲ್ಲಿ ಹೇಯ ಬುದ್ಧಿ ಸಹಿತವಾದಯಾವ ವ್ರತ-ತಪ ಮೊದಲಾದವುಗಳ ಶುಭ ವಿಕಲ್ಪವಿದೆ-ರಾಗವಿದೆ ಅಷ್ಟು ವ್ಯವಹಾರ-ಉಪಚಾರ ತಪವಿದೆಯೆಂದು ಎಲ್ಲೆಡೆಗೆ ತಿಳಿದುಕೊಳ್ಳಬೇಕು. ೮) ಲೋಕದಲ್ಲಂತೂ ಆಹಾರ, ಔಷಧ, ಅಭಯ ಮತ್ತು ಜ್ಞಾನದಾನ ಕೊಡುವುದಕ್ಕೆ ತ್ಯಾಗ ಧರ್ಮವೆಂದು ಹೇಳುತ್ತಾರೆ, ಆದರೆ ಆ ತ್ಯಾಗವು ವಾಸ್ತವಿಕ-ನಿಜವಾದ ತ್ಯಾಗವಲ್ಲ. (ತ್ರೈಕಾಲಿಕ ಅಕಷಾಯ ಜ್ಞಾಯಕ ಸ್ವಭಾವದ ಆಶ್ರಯದಿಂದ ವೀತರಾಗ ವಿಜ್ಞಾನರೂಪ ಶಾಂತಿಯ ಉತ್ಪತ್ತಿಯಾಗುವುದು ಅಷ್ಟು ಅಂಶದಲ್ಲಿ ಕಷಾಯದ ಉತ್ಪತ್ತಿಯಾಗದಿರುವುದೇ ನಿಜವಾದ ತ್ಯಾಗವಿದೆ.) ಕ್ರೋಧ ಮೊದಲಾದ ಕಷಾಯಗಳ ತ್ಯಾಗ ಮಾಡುವುದೇ ನಿಜವಾದ ತ್ಯಾಗವಿದೆ. ಆದುದರಿಂದ ಮುನಿರಾಜರು ಪ್ರತ್ಯಕ್ಷರೂಪದಿಂದ ಯಾವುದೇ ದಾನ ಮಾಡದಿದ್ದರೂ ಕೂಡ ವಾಸ್ತವಿಕವಾಗಿ ಕಷಾಯಗಳ ತ್ಯಾಗ ಮಾಡುವ ಕಾರಣದಿಂದ ಅವರೇ ನಿಜವಾದ ದಾನಿಯಿದ್ದಾರೆ, ಮತ್ತು ಯಾವ ಸಮಯದಲ್ಲಿ ಯಾವ ಜೀವದ ಲೋಭಕಷಾಯದ ತ್ಯಾಗವಾಗಿ ಹೋಗುವುದು ಅವನ ಬಾಹ್ಯ ಪದಾರ್ಥಗಳ ತ್ಯಾಗವಂತೂ ಆಗಿಯೇ ಹೋಗುವುದು. ಏಕೆಂದರೆ ಲೋಭ ಕಷಾಯವನ್ನು ಬಿಟ್ಟುಕೊಟ್ಟಲ್ಲದೆ ಬಾಹ್ಯ ವಸ್ತುಗಳ ತ್ಯಾಗವಾಗುವುದಿಲ್ಲ. ಆದುದರಿಂದ (ತತ್ತ್ವಜ್ಞಾನದ ಬಲದಿಂದ) ಲೋಭಾದಿ ಕಷಾಯಗಳ ತ್ಯಾಗ ಮಾಡುವುದೇ ನಿಜವಾದ **ಉತ್ತಮತ್ಯಾಗ**ವಿದೆ ಮತ್ತು ಅದುವೇ ದಾನವಿದೆಯೆಂಬುದು ತಾನಾಗಿಯೇ ಸಿದ್ಧವಾಯಿತು.

೯) ಮಮತ್ವಬುದ್ಧಿಯ ತ್ಯಾಗ ಮಾಡುವುದು ಅದು ಆಕಿಂಚನ್ಯ ಧರ್ಮವಿದೆ. ಹದಿನಾಲ್ಕು ಪ್ರಕಾರದ ಅಂತರಂಗ ಪರಿಗ್ರಹ ಹಾಗೂ ಹತ್ತು ಪ್ರಕಾರದ ಬಹಿರಂಗ ಪರಿಗ್ರಹ ಇವೆರಡೂ ಪ್ರಕಾರದ ಪರಿಗ್ರಹಗಳ ತ್ಯಾಗ ಮಾಡಿ ಬಿಡುವುದೇ ಉತ್ತಮ **ಆಕಿಂಚನ್ಯಧರ್ಮ**ವಿದೆ. ೧೦) ಸಂಸಾರದ ಸಮಸ್ತ ಪದಾರ್ಥಗಳಿಂದ ಮನಸ್ಸಿನ ವೃತ್ತಿಯನ್ನು ನಿವಾರಿಸಿ ಕೇವಲ ಒಬ್ಬ ಆತ್ಮನಲ್ಲಿಯೇ ಲೀನ ಮಾಡುವುದು ಎಂದರೆ ಬ್ರಹ್ಮನಲ್ಲಿ ತಲ್ಲೀನತೆ ಹೊಂದುವುದು ಅದು **ಉತ್ತಮಬ್ರಹ್ಮಚರ್ಯ**ವಿದೆ.

ಯಾವಾಗ ಈ ಆತ್ಮನು ಪಂಚೇಂದ್ರಿಯ ವಿಷಯಗಳನ್ನು ತಡೆಯುವಲ್ಲಿ ಸಮರ್ಥನಾಗುತ್ತಾನೆ, ವಿಶೇಷವಾಗಿ ಸ್ಪರ್ಶನೇಂದ್ರಿಯದ ವಿಷಯ ಎಂದರೆ ಕಾಮ ವಾಸನೆಯನ್ನು ಜಯಿಸುವಲ್ಲಿ ಸಮರ್ಥನಾಗುತ್ತಾನೆ ಮತ್ತು ಆ ಕಾಯವಾಸನೆಯ ತ್ಯಾಗವು ಕೂಡ ಯಾವಾಗ ಸ್ತ್ರೀ ಮಾತ್ರದ ತ್ಯಾಗಿಯಾಗಿ ಹೋಗುವನು ಎಂದರೆ ಸಂಸಾರದ ಸ್ತ್ರೀಮಾತ್ರರ ತ್ಯಾಗವನ್ನು ಮನ-ವಚನ-ಕಾಯದಿಂದ ಮಾಡುತ್ತಾನೆ ಆಗ ಸಾಧ್ಯವಾಗುತ್ತದೆ. ಆದರೆ ಇಂಥ ತ್ಯಾಗವನ್ನಂತೂ ಕೇವಲ ಓರ್ವ ಮುನಿರಾಜರೇ ಮಾಡುವ ಸಾಧ್ಯತೆಯಿದೆ. ಶ್ರಾವಕನಂತೂ ಏಕದೇಶ ತ್ಯಾಗ ಮಾಡುವ ಸಾಧ್ಯತೆಯಿದೆ ಎಂದರೆ ಸ್ವಸ್ತ್ರೀಯಲ್ಲಿ ಸಂತುಷ್ಟನಾಗಿದ್ದುಕೊಂಡು ತನ್ನ ಸ್ತ್ರೀಯ ಹೊರತಾಗಿ ಜಗತ್ತಿನ ಶೇಷ ಸಮಸ್ತ ಸ್ತ್ರೀಯರನ್ನು ತಾಯಿ-ಸೋದರಿ ಅಥವಾ ಮಗಳ ಸಮಾನವಾಗಿ ತಿಳಿಯುತ್ತಾನೆ. ಇದೇ ಏಕದೇಶ ಬ್ರಹ್ಮಚರ್ಯದ ಪಾಲನೆಯಿದೆ.

**ಭಾವಾರ್ಥ :-** ಈ ಪ್ರಕಾರ ಈ ದಶಲಕ್ಷಣ ಧರ್ಮದ ವರ್ಣನೆ ಮಾಡಲಾಯಿತು. ಈ ಧರ್ಮಗಳ ಪಾಲನೆ ಮಾಡುವುದು ಪ್ರತಿಯೊಬ್ಬ ಜೀವಿಯ ಮುಖ್ಯಕರ್ತವ್ಯವಿದೆ. ಏಕೆಂದರೆ ಈ ದಶಧರ್ಮವೇ ಮೋಕ್ಷಮಾರ್ಗದ ಸಾಧನೆ ಮಾಡುವ ಸಲುವಾಗಿ ಮುಖ್ಯ ಕಾರಣವಿದೆ.

ಈಗ ಹನ್ನೆರಡು ಭಾವನೆಗಳ ನಿರೂಪಣೆ ಮಾಡುತ್ತಾರೆ, -

**ಅಧ್ರುವಮಶರಣಮೇಕತ್ವಮನ್ಯತಾऽಶೌಚಮಾಸ್ರವೋ ಜನ್ಮಃ ।**
**ಲೋಕವೃಷಬೋಧಿಸಂವರನಿರ್ಜರಾಃ ಸತತಮನುಪ್ರೇಕ್ಷ್ಯಾಃ ॥೨೦೫॥**

**ಅನ್ವಯಾರ್ಥ :- [ಅಧ್ರುವಮ್]** ಅಧ್ರುವ **[ಅಶರಣಮ್]** ಅಶರಣ, **[ಏಕತ್ವಮ್]** ಏಕತ್ವ, **[ಅನ್ಯತಾ]** ಅನ್ಯತ್ವ, **[ಅಶೌಚಮ್]** ಅಶುಚಿ, **[ಆಸ್ರವಃ]** ಆಸ್ರವ, **[ಜನ್ಮಃ]** ಸಂಸಾರ, **[ಲೋಕವೃಷಬೋಧಿಸಂವರ ನಿರ್ಜರಾಃ]** ಲೋಕ, ಧರ್ಮ, ಬೋಧಿದುರ್ಲಭ, ಸಂವರ ಮತ್ತು ನಿರ್ಜರೆ **[ಏತಾದ್ವಾದಶಭಾವನಾ]** ಈ ಹನ್ನೆರಡು ಭಾವನೆಗಳನ್ನು **[ಸತತಮ್]** ನಿರಂತರವಾಗಿ **[ಅನುಪ್ರೇಕ್ಷ್ಯಾಃ]** ಮತ್ತೆ ಮತ್ತೆ ಚಿಂತನೆ ಮತ್ತು ಮನನ ಮಾಡಬೇಕಾಗುವುದು.

**ಟೀಕೆ :- 'ಅಧ್ರುವಂ ಅಶರಣಂ ಜನ್ಮ ಏಕತ್ವಂ ಅನ್ಯತಾ ಅಶೌಚಂ ಆಸ್ರವಃ ಸಂವರಃ ನಿರ್ಜರಾ ಲೋಕಬೋಧಿ ವೃಷಃ ಇತಿ ದ್ವಾದಶ ಅನುಪ್ರೇಕ್ಷಾಃ ಸತತಂ ಭಾವನೀಯಾಃ ।'**

**೧) ಅನಿತ್ಯಭಾವನೆ -** ಸಂಸಾರದ ಸಮಸ್ತ ವಸ್ತುಗಳು ಶರೀರ, ಭೋಗ ಮೊದಲಾದವುಗಳೆಲ್ಲವು ಅನಿತ್ಯವಿವೆ - ನಾಶವಂತವಿವೆ. ಆತ್ಮನು ನಿತ್ಯನಿದ್ದಾನೆ, ಧ್ರುವನಿದ್ದಾನೆ. ಆದುದರಿಂದ ಅಧ್ರುವ ವಸ್ತುಗಳಲ್ಲಿ ಪ್ರೀತಿಯನ್ನು ಬಿಟ್ಟುಕೊಟ್ಟು ಧ್ರುವವಿರುವ ನಿಜವಸ್ತುವಿನಲ್ಲಿ ಚಿತ್ತವನ್ನು ತೊಡಗಿಸುವುದಕ್ಕೆ ಅನಿತ್ಯಭಾವನೆಯೆಂದು ಹೇಳುತ್ತಾರೆ.

**೨) ಅಶರಣಭಾವನೆ -** ಈ ಜಗತ್ತಿನಲ್ಲಿ ಯಾರೂ ಯಾರಿಗೆ ಶರಣಿಲ್ಲ, ಸಮಸ್ತ ಪ್ರಾಣಿಗಳು ಕಾಲದ ಆಧೀನವಿವೆ, ಕಾಲದಿಂದ ತಪ್ಪಿಸಿಕೊಳ್ಳುವಂಥವರು ಯಾರೂ ಇಲ್ಲ, ವ್ಯವಹಾರದಿಂದ ಅರಹಂತರ ಶರಣಿದೆ, ಸಿದ್ಧರ ಶರಣಿದೆ, ಸಾಧುವಿನ ಶರಣಿದೆ ಮತ್ತು ಜೈನ ಧರ್ಮದ ಶರಣಿದೆ. ಹೀಗೆ ಶರಣಿದ್ದರೂ ವಾಸ್ತವಿಕವಾಗಿ ನಿಶ್ಚಯನಯದಿಂದ

ಕೇವಲ ತನ್ನ ಆತ್ಮನೇ ಶರಣಿದ್ದಾನೆ. ಬೇರೆ ಯಾರೂ ಶರಣಿಲ್ಲ. ಹೀಗೆ (ಸ್ವಸನ್ಮುಖತೆಯಿಂದ) ನಿರಂತರ ವಿಚಾರ ಮಾಡುವುದೇ ಎರಡನೆಯ ಅಶರಣ ಭಾವನೆಯಿದೆ.

**೩) ಸಂಸಾರಭಾವನೆ -** ಸಂಸಾರವು ಅತ್ಯಂತ ದುಃಖರೂಪವಿದೆ, ನಾಲ್ಕೂ ಗತಿಗಳಲ್ಲಿಯಾವುದರಲ್ಲಿಯೂ ಸುಖವಿಲ್ಲ. ನರಕಗತಿಯಲ್ಲಂತೂ ಪ್ರಕಟರೂಪದಿಂದ ಛೇದಿಸುವುದು. ಭೇದಿಸುವುದು, ಹೊಡೆಯುವುದು, ತಿವಿಯುವುದು, ಸುಡುವುದು ಇವೇ ಮೊದಲಾದ ಅನೇಕ ದುಃಖಗಳಿವೆ. ಮತ್ತು ತಿರ್ಯಂಚಗತಿಯಲ್ಲಿ ಹಸಿವೆ, ಬಾಯಾರಿಕೆ, ಹೆಚ್ಚು ಭಾರ ಹೊರಿಸುವುದು ಇತ್ಯಾದಿ ದುಃಖಗಳಿವೆ, ಮನುಷ್ಯ ಗತಿಯಲ್ಲಿ ಕೂಡ ಅಧಿಕ ಚಿಂತೆ, ಬಹಳಷ್ಟು ಖೇದ ಇತ್ಯಾದಿ ಅನೇಕ ದುಃಖಗಳಿವೆ, ದೇವಗತಿಯಲ್ಲಿ ಕೂಡ ವಿಷಯ ವಾಸನೆಯಿದೆ ತಮಗಿಂತ ದೊಡ್ಡ ದೇವಗಳ ಅಧಿಕ ಋದ್ಧಿಯನ್ನು ನೋಡಿ ಚಿಕ್ಕ ದೇವಗಳು ಯಾವಾಗಲೂ ವ್ಯಾಕುಲರಿರುತ್ತಾರೆ, ದೇವಗಳ ಆಯುಷ್ಯ ದೀರ್ಘ ಹಾಗೂ ದೇವಾಂಗನೆಯರ ಆಯುಷ್ಯ ಅಲ್ಪವಿರುವುದರಿಂದ ಅವರುಗಳ ವಿಯೋಗದಲ್ಲಿ ದೇವಗಳಿಗೆ ಅವಶ್ಯವಾಗಿ ದುಃಖವಾಗುತ್ತದೆ, ಮರಣವಾಗುವುದು ಇನ್ನೂ ಆರು ತಿಂಗಳು ಬಾಕಿ ಇರುವಾಗಲೇ ಕೊರಳೊಳಗಿನ ಮಾಲೆಯು ಕಾಂತಿಹೀನವಾಗಲಾರಂಭಿಸುತ್ತದೆ ಅಂದಿನಿಂದಲೇ ಆ ದೇವನಿಗೆ ಮಹಾಮೋಹವಶದಿಂದ ಅತ್ಯಂತ ಖೇದ ಮತ್ತು ದುಃಖವಾಗುತ್ತದೆ. ಇತ್ಯಾದಿ ಪ್ರಕಾರದಿಂದ ದೇವಗತಿಯಲ್ಲಿ ಕೂಡ ಅತಿಶಯ ದುಃಖವಿದೆ. ಸುಖವಂತೂ ಕೇವಲ ಒಂದು ಪಂಚಮಗತಿಯಲ್ಲಿ ಎಂದರೆ ಮೋಕ್ಷದಲ್ಲಿ ಇದೆ. (ಅಲ್ಲಿ ತನ್ನ ಆತ್ಮನಿಂದಲೇ ಉತ್ಪನ್ನವಾದ ಮತ್ತು ಅಕ್ಷಯದಂಥ ಅನಂತಾನಂತ ಕಾಲದವರೆಗೆ ಪೂರ್ಣ ಆನಂದಮಯವಾದ ಅತೀಂದ್ರಿಯ ಸುಖವಿದೆ.) ಆದುದರಿಂದ ಸಮಸ್ತ ಪ್ರಾಣಿಕೋಟಿಯು ಚತುರ್ಗತಿರೂಪದ ಸಂಸಾರದಿಂದ ಉದಾಸೀನವಾಗಿ ಪಂಚಮಗತಿಯ ಪ್ರಾಪ್ತಿ ಮಾಡಿಕೊಳ್ಳುವ ಉಪಾಯ ಮಾಡಬೇಕಾಗುವುದು. ಹೀಗೆ ಯಾವಾಗಲೂ ಚಿಂತನೆ ಮಾಡುತ್ತ ಇರುವುದೇ ಮೂರನೆಯ ಸಂಸಾರ ಭಾವನೆಯಿದೆ.

**೪) ಏಕತ್ವಭಾವನೆ -** ಈ ಆತ್ಮನು ಯಾವಾಗಲೂ ಏಕಾಕಿಯಾಗಿಯೇ ಇದ್ದಾನೆ, ಜನ್ಮದಲ್ಲಿ ಹಾಗೂ ಮರಣದಲ್ಲಿ ಸದಾ ಏಕಾಕಿಯಿದ್ದಾನೆ, ಇವನಿಗೆ ಯಾರೂ ಸಂಗಡಿಗರಿಲ್ಲ. ಇವನು ಸುಖ ಭೋಗಿಸುವಲ್ಲಿ ಏಕಾಕಿ, ದುಃಖ ಭೋಗಿಸುವಲ್ಲಿ ಏಕಾಕಿ, ಸಂಸಾರ ಭ್ರಮಣ ಮಾಡುವಲ್ಲಿ ಏಕಾಕಿ, ಮೋಕ್ಷ ಪ್ರಾಪ್ತ ಮಾಡಿಕೊಳ್ಳುವಲ್ಲಿ ಏಕಾಕಿ ಹೀಗೆ ಈ ಆತ್ಮನು ತ್ರಿಕಾಲದಲ್ಲೂ ಏಕಾಕಿಯಾಗಿಯೇ ಇದ್ದಾನೆ. ಇವನಿಗೆ ಯಾರೂ ಸಂಗಡಿಗರಿಲ್ಲ. ಈ ಪ್ರಕಾರ ನಿರಂತರ ವಿಚಾರ ಮಾಡುವುದು ಅದು ಏಕತ್ವಭಾವನೆಯಿದೆ.

**೫) ಅನ್ಯತ್ವ ಭಾವನೆ -** ಜಗತ್ತಿನಲ್ಲಿ ಎಷ್ಟು ಪದಾರ್ಥಗಳಿವೆ ಅವೆಲ್ಲವೂ ಬೇರೆ ಬೇರೆಯಿವೆ, ಯಾವೊಂದು ಪದಾರ್ಥವು ಬೇರೆ ಯಾವುದೇ ಪದಾರ್ಥದಲ್ಲಿ ಬೆರೆತು ಹೋದದ್ದು ಇಲ್ಲ (ಬೆರೆತು ಹೋಗಿರುವುದಿಲ್ಲ ಮತ್ತು ಎಂದೂ ಬೆರೆತು ಹೋಗುವುದಿಲ್ಲ.) ಮನ-ನಚನ-ಕಾಯ ಇವೆಲ್ಲವೂ ಆತ್ಮನಿಂದ ಭಿನ್ನವಿವೆ. ಈ ಶರೀರ, ಮನಸ್ಸು ಮತ್ತು ವಚನ ಕೂಡ ಆತ್ಮನಿಂದ ಭಿನ್ನವಿವೆಯೆಂದ ಮೇಲೆ ಪ್ರಕಟರೂಪದಿಂದ ಭಿನ್ನವಿರುವಂಥ ಈ ಮನೆ, ಗಾಡಿ ಮೊದಲಾದವು ಹೇಗೆ ಒಂದಾಗುವ ಸಾಧ್ಯತೆಯಿದೆ ? (ಆದುದರಿಂದ ಶರೀರ ಮೊದಲಾದವುಗಳಿಂದ ನಿರ್ಮೋಹಿಯಾಗಿ, ಪರಭಾವಗಳಿಂದ ತಮ್ಮ ಭಿನ್ನತೆಯನ್ನು ತಿಳಿದುಕೊಂಡು ತಮ್ಮಲ್ಲಿಯೇ ಲೀನವಾಗುವುದು ಯೋಗ್ಯವಿದೆ.) ಈ ಪ್ರಕಾರ ವಸ್ತುಸ್ವರೂಪವನ್ನು ತಿಳಿದುಕೊಂಡು ಮತ್ತೆ ಮತ್ತೆ ಚಿಂತನೆ ಮಾಡುವುದು ಅದು ಅನ್ಯತ್ವ ಭಾವನೆಯಿದೆ.

**೬) ಅಶುಚಿಭಾವನೆ -** ಈ ಶರೀರವು ಯಾವಾಗಲೂ ನವದ್ವಾರಗಳಿಂದ ಸ್ರವಿಸುತ್ತಿರುವ ಮಲ-ಮೂತ್ರಗಳ ಆಗರವಿದೆ, ಅತ್ಯಂತ ಅಶುಚಿರೂಪವಿದೆ ಮತ್ತು ಜ್ಞಾನಮಯನಾದ ಆತ್ಮನು ಮಹಾಪವಿತ್ರನಿದ್ದಾನೆ. ಶರೀರ ಮೊದಲಾದವುಗಳೊಡನೆ ಯಾವ ಪ್ರಕಾರದಿಂದ ಆತ್ಮನ ಸಂಬಂಧವಿರುವ ಸಾಧ್ಯತೆಯಿದೆ ? ಈ ಪ್ರಕಾರ ಪುನಃ ಪುನಃ

ಚಿಂತನೆ ಮಾಡುವುದು ಅದು ಅಶುಚಿ ಭಾವನೆಯಿದೆ.

೭) **ಆಸ್ರವಭಾವನೆ -** ಐದು ಮಿಥ್ಯಾತ್ವ, ಹನ್ನೆರಡು ಅವಿರತಿ, ಇಪ್ಪತ್ತೈದು ಕಷಾಯ, ಹದಿನೈದು ಯೋಗ ಇವು ಆಸ್ರವದ ಐವತ್ತೇಳು ಭೇದಗಳಿವೆ. ಅವುಗಳ ಮೂಲಕ ಈ ಜೀವನು ಯಾವಾಗಲೂ ಕರ್ಮಗಳ ಆಸ್ರವ ಮಾಡಿಕೊಳ್ಳುತ್ತಿರುತ್ತಾನೆ. ಶುದ್ಧ ಭಾವರೂಪದ ಸಂವರದ ಮೂಲಕ ಎಲ್ಲಿಯವರೆಗೆ ಆ ಆಸ್ರವಗಳ ತ್ಯಾಗವಾಗುವುದಿಲ್ಲ ಅಲ್ಲಿಯವರೆಗೆ ಜೀವನು ಸಂಸಾರದಿಂದ ಬಿಡುಗಡೆ ಹೊಂದುವ ಸಾಧ್ಯತೆಯಿಲ್ಲ. ಎಂದರೆ ಜೀವನಿಗೆ ಈ ಆಸ್ರವಗಳೇ ದುಃಖದಾಯಕವಿವೆಯೆಂದು (ಸ್ವಸನ್ಮುಖತೆಯೊಡನೆ) ಪುನಃ ಪುನಃ ಚಿಂತನೆ ಮಾಡುವುದನ್ನು ಆಸ್ರವ ಭಾವನೆಯೆಂದು ಹೇಳುತ್ತಾರೆ.

೮) **ಸಂವರ ಭಾವನೆ -** (ಸ್ವಸನ್ಮುಖತೆಯ ಶುದ್ಧಿಯ ಮೂಲಕವೇ) ಕರ್ಮಗಳ ಆಗಮನವನ್ನು ತಡೆಯುವುದೇ ಸಂವರವಿದೆ. ಈ ಸಂವರವೇ ಸಂಸಾರದಿಂದ ಬಿಡಿಸುವಂಥದು ಮತ್ತು ಮೋಕ್ಷಕ್ಕೆ ತೆಗೆದುಕೊಂಡು ಹೋಗುವಂಥದ್ದಿದೆ. ಐದು ಮಹಾವ್ರತ, ಐದು ಸಮಿತಿ, ಮೂರು ಗುಪ್ತಿ, ಹತ್ತು ಧರ್ಮ, ಹನ್ನೆರಡು ಭಾವನೆ, ಇಪ್ಪತ್ತೆರಡು ಪರೀಷಹ, ಐದು ಪ್ರಕಾರದ ಚಾರಿತ್ರ ಇವೆಲ್ಲವೂ ಸಂವರದ ಕಾರಣಗಳಿವೆ. ಸಮಸ್ತ ಜೀವರುಗಳು ಇವೆಲ್ಲ ಕಾರಣಗಳನ್ನು ಧಾರಣ ಮಾಡಿ ಸಂವರದ ಪ್ರಾಪ್ತಿ ಮಾಡಿಕೊಳ್ಳಬೇಕಾಗುವುದು. ಹೀಗೆ ಮತ್ತೆ ಮತ್ತೆ ಚಿಂತನೆ ಮಾಡವುದೇ ಸಂವರ ಭಾವನೆಯಿದೆ.

೯) **ನಿರ್ಜರೆ ಭಾವನೆ -** (ಸರ್ವಜ್ಞ ವೀತರಾಗ ಕಥಿತ) ತಪಸ್ಸಿನ ಮೂಲಕ ಪೂರ್ವಬದ್ಧ ಕರ್ಮಗಳ ಏಕದೇಶ ಕ್ಷಯ ಮಾಡುವುದು ನಿರ್ಜರೆಯಿದೆ. ಈ ನಿರ್ಜರೆಯು ಸವಿಪಾಕ ನಿರ್ಜರೆ ಮತ್ತು ಅವಿಪಾಕ ನಿರ್ಜರೆಯೆಂದು ಎರಡು ಪ್ರಕಾರದ್ದಿದೆ. ಸವಿಪಾಕ ನಿರ್ಜರೆಯಂತೂ ಸಮಸ್ತ ಸಂಸಾರೀ ಜೀವರುಗಳಿಗೆ ಯಾವಾಗಲೂ ಆಗುತ್ತಲೇ ಇದೆ. ಆದರೆ ಅವಿಪಾಕ ನಿರ್ಜರೆಯು ಮಾತ್ರ ಶುದ್ಧ ಭಾವರೂಪದ ತಪಸ್ಸು ಮೊದಲಾದುವನ್ನು ಮಾಡುವುದರಿಂದಲೇ ಆಗುತ್ತದೆ. ಮತ್ತು ಅವಿಪಾಕ ನಿರ್ಜರೆಯ ಹೊರತಾಗಿ ಈ ಜೀವನು ಸಂಸಾರದಿಂದ ಮುಕ್ತವಾಗುವ ಸಾಧ್ಯತೆಯಿಲ್ಲ. ಆದುದರಿಂದ ಮೋಕ್ಷಾರ್ಥಿಯಾದ ಜೀವರುಗಳು ಈ ಅವಿಪಾಕ ನಿರ್ಜರೆಯನ್ನು ಅವಶ್ಯವಾಗಿ ಮಾಡಬೇಕಾಗುವುದು. ಈ ಪ್ರಕಾರ ಮತ್ತೆ ಮತ್ತೆ ಚಿಂತನೆ ಮಾಡುವುದೇ ನಿರ್ಜರೆ ಭಾವನೆಯೆಂದು ಕರೆಯಿಸಿಕೊಳ್ಳುತ್ತದೆ.

೧೦) **ಲೋಕಭಾವನೆ -** ಈ ಲೋಕದಲ್ಲಿ ಊರ್ಧ್ವಲೋಕ, ಮಧ್ಯಲೋಕ ಮತ್ತು ಅಧೋಲೋಕವೆಂದು ಮೂರು ಭಾಗಗಳಿವೆ. ಈ ಮೂರೂ ಲೋಕವು ಮುನ್ನೂರಾ ನಾಲ್ವತ್ತು ಮೂರು ರಜ್ಜು ಘನಾಕಾರ, ಹದಿನಾಲ್ಕು ರಜ್ಜು ಎತ್ತರ ಯಾರಿಂದಲೂ ನಿರ್ಮಿಸಲ್ಪಟ್ಟಿಲ್ಲ, ಮತ್ತು ಎಂದೂ ಇದರ ನಾಶವಾಗುವುದಿಲ್ಲ, ಆದುದರಿಂದ ಅನಾದಿನಿಧನ, ಸ್ವಯಂಸಿದ್ಧ, ಅವಿನಾಶಿಯಿದೆ. ಅನಂತಾನಂತ ಲೋಕಾಕಾಶದಲ್ಲಿ ಅದರ ಅನಂತದ ಒಂದು ಭಾಗದಷ್ಟು ಲೋಕಾಕಾಶವಿದೆ ಅದು ಷಡ್ ದ್ರವ್ಯಾತ್ಮಕವಿದೆ. ಅಧೋಲೋಕದಲ್ಲಂತೂ ಏಳನೆಯ ನರಕದ ಕೆಳಗೆ ಒಂದು ರಜ್ಜುವಿನವರೆಗೆ ಸ್ಥಾವರಗಳೇ ಇವೆ, ಅಲ್ಲಿ ತ್ರಸರಾಶಿಯಿಲ್ಲ ಮತ್ತು ಉಳಿದ ಆರು ರಜ್ಜುವಿನಲ್ಲಿ ಏಳು ನರಕಗಳಿವೆ, ಅವುಗಳಲ್ಲಿ ವಾಸಿಸುವಂಥ ನಾರಕಿಗಳು ಮಹಾ ದುಃಖಿಯಿರುತ್ತಾರೆ. ಈ ನರಕಗಳ ಮೇಲೆ ಭಾವನವಾಸೀ ಹಾಗೂ ವ್ಯಂತರ ದೇವಗಳಿದ್ದಾರೆ. ಇದು ಅಧೋಲೋಕದ ಸಂಕ್ಷಿಪ್ತ ರಚನೆಯಿದೆ. ಅಧೋಲೋಕದಲ್ಲಿ ಸೂಕ್ಷ್ಮಸ್ಥಾವರಗಳಂತೂ ಸರ್ವತ್ರ ಇವೆ ಹಾಗೂ ಬಾದರಸ್ಥಾವರಗಳು ಯಾವುದರದೋ ಆಧಾರದಿಂದಿವೆ. ತ್ರಸಜೀವಗಳಲ್ಲಿ ಕೆಳಗಿನ ಸ್ಥಾನದಲ್ಲಿ ನಾರಕೀ ಮತ್ತು ಮೇಲಿನ ಸ್ಥಾನದಲ್ಲಿ ಭವನವಾಸೀ ಹಾಗೂ ವ್ಯಂತರರಿದ್ದಾರೆ, ಬೇರೆ ಯಾವ ಜಾತಿಯ ತ್ರಸ ಜೀವಗಳಿಲ್ಲ. ಮಧ್ಯ ಲೋಕದಲ್ಲಿ ಅಸಂಖ್ಯಾತ ದ್ವೀಪ-ಸಮುದ್ರಗಳಿವೆ, ಅವುಗಳಲ್ಲಿ ಎರಡೂವರೆ ದ್ವೀಪ ಮತ್ತು ಎರಡು ಸಮುದ್ರ, ಮಾನುಷೋತ್ತರ ಪರ್ವತದವರೆಗೆ ಮನುಷ್ಯಲೋಕವಿದೆ, ಅದರ ಮುಂದೆ ಮನುಷ್ಯರ ಸಂಚಾರವಿಲ್ಲ. ವ್ಯಂತರ, ಭವನವಾಸೀ, ಜ್ಯೋತಿಷಿಯೆಂದು ಈ ಮೂರು ಪ್ರಕಾರದ ದೇವ ಮತ್ತು ತಿರ್ಯಂಚಗಳೆಲ್ಲವು ಮಧ್ಯಲೋಕದಲ್ಲಿವೆ. ಅವುಗಳಲ್ಲಿ

ಜಲಚರ ಪಂಚೇಂದ್ರಿಯ ಹಾಗೂ ವಿಕಲತ್ರಯಗಳಂತೂ ಎರಡೂವರೆ ದ್ವೀಪ, ಹಾಗೂ ಕೊನೆಯ ಸ್ವಯಂಭೂರಮಣ ದ್ವೀಪ ಅರ್ಧ ಪ್ರಥಮ ಪಾರ್ಶ್ವದ ಮತ್ತು ಅಂತಿಮ ಸ್ವಯಂಭೂರಮಣಸಮುದ್ರಪೂರ್ಣ ಇವುಗಳಲ್ಲಿವೆ. ಉಳಿದ ಅಸಂಖ್ಯಾತ ದ್ವೀಪ- ಸಮುದ್ರಗಳಲ್ಲಿ ವಿಕಲತ್ರಯಗಳಿಲ್ಲ, ಜಲಚರ ಜೀವಗಳು ಲವಣೋದಧಿ ಕಾಲೋದಧಿ ಮತ್ತು ಸ್ವಯಂಭೂರಮಣ ಈ ಮೂರೇ ಸಮುದ್ರಗಳಲ್ಲಿ ಇವೆ, ಅನ್ಯ ಸಮುದ್ರಗಳಲ್ಲಿ ಇಲ್ಲ. ಈ ಮಧ್ಯ ಲೋಕದಲ್ಲಿ ಅನೇಕ ಪ್ರಕಾರದ ರಚನೆಗಳಿವೆ, ಅವುಗಳ ವಿಸ್ತಾರವನ್ನು ಎಲ್ಲಿಯವರೆಗೆಂದು ಹೇಳುವುದು. ಸುಮೇರು ಪರ್ವತದ ಶಿಖರದವರೆಗೆ ಒಂದು ಲಕ್ಷ ಯೋಜನ ಮಧ್ಯಲೋಕವು ಎತ್ತರವಿದೆ. ಜ್ಯೋತಿಷಚಕ್ರವು ಏಳನೂರಾ ತೊಂಭತ್ತು ಯೋಜನದಿಂದ ಹಿಡಿದು ಒಂಭೈನೂರು ಯೋಜನದವರೆಗೆ ಇದೆ. ಮಧ್ಯಲೋಕದ ಮೇಲೆ ಸ್ವರ್ಗಲೋಕವಿದೆ. ಅಲ್ಲಿ ಹದಿನಾರು ಸ್ವರ್ಗ, ನವಗ್ರೈವೇಯಕ, ನವ ಅನುದಿಶ, ಪಂಚಾನುತ್ತರಗಳಿವೆ. ನವಗ್ರೈವೇಯಕ, ನವಅನುದಿಶ ಮತ್ತು ಪಂಚಾನುತ್ತರದಲ್ಲಿ ಅಹಮಿಂದ್ರರುಗಳಿದ್ದಾರೆ, ಅಲ್ಲಿ ದೇವಿಯರು ಇಲ್ಲ, ಎಲ್ಲರೂ ಬ್ರಹ್ಮಚಾರಿಯಿದ್ದಾರೆ. ಸ್ವರ್ಗಲೋಕದಲ್ಲಿ ಸ್ವರ್ಗವಾಸೀ ದೇವ ಹಾಗೂ ಐದು ಸ್ಥಾವರಗಳೂ ಇವೆ, ಅನ್ಯತ್ರಸ ಜೀವಗಳು ಇಲ್ಲ. ಪಂಚಾನುತ್ತರದ ಮಧ್ಯದಲ್ಲಿ ಸರ್ವಾರ್ಥಸಿದ್ಧಿಯಿದೆ. ಅದರ ಸಮಾನವಾಗಿ ಜಗತ್ತಿನಲ್ಲಿ ಬೇರೆ ಯಾವ ಇನ್ನೊಂದು ಸ್ಥಾನವಿಲ್ಲ. ಇದೇ ಸರ್ವಾರ್ಥಸಿದ್ಧಿಯ ಮೇಲೆ ಸಿದ್ಧಲೋಕವಿದೆ. ಅಲ್ಲಿ ಅನಂತಾನಂತ ಸಿದ್ಧರು ವಿರಾಜಮಾನರಿದ್ದಾರೆ, ಅಜರ ಅಮರ ಅವಿನಾಶಿಯಿದ್ದಾರೆ. ಈ ಸಮಸ್ತ ಲೋಕದಲ್ಲಿ ಈ ಸಂಸಾರೀ ಜೀವಗಳು ಅನಾದಿಕಾಲದಿಂದ ಈ ಮೂರೂ ಲೋಕದಲ್ಲಿ ತಮ್ಮ ಅಪರಾಧದಿಂದ ಭ್ರಮಣ ಮಾಡುತ್ತಲಿವೆ. ಅವಕ್ಕೆ ಮಹಾನ ಅಪರಿಮಿತ ದುಃಖವಿದೆ, ಅಂಶ ಮಾತ್ರವೂ ಸುಖವಿಲ್ಲ. ಸುಖದ ಸ್ಥಾನವಂತೂ ಸಿದ್ಧಲೋಕವಿದೆ. ಸಮಸ್ತ ಲೋಕದ ಆಭೂಷಣನು ಶುದ್ಧ ಆತ್ಮನೇ ಸಾರನಿದ್ದಾನೆ. ಉಳಿದುದೆಲ್ಲವೂ ಅಸಾರವಿದೆ. ಈ ನಾಲ್ಕು ಗತಿರೂಪವಾದ ಲೋಕದ ನಿವಾಸವು ಯಾವಾಗ ಮುರಿಯುವುದೆಂಬ ವಿಚಾರ ಮಾಡುವುದನ್ನೇ ಲೋಕಭಾವನೆಯೆಂದು ಹೇಳುತ್ತಾರೆ.

೧೧) **ಬೋಧಿದುರ್ಲಭ ಭಾವನೆ -** ಸಂಸಾರದಲ್ಲಿ ನಿಗೋದರಾಶಿಯಿಂದ ವ್ಯವಹಾರರಾಶಿಯಲ್ಲಿ ಬರುವುದು ದುರ್ಲಭವಿದೆ, ಮತ್ತೆ ಏಕೇಂದ್ರೀ ಜೀವವು ಪೃಥ್ವಿಕಾಯ, ಆಪಕಾಯ, ಅಗ್ನಿಕಾಯ, ವಾಯುಕಾಯ ಹಾಗೂ ಪ್ರತ್ಯೇಕ ವನಸ್ಪತಿಕಾಯದಿಂದ ಹೊರಹೊರಟು ತ್ರಸಕಾಯದಲ್ಲಿ ಬರುವುದು ದುರ್ಲಭವಿದೆ, ಅದರಲ್ಲೂ ದ್ವೀಂದ್ರಿಯ, ತ್ರೀಂದ್ರಿಯವಾಗುವುದು ದುರ್ಲಭವಿದೆ, ತ್ರೀಂದ್ರಿಯದಿಂದ ಚತುರಿಂದ್ರಿಯವಾಗುವುದು ದುರ್ಲಭವಿದೆ, ಚತುರಿಂದ್ರಿಯದಿಂದ ಅಸಂಜ್ಞೀ ಪಂಚೇಂದ್ರಿಯವಾಗುವುದು ದುರ್ಲಭವಿದೆ, ಅಸಂಜ್ಞಿಯಿಂದ ಸಂಜ್ಞೀ ಪಂಚೇಂದ್ರಿಯವಾಗುವುದು ದುರ್ಲಭವಿದೆ, ಪಂಚೇಂದ್ರೀತಿರ್ಯಂಚದಿಂದ ಮನುಷ್ಯನಾಗುವುದು ಅತ್ಯಂತ ದುರ್ಲಭವಿದೆ, ಮನುಷ್ಯದಲ್ಲಿ ಕೂಡ ಆರ್ಯಖಂಡ, ಉತ್ತಮಕುಲ, ದೀರ್ಘಾಯು, ಧರ್ಮಬುದ್ಧಿ ಪಡೆಯುವುದು ಅತ್ಯಂತ ದುರ್ಲಭವಿದೆ. ಅನಂತರ ಸಮ್ಯಕ್ತ್ವದ ಪ್ರಾಪ್ತಿ ಮತ್ತು ಶ್ರಾವಕನ ವ್ರತ ತುಂಬ ದುರ್ಲಭವಿದೆ, ಶ್ರಾವಕನ ವ್ರತದಿಂದ ಮುನಿಯ ವ್ರತಧಾರಣ ಮಾಡುವುದು ಅತ್ಯಂತ ದುರ್ಲಭವಿದೆ. ಇನ್ನು ಮುನಿ ವ್ರತದಲ್ಲಿ ಕೂಡ ಶುಭೋಪಯೋಗದ ಅಪೇಕ್ಷೆಯಿಂದ ಶುದ್ಧೋಪಯೋಗದ ದಶೆ ಪ್ರಾಪ್ತ ಮಾಡಿಕೊಳ್ಳುವುದು ಮಹಾನ ಮಹಾನ ದುರ್ಲಭವಿದೆ. ಸಂಸಾರದಲ್ಲಿ ಸಮಸ್ತ ವಸ್ತುಗಳು ಸುಲಭವಿವೆ ಎಂದರೆ ಶೀಘ್ರದಲ್ಲಿಯೇ ಪ್ರಾಪ್ತವಾಗುವ ಸಾಧ್ಯತೆಯಿವೆ. ಆದರೆ ಕೇವಲಜ್ಞಾನದ ಪ್ರಾಪ್ತಿ ಮಾಡಿಕೊಳ್ಳುವುದು ಪರಮ ದುರ್ಲಭವಿದೆ ಮತ್ತು ಕೇವಲಜ್ಞಾನವಿಲ್ಲದೆ ಈ ಜೀವನಿಗೆ ಮೋಕ್ಷವು ದೊರಕುವ ಸಾಧ್ಯತೆಯಿಲ್ಲದಿರುವುದರಿಂದ ಪ್ರತಿಯೊಬ್ಬ ಜೀವನು ಆ ಕೇವಲಜ್ಞಾನದ ಪ್ರಾಪ್ತಿ ಮಾಡಿಕೊಳ್ಳುವಲ್ಲಿ ತತ್ಪರ ಹಾಗೂ ಪ್ರಯತ್ನಶೀಲನಾಗಿರಬೇಕಾಗುವುದು. ಎಲ್ಲಿಯವರೆಗೆ ಕೇವಲಜ್ಞಾನದ ಪ್ರಾಪ್ತಿಯಾಗುವುದಿಲ್ಲ ಅಲ್ಲಿಯವರೆಗೆ ಈ ಆತ್ಮನು ಸಂಸಾರದಲ್ಲಿ ಭ್ರಮಣ ಮಾಡುತ್ತಲೇ ಇರಬೇಕಾಗುವುದು. ಆದುದರಿಂದ ಎಲೈ ಆತ್ಮನೇ ! ಒಂದು ವೇಳೆ ನಿನಗೆ ವಾಸ್ತವಿಕ ಸುಖದ ಪ್ರಾಪ್ತಿ ಮಾಡಿಕೊಳ್ಳುವುದಿದ್ದರೆ ನೀನು ಬೇಗನೇ

ನಾಲ್ಕು ಘಾತಿಕರ್ಮಗಳ ನಾಶ ಮಾಡಿ ಕೇವಲಜ್ಞಾನ ಪ್ರಾಪ್ತಮಾಡಿಕೊಳ್ಳು. ಈ ಪ್ರಕಾರ ಸ್ವಸನ್ಮುಖತೆಯೊಡನೆ ಮತ್ತೆ ಮತ್ತೆ ಚಿಂತನ ಮಾಡುವುದು ಅದು ಬೋಧಿ ದುರ್ಲಭ ಭಾವನೆಯಿದೆ.

೧೨) **ಧರ್ಮಭಾವನೆ -** ವಾಸ್ತವದಲ್ಲಿ ಜೀವನಿಗೆ ಸುಖ ಕೊಡುವಂಥ ವಸ್ತುವೆಂದರೆ ಒಂದು ಧರ್ಮವೇ ಇದೆ, ಏಕೆಂದರೆ ಧರ್ಮವು ಸ್ವಭಾವದ ಹೆಸರು ಇದೆ. ಪ್ರತಿಯೊಂದು ವಸ್ತುವಿನ ಯಾವ ಸ್ವಭಾವವಿದೆ ಅದುವೇ ಅದರ ಧರ್ಮವಿದೆ. ಜೀವ ವಸ್ತುವಿನ ಸ್ವಭಾವವು ಚೈತನ್ಯವಿದ್ದು ಅದೇ ಪರಮಧರ್ಮವಿದೆ. ಯಾವಾಗ ಈ ದ್ರವ್ಯವು ತನ್ನ ಸ್ವಭಾವದಲ್ಲಿ ಪರಿಣಮನ ಮಾಡುತ್ತದೆ ಆಗಲೇ ಇದು ಸುಖಿ ಮತ್ತು ಶುದ್ಧವೆಂದು ಕರೆಸಿಕೊಳ್ಳುತ್ತದೆ. ಈ ಆತ್ಮನ ಯಾವ ಜ್ಞಾನಗುಣವಿದೆ. ಅದೇ ಅವನ ಧರ್ಮವಿದೆ. ಎಲ್ಲಿಯವರೆಗೆ ಈ ಆತ್ಮನು ತನ್ನ ಜ್ಞಾನಧರ್ಮ ಅಥವಾ ಸಮ್ಯಗ್ದರ್ಶನ-ಸಮ್ಯಗ್ಜ್ಞಾನ-ಸಮ್ಯಕ್ಚಾರಿತ್ರರೂಪ ರತ್ನತ್ರಯಧರ್ಮದ ಪೂರ್ಣ ವಿಕಾಸ ಮಾಡುವುದಿಲ್ಲ ಅಲ್ಲಿಯವರೆಗೆ ಈ ಸಂಸಾರದ ಬಂಧನದಿಂದ ಬಿಡುಗಡೆ ಹೊಂದುವ ಸಾಧ್ಯತೆಯಿಲ್ಲ.

ಉತ್ತಮ ಕ್ಷಮೆ, ಮಾರ್ದವ, ಆರ್ಜವ ಮೊದಲಾದವು ಕೂಡ ಆತ್ಮನ ದಶಧರ್ಮಗಳಿವೆ ಮತ್ತು ಜೀವದಯೆಯು ಕೂಡ ಆತ್ಮನ ಧರ್ಮವಿದೆ. ಈ ಧರ್ಮವು ಪ್ರತಿಯೊಬ್ಬ ಸಂಸಾರೀ ಆತ್ಮನಲ್ಲಿ ವಿರಾಜಮಾನವಿದ್ದರೂ ಕೂಡ ಎಲ್ಲಿಯವರೆಗೆ ಆತ್ಮನಲ್ಲಿ ಇವುಗಳ ವಿಕಾಸವಾಗುವುದಿಲ್ಲ ಅಲ್ಲಿಯವರೆಗೆ ಈ ಆತ್ಮನು ಸಂಸಾರರೂಪದ ಕಾರಾಗೃಹದಿಂದ ಬಿಡುಗಡೆಯಾಗುವ ಸಾಧ್ಯತೆಯಿಲ್ಲ ಎಂದರೆ ಮೋಕ್ಷ ಪ್ರಾಪ್ತ ಮಾಡಿಕೊಳ್ಳುವ ಸಾಧ್ಯತೆಯಿಲ್ಲ. ಈ ಪ್ರಕಾರ ಪುನಃಪುನಃ ಚಿಂತನೆ ಮಾಡುವುದು ಅದು ಧರ್ಮಭಾವನೆಯಿದೆ. ಈ ಪ್ರಕಾರ ಹನ್ನೆರಡು ಭಾವನೆಗಳ ವರ್ಣನೆ ಮಾಡಲಾಯಿತು. ಈ ಹನ್ನೆರಡು ಭಾವನೆಗಳು ವೈರಾಗ್ಯದ ಜನನಿಯಿವೆ. ಏಕೆಂದರೆ ಸಂಸಾರದಿಂದ ವೈರಾಗ್ಯವನ್ನುತ್ಪನ್ನ ಮಾಡುವಲ್ಲಿ ಇವು ಮುಖ್ಯ ಸಹಾಯಕವಿವೆ. ಈ ಹನ್ನೆರಡು ಭಾವನೆಗಳ ಚಿಂತನೆ ಮಾಡುವುದರಿಂದ ವೈರಾಗ್ಯದ ಪುಷ್ಟಿಯಾಗುವುದರಿಂದ ಯಾವಾಗಲೂ ಇವುಗಳ ಚಿಂತನೆ ಮಾಡಿರಿ !

ಈಗ ಇಪ್ಪತ್ತೆರಡು ಪರೀಷಹಗಳ ವರ್ಣನೆ ಮಾಡುತ್ತಾರೆ,

**ಕ್ಷುತ್ತೃಷ್ಣಾ ಹಿಮಮುಷ್ಣಂ ನಗ್ನತ್ವಂ ಯಾಚನಾರತಿರಲಾಭಃ ।**
**ದಂಶೋ ಮಶಕಾದೀನಾಮಾಕ್ರೋಶೋ ವ್ಯಾಧಿದುಃಖಮಂಗಮಲಮ್ ॥೨೦೬॥**
**ಸ್ಪರ್ಶಶ್ಚ ತೃಣಾದೀನಾಮಜ್ಞಾನಮದರ್ಶನಂ ತಥಾ ಪ್ರಜ್ಞಾ ।**
**ಸತ್ಕಾರಪುರಸ್ಕಾರಃ ಶಯ್ಯಾ ಚರ್ಯಾ ವಧೋ ನಿಷದ್ಯಾ ಸ್ತ್ರೀ ॥೨೦೭॥**
**ದ್ವಾವಿಂಶತಿರಪ್ಯೇತೇ ಪರಿಷೋಢವ್ಯಾಃ ಪರೀಷಹಾಃ ಸತತಮ್ ।**
**ಸಂಕ್ಲೇಶಮುಕ್ತಮನಸಾ ಸಂಕ್ಲೇಶನಿಮಿತ್ತಭೀತೇನ ॥೨೦೮॥**

**ಅನ್ವಯಾರ್ಥ :-** **[ಸಂಕ್ಲೇಶಮುಕ್ತಮನಸಾ]** ಸಂಕ್ಲೇಶದಿಂದ ರಹಿತವಾದ ಚಿತ್ತವುಳ್ಳ ಮತ್ತು **[ಸಂಕ್ಲೇಶನಿಮಿತ್ತ-ಭೀತೇನ]** ಸಂಕ್ಲೇಶದ ನಿಮಿತ್ತದಿಂದ ಎಂದರೆ ಸಂಸಾರದಿಂದ ಭಯಭೀತರಾದ ಸಾಧುಗಳು **[ಸತತಮ್]** ನಿರಂತರವಾಗಿ **[ಕ್ಷುತ್]** ಕ್ಷುಧೆ, **[ತೃಷ್ಣಾ]** ತೃಷೆ, **[ಹಿಮವ್]** ಶೀತ, **[ಉಷ್ಣಮ್]** ಉಷ್ಣ **[ನಗ್ನತ್ವಂ]** ನಗ್ನತನ, **[ಯಾಚನಾ]** ಪ್ರಾರ್ಥನೆ, **[ಅರತಿಃ]** ಅರತಿ, **[ಅಲಾಭಃ]** ಅಲಾಭ, **[ಮಶಕಾದೀನಾಂದಂಶಃ]** ಸೊಳ್ಳೆ ಮೊದಲಾದವು ಕಚ್ಚುವುದು, **[ಆಕ್ರೋಶಃ]** ಕುವಚನ, **[ವ್ಯಾಧಿದುಃಖವ್]** ರೋಗದ ದುಃಖ, **[ಅಂಗಮಲವ್]** ಶರೀರದ ಮಲ,

**[ತೃಣಾದೀನಾಂ ಸ್ಪರ್ಶಃ]** ಹುಲ್ಲು ಮೊದಲಾದವುಗಳ ಸ್ಪರ್ಶ, **[ಅಜ್ಞಾನಮ್]** ಅಜ್ಞಾನ, **[ಅದರ್ಶನಮ್]** ಅದರ್ಶನ **[ತಥಾ]** ಅದೇ ಪ್ರಕಾರ **[ಪ್ರಜ್ಞಾ]** ಪ್ರಜ್ಞೆ, **[ಸತ್ಕಾರ-ಪುರಸ್ಕಾರಃ]** ಸತ್ಕಾರ ಪುರಸ್ಕಾರ, **[ಶಯ್ಯಾ]** ಶಯನ, **[ಚರ್ಯಾ]** ಗಮನ, **[ವಧಃ]** ವಧೆ **[ನಿಷಿದ್ಯಾ]** ಆಸನ **[ಚ]** ಮತ್ತು **[ಸ್ತ್ರೀ]** ಸ್ತ್ರೀ **[ಏತೇ]** ಇವು **[ದ್ವಾವಿಂಶತಿಃ]** ಇಪ್ಪತ್ತೆರಡು **[ಪರೀಷಹಾಃ]** ಪರೀಷಹಗಳನ್ನು **[ಅಪಿ]** ಕೂಡ **[ಪರಿಷೋಢವ್ಯಾಃ]** ಸಹನೆ ಮಾಡುವುದು ಯೋಗ್ಯವಿದೆ.

**ಟೀಕೆ ಃ- ಕ್ಷುತ್ ತೃಷ್ಣಾಂ ಹಿಮಂ ಉಷ್ಣಂ ನಗ್ನತ್ವಂ ಯಾಚನಾ ಅರತಿಃ ಅಲಾಭಃ ಮಶಕಾದೀನಾಂ ದಂಶಃ ಆಕ್ರೋಶಃ ವ್ಯಾಧಿದುಃಖಂ ಅಂಗಮಲಮ್ ತೃಣಾದೀನಾಂ ಸ್ಪರ್ಶಃ ಅಜ್ಞಾನಂ ಅದರ್ಶನಂ ತಥಾ ಪ್ರಜ್ಞಾ ಸತ್ಕಾರ ಪುರಸ್ಕಾರಃ ಶಯ್ಯಾ ಚರ್ಯಾ ವಧಃ ನಿಷದ್ಯಾ ಸ್ತ್ರೀ ಏತೇ ದ್ವಾವಿಂಶತಿಃ ಅಪಿ ಪರೀಷಹಾಃ ಸಂಕ್ಲೇಶ ಮುಕ್ತಮನಸಾ ಸಂಕ್ಲೇಶನಿಮಿತ್ತಭೀತೇನ ಸತತಂ ಪರಿಷೋಢವ್ಯಾಃ।'** - ಹಸಿವು, ಬಾಯಾರಿಕೆ, ಶೀತ, ಉಷ್ಣ, ನಗ್ನತೆ, ಯಾಚನೆ, ಅರತಿ, ಅಲಾಭ, ಸೊಳ್ಳೆ ಮೊದಲಾದವುಗಳ ಕಡಿತ, ನಿಂದೆ, ರೋಗದ ದುಃಖ, ಶರೀರದ ಮಲ, ಕಂಟಕಮುಳ್ಳು ಮೊದಲಾದವು ಚುಚ್ಚುವುದು, ಅಜ್ಞಾನ, ಅದರ್ಶನ, ಪ್ರಜ್ಞೆ, ಸತ್ಕಾರ-ಪುರಸ್ಕಾರ, ಶಯನ, ಗಮನ, ವಧೆ, ನಿಷದ್ಯಾ (ನಿವಾಸ-ಆಸನ) ಮತ್ತು ಸ್ತ್ರೀ - ಇವು ಇಪ್ಪತ್ತೆರಡು ಪರೀಷಹಗಳನ್ನು ಮುನಿರಾಜರು ಸಂಕ್ಲೇಶ ದೂರ ಮಾಡಿ ಮತ್ತು ಸಂಕ್ಲೇಶಭಾವದಿಂದ ಭಯಭೀತರಾಗಿ ಸತತ ಸಹನೆ ಮಾಡುತ್ತಾರೆ. ಈಗ ಇಪ್ಪತ್ತೆರಡು ಪರೀಷಹಗಳ ಸಂಕ್ಷಿಪ್ತ ವರ್ಣನೆ ಮಾಡುತ್ತಾರೆ.

**೧) ಕ್ಷುಧಾ ಪರೀಷಹ** - ಹಸಿವೆಯ ವಶೀಭೂತವಾಗಿ ಸಮಸ್ತ ಜೀವಗಳು ಬಹಳಷ್ಟು ದುಃಖ ಪಡೆಯುತ್ತವೆ, ಆದರೆ ಮುನಿ ಮಹಾರಾಜರಿಗೆ ಯಾವಾಗ ಹಸಿವೆಯ ಬಾಧೆಯಾಗುತ್ತದೆ ಆಗ ಅವರು ವಿಚಾರ ಮಾಡುವುದೇನೆಂದರೆ ಎಲೈ ಜೀವನೇ ! ನೀನು ಅನಾದೀ ಕಾಲದಿಂದ ಸಂಸಾರದಲ್ಲಿ ಪರಿಭ್ರಮಣ ಮಾಡುತ್ತ ಅನೇಕ ಪ್ರಕಾರದ ಅನಂತ ಪುದ್ಗಲರಾಶಿಯ ಭಕ್ಷಣೆ ಮಾಡಿರುವೆ, ಆದಾಗ್ಯೂ ನಿನ್ನ ಕ್ಷುಧೆಯು ಶಾಂತವಾಗಿಲ್ಲ ಮತ್ತು ನರಕ ಗತಿಯಲ್ಲಿ ಕೂಡ ಅತ್ಯಂತ ಕ್ಷುಧೆಯನ್ನು ಸಹನೆ ಮಾಡಿ ಈಗ ನೀನು ಈ ಸಮಯದಲ್ಲಿ ಮೋಕ್ಷದ ಪ್ರಾಪ್ತಿಯ ಸಲುವಾಗಿ ಸಿದ್ಧನಾಗಿ ಹೋಗಿರುವೆ, ಈ ನಿನ್ನ ಶರೀರವಂತೂ ಇಲ್ಲಿಯೇ ಬಿದ್ದು ಬಿಡುವುದಿದೆ, ಆದುದರಿಂದ ಶಾಂತಜ್ಞಾನಾನಂದ ಸ್ವರೂಪದಲ್ಲಿ ಲೀನತೆ ಪಡೆದು ಕ್ಷುಧೆಯ ನಾಶ ಮಾಡು, ಅದರಿಂದ ಶೀಘ್ರದಲ್ಲಿಯೇ ಮೋಕ್ಷದ ಪ್ರಾಪ್ತಿಯಾಗಿ ಹೋಗುವುದು. ಈ ಪ್ರಕಾರದ ಭಾವಗಳಿಂದ ಸಾಧು ಸಮೂಹವು ಕ್ಷುಧಾಪರೀಷಹದ ಸಹನೆ ಮಾಡುತ್ತಾರೆ.

**೨) ತೃಷಾಪರೀಷಹ** - ಸಮಸ್ತ ಜೀವಗಳು ಬಾಯಾರಿಕೆಯಿಂದ ತುಂಬ ದುಃಖಿಯಾಗುತ್ತವೆ. ಮುನಿರಾಜರು ಗ್ರೀಷ್ಮ ಋತುವಿನಲ್ಲಿ ಪರ್ವತದ ಶಿಖರದ ಮೇಲೆ ಇರುತ್ತಾರೆ, ಅಲ್ಲಿ ಅನೇಕ ಉಪವಾಸಗಳನ್ನೂ ಧಾರಣ ಮಾಡುವ ಕಾರಣ ಅವರಿಗೆ ತೃಷೆಯ ಬಾಧೆಯು ಉತ್ಪನ್ನವಾಗುತ್ತದೆ. ಆದಾಗ್ಯೂ ಆ ಧೀರ-ವೀರ ಸಾಧುಗಳು ಎಲೈ ಜೀವನೇ ! ನೀನು ಈ ಸಂಸಾರದಲ್ಲಿ ಭ್ರಮಣ ಮಾಡುತ್ತ ಇಡೀ ಜಗತ್ತಿನ ಜಲವನ್ನೆಲ್ಲ ಕುಡಿದು ಬಿಟ್ಟರೂ ಕೂಡ ನಿನ್ನ ಬಾಯಾರಿಕೆಯು ಇದುವರೆಗೆ ಶಾಂತವಾಗಲಿಲ್ಲ. ನರಕಗತಿಯಲ್ಲಿ ಆ ಸಮುದ್ರಗಳ ಜಲವನ್ನೆಲ್ಲ ಕುಡಿದು ಬಿಟ್ಟರೂ ಕೂಡ ಹೊರಟು ಹೋಗದಂಥ ತೃಷೆಯ ಬಾಧೆಯು ಉತ್ಪನ್ನವಾಗಿದ್ದರೂ ಅಲ್ಲಿಕುಡಿಯಲು ಒಂದು ಬಿಂದು ಮಾತ್ರವೂ ಜಲವು ಪ್ರಾಪ್ತವಾಗಲಿಲ್ಲ. ಮತ್ತು ತಿರ್ಯಂಚ ಗತಿಯಲ್ಲಿ ತೃಷಾ ಬಾಧೆಯನ್ನು ಬಹಳಷ್ಟು ಸಹನೆ ಮಾಡಿದೆ ಅದರಂತೆ ಮನುಷ್ಯಗತಿಯಲ್ಲಿ ಕೂಡ ತೃಷೆಯ ವೇದನೆಯನ್ನು ಸಹನೆ ಮಾಡಬೇಕಾಗಿ ಬಂದಿದೆ. ಆದರೆ ಎಲೈ ಜೀವನೇ ! ನೀನು ಇಂದು ಲೋಕಪೂಜ್ಯವಾದ ಮುನಿಪದವನ್ನು ಧಾರಣ ಮಾಡಿರುವುದರಿಂದ ಈ ತೃಷೆಯ ಪರೀಷಹವನ್ನು ಸಹನೆ ಮಾಡುತ್ತ ಆತ್ಮಧ್ಯಾನದಲ್ಲಿ ಚಿತ್ತವನ್ನು ತೊಡಗಿಸು ಅದರಿಂದ ಈ ತೃಷೆಯ ಬಾಧೆಯು ನಿರಂತರದ ಸಲುವಾಗಿ ಹೊರಟು ಹೋಗುವುದೆಂಬ ಭಾವನೆ ಭಾವಿಸುತ್ತ ಮನಸ್ಸಿನಲ್ಲಿ ಸಮಾಧಾನ ತಂದುಕೊಳ್ಳುತ್ತಾರೆ. ಈ ಪ್ರಕಾರ ಮುನಿರಾಜರು

ತೃಷೆಯ ಪರೀಷಹವನ್ನು ಸಹನೆ ಮಾಡುತ್ತಾರೆ ಮತ್ತು ಸಂಯಮದಿಂದ ವಿಚಲಿತರಾಗುವುದಿಲ್ಲ. ಇದೇ ತೃಷಾಪರೀಷಹವಿದೆ.

**೩) ಶೀತ ಪರೀಷಹ -** ಶೀತದ ಕಾರಣದಿಂದ ಸಂಸಾರದ ಪ್ರಾಣಿಗಳು ಅತ್ಯಂತ ದುಃಖಿಯಾಗುತ್ತವೆ. ಪ್ರಫುಲ್ಲತೆಯಿಂದ ನಳನಳಿಸುವ ವೃಕ್ಷಗಳು ಕೂಡ ಹಿಮಪಾತದಿಂದ ದಗ್ಧವಾಗಿ ಹೋಗುತ್ತವೆ, ಇಂಥ ಪೌಷ-ಮಾಸದ ಭಯಂಕರ ಚಳಿಯಲ್ಲಿ ಮಹಾಧೀರರಾದ ನಗ್ನಶರೀರದ ಮುನಿರಾಜರು ನದಿಯ ಅಥವಾ ಸರೋವರದ ತೀರದಲ್ಲಿ ಕಾಯೋತ್ಸರ್ಗ ಅಥವಾ ಪದ್ಮಾಸನ ಧಾರಣ ಮಾಡಿ ಧ್ಯಾನ ಮಾಡುತ್ತಾರೆ. ಆ ಸಮಯದಲ್ಲಿಚಳಿಯ ಬಾಧೆಯಾಗುತ್ತಿದ್ದರೂ ಕೂಡ ಅವರು ಖೇದ ಮಾಡುವುದಿಲ್ಲ. ಆದರೆ ಹೀಗೆ ವಿಚಾರ ಮಾಡುತ್ತಾರೆ - ಎಲೈ ಜೀವನೇ! ನೀನು ಅನಾದಿ ಕಾಲದಿಂದ ಅನಂತ ಬಾರಿ ಪಶುಗತಿಯಲ್ಲಿ ಮತ್ತು ಮನುಷ್ಯಗತಿಯಲ್ಲಿ ಕೂಡ ಅತ್ಯಧಿಕ ಮಹಾನ ಚಳಿಯನ್ನು ಸಹನೆ ಮಾಡಿದೆ. ಒಂದು ವೇಳೆ ನೀನು ಅದನ್ನು ದೂರ ಮಾಡುವ ಸಲುವಾಗಿ ಅನೇಕಾನೇಕ ಉಪಾಯ ಮಾಡಿದ್ದರೂ ಕೂಡ ಇಂದಿನವರೆಗೆ ನಿನ್ನ ಚಳಿಯ ನಿವಾರಣೆಯಾಗಲಿಲ್ಲ. ಈಗ ನೀನು ಮುನಿವ್ರತವನ್ನು ಧಾರಣ ಮಾಡಿರುವೆ, ಇದೇ ಪದದಿಂದ ಮೋಕ್ಷದ ಪ್ರಾಪ್ತಿಯಾಗುವುದು. ಆದುದರಿಂದ ಎಲೈ ಜೀವನೇ ! ನೀನು ಈ ಚಳಿಯ ಪರೀಷಹವನ್ನು ಸಮ್ಯಕ್ ಪ್ರಕಾರದಿಂದ ಸಹನೆ ಮಾಡು. ಹೀಗೆ ಚಿಂತನೆ-ವಿಚಾರ ಮಾಡಿ ಆತ್ಮಧ್ಯಾನದಲ್ಲಿ ಲೀನವಾಗುವುದನ್ನೇ ಶೀತಪರೀಷಹವೆಂದು ಹೇಳಲಾಗುತ್ತದೆ.

**೪) ಉಷ್ಣ ಪರೀಷಹ -** ಗ್ರೀಷ್ಮ ಋತುವಿನಲ್ಲಿ ಸೂರ್ಯನು ಅತ್ಯಂತ ತಪ್ತಾಯಮಾನನಿರುತ್ತಾನೆ, ಆಗ ಇಡೀ ಜಗತ್ತಿನ ಪ್ರಾಣಿಕೋಟಿಯು ಬಿಸಿಲಿನ ಬಾಧೆಯಿಂದ ಅತ್ಯಂತ ವ್ಯಾಕುಲವಾಗಿ ಹೋಗುತ್ತದೆ, ನದಿ-ಸರೋವರಗಳ ನೀರು ಬತ್ತಿ ಹೋಗುತ್ತದೆ, ಆ ಸಮಯದಲ್ಲಿ ಮುನಿರಾಜರು ಪರ್ವತದ ಶಿಖರದ ಮೇಲೆ ಪಾಷಾಣದ ಶಿಲೆಯ ಮೇಲೆ ಕುಳಿತುಕೊಂಡು (ಸೂರ್ಯನ ಕಡೆಗೆ ಮುಖ ಮಾಡಿ ಆತಾಪನ ಯೋಗ ಧಾರಣ ಮಾಡುತ್ತಾರೆ ಮತ್ತು ) ಮನಸ್ಸಿನಲ್ಲಿ ಹೀಗೆ ವಿಚಾರ ಮಾಡುತ್ತಾರೆ. ಎಲೈ ಆತ್ಮನೇ ! ನೀನು ಅಗ್ನಿಯ ಪರ್ಯಾಯ ಧಾರಣ ಮಾಡಿ ಪ್ರಚಂಡ ಉಷ್ಣತೆಯನ್ನು ಸಹನೆ ಮಾಡಿರುವೆ, ನರಕಗತಿಯಲ್ಲಿ ಭಯಂಕರ ಉಷ್ಣತೆಯನ್ನು ಸಹನೆ ಮಾಡಿರುವೆ, ಆದರೆ ಇಲ್ಲಿ ಉಷ್ಣತೆಯಿದೆಯಾದರೂ ಎಷ್ಟು ? ಈ ಸಮಯದಲ್ಲಿ ನೀನು ಮುನಿವ್ರತವನ್ನು ಧಾರಣ ಮಾಡಿರುವುದರಿಂದ ಆತ್ಮಾನಂದರೂಪದ ಅಮೃತದಿಂದ ತೃಪ್ತನಾಗಿ ಇಂಥ ತುಚ್ಛವಾದ ಬಿಸಿಲಿನ ಬಾಧೆಯನ್ನು ಆನಂದದಿಂದ ಸಹನೆ ಮಾಡು. ಈ ರೀತಿಯಿಂದ ಚಿಂತನೆ ಮಾಡಿ ಉಷ್ಣಪರೀಷಹವನ್ನು ಸುಖಪೂರ್ವಕವಾಗಿ ಜಯಿಸುತ್ತಾರೆ. ಇದನ್ನೇ ಉಷ್ಣಪರೀಷಹವೆಂದು ಹೇಳುತ್ತಾರೆ.

**೫) ನಗ್ನ ಪರೀಷಹ -** ನಗ್ನಮುದ್ರೆ ಧರಿಸಿದ ಅವಿಕಾರಿಯಾದ ಮಹಾ ಮುನಿಗಳು ಭಯಂಕರವಾದ ಕಾಡಿನಲ್ಲಿ ಏಕಾಕಿಯಾಗಿ ಇರುತ್ತಾರೆ. ನೂಲಿನ ಬಟ್ಟೆ, ರೇಶ್ಮೆಯ ಬಟ್ಟೆ, ನಾರಿನ ಬಟ್ಟೆ, ಸಣಬಿನ ಬಟ್ಟೆ, ಹುಲ್ಲು ಮೊದಲಾದ ಎಲ್ಲ ಪ್ರಕಾರದ ಬಟ್ಟೆಯ ತ್ಯಾಗ ಮಾಡುತ್ತಾರೆ. ಚರ್ಮ, ರೋಮ, ವೃಕ್ಷಗಳ ವಲ್ಕಲ ಮೊದಲಾಗಿ ಯಾವುದನ್ನೂ ಇಟ್ಟುಕೊಳ್ಳುವುದಿಲ್ಲ. ಅವರಿಗೆ ದಶದಿಶೆಗಳೇ ವಸ್ತ್ರಗಳಿವೆ. ಅವರಿಗೆ ಮತ್ತಿನ್ನೇನು ಬೇಕಾಗುವುದು ? ಹೀಗೆ ದಿಗಂಬರ ಮುನಿರಾಜರು ಅಖಂಡ ಬ್ರಹ್ಮಚರ್ಯದ ಪಾಲನೆ ಮಾಡುತ್ತ ತಮ್ಮ ಆತ್ಮಧ್ಯಾನದಲ್ಲಿ ಲೀನರಿರುತ್ತಾರೆ. ನಗ್ನರಿರುವುದರಿಂದ ಸ್ವಲ್ಪ ಮಾತ್ರವೂ ದುಃಖವನ್ನು ಮನ್ನಿಸುವುದಿಲ್ಲ. ಯಾವಾಗಲೂ ತಮ್ಮ ಆತ್ಮನಲ್ಲಿ ಲೀನರಿರುತ್ತಾರೆ, ಇದನ್ನೇ ನಗ್ನ ಪರೀಷಹವೆಂದು ಹೇಳುತ್ತಾರೆ.

**೬) ಯಾಚನಾಪರೀಷಹ -** ಯಾಚನೆಯಿಂದ ಸಮಸ್ತ ಸಂಸಾರೀ ಜೀವಗಳು ದುಃಖಿಯಾಗುತ್ತಲಿವೆ. ಇತರರಿಗೇನು ಹೇಳುವುದು, ಇಂದ್ರ-ಚಕ್ರವರ್ತಿಯಂಥವರು ಕೂಡ ಅಭಿಲಾಷೆಯಿಂದ ರಂಕರಾಗುತ್ತಲಿದ್ದಾರೆ, ಆದರೆ ಅಯಾಚಕ ವ್ರತಧಾರಿಯಾದ ಮುನಿರಾಜರು ಯಾರಿಂದಲೂ ಏನನ್ನೂ ಬೇಡುವುದಿಲ್ಲ. ಅಯ್ಯಾ ಮಹನೀಯರೇ !

ಅವರು ತೀರ್ಥಂಕರ ಪ್ರಭುಗಳಿಂದ ಕೂಡ ಮೋಕ್ಷರೂಪದ ಲಕ್ಷ್ಮಿಯನ್ನು ಯಾಚಿಸುವುದಿಲ್ಲವೆಂದ ಮೇಲೆ ಬೇರೆ ಯಾರಿಂದ ಮತ್ತಿನ್ನಾವ ವಸ್ತುವನ್ನು ಬೇಡಬಹುದೇನು ? ಈ ಜಗತ್ತಿನಲ್ಲಿ ಯಾಚನೆಗೆ ಸಮಾನವಾಗಿ ಬೇರೆಯಾದ ನ್ಯೂನತೆಯಿಲ್ಲ, ಮತು ಅಯಾಚಕವ್ರತಕ್ಕೆ ಸಮಾನವಾದ ಬೇರಾವ ಉತ್ಕೃಷ್ಟತೆಯು ಮೂರೂ ಲೋಕದಲ್ಲಿ ಇಲ್ಲ. ಮುನಿವ್ರತದ ಮೂಲವು ಅಯಾಚಕವೃತ್ತಿಯಿದೆ. ಸ್ನಾನ, ಭೋಜನ, ಧರ್ಮೋಪಕರಣ ಮೊದಲಾಗಿ ಏನನ್ನೂ ಯಾರಿಂದಲೂ ಬೇಡುವುದಿಲ್ಲ. ಅತ್ಯಂತ ನಿರಭಿಲಾಷಿಯಾಗಿರುತ್ತಾರೆ.

ಮುನಿರಾಜರಿಗೆ ಬೇಕಾದರೆ ವಾರ, ತಿಂಗಳು, ವರ್ಷಗಳವರೆಗೆ ಆಹಾರ ದೊರಕದಿದ್ದರೂ ಅವರು ಎಂದೂ ಯಾವ ಶ್ರಾವಕನಿಂದಲೂ ಆಹಾರದ ಯಾಚನೆ ಮಾಡದಿರುವುದರಿಂದ ಮುನಿಯ ವೃತ್ತಿಯನ್ನು ಸಿಂಹವೃತ್ತಿಯೆಂದು ಹೇಳುತ್ತಾರೆ. ಈ ಪ್ರಕಾರ ಯಾಚನಾಪರೀಷಹವನ್ನು ಜಯಿಸುತ್ತಾರೆ.

**೭) ಅರತಿ ಪರೀಷಹ -** ಜಗತ್ತಿನ ಜೀವರುಗಳು ಇಷ್ಟಪದಾರ್ಥಗಳ ಪ್ರಾಪ್ತಿಯಾದ ಮೇಲೆ ಪ್ರೀತಿ ಮನ್ನಿಸುತ್ತಾರೆ, ಮತ್ತು ಅನಿಷ್ಟ ಪದಾರ್ಥಗಳ ಪ್ರಾಪ್ತಿಯಾದ ಮೇಲೆ ಅಪ್ರೀತಿ-ದುಃಖ ಮನ್ನಿಸುತ್ತಾರೆ. ಆದರೆ ಮುನಿರಾಜರು ಬೇಕಾದರೆ ಕಾಡಿನಲ್ಲಿ ಇರಲಿ, ಯಾರಾದರೂ ಅವರನ್ನು ಒಳಿತು ಕೆಡಕೆಂದು ಹೇಳಲಿ ಆದಾಗ್ಯೂ ಎಂದೂ ಪ್ರೀತಿ - ಅಪ್ರೀತಿಯನ್ನು ಮನ್ನಿಸುವುದಿಲ್ಲ. ಅವರಿಗೆ ಅರಮನೆ ಮತ್ತು ಭಯಂಕರ ಕಾಡು, ಶತ್ರು ಮತ್ತು ಮಿತ್ರ, ಚಿನ್ನ ಮತ್ತು ಮಣ್ಣು ಸ್ತುತಿ ಮತ್ತು ನಿಂದೆ, ಸುಖ ಮತ್ತು ದುಃಖ, ಜೀವನ ಮತ್ತು ಮರಣ ಇವೆಲ್ಲವು ಸಮಾನವಿವೆ. ಎಂದರೆ ತಮ್ಮ ಚಿತ್ತದಲ್ಲಿ ಯಾವಾಗಲೂ ಸಮತೆಯನ್ನು ಧಾರಣ ಮಾಡುವಂಥ ಸಾಧುವು ಅರತಿ ಪರೀಷಹವನ್ನು ಜಯಿಸುತ್ತಾರೆ.

**೮) ಅಲಾಭ ಪರೀಷಹ -** ಸಾಧುಗಳು ಅನೇಕ ಉಪವಾಸ ಮಾಡಿರಲಿ ಮತ್ತು ಪಾರಣೆಯ ದಿವಸ ನಿರ್ದೋಷ ಆಹಾರ ಲಾಭವಾಗದಿದ್ದರೂ ಕೂಡ ಚಿತ್ತದಲ್ಲಿ ಸ್ವಲ್ಪ ಮಾತ್ರವೂ ಖೇದ ಮನ್ನಿಸುವುದಿಲ್ಲ. ಈ ಪ್ರಕಾರದ ಯಾವ ಯತೀಶ್ವರರು ಲಾಭ-ಅಲಾಭಗಳೆರಡನ್ನು ಸಮಾನವಾಗಿ ಮನ್ನಿಸುತ್ತಾರೆ ಅವರೇ ಅಲಾಭ ಪರೀಷಹದ ಮೇಲೆ ವಿಜಯ ಪ್ರಾಪ್ತ ಮಾಡಿಕೊಳ್ಳುತ್ತಾರೆ.

**೯) ದಂಶಮಶಕ ಪರೀಷಹ -** ಸೊಳ್ಳೆ, ನೊಣ, ಕಟ್ಟಿರುವೆ, ಚಿಕ್ಕ ಇರುವೆ ಮೊದಲಾದ ಜೀವಗಳ ಕಡಿತದ ಬಾಧೆಯನ್ನು ಜಗತ್ತಿನ ಪ್ರಾಣಿಗಳು ಸಹನೆ ಮಾಡುವ ಸಾಧ್ಯತೆಯಿಲ್ಲ, ಆದರೆ ಯೋಗೀಶ್ವರರುಗಳು ಅವೆಲ್ಲವುಗಳ ಬಾಧೆಯನ್ನು ಸಹನೆ ಮಾಡುತ್ತಾರೆ, ಆ ಕಚ್ಚುವಂಥ ಸಮಸ್ತ ಪ್ರಾಣಿಗಳ ಮೂಲಕ ತಮ್ಮ ನಗ್ನವಿರುವ ಶರೀರದಲ್ಲಿ ಬಹಳಷ್ಟು ಬಾಧೆಯನ್ನು ಉತ್ಪನ್ನಮಾಡಿದರೂ ಕೂಡ ಮುನಿಮಹಾರಾಜರುಗಳು ಎಂದೂ ಮನಸ್ಸಿನಲ್ಲಿ ಖೇದ-ಖಿನ್ನರಾಗುವುದಿಲ್ಲ. ಈ ಪ್ರಕಾರ ದಂಶಮಶಕ ಪರೀಷಹವನ್ನು ಜಯಿಸುತ್ತಾರೆ.

**೧೦) ಆಕ್ರೋಶ ಪರೀಷಹ -** ಯಾವ ಕೆಲವರು ದಿಗಂಬರ ಮುನಿಗಳನ್ನು ನೋಡಿ ನಿಂದೆ ಮಾಡುತ್ತಾರೆ, ದುರ್ವಚನಗಳನ್ನು ಆಡುತ್ತಾರೆ, ಬೈಯುತ್ತಾರೆ, ಆದರೆ ಇಂಥ ನಿಷ್ಠುರ ವಚನಗಳನ್ನು ಕೇಳಿ ಅವರು ಸ್ವಲ್ಪ ಮಾತ್ರವೂ ಖಿನ್ನರಾಗುವುದಿಲ್ಲ, ಆದರೆ ಉತ್ತಮ ಕ್ಷಮೆಯನ್ನೇ ಧಾರಣ ಮಾಡುತ್ತಾರೆ. ಈ ಪ್ರಕಾರ ಮುನಿರಾಜರು ಆಕ್ರೋಶ ಪರೀಷಹದ ಮೇಲೆ ವಿಜಯ ಪಡೆಯುತ್ತಾರೆ.

**೧೧) ರೋಗ ಪರೀಷಹ -** ಪೂರ್ವೋಪಾರ್ಜಿತ ಅಸಾತಾವೇದನೀಯ ಕರ್ಮದ ಉದಯದಿಂದ ಶರೀರದಲ್ಲಿ ಪೀಡೆಯುಂಟಾದರೆ ಮುನಿಮಹಾರಾಜರು ಆ ರೋಗದಿಂದ ದುಃಖಿಯಾಗುವುದಿಲ್ಲ. (ರೋಗವಾದ ಮೇಲೆ ಲೌಕಿಕ ಜನರು ಅತ್ಯಂತ ವ್ಯಾಕುಲರಾಗಿ ಹೋಗುತ್ತಾರೆ, ಆದರೆ ಮುನಿರಾಜರು ತಮ್ಮ ಶರೀರದಲ್ಲಿ ರೋಗಗಳ ಉಪಸ್ಥಿತಿಯಾದ ಮೇಲೆ ಚಿತ್ತದಲ್ಲಿ ಯಾವುದೇ ಪ್ರಕಾರದ ಖೇದವನ್ನು ಬರಗೊಡುವುದಿಲ್ಲ ಮತ್ತು ಆ ರೋಗಗಳ ಪ್ರತಿಕಾರದ ಸಲುವಾಗಿ ಯಾವ ಉಪಾಯವನ್ನೂ ಮಾಡುವುದಿಲ್ಲ) ರೋಗ ಬರುವುದಂತೂ ಪೂರ್ವಕೃತ ಕರ್ಮಗಳ

ಫಲವೆಂದು ತಿಳಿದುಕೊಂಡು ಅತ್ಯಂತ ನಿಶ್ಚಲತೆಯೊಡನೆ, ಆತ್ಮಧ್ಯಾನದಲ್ಲಿ ಲೀನರಿರುತ್ತಾರೆ. ಇದನ್ನು ರೋಗ ಪರೀಷಹ ಜಯವೆಂದು ಹೇಳುತ್ತಾರೆ.

**೧೨) ಮಲ ಪರೀಷಹ -** (ತಮ್ಮ ತ್ರೈಕಾಲಿಕ ನಿರ್ಮಲ ಜ್ಞಾನಾನಂದಮಯ ಸ್ವರೂಪದ ಅವಲಂಬನದಲ್ಲಿಯೇ ಸಾವಧಾನರಿರುವುದರಿಂದ) ಮುನಿರಾಜರಿಗಂತೂ ಜೀವನದ ಪರ್ಯಂತ ಸ್ನಾನ ಮತ್ತು ವಿಲೇಪನದ ತ್ಯಾಗವಿರುತ್ತದೆ. ಗ್ರೀಷ್ಮಋತುವಿನಲ್ಲಿ ಬಿಸಿಲೊಳಗೆ ಇರುವುದರ ಕಾರಣ ಬೆವರಿನ ಯೋಗದಿಂದ ಶರೀರದ ಮೇಲೆ ಧೂಳು ಬಂದು ಕೂತುಬಿಡುತ್ತದೆ, ನಗ್ನ ಶರೀರವು ಮಲಿನವಾಗಿ ಕಂಡು ಬರುತ್ತಿದ್ದರೂ ಕೂಡ ಆ ಶರೀರದ ಕುರಿತು ಸಂಯಮೀ ಸಾಧುವಿನ ಧ್ಯಾನ ಹೋಗುವುದಿಲ್ಲ, ಏಕೆಂದರೆ ಅವರು ತಮ್ಮ ಆತ್ಮ ಗುಣಗಳಲ್ಲಿಯೇ ಲೀನರಾಗಿರುತ್ತಾರೆ, ಅದನ್ನೇ ಮಲಪರೀಷಹವೆಂದು ಹೇಳುತ್ತಾರೆ. (ಮತ್ತು ಅವರು ಎಲೈ ಜೀವನೇ! ಈ ಶರೀರವಂತೂ ಸ್ವಭಾವದಿಂದಲೇ ಮಹಾ ಮಲಿನವಿದೆ, ಇದನ್ನು ಸಮುದ್ರದಷ್ಟು ಜಲದಿಂದ ತೊಳೆದರೂ ಕೂಡ ಪವಿತ್ರವಾಗುವ ಸಾಧ್ಯತೆಯಿಲ್ಲ ಮತ್ತು ನೀನಂತೂ ಪರಮಪವಿತ್ರನಾದ ಆತ್ಮನಿರುವುದರಿಂದ ಈ ಶರೀರದ ಮಲಿನತೆಯಿಂದ ನೀನು ಹೇಗೆ ಮಲಿನನಾಗುವ ಸಾಧ್ಯತೆಯಿದೆ?- ಎಂದೂ ಆಗುವುದಿಲ್ಲ. ಏಕೆಂದರೆ ಅಮೂರ್ತಿಕವಿರುವ ಪದಾರ್ಥಕ್ಕೆ ಮಲದ ಸಂಸರ್ಗವು ಮಲದ ಸ್ಪರ್ಶವು ಆಗುವ ಸಾಧ್ಯತೆಯೇ ಇಲ್ಲ) ಆದುದರಿಂದ ಎಲೈ ಆತ್ಮನೇ ! ನೀನು ಈ ದೇಹದ ಸ್ನೇಹ ತ್ಯಾಗ ಮಾಡಿ ನಿನ್ನ ಶುದ್ಧ ಭಾವದಲ್ಲಿ ಸ್ಥಿರನಾಗಿ ಹೋಗು - ಲೀನನಾಗಿ ಹೋಗೆಂಬ ಭಾವನೆಯನ್ನು ಭಾವಿಸುತ್ತಾರೆ. ಇಂಥ ಭಾವನೆಯ ಬಲದಿಂದಲೇ ಮುನಿರಾಜರು ಮಲಪರೀಷಹದ ಸಹನೆ ಮಾಡುತ್ತಾರೆ.

**೧೩) ತೃಣಸ್ಪರ್ಶ ಪರೀಷಹ -** ಜಗತ್ತಿನ ಜೀವಗಳ ಶರೀರದಲ್ಲಿ ಒಂದು ಹುಲ್ಲುಕಡ್ಡಿ ತಗಲಿದರೆ ಕೂಡ ವ್ಯಾಕುಲರಾಗಿ ಹೋಗುತ್ತಾರೆ. ಆದರೆ ಜೀವಗಳ ರಕ್ಷಣೆ ಮಾಡುವುದರಲ್ಲಿತತ್ಪರರಿರುವಂಥ ಸಂಯಮ ಧನದ ಧನಿಕರಾದ ಯೋಗಿಗಳ ಶರೀರದಲ್ಲಿ ನಡೆಯುವ ಅಥವಾ ಕೂತುಕೊಳ್ಳುವ ಸಮಯದಲ್ಲಿ ಹರಳು, ಬೆಣಚುಗಲ್ಲು, ಮುಳ್ಳು ಮೊದಲಾದವು ಚುಚ್ಚಿಕೊಂಡರೆ ಅವನ್ನು ತೆಗೆದು ಎಸೆಯುವಂಥ ಯಾವ ಉಪಾಯವನ್ನೂ ಮಾಡುವುದಿಲ್ಲ, ಆದರೆ ವ್ಯಾಕುಲತೆಯಿಂದ ರಹಿತರಾಗಿ ನಿಜಸ್ವರೂಪದಲ್ಲಿಯೇ ಲೀನರಿರುತ್ತಾರೆ. ಇದು ತೃಣಸ್ಪರ್ಶ ಪರೀಷಹವಿದೆ.

**೧೪) ಅಜ್ಞಾನ ಪರೀಷಹ -** ಸಮಸ್ತ ಸಂಸಾರೀ ಪ್ರಾಣಿಗಳು ಅಜ್ಞಾನ ವಶದಿಂದ ದುಃಖಿಯಾಗುತ್ತಲಿವೆ. ಅವರಿಗೆ ನಿಜಸ್ವರೂಪದ ಜ್ಞಾನವಿಲ್ಲ. ಒಂದು ವೇಳೆ ಓದುವ ಅಭ್ಯಾಸವಿಟ್ಟುಕೊಂಡರೆ ಮತ್ತು ಶಬ್ದಾರ್ಥದ ಲಾಭವಾಗದಿದ್ದರೆ ಮನಸ್ಸಿನಲ್ಲಿ ದುಃಖಿಯಾಗುತ್ತಾರೆ ಮತ್ತು ಓದುವುದರಲ್ಲಿ ಅಪ್ರೀತಿ ಮಾಡಲಾರಂಭಿಸುತ್ತಾರೆ. ಆದರೆ ಮಹಾಮುನಿರಾಜರಿಗೆ ಪೂರ್ವೋಪಾರ್ಜಿತ ಜ್ಞಾನಾವರಣೀಯ ಕರ್ಮದ ಉದಯದಿಂದ ಪಠಣ-ಪಾಠಣದ ಉದ್ಯಮ ಮಾಡಿದ ಮೇಲೆ ಹಾಗೂ ಅನೇಕ ವರ್ಷಗಳವರೆಗೆ ಮಹಾನ ತಪಸ್ಸು ಮಾಡಿದ ಮೇಲೆ ಕೂಡ ಶ್ರುತದ ಪೂರ್ಣ ಜ್ಞಾನವಾಗದಿದ್ದರೆ ಅಥವಾ ಅವಧಿ, ಮನಃಪರ್ಯಯ ಜ್ಞಾನಗಳು ಉತ್ಪನ್ನವಾಗದಿದ್ದರೂ ಕೂಡ ಅವರು ದುಃಖಿಯಾಗುವುದಿಲ್ಲ, ಅವರು ತಮ್ಮ ನಿತ್ಯಾನಂದ ಸ್ವರೂಪದಲ್ಲಿಯೇ ಸಂತೋಷ ಧಾರಣ ಮಾಡುತ್ತಾರೆ. ಇದಕ್ಕೆ ಅಜ್ಞಾನ ಪರೀಷಹವೆಂದು ಹೇಳುತ್ತಾರೆ. (ನಾನು ತಪಸ್ಸು ಮಾಡುತ್ತ ಇಷ್ಟು ದೀರ್ಘಕಾಲವು ಕಳೆದು ಹೋದರು ಕೂಡ ನನಗೆ ಜ್ಞಾನದ ವೃದ್ಧಿಯಾಗಲಿಲ್ಲವೆಂಬ ವಿಕಲ್ಪವನ್ನು ಅವರು ಮಾಡುವುದಿಲ್ಲ. ಯಾರಾದರೂ ಮೂಢ ಪುರುಷರು ಅವರನ್ನು ನೋಡಿ ಈ ಸಾಧು ಎಷ್ಟು ಅಜ್ಞಾನಿಯಿದ್ದಾನೆಂದು ಹೇಳಿದರೂ ಕೂಡ ಅವರ ವಚನದಿಂದ ಖೇದ ಖಿನ್ನರಾಗುವುದಿಲ್ಲ, ಅಥವಾ ಜ್ಞಾನದ ವೃದ್ಧಿಯಾಗಿಹೋದರೆ ಆ ಜ್ಞಾನದ ಗರ್ವವನ್ನು ಎಂದೂ ಮಾಡುವುದಿಲ್ಲ. ಇಂಥ ಯತೀಶ್ವರರನ್ನು ಅಜ್ಞಾನ ಪರೀಷಹದ ವಿಜಯಿಗಳೆಂದು ಹೇಳುತ್ತಾರೆ.)

**೧೫) ಅದರ್ಶನ ಪರೀಷಹ -** ಜಗತ್ತಿನ ಜೀವರುಗಳು ಸಮಸ್ತ ಕಾರ್ಯಗಳನ್ನು ತಮ್ಮ ಪ್ರಯೋಜನದ

ಸಿದ್ಧಿಯ ಸಲುವಾಗಿ ಮಾಡುತ್ತಾರೆ, ಮತ್ತು ಪುರುಷಾರ್ಥ ಮಾಡಿದ ನಂತರ ಕೂಡ ಪ್ರಯೋಜನದ ಸಿದ್ಧಿಯಾಗದಿದ್ದರೆ ಅಥವಾ ಅದರಲ್ಲಿ ಒಂದಿಷ್ಟು ನ್ಯೂನತೆಯು ಉಳಿದುಕೊಂಡರೆ ದುಃಖ ಮನ್ನಿಸುತ್ತಾರೆ. (ಆದರೆ ಮುನಿರಾಜರು ನಾನು ಬಾಲ್ಯಾವಸ್ಥೆಯಲ್ಲಿಯೇ ಮಹಾವ್ರತಾದಿಗಳನ್ನು ಧಾರಣ ಮಾಡುತ್ತಿದ್ದೇನೆ. ಮತ್ತು ಚಿರಕಾಲದವರೆಗೆ ಉಗ್ರತರವಾದ ತಪಸ್ಸು ಮಾಡಿದ ನಂತರವು ಕೂಡ ಯಾವುದೇ ಋದ್ಧಿ ಮೊದಲಾದ ಅತಿಶಯದ ಪ್ರಾಪ್ತಿಯಾಗದಿದ್ದರೆಂಬ ವಿಚಾರವನ್ನೇ ಮಾಡುವುದಿಲ್ಲ.) ನಾನು ಸ್ವಾಧ್ಯಾಯ ಮತ್ತು ತಪಸ್ಸು ಮಾಡುತ್ತ ಬಹಳಷ್ಟು ಸಮಯವು ಕಳೆದು ಹೋಗಿದೆ, ನಾನು ಕಷಾಯಗಳ ಮೇಲೆ ಕೂಡ ವಿಜಯ ಪ್ರಾಪ್ತ ಮಾಡಿಕೊಂಡಿರುವೆ, ಸಂಯಮದ ಪಾಲನೆಯನ್ನು ಕೂಡ ನಿರತಿಚಾರವಾಗಿ ಮಾಡುತ್ತಲಿದ್ದೇನೆ, ಆದಾಗ್ಯೂ ನನಗೆ ಇದುವರೆಗೆ ಯಾವುದೇ ಋದ್ಧಿಯು ಉತ್ಪನ್ನವಾಗಿಲ್ಲ ಮತ್ತು ಯಾವ ಅತಿಶಯವೂ ಪ್ರಾಪ್ತವಾಗಿಲ್ಲವೆಂಬ ವಿಚಾರವನ್ನು ಕೂಡ ಎಂದೂ ಮಾಡುವುದಿಲ್ಲ ಈ ತಪಸ್ಸು ಮಾಡಿದುದರ ಹಾಗೂ ಸಂಯಮ ಪಾಲಿಸಿದುದರ ಯಾವುದಾದರೂ ಫಲವು ದೊರಕುತ್ತದೆಯೋ ಅಥವಾ ಇಲ್ಲವೋ ?- ಎಂಬುದು ತಿಳಿದು ಬರುತ್ತಿಲ್ಲವಲ್ಲ ! ಎಂದು ಯಾವುದಾದರೂ ಸಂಶಯ ಅಥವಾ ವಿಕಲ್ಪಮಾಡಿ ಮುನಿರಾಜರು ಸಮ್ಯಗ್ದರ್ಶನದಲ್ಲಿ ದೋಷ ತಗಲಿಸುವುದಿಲ್ಲ ಮತ್ತು ಅವರ ತಪ-ಸಂಯಮಗಳು ಅಚಲವಾಗಿರುತ್ತವೆ. ಇದನ್ನು ಅದರ್ಶನ ಪರೀಷಹವೆಂದು ಹೇಳುತ್ತಾರೆ.

೧೬) **ಪ್ರಜ್ಞಾಪರೀಷಹ** - ಲೌಕಿಕ ಜನರು ಒಂದಿಷ್ಟು ಜ್ಞಾನವಾಗಿ ಹೋದರೆ ಅದರ ಗರ್ವವನ್ನು ಅತಿಯಾಗಿ ಮಾಡತೊಡಗುತ್ತಾರೆ. ಮತ್ತು ನನ್ನ ಸಮಾನ ಯಾರೂ ಬುದ್ಧಿವಂತರಿಲ್ಲವೆಂದು ಮನಸ್ಸಿನಲ್ಲಿ ವಿಚಾರಿಸಲು ಆರಂಭಿಸುತ್ತಾರೆ. ಆದರೆ ಮಹಾಮುನಿರಾಜರಿಗೆ ಶಬ್ದ, ಅರ್ಥ, ನ್ಯಾಯ, ಛಂದಸ್ಸು, ಅಲಂಕಾರ ಮೊದಲಾಗಿ ದ್ವಾದಶಾಂಗದ ಪೂರ್ಣ ಜ್ಞಾನವಿದ್ದರೂ ಅಥವಾ ಅವಧಿಜ್ಞಾನ ಇಲ್ಲವೆ ಮನಃಪರ್ಯಾಯ ಜ್ಞಾನವಿದ್ದರೂ ಕೂಡ ತಿಲಮಾತ್ರವೂ ಗರ್ವ ಮಾಡುವುದಿಲ್ಲ ಮತ್ತು ಬುದ್ಧಿಯ ಮಂದತೆಯಿದ್ದರೂ ಕೂಡ ಖೇದ ಖಿನ್ನರಾಗುವುದಿಲ್ಲ. ಯಾವನಾದರೂ ಮನುಷ್ಯನು ಅವರನ್ನು ಬುದ್ಧಿಹೀನರೆಂದು ತಿಳಿಸಿಕೊಟ್ಟರೂ ಅವರಲ್ಲಿ ದ್ವೇಷ ಭಾವ ಮಾಡುವುದಿಲ್ಲ. ಇಂಥ ಯೋಗಿಗಳೇ ಪ್ರಜ್ಞಾ ಪರೀಷಹವನ್ನು ಸಹನೆ ಮಾಡುತ್ತಾರೆ.

೧೭) **ಸತ್ಕಾರ ಪುರಸ್ಕಾರ ಪರೀಷಹ** - ದೇವ, ಮನುಷ್ಯ, ತಿರ್ಯಂಚ ಮೊದಲಾಗಿ ಸಂಸಾರದ ಸಮಸ್ತ ಜೀವರುಗಳು ಆದರ-ಸತ್ಕಾರದಿಂದ ಹರ್ಷಿತರಾಗುತ್ತಾರೆ. ಮತ್ತು ಸತ್ಕಾರ ಮಾಡುವವರ ಕುರಿತು ಮೈತ್ರೀ ಭಾವವಿಡುತ್ತಾರೆ ಹಾಗೂ ಅನಾದರ ಮಾಡುವಂಥವರ ಕುರಿತು ವೈರತ್ವವನ್ನಿಟ್ಟುಕೊಳ್ಳುತ್ತಾರೆ. ಈ ಪ್ರಕಾರ ನಿರಂತರ ರಾಗ-ದ್ವೇಷ ರೂಪವಾಗಿ ಪರಿಣಮನ ಮಾಡುತ್ತಾರೆ. ಆದರೆ ವೀತರಾಗತೆಯ ಧಾರಕರಾದ ಯತೀಶ್ವರರು ಇಂದ್ರ ಮತ್ತು ಚಕ್ರವರ್ತಿ ಮೊದಲಾದವರಿಂದ ಪೂಜೆ - ಸ್ತುತಿ ಮಾಡಿದ ಮೇಲೆಯೂ ಅಥವಾ ಯಾವನೋ ಅವಿವೇಕಿ ಮನುಷ್ಯನ ಮೂಲಕ ನಿಂದೆ ಮಾಡಿದ ಮೇಲೆ ಕೂಡ ಯಾರಲ್ಲಿಯೂ ರಾಗ-ದ್ವೇಷ ಮಾಡುವುದಿಲ್ಲ. ಆದರೆ ಸಮತೆಯ ಭಾವವನ್ನು ಧಾರಣ ಮಾಡಿ, ಮನಸ್ಸಿನಲ್ಲಿ ಹೀಗೆ ವಿಚಾರ ಮಾಡುತ್ತಾರೆ - ಎಲೈ ಜೀವನೇ ! ನೀನಂತೂ ದೃಷ್ಟಿ-ಅಗೋಚರ, ವಚನ-ಅಗೋಚರ, ಅಮೂರ್ತಿಕ ಪದಾರ್ಥನಿರುವೆ. ಯಾರೇ ಆಗಲಿ ಅದರ ಸತ್ಕಾರ ಅಥವಾ ಸ್ತುತಿಯನ್ನು ಹೇಗೆ ತಾನೇ ಮಾಡುವ ಸಾಧ್ಯತೆಯಿದೆ ? ಮತ್ತು ಈ ಶರೀರವಂತೂ ಮೈಥುನದಿಂದ ಉತ್ಪನ್ನವಾದ ಮಲ-ಮೂತ್ರದ ಪಾತ್ರೆಯಿದೆ ಅದುಸ್ತುತಿಯೋಗ್ಯ ಹೇಗಾಗುವ ಸಾಧ್ಯತೆಯಿದೆ? ಎಂದೂ ಆಗುವ ಸಾಧ್ಯತೆಯಿಲ್ಲ. ಆದುದರಿಂದ ಸ್ತುತಿ ಮತ್ತು ನಿಂದೆಯಿಂದ ಹರ್ಷ-ವಿಷಾದ ಮನ್ನಿಸುವುದು ವ್ಯರ್ಥವಿದೆ. ಈ ಪ್ರಕಾರ ಯಾವ ಮುನಿರಾಜರು ಯಾರ ಕಡೆಯಿಂದಲೂ ಆದರ - ಸತ್ಕಾರದ ಇಚ್ಛೆ ಮಾಡುವುದಿಲ್ಲ ಮತ್ತು ಅನಾದರದಿಂದ ಖೇದ-ಖಿನ್ನರಾಗುವುದಿಲ್ಲ ಅವರೇ ಸತ್ಕಾರ - ಪುರಸ್ಕಾರ ಪರೀಷಹದ ವಿಜಯಿಗಳಿರುತ್ತಾರೆ.

೧೮) **ಶಯ್ಯಾಪರೀಷಹ** - ಜಗತ್ತಿನ ಜೀವರುಗಳು ವಿಷಯಾಭಿಲಾಷಿಗಳಾಗಿ ಮೃದುವಾದ ಶಯ್ಯೆಯ

ಮೇಲೆ ಮಲಗಿಕೊಳ್ಳುವ ಅನುರಾಗವಿಡುತ್ತಾರೆ. ಆದರೆ ಯೋಗೀಶ್ವರರಾದ ಮುನಿರಾಜರು (ಚಿನ್ನ-ರತ್ನಾದಿಗಳ ಅರಮನೆ ಹಾಗೂ ಸುಂದರ ಶಯ್ಯಾದಿಗಳ ತ್ಯಾಗ ಮಾಡಿ) ವನವಾಸಿಗಳಾಗಿ ಕಟ್ಟಡವಿಯ ವಿಷಮ ಭೂಮಿಯಲ್ಲಿ ರಾತ್ರಿಯ ಕೊನೆಯ ಗಳಿಗೆಯಲ್ಲಿ ಏಕಾಸನದಿಂದ ಒಂದಿಷ್ಟು ನಿದ್ರೆ ಮಾಡುತ್ತಾರೆ ಮತ್ತು ಅಲ್ಲಿ ಅವರ ಕ್ಷೀಣವಾದ ಶರೀರದಲ್ಲಿ ಬೆಣಚುಕಲ್ಲು ಮೊದಲಾದುವು ಚುಚ್ಚಿಕೊಳ್ಳುತ್ತವೆ ಅವುಗಳಿಂದ ದುಃಖಿಯಾಗುವುದಿಲ್ಲ, ಆದರೆ ಮನಸ್ಸಿನಲ್ಲಿ ಎಂಥ ಭಾವನೆ ಭಾವಿಸುತ್ತಾರೆಂದರೆ ಎಲೈ ಜೀವನೇ ! ನೀನು ನರಕದ ತೀವ್ರ ವೇದನೆಯನ್ನು ಅನಂತಬಾರಿ ಸಹನೆ ಮಾಡಿರುವೆ, ಅದಕ್ಕೆ ಸಮಾನವಾದ ಬೇರಾವ ವಿಷಮ ಭೂಮಿಯು ಇಲ್ಲ. ಈ ಭೂಮಿಯಂತೂ ನೀನು ವ್ಯರ್ಥವಾಗಿ ಖೇದ ಮಾಡುವಂತೆ ಸ್ವಲ್ಪವೂ ವಿಷಮವಾಗಿಲ್ಲ. ಈಗಂತೂ ನೀನು ತ್ರೈಲೋಕ್ಯ ಪೂಜ್ಯವಾದ ಜಿನಮುದ್ರೆಯನ್ನು ಧಾರಣ ಮಾಡಿರುವೆ, ನೀನು ಮೋಕ್ಷಾರ್ಥಿಯೇ ಇರುವೆ ಮತ್ತು ಈ ಭವ ಸಮುದ್ರದಿಂದ ಬಿಡುಗಡೆ ಹೊಂದಿ ನಿರ್ವಾಣ ದ್ವೀಪವನ್ನು ತಲುಪಲು ಬಯಸುತ್ತಿರುವುದರಿಂದ ಮೋಹರೂಪದ ನಿದ್ರೆಯನ್ನು ಜಯಿಸಿ ಯೋಗದಲ್ಲಿ ಆರೂಢನಾಗು, ಸದಾ ಜಾಗೃತನಿದ್ದು ನಿನ್ನ ಸ್ವರೂಪದಲ್ಲಿ ನಿಮಗ್ನನಾಗು, ಶಯ್ಯಾ ಪರೀಷಹದ ಬಾಧೆಯಿಂದ ಚಿತ್ತದಲ್ಲಿ ಅಸ್ಥಿರತೆ ತಂದುಕೊಳ್ಳಬೇಡ, ಈ ಪ್ರಕಾರ ವಿಚಾರ ಮಾಡುತ್ತ ಮುನಿರಾಜರು ಶಯ್ಯಾಪರೀಷಹವನ್ನು ಸಹನೆ ಮಾಡುತ್ತಾರೆ. ಇದು ಶಯ್ಯಾಪರೀಷಹ ಜಯಿಸುವುದಿದೆ.

**೧೯) ಚರ್ಯಾ ಪರೀಷಹ -** ಸಂಸಾರೀ ಜೀವರುಗಳು ಆನೆ,ಕುದುರೆ, ರಥ, ಪಲ್ಲಕ್ಕಿ ಮೊದಲಾದ ವಾಹನದಲ್ಲಿ ಆರೂಢರಾಗಿ ಸೊಗಸಾದ ಸಮಯದಲ್ಲಿ ಕೂಡ ಗಮನ ಮಾಡುವಲ್ಲಿ ಖೇದ ಮನ್ನಿಸುತ್ತಾರೆ ಮತ್ತುತಿರ್ಯಂಚಗಳು ಕೂಡ ಗಮನ ಮಾಡುವಲ್ಲಿ ದುಃಖಿಯಾಗುತ್ತವೆ, ಆದರೆ ಮುನಿರಾಜರು ಗಮನದ ಸಮಯದಲ್ಲಿ ಈರ್ಯಾಪಥ ಶೋಧಿಸುತ್ತ ನಡೆಯುತ್ತಾರೆ. ಗ್ರೀಷ್ಮ ಋತುವಿನಲ್ಲಿ ದಶದಿಶೆಗಳು ತಪ್ತಾಯಮಾನವಾಗಿ ಹೋಗುತ್ತವೆ. ಮತ್ತು ಮಾರ್ಗದಲ್ಲಿ ಕಲ್ಲು-ಮುಳ್ಳು ಮೊದಲಾದವು ಚುಚ್ಚುತ್ತವೆ, ಆದಾಗ್ಯೂ ಸ್ವಲ್ಪ ಕೂಡ ಖೇದ ಮನ್ನಿಸುವುದಿಲ್ಲ. ಈ ಪ್ರಕಾರ ಮಹಾಮುನಿರಾಜರುಗಳು ಚರ್ಯಾ ಪರೀಷಹದ ಮೇಲೆ ವಿಜಯ ಪ್ರಾಪ್ತ ಮಾಡಿಕೊಳ್ಳುತ್ತಾರೆ.

**೨೦) ವಧ ಪರೀಷಹ -** ಭವವಾಸೀ ಜೀವರುಗಳು ಹೊಡೆ-ಬಡಿಯುವುದರಿಂದ ಯಾವಾಗಲೂ ಭಯ ಭೀತರಿರುತ್ತಾರೆ, ಒಂದು ವೇಳೆ ಯಾರಾದರೂ ಅವರ ಮೇಲೆ ಉಪದ್ರವ ಮಾಡಿದರೆ ಅವರಲ್ಲಿ ದ್ವೇಷ ಮಾಡಿ ಅತ್ಯಂತ ತೀವ್ರಕಷಾಯಧಾರಣ ಮಾಡುತ್ತಾರೆ. ಆದರೆ ಮುನಿರಾಜರು ಯಾವನೋ ಪಾಪಿ ಜೀವನು ಕಟ್ಟಿ ಹಾಕಿದರೆ ಅಥವಾ ಕೋಲು, ಪಾಷಾಣದಿಂದ ಹೊಡೆದರೆ ಮತ್ತು ನಾನಾ ಪ್ರಕಾರದ ಉಪಸರ್ಗ ಮಾಡಿ ಮಹಾನ ಕಷ್ಟವನ್ನುಂಟು ಮಾಡಿದರೂ ಕೂಡ ಅವರು ಅವನ ಮೇಲೆ ಸ್ವಲ್ಪ ಮಾತ್ರವೂ ದ್ವೇಷ ಮಾಡುವುದಿಲ್ಲ. ಸಮತೆಯ ಭಾವವನ್ನೇ ಇಡುತ್ತಾರೆ. ಮತ್ತು ನನ್ನ ಆತ್ಮನಂತೂ ಅಮೂರ್ತಿಕನಿದ್ದಾನೆ, ಅವಿನಾಶೀ ಚಿದಾನಂದಮಯನಿದ್ದಾನೆ, ಅವನಿಗೆ ಯಾರು ದುಃಖ ಕೊಡುವ ಸಾಧ್ಯತೆಯಿದೆ ? ಯಾರು ಹೊಡೆಯುವ ಸಾಧ್ಯತೆಯಿದೆ ? ಯಾರು ದಂಡಿಸುವ ಸಾಧ್ಯತೆಯಿದೆ ? ನಾನಂತೂ ಜ್ಞಾನಾನಂದ ಸ್ವರೂಪನೇ ಇದ್ದೇನೆಂದು ವಿಚಾರ ಮಾಡುತ್ತಾರೆ. ಈ ಪ್ರಕಾರ ಮುನಿರಾಜರು ವಧ ಪರೀಷಹವನ್ನು ಜಯಿಸುತ್ತಾರೆ.

**೨೧) ನಿಷದ್ಯಾ ಪರೀಷಹ -** ಪ್ರಪಂಚದ ಸಮಸ್ತ ಜೀವರುಗಳು ಉತ್ತಮ ಮನೋಜ್ಞ ಸ್ಥಾನದಲ್ಲಿ ಕುಳಿತುಕೊಂಡು ಸುಖ ಮನ್ನಿಸುತ್ತಾರೆ. ಆದರೆ (ಮುನಿರಾಜರು ಮೊದಲು ರಾಜ್ಯ ಮೊದಲಾದ ಪದವಿಗಳಲ್ಲಿ, ಚಿನ್ನ-ರನ್ನಗಳ ಅರಮನೆಗಳಲ್ಲಿ ಸುಖಿಸುತ್ತಿದ್ದರು, ಅವರು ಈಗ ಸ್ವರೂಪವನ್ನು ತಿಳಿದುಕೊಂಡು ನಿಶ್ಚಯದಿಂದ ತಮ್ಮ ಸ್ಥಾನವು ತಮ್ಮಲ್ಲಿಯೇ ಇದೆಯೆಂದು ತಿಳಿದುಕೊಂಡಿದ್ದಾರೆ.) ಮುನಿರಾಜರು ಸಕಲ ಪರಿಗ್ರಹದ ತ್ಯಾಗ ಮಾಡಿ ಮಹಾನ ನಿರ್ಜನವಾದ ವನದಲ್ಲಿ ಸಿಂಹ ಮೊದಲಾದ ಅನೇಕ ಕ್ರೂರ ವನಚರ ಜೀವಗಳು ವಾಸಿಸುವಂಥ ಪರ್ವತದ ಗುಹೆಗಳಲ್ಲಿ, ಶಿಖರಗಳ ಮೇಲೆ ಅಥವಾ ಸ್ಮಶಾನ ಭೂಮಿಯಲ್ಲಿ ನಿವಾಸ ಮಾಡುತ್ತಾರೆ. ಆ ವಿಷಮ ಸ್ಥಾನಗಳಲ್ಲಿ ಕೂಡ ಅನೇಕ

ವ್ಯಂತರಾದಿಕರು ವಿವಿಧ ಪ್ರಕಾರದ ಉಪಸರ್ಗ ಮಾಡುತ್ತಾರೆ, ಆದಾಗ್ಯೂ ಮಹಾಧೀರರಾದ ಅವರು ಸ್ವಲ್ಪ ಮಾತ್ರವೂ ದುಃಖ ಮನ್ನಿಸುವುದಿಲ್ಲ ಮತ್ತು ಆ ಸ್ಥಾನವನ್ನು ಬಿಟ್ಟುಕೊಡುವುದಿಲ್ಲ. ಈ ಪ್ರಕಾರ ಮುನಿರಾಜರು ನಿಷದ್ಯಾ ಪರೀಷಹವನ್ನು ಜಯಿಸುತ್ತಾರೆ.

**೨೨) ಸ್ತ್ರೀ ಪರೀಷಹ -** ದೇವ, ಮನುಷ್ಯ ತಿರ್ಯಂಚ ಮೊದಲಾದ ಸಂಸಾರೀ ಜೀವರುಗಳು ಸ್ತ್ರೀಯ ರಾಗದಿಂದ ಸುಖ ಮನ್ನಿಸುತ್ತಾರೆ. ಮತ್ತು ಅವರ ಜತೆ ಹಾಸ್ಯ, ರತಿ, ಕ್ರೀಡೆ ಮೊದಲಾದುವನ್ನು ಮಾಡಿ ಆನಂದ ಮನ್ನಿಸುತ್ತಾರೆ; ಆದರೆ ಮುನಿರಾಜರಂತೂ ಹೇಗೆ ಸಜ್ಜನ ಪುರುಷರು ದುರ್ಜನರ ಸಂಗತಿಯನ್ನು ಬಿಟ್ಟು ಕೊಡುತ್ತಾರೆ ಹಾಗೆ ಕಾಮಿನಿಯರ ಸಂಗತಿಯನ್ನು ತ್ಯಾಗ ಮಾಡಿ ಬಿಡುತ್ತಾರೆ. ಸ್ತ್ರೀಯ ಶರೀರವನ್ನು ಮಹಾಮಲಿನ ದುರ್ಗತಿಯ ಕಾರಣವೆಂದು ತಿಳಿದುಕೊಂಡು ಅದರಲ್ಲಿ ಎಂದೂ ಅನುರಾಗ ಮಾಡುವುದಿಲ್ಲ. ಸುಂದರ ರಮಣಿಯರ ಮಧುರವಾದ ವಚನಗಳನ್ನು ಕೇಳಿಯೂ ಕೂಡ ಹಾವಭಾವ-ವಿಲಾಸ-ವಿಭ್ರಮ-ಕೌತುಕದ ಕ್ರಿಯೆಗಳನ್ನು ನೋಡಿಯು ಕೂಡ ಸ್ವಲ್ಪ ಮಾತ್ರವೂ ವಿಚಲಿತರಾಗುವುದಿಲ್ಲ ಮತ್ತು ಅಖಂಡ ಬ್ರಹ್ಮಚರ್ಯದ ಪಾಲನೆ ಮಾಡುತ್ತ ಸ್ವಾತ್ಮಧ್ಯಾನದಲ್ಲಿ ಲೀನರಿರುತ್ತಾರೆ ಎಂದರೆ ಸಮಸ್ತ ವಿಭಾವ ಪರಿಣತಿಯನ್ನು ಬಿಟ್ಟುಕೊಟ್ಟು ತಮ್ಮ ಜ್ಞಾನಾನಂದರೂಪದ ಸ್ವಭಾವ ಪರಿಣತಿಯಲ್ಲಿಯೇ ರಮಣ ಮಾಡುತ್ತಾರೆ. ಈ ಪ್ರಕಾರ ಸ್ತ್ರೀ ಪರೀಷಹದ ಮೇಲೆ ವಿಜಯ ಪ್ರಾಪ್ತಮಾಡಿಕೊಳ್ಳುತ್ತಾರೆ.

ಈ ಪ್ರಕಾರ ಈ ಇಪ್ಪತ್ತೆರಡು ಪರೀಷಹಗಳನ್ನು ಮುನಿರಾಜರು ನಿರಂತರ ಸಂಕ್ಲೇಶ ಮತ್ತು ವಿಷದ ಮನಸ್ಸಿನಿಂದ ರಹಿತರಾಗಿ ಸಹನೆ ಮಾಡುತ್ತಾರೆ. ಅವರ ಮನಸ್ಸು ಚತುರ್ಗತಿಯ ದುಃಖ ಕೊಡುವಲ್ಲಿ ಕಾರಣಭೂತವಾದ ಜ್ಞಾನಾವರಣ ಮೊದಲಾದ ಕರ್ಮಗಳಿಂದ ಭಯಭೀತವಿದೆ.

**ಭಾವಾರ್ಥ ಃ-** ಯಾವ ಮುನಿಗಳು ಸಂಸಾರ ಪರಿಭ್ರಮಣದ ಕ್ಲೇಶದಿಂದ ಕಂಪಾಯಮಾನರಾಗಿ ಹೋಗಿದ್ದಾರೆ. ಅವರೇ ದೃಢ ಚಿತ್ತರಾಗಿ ಇಪ್ಪತ್ತೆರಡು ಪರೀಷಹಗಳನ್ನು ಸಹನೆ ಮಾಡುತ್ತಾರೆ ಮತ್ತು ಸ್ವಲ್ಪ ಮಾತ್ರವೂ ನಿರ್ಬಲತೆ ಬರಗೊಡುವುದಿಲ್ಲ. ಯಾವ ಮುನಿರಾಜರು ಪರೀಷಹಗಳನ್ನು ಸಹನೆ ಮಾಡುವ ಸಾಧ್ಯತೆಯಿಲ್ಲ ಅವರ ಚಿತ್ತದ ನಿಶ್ಚಲತೆಯಾಗುವ ಸಾಧ್ಯತೆಯಿಲ್ಲ ಮತ್ತು ಚಿತ್ತದ ನಿಶ್ಚಲತೆಯಿಲ್ಲದೆ ಧ್ಯಾನದಲ್ಲಿ ಆರೂಢರಾಗುವ ಸಾಧ್ಯತೆಯಿಲ್ಲ. ಹಾಗೂ ಧ್ಯಾನದ ಆರೂಢತೆಯಿಲ್ಲದೆ ಕರ್ಮಕಾಷ್ಠವು ಭಸ್ಮವಾಗಿ ಹೋಗುವ ಸಾಧ್ಯತೆಯಿಲ್ಲ ಮತ್ತು ಕರ್ಮಗಳ ನಾಶವಾದಲ್ಲದೆ ಮುಕ್ತಿಯು ದೊರಕುವ ಸಾಧ್ಯತೆಯಿಲ್ಲ. ಆದುದರಿಂದ ಮೋಕ್ಷಾಭಿಲಾಷೆಯಿರುವ ಮುನಿಗಳು ಪರೀಷಹಗಳನ್ನು ಅವಶ್ಯವಾಗಿ ಸಹನೆ ಮಾಡಬೇಕಾಗುವುದು. ಈ ಪ್ರಕಾರ ಈ ಇಪ್ಪತ್ತೆರಡು ಪರೀಷಹಗಳ ವರ್ಣನೆಯು ಪೂರ್ಣವಾಯಿತು.

ಈಗ ಮೋಕ್ಷಾಭಿಲಾಷೆಯುಳ್ಳವರಿಗೆ ನಿರಂತರ ರತ್ನತ್ರಯದ ಸೇವನೆ ಮಾಡಬೇಕಾಗುವುದೆಂದು ಹೇಳುತ್ತಾರೆ,-

ಇತಿ ರತ್ನತ್ರಯಮೇತತ್ಪ್ರತಿಸಮಯಂ ವಿಕಲಮಪಿ ಗೃಹಸ್ಥೇನ ।
ಪರಿಪಾಲನೀಯಮನಿಶಂ ನಿರತ್ಯಯಾಂ ಮುಕ್ತಿಮಭಿಲಷಿತಾ ॥೨೦೯॥

**ಅನ್ವಯಾರ್ಥ ಃ-** **[ಇತಿ]** ಈ ಪ್ರಕಾರ **[ನಿರತ್ಯಯಾಂ]** ಅವಿನಾಶೀ **[ಮುಕ್ತಿಮ್]** ಮುಕ್ತಿಯ **[ಅಭಿಲಷಿತಾ]** ಅಭಿಲಾಷೆಯುಳ್ಳ **[ಗೃಹಸ್ಥೇನ]** ಗೃಹಸ್ಥರು **[ಏತತ್]** ಪೂರ್ವೋಕ್ತ **[ರತ್ನತ್ರಯಮ್]** ಸಮ್ಯಗ್ದರ್ಶನ, ಸಮ್ಯಗ್ಜ್ಞಾನ, ಸಮ್ಯಕ್ಚಾರಿತ್ರರೂಪ ರತ್ನತ್ರಯದ **[ವಿಕಲಮ್ ಅಪಿ]** ಏಕದೇಶವಾದರೂ **[ಅನಿಶಂ]** ನಿರಂತರ **[ಪ್ರತಿಸಮಯಂ]** ಪ್ರತಿಯೊಂದು ಸಮಯದಲ್ಲಿ **[ಪರಿಪಾಲನೀಯಮ್]** ಸೇವನೆ ಮಾಡಬೇಕಾಗುವುದು.

**ಟೀಕೆ ಃ-** **'ಇತಿ ಏತತ್ ರತ್ನತ್ರಯಂ ವಿಕಲಂ ಅಪಿ ನಿರತ್ಯಯಾಂ ಮುಕ್ತಿಂ ಅಭಿಲಷಿತಾ ಗೃಹಸ್ಥೇನ**

**ಅನಿಶಂ ಪರಿಪಾಲನೀಯಮ್!'**-ಈ ಪ್ರಕಾರ ಈ ಸಮ್ಯಗ್ದರ್ಶನ, ಸಮ್ಯಗ್ಜ್ಞಾನ, ಸಮ್ಯಕ್ಚಾರಿತ್ರ ರೂಪದ ರತ್ನತ್ರಯವನ್ನು ಪ್ರತಿಯೊಂದು ಸಮಯದಲ್ಲಿ ಗೃಹಸ್ಥ ಶ್ರಾವಕನು ಕೂಡ ಒಂದು ವೇಳೆ ಸರ್ವದೇಶ ಪಾಲನೆಯಾಗುವ ಸಾಧ್ಯತೆಯಿಲ್ಲದಿದ್ದರೆ ಏಕದೇಶವಾದರೂ ನಿರಂತರ ಅವಿನಾಶೀ ಮೋಕ್ಷದ ಇಚ್ಛುಕರಾಗುತ್ತ ಪಾಲನೆ ಮಾಡಬೇಕಾಗುವುದು.

**ಭಾವಾರ್ಥ ಃ-** ಮುನಿಗಳಿಗಂತೂ ಪೂರ್ಣರೂಪದಿಂದ ರತ್ನತ್ರಯವಿದೆ; ಆದರೆ ಗೃಹಸ್ಥ ಶ್ರಾವಕನು ಸಂಪೂರ್ಣ ರತ್ನತ್ರಯದ ಪಾಲನೆ ಮಾಡುವ ಸಾಧ್ಯತೆಯಿಲ್ಲದಿರುವುದರಿಂದ ಅವನು ಏಕದೇಶ ಪಾಲನೆ ಮಾಡಬೇಕಾಗುವುದು. ಯಾವುದೇ ಅವಸ್ಥೆಯಲ್ಲಿ ಅವನು ರತ್ನತ್ರಯದಿಂದ ವಿಮುಖನಾಗಬಾರದು. ಏಕೆಂದರೆ ಆ ರತ್ನತ್ರಯವೇ ಮುಕ್ತಿಯ ಕಾರಣವಿದೆ. ಮುನಿಗಳ ರತ್ನತ್ರಯವು ಮಹಾವ್ರತದ ಯೋಗದಿಂದ ಸಾಕ್ಷಾತ್ ಮೋಕ್ಷದ ಕಾರಣವಿದೆ. ಮತ್ತು ಶ್ರಾವಕನ ರತ್ನತ್ರಯವು ಅಣುವ್ರತದ ಯೋಗದಿಂದ ಪರಂಪರೆಯಿಂದ ಮೋಕ್ಷದ ಕಾರಣವಿದೆ ಎಂದರೆ ಯಾವ ಶ್ರಾವಕನಿಗೆ ಸಮ್ಯಗ್ದರ್ಶನವಾಗಿ ಹೋಗುತ್ತದೆ ಅವನ ಅಲ್ಪ ಜ್ಞಾನವು ಕೂಡ ಸಮ್ಯಗ್ಜ್ಞಾನ ಮತ್ತು ಅಣುವ್ರತವು ಕೂಡ ಸಮ್ಯಕ್ಚಾರಿತ್ರವೆಂದು ಕರೆಸಿಕೊಳ್ಳುತ್ತದೆ. ಆದುದರಿಂದ ರತ್ನತ್ರಯದ ಧಾರಣ ಮಾಡುವುದು ಅತ್ಯಾವಶ್ಯಕವಿದೆ.

ಸಪ್ತತತ್ತ್ವಗಳಲ್ಲಿ ಶ್ರದ್ಧೆ ಮಾಡುವುದು ಅದು ವ್ಯವಹಾರ ಸಮ್ಯಗ್ದರ್ಶನವಿದೆ ಮತ್ತು ನಿಜಸ್ವರೂಪದ ಶ್ರದ್ಧೆ ಎಂದರೆ ಸ್ವಾನುಭವವಾಗುವುದು ಅದು ನಿಶ್ಚಯ ಸಮ್ಯಗ್ದರ್ಶನವಿದೆ. ಜಿನಾಗಮದಿಂದ ಆಗಮಪೂರ್ವಕವಾಗಿ ಸಪ್ತತತ್ತ್ವಗಳ ಜ್ಞಾನ ಮಾಡಿಕೊಳ್ಳುವುದು ಅದು ವ್ಯವಹಾರ ಸಮ್ಯಗ್ಜ್ಞಾನವಿದೆ. ಮತ್ತು ನಿಜಸ್ವರೂಪದ ಜ್ಞಾನ ಎಂದರೆ ಆತ್ಮನ ಜ್ಞಾನವು ಅದು ನಿಶ್ಚಯ ಸಮ್ಯಗ್ಜ್ಞಾನವಿದೆ. ಅಶುಭಕಾರ್ಯಗಳ ನಿವೃತ್ತಿಯೊಡನೆ ಶುಭ ಕಾರ್ಯಗಳಲ್ಲಿ ಪ್ರವೃತ್ತಿ ಮಾಡುವುದು ವ್ಯವಹಾರ ಸಮ್ಯಕ್ಚಾರಿತ್ರವಿದೆ ಮತ್ತು ಶುಭ ಪ್ರವೃತ್ತಿಗಳಿಂದ ಕೂಡ ನಿವೃತ್ತರಾಗಿ ಶುದ್ಧೋಪಯೋಗರೂಪವಾದ ನಿಜ ಸ್ವರೂಪದಲ್ಲಿ ಸ್ಥಿರವಾಗುವುದು ಅದು ನಿಶ್ಚಯ ಸಮ್ಯಕ್ಚಾರಿತ್ರವಿದೆ. ಈ ಪ್ರಕಾರ ಸಂಕ್ಷೇಪದಲ್ಲಿ ರತ್ನತ್ರಯದ ವ್ಯಾಖ್ಯಾನ ಮಾಡಿದೆ. ಶ್ರಾವಕನು ಇದರ ಏಕದೇಶ ಪಾಲನೆಯನ್ನು ಅವಶ್ಯವಾಗಿ ಮಾಡಬೇಕಾಗುವುದು ರತ್ನತ್ರಯವಿಲ್ಲದೆ ಯಾವ ಜೀವದ ಕಲ್ಯಾಣವು ಎಂದೂ ಆಗುವ ಸಾಧ್ಯತೆಯಿಲ್ಲ.

ಈಗ ಗೃಹಸ್ಥರು ಶೀಘ್ರವಾಗಿ ಮುನಿವ್ರತದ ಧಾರಣ ಮಾಡಬೇಕಾಗುವುದೆಂದು ಹೇಳುತ್ತಾರೆ, -

ಬದ್ಧೋದ್ಯಮೇನ ನಿತ್ಯಂ ಲಬ್ಧ್ವಾ ಸಮಯಂ ಚ ಬೋಧಿಲಾಭಸ್ಯ ।
ಪದಮವಲಂಬ್ಯ ಮುನೀನಾಂ ಕರ್ತವ್ಯಂ ಸಪದಿ ಪರಿಪೂರ್ಣಮ್ ॥೨೧೦॥

**ಅನ್ವಯಾರ್ಥ ಃ- [ಚ]** ಮತ್ತು **[ನಿತ್ಯಂ]** ನಿರಂತರ ಈ ವಿಮಲ ರತ್ನತ್ರಯದ **[ಬದ್ಧೋದ್ಯಮೇನ]** ಉದ್ಯಮ ಮಾಡುವಲ್ಲಿ ತತ್ಪರರಿರುವಂಥ ಮೋಕ್ಷಾಭಿಲಾಷೆಯುಳ್ಳ ಗೃಹಸ್ಥರು **[ಬೋಧಿಲಾಭಸ್ಯ]** ರತ್ನತ್ರಯದ ಲಾಭದ **[ಸಮಯಂ]** ಸಮಯವನ್ನು **[ಲಬ್ಧ್ವಾ]** ಪ್ರಾಪ್ತಮಾಡಿಕೊಂಡು ಮತ್ತು **[ಮುನೀನಾಂ]** ಮುನಿಗಳ **[ಪದಮ್]** ಪಾದಗಳ (ಚರಣಗಳ) **[ಅವಲಂಬ್ಯ]** ಅವಲಂಬನೆ ಮಾಡಿ **[ಸಪದಿ]** ಶೀಘ್ರದಲ್ಲಿಯೇ **[ಪರಿಪೂರ್ಣಮ್]** ಪರಿಪೂರ್ಣ **[ಕರ್ತವ್ಯಮ್]** ಮಾಡುವುದು ಯೋಗ್ಯವಿದೆ.

**ಟೀಕೆ ಃ- 'ನಿತ್ಯಂ ಬದ್ಧೋದ್ಯಮೇನ ಬೋಧಿಲಾಭಸ್ಯ ಸಮಯಂ ಲಬ್ಧ್ವಾ ಚ ಮುನೀನಾಂ ಪದಮ್ ಅವಲಂಬ್ಯ ಸಪದಿ ಪರಿಪೂರ್ಣಂ ಕರ್ತವ್ಯಮ್ ।'**- ಗೃಹಸ್ಥರು ಯಾವಾಗಲೂ ಉದ್ಯಮಶೀಲರಾಗಿ ಸಮ್ಯಕ್ ಜ್ಞಾನದ ಪ್ರಾಪ್ತಿಯ ಸಮಯವನ್ನು ಪ್ರಾಪ್ತಮಾಡಿಕೊಂಡು ಮುನಿಪದವನ್ನು ಧಾರಣ ಮಾಡಿ ಶೀಘ್ರವಾಗಿಯೇ ರತ್ನತ್ರಯದ ಪೂರ್ಣತೆಯನ್ನು ಮಾಡಿಕೊಳ್ಳಬೇಕಾಗುವುದು.

**ಭಾವಾರ್ಥ ಃ-** ವಿವೇಕಿಯಾದ ಪುರುಷರು ಗೃಹಸ್ಥಾವಸ್ಥೆಯಲ್ಲಿಯೇ ಸಂಸಾರ ಮತ್ತು ಶರೀರ ಭೋಗಗಳಿಂದ ವಿರಕ್ತರಾಗಿ ಯಾವಾಗಲೂ ಮೋಕ್ಷಮಾರ್ಗದಲ್ಲಿ ಉದ್ಯಮಶೀಲರಿರುತ್ತಾರೆ. ಅವರು ಅವಸರ ಪಡೆದು ಬೇಗನೆ ಮುನಿಪದದ ಧಾರಣ ಮಾಡಿ, ಸಕಲ ಪರಿಗ್ರಹದ ತ್ಯಾಗ ಮಾಡಿ, ನಿರ್ವಿಕಲ್ಪ ಧ್ಯಾನದಲ್ಲಿ ಆರೂಢರಾಗಿ, ಪೂರ್ಣ ರತ್ನತ್ರಯವನ್ನು ಪ್ರಾಪ್ತಮಾಡಿಕೊಂಡು, ಸಂಸಾರ ಭ್ರಮಣದ ನಾಶ ಮಾಡಿ ಮೋಕ್ಷದ ಪ್ರಾಪ್ತಿ ಮಾಡಿಕೊಳ್ಳುತ್ತಾರೆ. ಅಥವಾ ಏಕದೇಶ ರತ್ನತ್ರಯವನ್ನು ಧಾರಣ ಮಾಡಿ ಇಂದ್ರ ಮೊದಲಾದ ಉಚ್ಚ ಪದ ಮತ್ತು ಪರಂಪರೆಯಿಂದ ಮೋಕ್ಷ ಕೂಡ ಪ್ರಾಪ್ತ ಮಾಡಿಕೊಳ್ಳುತ್ತಾರೆ.

ಈಗ ನಿಶ್ಚಯ ರತ್ನತ್ರಯವೇ ಮೋಕ್ಷದ ಉಪಾಯವಿದೆಯೆಂದು ಹೇಳುತ್ತಾರೆ, -

**ಅಸಮಗ್ರಂ ಭಾವಯತೋ ರತ್ನತ್ರಯಮಸ್ತಿ ಕರ್ಮಬಂಧೋ ಯಃ ।**
**ಸ ವಿಪಕ್ಷಕೃತೋಽವಶ್ಯಂ ಮೋಕ್ಷೋಪಾಯೋ ನ ಬಂಧನೋಪಾಯಃ ॥೨೧೧॥**

**ಅನ್ವಯಾರ್ಥ ಃ-** **[ಅಸಮಗ್ರಂ]** ಅಪೂರ್ಣ **[ರತ್ನತ್ರಯಮ್]** ರತ್ನತ್ರಯದ **[ಭಾವಯತಃ]** ಭಾವನೆ ಮಾಡುವಂಥ ಪುರುಷನಿಗೆ **[ಯಃ]** ಯಾವ **[ಕರ್ಮಬಂಧಃ]** ಶುಭಕರ್ಮದ ಬಂಧವು **[ಅಸ್ತಿ]** ಆಗುತ್ತದೆ **[ಸಃ]** ಆ ಬಂಧವು **[ವಿಪಕ್ಷಕೃತಃ]** ವಿಪಕ್ಷಕೃತ ಎಂದರೆ ರಾಗ ಕೃತವಿದೆ, (ಮತ್ತು) ನಿಶ್ಚಯ ರತ್ನತ್ರಯವಂತೂ **[ಅವಶ್ಯಂ]** ಅವಶ್ಯವಾಗಿಯೇ **[ಮೋಕ್ಷೋಪಾಯಃ]** ಮೋಕ್ಷದ ಉಪಾಯವಿದೆ. **[ನ ಬಂಧನೋಪಾಯಃ]** ಬಂಧದ ಉಪಾಯವಿಲ್ಲ.

**ಟೀಕೆ ಃ-** **'ಅಸಮಗ್ರಂ ರತ್ನತ್ರಯಂ ಭಾವಯತಃ ಯಃ ಕರ್ಮಬಂಧಃ ಅಸ್ತಿ ಸಃ ವಿಪಕ್ಷಕೃತಃ ರತ್ನತ್ರಯಂ ತು ಅವಶ್ಯಂ ಮೋಕ್ಷೋಪಾಯಃ ಅಸ್ತಿ ನ ಬಂಧನೋಪಾಯಃ ।'**- ಏಕದೇಶರೂಪರತ್ನತ್ರಯದ ಪಾಲನೆ ಮಾಡುವಂಥ ಪುರುಷನಿಗೆ ಯಾವ ಕರ್ಮಬಂಧವಾಗುತ್ತದೆ ಅದು ರತ್ನತ್ರಯದಿಂದ ಆಗುವುದಿಲ್ಲ, ಆದರೆ ರತ್ನತ್ರಯದ ವಿಪಕ್ಷಿಗಳಾದ ರಾಗ-ದ್ವೇಷಗಳಿಂದ ಆಗುತ್ತದೆ. ಆ ರತ್ನತ್ರಯವಂತೂ ಅವಶ್ಯವಾಗಿ ವಾಸ್ತವದಲ್ಲಿ ಮೋಕ್ಷದ ಉಪಾಯವೇ ಇದೆ, ಬಂಧದ ಉಪಾಯವಿಲ್ಲ.

**ಭಾವಾರ್ಥ ಃ-** ಏಕದೇಶ ರತ್ನತ್ರಯ ಧಾರಣ ಮಾಡುವಂಥ ಜೀವನಿಗೆ ಯಾವ ಕರ್ಮಬಂಧವಾಗುತ್ತದೆ ಆ ಕರ್ಮಬಂಧವು ಆ ರತ್ನತ್ರಯದಿಂದ ಆಗುವುದಿಲ್ಲ, ಆದರೆ ಆ ಸಮಯದಲ್ಲಿ ವಿದ್ಯಮಾನವಿರುವ ಶುಭ ಕಷಾಯದಿಂದ ಆಗುತ್ತದೆ. ಆದುದರಿಂದ ಕರ್ಮಬಂಧ ಮಾಡುವಂಥದಂತೂ ಶುಭಕಷಾಯವಿದೆ, ರತ್ನತ್ರಯವಲ್ಲವೆಂಬುದು ಇದರಿಂದ ಸಿದ್ಧವಾಗುವುದು.

ಈಗ ರತ್ನತ್ರಯ ಮತ್ತು ರಾಗದ ಫಲವನ್ನು ತಿಳಿಸಿಕೊಡುತ್ತಾರೆ, -

**ಯೇನಾಂಶೇನ ಸುದೃಷ್ಟಿಸ್ತೇನಾಂಶೇನಾಸ್ಯ ಬಂಧನಂ ನಾಸ್ತಿ ।**
**ಯೇನಾಂಶೇನ ತು ರಾಗಸ್ತೇನಾಂಶೇನಾಸ್ಯ ಬಂಧನಂ ಭವತಿ ॥೨೧೨॥**
**ಯೇನಾಂಶೇನ ಜ್ಞಾನಂ ತೇನಾಂಶೇನಾಸ್ಯ ಬಂಧನಂ ನಾಸ್ತಿ ।**
**ಯೇನಾಂಶೇನ ತು ರಾಗಸ್ತೇನಾಂಶೇನಾಸ್ಯ ಬಂಧನಂ ಭವತಿ ॥೨೧೩॥**

---

★ ನಾಲ್ಕನೇ ಗುಣಸ್ಥಾನದಲ್ಲಿ ಎಲ್ಲಜೀವರುಗಳಿಗೆ ಸಮ್ಯಗ್ದರ್ಶನವಂತೂ ಪೂರ್ಣಶುದ್ಧವಿರುವುದರಿಂದ ಆ ಅಪೇಕ್ಷೆಯಿಂದ ರಾಗಭಾವವಿಲ್ಲ - ಬಂಧವಿಲ್ಲ. ಆದರೆ ಎಷ್ಟು ಚಾರಿತ್ರದ ದೋಷವಿದೆ ಅಷ್ಟು ಬಂಧವಿದೆ.

ಯೇನಾಂಶೇನ ಚಾರಿತ್ರಂ ತೇನಾಂಶೇನಾಸ್ಯ ಬಂಧನಂ ನಾಸ್ತಿ ।
ಯೇನಾಂಶೇನ ತು ರಾಗಸ್ತೇನಾಂಶೇನಾಸ್ಯ ಬಂಧನಂ ಭವತಿ ॥೨೧೪॥

**ಅನ್ವಯಾರ್ಥ ಃ-** **[ಅಸ್ಯ]** ಈ ಆತ್ಮನಿಗೆ **[ಯೇನಾಂಶೇನ]** ಎಷ್ಟು ಅಂಶದಲ್ಲಿ **[ಸುದೃಷ್ಟಿಃ]** ಸಮ್ಯಗ್ದರ್ಶನವಿದೆ, **[ತೇನ]** ಅಷ್ಟು **[ಅಂಶೇನ]** ಅಂಶದಲ್ಲಿ **[ಬಂಧನಂ]** ಬಂಧವು **[ನಾಸ್ತಿ]** ಇಲ್ಲ, **[ತು]** ಆದರೆ **[ಯೇನ]** ಎಷ್ಟು **[ಅಂಶೇನ]** ಅಂಶದಲ್ಲಿ **[ಅಸ್ಯ]** ಇವನಿಗೆ **[ರಾಗಃ]** ರಾಗವಿದೆ, **[ತೇನ]** ಅಷ್ಟು **[ಅಂಶೇನ]** ಅಂಶದಲ್ಲಿ **[ಬಂಧನಂ]** ಬಂಧವು **[ಭವತಿ]** ಆಗುತ್ತದೆ. **[ಯೇನ]** ಎಷ್ಟು **[ಅಂಶೇನ]** ಅಂಶದಲ್ಲಿ **[ಅಸ್ಯ]** ಇವನಿಗೆ **[ಜ್ಞಾನಂ]** ಜ್ಞಾನವಿದೆ. **[ತೇನ)** ಅಷ್ಟು **[ಅಂಶೇನ]** ಅಂಶದಲ್ಲಿ **[ಬಂಧನಂ]** ಬಂಧವು **[ನಾಸ್ತಿ]** ಇಲ್ಲ. **[ತು]** ಆದರೆ **[ಯೇನ]** ಎಷ್ಟು **[ಅಂಶೇನ]** ಅಂಶದಲ್ಲಿ **[ರಾಗಃ]** ರಾಗವಿದೆ **[ತೇನ]** ಅಷ್ಟು **[ಅಂಶೇನ]** ಅಂಶದಲ್ಲಿ **[ಅಸ್ಯ]** ಇವನಿಗೆ **[ಬಂಧನಂ]** ಬಂಧವು **[ಭವತಿ]** ಆಗುತ್ತದೆ. **[ಯೇನ]** ಎಷ್ಟು **[ಅಂಶೇನ)** ಅಂಶದಲ್ಲಿ **[ಅಸ್ಯ]** ಇವನಿಗೆ **[ಚಾರಿತ್ರಂ]** ಚಾರಿತ್ರವಿದೆ, **[ತೇನ]** ಅಷ್ಟು **[ಅಂಶೇನ]** ಅಂಶದಲ್ಲಿ **[ಬಂಧನಂ]** ಬಂಧನವು **[ನಾಸ್ತಿ]** ಇಲ್ಲ, **[ತು]** ಆದರೆ **[ಯೇನ]** ಎಷ್ಟು **[ಅಂಶೇನ]** ಅಂಶದಲ್ಲಿ **[ರಾಗಃ]** ರಾಗವಿದೆ **[ತೇನ]** ಅಷ್ಟು **[ಅಂಶೇನ]** ಅಂಶದಲ್ಲಿ **[ಅಸ್ಯ]** ಇವನಿಗೆ **[ಬಂಧನಂ]** ಬಂಧವು **[ಭವತಿ]** ಆಗುತ್ತದೆ.

**ಟೀಕೆ ಃ- 'ಯೇನ ಅಂಶೇನ ಸುದೃಷ್ಟಿಃ ತೇನ ಅಂಶೇನ ಬಂಧನಂ ನಾಸ್ತಿ ಕಿಂತು ಯೇನ ಅಂಶೇನ ರಾಗಃ ತೇನ ಅಂಶೇನ ಬಂಧನಂ ಭವತಿ ।'** - ಎಷ್ಟು ಅಂಶದಲ್ಲಿ ಸಮ್ಯಗ್ದರ್ಶನವಿದೆ ಅಷ್ಟು ಅಂಶದಲ್ಲಿ ಕರ್ಮಬಂಧವಿಲ್ಲ ಮತ್ತು ಎಷ್ಟು ಅಂಶದಲ್ಲಿ ರಾಗಭಾವವಿದೆ ಅಷ್ಟೇ ಅಂಶದಲ್ಲಿ ಕರ್ಮದ ಬಂಧವಿದೆ.

**ಭಾವಾರ್ಥ ಃ-** ಜೀವದಲ್ಲಿ ೧) ಬಹಿರಾತ್ಮ, ೨) ಅಂತರಾತ್ಮ, ೩) ಪರಮಾತ್ಮನೆಂದು ಮೂರು ಭೇದಗಳಿವೆ. ಈ ಮೂರರಲ್ಲಿ ಬಹಿರಾತ್ಮನಂತೂ ಮಿಥ್ಯಾದೃಷ್ಟಿಯಿದ್ದಾನೆ. ಏಕೆಂದರೆ ಅವನಿಗೆ ಸಮ್ಯಗ್ದರ್ಶನವಿಲ್ಲ, ಕೇವಲ ರಾಗಭಾವವೇ ಇರುವುದರಿಂದ ಸರ್ವಥಾ ಬಂಧವೇ ಇದೆ. ಮತ್ತು ಭಗವಾನ ಪರಮಾತ್ಮ ಅವರಿಗೆ ಪೂರ್ಣ ಸಮ್ಯಗ್ದರ್ಶನವಾಗಿ ಹೋಗಿದೆ ಅವರಿಗೆ ರಾಗ ಭಾವದ ಅತ್ಯಂತ ಅಭಾವವಾಗಿರುವ ಕಾರಣ ಸರ್ವಥಾ ಬಂಧವಿಲ್ಲ, ಮೋಕ್ಷವೇ ಇದೆ.

ಸಮ್ಯಕ್‌ದೃಷ್ಟಿ ಅಂತರಾತ್ಮನು ನಾಲ್ಕನೆಯ ಗುಣಸ್ಥಾನದಿಂದಹಿಡಿದು ಹನ್ನೆರಡನೆಯ ಗುಣಸ್ಥಾನದವರೆಗಿರುತ್ತಾನೆ. ಆದುದರಿಂದ ಈ ಅಂತರಾತ್ಮನಿಗೆ ಎಷ್ಟು ಅಂಶದಲ್ಲಿ ಸಮ್ಯಗ್ದರ್ಶನ★ವಾಗಿ ಹೋಗಿದೆ ಅಷ್ಟು ಅಂಶದಲ್ಲಿ ಕರ್ಮದ ಬಂಧನವಿಲ್ಲ ಮತ್ತು ಎಷ್ಟು ಅಂಶದಲ್ಲಿ ರಾಗಭಾವವಿದೆ ಅಷ್ಟು ಅಂಶದಲ್ಲಿಕರ್ಮದ ಬಂಧವಿದೆ. ನಾಲ್ಕನೆಯಗುಣಸ್ಥಾನದಲ್ಲಿ ಅನಂತಾನುಬಂಧೀ ಸಂಬಂಧದ ರಾಗಭಾವವಿಲ್ಲವೆಂದ ಮೇಲೆ ಅಷ್ಟು ಕರ್ಮಬಂಧವೂ ಇಲ್ಲ, ಉಳಿದ ಅಪ್ರತ್ಯಾಖ್ಯಾನಾವರಣಾದಿ ಮೂರರ ಬಂಧವಿದೆ. ಐದನೆಯ ಗುಣಸ್ಥಾನದಲ್ಲಿ ಅಪ್ರತ್ಯಾಖ್ಯಾನಾವರಣರೂಪ ರಾಗಭಾವದ ಅಭಾವವಾಗುವುದರಿಂದ ಅದರ ಬಂಧವು ಕೂಡ ನಿಂತು ಹೋಗಿದೆ., ಆದರೆ ಪ್ರತ್ಯಾಖ್ಯಾನಾವರಣಾದಿ ಎರಡರ ಬಂಧವು ಇನ್ನೂ ಉಳಿದುಕೊಂಡಿದೆ. (ಆರನೇ-ಏಳನೆಯ ಗುಣಸ್ಥಾನದಲ್ಲಿ ಪ್ರತ್ಯಾಖ್ಯಾನಾವರಣೀಯ ಸಂಬಂಧದ ರಾಗಭಾವವು ನಷ್ಟವಾದಾಗ ಅಷ್ಟು ಬಂಧವೂ ನಿಂತು ಹೋಯಿತು.) ಯಾವ ಜೀವನಿಗೆ ಎಷ್ಟು ಅಂಶದಲ್ಲಿ ಸಮ್ಯಗ್ಜ್ಞಾನವಾಗಿದೆ ಅಷ್ಟೇ ಅಂಶದಲ್ಲಿ ರಾಗ ಭಾವದ ಅಭಾವವಾಗುವ ಕಾರಣ ಕರ್ಮದ ಬಂಧವಿಲ್ಲ ಮತ್ತು ಎಷ್ಟು ಅಂಶದಲ್ಲಿ ರಾಗ-ಭಾವವಿದೆ ಅಷ್ಟೇ ಅಂಶದಲ್ಲಿ ಕರ್ಮಗಳ ಬಂಧವಿದೆ.

**ಭಾವಾರ್ಥ ಃ-** ಮಿಥ್ಯಾದೃಷ್ಟಿ ಬಹಿರಾತ್ಮ ಜೀವನಿಗೆ ಸಮ್ಯಕ್‌ಜ್ಞಾನದ ಅಭಾವವಿದೆ ಮತ್ತು ಮಿಥ್ಯಾಜ್ಞಾನದ ಸದ್ಭಾವವಿರುವುದರಿಂದ ಅವನಿಗೆ ಪೂರ್ಣ ರಾಗ-ದ್ವೇಷಗಳಿರುವುದರಿಂದ ಅವಶ್ಯವಾಗಿಯೇ ಕರ್ಮದ ಬಂಧವಾಗುತ್ತದೆ.

ಹದಿಮೂರನೆಯ ಗುಣಸ್ಥಾನಾವರ್ತಿಯಾದ ಯಾವ ಪರಮಾತ್ಮರಿದ್ದಾರೆ, ಅವರಿಗೆಪೂರ್ಣ ಸಮ್ಯಕ್‌ಜ್ಞಾನ ಎಂದರೆ ಕೇವಲಜ್ಞಾನವು ಪ್ರಕಟವಾಗಿ ಹೋಗಿರುವ ಕಾರಣ ರಾಗ-ದ್ವೇಷಗಳ ಅಭಾವವು ಸರ್ವಥಾ ಆಗಿ ಹೋಗಿರುವುದರಿಂದ ಅವರಿಗೆ ಸ್ವಲ್ಪ ಕೂಡ ಕರ್ಮದ ಬಂಧವಿಲ್ಲ. ಮತ್ತು ಅವಿರತ ಸಮ್ಯಕ್‌ದೃಷ್ಟಿಯೆಂಬ ಹೆಸರಿನ ನಾಲ್ಕನೆಯ ಗುಣಸ್ಥಾನದಿಂದಹಿಡಿದು ಕ್ಷೀಣಮೋಹವೆಂಬ ಹೆಸರಿನ ಹನ್ನೆರಡನೆಯ ಗುಣಸ್ಥಾನದವರೆಗೆ ಯಾವ ಅಂತರಾತ್ಮನಿದ್ದಾನೆ ಅವನಿಗೆ ಎಷ್ಟು ಅಂಶದಲ್ಲಿ ಸಮ್ಯಕ್‌ಜ್ಞಾನವು ಪ್ರಕಟವಾಗಿ ರಾಗ-ದ್ವೇಷಗಳು ನಿಂತುಹೋಗುತ್ತವೆ ಅಷ್ಟೇ ಅಂಶದಲ್ಲಿ ಕರ್ಮದ ಬಂಧವಿಲ್ಲ ಹಾಗೂ ಎಷ್ಟು ಅಂಶದಲ್ಲಿ ರಾಗ-ದ್ವೇಷಗಳ ಉಪಸ್ಥಿತಿಯಿದೆ ಅಷ್ಟೇ ಅಂಶದಲ್ಲಿ ಕರ್ಮಬಂಧವು ಕೂಡ ಆಗುತ್ತಿರುತ್ತದೆ.

ಎಷ್ಟು ಅಂಶದಲ್ಲಿ ಸಮ್ಯಕ್ಚಾರಿತ್ರವು ಪ್ರಕಟವಾಗಿ ಹೋಗಿದೆ ಅಷ್ಟೇ ಅಂಶದಲ್ಲಿ ಕರ್ಮದ ಬಂಧವಿಲ್ಲ ಮತ್ತು ಎಷ್ಟು ಅಂಶದಲ್ಲಿ ರಾಗ-ದ್ವೇಷಭಾವಗಳಿವೆ ಅಷ್ಟೇ ಅಂಶದಲ್ಲಿ ಕರ್ಮದ ಬಂಧವಿದೆ, ಮೇಲಿನ ಹಾಗೆಯೇ ಇಲ್ಲಿ ಕೂಡ ತಿಳಿದುಕೊಳ್ಳುವುದು . ಬಹಿರಾತ್ಮನಿಗೆ ಮಿಥ್ಯಾಚಾರಿತ್ರವಿದೆ.ಸಮ್ಯಕ್ಚಾರಿತ್ರವು ಸ್ವಲ್ಪ ಮಾತ್ರವೂ ಇಲ್ಲದಿರುವುದರಿಂದ ಅವನಿಗೆ ರಾಗ-ದ್ವೇಷಗಳ ಪೂರ್ಣತೆಯಿರುವುದರಿಂದ ಪೂರ್ಣ ಕರ್ಮದ ಬಂಧವಿದೆ, ಮತ್ತು ಪರಮಾತ್ಮನಿಗೆ ಪೂರ್ಣ ಸಮ್ಯಕ್ಚಾರಿತ್ರವಿರುವ ಕಾರಣ ಅವರಿಗೆ ಸ್ವಲ್ಪ ಮಾತ್ರವೂ ಕರ್ಮದ ಬಂಧವಿಲ್ಲ. ಅಂತರಾತ್ಮನಿಗೆ ಎಷ್ಟು ಅಂಶದಲ್ಲಿ ರಾಗ-ದ್ವೇಷಗಳಿವೆ. ಅಷ್ಟು ಅಂಶದಲ್ಲಿ ಕರ್ಮದ ಬಂಧವಿದೆ.

**ಭಾವಾರ್ಥ :-** ಮೋಹನೀಯ ಕರ್ಮದಲ್ಲಿ ೧) ದರ್ಶನಮೋಹ, ೨) ಚಾರಿತ್ರಮೋಹವೆಂದು ಎರಡು ಭೇದಗಳಿವೆ. ದರ್ಶನಮೋಹದ ಉದಯದಿಂದ ಮಿಥ್ಯಾದರ್ಶನವಾಗುತ್ತದೆ ಮತ್ತು ಚಾರಿತ್ರಮೋಹದ ಉದಯದಿಂದ ಮಿಥ್ಯಾಚಾರಿತ್ರ ಅಥವಾ ಅಚಾರಿತ್ರವಾಗುತ್ತದೆ. (ಚಾರಿತ್ರದಲ್ಲಿ ಒಂದು ಸ್ವರೂಪಾಚರಣ ಇನ್ನೊಂದು ಸಂಯಮಾಚರಣವೆಂದು ಎರಡು ಭೇದಗಳಿವೆ. ಇವುಗಳಲ್ಲಿ ಜಘನ್ಯ ಸ್ವರೂಪಾಚರಣವಂತೂ ನಾಲ್ಕನೆಯ ಗುಣಸ್ಥಾನದಲ್ಲಿ ಪ್ರಕಟವಾಗೇ ಆಗುತ್ತದೆ. ಮತ್ತು ಸಂಯಮಾಚರಣದಲ್ಲಿಏಕದೇಶ ಹಾಗೂ ಸರ್ವದೇಶವೆಂದು ಎರಡು ಭೇದಗಳಿವೆ. ಐದನೆಯ ಗುಣಸ್ಥಾನಾವರ್ತಿಯಾದ ಶ್ರಾವಕನಿಗಂತೂ ಏಕದೇಶ ಚಾರಿತ್ರವಿದೆ ಮತ್ತು ಆರರಿಂದಹಿಡಿದು ಹನ್ನೆರಡನೆಯ ಗುಣಸ್ಥಾನದವರೆಗಿನ ಮುನಿರಾಜರಿಗೆ ಸಕಲದೇಶ ಚಾರಿತ್ರವಿದೆ. ಇನ್ನು ಹದಿಮೂರನೆಯ ಗುಣಸ್ಥಾನದಲ್ಲಿ ತಲುಪಿದ ನಂತರ ಅದೇ ಮುನಿರಾಜರು ಜಿನರಾಜರಾಗಿ ಹೋಗುತ್ತಾರೆ ಮತ್ತು ಪರಮಾತ್ಮರೆನಿಸಿಕೊಳ್ಳುತ್ತಾರೆ, ಅಲ್ಲಿ ಅವರಿಗೆ ಸಮ್ಯಕ್ಚಾರಿತ್ರದ ಪೂರ್ಣತೆಯಾಗಿ ಬಂಧದ ಅಭಾವವಾಗಿ ಹೋಗುತ್ತದೆ.) ಎಷ್ಟು ಎಷ್ಟು ಆ ಕಷಾಯಗಳ ಅಭಾವವಾಗುತ್ತ ಹೋಗುತ್ತದೆ ಅಷ್ಟಷ್ಟೇ ಸಮ್ಯಗ್ದರ್ಶನ ಅಥವಾ ಸಮ್ಯಕ್ಚಾರಿತ್ರಗುಣದ ವಿಕಾಸವಾಗುತ್ತ ಹೋಗುತ್ತದೆ. ಹೇಗೆಂದರೆ ದರ್ಶನಮೋಹನೀಯದ ಅಭಾವವಾದ ಮೇಲೆ ಸಮ್ಯಗ್ದರ್ಶನ ಪ್ರಕಟವಾಗುತ್ತ ಹೋಗುತ್ತದೆ. ಹೇಗೆಂದರೆ ದರ್ಶನಮೋಹನೀಯದ ಅಭಾವವಾದ ಮೇಲೆ ಸಮ್ಯಗ್ದರ್ಶನ ಪ್ರಕಟವಾಗುತ್ತದೆ ಮತ್ತು ಅನಂತಾನುಬಂಧೀ ಚೌಕಡಿಯ ಅಭಾವವಾದ ಮೇಲೆ ಅಷ್ಟು ಅಂಶದಲ್ಲಿ ಸ್ವರೂಪಾಚರಣಚಾರಿತ್ರವು ಪ್ರಕಟವಾಗುತ್ತದೆ, ಅಪ್ರತ್ಯಾಖ್ಯಾನಾವರಣೀಯ ಚೌಕಡಿಯ ಅಭಾವವಾಗುವುದರಿಂದ ದೇಶಚಾರಿತ್ರವು ಪ್ರಕಟವಾಗುತ್ತದೆ. ಪ್ರತ್ಯಾಖ್ಯಾನಾವರಣೀಯ ಚೌಕಡಿಯ ಅಭಾವವಾಗುವುದರಿಂದ ಸಕಲಚಾರಿತ್ರವು ಪ್ರಕಟವಾಗುತ್ತದೆ. ಸಂಜ್ವಲನ ಚೌಕಡಿ ಮತ್ತು ಒಂಭತ್ತು ನೋಕಷಾಯಗಳ ಅಭಾವವಾಗುವುದರಿಂದ ಯಥಾಖ್ಯಾತಚಾರಿತ್ರವು ಪ್ರಕಟವಾಗುತ್ತದೆ. ಈ ಪ್ರಕಾರ ಈ ಮೋಹನೀಯಕರ್ಮದ ಇಪ್ಪತ್ತೈದು ಪ್ರಕೃತಿಗಳೇ ಜೀವನಿಗೆ ರಾಗ-ದ್ವೇಷಗಳಾಗುವಲ್ಲಿ ನಿಮಿತ್ತಕಾರಣಗಳಿವೆ.

ಅವುಗಳಲ್ಲಿ ಅನಂತಾನುಬಂಧೀ ಕ್ರೋಧ-ಮಾನ, ಅಪ್ರತ್ಯಾಖ್ಯಾನಾವರಣೀಯ ಕ್ರೋಧ-ಮಾನ, ಪ್ರತ್ಯಾಖ್ಯಾನಾವರಣೀಯ ಕ್ರೋಧ-ಮಾನ, ಸಂಜ್ವಲನ ಕ್ರೋಧ-ಮಾನ ಇವು ಎಂಟು ಮತ್ತು ಅರತಿ,ಶೋಕ, ಭಯ,

ಜುಗುಪ್ಸೆ-ಅವೆಲ್ಲ ಸೇರಿ ಹನ್ನೆರಡು ಪ್ರಕೃತಿಗಳಂತೂ ದ್ವೇಷರೂಪ ಪರಿಣಮನದಲ್ಲಿ ನಿಮಿತ್ತವಿವೆ ಮತ್ತು ಉಳಿದ ಹದಿಮೂರು ಪ್ರಕೃತಿಗಳು ರಾಗರೂಪ ಪರಿಣಮನದಲ್ಲಿ ನಿಮಿತ್ತವಿವೆ. ಈ ಪ್ರಕಾರ ಈ ಜೀವನು ಅನಾದಿಕಾಲದಿಂದ ಇವೇ ಇಪ್ಪತ್ತೈದು ಕಷಾಯಗಳ ವಶೀಭೂತನಾಗಿ ನಿತ್ಯವೂ ಅನೇಕ ದುಷ್ಕರ್ಮಗಳನ್ನು ಮಾಡುತ್ತ ಸಂಸಾರ ಸಾಗರದಲ್ಲಿ ಭ್ರಮಣ ಮಾಡುತ್ತಲಿದ್ದಾನೆ. ಆದುದರಿಂದ ಎಂಟೂ ಕರ್ಮಗಳಲ್ಲಿ ಈ ಮೋಹನೀಯ ಕರ್ಮವನ್ನು ಎಲ್ಲಕ್ಕೂ ಮೊದಲು ಜಯಿಸಬೇಕಾಗುವುದು. ಎಲ್ಲಿಯವರೆಗೆ ಮೋಹನೀಯ ಕರ್ಮದ ಪರಾಜಯವಾಗುವುದಿಲ್ಲ ಅಲ್ಲಿಯವರೆಗೆ ಉಳಿದ ಕರ್ಮಗಳ ಪರಾಜಯವಾಗುವ ಸಾಧ್ಯತೆಯೇ ಇಲ್ಲ. ಆದುದರಿಂದ ಎಲ್ಲಕ್ಕೂ ಮೊದಲು ಸಮ್ಯಗ್ದರ್ಶನ ಪ್ರಾಪ್ತ ಮಾಡಿಕೊಂಡು ದರ್ಶನಮೋಹದ, ಸಮ್ಯಕ್‌ಜ್ಞಾನದಿಂದ ಜ್ಞಾನಾವರಣದ ಮತ್ತು ಸಮ್ಯಕ್ಚಾರಿತ್ರದಿಂದ ಚಾರಿತ್ರಮೋಹನೀಯದ ನಾಶ ಮಾಡಿ ಸಮ್ಯಕ್‌ರತ್ನತ್ರಯ ಪ್ರಾಪ್ತಮಾಡಿಕೊಳ್ಳಬೇಕಾಗುವುದು. ಯಾವ ಜೀವನೇ ಇರಲಿ ಇದೇ ಕ್ರಮದಿಂದ ಕರ್ಮಗಳ ನಾಶ ಮಾಡಿ ಆತ್ಮನ ಗುಣಗಳ ವಿಕಾಸ ಮಾಡಿಕೊಳ್ಳುವನೋ ಆಗಲೇ ಅವನು ತನ್ನ ಧ್ಯೇಯವನ್ನು ಪ್ರಾಪ್ತ ಮಾಡಿಕೊಳ್ಳುವ ಸಾಧ್ಯತೆಯಿದೆ.

ಆತ್ಮನ ಜತೆಯಲ್ಲಿ ಕರ್ಮಗಳ ಬಂಧ ಮಾಡಿಸುವಂಥವನು ಯಾವನಿದ್ದಾನೆಂಬ ಮಾತನ್ನು ಹೇಳುತ್ತಾರೆ, -

**ಯೋಗಾತ್ಪ್ರದೇಶಬಂಧಃ ಸ್ಥಿತಿಬಂಧೋ ಭವತಿ ತು ಕಷಾಯಾತ್ ।**
**ದರ್ಶನಬೋಧಚರಿತ್ರಂ ನ ಯೋಗರೂಪಂ ಕಷಾಯರೂಪಂ ಚ ॥೨೧೫॥**

**ಅನ್ವಯಾರ್ಥ :- [ಪ್ರದೇಶಬಂಧಃ]** ಪ್ರದೇಶಬಂಧವು **[ಯೋಗಾತ್]** ಮನ, ವಚನ, ಕಾಯದ ವ್ಯಾಪಾರದಿಂದ **[ತು]** ಮತ್ತು **[ಸ್ಥಿತಿಬಂಧಃ)** ಸ್ಥಿತಿಬಂಧವು **[ಕಷಾಯಾತ್]** ಕ್ರೋಧ ಮೊದಲಾದ ಕಷಾಯಗಳಿಂದ **[ಭವತಿ]** ಆಗುತ್ತದೆ, ಆದರೆ **[ದರ್ಶನಬೋಧಚರಿತ್ರಂ]** ಸಮ್ಯಗ್ದರ್ಶನ, ಸಮ್ಯಕ್‌ಜ್ಞಾನ, ಸಮ್ಯಕ್ಚಾರಿತ್ರರೂಪ ರತ್ನತ್ರಯವು **[ಯೋಗರೂಪಂ]** ಯೋಗರೂಪ **[ಚಃ]** ಮತ್ತು **[ಕಷಾಯರೂಪಂ]** ಕಷಾಯರೂಪ ಕೂಡ **[ನ]** ಇಲ್ಲ.

**ಟೀಕೆ :- 'ಯೋಗಾತ್ ಪ್ರದೇಶಬಂಧಃ ಭವತಿ ತು ಕಷಾಯಾತ್ ಸ್ಥಿತಿಬಂಧಃ ಭವತಿ ಯತಃ ದರ್ಶನಬೋಧ ಚರಿತ್ರಂ ಯೋಗರೂಪಂ ಚ ಕಷಾಯರೂಪಂ ನ ಭವತಿ ।'** - ಮನ, ವಚನ, ಕಾಯದ ಯೋಗದಿಂದ ಪ್ರದೇಶಬಂಧ ಮತ್ತು ಪ್ರಕೃತಿಬಂಧವಾಗುತ್ತದೆ ಹಾಗೂ ಕ್ರೋಧ ಮೊದಲಾದ ಕಷಾಯಗಳಿಂದ ಸ್ಥಿತಿಬಂಧ ಮತ್ತು ಅನುಭಾಗಬಂಧವಾಗುತ್ತದೆ. ಇಲ್ಲಿ ಶ್ಲೋಕದಲ್ಲಿ ಒಂದು ವೇಳೆ ಪ್ರಕೃತಿಬಂಧ ಮತ್ತು ಅನುಭಾಗಬಂಧದ ಉಲ್ಲೇಖ ಮಾಡಿರದಿದ್ದರು ಕೂಡ ಉಪಲಕ್ಷಣದಿಂದ ಗ್ರಹಣವಾಗಿಹೋಗುತ್ತದೆ. ಸಮ್ಯಗ್ದರ್ಶನ, ಸಮ್ಯಗ್ಜ್ಞಾನ, ಸಮ್ಯಕ್ಚಾರಿತ್ರ ಇವು ಮೂರಂತೂ ಯೋಗರೂಪವೂ ಇಲ್ಲ. ಮತ್ತು ಕಷಾಯರೂಪವೂ ಇಲ್ಲ. ಆದುದರಿಂದ ರತ್ನತ್ರಯವು ಕರ್ಮಬಂಧದ ಕಾರಣವಾಗುವುದಿಲ್ಲ.

**ಭಾವಾರ್ಥ :-** ಬಂಧವು ಪ್ರಕೃತಿಬಂಧ, ಪ್ರದೇಶಬಂಧ, ಸ್ಥಿತಿಬಂಧ ಮತ್ತು ಅನುಭಾಗಬಂಧವೆಂದು ನಾಲ್ಕು ಪ್ರಕಾರದ್ದಿದೆ. ಇವುಗಳಲ್ಲಿ ಪ್ರಕೃತಿಬಂಧ ಮತ್ತು ಪ್ರದೇಶಬಂಧಗಳಂತೂ ಯೋಗದಿಂದ ಆಗುತ್ತವೆ. ಹಾಗೂ ಸ್ಥಿತಿಬಂಧ ಮತ್ತು ಅನುಭಾಗಬಂಧಗಳು ಕಷಾಯಗಳಿಂದ ಆಗುತ್ತವೆ. ಈಗ ಈ ನಾಲ್ಕೂ ಬಂಧಗಳ ಸ್ವರೂಪ ಹೇಳುತ್ತಾರೆ. ೧) ಪ್ರಕೃತಿಬಂಧ - ಪ್ರಕೃತಿಯೆಂಬ ಹೆಸರು ಸ್ವಭಾವದ್ದಿದೆ. ಕರ್ಮಗಳ ಮೂಲ ಪ್ರಕೃತಿಗಳು ಎಂಟು ಮತ್ತು ಉತ್ತರ ಪ್ರಕೃತಿಗಳು ಒಂದುನೂರಾನಲವತ್ತೆಂಟು ಇವೆ.

೧) **ಜ್ಞಾನಾವರಣೀಯಕರ್ಮ**ದ ಸ್ವಭಾವವು ಪರದೆಯ ಸಮಾನವಿದೆ. ಯಾವ ಪ್ರಕಾರ ಯಾವ ವಸ್ತುವಿನ ಮೇಲೆ ಪರದೆಯು ಮುಚ್ಚಿಕೊಂಡಿದೆ ಆ ಪರದೆಯು ಆ ವಸ್ತುವಿನ ಜ್ಞಾನವಾಗದಿರುವಲ್ಲಿ ಕಾರಣವಿದೆ. ಅದೇ ಪ್ರಕಾರ

ಎಲ್ಲಿಯವರೆಗೆ ಆತ್ಮನ ಜತೆ ಜ್ಞಾನಾವರಣೀಯಕರ್ಮರೂಪದ ಪರದೆಯಿದೆ ಅಲ್ಲಿಯವರೆಗೆ ಅದು ಆತ್ಮನಿಗೆ ಪದಾರ್ಥಗಳ ಸಮ್ಯಗ್ಜ್ಞಾನವಾಗದಿರುವಲ್ಲಿ ಕಾರಣವಿದೆ.

೨) **ದರ್ಶನಾವರಣೀಯಕರ್ಮ**ದ ಸ್ವಭಾವವು ದ್ವಾರಪಾಲಕನ ಹಾಗೆ ಇದೆ. ಯಾವ ಪ್ರಕಾರ ದ್ವಾರಪಾಲಕನು ದೊರೆಯದರ್ಶನವಾಗಗೊಡುವುದಿಲ್ಲ ಅದೇ ಪ್ರಕಾರ ದರ್ಶನಾವರಣೀಯ ಕರ್ಮವು ಆತ್ಮನಿಗೆ ಸ್ವ-ಪರ ಪದಾರ್ಥಗಳ ದರ್ಶನವಾಗಗೊಡುವುದಿಲ್ಲ.

೩) **ವೇದನೀಯ ಕರ್ಮ**ದ ಸ್ವಭಾವವು ಜೇನುತುಪ್ಪ ಲೇಪಿಸಿದ ಕರವಾಳದ ಸಮಾನವಿದೆ. ಯಾವ ಪ್ರಕಾರ ಕರವಾಳ ನೆಕ್ಕುವುದರಿಂದ ಸಿಹಿಯೆನಿಸುತ್ತದೆ, ಆದರೆ ನಾಲಿಗೆಯನ್ನು ಕತ್ತರಿಸಿ ಹಾಕುತ್ತದೆ ; ಅದೇ ಪ್ರಕಾರ ವೇದನೀಯ ಕರ್ಮವು ಕೂಡ ಮೊದಲು ಸ್ವಲ್ಪ ಸಮಯ ಸುಖರೂಪವೆನಿಸುತ್ತದೆ, ಅನಂತರ ದುಃಖದಾಯಕವಾಗಿ ಹೋಗುತ್ತದೆ.

೪) **ಮೋಹನೀಯ ಕರ್ಮ**ದ ಸ್ವಭಾವವು ಮದ್ಯದಂತಿದೆ. ಯಾವ ಪ್ರಕಾರ ಮದ್ಯ ಕುಡಿಯುವುದರಿಂದ ಮನುಷ್ಯನು ಪ್ರಜ್ಞಾರಹಿತನಾಗಿ ಹೋಗುತ್ತಾನೆ ಎಂದರೆ ಮಾನವತೆಯ ಎಚ್ಚರವುಳಿಯುವುದಿಲ್ಲ, ಅದೇ ಪ್ರಕಾರ ಆತ್ಮನು ಮೋಹನೀಯ ಕರ್ಮದೊಡನೆ ಒಂದಾಗಿ ಹೋಗುವುದರಿಂದ ತನ್ನ ಸ್ವರೂಪವನ್ನು ಮರೆತು ಪರಪದಾರ್ಥಗಳಲ್ಲಿ ತನ್ನತನ, ಸ್ವಾಮಿತ್ವ ಹಾಗೂ ಕರ್ತಾ-ಭೋಕ್ತಾನೆಂದು ಮನ್ನಿಸುತ್ತಾನೆ.

೫) **ಆಯುಕರ್ಮ**ದ ಸ್ವಭಾವವು ಸಂಕಲೆ ಸಹಿತ ಕಾರಾಗೃಹದ ಸಮಾನವಿದೆ. ಯಾವ ಪ್ರಕಾರ ಒಬ್ಬ ಮನುಷ್ಯನು ಎಲ್ಲಿಯವರೆಗೆ ಕಾರಾಗೃಹದಲ್ಲಿದ್ದಾನೆ ಅಲ್ಲಿಯವರೆಗೆ ಅಲ್ಲಿಂದ ಹೊರಟು ಎಲ್ಲಿಯೂ ಹೋಗುವ ಸಾಧ್ಯತೆಯಿಲ್ಲ; ಅದೇ ಪ್ರಕಾರ ಜೀವನು ಯಾವ ಆಯು ಕರ್ಮದ ಬಂಧ ಮಾಡಿಕೊಂಡಿದ್ದಾನೆ ಆ ಆಯು ಎಲ್ಲಿಯವರೆಗೆ ಪೂರ್ಣವಾಗುವುದಿಲ್ಲ ಅಲ್ಲಿಯವರೆಗೆ ಅವನಿಗೆ ಅದೇ ಗತಿಯಲ್ಲಿ ಇರಬೇಕಾಗುತ್ತದೆ.

೬) **ನಾಮಕರ್ಮ**ದ ಸ್ವಭಾವವು ಚಿತ್ರಕಾರನ ಸಮಾನವಿದೆ. ಯಾವ ಪ್ರಕಾರ ಚಿತ್ರಕಾರನು ಭಿನ್ನ ಭಿನ್ನ ಜಾತಿಯ ಎಂದರೆ ಒಮ್ಮೆ ಮನುಷ್ಯನ, ಒಮ್ಮೆ ಕುದುರೆಯ, ಒಮ್ಮೆ ಆನೆಯ ಚಿತ್ರ ಬಿಡಿಸುತ್ತಾನೆ, ಅದೇ ಪ್ರಕಾರ ನಾಮಕರ್ಮವು ಕೂಡ ಈ ಜೀವವನ್ನು ಒಮ್ಮೆ ಮನುಷ್ಯ, ಒಮ್ಮೆ ಕುದುರೆ, ಒಮ್ಮೆ ಮೇಕೆ, ಒಮ್ಮೆ ದುಂಬಿ, ಒಮ್ಮೆ ಕುಂಟ ಇತ್ಯಾದಿ ಪ್ರಕಾರದಿಂದ ಅನೇಕ ರೂಪವಾಗಿ ಮಾಡುತ್ತದೆ.

೭) **ಗೋತ್ರಕರ್ಮ**ದ ಸ್ವಭಾವವ ಕುಂಭಕಾರನಂತಿದೆ. ಯಾವ ಪ್ರಕಾರ ಕುಂಭಕಾರನು ಒಮ್ಮೆ ಚಿಕ್ಕ, ಒಮ್ಮೆ ದೊಡ್ಡ ಮಣ್ಣಿನ ಪಾತ್ರೆಗಳನ್ನು ಮಾಡುತ್ತಾನೆ ಅದೇ ಪ್ರಕಾರ ಗೋತ್ರಕರ್ಮವುಕೂಡ ಈ ಜೀವವನ್ನು ಒಮ್ಮೆ ಉಚ್ಚ ಕುಲದಲ್ಲಿ, ಒಮ್ಮೆ ನೀಚ ಕುಲದಲ್ಲಿ ಉತ್ಪನ್ನ ಮಾಡುತ್ತದೆ.

೮) **ಅಂತರಾಯಕರ್ಮ**ದ ಸ್ವಭಾವವು ಕೋಶಾಧ್ಯಕ್ಷನಂತಿದೆ. ಯಾವ ಪ್ರಕಾರ ದೊರೆಯು ಒಬ್ಬನಿಗೆ ಬಹುಮಾನ ಮೊದಲಾದುವನ್ನು ಕೊಡುತ್ತಿರುವುದು ಮತ್ತು ಕೋಶಾಧ್ಯಕ್ಷನು ಅದನ್ನು ಕೊಡದಿರುವದು, ಅದೇ ಪ್ರಕಾರ ಅಂತರಾಯಕರ್ಮವು ಕೂಡ ಆತ್ಮನಿಗೆ ಪ್ರಾಪ್ತವಾಗುವಂಥ ಪದಾರ್ಥಗಳಲ್ಲಿ ಅನೇಕ ಪ್ರಕಾರದ ವಿಘ್ನಗಳನ್ನು ಒಡ್ಡಿ ಆ ಪದಾರ್ಥಗಳನ್ನು ಪ್ರಾಪ್ತವಾಗಗೊಡುವುದಿಲ್ಲ ಎಂದರೆ ಇದು ದಾನ, ಲಾಭ, ಮೊದಲಾದವುಗಳಲ್ಲಿ ಅಂತರಾಯ ಮಾಡುತ್ತದೆ. ಈ ಪ್ರಕಾರ ಇವು ಎಂಟು ಕರ್ಮಗಳ ಸ್ವಭಾವವಿದೆ. ಇವೆಲ್ಲವು ತಮ್ಮ ತಮ್ಮ ಸ್ವಭಾವದೊಡನೆ ಜೀವದ ಜತೆಯಲ್ಲಿ ಸಂಬಂಧವನ್ನು ಪ್ರಾಪ್ತಮಾಡಿಕೊಳ್ಳುತ್ತವೆ. ಇದನ್ನೇ ಪ್ರಕೃತಿಬಂಧವೆಂದು ಹೇಳುತ್ತಾರೆ.

ಈಗ ಪ್ರದೇಶಬಂಧದ ವರ್ಣನೆ ಮಾಡುತ್ತಾರೆ. ಆತ್ಮನ ಅಸಂಖ್ಯಾತ ಪ್ರದೇಶಗಳಲ್ಲಿ ಒಂದೊಂದು ಪ್ರದೇಶದ

ಜತೆ ಕರ್ಮದ ಅನಂತಾನಂತ ಪರಮಾಣುಗಳು ಕಟ್ಟುತ್ತವೆ ಎಂದರೆ ಜೀವದ ಪ್ರದೇಶಮತ್ತು ಕರ್ಮದ ಪರಮಾಣು ಎರಡೂ ಏಕಕ್ಷೇತ್ರಾವಗಾಹವಾಗಿ ಇರುತ್ತವೆ. ಅದನ್ನು ಪ್ರದೇಶಬಂಧವೆಂದು ಹೇಳುತ್ತಾರೆ.

ಈಗ ಸ್ಥಿತಿಬಂಧದ ವರ್ಣನೆ ಮಾಡುತ್ತಾರೆ, ಯಾವ ಕರ್ಮವು (ಜೀವದ ಜತೆಯಲ್ಲಿ ಇರುವ) ತಮ್ಮ ತಮ್ಮ ಸ್ಥಿತಿಯನ್ನು ಸ್ವೀಕರಿಸಿ ಕಟ್ಟಿದೆ ಅದನ್ನು ಸ್ಥಿತಿಬಂಧವೆಂದು ಹೇಳುತ್ತಾರೆ. ಹೇಗೆಂದರೆ ಜ್ಞಾನಾವರಣೀಯ, ದರ್ಶನಾವರಣೀಯ, ವೇದನೀಯ ಮತ್ತು ಅಂತರಾಯ ಈ ನಾಲ್ಕು ಕರ್ಮಗಳ ಉತ್ಕೃಷ್ಟ ಸ್ಥಿತಿಯು ಮೂವತ್ತು ಕೋಟಾಕೋಟಿ ಸಾಗರದ್ದಿದೆ. ಮತ್ತು ಮೋಹನೀಯ ಕರ್ಮದಲ್ಲಿ ದರ್ಶನಮೋಹನೀಯದ್ದು ಎಪ್ಪತ್ತು ಕೋಟಾ ಕೋಟಿ ಹಾಗೂ ಚಾರಿತ್ರಮೋಹನೀಯದ ಸ್ಥಿತಿ ನಲವತ್ತು ಕೋಟಾ ಕೋಟಿ ಸಾಗರದ್ದಿದೆ. ನಾಮ ಮತ್ತು ಗೋತ್ರ ಕರ್ಮದ ಸ್ಥಿತಿಯು ಇಪ್ಪತ್ತು ಕೋಟಾಕೋಟಿ ಸಾಗರದ್ದಿದೆ. ಆಯುಕರ್ಮದ ಸ್ಥಿತಿಯು ಮೂವತ್ತು ಮೂರು ಸಾಗರದ್ದಿದೆ. ಈ ಪ್ರಕಾರ ಇದು ಇವೆಲ್ಲವುಗಳ ಉತ್ಕೃಷ್ಟ ಸ್ಥಿತಿಯಾಯಿತು. ಜಘನ್ಯ ಸ್ಥಿತಿಯು ನಾಮ ಮತ್ತು ಗೋತ್ರ ಕರ್ಮದ್ದು ಎಂಟು ಮುಹೂರ್ತ, ವೇದನೀಯದ್ದು ಹದಿಮೂರು ಮುಹೂರ್ತ, ಜ್ಞಾನಾವರಣೀಯ - ದರ್ಶನಾವರಣೀಯ - ಮೋಹನೀಯ - ಅಂತರಾಯ ಮತ್ತು ಆಯುಕರ್ಮದ್ದು ಅಂತರ್ಮುಹೂರ್ತವಿದೆ, ಮಧ್ಯಮ ಸ್ಥಿತಿಯಲ್ಲಿ ಅನಂತ ಭೇದಗಳಿವೆ. ಈ ಪ್ರಕಾರ ಸ್ಥಿತಿಬಂಧದ ವರ್ಣನೆ ಮಾಡಲಾಯಿತು.

ಈಗ ಅನುಭಾಗಬಂಧದ ವರ್ಣನೆ ಮಾಡುತ್ತಾರೆ. ಕರ್ಮಗಳ ವಿಪಾಕ ಎಂದರೆ ಅವುಗಳಲ್ಲಿ ಯಾವ ಫಲಕೊಡುವ ಶಕ್ತಿಯಿರುತ್ತದೆ ಅದನ್ನೇ ಅನುಭಾಗಬಂಧವೆಂದು ಹೇಳುತ್ತಾರೆ. ಈ ಅನುಭಾಗಬಂಧವು ಘಾತಿಯಾ ಕರ್ಮಗಳಲ್ಲಂತೂ ಕೇವಲ ಅಶುಭರೂಪವೇ ಇರುತ್ತದೆ ಮತ್ತು ಅಘಾತಿಯಾಕರ್ಮಗಳಲ್ಲಿ ಶುಭ ರೂಪ ಹಾಗೂ ಅಶುಭರೂಪ ಎರಡೂ ಪ್ರಕಾರದ್ದಿರುತ್ತದೆ. ಹೇಗೆಂದರೆ ಜ್ಞಾನಾವರಣೀಯ, ದರ್ಶನಾವರಣೀಯ, ಮೋಹನೀಯ ಮತ್ತು ಅಂತರಾಯ - ಈ ನಾಲ್ಕರದಂತೂ ಬಳ್ಳಿ, ಕಟ್ಟಿಗೆ, ಮೂಳೆ ಮತ್ತು ಪಾಷಾಣರೂಪ ಕ್ರಮದಿಂದ ಬೆಳೆಯುತ್ತ ಬೆಳೆಯುತ್ತ ಬಂಧವಾಗುತ್ತದೆ. ಮತ್ತು ನಾಮ, ಗೋತ್ರ, ವೇದನೀಯ, ಆಯು - ಈ ನಾಲ್ಕು ಕರ್ಮಗಳದ್ದು ಒಂದು ವೇಳೆ ಶುಭ ರೂಪವಿದ್ದರೆ ಬೆಲ್ಲ ಬೂರಾ ಸಕ್ಕರೆ, ಸಕ್ಕರೆ ಮತ್ತು ಅಮೃತ ಸಮಾನವಾಗಿ ಕ್ರಮದಿಂದ ಬೆಳೆಯುತ್ತ ಮಾಧುರ್ಯದ ಹಾಗೆ ಶುಭರೂಪ ಫಲ ಕೊಡುತ್ತದೆ. ಮತ್ತು ಒಂದು ವೇಳೆ ಅಶುಭರೂಪವಿದ್ದರೆ ಬೇವು, ಹುಳಿ ಪದಾರ್ಥ, ವಿಷ ಮತ್ತು ಹಾಲಾಹಲ ಸಮಾನ ಕ್ರಮದಿಂದ ಬೆಳೆಯುತ್ತ ಅಪ್ರಿಯತೆಯ ಹಾಗೆ ಅಶುಭರೂಪ ಫಲ ಕೊಡುತ್ತದೆ. ಈ ಪ್ರಕಾರ ಇವೆಲ್ಲ ಕರ್ಮಗಳ ವಿಪಾಕವಾಗುತ್ತಿರುತ್ತದೆ. ಈ ರೀತಿ ನಾಲ್ಕೂ ಪ್ರಕಾರದ ಬಂಧದ ವರ್ಣನೆ ಮಾಡಲಾಯಿತು.

ರತ್ನತ್ರಯದಿಂದ ಬಂಧ ಹೇಗಾಗುವುದಿಲ್ಲವೆಂಬ ಮಾತನ್ನು ಈಗ ತಿಳಿಸಿಕೊಡುತ್ತಾರೆ, -

**ದರ್ಶನಮಾತ್ಮ ವಿನಿಶ್ಚಿತಿರಾತ್ಮ ಪರಿಜ್ಞಾನಮಿಷ್ಯತೇ ಬೋಧಃ ।**
**ಸ್ಥಿತಿರಾತ್ಮನಿ ಚಾರಿತ್ರಂ ಕುತ ಏತೇಭ್ಯೋ ಭವತಿ ಬಂಧಃ ।।೨೧೬।।**

**ಅನ್ವಯಾರ್ಥ ಃ- [ಆತ್ಮವಿನಿಶ್ಚಿತಿಃ]** ತಮ್ಮ ಆತ್ಮನ ವಿನಿಶ್ಚಯವು **[ದರ್ಶನಮ್]** ಸಮ್ಯಗ್ದರ್ಶನ **[ಆತ್ಮಪರಿಜ್ಞಾನಂ]** ಆತ್ಮನ ವಿಶೇಷ ಜ್ಞಾನವು **[ಬೋಧಃ]** ಸಮ್ಯಗ್ಜ್ಞಾನ ಮತ್ತು **[ಆತ್ಮನಿ]** ಆತ್ಮನಲ್ಲಿ **[ಸ್ಥಿತಿಃ]** ಸ್ಥಿರತೆಯನ್ನು **[ಚಾರಿತ್ರಂ]** ಸಮ್ಯಕ್ಚಾರಿತ್ರವೆಂದು **[ಇಷ್ಯತೇ]** ಹೇಳಲಾಗುತ್ತದೆ ಎಂದ ಮೇಲೆ ಪುನಃ **[ಏತೇಭ್ಯಃ 'ತ್ರಿಭ್ಯಂ']** ಈ ಮೂರರಿಂದ **[ಕುತಃ]** ಯಾವ ಪ್ರಕಾರ **[ಬಂಧಃ ಭವತಿ]** ಬಂಧವಾಗುತ್ತದೆ ?

**ಟೀಕೆ ಃ- 'ಆತ್ಮವಿನಿಶ್ಚಿತಿಃದರ್ಶನಂ ಆತ್ಮಪರಿಜ್ಞಾನಂ ಬೋಧಃ, ಆತ್ಮನಿ ಸ್ಥಿತಿಃ ಚಾರಿತ್ರಂ ಇಷ್ಯತೇ**

**ಏತೇಭ್ಯಃ ಬಂಧಃ ಕುತಃ ಭವತಿ ।'** - ಆತ್ಮನ ಸ್ವರೂಪದ ನಿಶ್ಚಯ ಮಾಡುವುದು ಸಮ್ಯಗ್ದರ್ಶನವಿದೆ, ಆತ್ಮನ ಸ್ವರೂಪದ ಪರಿಜ್ಞಾನವು ಸಮ್ಯಗ್ಜ್ಞಾನವಿದೆ ಮತ್ತು ಆತ್ಮ ಸ್ವರೂಪದಲ್ಲಿ ಲೀನ ಎಂದರೆ ನಿಶ್ಚಲವಾಗುವುದೇ ಸಮ್ಯಕ್ಚಾರಿತ್ರವಿದೆ. ಇವು ಮೂರೂ ಆತ್ಮಸ್ವರೂಪವೇ ಇವೆ. ಇವು ಮೂರೂ ಆತ್ಮಸ್ವರೂಪವೇ ಇವೆಯೆಂದ ಮೇಲೆ ಇವುಗಳಿಂದ ಕರ್ಮಗಳ ಬಂಧವು ಹೇಗಾಗುವ ಸಾಧ್ಯತೆಯಿದೆ ? ಎಂದರೆ ಎಂದೂ ಆಗುವ ಸಾಧ್ಯತೆಯಿಲ್ಲ.

**ಭಾವಾರ್ಥ ः-** ರತ್ನತ್ರಯವು ೧) ವ್ಯವಹಾರ ರತ್ನತ್ರಯ ೨) ನಿಶ್ಚಯರತ್ನತ್ರಯವೆಂದು ಎರಡು ಪ್ರಕಾರದ್ದಿದೆ. ದೇವ-ಶಾಸ್ತ್ರ-ಗುರುಗಳ ಹಾಗೂ ಸಪ್ತ ತತ್ತ್ವಗಳ ಶ್ರದ್ಧೆ ಮಾಡುವುದು ಅದು ವ್ಯವಹಾರ ಸಮ್ಯಗ್ದರ್ಶನವಿದೆ. ತತ್ತ್ವಗಳ ಸ್ವರೂಪವನ್ನು ತಿಳಿದುಕೊಳ್ಳುವುದು ಅದು ವ್ಯವಹಾರ ಸಮ್ಯಗ್ಜ್ಞಾನವಿದೆ, ಅಶುಭ ಕ್ರಿಯೆಗಳಲ್ಲಿನ ಪ್ರವೃತ್ತಿಯನ್ನು ನಿವಾರಿಸಿ ಶುಭ ಕ್ರಿಯೆಗಳಲ್ಲಿ ಪ್ರವೃತ್ತಿ ಮಾಡುವುದು ಅದು ವ್ಯವಹಾರ ಸಮ್ಯಕ್ಚಾರಿತ್ರವಿದೆ. ಇದು ವ್ಯವಹಾರ ರತ್ನತ್ರಯವಾಯಿತು. ಇನ್ನು ಆತ್ಮ ಸ್ವರೂಪದ ಶ್ರದ್ಧೆ ಮಾಡುವುದು ಅದು ನಿಶ್ಚಯಸಮ್ಯಗ್ದರ್ಶನವಿದೆ, ಆತ್ಮನ ಜ್ಞಾನಮಾಡಿಕೊಳ್ಳುವುದು ಅದು ನಿಶ್ಚಯಸಮ್ಯಗ್ಜ್ಞಾನವಿದೆ ಮತ್ತು ಆತ್ಮಸ್ವರೂಪದಲ್ಲಿ ಪರಿಣಮನ-ವಿಶ್ರಾಮ ಮಾಡುವುದು ಅದು ನಿಶ್ಚಯ ಸಮ್ಯಕ್ಚಾರಿತ್ರವಿದೆ. (ಈ ನಿಶ್ಚಯರತ್ನತ್ರಯವು ಸಾಕ್ಷಾತ ಮೋಕ್ಷದ ಕಾರಣವಿದೆ - ಮೋಕ್ಷರೂಪವೇ ಇದೆ.) ಅದು ಜೀವವನ್ನು ಕರ್ಮಗಳಿಂದ ಬಿಡಿಸಲು ಕಾರಣವಿದೆ, ಆದರೆ ಕರ್ಮಬಂಧದ ಕಾರಣವು ಸರ್ವಥಾ ಇಲ್ಲ.

ರತ್ನತ್ರಯವು ತೀರ್ಥಂಕರ ಮೊದಲಾದ ಪ್ರಕೃತಿಗಳ ಬಂಧದ ಕರ್ತೃವು ಕೂಡ ಇಲ್ಲವೆಂಬ ಮಾತನ್ನು ಈಗ ತಿಳಿಸಿಕೊಡುತ್ತಾರೆ.

**ಸಮ್ಯಕ್ತ್ವಚರಿತ್ರಾಭ್ಯಾಂ ತೀರ್ಥಕರಾಹಾರಕರ್ಮ್ಮಣೋಬಂಧಃ ।**
**ಯೋऽಪ್ಯುಪದಿಷ್ಟಃ ಸಮಯೇ ನ ನಯವಿದಾಂ ಸೋऽಪಿ ದೋಷಾಯ ॥೨೧೭॥**

**ಅನ್ವಯಾರ್ಥ ः-** **[ಅಪಿ]** ಮತ್ತು **[ತೀರ್ಥಕರಾಹಾರಕರ್ಮ್ಮಣಃ]** ತೀರ್ಥಂಕರಪ್ರಕೃತಿ ಮತ್ತು ಆಹಾರಕ ಪ್ರಕೃತಿಯ **[ಯಃ]** ಯಾವ **[ಬಂಧಃ]** ಬಂಧವು **[ಸಮ್ಯಕ್ತ್ವಚರಿತ್ರಾಭ್ಯಾಂ]**ಸಮ್ಯಕ್ತ್ವ ಮತ್ತು ಚಾರಿತ್ರದಿಂದ ಆಗುತ್ತದೆಂದು **[ಸಮಯೇ]** ಆಗಮದಲ್ಲಿ **[ಉಪದಿಷ್ಟಃ]** ಹೇಳಲಾಗಿದೆ, **[ಸಃ]** ಅದು **[ಅಪಿ]** ಕೂಡ **[ನಯವಿದಾಂ]** ನಯದ ಜ್ಞಾನಿಗಳಿಗೆ **[ದೋಷಾಯ ನ]** ದೋಷದ ಕಾರಣವಿಲ್ಲ.

**ಟೀಕೆ ः- 'ಸಮ್ಯಕ್ತ್ವ ಚರಿತ್ರಾಭ್ಯಾಂ ತೀರ್ಥಕರಾಹಾರ ಕರ್ಮಣಃ ಬಂಧಃ (ಭವತಿ) ಯಃ ಅಪಿ ಸಮಯಂ ಉಪದಿಷ್ಟಃ ಸಃ ಅಪಿ ನಯವಿದಾಂ ದೋಷಾಯ ನ ಭವತಿ ।'**- ಸಮ್ಯಗ್ದರ್ಶನ ಮತ್ತು ಸಮ್ಯಕ್ಚಾರಿತ್ರದಿಂದ ತೀರ್ಥಂಕರ ಪ್ರಕೃತಿ ಮತ್ತು ಆಹಾರಕ-ಪ್ರಕೃತಿಯ ಬಂಧವಾಗುತ್ತದೆಂದು ಯಾವ ಸಿದ್ಧಾಂತದಲ್ಲಿ ಉಪದೇಶವಿದೆ ಅದು ಕೂಡ ನಯದ ಕೋವಿದ ವಿವೇಕಿ ಜಿನಧರ್ಮೀ ಪುರುಷರಿಗೆ ಪ್ರತ್ಯಕ್ಷ ದೋಷ ಎಂದರೆ ವಿರೋಧ ಉತ್ಪನ್ನ ಮಾಡುವುದಿಲ್ಲ.

**ಭಾವಾರ್ಥ ः-** ಸಮ್ಯಗ್ದರ್ಶನವು ಪ್ರಕಟವಾದ ನಂತರವೇ ತೀರ್ಥಂಕರ ನಾಮಕರ್ಮ ಪ್ರಕೃತಿಯ ಬಂಧ ಹಾಗೂ ಸಮ್ಯಕ್ಚಾರಿತ್ರವಾದ ನಂತರವೇ ಆಹಾರಕ ಪ್ರಕೃತಿಯ ಬಂಧವಾಗುತ್ತದೆ, ಹಾಗಾದರೆ ರತ್ನತ್ರಯದಿಂದ ಕರ್ಮದ ಬಂಧವಾಗುವುದಿಲ್ಲವೆಂಬ ಕಥನವಿದೆ ಅದು ಹೇಗೆ ?

ಅದನ್ನೇ ಈಗ ಸ್ಪಷ್ಟ ಮಾಡುತ್ತಾರೆ, -

**ಸತಿ ಸಮ್ಯಕ್ತ್ವಚರಿತ್ರೇ ತೀರ್ಥಕರಾಹಾರಬಂಧಕೌ ಭವತಃ ।**
**ಯೋಗಕಷಾಯೌ ನಾಸತಿ ತತ್ಪುನರಸ್ಮಿನ್ನುದಾಸೀನಮ್ ।।೨೧೮।।**

**ಅನ್ವಯಾರ್ಥ ಃ- [ಯಸ್ಮಿನ್]** ಯಾವುದರಲ್ಲಿ **[ಸಮ್ಯಕ್ತ್ವಚರಿತ್ರೇ ಸತಿ]** ಸಮ್ಯಕ್ತ್ವ ಮತ್ತು ಚಾರಿತ್ರವಾದ ನಂತರ **[ತೀರ್ಥಕರಾಹಾರಬಂಧಕೌ]** ತೀರ್ಥಂಕರ ಮತ್ತು ಆಹಾರಕವೆರಡರ ಬಂಧ ಮಾಡುವಂಥ **[ಯೋಗ ಕಷಾಯೌ]** ಯೋಗ ಮತ್ತು ಕಷಾಯಗಳು **[ಭವತಃ]** ಆಗುತ್ತವೆ **[ಪುನಃ]** ಮತ್ತು **[ಅಸತಿ ನ]** ಆಗದಿದ್ದರೆ ಆಗುವುದಿಲ್ಲ ಎಂದರೆ ಸಮ್ಯಕ್ತ್ವ ಮತ್ತು ಚಾರಿತ್ರವಿಲ್ಲದೆ ಬಂಧದ ಕರ್ತೃಗಳು ಯೋಗ ಮತ್ತು ಕಷಾಯಗಳಾಗುವುದಿಲ್ಲ **[ತತ್]** ಆ ಸಮ್ಯಕ್ತ್ವ ಮತ್ತು ಚಾರಿತ್ರಗಳು **[ಅಸ್ಮಿನ್]** ಈ ಬಂಧದಲ್ಲಿ **[ಉದಾಸೀನಮ್]** ಉದಾಸೀನವಿವೆ.

**ಟೀಕೆ ಃ- 'ಸಮ್ಯಕ್ತ್ವ ಚರಿತ್ರೇ ಸತಿ ಯೋಗಕಷಾಯೌ ಬಂಧಕೌ ಭವತಃ ತಸ್ಮಾತ್ ತತ್ಪುನಃ ಅಸ್ಮಿನ್ ಉದಾಸೀನಮ್ ।'-** ಸಮ್ಯಕ್ತ್ವ ಮತ್ತು ಚಾರಿತ್ರವು ಪ್ರಕಟವಾದ ನಂತರವೇ ಮನ, ವಚನ, ಕಾಯದ ಯೋಗ ಹಾಗೂ ಅನಂತಾನುಬಂಧಿಯನ್ನು ಬಿಟ್ಟುಕೊಟ್ಟು ಉಳಿದ ಮೂರು ಕಷಾಯಗಳ ಉಪಸ್ಥಿತಿಯಲ್ಲಿ ತೀರ್ಥಂಕರ ಮತ್ತು ಆಹಾರಕವೆರಡರ ಬಂಧವಾಗುತ್ತದೆ. ಆದುದರಿಂದ ರತ್ನತ್ರಯವಂತೂ ಬಂಧಕವಿಲ್ಲ, ಬಂಧದಲ್ಲಿ ಉದಾಸೀನವಿದೆ. (ತೀರ್ಥಂಕರದ ಬಂಧವಂತೂ ಯೋಗ, ಮೂರು ಚೌಕಡಿ ಎಂದರೆ ಅಪ್ರತ್ಯಾಖಾನಾವರಣ, ಪ್ರತ್ಯಾಖ್ಯಾನಾವರಣ ಮತ್ತು ಸಂಜ್ವಲನ ಹಾಗೂ ಒಂಭತ್ತು ನೋಕಷಾಯದಲ್ಲಿ ಆಗುತ್ತದೆ, ಇನ್ನು ಆಹಾರಕವೆರಡರ ಬಂಧವು ಯೋಗ, ಸಂಜ್ವಲನ ಕಷಾಯ ಹಾಗೂ ನೋಕಷಾಯದಲ್ಲಿ ಆಗುತ್ತದೆ. ಆದಾಗ್ಯೂ ಆ ಸಮ್ಯಕ್ತ್ವ ಮತ್ತು ಚಾರಿತ್ರವು ಈ ಬಂಧದಲ್ಲಿ ಉದಾಸೀನವಿದೆ ಎಂದರೆ ರಾಗರೂಪವಿಲ್ಲ.)

**ಭಾವಾರ್ಥ ಃ-** ಯಾವಾಗ ಆತ್ಮನಲ್ಲಿ ಸಮ್ಯಗ್ದರ್ಶನ ಮತ್ತು ಸಮ್ಯಕ್ಚಾರಿತ್ರಗುಣವು ಪ್ರಕಟವಿರಲಿಲ್ಲ. ಆಗ ಕೂಡ ಆತ್ಮನ ಜತೆಯಲ್ಲಿ ಕರ್ಮಗಳ ಬಂಧವಾಗುತ್ತಿತ್ತು ಮತ್ತು ಯಾವಾಗ ಏಕದೇಶ ಸಮ್ಯಕ್ಚಾರಿತ್ರವು ಪ್ರಕಟವಾಗಿ ಹೋಯಿತು. ಆಗ ಕೂಡ ಆತ್ಮನ ಜತೆಯಲ್ಲಿ ಕರ್ಮಗಳ ಬಂಧವಾಗುತ್ತದೆ. ಇದರಿಂದ ಬಂಧ ಮಾಡುವಲ್ಲಿ ಯೋಗ-ಕಷಾಯಗಳ ಸದ್ಭಾವವು ಕಾರಣವಿದೆ ಮತ್ತು ಕರ್ಮಗಳ ಬಂಧವಾಗದಿರುವಲ್ಲಿ ಯೋಗ-ಕಷಾಯಗಳ ಅಸದ್ಭಾವವು ಕಾರಣವಿದೆಯೆಂಬುದು ಸಿದ್ಧವಾಗುವುದು.

ಹೀಗಿದ್ದರೆ ಸಮ್ಯಕ್ತ್ವವನ್ನು ದೇವಾಯುವಿನ ಬಂಧದ ಕಾರಣವೆಂದೇಕೆ ಹೇಳಿದ್ದಾರೆ, ?-

**ನನು ಕಥಮೇವಂ ಸಿದ್ಧ್ಯತಿ ದೇವಾಯುಃ ಪ್ರಭೃತಿಸತ್ಪ್ರಕೃತಿಬಂಧಃ ।**
**ಸಕಲಜನಸುಪ್ರಸಿದ್ಧೋ ರತ್ನತ್ರಯಧಾರಿಣಾಂ ಮುನಿವರಾಣಾಮ್ ।।೨೧೯।।**

**ಅನ್ವಯಾರ್ಥ ಃ- [ರತ್ನತ್ರಯಧಾರಿಣಾಂ]** ರತ್ನತ್ರಯದ ಧಾರಕರಾದ **[ಮುನಿವರಾಣಾಂ]** ಶ್ರೇಷ್ಠ ಮುನಿಗಳಿಗೆ **[ಸಕಲಜನಪ್ರಸಿದ್ಧಃ]** ಸಮಸ್ತ ಲೋಕದಲ್ಲಿ ಒಳ್ಳೆಯ ಪ್ರಕಾರದ ಪ್ರಸಿದ್ಧಿ **[ದೇವಾಯುಃ ಪ್ರಭೃತಿಸತ್ಪ್ರಕೃತಿಬಂಧಃ]** ದೇವಾಯು ಮೊದಲಾದ ಉತ್ತಮ ಪ್ರಕೃತಿಗಳ ಬಂಧವು **[ಏವ]** ಪೂರ್ವೋಕ್ತ ಪ್ರಕಾರದಿಂದ **[ಕಥಮ್]** ಹೇಗೆ **[ಸಿದ್ಧ್ಯತಿ]** ಸಿದ್ಧವಾಗುವುದು ? **[ನನು]** ಎಂದು ಓರ್ವ ಪುರುಷನು ಸಂದೇಹ ಮಾಡುತ್ತಾನೆ.

**ಟೀಕೆ :- 'ನನು ರತ್ನತ್ರಯಧಾರಿಣಾಂ ಮುನಿವರಾಣಾಂ ಸಕಲಜನಸುಪ್ರಸಿದ್ಧಃ ದೇವಾಯುಃ ಪ್ರಭೃತಿಸತ್ಪ್ರಕೃತಿಬಂಧಃ ಏವಂ ಕಥಮ್ ಸಿದ್ಧ್ಯತಿ ।'** - ರತ್ನತ್ರಯದ ಧಾರಕರಾದ ಮುನಿವರರಿಗೆ ದೇವಾಯು ಮೊದಲಾದ ಶುಭ ಪ್ರಕೃತಿಗಳ ಬಂಧವಾಗುತ್ತದೆಯೆಂದು ಯಾವ ಶಾಸ್ತ್ರಗಳಲ್ಲಿ ಕಥನವಿದೆ ಅದು ಹೇಗೆ ಸಿದ್ಧವಾಗುವುದೆಂದು ಇಲ್ಲಿ ಯಾರೋ ಸಂದೇಹ ಪಡುತ್ತಾರೆ.

**ಭಾವಾರ್ಥ :-** ಓ ಪ್ರಭು ! ತೀರ್ಥಂಕರ ಪ್ರಕೃತಿ ಮತ್ತು ಆಹಾರಕಗಳೆರಡರ ಬಂಧವು ಯೋಗ ಹಾಗೂ ಕಷಾಯಗಳಿಂದ ಆಗುತ್ತದೆಂದು ತಾವು ಮೊದಲು ಹೇಳಿರುವ ಮಾತಂತೂ ನನ್ನ ತಿಳಿವಳಿಕೆಯಲ್ಲಿ ಬಂದು ಬಿಟ್ಟಿದೆ; ಆದರೆ ರತ್ನತ್ರಯದ ಧಾರಕರಾದ ಮುನಿಗಳಿಗೆ ದೇವಾಯು ಮೊದಲಾದ ಶುಭ ಪ್ರಕೃತಿಗಳ ಬಂಧವಾಗುತ್ತದೆಯೆಂದು ಶಾಸ್ತ್ರಗಳಲ್ಲಿ ಕಥನವಿದೆ ಅದು ಯಾವ ಪ್ರಕಾರದಿಂದ ಸಿದ್ಧವಾಗುವುದೆಂದು ಇಲ್ಲಿಯಾವನೋ ಓರ್ವನು ಪ್ರಶ್ನೆ ಮಾಡುತ್ತಿದ್ದಾನೆ.

ಆ ಶಿಷ್ಯನ ಪ್ರಶ್ನೆಗೆ ಉತ್ತರ ರೂಪವಾಗಿ ಈಗ ಶ್ಲೋಕ ಹೇಳುತ್ತಾರೆ, -

ರತ್ನತ್ರಯಮಿಹ ಹೇತುರ್ನಿರ್ವಾಣಸ್ಯೈವ ಭವತಿ ನಾನ್ಯಸ್ಯ ।
ಆಸ್ರವತಿ ಯತ್ತು ಪುಣ್ಯಂ ಶುಭೋಪಯೋಗೋಽಯಮಪರಾಧಃ ॥೨೨೦॥

**ಅನ್ವಯಾರ್ಥ :- [ಇಹ]** ಈ ಲೋಕದಲ್ಲಿ **[ರತ್ನತ್ರಯಂ]** ರತ್ನತ್ರಯರೂಪದ ಧರ್ಮವು **[ನಿರ್ವಾಣಸ್ಯ ಏವ]** ನಿರ್ವಾಣಕ್ಕೇನೇ **[ಹೇತು]** ಕಾರಣ **[ಭವತಿ]** ಆಗುತ್ತದೆ, **[ಅನ್ಯಸ್ಯ]** ಅನ್ಯ ಗತಿಗೆ **[ನ]** ಇಲ್ಲ **[ತು]** ಮತ್ತು **[ಯತ್]** ಆ ರತ್ನತ್ರಯದಲ್ಲಿ **[ಪುಣ್ಯಂ ಆಸ್ರವತಿ]** ಪುಣ್ಯದ ಆಸ್ರವವಾಗುತ್ತದೆ. **[ಅಯಮ್]** ಈ **[ಅಪರಾಧಃ]** ಅಪರಾಧವು **[ಶುಭೋಪಯೋಗಃ]** ಶುಭೋಪಯೋಗದ್ದಿದೆ.

**ಟೀಕೆ :- 'ಇಹ ರತ್ನತ್ರಯಂ ನಿರ್ವಾಣಸ್ಯ ಏವ ಹೇತುಃ ಭವತಿ ಅನ್ಯಸ್ಯ ನ ತು ಯತ್ ಪುಣ್ಯಂ ಆಸ್ರವತಿ ಅಯಂ ಅಪರಾಧಃಶುಭೋಪಯೋಗಃ ।'**- ಈಲೋಕದಲ್ಲಿ ರತ್ನತ್ರಯವು ಎಂದರೆ ಸಮ್ಯಗ್ದರ್ಶನ, ಸಮ್ಯಕ್‌ಜ್ಞಾನ, ಸಮ್ಯಕ್ಚಾರಿತ್ರವು ಮೋಕ್ಷದ ಕಾರಣವೇ ಆಗುತ್ತದೆ, ಬೇರೆ ಗತಿಗೆ ಇಲ್ಲ. ಮತ್ತು ರತ್ನತ್ರಯದ ಸದ್ಭಾವದಲ್ಲಿ ಯಾವ ಶುಭ ಪ್ರಕೃತಿಗಳ ಆಸ್ರವವಾಗುತ್ತದೆ ಅದೆಲ್ಲವೂ ಶುಭ ಕಷಾಯ ಮತ್ತು ಶುಭಯೋಗದಿಂದಲೇ ಆಗುತ್ತದೆ, ಎಂದರೆ ಅದು ಶುಭೋಪಯೋಗದ್ದೇ ಅಪರಾಧವಿದೆ, ಆದರೆ ರತ್ನತ್ರಯದ್ದಲ್ಲ. ಭಿನ್ನ ಭಿನ್ನ ಕಾರಣಗಳಿಂದ ಭಿನ್ನ ಭಿನ್ನ ಕಾರ್ಯಗಳಾಗುತ್ತಿದ್ದರೂ ಕೂಡ ವ್ಯವಹಾರದಿಂದ ಒಂದು ಇನ್ನೊಂದರದೂ ಕಾರ್ಯ ಮಾಡುತ್ತದೆಯೆಂದು ಹೇಳಲಾಗುತ್ತದೆ.

**ಭಾವಾರ್ಥ :-** ತೀರ್ಥಂಕರ ಮತ್ತು ಆಹಾರಕಗಳೆರಡರ ಬಂಧವಂತೂ ಸಮ್ಯಕ್ತ್ವದ ಭಾವಗಳಲ್ಲಿ ಯೋಗ ಮತ್ತು ಕಷಾಯಗಳಿಂದ ಆಗುತ್ತದೆಂದು ತಿಳಿಸಿದೆ, ಆದಾಗ್ಯೂದೇವಾಯು ಮೊದಲಾದ ಅನ್ಯ ಶುಭ ಪ್ರಕೃತಿಗಳ ಬಂಧವು ರತ್ನತ್ರಯದಲ್ಲಿ ಹೇಗಾಗುವ ಸಾಧ್ಯತೆಯಿದೆಯೆಂದು ಮೊದಲನೇ ಶ್ಲೋಕದಲ್ಲಿ ಶಿಷ್ಯನು ಪ್ರಶ್ನೆ ಮಾಡಿದ್ದನು. ಅವನ ಸಮಾಧಾನ ಹೀಗೆ ಮಾಡುತ್ತಾರೆ - ವಾಸ್ತವದಲ್ಲಿ ರತ್ನತ್ರಯವಂತೂ ನಿರ್ವಾಣದ್ದೇ ಕಾರಣವಿದೆ. ಆದರೆ ಅದು ಇರುತ್ತಿರುವಾಗ ಯಾವ ಇಂದ್ರ ಮೊದಲಾದ ದೇವಪದದ ಆಸ್ರವವಾಗುತ್ತದೆ ಅದು ಶುಭೋಪಯೋಗದ ಅಪರಾಧವಿದೆ. ರತ್ನತ್ರಯದ ದೋಷವು ಸ್ವಲ್ಪ ಮಾತ್ರವೂ ಇಲ್ಲ.

ವ್ಯವಹಾರದಿಂದ ಹಾಗೆ ಆರೋಪವಾಗುತ್ತದೆ, ಆದರೆ ನಿಶ್ಚಯದಿಂದ ಹಾಗೆ ಇಲ್ಲವೆಂದು ಈಗ ಹೇಳುತ್ತಾರೆ,-

**ಏಕಸ್ಮಿನ್ ಸಮವಾಯಾದತ್ಯಂತವಿರುದ್ಧ ಕಾರ್ಯಯೋರಪಿ ಹಿ ।**
**ಇಹ ದಹತಿ ಘೃತಮಿತಿ ಯಥಾ ವ್ಯವಹಾರಸ್ತಾದೃಶೋಽಪಿ ರೂಢಿಮಿತಿ ॥೨೨೧॥**

**ಅನ್ವಯಾರ್ಥ :-** [**ಹಿ**] ನಿಶ್ಚಯದಿಂದ [**ಏಕಸ್ಮಿನ್**] ಒಂದು ವಸ್ತುವಿನಲ್ಲಿ [**ಅತ್ಯಂತ ವಿರುದ್ಧ ಕಾರ್ಯಯೋಃ**] ಅತ್ಯಂತ ವಿರೋಧಿಯಾದ ಎರಡು ಕಾರ್ಯಗಳದ್ದು [**ಅಪಿ**] ಕೂಡ [**ಸಮವಾಯಾತ್**] ಸೇರಿಕೆಯಿಂದ [**ತಾದೃಶಃ ಅಪಿ**] ಅಂಥದೇ [**ವ್ಯವಹಾರಃ**] ವ್ಯವಹಾರವು [**ರೂಢಿಮ್**] ರೂಢಿಗೆ [**ಇತಃ**] ಪ್ರಾಪ್ತವಿದೆ [**ಯಥಾ**] ಹೇಗೆಂದರೆ [**ಇಹ**] ಈ ಲೋಕದಲ್ಲಿ [**'ಘೃತಮ್‌ದಹತಿ**] ತುಪ್ಪವು ಸುಡುತ್ತದೆ'- [**ಇತಿ**] ಎಂಬ ಲೋಕೋಕ್ತಿಯಿದೆ.

**ಟೀಕೆ :- 'ಹಿ ಏಕಸ್ಮಿನ್ ಅತ್ಯಂತವಿರುದ್ಧಕಾರ್ಯಯೋಃ ಅಪಿ ಸಮವಾಯಾತ್ ಯಥಾ ಘೃತಮ್ ದಹತಿ ಇತಿ ವ್ಯವಹಾರಃ ಅಪಿ ತಾದೃಶಃ ವ್ಯವಹಾರಃರೂಢಿಂ ಇತಃ ।'-** ಒಂದೇ ವಸ್ತುವಿನಲ್ಲಿ ಪರಸ್ಪರ ಅತ್ಯಂತ ವಿರುದ್ಧವಾದ ಎರಡು ಕಾರ್ಯಗಳ ಬಂಧವಾಗುವುದರಿಂದ 'ಹೇಗೆ ತುಪ್ಪವು ಸುಡುತ್ತದೆ'ಯೆಂದು ಒಂದರಲ್ಲಿ ಇನ್ನೊಂದರ ವ್ಯವಹಾರವಾಗಿ ಹೋಗುತ್ತದೆ, ಅದೇ ಪ್ರಕಾರ ಇಲ್ಲಿ ಕೂಡ ಸಮ್ಯಕ್ತ್ವದಿಂದ ಶುಭಪ್ರಕೃತಿಗಳ ಬಂಧವಾಗುತ್ತದೆಯೆಂಬ ವ್ಯವಹಾರವು ಪ್ರಸಿದ್ಧವಾಗಿ ಹೋಗಿದೆ. ಪರಸ್ಪರ ವಿರುದ್ಧವಿರುವಂಥ ಜ್ಞಾನಭಾವ ಮತ್ತು ರಾಗಭಾವದ ಸಮವಾಯ ಎಂದರೆ ಸೇರಿಕೆಯಿಂದ ಯಾವ ಕರ್ಮಗಳ ಬಂಧವಾಗುತ್ತದೆ ಅದನ್ನು ಅಗ್ನಿಯ ಸಂಯೋಗದಿಂದ ಉಷ್ಣವಾದ ತುಪ್ಪದ ಮೂಲಕ ಓರ್ವ ಪುರುಷನು ಸುಟ್ಟುಕೊಂಡನೆನ್ನುವಂತೆ ತಿಳಿದುಕೊಳ್ಳಬೇಕು. ಅಲ್ಲಿಸುಡುವ ಸ್ವಭಾವವು ಅಗ್ನಿಯದಿದೆ - ತುಪ್ಪದ್ದಿಲ್ಲ; ಆದಾಗ್ಯೂ ಅವೆರಡರ ಸಂಯೋಗದಿಂದ ತುಪ್ಪವು ಶರೀರವನ್ನು ಸುಟ್ಟುಬಿಟ್ಟಿತೆಂದು ಲೋಕದಲ್ಲಿ ಹೇಳಲಾಗುತ್ತದೆ. ಅದೇ ಪ್ರಕಾರ ಸಮ್ಯಕ್ತ್ವ ಮತ್ತು ರಾಗಭಾವ ಇವೆರಡರ ಕೂಡುವಿಕೆಯಲ್ಲಿ ಬಂಧದ ಕಾರಣವಂತೂ ರಾಗವೇ ಇದೆ, ಸಮ್ಯಕ್ತ್ವವಿಲ್ಲ; ಆದಾಗ್ಯೂ ವ್ಯವಹಾರ ರೂಢಿಯಿಂದ ರತ್ನತ್ರಯವು ಇಂದ್ರ- ಅಹಮಿಂದ್ರ ಮೊದಲಾದ ಶುಭ ಬಂಧದ ಕಾರಣವಿದೆ. ಎಂದರೆ ಸಮ್ಯಕ್ತ್ವದಿಂದ ಶುಭಪ್ರಕೃತಿಗಳ ಬಂಧವಾಗುತ್ತದೆಯೆಂಬುದೇ ಪ್ರಸಿದ್ಧವಿದೆ.

**ಭಾವಾರ್ಥ :-** ಯಾವ ಪ್ರಕಾರ ಅಗ್ನಿ ಮತ್ತು ತುಪ್ಪ ಇವೆರಡರ ಕಾರ್ಯಗಳು ಪರಸ್ಪರ ವಿರುದ್ಧವಿವೆ, ತುಪ್ಪದ ಕೆಲಸವಂತೂ ಪುಷ್ಟ ಮಾಡುವುದಿದೆ ಮತ್ತು ಅಗ್ನಿಯ ಕೆಲಸವು ಸುಡುವುದಿದೆ. ತುಪ್ಪವಂತೂ ಸುಡುವುದಿಲ್ಲ, ಆದರೆ ತುಪ್ಪವು ಸುಡುತ್ತದೆಯೆಂದು ಹೇಳಲಾಗುತ್ತದೆ. ಅದೇ ಪ್ರಕಾರ ಸಮ್ಯಕ್ತ್ವದ ಕೆಲಸವು ಕರ್ಮಬಂಧ ಮಾಡಿಸುವುದಿಲ್ಲ, ಆದಾಗ್ಯೂ ಆತ್ಮನಲ್ಲಿ ಸಮ್ಯಕ್ತ್ವ ಮತ್ತು ರಾಗಭಾವ ಇವೆರಡರ ಸಂಬಂಧದಿಂದ ಸಮ್ಯಕ್ತ್ವದಿಂದಕರ್ಮದ ಬಂಧವಾಗುತ್ತದೆಯೆಂದು ಹೇಳಲಾಗುತ್ತದೆ. ಆದುದರಿಂದ ಲೋಕದಲ್ಲಿ ವ್ಯವಹಾರವು ಕೂಡ ಸಮ್ಯಕ್ತ್ವದಿಂದ ಶುಭ ಕರ್ಮಗಳ ಬಂಧವಾಗುತ್ತದೆ, ರತ್ನತ್ರಯದಿಂದ ಮೋಕ್ಷದ ಲಾಭವಾಗುತ್ತದೆಯೆಂದು ಆಗುತ್ತದೆ.

(ಸುಡುವುದು ತುಪ್ಪದ ಲಕ್ಷಣವಲ್ಲ, ಅದಂತೂ ಅಗ್ನಿಯ ಲಕ್ಷಣವೇ ಇದೆಯೆಂದು ವಿಚಾರ ಮಾಡುವುದರಿಂದ ತಿಳಿದು ಬರುತ್ತದೆ. ಆದರೆ ಪರಸ್ಪರದಲ್ಲಿ ಎರಡರ ಸಂಯೋಗವಾಗಿ ಹೋಗುವ ಕಾರಣ ಇಂಥ ಓರ್ವ ಪುರುಷನು ತುಪ್ಪದಿಂದ ಸುಟ್ಟುಕೊಂಡನೆಂದು ಹೇಳುವುದರಲ್ಲಿ ಯಾವ ದೋಷವಿಲ್ಲ. ಅದೇ ಪ್ರಕಾರ ಒಬ್ಬ ಪುರುಷನಲ್ಲಿ ಜ್ಞಾನಧಾರೆ ಮತ್ತು ಅಜ್ಞಾನಧಾರೆ ಇವೆರಡೂ ಒಂದೇ ಸಮಯದಲ್ಲಿ ನಡೆಯುತ್ತಲಿವೆ, ಅಲ್ಲಿ ಬಂಧದ ಕಾರಣವಂತೂ ರಾಗಾದಿರೂಪದ ಅಜ್ಞಾನಧಾರೆಯೇ ಇದೆ, ಜ್ಞಾನಧಾರೆಯು ಬಂಧದ ಕಾರಣವಿಲ್ಲ; ಆದಾಗ್ಯೂ ಅವೆರಡರಸಂಯೋಗವಿರುವ ಕಾರಣ ಸಮ್ಯಕ್ತ್ವವನ್ನು ಶುಭ ಬಂಧದ ಕಾರಣವೆಂದು ಹೇಳುವುದರಲ್ಲಿ ಯಾವ

ದೋಷವಿಲ್ಲ. ಇಂಥ ವ್ಯವಹಾರವು ಈ ಲೋಕದಲ್ಲಿ ಪ್ರಸಿದ್ಧಿಗೆ ಪ್ರಾಪ್ತವಾಗಿದೆ) ರತ್ನತ್ರಯದಿಂದಂತೂ ಮೋಕ್ಷದ ಲಾಭವಾಗುತ್ತದೆ.

ರತ್ನತ್ರಯಲಕ್ಷಣವುಳ್ಳ ಮೋಕ್ಷಮಾರ್ಗವು ಆತ್ಮನಿಗೆ ಪರಮಾತ್ಮ ಪದ ಮಾಡಿಸುತ್ತದೆಂದು ಹೇಳುತ್ತಾರೆ,-

**ಸಮ್ಯಕ್ತ್ವಬೋಧಚಾರಿತ್ರಲಕ್ಷಣೋ ಮೋಕ್ಷಮಾರ್ಗ ಇತ್ಯೇಷಃ ।**
**ಮುಖ್ಯೋಪಚಾರರೂಪಃ ಪ್ರಾಪಯತಿ ಪರಂ ಪದಂ ಪುರುಷಮ್ ।।೨೨೨।।**

**ಅನ್ವಯಾರ್ಥ ಃ-** **[ಇತಿ]** ಈ ಪ್ರಕಾರ **(ಏಷಃ)** ಈ ಪೂರ್ವಕಥಿತ **[ಮುಖ್ಯೋಪಚಾರರೂಪಃ]** ನಿಶ್ಚಯ ಮತ್ತು ವ್ಯವಹಾರರೂಪ **[ಸಮ್ಯಕ್ತ್ವಬೋಧಚಾರಿತ್ರಲಕ್ಷಣಃ]** ಸಮ್ಯಗ್ದರ್ಶನ, ಸಮ್ಯಗ್ಜ್ಞಾನ ಮತ್ತು ಸಮ್ಯಕ್ಚಾರಿತ್ರ ಲಕ್ಷಣವುಳ್ಳ **[ಮೋಕ್ಷಮಾರ್ಗಃ]** ಮೋಕ್ಷದ ಮಾರ್ಗವು **[ಪುರುಷಂ]** ಆತ್ಮನಿಗೆ **[ಪರಂ ಪದಂ]** ಪರಮಾತ್ಮನ ಪದವನ್ನು **[ಪ್ರಾಪಯತಿ]** ಪ್ರಾಪ್ತ ಮಾಡಿಸುತ್ತದೆ.

**ಟೀಕೆ ಃ- 'ಸಮ್ಯಕ್ತ್ವಬೋಧಚಾರಿತ್ರಲಕ್ಷಣಃ ಇತಿ ಏಷಃ ಮೋಕ್ಷಮಾರ್ಗಃ ಮುಖ್ಯೋಪಚಾರರೂಪಃ ಪುರುಷಂ ಪರಂ ಪದಂ ಪ್ರಾಪಯತಿ ।'** - ಸಮ್ಯಗ್ದರ್ಶನ, ಸಮ್ಯಗ್ಜ್ಞಾನ ಮತ್ತು ಸಮ್ಯಕ್ಚಾರಿತ್ರ ಈ ಮೂರು ಸ್ವರೂಪವೇ ಮೋಕ್ಷಮಾರ್ಗ ಎಂದರೆ ನಿರ್ವಾಣದ ಮಾರ್ಗವಿದೆ ಈ ಮೋಕ್ಷಮಾರ್ಗವು ನಿಶ್ಚಯ ಮತ್ತು ವ್ಯವಹಾರದ ಭೇದದಿಂದ ಎರಡು ಪ್ರಕಾರದ್ದಿದೆ ಮತ್ತು ಇದುವೇ ಆತ್ಮನನ್ನು ಮೋಕ್ಷಕ್ಕೆ ತಲುಪಿಸುತ್ತದೆ.

**ಭಾವಾರ್ಥ ಃ-** ನಿಶ್ಚಯ ರತ್ನತ್ರಯವಂತೂ ಮುಖ್ಯವಿದೆ ಮತ್ತು ವ್ಯವಹಾರರತ್ನತ್ರಯವು ಉಪಚಾರರೂಪವಿದೆ, ಇವೆರಡೂ ಮೋಕ್ಷದ ಮಾರ್ಗವಿದೆ ಮತ್ತು ಜೀವನಿಗೆ ಪರಮಪದದ ಪ್ರಾಪ್ತಿ ಮಾಡಿಸುತ್ತವೆ ಎಂದರೆ ನಿಶ್ಚಯ ಮೋಕ್ಷಮಾರ್ಗವು ಪ್ರತ್ಯಕ್ಷ ಮೋಕ್ಷಮಾರ್ಗದ ಸಾಧಕವಿದೆ ಹಾಗೂ ವ್ಯವಹಾರ ಮೋಕ್ಷಮಾರ್ಗವು ಪರಂಪರೆಯಿಂದ ಮೋಕ್ಷಮಾರ್ಗದ ಸಾಧಕವಿದೆ, ಅಥವಾ ವ್ಯವಹಾರಮೋಕ್ಷಮಾರ್ಗವು ನಿಶ್ಚಯ ಮೋಕ್ಷಮಾರ್ಗದ ಕಾರಣವಿದೆ.

ಈಗ ಪರಮಾತ್ಮನು ಮೋಕ್ಷಸ್ಥಾನದಲ್ಲಿರುತ್ತಾನೆಂದು ಹೇಳುತ್ತಾರೆ, -

**ನಿತ್ಯಮಪಿ ನಿರುಪಲೇಪಃ ಸ್ವರೂಪಸಮವಸ್ಥಿತೋ ನಿರುಪಘಾತಃ ।**
**ಗಗನಮಿವ ಪರಮಪುರುಷಃ ಪರಮಪದೇ ಸ್ಫುರತಿ ವಿಶದತಮಃ ।।೨೨೩।।**

**ಅನ್ವಯಾರ್ಥ ಃ-** **[ನಿತ್ಯಮಪಿ]** ಯಾವಾಗಲೂ **[ನಿರುಪಲೇಪಃ]** ಕರ್ಮರೂಪ ರಜದ ಲೇಪದಿಂದ ರಹಿತ, **[ಸ್ವರೂಪಸಮವಸ್ಥಿತಃ]** ತನ್ನ ಅನಂತದರ್ಶನ-ಜ್ಞಾನಸ್ವರೂಪದಲ್ಲಿ ಒಳ್ಳೆಯ ಪ್ರಕಾರ ಸ್ಥಿರ **[ನಿರುಪಘಾತಃ]** ಉಪಘಾತ ರಹಿತ ಮತ್ತು **[ವಿಶದತಮಃ]** ಅತ್ಯಂತ ನಿರ್ಮಲವಾದ **[ಪರಮಪುರುಷಃ]** ಪರಮಾತ್ಮನು **[ಗಗನಮ್ ಇವ]** ಆಕಾಶದ ಹಾಗೆ **[ಪರಮಪದೇ]** ಲೋಕಶಿಖರದಲ್ಲಿರುವ ಮೋಕ್ಷ ಸ್ಥಾನದಲ್ಲಿ **[ಸ್ಫುರತಿ]** ಪ್ರಕಾಶಮಾನನಾಗುತ್ತಾನೆ.

**ಟೀಕೆ ಃ- 'ನಿತ್ಯಮ್ ಅಪಿ ನಿರುಪಲೇಪಃ ಸ್ವರೂಪಸಮವಸ್ಥಿತಃ ನಿರುಪಘಾತಃ ವಿಶದತಮಃ ಪರಮಪುರುಷಃ ಗಗನಮ್ಇವ ಪರಮಪದೇ ಸ್ಫುರತಿ ।'**- ಯಾವಾಗಲೂ ಕರ್ಮಮಲದಿಂದ ರಹಿತ, ನಿಜ ಸ್ವರೂಪದಲ್ಲಿ ಸ್ಥಿರ, ಘಾತರಹಿತ, ಅತ್ಯಂತ ನಿರ್ಮಲನಾದಂಥ ಪರಮಾತ್ಮನು ಸಿದ್ಧಪರಮೇಷ್ಠಿಯಿದ್ದಾರೆ. ಅವರು ಮೋಕ್ಷದಲ್ಲಿ ಆಕಾಶದ ಸಮಾನವಾಗಿ ದೈದೀಪ್ಯಮಾನರಾಗಿ ಇರುತ್ತಾರೆ.

**ಭಾವಾರ್ಥ :-** ಪುರುಷವೆಂಬ ಹೆಸರು ಜೀವದ್ದಿದೆ ಮತ್ತು ಪರಮಪುರುಷವೆಂಬ ಹೆಸರು ಪರಮಾತ್ಮಸಿದ್ಧ ಭಗವಂತರದಿದೆ. ಜೀವನಂತೂ ನರ-ನಾರಕ ಮೊದಲಾದ ನಾಲ್ಕೂ ಗತಿಗಳಲ್ಲಿ ತನ್ನ ಆಯುವಿನ ಪ್ರಮಾಣ ಸ್ವಲ್ಪಕಾಲದವರೆಗೇ ಇರುತ್ತಾನೆ ಮತ್ತು ಸಿದ್ಧಭಗವಂತರು ಮೋಕ್ಷದಲ್ಲಿ ಸತತ ಅನಂತಕಾಲದವರೆಗೆ ವಿರಾಜಮಾನರಿರುತ್ತಾರೆ. ಸಂಸಾರೀ ಜೀವರುಗಳಂತೂ ಕರ್ಮ ಮಲದಿಂದ ಸಂಯುಕ್ತರಿರುವ ಕಾರಣ ಮಲಿನರಿದ್ದಾರೆ ಮತ್ತು ಸಿದ್ಧ ಭಗವಂತರು ಕರ್ಮಮಲದಿಂದ ರಹಿತರಿರುವುದರಿಂದ ಪರಮ ನಿರ್ಮಲರಿದ್ದಾರೆ. ಸಂಸಾರೀ ಜೀವರುಗಳು ಪುಣ್ಯ-ಪಾಪರೂಪದ ಲೇಪದಿಂದ ಲಿಪ್ತರಿದ್ದಾರೆ ಮತ್ತು ಸಿದ್ಧಪರಮಾತ್ಮರು ಆಕಾಶದ ಸಮಾನ ನಿರ್ಲೇಪರಿದ್ದಾರೆ. ಸಂಸಾರೀ ಜೀವರುಗಳು ವಿಭಾವ ಪರಿಣತಿಯ ಯೋಗದಿಂದ ಯಾವಾಗಲೂ ದೇಹಾದಿಗಳ ರೂಪವೇ ಇರುತ್ತಾರೆ ಮತ್ತು ಸಿದ್ಧಭಗವಂತರು ಯಾವಾಗಲೂ ನಿಜಸ್ವರೂಪದಲ್ಲಿ ವಿರಾಜಮಾನರಿರುತ್ತಾರೆ. ಸಂಸಾರದ ಜೀವರುಗಳು ಅನ್ಯ ಜೀವಗಳ ಘಾತಮಾಡುತ್ತಾರೆ ಹಾಗೂ ಇತರ ಜೀವರುಗಳಿಂದ ತಾವೂ ಘಾತವಾಗಿ ಹೋಗುತ್ತಾರೆ; ಆದರೆ ಸಿದ್ಧಪರಮೇಷ್ಠಿಗಳು ಯಾರದೂ ಘಾತಮಾಡುವುದಿಲ್ಲ ಮತ್ತು ಯಾರಿಂದಲೂ ಘಾತವಾಗಿ ಹೋಗುವುದಿಲ್ಲ. ಹೀಗೆ ಸಿದ್ಧ ಭಗವಂತರು ಅಖಂಡ, ಅವಿನಾಶಿ, ನಿರ್ಮಲ, ನಿಜಸ್ವರೂಪದಲ್ಲಿ ಸ್ಥಿರ ಯಾವಾಗಲೂ ಪರಮಪದ ಎಂದರೆ ಮೋಕ್ಷದಲ್ಲಿಯೇ ವಿರಾಜಮಾನರಿರುತ್ತಾರೆ.

ಈಗ ಪರಮಾತ್ಮನ ಸ್ವರೂಪ ಹೇಳುತ್ತಾರೆ,

**ಕೃತಕೃತ್ಯಃಪರಮಪದೇ ಪರಮಾತ್ಮಾ ಸಕಲವಿಷಯವಿಷಯಾತ್ಮಾ ।**
**ಪರಮಾನಂದನಿಮಗ್ನೋ ಜ್ಞಾನಮಯೋ ನಂದತಿ ಸದೈವ ॥೨೨೪॥**

**ಅನ್ವಯಾರ್ಥ :- [ಕೃತಕೃತ್ಯಃ]** ಕೃತಕೃತ್ಯ **[ಸಕಲವಿಷಯವಿಷಯಾತ್ಮಾ]** ಸಮಸ್ತ ಪದಾರ್ಥಗಳು ಅವರ ವಿಷಯಗಳಿವೆ ಎಂದರೆ ಎಲ್ಲ ಪದಾರ್ಥಗಳ ಜ್ಞಾತಾ **[ಪರಮಾನಂದನಿಮಗ್ನಃ]** ವಿಷಯಾನಂದದಿಂದ ರಹಿತ ಜ್ಞಾನಾನಂದದಲ್ಲಿ ಅತಿಶಯ ಮಗ್ನ **[ಜ್ಞಾನಮಯಃ]** ಜ್ಞಾನಮಯ ಜ್ಯೋತಿರೂಪನಾದ **[ಪರಮಾತ್ಮಾ]** ಮುಕ್ತಾತ್ಮನು **[ಪರಮಪದೇ]** ಸರ್ವೋಚ್ಚವಾದ ಮೋಕ್ಷಪದದಲ್ಲಿ **[ಸದೈವ]** ನಿರಂತರವಾಗಿ **[ನಂದತಿ]** ಆನಂದರೂಪದಿಂದ ವಿರಾಜಮಾನರಿದ್ದಾರೆ.

**ಟೀಕೆ :- 'ಪರಮಾತ್ಮಾ ಕೃತಕೃತ್ಯಃ ಸಕಲವಿಷಯವಿಷಯಾತ್ಮಾ (ವಿರತಾತ್ಮಾ) ವಾ ಪರಮಾನಂದ ನಿಮಗ್ನಃ ಜ್ಞಾನಮಯಃ ಪರಮಪದೇ ಸದೈವ ನಂದತಿ ।'** -ಸಿದ್ಧಭಗವಂತರಿಗೆ ಯಾವುದೇ ಕೆಲಸ ಮಾಡುವುದು ಬಾಕಿ ಉಳಿದಿಲ್ಲ. ಅವರು ಸಕಲ ಪದಾರ್ಥಗಳನ್ನು ತಮ್ಮ ಜ್ಞಾನದಲ್ಲಿ ವಿಷಯ ಮಾಡುವಂಥ ಅಥವಾ ಸಮಸ್ತ ಪದಾರ್ಥಗಳಿಂದ ವಿರಕ್ತ, ಪರಮ ಸುಖದಲ್ಲಿ ನಿಮಗ್ನ ಮತ್ತು ಕೇವಲಜ್ಞಾನ ಸಹಿತ ಪರಮಪದ ಎಂದರೆ ಮೋಕ್ಷದಲ್ಲಿ ಚಿರಕಾಲದವರೆಗೆ ಆನಂದ ಪಡೆಯುತ್ತಾರೆ.

**ಭಾವಾರ್ಥ :-** ಸಂಸಾರದ ಎಂದರೆ ಚತುರ್ಗತಿಗಳಲ್ಲಿನ ಜೀವರುಗಳಿಗೆ ಅನೇಕ ಕಾರ್ಯಗಳನ್ನು ಮಾಡುವ ಅಭಿಲಾಷೆಯಿರುವುದರಿಂದ ಅವರು ಕೃತಕೃತ್ಯರಿಲ್ಲ, ಆದರೆ ಸಿದ್ಧಪರಮೇಷ್ಠಿಗಳಿಗೆ ಯಾವುದೇ ಕಾರ್ಯ ಮಾಡುವುದು ಬಾಕಿ ಉಳಿಯದಿರುವುದರಿಂದ ಅವರು ಕೃತಕೃತ್ಯರಿದ್ದಾರೆ. ಜಗತ್ತಿನ ಜೀವರುಗಳು ಪರಮಪದದಿಂದ ಎಂದರೆ ಮೋಕ್ಷದಿಂದ ವಿಮುಖರಿದ್ದಾರೆ. ಮತ್ತು ಅಪದದಲ್ಲಿ (ಸಂಸಾರದಲ್ಲಿ) ಸ್ಥಿರರಿದ್ದಾರೆ, ಸಿದ್ಧ ಭಗವಂತರು ಅಪದದಿಂದ ರಹಿತರಿದ್ದಾರೆ ಮತ್ತು ಪರಮಪದದಲ್ಲಿ ಎಂದರೆ ಮೋಕ್ಷದಲ್ಲಿ ವಿರಾಜಮಾನರಿದ್ದಾರೆ. ಸಂಸಾರೀ ಜೀವರುಗಳು ವಿಷಯ ವಿಕಾರಗಳಿಂದ

ಸಹಿತರಿದ್ದಾರೆ, ಸಿದ್ಧ ಪರಮಾತ್ಮರು ವಿಷಯ ವಿಕಾರಗಳಿಂದ ರಹಿತರಿದ್ದಾರೆ. ಸಂಸಾರೀ ಜೀವರುಗಳು ಅನೇಕ ಶರೀರಗಳನ್ನು ಧಾರಣ ಮಾಡುತ್ತ ದುಃಖಿಯಾಗುತ್ತಲಿದ್ದಾರೆ, ಸಿದ್ಧ ಪರಮೇಶ್ವರರು ಮನ, ವಚನ, ಕಾಯದಿಂದ ರಹಿತರಾಗಿ ಪರಮ ಆನಂದದಲ್ಲಿ ಲೀನರಿದ್ದಾರೆ. ಇವೇ ಮೊದಲಾದ ಅನೇಕ ಗುಣಗಳಿಂದ ಸಹಿತರಾಗಿ ಸಿದ್ಧ ಭಗವಂತರು ವಿರಾಜಮಾನರಿದ್ದಾರೆ.

ಈಗ ಜೈನ ನೀತಿ ಅಥವಾ ನಯವಿವಕ್ಷೆಯನ್ನು ಹೇಳುತ್ತಾರೆ, -

**ಏಕೇನಾಕರ್ಷಂತೀ ಶ್ಲಥಯಂತೀ ವಸ್ತುತತ್ತ್ವ ಮಿತರೇಣ ।**
**ಅಂತೇನ ಜಯತಿ ಜೈನೀ ನೀತಿರ್ಮಂಥಾನನೇತ್ರಮಿವ ಗೋಪಿ ॥೨೨೫॥**

**ಅನ್ವಯಾರ್ಥ :- [ಮಂಥಾನನೇತ್ರಮ್]** ಮೊಸರು ಕಡೆಯುವ ದಾರವನ್ನು ಎಳೆಯುವಂಥ **[ಗೋಪೀ ಇವ]** ಗವಳಗಿತ್ತಿಯ ಹಾಗೆ **[ಜೈನೀ ನೀತಿಃ]** ಜಿನೇಂದ್ರದೇವರ ಸ್ಯಾದ್ವಾದದ ನೀತಿಯು ಅಥವಾ ನಿಶ್ಚಯ-ವ್ಯವಹಾರರೂಪದ ನೀತಿಯು **[ವಸ್ತುತತ್ತ್ವಮ್]** ವಸ್ತುವಿನ ಸ್ವರೂಪವನ್ನು **[ಏಕೇನ]** ಒಂದು ಸಮ್ಯಗ್ದರ್ಶನದಿಂದ **[ಆಕರ್ಷಂತೀ]** ತನ್ನ ಕಡೆಗೆ ಎಳೆಯುತ್ತದೆ, **[ಇತರೇಣ]** ಇನ್ನೊಂದರಿಂದ ಎಂದರೆ ಸಮ್ಯಕ್ ಜ್ಞಾನದಿಂದ **[ಶ್ಲಥಯಂತೀ]** ಶಿಥಿಲ ಮಾಡುತ್ತದೆ ಮತ್ತು **[ಅಂತೇನ]** ಕೊನೆಯ ಎಂದರೆ ಸಮ್ಯಕ್ಚಾರಿತ್ರದಿಂದ ಸಿದ್ಧರೂಪ ಕಾರ್ಯವನ್ನು ಉತ್ಪನ್ನ ಮಾಡುವುದರಿಂದ **[ಜಯತಿ]** ಎಲ್ಲದರ ಮೇಲೆ ವರ್ತಿಸುತ್ತದೆ.

(ಅಥವಾ ಬೇರೆ ಅನ್ವಯಾರ್ಥ)

**ಅನ್ವಯಾರ್ಥ :- [ಮಂಥಾನನೇತ್ರಮ್]** ಮೊಸರು ಕಡೆಯುವ ದಾರವನ್ನು ಎಳೆಯುವಂಥ **[ಗೋಪೀ ಇವ]** ಗವಳಗಿತ್ತಿಯ ಹಾಗೆ ಆ **[ವಸ್ತುತತ್ತ್ವಮ್]** ವಸ್ತುವಿನ ಸ್ವರೂಪವನ್ನು **[ಏಕೇನ ಅಂತೇನ]** ಒಂದು ಕೊನೆಯಿಂದ ಎಂದರೆ ದ್ರವ್ಯಾರ್ಥಿಕನಯದಿಂದ **[ಆಕರ್ಷಂತೀ]** ಆಕರ್ಷಣೆ ಮಾಡುತ್ತದೆ ಎಂದರೆ ಎಳೆಯುತ್ತದೆ, ಮತ್ತೆ ಪುನಃ **[ಇತರೇಣ]** ಎರಡನೆಯ ಪರ್ಯಾಯಾರ್ಥಿಕನಯದಿಂದ **[ಶ್ಲಥಯಂತೀ]** ಶಿಥಿಲಮಾಡುತ್ತದೆ, ಆ **[ಜೈನೀನೀತಿಃ]** ಜೈನಮತದ ನ್ಯಾಯಪದ್ಧತಿಯು **[ಜಯತಿ]** ಜಯವಂತವಿದೆ.

**ಟೀಕೆ :- 'ಮಂಥಾನನೇತ್ರಂ ಗೋಪೀ ಇವ ಜೈನೀ ನೀತಿಃ ವಸ್ತುತತ್ತ್ವಂ ಏಕೇನ ಆಕರ್ಷಂತೀ ಇತರೇಣ ಶ್ಲಥಯಂತೀ ಅಂತೇನ ಜಯತಿ ।' -** ಮೊಸರು ಕಡೆಯುವ ದಾರವನ್ನು ಎಳೆಯುವಂಥ ಗವಳಗಿತ್ತಿಯ ಹಾಗೆ ಜಿನೇಂದ್ರ ಭಗವಂತರ ಯಾವ ನೀತಿ ಎಂದರೆ ವಿವಕ್ಷೆಯಿದೆ ಅದು ವಸ್ತು ಸ್ವರೂಪವನ್ನು ಒಂದು ನಯ-ವಿವಕ್ಷೆಯಿಂದ ಎಳೆಯುತ್ತದೆ, ಇನ್ನೊಂದು ನಯ-ವಿವಕ್ಷೆಯಿಂದ ಶಿಥಿಲ ಮಾಡುತ್ತದೆ ಮತ್ತು ಅದು ಕೊನೆಯಲ್ಲಿ ಎಂದರೆ ಎರಡೂ ವಿವಕ್ಷೆಗಳಿಂದ ಜಯವಂತವಿರುತ್ತದೆ.

**ಭಾವಾರ್ಥ :-** ಸರ್ವಜ್ಞ ಭಗವ[redacted]ಸ ಅನೇಕಾಂತಾತ್ಮಕವಿದೆ. ವಸ್ತುಸ್ವರೂಪದ ನಿರೂಪಣೆಯನ್ನು ಮುಖ್ಯ ಹಾಗೂ ಗೌಣನಯದ ವಿವಕ್ಷೆಯಿಂದ ಮಾಡುವುದರಲ್ಲಿ ಬರುತ್ತದೆ. ಹೇಗೆಂದರೆ ಜೀವದ್ರವ್ಯವು ನಿತ್ಯವು ಕೂಡ ಇದೆ ಮತ್ತು ಅನಿತ್ಯವು ಕೂಡ ಇದೆ. ಅದು ದ್ರವ್ಯಾರ್ಥಿಕ ನಯದ ವಿವಕ್ಷೆಯಿಂದ ನಿತ್ಯವಿದೆ ಮತ್ತುಪರ್ಯಾಯಾರ್ಥಿಕನಯದ ಅಪೇಕ್ಷೆಯಿಂದ ಅನಿತ್ಯವಿದೆ. ಇದುವೇ ನಯವಿವಕ್ಷೆಯಿದೆ.

**। ಟಿಪ್ಪಣಿ :-** ಈ ಶ್ಲೋಕದಲ್ಲಿ ತಿಳಿಸಿಕೊಟ್ಟಿರುವುದೇನೆಂದರೆ ಶಾಸ್ತ್ರದೊಳಗೆ ಒಂದು ಸ್ಥಾನದಲ್ಲಿ ನಿಶ್ಚಯನಯದ [redacted] ಆದರೆ ಧರ್ಮವು ಯಾವುದೇ ಒಂದು ಸಮಯದಲ್ಲಿ ವ್ಯವಹಾರನಯದ (ಅಭೂತಾರ್ಥನಯದ) ಆಶ್ರಯದಿಂದ ಆಗುತ್ತದೆ ಮತ್ತು ಯಾವುದೇ ಒಂದು ಸಮಯದಲ್ಲಿ ನಿಶ್ಚಯನಯದ (ಭೂತಾರ್ಥನಯದ) ಆಶ್ರಯದಿಂದ ಆಗುತ್ತದೆಯೆಂಬುದು ಅದರ ಅರ್ಥವಿಲ್ಲ. ವಾಸ್ತವಿಕವಾಗಿ ಧರ್ಮವಂತೂ ಯಾವಾಗಲೂ ಒಂದು ನಿಶ್ಚಯನಯದ ಎಂದರೆ ಭೂತಾರ್ಥನಯದ ವಿಷಯದ ಆಶ್ರಯದಿಂದಲೇ ಆಗುತ್ತದೆ. ಮೋಕ್ಷಮಾರ್ಗದ ನಿರೂಪಣೆಯು ಎರಡು ಪ್ರಕಾರದಿಂದ ಆಗುತ್ತದೆ, ಆದರೆ ಆ ಮೋಕ್ಷಮಾರ್ಗಗಳು ಎರಡು ಇಲ್ಲ. ಸರಾಗತೆಯಿಂದ ಕೂಡ ಮೋಕ್ಷಮಾರ್ಗವಿದೆ ಮತ್ತು ವೀತರಾಗತೆಯಿಂದ ಕೂಡ ಮೋಕ್ಷಮಾರ್ಗವಿದೆಯೆನ್ನುವಂತೆ ಪರಸ್ಪರ ವಿರುದ್ಧವಾದ ಹಾಗೂ

## (ದ್ವಿಪದಿ)

ಅಮೃತಚಂದ್ರ ಮುನೀಂದ್ರ ಕೃತ ಗ್ರಂಥ ಶ್ರಾವಕಾಚಾರ
ಅಧ್ಯಾತ್ಮರೂಪದ ಮಹಾ ಆರ್ಯಾ ಛಂದದ ಸಾರ ।
ಅದರಲಿ ಪುರುಷಾರ್ಥ ಸಿದ್ಧಿಯ ಪರಮ ಉಪಾಯವಿದೆ
ಅದ ಕೇಳಿ ಭವಭ್ರಮೆ ತೊಲಗಿ ಆತ್ಮತತ್ತ್ವದುದಯವಿದೆ ॥

ಅದರ ಮೇಲೆ ಭಾಷಾ ಟೀಕೆ ಬರೆದರು ಟೋಡರಮಲ್ಲ
ಆದರೇನದು ತಾನೆ ಪೂರ್ಣತೆಗೆಪ್ರಾಪ್ತವಾಗಲಿಲ್ಲ ।
ಅವರು ಇಹಭವ ತ್ಯಜಿಸಿದರು, ನಗರ ಜಯಪುರದಲಿ
ಸಾಧರ್ಮಿಗಳೆಲ್ಲರು ಮಂತಣಗೆಯ್ದರು ಮನಸಿನಲಿ ॥

ಪರಮೋಪದೇಶಮಯ ಗ್ರಂಥ ಮುಕ್ತಿಯ ಮೂಲವಿಹುದು
ಈ ಟೀಕೆ ಪೂರ್ಣಗೊಂಡರೆ ಜೀವದ ಭ್ರಮೆ ಪೋದಪುದು ।
ಸಾಧರ್ಮಿಗಳಲ್ಲಿ ರತನಚಂದ ದಿವಾಣ ಮುಖ್ಯರಿಹರು
ಪೃಥ್ವೀಸಿಂಹ ನರೇಶಗೆ ವಿಶ್ವಾಸ ಪಾತ್ರರಿಹರು ॥

ಧರ್ಮ-ಸಾರ್ಧಮಿಗಳಲಿ ಅವರ ಪ್ರೀತಿ ವಿಶೇಷವಿಹುದು
ದೇವ-ಶಾಸ್ತ್ರ-ಗುರುಗಳಲಿ ಪ್ರೀತಿ ಸದಾ ನೆಲೆಸಿಹುದು ।
ಅವರ ಮಗ ಆನಂದನ ಮಿತ್ರನೀ ದೌಲತರಾಮನು
ದೊರೆ ಸೇವೆಯಲಿರುತ ವಣಿಕ ವೃತ್ತಿಯಲಿ ಬಾಳುತಿಹನು ॥

ಗುರುಗಳ ಕೃಪೆಯಿಂದವನು ಗ್ರಂಥದಭ್ಯಾಸ ಮಾಡಿಹನು
ಜಿನಧರ್ಮದಲಿ ಪ್ರೀತಿ ಮೂಡಿ ಜಿನದಾಸನಾಗಿಹನು ।
ಅವನಿಗೆರತನಚಂದ ದಿವಾಣರು ಪೇಳ್ದರು ಪ್ರೀತಿಯಲಿ
ಟೀಕೆಯನು ಪೂರ್ಣಗೊಳಿಸಿರಿ ನೀವು ಧರ್ಮನೇಹದಲಿ ॥

ಈ ಭಾಷಾರೂಪ ಟೀಕೆಯನ್ನು ಪೂರ್ಣ ಮಾಡಿದೆ ನಾನು
ಸಕಲರಿಗೆ ಸಂತಸವಾಗಿ ಪಡೆದರು ನಿಜ ಜ್ಞಾನವನು ।
ದೊರೆ-ಪ್ರಜೆಗಳು ಸುಖಿಯಿರಲಿ ಧರ್ಮದ ವೃದ್ಧಿಯಾಗಲಿ
ಜಗದ ಜಂಜಡ ದೂರವಾಗಿ ಭವ್ಯರು ಸಿದ್ಧಿಪಡೆಯಲಿ ॥

ಸಂವತ ಸಾವಿರದೆಂಟುನೂರ ಇಪ್ಪತ್ತೇಳರಂದು
ಮಾರ್ಗಶಿರ ಮಾಸ ಶಿಶಿರಋತು ದ್ವಿತೀಯ ದಿನದಂದು ।

ಈ ಪ್ರಕಾರ ಆಚಾರ್ಯ ಅಮೃತಚಂದ್ರದೇವವಿರಚಿತ ಪುರುಷಾರ್ಥಸಿದ್ಧಿ ಉಪಾಯ ಅಥವಾ ಜಿನಪ್ರವಚನ ರಹಸ್ಯ ಕೋಷವೆಂಬ ಗ್ರಂಥದ ಮೇಲೆ ಪಂ. ಟೋಡರಮಲ್ಲಕೃತ ಭಾಷಾವಚನಿಕೆಯ ಕನ್ನಡ ಅನುವಾದವು ಸಮಾಪ್ತವಾಯಿತು.

# ಶ್ಲೋಕಗಳ ವರ್ಣಾನುಕ್ರಮ ಸೂಚಿ


| | ಶ್ಲೋಕ-ಪುಟ |
|---|---|
| **ಅ** | |
| ಅಕ್ರಮಕಥನೇನ ಯತಃ | ೧೯-೩೧ |
| ಅತಿಚಾರಾಃ ಸಮ್ಯಕ್ತ್ವೇ | ೧೮೧-೧೪೩ |
| ಅತಿಸಂಕ್ಷೇಪಾದ್ ದ್ವಿವಿಧಃ | ೧೧೫-೯೪ |
| ಅತ್ಯಂತ ನಿಶಿತಧಾರಂ | ೫೯-೬೩ |
| ಅಥನಿಶ್ಚಿತ್ತಸಚಿತ್ತೇ | ೧೧೭-೯೫ |
| ಅನಪೇಕ್ಷಿತಾಪ್ರಮಾರ್ಜಿತ | ೧೯೨-೧೪೯ |
| ಅಧ್ರುವಮಶರಣಮೇಕತ್ವ | ೨೦೫-೧೬೨ |
| ಅನವರತಮಹಿಂಸಾಯಾಂ | ೨೯-೪೧ |
| ಅನುಸರತಾಂಪದಮೇತತ್ | ೧೬-೨೯ |
| ಅಪ್ರಾದುರ್ಭಾವಃ ಖಲು | ೪೪-೫೪ |
| ಅಬುಧಸ್ಯ ಬೋಧನಾರ್ಥಂ | ೬-೧೭ |
| ಅಭಿಮಾನಭಯಜುಗುಪ್ಸಾ | ೬೪-೬೬ |
| ಅಮೃತತ್ವಹೇತುಭೂತಂ | ೭೮-೭೩ |
| ಅರತಿಕರಂ ಭೀತಿಕರಂ | ೯೮-೮೪ |
| ಅರ್ಕಾಲೋಕೇನವಿನಾ | ೧೩೩-೧೦೫ |
| ಅರ್ಥಾ ನಾಮ ಯ ಏತೇ | ೧೦೩-೮೭ |
| ಅವಬುದ್ಧ್ಯ ಹಿಂಸ್ಯ ಹಿಂಸಕ | ೬೦-೬೪ |
| ಅನಶನಮವಮೌದಾರ್ಯ | ೧೯೮-೧೫೩ |
| ಅವಿತೀರ್ಣಸ್ಯ ಗ್ರಹಣಂ | ೧೦೨-೮೬ |
| ಅವಿಧಾಯಾಪಿ ಹಿ ಹಿಂಸಾ | ೫೧-೫೯ |
| ಅವಿರುದ್ಧಾ ಅಪಿ ಭೋಗಾ | ೧೬೪-೧೨೫ |
| ಅಷ್ಟಾವನಿಷ್ಟದುಸ್ತರ | ೭೪-೭೧ |
| ಅಸದಪಿ ಹಿ ವಸ್ತುರೂಪಂ | ೯೩-೮೨ |
| ಅಸಮಗ್ರಂ ಭಾವಯತಿ | ೨೧೧-೧೭೫ |
| ಅಸಮರ್ಥಾ ಯೇ ಕರ್ತುಂ | ೧೦೬-೮೯ |
| ಅಸಿಧೇನು ಹುತಾಶನ | ೧೪೪-೧೧೧ |
| ಅಸ್ತಿ ಪುರುಷಶ್ಚಿದಾತ್ಮಾ | ೯-೨೧ |
| **ಆ** | |
| ಆತ್ಮಪರಿಣಾಮಹಿಂಸನ | ೪೨-೫೩ |
| ಆತ್ಮಾಪ್ರಭಾವನಿಯೋ | ೩೦-೪೨ |
| ಆಮಾಂ ವಾ ಪಕ್ಕಾಂ ವಾ | ೬೮-೬೮ |
| ಆಮಾಸ್ವಪಿ ಪಕ್ವಾಸ್ವಪಿ | ೬೭-೬೭ |
| ಆಹಾರೋ ಹಿ ಸಚಿತ್ತಃ | ೧೯೩-೧೫೦ |
| **ಇ** | |
| ಇತಿ ಯಃ ಪರಿಮಿತಭೋಗೈಃ | ೧೬೬-೧೨೩ |
| ಇತಿ ಯೋ ವ್ರತರಕ್ಷಾರ್ಥಂ | ೧೮೦-೧೪೨ |
| ಇತಿ ಯಃ ಷೋಡಶಯಾಮಾನ್ | ೧೫೭-೧೧೯ |
| ಇತಿ ರತ್ನತ್ರಯಮೇತತ್ | ೨೦೯-೧೭೩ |
| ಇತಿ ನಿಯಮಿತದಿಗ್ಭಾಗೇ | ೧೩೮-೧೦೮ |
| ಇತಿ ವಿರತೋ ಬಹುದೇಶಾತ್ | ೧೪೦-೧೦೯ |
| ಇತಿ ವಿವಿಧಭಂಗಗಹನೇ | ೫೮-೬೩ |
| ಇತ್ಯಮಶೇಷಿತಹಿಂಸಾ | ೧೬೦-೧೨೧ |
| ಇತ್ಯತ್ರ ತ್ರಿತಯಾತ್ಮನಿ | ೧೩೫-೧೦೬ |
| ಇತ್ತೇತಾನತಿಚಾರಾಪರಾನಪಿ | ೧೯೬-೧೫೨ |
| ಇದಮಾವಶ್ಯಕಷಟ್ಕಂ | ೨೦೧-೧೫೮ |
| ಇತ್ಯಾಶ್ರಿತಸಮ್ಯಕ್ತ್ವೈಃ | ೩೧-೪೩ |
| ಇಯಮೇಕೈವ ಸಮರ್ಥಾ | ೧೭೫-೧೩೫ |
| ಇಹಜನ್ಮನಿ ವಿಭವಾದೀನ್ಯ | ೨೪-೩೭ |
| **ಉ** | |
| ಉಕ್ತೇನ ತತೋ ವಿಧಿನಾ | ೧೫೬-೧೧೯ |
| ಉಪಲಬ್ಧಿಸುಗತಿಸಾಧನ | ೮೭-೭೯ |
| ಉಭಯಪರಿಗ್ರಹ ವರ್ಜನ | ೧೧೮-೯೫ |
| **ಊ** | |
| ಊರ್ಧ್ವಮಧಸ್ತಾತ್ತಿರ್ಯಗ್ | ೧೮೮-೧೪೭ |
| **ಏ** | |
| ಏಕಮಪಿಪ್ರಜಿಘಾಂಸುರ್ನಿಹಂತ್ಯ | ೧೬೨-೧೨೨ |
| ಏಕಸ್ಮಿನ್ ಸಮವಾಯಾದ | ೨೨೧-೧೮೪ |
| ಏಕಸ್ಯ ಸೇವ ತೀವ್ರಂ | ೫೩-೬೦ |
| ಏಕಸ್ಯಾಲ್ಪಾ ಹಿಂಸಾ | ೫೨-೬೦ |
| ಏಕೇನಾಕರ್ಷಂತಿ | ೨೨೫-೧೮೭ |
| ಏಕಃಕರೋತಿ ಹಿಂಸಾ | ೫೫-೬೨ |
| ಏವಂ ನ ವಿಶೇಷಃ | ೧೨೦-೯೬ |
| ಏವಮತಿವ್ಯಾಪ್ತಿಃ | ೧೧೪-೯೩ |
| ಏವಮಯಂ ಕರ್ಮಕೃತೇರ್ಭಾವೈ | ೧೪-೨೬ |
| ಏವಂ ವಿಧಮಪರಮಪಿ | ೧೪೭-೧೧೩ |
| ಏವಂ ಸಮ್ಯಗ್ದರ್ಶನಬೋಧ | ೨೦-೩೨ |
| **ಐ** | |
| ಐಹಿಕ ಫಲಾನಪೇಕ್ಷಾ | ೧೬೯-೧೨೯ |
| **ಕ** | |
| ಕರ್ತವ್ಯೋಽಧ್ಯವಸಾಯಃ | ೩೫-೪೭ |
| ಕಂದರ್ಪಃ ಕೌತ್ಕುಚ್ಯಂ | ೧೯೦-೧೪೮ |
| ಕಸ್ಯಾಪಿ ದಿಶತಿ ಹಿಂಸಾ | ೫೬-೬೨ |
| ಕಾಮಕ್ರೋಧಮದಾದಿಷು | ೨೮-೪೦ |
| ಕಾರಣಕಾರ್ಯವಿಧಾನಂ | ೩೪-೪೬ |
| ಕಿಂವಾ ಬಹುಪ್ರಲಪಿತೈರಿತಿ | ೧೩೪-೧೦೬ |
| ಕೋ ನಾಮ ವಿಶತಿ ಮೋಹಂ | ೯೦-೮೦ |
| ಕೃಚ್ಛ್ರೇಣ ಸುಖಾವಾಪ್ತಿರ್ಭವಂತಿ | ೮೬-೭೮ |
| ಕೃತಕಾರಿತಾನುಮನನೈ | ೭೫-೭೧ |
| ಕೃತಕೃತ್ಯ ಪರಮಪದೇ | ೨೨೪-೧೮೬ |
| ಕೃತ್ಮಾರ್ಥಂ ಮುನಯೇ | ೧೭೪-೧೩೪ |

| | ಶ್ಲೋಕ-ಪುಟ |
|---|---|
| **ಗ** | |
| ಗರ್ಹಿಥಮವದ್ಯಸಂಯುತ | ೯೫-೮೩ |
| ಗೃಹಮಾಗತಾಯ ಗುಣಿನೇ | ೧೭೩-೧೩೩ |
| ಗ್ರಂಥಾರ್ಥೋಭಯಪೂರ್ಣಂ | ೩೬-೪೮ |
| **ಚ** | |
| ಚಾರಿತ್ರಾಂತರ್ಭಾವಾತ್ | ೧೯೭-೧೫೩ |
| ಚಾರಿತ್ರಂ ಭವತಿ ಯತಃ | ೩೯-೫೧ |
| **ಛ** | |
| ಛೇದನ ತಾಡನ ಬಂಧಾ | ೧೮೩-೧೪೪ |
| ಛೇದನಭೇದನಮಾರಣ | ೯೭-೮೪ |
| **ಜ** | |
| ಜಿನಪುಂಗವ ಪ್ರವಚನೇ | ೨೦೦-೧೫೭ |
| ಜೀವಕೃತಂ ಪರಿಣಾಮಂ | ೧೨-೨೪ |
| ಜೀವಾಜೀವಾದೀನಾಂ | ೨೨-೩೩ |
| ಜೀವಿತಮರಣಾಶಂಸೇ | ೧೯೫-೧೫೧ |
| **ತ** | |
| ತಜ್ಜಯತಿ ಪರಂಜ್ಯೋತಿಃ | ೧-೧೦ |
| ತತ್ತ್ವಾರ್ಥಶ್ರದ್ಧಾನೇ ನಿರ್ಯುಕ್ತಂ | ೧೨೪-೯೯ |
| ತತ್ರಾದೌ ಸಮ್ಯಕ್ತ್ವಂ | ೨೧-೩೩ |
| ತತ್ರಾಪಿ ಚ ಪರಿಮಾಣಂ | ೧೩೯-೧೦೮ |
| **ದ** | |
| ದರ್ಶನಮಾತ್ಮ ವಿನಿಶ್ಚಿತಿ | ೨೧೬-೧೮೦ |
| ದ್ವಾವಿಂಶತಿರಪ್ಯೇತೇ | ೨೦೮-೧೬೬ |
| ದೃಷ್ಟ್ವಾಪರಂಪುರಸ್ತಾದಶನಾಯ | ೮೯-೮೦ |
| **ಧ** | |
| ಧನಲವ ಪಿಪಾಸಿತಾನಾಂ | ೮೮-೭೯ |
| ಧರ್ಮಧ್ಯಾನಾಸಕ್ತೋ | ೧೫೪-೧೧೭ |
| ಧರ್ಮಮಹಿಂಸಾರೂಪಂ | ೭೬-೭೨ |
| ಧರ್ಮಃ ಸೇವ್ಯಃಕ್ಷಾಂತಿ | ೨೦೪-೧೬೦ |
| ಧರ್ಮೋಽಭಿವರ್ಧನೀಯಃ | ೨೭-೪೦ |
| ಧರ್ಮೋ ಹಿ ದೇವತಾಭ್ಯಃ | ೮೦-೭೫ |
| **ನ** | |
| ನವನೀತಂ ಚ ತ್ಯಾಜಂ | ೧೬೩-೧೨೪ |
| ನನುಕಥಮೇವಂ ಸಿದ್ಧ್ಯತಿ | ೨೧೯-೧೮೨ |
| ನ ವಿನಾ ಪ್ರಾಣವಿಘಾತಾನ್ | ೬೫-೬೭ |
| ನ ಹಿ ಸಮ್ಯಕ್ವ್ಯಪದೇಶಂ | ೩೮-೫೦ |
| ನಾತಿವ್ಯಾಪ್ತಿಶ್ಚತಯೋಃ | ೧೦೫-೮೮ |
| ನಿಜಶಕ್ತ್ಯಾ ಶೇಷಾಣಾಂ | ೧೨೬-೧೦೦ |
| ನಿತ್ಯಮಪಿ ನಿರೂಪಲೇಪಃ | ೨೨೩-೧೮೫ |
| ನಿರತಃ ಕಾರ್ತ್ಸ್ನ್ಯ ನಿವೃತ್ತೌ | ೪೧-೫೨ |
| ನಿರ್ಬಾಧ ಸಂಸಿಧ್ಯೇತ್ | ೧೨೨-೯೭ |
| ನಿಶ್ಚಯಮಬುಧ್ಯಮಾನೋ | ೫೦-೫೮ |
| ನಿಶ್ಚಯಮಿಹ ಭೂತಾರ್ಥಂ | ೫-೧೬ |
| ನೀಯಂತೇತ್ರಽಕಷಾಯಾ | ೧೭೯-೧೪೨ |
| ನೈವಂ ವಾಸರಭುಕ್ತೇರ್ಭವತಿ | ೧೩೨-೧೦೪ |
| **ಪ** | |
| ಪರದಾತೃವ್ಯಪದೇಶಃ | ೧೯೪-೧೫೦ |
| ಪರಮಾಗಮಸ್ಯ ಜೀವಂ | ೨-೧೨ |
| ಪರಿಣಮಮಾನಸ್ಯ೧೩-೨೫ | |
| ಪರಿಣಮಮಾನೋ ನಿತ್ಯಂ | ೧೦-೨೩ |
| ಪರಿಧಯ ಇವ ನಗರಾಣಿ | ೧೩೬-೧೦೭ |
| ಪಾತ್ರಂ ತ್ರಿಭೇದಯುಕ್ತಂ | ೧೭೧-೧೩೧ |
| ಪಾಪರ್ದ್ಧಿಜಯಪರಾಜಯ | ೧೪೧-೧೧೦ |
| ಪುನರಪಿಪೂರ್ವಕೃತಾಯಾಂ | ೧೬೫-೧೨೬ |
| ಪೂಜ್ಯನಿಮಿತ್ತಂ ಘಾತೇ | ೮೧-೭೬ |
| ಪೈಶೂನ್ಯಹಾಸಗರ್ಭಂ | ೯೬-೮೩ |
| ಪೃಥಗಾರಾಧನಮಿಷ್ಟಂ | ೩೨-೪೩ |
| ಪ್ರವಿಧಾಯ ಸುಪ್ರಸಿದ್ಧೈ | ೧೩೭-೧೦೮ |
| ಪ್ರತಿರೂಪವ್ಯವಹಾರ | ೧೮೫-೧೪೫ |
| ಪ್ರವಿಹಾಯ ಚ ದ್ವಿತೀಯಾನ್ | ೧೨೫-೧೦೦ |
| ಪ್ರಾಗೇವ ಫಲತಿ ಹಿಂಸಾ | ೫೪-೬೧ |
| ಪ್ರಾತಃ ಪ್ರೋತ್ಥಾಯ ತತಃ | ೧೫೫-೧೧೮ |
| ಪ್ರೇಷ್ಯಸ್ಯ ಸಂಪ್ರಯೋಜನ | ೧೮೯-೧೪೮ |
| **ಬ** | |
| ಬದ್ಧೋದ್ಯಮೇನ ನಿತ್ಯಂ | ೨೧೦-೧೭೪ |
| ಬಹಿರಂಗಾದಪಿ ಸಂಗಾತ್ | ೧೨೭-೧೦೧ |
| ಬಹುಶಃ ಸಮಸ್ತವಿರತಿಂ | ೧೭-೩೦ |
| ಬಹುಸತ್ತ್ವಘಾತಜನಿತಾ | ೮೨-೭೬ |
| ಬಹುಸತ್ತ್ವಘಾತಿನೋಽಮಿ | ೮೪-೭೭ |
| ಬಹುದುಃಖಾಸಂಜ್ಞಪಿತಾಃ | ೮೫-೭೮ |
| **ಭ** | |
| ಭೂಖನನವೃಕ್ಷಮೋಟ್ಟನ | ೧೪೩-೧೧೧ |
| ಭೋಗೋಪಭೋಗಮೂಲಾ | ೧೬೧-೧೨೨ |
| ಭೋಗೋಪಭೋಗಸಾಧನ | ೧೦೧-೮೬ |
| ಭೋಗೋಪಭೋಗಹೇತೋಃ | ೧೫೮-೧೨೦ |
| **ಮ** | |
| ಮಧುಮದ್ಯಂನವನೀತಂ | ೭೧-೬೯ |
| ಮಧುಶಕಲಮಪಿ ಪ್ರಾಯೋ | ೬೯-೬೮ |
| ಮದ್ಯಂ ಮಾಂಸಂ ಕ್ಷೌದ್ರಂ | ೬೧-೬೫ |
| ಮದ್ಯಂ ಮೋಹಯತಿ ಮನೋ | ೬೨-೬೫ |
| ಮರಣಾಂತೇಽವಶ್ಯಮಹಂ | ೧೭೬-೧೩೬ |
| ಮರಣೇಽವಶ್ಯಂ ಭಾವಿನಿ | ೧೭೭-೧೩೬ |
| ಮಾಣವಕ ಏವ ಸಿಂಹೋ | ೭-೧೯ |
| ಮಾಧುರ್ಯಪ್ರೀತಿಃ ಕಿಲದುಗ್ಧೇ | ೧೨೩-೯೮ |
| ಮಿಥ್ಯಾತ್ವವೇದರಾಗಾತ್ | ೧೧೬-೯೪ |
| ಮಿಥ್ಯೋಪದೇಶದಾನಂ | ೧೮೪-೧೪೪ |

| | ಶ್ಲೋಕ-ಪುಟ |
|---|---|
| ಮುಖ್ಯೋಪಚಾರವಿವರಣ | ೪-೧೪ |
| ಮುಕ್ತಸಮಸ್ತಾರಂಭಃ | ೧೫೨-೧೧೬ |
| ಮೂರ್ಛಾಲಕ್ಷಣಕರಣಾತ್ | ೧೧೨-೯೨ |
| **ಯ** | |
| ಯತ್ಖಲುಕಷಾಯಯೋಗಾತ್ | ೪೩-೫೩ |
| ಯದಪಿ ಕಿಲ ಭವತಿ ಮಾಂಸಂ | ೬೬-೬೭ |
| ಯದಪಿ ಕ್ರಿಯತೇ ಕಿಂಚಿತ್ | ೧೦೯-೯೦ |
| ಯದಿದಂಪ್ರಮಾದಯೋಗಾದ | ೯೧-೮೧ |
| ಯದ್ವೇದರಾಗಯೋಗಾನ | ೧೦೭-೮೯ |
| ಯದ್ಯೇವಂ ತರ್ಹಿ ದಿವಾ | ೧೩೧-೧೦೪ |
| ಯದ್ದೇವಂ ಭವತಿ ತದಾ | ೧೧೩-೯೨ |
| ಯಸ್ಮಾತ್ಸಕಷಾಯಃ ಸನ್ | ೪೭-೫೬ |
| ಯಾನಿ ತು ಪುನರ್ಭವೇಯುಃ | ೭೩-೭೦ |
| ಯಾ ಮೂರ್ಛಾನಾಮೇಯಂ | ೧೧೧-೯೧ |
| ಯುಕ್ತಾಚರಣಸ್ಯಸತೋ | ೪೫-೫೫ |
| ಯೇನಾಂಶೇನ ಚರಿತ್ರಂ | ೨೧೪-೧೭೬ |
| ಯೇನಾಂಶೇನ ಸುದೃಷ್ಟಿಸ | ೨೧೨-೧೭೫ |
| ಯೇನಾಂಶೇನ ಜ್ಞಾನಂ | ೨೧೩-೧೭೫ |
| ಯೇ ನಿಜಲಕ್ರಮಾತ್ರಂ | ೧೧೦-೯೧ |
| ಯೋಗಾತ್ಪ್ರದೇಶಬಂಧ | ೨೧೫-೧೭೮ |
| ಯೋನಿರುದುಂಬರಯುಗ್ಮಂ | ೭೨-೬೯ |
| ಯೋಽಪಿ ನ ಶಕ್ಯಸ್ತ್ಯಕ್ತುಂ | ೧೨೮-೧೦೧ |
| ಯೋ ಯತಿಧರ್ಮಮಕಥಯಂತು | ೧೮-೩೦ |
| ಯೋ ಹಿ ಕಷಾಯಾವಿಷ್ಟಃ | ೧೭೮-೧೩೭ |
| **ರ** | |
| ರತ್ನತ್ರಯಮಿಹಹೇತುರ್ನಿರ್ವಾಣ | ೨೨೦-೧೮೩ |
| ರಜನೀದಿನಯೋರಂತೇ | ೧೪೯-೧೧೪ |
| ರಸಜಾನಾಂ ಚ ಬಹೂನಾಂ | ೬೩-೬೬ |
| ರಕ್ಷಾಭವತಿಬಹುನಾಮೇಕ | ೮೩-೭೭ |
| ರಾಗದ್ವೇಷತ್ಯಾಗನ್ನಿಖಿಲ | ೧೪೮-೧೧೩ |
| ರಾಗದ್ವೇಷಾಸಂಯಮಮದ | ೧೭೦-೧೩೦ |
| ರಾಗಾದಿ ವರ್ಧನಾನಾಂ | ೧೪೫-೧೧೨ |
| ರಾಗಾದ್ಯುದಯಪರತ್ವಾದ್ | ೧೩೦-೧೦೩ |
| ರಾತ್ರೌಭುಂಜಾನಾನಾಂ | ೧೨೯-೧೦೩ |
| **ಲ** | |
| ಲೋಕತ್ರಯೈಕನೇತ್ರಂ | ೩-೧೪ |
| ಲೋಕೇಶಾಸ್ತ್ರಾಭಾಸೇ | ೨೬-೩೯ |
| **ವ** | |
| ವಚನಮನಃಕಾಯಾನಾಂ | ೧೯೧-೧೪೯ |
| ವರ್ಣೈಃ ಕೃತಾನಿ ಚಿತ್ರೈಃ | ೨೨೬-೧೮೮ |
| ವಸ್ತು ಸದಪಿ ಸ್ವರೂಪಾತ್ | ೯೪-೮೩ |
| ವಾಗ್ಗುಪ್ತೇನಾಸ್ತ್ಯನೃತಂ | ೧೫೯-೧೨೦ |
| ವಾಸ್ತುಕ್ಷೇತ್ರಾಷ್ಟಾಪದಹಿರಣ್ಯ | ೧೮೭-೧೪೬ |
| ವಿಗಲಿತದರ್ಶನಮೋಹೈಃ | ೩೭-೫೦ |
| ವಿದ್ಯಾವಾಣಿಜ್ಯಮಸೀಕೃಷೀ | ೧೪೨-೧೧೦ |
| ವಿಧಿನಾ ದಾತೃಗುಣವತಾ | ೧೬೭-೧೨೭ |
| ವಿನಯೋ ವೈಯಾವೃತ್ಯಂ | ೧೯೯-೧೫೪ |
| ವಿಪರೀತಾಭಿನಿವೇಶಂ | ೧೫-೨೮ |
| ವ್ಯವಹಾರನಿಶ್ಚಯೌ | ೮-೧೯ |
| ವ್ಯುತ್ಥಾನಾವಸ್ಥಾಯಾಂ | ೪೬-೫೫ |
| **ಶ** | |
| ಶಂಕಾ ತಥೈವ ಕಾಂಕ್ಷಾ | ೧೮೨-೧೪೩ |
| ಶ್ರಿತ್ವಾ ವಿವಿಕ್ತವಸತಿಂ | ೧೫೩-೧೧೭ |
| **ಸ** | |
| ಸಕಲಮನೇಕಾಂತಾತ್ಮಕ | ೨೩-೩೭ |
| ಸರ್ವವಿವರ್ತೋತ್ತೀರ್ಣಂ | ೧೧-೨೪ |
| ಸತಿ ಸಮ್ಯಕ್ತ್ವಚರಿತ್ರೇ | ೨೧೮-೧೮೨ |
| ಸಮ್ಯಕ್ತ್ವಚಾರಿತ್ರಾಭ್ಯಾಂ | ೨೧೭-೧೮೧ |
| ಸಮ್ಯಕ್ತ್ವಬೋಧಚಾರಿತ್ರ | ೨೨೨-೧೮೫ |
| ಸಮ್ಯಗ್ಗಮನಾಗಮನಂ | ೨೦೩-೧೫೯ |
| ಸಮ್ಯಗ್ದಂಡೋ ವಪುಷಃ | ೨೦೨-೧೫೯ |
| ಸಮ್ಯಗ್ಜ್ಞಾನಂ ಕಾರ್ಯಂ | ೩೩-೪೬ |
| ಸರ್ವಸ್ಮಿನ್ನಪ್ಯಸ್ಮಿನ್ | ೯೯-೮೫ |
| ಸರ್ವಾನರ್ಥಪ್ರಥಮಂ | ೧೪೬-೧೧೨ |
| ಸಾಮಾಯಿಕ ಶ್ರಿತಾನಾಂ | ೧೫೦-೧೧೫ |
| ಸಾಮಾಯಿಕ ಸಂಸ್ಕಾರಂ | ೧೫೧-೧೧೫ |
| ಸೂಕ್ಷ್ಮಾಪಿ ನ ಖಲುಹಿಂಸಾ | ೪೯-೫೭ |
| ಸೂಕ್ಷ್ಮೋಭಗವದ್ಧರ್ಮೋ | ೭೯-೭೪ |
| ಸಂಗ್ರಹಮುಚ್ಚಸ್ಥಾನಂ | ೧೬೮-೧೨೮ |
| ಸ್ತೋಕೈಕೇಂದ್ರಿಯಘಾತಾದ್ | ೭೭-೭೩ |
| ಸ್ಪರ್ಶಶ್ಚ ತೃಣಾಧೀನಾಮ್ | ೨೦೭-೧೬೬ |
| ಸ್ಮರತೀವ್ರಾಭಿನಿವೇಶೋ | ೧೮೬-೧೪೬ |
| ಸ್ವಕ್ಷೇತ್ರಕಾಲಭಾವೈಃ | ೯೨-೮೧ |
| ಸ್ವಯಮೇವವಿಗತಿತಂ | ೭೦-೬೯ |
| **ಹ** | |
| ಹರಿತತೃಣಾಂಕುರಚಾರಿಣಿ | ೧೨೧-೯೭ |
| ಹಿಂಸಾತೋಽನೃತವಚನಾತ್ | ೪೦-೫೨ |
| ಹಿಂಸಾಪರ್ಯಾಯತ್ವಾತ್ | ೧೧೯-೯೫ |
| ಹಿಂಸಾಫಲಮಪರಸ್ಯ | ೫೭-೬೨ |
| ಹಿಂಸಾಯಾ ಅವಿರಮಣಂ | ೪೮-೫೭ |
| ಹಿಂಸಾಯಾಃ ಪರ್ಯಾಯೋ | ೧೭೨-೧೩೨ |
| ಹಿಂಸಾಯಾಃ ಸ್ತೇಯಸ್ಯ | ೧೦೪-೮೮ |
| ಹಿಂಸ್ಯಂತೇ ತಿಲನಾಲ್ಯಾಂ | ೧೦೮-೯೦ |
| ಹೇತೌ ಪ್ರಮತ್ತಯೋಗೇ | ೧೦೦-೮೫ |
| **ಕ್ಷ** | |
| ಕ್ಷುತ್ತೃಷ್ಣಾಶೀತೋಷ್ಣ | ೨೫-೩೮ |
| ಕ್ಷುತ್ತೃಷ್ಣಾ ಹಿಮಮುಷ್ಣಂ | ೨೦೬-೧೬೬ |